

ಯಂ. ರುದ್ರಪ್ಪ ಅಂಡ್ ಸನ್, ಪ್ರೊಪ್ರೈಟರಸ್, (ಶ್ರೀ ಚಾಮುಂಡೇಶ್ವರೀ ಪ್ರೆಸ್) ಲಾಲ್‌ಬಾಗ್ ರೋಡ್, ಬೆಂಗಳೂರು.

ಶ್ರೀರಸ್ತು.

ಶ್ರೀಮನ್ಮಹಾರಾಜಾಧಿರಾಜ

ಶ್ರೀಕೃಷ್ಣರಾಜ ಒಡೆಯರ್ ಬಹದ್ದೂರ್ ಅವರುಗಳಿಂದ

ರಚಿಸಲ್ಪಟ್ಟ

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಷಷ್ಠ ಸಪ್ತಮ ಅಷ್ಟಮ ನವಮ ಸ್ಕಂಧಗಳು.

ಶ್ರೀಮನ್ಮಹಿಸೂರು ಮಹಾರಾಣೀ ರೀಜೆಂಟ್ ಅವರುಗಳ ಅಪ್ಪಣೆಯಂತೆ



ಎಂ. ರುದ್ರಪ್ಪ ಅಂಡ್ ಸನ್ ಅವರುಗಳಿಂದ

ಸ್ವಕೀಯ "ಶ್ರೀಚಾಮುಂಡೇಶ್ವರೀ" ಮುದ್ರಾಕ್ಷರಶಾಲೆಯಲ್ಲಿ ಮುದ್ರಿಸಿ ಪ್ರಕಟಿಸಲ್ಪಟ್ಟಿತು.

ಬೆಂಗಳೂರು:

೧೮೯೯.

ಮೊದಲನೇ ಛಾಪೆ—೧,೦೦೦ ಪ್ರತಿಗಳು.

ಪೀಠಿಕೆ.

ಮಹೀಸೂರು ಶ್ರೀಮನ್ಮಹಾರಾಣೀ ರೀಜೆಂಟ್ ಮಾತೃಶ್ರೀ ಕೆಂಪನಂಜಮ್ಮಾಂಬಾ ಅವರುಗಳ ಸನ್ನಿಧಾನದ ಅನುಗ್ರಹದಿಂ ನಾವು ಶ್ರೀಮನ್ ಆಳಿದ ಮಹಾರಾಜರವರುಗಳಿಂದ ಲೋಕೋಪಕಾರಾರ್ಥವಾಗಿ ಬುಧಜನ ಸಮ್ಮತಿಯಿಂ ರಚಿತವಾದ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಕನ್ನಡ ಭಾಗವತದ ಷಷ್ಠ ಸಪ್ತಮ ಅಷ್ಟಮ ನವಮಸ್ಕಂಧಗಳ ಟೀಕೆಯುನ್ನು ಶ್ರೀಮನ್ಮಹಾರಾಜರವರ 16ನೇ ವರ್ಷ ವರ್ಧಂತಿ ದಿವಸ ಪ್ರಕಟಿಸುವಷ್ಟು ಭಾಗ್ಯವಂ ಪಡೆದೆವು.

ಷಷ್ಠಸ್ಕಂಧದೊಳ್ ದೇಹವಂ ಬಿಡುತಲಿರುವ ಶ್ರದ್ಧಾರಹಿತನಾದ ಪುತ್ರನಂ ಕರೆಯಲೋಸುಗ ಹರಿನಾಮವಂ ಉಚ್ಚರಿಸಿ ವೈಕುಂಠವಂ ಸೂರೆಗೈದ ಅಜಾಮಿಳನ ಉಪಾಖ್ಯಾನವೂ ದಕ್ಷನಿಂ ಪ್ರಜಾಸೃಷ್ಟಿಯೂ ವೃತ್ರಾಸುರ ವಧೆಯೂ ಮತ್ತು ಚಿತ್ರಕೇತೂಪಾಖ್ಯಾನವೂ ವರ್ಣಿಸಲ್ಪಟ್ಟಿರುವುದು. ಸಪ್ತಮಸ್ಕಂಧದೊಳ್ ಹಿರಣ್ಯಾಕ್ಷ ಹಿರಣ್ಯಕಶ್ಯಪರ ಉತ್ಪತ್ತಿಯೂ, ಭಕ್ತಿಜ್ಞಾನ ವೈರಾಗ್ಯಸ್ವರೂಪಗಳೂ, ಸೃಷ್ಟಿ ಸ್ಥಿತಿ ವಿಲಯಗಳಿಗೆ ಸ್ವಾಮಿಯಾದ ಶ್ರೀಹರಿಯ ತತ್ವವೂ ಶ್ರೀಕೃಷ್ಣನ ಗುಣಚರಿತ್ರೆಗಳ ವರ್ಣನೆಯೂ ದೇವದಾನವರ ಸ್ಥಾನಂಗಳೂ ಆ ಸ್ಥಾನಗಳ ವಿಪರ್ಯಾಸಂಗಳೂ ಯಾವುದರಿಂದ ವಾಸುದೇವನನ್ನೈದಲ್ಪಡುವುದೋ ಅಂತಹ ಭಾಗವತ ಧರ್ಮಗಳು ಆತ್ಮಾನಾತ್ಮ ವಿವೇಕವು ಸಮಗ್ರವಾಗಿ ಪೇಳಲ್ಪಟ್ಟಿರುವ ಮಹಾ ಭಾಗವತನಾದ ಪ್ರಹ್ಲಾದನ ಚರಿತ್ರೆಯೂ ಬ್ರಹ್ಮಣ್ಯದೇವನಾದ ಮಹಾತ್ಮನಾದ ಶ್ರೀಕೃಷ್ಣನರೂಪವಾದ ಶ್ರೀ ನೃಸಿಂಹನಿಂದ ಮಾಡಲ್ಪಟ್ಟ ಆದಿದೈತ್ಯನ ಸಂಹಾರರೂಪವಾದ ಕಥೆಯೂ, ಬ್ರಾಹ್ಮಣಾದಿ ವರ್ಣಾಶ್ರಮ ಧರ್ಮಗಳೂ ಪೇಳಲ್ಪಟ್ಟಿರುವವು. ಅಷ್ಟಮಸ್ಕಂಧದಲ್ಲಿ ಗಜೇಂದ್ರಮೋಕ್ಷವೂ ಕ್ಷೀರಸಮುದ್ರಮಥನವೂ ದೇವಕಾರ್ಯಕ್ಕೋಸುಗ ವಾಮನಾವತಾರಂಗೈದು ಬಲಿಚಕ್ರವರ್ತಿಯ ದೆಸೆಯಿಂ ಭೂಮಿಯಂ ಯಾಚನಾರೂಪದಿಂ ಸಂಪಾದಿಸಿ ಅಣ್ಣನಾದ ದೇವೇಂದ್ರನಿಗೆ ಕೊಟ್ಟು ಭಕ್ತನಾದ ಬಲಿಚಕ್ರವರ್ತಿಗೆ ಸೂರ್ಯಸಾವರ್ಣಿ ಮನ್ವಂತರದಲ್ಲಿ ಇಂದ್ರಪದವಾಗುವ ಪರ್ಯಂತವೂ ವಿಶ್ವಕರ್ಮನಿರ್ಮಿತವಾದ ಸುತಲಸ್ಥಾನವನ್ನು ಕೊಟ್ಟು ಸರ್ವಕಾಲದಲ್ಲಿಯೂ ಆ ಸುತಲಸ್ಥಾನದಲ್ಲಿ ಸಮೀಪದಲ್ಲೇ ತಾನು ಸನ್ನಿಹಿತನಾಗಿರುವಂತೆ ಬಲಿಚಕ್ರವರ್ತಿಗೆ ವರವನ್ನು ಕೊಟ್ಟದ್ದೂ, ಮತ್ಸ್ಯಾವತಾರದ ಕಥೆಯೂ ವರ್ಣಿಸಲ್ಪಟ್ಟಿದೆ. ನವಮಸ್ಕಂಧದಲ್ಲಿ ಸೂರ್ಯವಂಶವು ಮತ್ತು ಚಂದ್ರವಂಶದ ವರ್ಣನೆಯೂ, ಮಹಾ ಭಾಗವತನಾದ ಅಂಬರೀಷರಾಯನ ಉಪಾಖ್ಯಾನವೂ ಪೇಳಲ್ಪಟ್ಟಿದೆ. ಈ ಸ್ಕಂಧಂಗಳೊಳ್ ಮಹಾ ಭಾಗವತೋತ್ತಮರ ಚರಿತ್ರೆಗಳಿರುವುದರಿಂದ ರಸದಿಂದಲೂ ಭಕ್ತಿಯಿಂದಲೂ ಕೂಡಿರುವಂಥಾದ್ದಾಗಿರುವುದು!

ಯಾವ ಶ್ರೀಹರಿಯು ತಾನು ಪ್ರಾಕೃತಗಳಾದ ನಾಮರೂಪಗಳಿಂದ ರಹಿತನಾದಾಗ್ಯೂ ತನ್ನ ಪಾದಾರವಿಂದವನ್ನು ಭಜಿಸುವ ಪುರುಷರನ್ನು ಅನುಗ್ರಹಿಸಲೋಸುಗ ಅವತಾರಗಳಿಂದ ಶುದ್ಧಸತ್ವಮಯಗಳಾದ ರೂಪಗಳನ್ನೂ ತನ್ನ ಕರ್ಮಗಳಿಂದ ಅನೇಕ ನಾಮಗಳನ್ನೂ ಸಹಾ ಹೊಂದಿದನೋ ಅಂತಹ ಚಿಂತಿಸಲಶಕ್ಯವಾದ ಸಾಮರ್ಥ್ಯವುಳ್ಳ ಅಪರಿಚ್ಛಿನ್ನನಾದ ಪರಮಾತ್ಮನ ದಿವ್ಯಚರಿತ್ರೆಗಳಿಂದ ಗರ್ಭೀಕೃತಂಗಳಾದ ಭಾರತ ರಾಮಾಯಣ ಭಾಗವತಗಳನ್ನು

ನಿರ್ವಿಘ್ನವಾಗಿ ಭಕ್ತಪರಾಧೀನನಾದ ಶ್ರೀಕೃಷ್ಣನ ಕೃಪೆಯಿಂದ ಮಹಾ ಮಾತೃಶ್ರೀ ವಾಣೀವಿಲಾಸಾಂಬೆಯವರ ಮಹಾ ಅನುಗ್ರಹದಿಂ ಪೂರ್ತಿಯಾಗಿ ಪ್ರಕಟಿಸಿ ಮಹಾ ಮಾತೃಶ್ರೀಯವರ ದಿವ್ಯಸನ್ನಿಧಿಗೆ ಒಪ್ಪಿಸುವಷ್ಟು ಭಾಗ್ಯವನ್ನು ಪಡೆವುದಕ್ಕಾಗಿ ಭಗವಂತನನ್ನು ಸ್ತೋತ್ರಂಗೈಯುತ್ತೇವೆ!

ಈ ಸ್ಕಂಧಂಗಳಾರಂಭಾನಂತರದೊಳ್ ಪ್ಲೇಗ್ ಎಂಬ ಜಾಡ್ಯವು 1898ನೇ ಇಸವಿ ಆಗಸ್ಟ್ 16ರಲ್ಲಿ ಕಲ್ಯಾಣಪುರದ ಉತ್ತರದಿಗ್ಭಾಗದೊಳ್ ಪ್ರವೇಶಿಸಿ ಪಟ್ಟಣವಂ ದಿನೇ ದಿನೇ ದಹಿಸುತ್ತಾ ಬಂತು ; ಆ ಕಾಲದೊಳ್ ಪ್ರಜೆಗಳು ಬಂಧುಮಿತ್ರರಿಂದ ತ್ಯಜಿಸಲ್ಪಟ್ಟವರಾದಾಗ್ಯೂ ಮಾತಾಪಿತೃಗಳಿಗಿಂತಲೂ ಅಧಿಕವಾಗಿ ಪ್ಲೇಗ್ ಕಮಿಷನರ್ ಮೆ|| ವಿ. ಪಿ. ಮಾಧವರಾವ್ ಯವರುಗಳು ಕಾಲಕಾಲದೊಳ್ ಧೈರ್ಯವಂ ಹೇಳುತ ಕಾಪಾಡಿಕೊಂಡು ಬಂದುದಲ್ಲದೆ ದಹಿಸುತ್ತಲಿರುವ ಅಗ್ನಿಯಂ ಶಮನಗೊಳಿಸಲು ಇಲ್ಲಿನ ಪ್ರಜೆಗಳ ಮನೋಗತಗಳನ್ನು ತಿಳಿದವರಾಗಿಯೂ ಶಾಂತಗುಣವುಳ್ಳವರಾಗಿಯೂ ಇರುವ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರುಗಳನ್ನು ಈ ಸ್ಥಳಕ್ಕೆ ಡಿಪ್ಯುಟಿಕಮಿಷನರನ್ನಾಗಿ ನೇಮಿಸಲ್ಪಟ್ಟು ತಕ್ಕ ಏರ್ಪಾಡುಗಳನ್ನು ಮಾಡಿಸಿ ಕ್ವಚಿತ್ಕಾಲದೊಳ್ ದಹಿಸುತ್ತಲಿರುವ ಅಗ್ನಿಯಂ ಶಮನಗೊಳಿಸಿದರು! ಬಳಿಕ ಮೆ|| ವಿ. ಪಿ. ಮಾಧವರಾಯರವರುಗಳು ರಾಜಧಾನಿಯಲ್ಲಿ ವ್ಯಾಪಿಸಿದ ಪ್ಲೇಗ್‌ವ್ಯಾಧಿಯನ್ನೂ ಪ್ರಜೆಗಳ ಇಷ್ಟಾನುಸಾರ ಶಮನಗೊಳಿಸಿದರು. ಇವರ ಶ್ರಮಾವಲೋಕವಂಗೈದು ಆಂಗ್ಲೇಯ ಆಳ್ವಿಕೆಯವರು ಇವರಿಗೆ ಸಿ. ಐ. ಇ. ಎಂಬುವ ಗೌರವಾರ್ಥದ ಬಿರುದಂ ದಯಪಾಲಿಸಿದರೆಂದು ಕೇಳಿ ನಾವು ಅತ್ಯಾನಂದಪಡುವುದಲ್ಲದೆ ಮುಂದೆಯೂ ಶ್ರೀಕೃಷ್ಣನು ಇವರ ಕೋರಿಕೆಯಂ ನೆರವೇರಿಸಿ ಅದರಿಂದುಂಟಾಗುವ ಫಲಗಳಂ ನಾವುಗಳು ಅನುಭವಿಸುವಂತೆ ಮಾಡುವನೆಂದು ಸದಾ ಪ್ರಾರ್ಥಿಸುತ್ತಲಿರುವೆವು!

ಇಂತಹ ಕೃಚ್ಛ್ರಕಾಲದೊಳ್ ನಿರ್ವಿಘ್ನವಾಗಿ ಮಹಾ ಮಾತೃಶ್ರೀಯವರಾದ ಶ್ರೀಮತ್ ಮಹಾರಾಣೀ ರೀಜೆಂಟ್ ಸಿ. ಐ. ಅವರುಗಳ ಅನ್ನಪ್ರಭಾವದಿಂದಲೂ ದಿವಾನ್ ಬಹದೂರ್ ಸರ್ ಕೆ. ಶೇಷಾದ್ರಿ ಐಯ್ಯರ್ ಕೆ. ಸಿ. ಎಸ್. ಐ. ಅವರುಗಳ ಔದಾರ್ಯಗುಣಗಳಿಂದಲೂ ಈ ಸ್ಕಂಧಗಳ ಪ್ರಕಟನೆಯ ಕೆಲಸವಂ ನೆರವೇರಿಸಿದ್ದರಿಂದ ಶ್ರೀ ವಾಸುದೇವನಂ ಪ್ರಾರ್ಥಿಸುತ ನಮಗೆ ಪರಿಪೋಷಕರಾದ ಕೌನ್ಸಿಲರಾದ ಮೆ|| ಮಾಧವರಾವ್, ಸಿ. ಐ. ಇ. ಅವರುಗಳೂ ರಾಯಬಹದ್ದೂರ್ ಆರ್ಕಾಡ್ ಶ್ರೀನಿವಾಸಾಚಾರ್ಯರವರುಗಳೂ ಮೆ|| ಕೆ. ಪಿ. ಪುಟ್ಟಣ್ಣಶೆಟ್ಟಿಯವರುಗಳೂ ಈ ಪ್ರಚುರಗಳಲ್ಲಿ ಬಹಳವಾಗಿ ಸಹಾಯಮಾಡಿದರೆಂದು ಬರೆದಿಡಲು ಅತ್ಯಂತ ಕೃತಜ್ಞರಾಗಿರುವೆವು! ಈ ಪ್ರಚುರಗಳ ಪರಿಶೋಧನಾದಿ ಕೆಲಸಗಳಲ್ಲಿ ಪಂಡಿತರಾದ ವೇದಮೂರ್ತಿ ಕೋಲಾರದ ರಾಮಾಶಾಸ್ತ್ರಿಗಳಿಂದಲೂ ಗೌತಮಕ್ಷೇತ್ರದ ವರದರಾಮಾನುಜದಾಸರವರುಗಳಿಂದಲೂ ನಮಗೆ ಬಹಳವಾದ ಸಹಾಯವುಂಟಾಯಿತು!

ಬೆಂಗಳೂರು,
ಶ್ರೀಮನ್ ಮಹಾರಾಜರವರ ವರ್ಷವರ್ಧಂತಿ,
19—6—99.

ಎಂ. ರುದ್ರಪ್ಪ, ಅಂಡ್ ಸನ್,
ಪ್ರೊಪ್ರೈಟರ್ಸ್, ಶ್ರೀಚಾಮುಂಡೇಶ್ವರಿ ಪ್ರೆಸ್,
ಲಾಲ್–ಬಾಗ್ ರೋಡ್, ಬೆಂಗಳೂರು.



ವಿಷಯಸೂಚಿಕೆ.

ಷಷ್ಠ ಸ್ಕಂಧ.

ಸಪ್ತಮ ಸ್ಕಂಧ

  

ಶ್ರೀಬಾದರಾಯಣ ಸಮಾಕಲಿತಂ ರಸಾಢ್ಯಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋಭಾವುಕಾಃ ಪಿಬತಭಾಗವತಂ ರಸಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಷಷ್ಠ ಸ್ಕಂಧ.

೧ನೇ ಅಧ್ಯಾಯ.

ಅಜಾಮಿಳೋಪಾಖ್ಯಾನ.

ಅನಂತರದಲ್ಲಿ ಶ್ರೀ ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು "ಎಲೈ ಶುಕಮುನಿಯೆ, ದ್ವಿತೀಯ ಸ್ಕಂಧದಲ್ಲಿ ವ್ಯಾಖ್ಯಾನ ನಿನ್ನಿಂದ ಯಾವ ನಿವೃತ್ತಿಮಾರ್ಗದಿಂದ ಅರ್ಚಿರಾದಿ ಪ್ರಾಪ್ತಿರೂಪವಾದ ಕ್ರಮಯೋಗದಿಂದ ಬ್ರಹ್ಮಲೋಕವನ್ನೈದಿ ಕಲ್ಪಾಂತರದಲ್ಲಿ ಆ ಬ್ರಹ್ಮನೊಡನೆ ಮೋಕ್ಷವುಂಟಾಗುವದೋ ಅಂಥಾ ನಿವೃತ್ತಿಮಾರ್ಗಸ್ವರೂಪವೂ ಸ್ವರ್ಗಾದಿ ಸುಖವೇ ಫಲವಾಗುಳ್ಳ ನೂತನಸ್ವಭಾವವಾದ ಬಾರಿಬಾರಿಗೂ ಫಲಭೋಗಾರ್ಥವಾಗಿ ದೇಹಾಂತರಗಳನ್ನುಂಟುಮಾಡುವ ಆ ಪ್ರವೃತ್ತಿಮಾರ್ಗವೂ ಚನ್ನಾಗಿ ನಿರೂಪಣೆಗೈಯಲ್ಪಟ್ಟಿತು! ಎಲೈ ಮುನಿಯೆ!, ಅಧರ್ಮಸ್ವರೂಪಗಳಾದ ನಾನಾವಿಧ ನರಕಗಳು ಪಂಚಮಸ್ಕಂಧದ ಅಂತ್ಯದಲ್ಲಿ ನಿನ್ನಿಂದ ನಿರೂಪಿಸಲ್ಪಟ್ಟಿತು; ಹದಿನಾಲ್ಕು ಮನ್ವಂತರಗಳಲ್ಲಿ ಮೊದಲಿನದಾದ ಸ್ವಾಯಂಭುವ ಮನ್ವಂತರದ ರೀತಿಯೂ ಪ್ರಿಯವ್ರತ ಉತ್ತಾನಪಾದರಾಜರ ವಂಶವೂ ಅವರ ಚರಿತ್ರೆಗಳೂ ನಿರೂಪಿಸಲ್ಪಟ್ಟವು; ಈಶ್ವರನು ಈ ಬ್ರಹ್ಮಾಂಡವನ್ನು ಯಾವರೀತಿ ಸೃಜಿಸಿದನೋ ಅದೇರೀತಿ ನಿನ್ನಿಂದ ವಿಸ್ತರದಿಂದ ದ್ವೀಪ ವರ್ಷ ಪರ್ವತ ಸಮುದ್ರ, ನದೀ ಉದ್ಯಾನವನ ವೃಕ್ಷಗಳ ವಿಭಾಗಲಕ್ಷಣ ಪ್ರಮಾಣ ನಿರೂಪಣಪೂರ್ವಕವಾಗಿ ಈ ಭೂಮಂಡಲದ ಸ್ಥಿತಿಯೂ ಸಪ್ತಪಾತಾಳಗಳ ಸ್ಥಿತಿಯೂ ನಿರೂಪಿಸಲ್ಪಟ್ಟಿತು! ಎಲೈ ಮುನಿಯೆ, ಪುರುಷನು ಯಾವ ಉಪಾಯದಿಂದ ಅತಿ ಕ್ರೂರಗಳಾದ ಯಾತನೆಗಳುಳ್ಳ ನರಕಗಳನ್ನೈದದವನಾಗನೋ ಆ ಉಪಾಯವನ್ನು ನೀನು ನನಗೋಸ್ಕರ ನಿರೂಪಿಸಬೇಕು" ಎಂದು ಪ್ರಶ್ನಿಸಿದನು.

ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು "ಎಲೈ ಅರಸೇ ಕೇಳು : ಈ ಲೋಕದಲ್ಲಿ ಯಾವ ಪುರುಷನು ಮನೋವಾಕ್ಕಾಯಕರ್ಮಗಳಿಂದ ತನ್ನಿಂದ ಮಾಡಲ್ಪಟ್ಟ ಪಾಪಕ್ಕೆ ವಿಧ್ಯುಕ್ತವಾಗಿ ಆ ಮನೋವಾಕ್ಕಾಯಕರ್ಮಗಳಿಂದ ಈ ಲೋಕದಲ್ಲೇ ಪ್ರಾಯಶ್ಚಿತ್ತವನ್ನು ಮಾಡದೆ ಹೋಗುವನೋ ಆ ಪುರುಷನು ದೇಹಾಂತದಲ್ಲಿ ನಿನಗೋಸ್ಕರ ನನ್ನಿಂದ ನಿರೂಪಿಸಲ್ಪಟ್ಟ ಅತಿ ಭಯಂಕರಗಳಾದ ಆ ನರಕಗಳನ್ನು ನಿಶ್ಚಯವಾಗಿ ಹೊಂದುವನು ; ಅದುಕಾರಣ ಪುರುಷನು ಮೃತ್ಯುಕಾಲಕ್ಕಿಂತಲೂ ಪೂರ್ವದಲ್ಲಿ ಕ್ಷೀಣವಾಗದಿರುವ ದೇಹದಿಂದ ಶೀಘ್ರವಾಗಿ ರೋಗನಿದಾನವನ್ನು ತಿಳಿದಿರುವ ವೈದ್ಯನು ಎಂತು ಆ ರೋಗಾನುಗುಣವಾಗಿ ಚಿಕಿತ್ಸೆಯನ್ನು ಮಾಡುವನೋ ಅದೇರೀತಿ ತನ್ನಿಂದ ಮಾಡಲ್ಪಟ್ಟ ಪಾಪವು ಸ್ವಲ್ಪವಾದದ್ದೋ ಮಹತ್ತಾದದ್ದೋ ಎಂದು ತನ್ನ ಮನಸ್ಸಿನಲ್ಲಿ ಚನ್ನಾಗಿ ಆಲೋಚಿಸಿ ಅನಂತರದಲ್ಲಿ ಆ ಪಾಪಾನುಗುಣವಾಗಿ ಪ್ರಾಯಶ್ಚಿತ್ತವಂಗೈಯಲೋಸುಗ ಪ್ರಯತ್ನವನ್ನು ಮಾಡುವನಾಗಬೇಕು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಅರಸು ಸಂಶಯದಿಂದ "ಎಲೈ ಋಷಿಯೆ, ಲೋಕದಲ್ಲಿ ಪುರುಷನು ಪ್ರತ್ಯಕ್ಷದೃಷ್ಟಗಳಾದ ರಾಜದಂಡನಾದಿಗಳಿಂದ ಪುರಾಣಾದಿಗಳಲ್ಲಿ ಬಹುಪ್ರಕಾರವಾಗಿ ಶ್ರುತಂಗಳಾದ ನರಕಾದಿಗಳಿಂದಲೂ ತನಿಗೆ ಪಾಪವನ್ನು ಅಹಿತವೆಂದು ತಿಳಿಯುತಲಿರುವವನಾದಾಗ್ಯೂ ಪ್ರಾಯಶ್ಚಿತ್ತಾನಂತರದಲ್ಲಿ ಪರವಶನಾಗಿ ಪಾಪಗಳನ್ನಾಚರಿಸುತಲಿಧಾನೆಯಾದಕಾರಣ ಪ್ರಾಯಶ್ಚಿತ್ತದಿಂದ ಸಮೂಲವಾಗಿ ಪಾಪನಿವೃತ್ತಿಯಾಗದಿರೋಣದರಿಂದ ಪ್ರಾಯಶ್ಚಿತ್ತವು ನಿಷ್ಫಲವೆಂದು ತಿಳಿಯುತಲಿಧೇನೆ ; ಯಾವರೀತಿಯಿಂದ ಗಜವು ನದಿಯಲ್ಲಿ ಸ್ನಾನಂಗೈದಾಗ್ಯೂ ಪುನಃ ಧೂಳಿಗಳನ್ನು ಮೇಲೆ ಎರಚಿಕೊಂಡು ದೇಹವನ್ನು ಮಲಿನವಾಗಿ ಮಾಡುವದೋ ಆರೀತಿ ಪುರುಷನು ಬಂದುವೇಳೆಯಲ್ಲಿ ಮಹತ್ತಾದ ಪಾಪದದೆಶೆಯಿಂದ ಹಿಂದಕ್ಕೆ ತಿರಿಗಿದವನಾದರೂ ತಾನೇ ಬಂದುವೇಳೆಯಲ್ಲಿ ಆ ಪಾಪವನ್ನು ಆಚರಿಸುತಲಿಧಾನೆಯಾದಕಾರಣ ಪಾಪವು ಪರಿಹರಿಸಲಶಕ್ಯವಾದ್ದರಿಂದ ಅವಶ್ಯವಾಗಿ ನರಕಪ್ರಾಪ್ತಿಯುಂಟಾಗುವದರಿಂದ ಪ್ರಾಯಶ್ಚಿತ್ತವು ವ್ಯರ್ಥವು" ಎಂದು ಪರೀಕ್ಷಿದ್ರಾಯನು ಶಂಕಿಸಿ ನುಡಿದನು.

ಶುಕಮುನಿಯು "ಎಲೈ ಪರೀಕ್ಷಿದ್ರಾಯನೆ, ಕೃಛ್ರಾದಿ ಪ್ರಾಯಶ್ಚಿತ್ತಗಳಲ್ಲಿ ಅವಿದ್ವಾಂಸನೇ ಅಧಿಕಾರಿಯಾದಕಾರಣ ಅವನಿಗೆ ಅವಿದ್ಯಾನಿವೃತ್ತಿಯಿಲ್ಲದಿರೋಣದರಿಂದ ಕೃಛ್ರಾದಿ ಪ್ರಾಯಶ್ಚಿತ್ತವು ಪುರುಷನ ಪಾಪವನ್ನು ಸಮೂಲವಾಗಿ ಪರಿಹರಿಸಲಾರದು ; ಪ್ರಕೃತದಲ್ಲಿ ಪಾಪವು ನಷ್ಟವಾದರೂ ಅದರ ಸಂಸ್ಕಾರದಿಂದ ಪುನಃ ಮತ್ತೊಂದು ಪಾಪವು ಪುಟ್ಟುವದು ; ಈ ಪಾಪಕ್ಕೆ ಮುಖ್ಯವಾದ ಪ್ರಾಯಶ್ಚಿತ್ತವು ತತ್ವಜ್ಞಾನವನ್ನು ಹೊರ್ತು ಮತ್ತೊಂದಲ್ಲ ; ಅಪ್ರಮತ್ತನಾದ ಪುರುಷನು ಅಂಥಾ ತತ್ವಜ್ಞಾನವನ್ನು ಪಡೆಯುವನೇ ಹೊರ್ತು ಇತರನು ಪಡೆಯಲಾರನು ; ಪಥ್ಯವಾದ ಅನ್ನವನ್ನು ಭುಂಜಿಸುವ ಪುರುಷನನ್ನು ಎಂತು ರೋಗಾದಿಗಳು ಬಾಧಿಸಲಾರವೋ ಅದೇರೀತಿ ನಿಯಮಯುಕ್ತನಾದ ಪುರುಷನು ಪಾಪಬಾಧೆಯಿಲ್ಲದೆ ಮೆಲ್ಲಮೆಲ್ಲನೆ ಮೋಕ್ಷವನ್ನು ಪಡೆಯಲು ಸಮರ್ಥನಾಗುವನು ; ಏಕಾಗ್ರಚಿತ್ತತೆಯಿಂದ ಅಷ್ಟಾಂಗಯುಕ್ತವಾದ ಬ್ರಹ್ಮಚರ್ಯದಿಂದಲೂ ಮನೋನಿಗ್ರಹದಿಂದಲೂ ಚಕ್ಷುರಾದಿ ಇಂದ್ರಿಯಗಳ ನಿಗ್ರಹದಿಂದಲೂ ಧಾನದಿಂದಲೂ ಅಹಿಂಸಾದಿಗಳಿಂದಲೂ ಜಪಾದಿಗಳಿಂದಲೂ ಸತ್ಯದಿಂದಲೂ ಸಂಚಾರದಿಂದಲೂ ಶ್ರದ್ಧಾಯುಕ್ತನಾದ ಪುರುಷನು ಮನೋವಾಕ್ಕಾಯಜನ್ಯವಾದ ಪಾಪವನ್ನು ಬಿದುರುಹೊದೆಯನ್ನು ಅಗ್ನಿಯು ದಹಿಸುವಂತೆ ಪರಿಹರಿಸುತಲಿಧಾನೆ ; ಈ ಲೋಕದಲ್ಲಿ ಕೆಲವರು ಪುರುಷರು ತಪಸ್ಸು ಮೊದಲಾದ್ದನ್ನು ಅಪೇಕ್ಷಿಸದಿರುವ ಭಕ್ತಿಯಿಂದ ಶ್ರೀ ವಾಸುದೇವನಲ್ಲೇ ಆಸಕ್ತರಾಗಿ ಹಿಮವನ್ನು ಸೂರ್ಯನು ಪರಿಹರಿಸುವಂತೆ ಪಾಪವನ್ನು ನಿಶ್ಶೇಷವಾಗಿ ಪರಿಹರಿಸಿಕೊಳ್ಳುತ್ತಾರೆ ! ಎಲೈ ಅರಸೆ, ಪಾಪಯುಕ್ತನಾದ ಪುರುಷನು ಭಗವದ್ಭಕ್ತರ ಶೇವೆಯಿಂದ ಶ್ರೀ ವಾಸುದೇವನಲ್ಲಿ ಚಿತ್ತವನ್ನರ್ಪಿಸಿ ಎಂತು ಪರಿಶುದ್ಧನಾಗುವನೋ ಆರೀತಿ ತಪಸ್ಸು ಮೊದಲಾದ್ದರಿಂದ ಪರಿಶುದ್ಧನಾಗಲಾರನು ; ಯಾವ ಭಕ್ತಿಮಾರ್ಗದಲ್ಲಿ ದಯಾಳುಗಳಾದ ನಿಷ್ಕಾಮರಾದ ಭಗವದ್ಭಕ್ತರು ಇಹರೋ ಆ ಭಕ್ತಿಮಾರ್ಗವು ಬಂದು ವಿಘ್ನದಿಂದಲೂ ಭಯವಿಲ್ಲದೆ ಕ್ಷೇಮಕರವಾದ್ದರಿಂದ ಕರ್ಮಜ್ಞಾನಮಾರ್ಗಗಳಿಗಿಂತಲೂ ಉತ್ಕೃ

ಷ್ಟವಾದದ್ದು; ಕೃಚ್ಛ್ರಾದಿ ಪ್ರಾಯಶ್ಚಿತ್ತಗಳು ಅತಿ ಪ್ರಯಾಸದಿಂದ ಮಾಡಲ್ಪಟ್ಟಂಥಾದ್ದಾದಾಗ್ಯೂ ಶ್ರೀಹರಿಯಲ್ಲಿ ಭಕ್ತಿರಹಿತನಾದ ಪುರುಷನನ್ನು ಮದ್ಯಘಟವನ್ನು ಮಹಾನದಿಗಳು ಎಂತು ಪಾವನಂಗೈಯ್ಯಲಾರವೋ ಆದೇರೀತಿ ಪರಿಶುದ್ಧನನ್ನು ಮಾಡಲಾರವು; ಯಾವ ಪುರುಷರು ಲೋಕದಲ್ಲಿ ಜ್ಞಾನವಿಲ್ಲದಿರುವಂಥಾವರಾದರೂ ಶ್ರೀಹರಿ ಗುಣಗಳಲ್ಲಿ ವಿಶ್ವಾಸಮಾತ್ರಯುಕ್ತವಾದ ಮನಸ್ಸನ್ನು ಒಂದುಬಾರಿಯಾದರೂ ಶ್ರೀ ವಾಸುದೇವನ ಪಾದಾರವಿಂದಗಳಲ್ಲಿ ನಿಕ್ಷಿಸುತಲಿಹಾರೋ ಆ ಪುರುಷರು ಅಷ್ಟುಮಾತ್ರದಿಂದಲೇ ಸಮಸ್ತ ಪಾಪಗಳಿಗೂ ಪ್ರಾಯಶ್ಚಿತ್ತವನ್ನು ಮಾಡಿದವರಾಗಿ ಸ್ವಪ್ನದಲ್ಲಿಯೂ ಯಮನ ಪಾಶಧಾರಿಗಳಾದ ಯಮಭಟರನ್ನು ನೋಡುವದಿಲ್ಲ; ಈ ಅರ್ಥವನ್ನೇ ಇತಿಹಾಸರೂಪವಾಗಿ ನಿರೂಪಿಸುವೆನು! ಎಲೈ ಅರಸೆ, ಈ ಅರ್ಥದಲ್ಲಿ ವಿಷ್ಣುದೂತರಿಗೂ ಯಮದೂತರಿಗೂ ಸಂವಾದರೂಪವಾದ ಪುರಾತನವಾದ ಒಂದು ಇತಿಹಾಸವನ್ನು ಋಷಿಗಳು ಹೇಳುವರು; ಅದನ್ನು ನನ್ನ ದೆಶೆಯಿಂದ ಕೇಳು: ಪೂರ್ವದಲ್ಲಿ ಕನ್ಯಾಕುಬ್ಜವೆಂಬ ಒಂದು ಪಟ್ಟಣದಲ್ಲಿ ಶೂದ್ರಸ್ತ್ರೀಗೆ ಪತಿಯಾಗಿ ಆಚಾರಭ್ರಷ್ಟನಾಗಿ ಆ ದಾಸಿಯೊಡನೆ ಸಹಭೋಜನಾದಿಗಳಿಂದ ಲೋಕದೂಷಿತನಾದ ಅಜಾಮಿಳನೆಂಬ ಒಬ್ಬ ಬ್ರಾಹ್ಮಣನಿದ್ದನು; ಆ ಅಜಾಮಿಳನು ಜೂಜಾಡೋಣದರಿಂದಲೂ ಪಗಡೆಯನ್ನಾಡೋಣದರಿಂದಲೂ ವಂಚನೆ ಮೊದಲಾದ್ದರಿಂದಲೂ ನಿಷಿದ್ಧವಾದ ಜೀವನೋಪಾಯದಿಂದ ಅಪವಿತ್ರನಾಗಿ ಕುಟುಂಬವನ್ನು ಪೋಷಿಸುತ ಪ್ರಾಣಿಗಳನ್ನು ಪೀಡಿಸುತ್ತಿದ್ದನು; ಈರೀತಿ ಇರುತ್ತಿರುವಲ್ಲಿ ಆ ದಾಸಿಯು ಗರ್ಭದಲ್ಲಿ ಹತ್ತುಮಂದಿ ಪುತ್ರರು ಜನಿಸಿದರು; ಆ ಪುತ್ರರನ್ನು ಲಾಲಿಸುತ್ತಿರುವದರಲ್ಲೇ ಆ ಅಜಾಮಿಳನಿಗೆ ಎಂಭತ್ತೆಂಟು ಸಂವತ್ಸರಗಳು ಆಯುಸ್ಸಿನಲ್ಲಿ ಕಳೆದವು; ವೃದ್ಧನಾದ ಅಜಾಮಿಳನಿಗೆ ಪುಟ್ಟಿದ ಹತ್ತುಮಂದಿ ಪುತ್ರರಲ್ಲಿ ಬಾಲಕನಾದ ನಾರಾಯಣನೆಂಬ ಕನಿಷ್ಠಪುತ್ರನು ತಾಯಿತಂದೆಗಳಿಗೆ ಅತ್ಯಂತ ಪ್ರಿಯನಾಗಿದ್ದನು; ವೃದ್ಧನಾದ ಆ ಅಜಾಮಿಳನು ಸವಿನುಡಿಗಳನ್ನು ನುಡಿಯುತಲಿರುವ ಕನಿಷ್ಠಪುತ್ರನಲ್ಲಿ ಆಸಕ್ತವಾದ ಮನಸ್ಸುಳ್ಳವನಾಗಿ ಅವನ ಬಾಲಕ್ರೀಡೆಗಳನ್ನು ನೋಡುತಲಿರುವವನಾಗಿ ಅತ್ಯಂತ ಸಂತೋಷವನ್ನು ಪಡೆಯುತಲಿದ್ದನು; ಆ ಬ್ರಾಹ್ಮಣನು ಆ ಪುತ್ರಸ್ನೇಹದಿಂದ ಬದ್ಧನಾಗಿ ತಾನು ಭುಂಜಿಸುವಾಗಲೂ ಪಾನಂಗೈಯುವಾಗಲೂ ಆ ಬಾಲಕನಿಗೆ ಭೋಜನಪಾನಾದಿಗಳನ್ನು ಮಾಡಿಸುತ ಮೂಢಬುದ್ಧಿಯಿಂದ ತನಗೆ ಬಂದ ಮೃತ್ಯುವನ್ನು ತಿಳಿಯಲಿಲ್ಲ; ಈರೀತಿ ಇರುವ ಮೂಢನಾದ ಆ ದ್ವಿಜನು ಮೃತ್ಯುಕಾಲವು ಸಮೀಪವಾಗಲು ಅತಿಪ್ರಿಯನಾದ ಆ ನಾರಾಯಣನೆಂಬ ಬಾಲಕನಲ್ಲಿ ಬುದ್ಧಿಯನ್ನು ನಿಲ್ಲಿಸಿ ಆ ಅಜಾಮಿಳನು ಪಾಶಗಳನ್ನು ಧರಿಸಿದವರಾಗಿ ಅತಿಭಯಂಕರರಾಗಿ ವಕ್ರಗಳಾದ ಮುಖಗಳುಳ್ಳವರಾಗಿ ಊರ್ಧ್ವಮುಖಗಳಾದ ರೋಮಗಳುಳ್ಳವರಾಗಿ ತನ್ನನ್ನು ಯಮಲೋಕವನ್ನು ಹೊಂದಿಸಲೋಸುಗ ಬಂದಿರುವ ಮೂರುಮಂದಿ ಯಮಭಟರನ್ನು ನೋಡಿ ದೂರದಲ್ಲಿಯೇ ಬಾಲಕ್ರೀಡಾಸಕ್ತನಾದ ನಾರಾಯಣನೆಂಬ ಆ ಕನಿಷ್ಠಪುತ್ರನನ್ನು ಅತ್ಯಂತ ಖಿನ್ನಗಳಾದ ಇಂದ್ರಿಯಗಳುಳ್ಳವನಾಗಿ ದೀರ್ಘವಾದ ಸ್ವರದಿಂದ 'ನಾರಾಯಣನೇ' ಎಂದು ಕರೆದನು! ಎಲೈ ಅರಸೆ, ಆ ಕಾಲದಲ್ಲಿ ಪ್ರಾಣಗಳನ್ನು ಬಿಡುತಲಿರುವ ಆ ಅಜಾಮಿಳನ ಮುಖದಿಂದ ಹೊರಟಿರುವ ಹರಿನಾಮಕೀರ್ತನವನ್ನು ಕೇಳಿ ಅದು ತಮ್ಮ ಸ್ವಾಮಿಯಾದ ಶ್ರೀನಾರಾಯಣನ ನಾಮಸಂಕೀರ್ತನವಾದ್ದರಿಂದ ವಿಷ್ಣುದೂತರು ಅತಿ ತ್ವರೆಯಿಂದ ಅಲ್ಲಿಗೆ ಬಂದರು; ಅನಂತರದಲ್ಲಿ ವಿಷ್ಣುದೂತರು ಹೃದಯಮಧ್ಯದಿಂದ ದಾಸೀಪತಿಯಾದ ಅಜಾಮಿಳನನ್ನು ಸೆಳೆಯುತಲಿರುವ ಯಮದೂತರನ್ನು ತಮ್ಮ ತೇಜಸ್ಸಿನಿಂದ ತಡೆದರು; ಈರೀತಿ ವಿಷ್ಣುದೂತರಿಂದ ನಿರಾಕರಿಸಲ್ಪಟ್ಟವರಾಗಿ ಯಮದೂತರು ವಿಷ್ಣುದೂತರನ್ನು ಕುರಿತು 'ಎಲೈ ಪುರುಷರುಗಳಿರಾ, ಯಮಧರ್ಮರಾಯನ ಆಜ್ಞೆಯನ್ನು ತಡೆಯುತಲಿರುವ ನೀವ್ಯಾರು? ಯಾವವನ ಸೇವಕರು? ಎಲ್ಲಿಂದ ಬಂದಿರಿ? ಯಾವನಿಮಿತ್ತದಿಂದ ಅಜಾಮಿಳನ ಯಮಪುರ ಪ್ರಯಾಣವನ್ನು ಅಡ್ಡೀಮಾಡುತಲಿದ್ದೀರಿ? ನೀವು ದೇವತೆಗಳೋ? ಅಲ್ಲದೆ ಗಂಧರ್ವಾದಿಗಳೋ? ಶ್ರೇಷ್ಠರಾದ ಸಿದ್ಧರೋ? ನೀವೆಲ್ಲರೂ ಪದ್ಮರೇಖೆಗಳಿಗೆ ಸಮಾನಗಳಾದ ನೇತ್ರಗಳುಳ್ಳವರಾಗಿ ಪೀತಾಂಬರವನ್ನುಟ್ಟಿರುವಿರಿ; ದೇದೀಪ್ಯಮಾನಗಳಾದ ಕಿರೀಟಗಳನ್ನು ಮಕರಕುಂಡಲಗಳನ್ನು ಹೊಳೆಯುತಲಿರುವ ಪದ್ಮಮಾಲೆಗಳನ್ನೂ ಧರಿಸಿದ್ದೀರಿ; ನೀವೆಲ್ಲರೂ ನೂತನವಾದ ವಯಸ್ಸುಳ್ಳವರಾಗಿ ಚತುರ್ಭುಜಯುಕ್ತರಾಗಿ ಧನುಸ್ಸುಗಳಿಂದಲೂ ಬತ್ತಳಿಕೆಗಳಿಂದಲೂ ಖಡ್ಗಗಳಿಂದಲೂ ಗದೆಗಳಿಂದಲೂ

ಕಂಬು ಚಕ್ರ ಪದ್ಮಗಳಿಂದಲೂ ಪ್ರಕಾಶಿಸುತ್ತಲಿದ್ದೀರಿ ; ನೀವು ತೇಜಸ್ಸಿನಿಂದ ದಿಕ್ಕುಗಳನ್ನು ಅಂಧಕಾರವು ಸೂರ್ಯಪ್ರಕಾಶವಿಲ್ಲದಿರುವಂಥಾದ್ದನ್ನಾಗಿ ಮಾಡುತ್ತಲಿದ್ದೀರಿ ; ಇಂಥಾ ಮಹಾನುಭಾವರಾದ ನೀವು ಯಾತಕ್ಕೋಸ್ಕರ ಧರ್ಮಸ್ವರೂಪನಾದ ಯಮನ ಕಿಂಕರರಾದ ನಮ್ಮನ್ನು ತಡೆಯುತ್ತಲಿದ್ದೀರಿ' ಎಂದು ಆ ಯಮಭಟರಿಂದ ಪ್ರಶ್ನೆಗೈಯಲ್ಪಟ್ಟವರಾಗಿ ವಿಷ್ಣುದೂತರು—'ಎಲೈ ಇವರು ದಂಡಿಸಲು ಯೋಗ್ಯರು ; ಇವರು ದಂಡಿಸಲು ಯೋಗ್ಯರಲ್ಲವೆಂಬ ಜ್ಞಾನವಿಲ್ಲದಿರುವ ಈ ಪುರುಷರು ಚೋರರೇ ಸರಿ ; ಆದಾಗ್ಯೂ ನಮ್ಮ ಭಯದಿಂದ ಅನೃತವಚನಗಳು ನುಡಿಯುತ್ತಲಿದ್ದಾರೆ'—ಎಂದು ಆಶ್ಚರ್ಯದಿಂದ ನಕ್ಕಂಥಾವರಾಗಿ ಮೇಘಧ್ವನಿಗೆ ಸಮಾನವಾದ ಧ್ವನಿವುಳ್ಳ ವಾಕ್ಕಿನಿಂದ ಯಮಭಟರನ್ನು ಕುರಿತು 'ಎಲೈ ಪುರುಷರೆ, ನೀವು ಧರ್ಮಕ್ಕೆ ನಿಯಾಮಕನಾದ ಯಮನ ಭೃತ್ಯರಾಗಿದ್ದೇ ಉಂಟಾದರೆ ಈ ಧರ್ಮಾಧರ್ಮಗಳ ಸ್ವರೂಪಗಳನ್ನೂ ಅದರಲ್ಲಿನ ಪ್ರಮಾಣಗಳನ್ನೂ ನಮಗೋಸ್ಕರ ಹೇಳೀ ; ಲೋಕದಲ್ಲಿ ಪಶ್ವಾದಿ ಸಮಸ್ತ ಪ್ರಾಣಿಗಳೂ ದಂಡನಯೋಗ್ಯರೋ ? ಆ ಪ್ರಾಣಿಗಳಲ್ಲಿ ಕರ್ಮಾಸಕ್ತರಾದ ಮನುಷ್ಯರೇ ದಂಡನಯೋಗ್ಯರೋ ? ಅಥವ ಆ ಮನುಷ್ಯರೆಲ್ಲರೂ ದಂಡನಯೋಗ್ಯರೋ ? ಅದರಲ್ಲೂ ಕೆಲವರು ದಂಡನಯೋಗ್ಯರೋ ? ದಂಡನೆಗೆ ಯಾವನು ವಿಷಯನಾಗುವನು ? ಯಾವಪ್ರಕಾರದಿಂದ ದಂಡನವು ಮಾಡತಕ್ಕದ್ದು ? ಈ ಅರ್ಥವನ್ನು ನಮಗೆ ಚನ್ನಾಗಿ ಶಾಸ್ತ್ರಸಮ್ಮತವಾಗಿ ಪೇಳುವವರಾಗೀ' ಎಂದು ವಿಷ್ಣುದೂತರಿಂದ ಪ್ರಶ್ನೆಗೈಯಲ್ಪಟ್ಟವರಾಗಿ ಯಮಭಟರು ವಿಷ್ಣುದೂತರನ್ನು ಕುರಿತು 'ಎಲೈ ಮಹಾಪುರುಷರೇ ಕೇಳಿ : ಯಾವದು ವೇದದಿಂದ ವಿಧಿಸಲ್ಪಟ್ಟಂಥಾದ್ದೋ ಅದೇ ಧರ್ಮವು ; ಆ ಧರ್ಮಕ್ಕೆ ವೇದವೇ ಪ್ರಮಾಣವು ; ವೇದದಿಂದ ಯಾವದು ನಿಷೇಧಿಸಲ್ಪಟ್ಟಿದೆಯೋ ಅದೇ ಅಧರ್ಮವು ; ಅದನ್ನು ವರ್ಜಿಸುವದರಲ್ಲಿ ವೇದದಿಂದ ನಿರೂಪಿಸಲ್ಪಟ್ಟ ನಿಷೇಧವೇ ಪ್ರಮಾಣವೆಂದು ತಿಳಿಯತಕ್ಕದ್ದು ; ಆ ವೇದವು ಭಗವಂತನ ಮುಖದಿಂದ ನಿಶ್ವಾಸರೂಪವಾಗಿ ತಾನೇ ಆವಿರ್ಭವಿಸಿ ನಾರಾಯಣ ಸ್ವರೂಪವಾದ್ದರಿಂದ ಪ್ರಮಾಣವೆಂದು ಸಮಸ್ತರಿಂದ ಅಂಗೀಕರಿಸಲ್ಪಡುವದೆಂದು ತಿಳಿಯುವರಾಗೀ ; ಯಾವವನಿಂದ ತನ್ನಲ್ಲಿ ಸತ್ವರಜಸ್ತಮೋಗುಣಾತ್ಮಕವಾದ ಈ ಪ್ರಾಣಿಗಳು ಶಾಂತಿ ಮೊದಲಾದ ಗುಣಗಳಿಂದಲೂ ಬ್ರಾಹ್ಮಣಾದಿ ನಾಮಧೇಯಗಳಿಂದಲೂ ಅಧ್ಯಯನಾದಿ ಕ್ರಿಯೆಗಳಿಂದಲೂ ವರ್ಣಾಶ್ರಮಗಳಿಂದಲೂ ಯಥಾಯೋಗ್ಯವಾಗಿ ವಿಭಾಗಂಗೈಯಲ್ಪಡುವವರಾಗುತಲಿಧಾರೆಯೋ ಅವರೇ ಶ್ರೀನಾರಾಯಣನೆಂದು ತಿಳಿಯತಕ್ಕದ್ದು ; ಆದಾಗ್ಯೂ ಈ ಅಜಾಮಿಳನಿಂದ ಅಧರ್ಮವು ಮಾಡಲ್ಪಟ್ಟಿತೆಂದು ಎಂತು ತಿಳಿದಿರಿ ಅಂದರೆ : ಸೂರ್ಯನು ಅಗ್ನಿಯು ಆಕಾಶವು ವಾಯುವು ಗೋವುಗಳು ಚಂದ್ರನು ಸಂಧ್ಯೆಗಳು ದಿವಾರಾತ್ರಿಗಳು ದಿಕ್ಕುಗಳು ಭೂಮಿಯು ಕಾಲವು ತಾನು ಧರ್ಮವೂ ಈ ಸಮಸ್ತವೂ ಜೀವನ ಪಾಪ ಪುಣ್ಯಗಳಿಗೆ ಸಾಕ್ಷಿಗಳೆಂದು ತಿಳಿಯತಕ್ಕದ್ದು ; ಸಾಕ್ಷೀಭೂತರಾದ ಈ ಸೂರ್ಯಾಗ್ನಿ ಮೊದಲಾದ ದೇವತೆಗಳಿಂದ ತಿಳಿಯಲ್ಪಟ್ಟ ಅಧರ್ಮವೇ ದಂಡನೆಗೆ ನಿಮಿತ್ತವು ; ಆ ಅಧರ್ಮವನ್ನು ಮಾಡುವ ಪುರುಷರೆಲ್ಲರೂ ಕ್ರಮಾನುಸಾರವಾಗಿ ದಂಡಿಸುವದಕ್ಕೆ ಯೋಗ್ಯರು ; ಕರ್ಮಗಳಲ್ಲುದ್ಯುಕ್ತರಾದ ಪುರುಷರಿಗೆ ನಿರಂತರದಲ್ಲೂ ಗುಣತ್ರಯ ಸಂಬಂಧವಿರೋಣದರಿಂದ ಪುಣ್ಯ ಪಾಪಗಳು ಸಂಭವಿಸುತಲಿವೆ ; ಪುರುಷನು ಅಕರ್ತನಾದರೆ ಆಗ ಪುಣ್ಯಪಾಪಗಳು ಎರಡೂ ಇಲ್ಲದಿರುವವು ; ದೇಹಯುಕ್ತನಾದ ಪುರುಷನು ಬಬ್ಬನಾದರು ಕರ್ಮವನ್ನು ಮಾಡದಿರುವವನಾಗುವದಿಲ್ಲ ; ಅದುಕಾರಣ ಸಕಲ ಕರ್ಮಬದ್ಧವಾದ ಪಾಪವನ್ನು ಆಚರಿಸುವವರಾದಕಾರಣ ಸಕಲರೂ ದಂಡನೆಗೆ ಯೋಗ್ಯರೇ ಸರೀ ! ಎಲೈ ದೇವೋತ್ತಮರೆ, ಈ ಜನ್ಮದಲ್ಲಿ ಪ್ರಾಣಿಗಳಲ್ಲಿ ಗುಣಗಳು ವಿಚಿತ್ರಗಳಾಗಿರುವದರಿಂದ ಇವನು ಶಾಂತನು ; ಇವನು ಕ್ರೂರನು ; ಇವನು ಮೂಢನು ; ಇವನು ಸುಖಿಯು ; ಇವನು ದುಃಖಿಯು ; ಇವನು ಸುಖದುಃಖಗಳನ್ನು ಮಿಶ್ರವಾಗಿ ಅನುಭವಿಸುವವನು ; ಇವನು ಧಾರ್ಮಿಕನು ; ಇವನು ಪಾಪಿಯು ; ಇವನು ಪಾಪ ಪುಣ್ಯಗಳೆರಡನ್ನೂ ಮಾಡುವನೆಂದು ಎಂತು ಮೂರುಪ್ರಕಾರವಾಗಿ ಭೇದವು ತಿಳಿಯಲ್ಪಡುತಲಿದೆಯೋ ಆದೇರೀತಿ ಪೂರ್ವಜನ್ಮಗಳಲ್ಲಿಯೂ ಈ ಪ್ರಾಣಿಗಳಲ್ಲಿ ತ್ರಿವಿಧವಾದ ಭೇದವು ಕಲ್ಪಿಸಲ್ಪಡುತಲಿದೆ ; ಈ ತ್ರಿವಿಧವಾದ ಭೇದವು ಪೂರ್ವಜನ್ಮಗಳಲ್ಲಿಲ್ಲದಿದ್ದರೆ ಈ ಜನ್ಮದಲ್ಲಿರಲಾರದಾದಕಾರಣ ಪೂರ್ವಜನ್ಮಗಳಲ್ಲಿಯೂ ಆಭೇದವು ಕಲ್ಪಿಸಲ್ಪಡುವದೆಂದು ತಿಳಿಯತಕ್ಕದ್ದು ; ಈ ವರ್ತಮಾನವಾದ ಜನ್ಮಕ್ಕಿಂತಲೂ ಪೂರ್ವೋತ್ತರ ಜನ್ಮ

ಗಳಲ್ಲಿಯೂ ಧರ್ಮಾಧರ್ಮ ವಿಭಾಗವು ತಿಳಿಯುತಲಿದೆ; ವರ್ತಮಾನವಾದ ವಸಂತಾದಿಕಾಲವು ಭೂತ ಆಗಾಮಿ
ಗಳಾದ ವಸಂತಾದಿ ಋತುಗಳಲ್ಲಿ ಪುಷ್ಪ ಫಲಾದಿ ಗುಣಗಳನ್ನು ಎಂತು ಜ್ಞಾಪಿಸುವದೋ ಆರೀತಿ ಪ್ರಾಣಿಗಳ ವರ್ತ
ಮಾನವಾದ ಜನ್ಮವು ಭೂತ ಆಗಾಮಿಗಳಾದ ಜನ್ಮಾಜನ್ಮಗಳನ್ನು ಜ್ಞಾಪಿಸುತಲಿದೆ; ಧರ್ಮಕ್ಕೆ ನಿಯಾಮಕನಾದ
ಯಮನಾವರೋ ಸಂಯಮನೀಪುರದಲ್ಲಿರುತ್ತಿರುವವನಾಗಿ ತನ್ನ ಮನಸ್ಸಿನಿಂದ ದೇಹದಲ್ಲಿ ಅಂತರ್ಯಾಮಿಯಾಗಿದ್ದು
ಕೊಂಡು ಜೀವನ ಪೂರ್ವಜನ್ಮದಲ್ಲಿ ಉಂಟಾದ ಧರ್ಮಾಧರ್ಮಗಳನ್ನು ಈಶ್ವರನಂತೆ ಚನ್ನಾಗಿ ನೋಡುತ ಅನಂ
ತರದಲ್ಲಿ ವರ್ತಮಾನ ಜನ್ಮದಲ್ಲಿ ಉಂಟಾದ ಧರ್ಮಾಧರ್ಮಗಳನ್ನು ವಿಚಾರಿಸುತಲಿದ್ದಾನೆ; ಯಾವರೀತಿಯಿಂದ ನಿದ್ರೆ
ಯಂಗೈಯ್ಯುತಲಿರುವ ಪುರುಷನು ಸ್ವಪ್ನದಲ್ಲಿ ತೋರುತಲಿರುವ ತನ್ನ ದೇಹವನ್ನು ತಿಳಿಯುತಲಿರುವನೇಹೊ
ರ್ತು ಜಾಗ್ರದವಸ್ಥೆಯಲ್ಲಿರುವ ದೇಹವನ್ನೂ ಪೂರ್ವಜನ್ಮದಲ್ಲಿದ್ದ ದೇಹವನ್ನೂ ತಿಳಿಯುವವನಾಗುವದಿಲ್ಲವೋ
ಅದೇರೀತಿ ಅವಿದ್ಯೋಪಾಧಿಕನಾದ ಜೀವನು ಪ್ರಾಚೀನಕರ್ಮದಿಂದ ಪ್ರಾಪ್ತವಾದ ವರ್ತಮಾನವಾದ ದೇಹವನ್ನು
ಬಂದನ್ನೇ ಇದೇ ನಾನೆಂದು ತಿಳಿಯುವನೇಹೊರ್ತು ನಷ್ಟವಾದ ಜನ್ಮಾಂತರ ಸ್ಮರಣೆಯುಳ್ಳವನಾದ್ದರಿಂದ ಪೂ
ರ್ವಜನ್ಮ ವ್ಯಾಪಾರವನ್ನೂ ಆಗಾಮಿಜನ್ಮವ್ಯಾಪಾರವನ್ನೂ ಅರಿಯನು; ಜೀವನು ಹಸ್ತಾದಿ ಪಂಚಕರ್ಮೇಂದ್ರಿ
ಯಗಳನ್ನು ಆದಾನಾದಿ ಪಂಚಕ್ರಿಯೆಗಳನ್ನೂ ಮಾಡುತಲಿದ್ದಾನೆ; ಶ್ರೋತ್ರಾದಿ ಪಂಚ ಜ್ಞಾನೇಂದ್ರಿಯಗಳಿಂದ
ಶಬ್ದಾದಿ ಪಂಚವಿಷಯಗಳನ್ನು ತಿಳಿಯುತಲಿದ್ದಾನೆ; ಪಂಚಪ್ರಾಣಗಳು ಪಂಚಜ್ಞಾನೇಂದ್ರಿಯಗಳು ಪಂಚಕ
ರ್ಮೇಂದ್ರಿಯಗಳು ಮನಸ್ಸು ಒಂದು ಅಂತೂ ಈ ಹದಿನಾರಾದ ಉಪಾಧಿಗಳೊಳಗೆ ಹದಿನೇಳನೆಯವನಾಗಿ ತಗ
ಲಿಕೊಂಡಿರುವವನಾದಾಗ್ಯೂ ಜೀವನು ಹದಿನಾರನೆಯದಾದ ಮನಸ್ಸಿನೊಡನೆ ತಾನೊಬ್ಬನೇ ಕರ್ಮೇಂದ್ರಿಯ
ವಿಷಯಗಳನ್ನೂ ಮನೋವಿಷಯಗಳನ್ನೂ ಜ್ಞಾನೇಂದ್ರಿಯ ವಿಷಯಗಳನ್ನೂ ಸಹಾ ಈರೀತಿ ತ್ರಿವಿಧ ವಿಷಯಗ
ಳನ್ನು ಅನುಭವಿಸುತಲಿದ್ದಾನೆ; ಗುಣತ್ರಯ ಕಾರ್ಯವಾದ ಪ್ರಾಣಾದಿ ಷೋಡಶ ಕಲಾತ್ಮಕವಾದ ಆ ಲಿಂಗಶರೀ
ರವು ಜೀವನಿಗೆ ಸುಖ ದುಃಖ ಭಯ ಆರ್ತಿಗಳನ್ನುಂಟುಮಾಡುವ ಸಂಸಾರವನ್ನು ಕಲ್ಪಿಸುತಲಿದೆ; ಅಜ್ಞಾನಾದ
ಅರಿಷಡ್ವರ್ಗವನ್ನು ಜಯಿಸದಿರುವ ಜೀವನು ತಾನು ಇಚ್ಛೈಸದಿರುವವನಾದಾಗ್ಯೂ ಈ ಲಿಂಗಶರೀರದಿಂದ ಕರ್ಮ
ಗಳನ್ನು ಮಾಡುತಲಿದ್ದಾನೆ; ಯಾವರೀತಿಯಿಂದ ಕೋಶಕಾರವೆಂಬ ಕೀಟವಿಶೇಷವು ತಾನು ಹೊರಕ್ಕೆ ಬರುವ
ರೀತಿಯನ್ನರಿಯದೆ ಸೂತ್ರವಿಶೇಷಗಳಿಂದ ಒಂದು ಗೂಡನ್ನು ನಿರ್ಮಿಸಿ ಅದರಲ್ಲಿದ್ದು ಅನಂತರದಲ್ಲಿ ಹೊರಕ್ಕೆ ಬರ
ಲು ಉಪಾಯವನ್ನರಿಯದೊ ಅದೇರೀತಿ ಜೀವನು ಕರ್ಮದಲ್ಲಿ ತಗಲಿಕೊಂಡು ನಿರ್ಗಮನೋಪಾಯವನ್ನರಿಯದೆ
ಬಾಧೆಪಡುತಲಿದ್ದಾನೆ; ಒಬ್ಬನಾದಾಗ್ಯೂ ಒಂದು ಕ್ಷಣದಲ್ಲಾದರೂ ಕರ್ಮವನ್ನು ಮಾಡದಿರುವದಿಲ್ಲ; ಜೀವನು
ಪೂರ್ವಸಂಸ್ಕಾರದಿಂದ ಪುಟ್ಟಿದ ಗುಣಕಾರ್ಯಗಳಾದ ರಾಗಾದಿಗಳಿಂದ ವಿವಶನಾಗಿ ಕರ್ಮವನ್ನು ಮಾಡುತಲಿದ್ದಾನೆ;
ಜೀವನು ಮತ್ತೂ ಕರ್ಮಜನ್ಯವಾದಅದೃಷ್ಟವೆಂಬ ನಿಮಿತ್ತವನ್ನು ಹೊಂದಿ ಪ್ರಬಲವಾದ ವಾಸನೆಯಿಂದ ಮಾತಾ
ಪಿತೃಗಳ ಶರೀರಗಳಾದ ಸ್ಥೂಲ ಸೂಕ್ಷ್ಮ ಶರೀರಗಳನ್ನು ಧರಿಸುತಲಿದ್ದಾನೆ; ಪುರುಷನಿಗೆ ಪ್ರಕೃತಿ ಸಂಬಂಧದಿಂದ
ಯಾವ ಸಂಸಾರ ಬಂಧವೆಂಬ ಅನರ್ಥವುಂಟಾಯಿತೊ ಆ ಸಂಸಾರ ಬಂಧವೇ ಈಶ್ವರನ ಭಜನೆಯಿಂದ ಶೀಘ್ರವಾಗಿ
ಪಲಾಯನಂಗೈವದು; ಈರೀತಿ ಧರ್ಮಾದಿಸ್ವರೂಪವನ್ನು ನಿರೂಪಿಸಿ ಪ್ರಕೃತವಾದ ಅಜಾಮಿಳನ ವೃತ್ತಾಂತವನ್ನು
ಹೇಳುವರು! ಎಲೈ ದೇವಶ್ರೇಷ್ಠರುಗಳಿರಾ ಕೇಳಿ: ಈ ಅಜಾಮಿಳನು ಪೂರ್ವದಲ್ಲಿ ವೇದಶಾಸ್ತ್ರಸಂಪನ್ನ
ನಾಗಿ ಸತ್ಸ್ವಭಾವ ಸದಾಚಾರಗಳಿಗೂ ಕ್ಷಮಾದಿಗುಣಗಳಿಗೂ ಸಹಾ ಆಶ್ರಯನಾಗಿ ವ್ರತನಿಷ್ಠನಾಗಿ ಸೌಮ್ಯನಾಗಿ
ಜಿತೇಂದ್ರಿಯನಾಗಿ ಸತ್ಯವಾಕ್ಯಗಳುಳ್ಳವನಾಗಿ ಪರಿಶುದ್ಧನಾಗಿ ಗುರು ಅಗ್ನಿ ಅತಿಥಿ ವೃದ್ಧರನ್ನು ಸೇವಿಸುತಲಿರುವ
ವನಾಗಿ ಅಹಂಕಾರರಹಿತನಾಗಿ ಸರ್ವಭೂತ ಮಿತ್ರನಾಗಿ ದಯಾಳುವಾಗಿ ಮಿತವಾದ ವಾಕ್ಯವುಳ್ಳವನಾಗಿ ಅಸೂಯಾ
ರಹಿತನಾಗಿದ್ದನು; ಈರೀತಿ ಇರುತ್ತಿರುವಲ್ಲಿ ಸಕಲಗುಣಯುಕ್ತನಾದ ಈ ಅಜಾಮಿಳನು ತಂದೆಯ ಆಜ್ಞೆಯಿಂದ
ಒಂದು ಸಮಯದಲ್ಲಿ ವನವನ್ನೈದಿ ಫಲ ಪುಷ್ಪ ಸಮಿತ್ಕುಶಗಳನ್ನು ಸಂಪಾದಿಸಿಕೊಂಡು ಆ ವನದಿಂದ ಪುನಹಾ
ಗೃಹವನ್ನು ಕುರಿತು ಹಿಂದಕ್ಕೆ ಬರುತಲಿರುವ ಈ ಅಜಾಮಿಳನು ಮಧ್ಯಮಾರ್ಗದಲ್ಲಿ ಸುರಾಪಾನಂಗೈದು ಮದದಿಂದ

ಭ್ರಮಿಸುತಲಿರುವ ನೇತ್ರಗಳುಳ್ಳವಳಾಗಿ ಗರ್ವಯುಕ್ತಳಾಗಿ ಜಾರುತಲಿರುವ ನೀವಿಬಂಧವುಳ್ಳವಳಾಗಿರುವ ಶೂದ್ರಸ್ತ್ರೀಯೊಡನೆ ತನ್ನ ಆಚಾರದಿಂದ ಭ್ರಷ್ಟನಾಗಿ ಲಜ್ಜಾರಹಿತನಾಗಿ ಕ್ರೀಡಿಸುತ ಸಂಗಡಲೇ ಗಾನಗೈಯುತ ಪರಿಹಾಸಾದಿಗಳಿಂದ ನಗುತಲಿರುವ ಬಬ್ಬ ಕಾಮುಕನಾದ ಶೂದ್ರನನ್ನು ನೋಡಿದನು ; ಅನಂತರದಲ್ಲಿ ಕಾಮೋದ್ದೀಪಕವಾದ ಅವಳ ಹರಿದ್ರಾದಿ ಲೇಪನಗೈಯಲ್ಪಟ್ಟ ಆ ಶೂದ್ರನ ಭುಜದಿಂದ ಆಲಿಂಗನಗೈಯಲ್ಪಟ್ಟ ಆ ದಾಸಿಯನ್ನು ಕಂಡು ಈ ಅಜಾಮಿಳನು ಕಾಮವಿಶೇಷದಿಂದ ಮೋಹಿತನಾಗಿ ಮನ್ಮಥನ ವಶವನ್ನೈದಿ ತನ್ನ ಸಮಸ್ತಧೈರ್ಯಶಕ್ತಿಯಿಂದಲೂ ಸಮಸ್ತ ಜ್ಞಾನಶಕ್ತಿಯಿಂದಲೂ ಮನಸ್ಸನ್ನು ತಡೆಯುತಲಿರುವವನಾದಾಗ್ಯೂ ಕಾಮಮೋಹಿತವಾದ ಆ ಮನಸ್ಸನ್ನು ಸಮಾಧಾನಗೈಯಲು ಸಮರ್ಥನಾಗದೆ ಆ ದಾಸೀದರ್ಶನವುಳ್ಳ ಕಾಮವೆಂಬ ಗ್ರಹದಿಂದ ಹಿಡಿಯಲ್ಪಟ್ಟವನಾಗಿ ಸ್ಮೃತಿರಹಿತನಾಗಿ ಮನಸ್ಸಿನಿಂದ ಆ ದಾಸಿಯನ್ನೇ ಧ್ಯಾನಗೈಯುತ ಬ್ರಾಹ್ಮಣಧರ್ಮದಿಂದ ಭ್ರಷ್ಟನಾದನು; ಈ ದ್ವಿಜನು ಯಾವರೀತಿಯಿಂದ ಆ ದಾಸಿಯು ಪ್ರಸನ್ನಳಾಗುವಳೋ ಆ ರೀತಿಯಿಂದ ಪಿತ್ರಾರ್ಜಿತಗಳಾದ ಧನಾದಿಗಳಿಂದಲೂ ಮನೋಹರಗಳಾದ ವಿಷಯಭೋಗಗಳಿಂದಲೂ ಸಂತೋಷಪಡಿಸಿದವನಾದನು ; ಈ ಪಾಪಿಯಾದ ಅಜಾಮಿಳನು ಆ ಜಾರಿಣಿಯ ಕಟಾಕ್ಷಗಳಿಂದ ಭೇದಿಸಲ್ಪಟ್ಟ ಬುದ್ಧಿಯುಳ್ಳವನಾಗಿ ಇಷ್ಟಳಾಗಿ ಸತ್ಕುಲದಲ್ಲಿ ವಿವಾಹಿತಳಾಗಿ ಋತುಮತಿಯಾಗದಿರುವ ತನ್ನ ಪತ್ನಿಯನ್ನು ಶೀಘ್ರವಾಗಿ ಪರಿತ್ಯಾಗಗೈದನು ; ಮಂದಬುದ್ಧಿಯುಳ್ಳ ಈ ದ್ವಿಜಾಧಮನು ಯಾವಕಡೆಯಿಂದಲಾದರೂ ಅನ್ಯಾಯದಿಂದಲಾದರೂ ಧನವನ್ನು ಸಂಪಾದಿಸಿ ಈ ದಾಸಿಯ ಸಮಸ್ತವಾದ ಸಂಸಾರವನ್ನು ಪೋಷಿಸುವದರಲ್ಲೇ ಉದ್ಯುಕ್ತನಾಗಿದ್ದನು ; ಯಾವಕಾರಣದಿಂದ ಇವನು ಶಾಸ್ತ್ರವನ್ನತಿಕ್ರಮಿಸಿ ಸ್ವೇಚ್ಛಾಚಾರದಿಂದ ನಿಂದಿತನಾಗಿ ಅಶುಚಿಯಾಗಿ ಬಹುಕಾಲಗಳನ್ನು ಕಳೆದನೋ ಅದುಕಾರಣ ಇವನು ಸೂಕರರೂಪವಾದ ಆಯುಸ್ಸುಳ್ಳವನಾಗಿ ಮಲರೂಪವಾದ ಅನ್ನಾದಿ ಪದಾರ್ಥಗಳನ್ನು ಭಕ್ಷಿಸಿದನು ; ಯಾವಕಾರಣದಿಂದ ಯಮನ ಸನ್ನಿಧಿಯಲ್ಲಿ ಇವನು ದಂಡನೆಯಿಂದ ಪರಿಶುದ್ಧನಾಗುವನೋ ಅಂಥಾ ದಂಡಪಾಣಿಯಾದ ಯಮನ ಸನ್ನಿಧಿಯನ್ನು ಈ ಪಾಪಿಯಾದ ಅಜಾಮಿಳನನ್ನು ಹೊಂದಿಸುತ್ತೇವೆ'' ಎಂದು ನುಡಿದರು.

೨ನೇ ಅಧ್ಯಾಯ.

ವಿಷ್ಣುದೂತರು ಯಮಭಟರಿಗೆ ಹರಿನಾಮ ಪ್ರಭಾವವನ್ನು ನಿರೂಪಿಸಿ ಅಜಾಮಿಳನನ್ನು ವೈಕುಂಠವನ್ನೈದಿಸಿದ್ದು.

ಎಲೈ ಅರಸೆ, ಅನಂತರದಲ್ಲಿ ಈರೀತಿ ವಿಷ್ಣುದೂತರು ಯಮಭಟರಿಂದ ನುಡಿಯಲ್ಪಟ್ಟ ವಚನವನ್ನು ಕೇಳಿ ನೀತಿಯಲ್ಲಿ ನಿಪುಣರಾದ್ದರಿಂದ ಆಲೋಚನಗೈದು ಯಮಭಟರನ್ನು ಕುರಿತು ''ಎಲೈ ಯಮಭಟರೇ ಕೇಳಿ : ಯಾವ ಸಭೆಯಲ್ಲಿ ಪಾಪರಹಿತರಾದ್ದರಿಂದ ದಂಡನೆಗೆ ಯೋಗ್ಯರಾಗಿರುವ ಪುರುಷರು ಯಾವ ಧರ್ಮಜ್ಞರಿಂದ ವ್ಯರ್ಥವಾಗಿ ದಂಡಿಸಲ್ಪಡುತಲಿರ್ಧಾರೆಯೋ ಅಂಥಾ ಧರ್ಮಜ್ಞರ ಸಭೆಯಲ್ಲಿ ಅಧರ್ಮವು ಸಂಭವಿಸುತಲಿರ್ಧೆಯೆಂಬದು ಬಹುಕಷ್ಟವು! ಎಲೈ ಪುರುಷರೆ, ಲೋಕದಲ್ಲಿ ಸರ್ವತ್ರ ಸಮದೃಷ್ಟಿಯುಳ್ಳ ಯಾವ ಸತ್ಪುರುಷರು ಪ್ರಜೆಗಳಿಗೆ ತಂದೆಗಳಂತೆ ಪೋಷಕರೂ ಅಪರಾಧವಿದ್ದಲ್ಲಿ ಶಿಕ್ಷೆಕರೂ ಆಗುವರೋ ಅಂಥಾ ಧರ್ಮಜ್ಞರಲ್ಲಿ ಅದಂಡ್ಯ ದಂಡನರೂಪವಾದ ವೈಷಮ್ಯವು ಸಂಭವಿಸುವಂಥಾದ್ದಾದರೆ ಆಗ ಪ್ರಜೆಗಳು ಯಾವನನ್ನು ಶರಣುಹೊಂದುವರು ; ಶ್ರೇಷ್ಠನಾದ ಪುರುಷನು ಯಾವ ಯಾವ ಕರ್ಮವನ್ನಾಚರಿಸುತಲಿರ್ಧಾನೋ ಶಾಸ್ತ್ರಾರ್ಥವನ್ನರಿಯದಿರುವ ಇತರ ಪುರುಷನೂ ಕೂಡ ಆ ಕರ್ಮವನ್ನೇ ಆಚರಿಸುವನು ; ಆ ಶ್ರೇಷ್ಠನಾದ ಪುರುಷನು ಯಾವದನ್ನು ಪ್ರಮಾಣವೆಂದು ಅಂಗೀಕರಿಸುತಲಿರ್ಧಾನೋ ಅದನ್ನೇ ಲೋಕವು ಪ್ರಮಾಣವೆಂದು ಅಂಗೀಕರಿಸಿ ನಡೆಯುವದು ; ಪಶುವಿನಂತೆ ತಾನು ಧರ್ಮಾಧರ್ಮ ಸ್ವರೂಪವನ್ನರಿಯದಿರುವ ಪುರುಷನು ವಿಶ್ವಾಸದಿಂದ ಯಾವ ಪುರುಷನ ತೊಡೆಯಲ್ಲಿ ಶಿರಸ್ಸನ್ನು

ಇರಿಸಿಕೊಂಡು ಚಿಂತಾರಹಿತನಾಗಿ ನಿದ್ರೆಯಂಗೈಯುತಲಿಧಾನೋ ಆರೀತಿ ಅತ್ಯಂತವಾಗಿ ಸಮರ್ಪಿಸಲ್ಪಟ್ಟ ಶರೀರವುಳ್ಳವನಾಗಿ ಮಿತ್ರತ್ವವನ್ನು ಹೊಂದಿ ನಿದ್ರೆಗೈಯುತಲಿರುವವನಾದ್ದರಿಂದ ಪ್ರಜ್ಞಾರಹಿತನಾದ ಅಂಥಾ ಪುರುಷನಿಗೆ ಸಕಲ ಪ್ರಾಣಿಗಳಿಂದಲೂ ವಿಶ್ವಾಸಂಗೈಯಲು ಯೋಗ್ಯನಾದ ಆ ಪುರುಷನು ದಯಾಶೀಲನಾದದ್ದೇ ಉಂಟಾದರೆ ದ್ರೋಹಂಗೈಯಲು ಎಂತು ಯೋಗ್ಯನಾದಾನು ; ಈ ಅಜಾಮಿಳನು ಮೃತ್ಯುಭಯದಿಂದ ವಿವಶನಾದಾಗ್ಯೂ ಯಾವ ಕಾರಣದಿಂದ ಸಾಕ್ಷಾನ್ಮುಕ್ತಿಸಾಧನವಾದ ಶ್ರೀಹರಿ ನಾಮಸಂಕೀರ್ತನಂಗೈದನೋ ಅದುಕಾರಣ ಈ ಬ್ರಾಹ್ಮಣನು ಈ ದಾಸೀ ಗಮನಾದಿ ರೂಪವಾದ ಪಾಪಮಾತ್ರಕ್ಕೆ ಪ್ರಾಯಶ್ಚಿತ್ತವನ್ನುಗೈದವನಲ್ಲ ; ಮತ್ತೇನೆಂದರೆ : ಅನೇಕ ಕೋಟಿ ಜನ್ಮಗಳಲ್ಲಿ ಸಂಭವಿಸಿದ ಪಾಪಸಮೂಹಗಳಿಗೂ ಕೂಡ ಪ್ರಾಯಶ್ಚಿತ್ತವನ್ನು ಗೈದವನಾದರೂ ಈ ಅಜಾಮಿಳನು ಅತ್ಯಂತ ಯಾತನಾವಶದಿಂದ ಸ್ಪಷ್ಟವಲ್ಲದಿದ್ದರೂ ನಾರಾಯಣನೆಂಬ ನಾಲ್ಕು ಅಕ್ಷರಗಳನ್ನು ನುಡಿದನೆಂಬದ್ಯಾವದುಂಟೋ ಅಷ್ಟುಮಾತ್ರದಿಂದಲೇ ಈ ಪಾಪಮುಕ್ತನಾದ ದ್ವಿಜನಿಂದ ಸಕಲ ಪಾಪಗಳಿಗೂ ಪ್ರಾಯಶ್ಚಿತ್ತವು ಮಾಡಲ್ಪಟ್ಟಿತು ; ಮಹಾ ಪಾತಕಗಳಿಗೂ ಶ್ರೀಹರಿಯ ನಾಮೋಚ್ಚಾರಣವೇ ಪ್ರಾಯಶ್ಚಿತ್ತವು ; ಯಾವ ಹರಿನಾಮಸಂಕೀರ್ತನದಿಂದ ಸಾಕ್ಷಾತ್ ವಿಷ್ಣುವಿಗೆ ಈ ಪುರುಷನು ನನ್ನವನು ಇವನನ್ನು ನಾನು ಸರ್ವಪ್ರಕಾರದಿಂದಲೂ ರಕ್ಷಿಸಬೇಕೆಂಬ ಬುದ್ಧಿಯುಂಟಾಗುದೋ ಅಂಥಾ ಈ ಹರಿನಾಮ ಕೀರ್ತನವೇ ಸ್ವರ್ಣಸ್ತೇಯ ಸುರಾಪಾನ ಬ್ರಹ್ಮಹತ್ಯ ಮಿತ್ರದ್ರೋಹ ಗುರುಪತ್ನೀಗಮನಗಳನ್ನು ಮಾಡಿದ ಮಹಾಪಾತಕಿಗಳಿಗೆ ಮತ್ತು ರಾಜವಧ ಸ್ತ್ರೀವಧ ಪಿತೃವಧ ಗೋವಧೆಗಳನ್ನು ಮಾಡಿದ ಪುರುಷರಿಗೂ ಉಪಪಾತಕಗಳಿಗೂ ಸಮಸ್ತರಾದ ಪಾಪಿಗಳಿಗೂ ಕೂಡ ಮುಖ್ಯವಾದ ಪ್ರಾಯಶ್ಚಿತ್ತವೆಂದು ಸಕಲ ವೇದಪುರಾಣಗಳಲ್ಲಿಯೂ ಬಾರಿಬಾರಿಗೂ ನಿಶ್ಚಯಿಸಲ್ಪಟ್ಟಿಧೆ ; ಪಾತಕಿಯಾದ ಪುರುಷನು ಯಾವ ರೀತಿಯಿಂದ ಶ್ರೀಹರಿ ನಾಮೋಚ್ಚಾರಣೆಗಳಿಂದ ಅತ್ಯಂತವಾಗಿ ಪರಿಶುದ್ಧನಾಗುವನೋ ಆರೀತಿ ಶಾಸ್ತ್ರಜ್ಞರಿಂದ ನಿರೂಪಿಸಲ್ಪಟ್ಟ ವ್ರತ ಮೊದಲಾದ ಪ್ರಾಯಶ್ಚಿತ್ತಗಳಿಂದ ಅತ್ಯಂತವಾಗಿ ಪರಿಶುದ್ಧನಾಗುವದಿಲ್ಲ ; ಇಷ್ಟುಮಾತ್ರವೇ ಅಲ್ಲ ; ಶ್ರೀಹರಿ ನಾಮಕೀರ್ತನವು ಕೃಛ್ರಚಾಂದ್ರಾಯಣಾದಿ ಪ್ರಾಯಶ್ಚಿತ್ತಗಳಂತೆ ಪಾಪಮಾತ್ರವನ್ನು ಪರಿಹರಿಸಿ ಅಷ್ಟುಮಾತ್ರದಿಂದಲೇ ಶಕ್ತಿರಹಿತವಾದದ್ದಾಗುವದಿಲ್ಲ ; ಸಮಸ್ತಪಾತಕಗಳನ್ನು ಪರಿಹರಿಸಿ ಅನಂತರದಲ್ಲಿ ಶ್ರೀಹರಿಯ ಸದ್ಗುಣಗಳನ್ನೂ ಜ್ಞಾಪಿಸುತಲಿಧೆ! ಎಲೈ ಯಮಭಟರೇ, ಯಾವ ಪ್ರಾಯಶ್ಚಿತ್ತವು ವಿಧ್ಯುಕ್ತವಾಗಿ ಆಚರಿಸಲ್ಪಟ್ಟಾಗ್ಯೂ ಮನಸ್ಸು ಪುನಃ ಪಾಪಮಾರ್ಗದಲ್ಲಿ ಪ್ರವರ್ತಿಸುವದೋ ಆ ಪ್ರಾಯಶ್ಚಿತ್ತವು ಅತ್ಯಂತ ಚಿತ್ತಶುದ್ಧಿಕರವಲ್ಲ ; ಅದುಕಾರಣ ಪಾಪವನ್ನು ನಿಶ್ಶೇಷವಾಗಿ ಪರಿಹರಿಸಿಕೊಳ್ಳಲಿಚ್ಛೆಯುಳ್ಳ ಪುರುಷರಿಗೆ ಶ್ರೀಹರಿ ಗುಣಸಂಕೀರ್ತನವೇ ಚಿತ್ತಶುದ್ಧಿಕರವಾದ್ದರಿಂದ ಮುಖ್ಯವಾದ ಪ್ರಾಯಶ್ಚಿತ್ತವೆಂದು ತಿಳಿಯುವವರಾಗೀ ; ಯಾವ ಕಾರಣದಿಂದ ಈ ಅಜಾಮಿಳನು ಪ್ರಾಣೋತ್ಕ್ರಮಣಕಾಲದಲ್ಲಿ ಶ್ರೀಹರಿಯ ನಾಮವನ್ನು ಸಂಪೂರ್ಣವಾಗಿ ಉಚ್ಚರಿಸಿದವನಾದನೋ ಅದುಕಾರಣ ಸಮಸ್ತ ಪಾತಕಗಳಿಗೂ ಪ್ರಾಯಶ್ಚಿತ್ತವನ್ನು ಮಾಡಿದವನಾಗಿರುವ ಈ ಅಜಮಿಳನನ್ನು ಅನ್ಯಾಯಮಾರ್ಗದಿಂದ ಯಮಲೋಕವನ್ನೈದಿಸುವವರಾಗಬೇಡಿ ; ಈ ಅಜಾಮಿಳನು ಪುತ್ರನಾಮವನ್ನು ಉಚ್ಚರಿಸಿದವನಾದನೇಹೊರ್ತು ಶ್ರೀಹರಿನಾಮವನ್ನು ಉಚ್ಚರಿಸಿದವನಾಗಲಿಲ್ಲವೆಂದಲ್ಲಿ : ಶ್ರೀಹರಿಯ ನಾಮೋಚ್ಚಾರಣೆಯು ಪುತ್ರಾದಿಗಳನ್ನು ಕರೆಯಲೋಸುಗ ಸಂಕೇತಾರ್ಥವಾಗಿ ಮಾಡಲ್ಪಟ್ಟರೂ ಪರಿಹಾಸದಿಂದ ಮಾಡಲ್ಪಟ್ಟರೂ ಗಾನಸಮಯದಲ್ಲಿ ರಾಗವನ್ನು ಆಲಾಪಿಸುವದಕ್ಕೆ ಪೂರಣಾರ್ಥವಾಗಿ ಮಾಡಲ್ಪಟ್ಟರೂ ಹರಿಯಿಂದ ಏನುಆಗತಕ್ಕದ್ದೆಂದು ತಿರಸ್ಕಾರದಿಂದ ಮಾಡಲ್ಪಟ್ಟದ್ದಾದರೂ ಪುರುಷರ ಸಮಸ್ತ ಪಾಪಗಳನ್ನು ಪರಿಹರಿಸುವದೆಂದು ತಿಳಿಯುತಲಿಧಾರೆ ; ಯಾವ ಪುರುಷನು ಉನ್ನತಸ್ಥಳದಿಂದ ಬಿದ್ದವನಾಗಿಯಾದರೂ ಮಾರ್ಗಗಳಲ್ಲಿ ಪಾಷಾಣಾದಿಗಳಿಂದ ಜಾರಿಬಿದ್ದವನಾಗಿಯಾದರೂ ಮುರಿಯಲ್ಪಟ್ಟ ಹಸ್ತಪಾದಗಳುಳ್ಳವನಾಗಿಯಾದರೂ ದಂಡಾದಿಗಳಿಂದ ಬಡಿಯಲ್ಪಟ್ಟವನಾಗಿಯಾದರೂ ಸರ್ಪಾದಿಗಳಿಂದ ಕಚ್ಚಲ್ಪಟ್ಟವನಾಗಿಯಾದರೂ ಜ್ವರಾದಿಗಳಿಂದ ತಪ್ತನಾಗಿಯಾದರೂ ಅವಶದಿಂದಲಾದರೂ ಹರಿಯೆಂಬ ನಾಮವನ್ನು ಉಚ್ಚರಿಸುವನೋ ಆ ಪುರುಷನು ಯಮಯಾತನೆಗಳನ್ನು ಅನುಭವಿಸಲು ಯೋಗ್ಯನಾಗುವದಿಲ್ಲ ; ಮನ್ವಾದಿಗಳಿಂದ ಮಹಾ ಪಾಪಗಳಿಗೆ ಮಹತ್ತುಗಳಾದ ಪ್ರಾಯಶ್ಚಿತ್ತಗಳು ಸ್ವಲ್ಪ ಪಾಪಗಳಿಗೆ ಸ್ವಲ್ಪ ಪ್ರಾಯಶ್ಚಿತ್ತಗಳೂ ತಾರತಮ್ಯ

ದಿಂದ ತಿಳಿದು ನಿರೂಪಿಸಲ್ಪಟ್ಟಿಧೆ ; ಆದಕಾರಣ ಪಾಪಾನುಗುಣವಾಗಿ ಪ್ರಾಯಶ್ಚಿತ್ತವು ವಿಧಿಸಲ್ಪಡುವದೆಂಬ ವ್ಯವಸ್ಥೆಯು ಆ ಪ್ರಾಯಶ್ಚಿತ್ತ ವಿಷಯವೇ ಸರಿ ; ಹರಿನಾಮ ವಿಷಯದಲ್ಲಿ ಆ ವ್ಯವಸ್ಥೆಯಿಲ್ಲ ; ಒಂದುಬಾರಿ ಮಾಡಲ್ಪಟ್ಟ ಹರಿಸ್ಮರಣದಿಂದಲೇ ಪುರುಷನು ಸ್ವಲ್ಪಗಳಾಗಿ ಮಹತ್ತುಗಳಾಗಿರುವ ಪಾಪಗಳಿಂದ ಬಿಡಲ್ಪಡುವನೆಂಬ ಅರ್ಥವು ಸಕಲ ಸ್ಮೃತಿ ಪುರಾಣಗಳಲ್ಲಿಯೂ ಪ್ರಸಿದ್ಧವಾಗಿದೆ ; ತಪೋದಾನ ವ್ರತಾದಿರೂಪವಾದ ಪ್ರಾಯಶ್ಚಿತ್ತಗಳಿಂದ ಆ ಪಾಪಗಳು ಮಾತ್ರವೇ ನಷ್ಟಗಳಾಗುವವೇ ಹೊರತು ಅಧರ್ಮದಿಂದ ಮಲಿನವಾಗಿರುವ ಆ ಪಾಪಕರ್ತೃವಾದ ಪುರುಷನ ಹೃದಯವು ಪರಿಶುದ್ಧವಾಗಲಾರದು ; ಹರಿನಾಮ ಕೀರ್ತನಾದಿರೂಪದಿಂದಲೂ ಶ್ರೀಹರಿ ಪೂಜೆಯಿಂದಲೂ ಪಾಪ ನಿವೃತ್ತಿಯುಂಟಾಗಿ ಅನಂತರದಲ್ಲಿ ಚಿತ್ತಶುದ್ಧಿಯುಂಟಾಗುವದು ; ಒಂದುಬಾರಿ ತೋರಿಸಲ್ಪಟ್ಟ ದೀಪದಿಂದ ಎಂತು ಗಾಢಾಂಧಕಾರಗಳು ನಷ್ಟಗಳಾಗುವವೋ ಅದೇರೀತಿ ಒಂದುಬಾರಿ ಉಚ್ಚರಿಸಲ್ಪಟ್ಟ ಹರಿನಾಮದಿಂದ ಮಹಾಪಾತಕಗಳೂ ನಿಶ್ಶೇಷವಾಗಿ ಪರಿಹರಿಸಲ್ಪಡುವವು ; ದೀಪವು ನಿರಂತರವು ಇದ್ದಲ್ಲಿ ಮತ್ತೊಂದು ಅಂಧಕಾರವು ಎಂತ ಸೇರಲಾರದೋ ಅದೇರೀತಿ ಹರಿನಾಮಸ್ಮರಣಕ್ಕೆ ಆವೃತ್ತಿಯುಂಟಾದಲ್ಲಿ ಪಾಪವಾಸನೆಗಳು ಸೇರದೆ ನಷ್ಟಗಳಾಗಿ ಚಿತ್ತಶುದ್ಧಿಯುಂಟಾಗುವವೆಂದು ತಿಳಿಯುವರಾಗಿ ; ಆದರೂ ಈ ಅಜಾಮಿಳನು ತನ್ನ ಪಾಪಕ್ಕೆ ಇದು ಪ್ರಾಯಶ್ಚಿತ್ತವೆಂದು ಹರಿನಾಮವನ್ನು ಉಚ್ಚರಿಸಿದವನಾಗಲಿಲ್ಲವೆಂದಲ್ಲಿ : ಯಾವರೀತಿ ಬಾಲಕನಿಂದ ಅಗ್ನಿಯು ಅಜ್ಞಾನದಿಂದ ಇರಿಸಲ್ಪಟ್ಟರೂ ಕಾಷ್ಠಗಳನ್ನು ದಹಿಸುವದೋ ಅದೇರೀತಿ ಶ್ರೀಹರಿನಾಮವು ಅಜ್ಞಾನದಿಂದ ಉಚ್ಚರಿಸಲ್ಪಟ್ಟದ್ದಾದಾಗ್ಯೂ ಪುರುಷನ ಪಾಪವನ್ನು ದಹಿಸುವದು ; ಮಹಾತ್ಮರಿಂದ ಉಪದೇಶಂಗೈಯಲ್ಪಡದಿರುವಂಥಾದ್ದು ಶ್ರದ್ಧಾಹೀನವಾದಂಥಾದ್ದಾದರೂ ಪ್ರಾಯಶ್ಚಿತ್ತವಾಗುವದೆಂದಲ್ಲಿ : ಸಾಮರ್ಥ್ಯಯುಕ್ತವಾದ ಔಷಧವು ಮಹಾತ್ಮರ ಉಪದೇಶವಿಲ್ಲದಿದ್ದರೂ ಶ್ರದ್ಧೆಯಿಲ್ಲದಿದ್ದರೂ ಭಕ್ಷಿಸಲ್ಪಟ್ಟದ್ದಾಗಿ ಪುರುಷನಿಗೆ ಎಂತು ಆರೋಗ್ಯವನ್ನುಂಟುಮಾಡುವದೋ ಅದೇರೀತಿ ಮಂತ್ರಸ್ವರೂಪವಾದ ಹರಿನಾಮಸಂಕೀರ್ತನವು ಉಪದೇಶ ಶ್ರದ್ಧೆಗಳಿಲ್ಲದಿದ್ದರೂ ತನ್ನ ಶಕ್ತಿಯಿಂದ ಮುಕ್ತಿಯನ್ನುಂಟುಮಾಡುವದಾದಕಾರಣ ವಸ್ತುವಿನ ಶಕ್ತಿಯು ಶ್ರದ್ಧಾದಿಗಳನ್ನಪೇಕ್ಷಿಸುವದಿಲ್ಲವೆಂದು ತಿಳಿಯಿರಿ ! ಎಲೈ ಯಮಭಟರೇ ಕೇಳಿ : ನಮ್ಮಿಂದ ನಿರೂಪಿಸಲ್ಪಟ್ಟ ಈ ಧರ್ಮದಲ್ಲಿ ನಿಮಗೆ ಸಂಶಯವಿದ್ದರೆ ನಿಮಗೆ ಅಧಿಪತಿಯಾದ ಯಮನನ್ನು ಕೇಳಿ ; ಸರ್ವಜ್ಞನಾದ ಆ ಯಮನು ಉತ್ಕೃಷ್ಟವಾದ ಧರ್ಮರಹಸ್ಯವನ್ನು ತಿಳಿಯುತಲಿಧಾನೆ " ಎಂದು ಆ ವಿಷ್ಣುದೂತರು ಭಗವತ್ಪ್ರಿಯವಾದ ಧರ್ಮವನ್ನು ಅತ್ಯಂತ ನಿಷ್ಠೆಯಿಂದ ಆ ಯಮಭಟರನ್ನು ಕುರಿತು ನಿರೂಪಿಸಿ ಆ ಅಜಾಮಿಳನನ್ನು ಯಮಪಾಶಬಂಧದಿಂದ ಬಿಡಿಸಿ ಮೃತ್ಯುಬಾಧೆಯನ್ನು ಪರಿಹರಿಸಿದರು ! ಎಲೈ ಅರಸೆ, ಆಗ ಯಮಭಟರು ಈರೀತಿ ವಿಷ್ಣುದೂತರಿಂದ ತಿರಸ್ಕರಿಸಲ್ಪಟ್ಟವರಾಗಿ ಯಮನ ಸಮೀಪವನ್ನೈದಿ ನಡದ ವೃತ್ತಾಂತವನ್ನು ಯಮನಿಗೆ ವಿಜ್ಞಾಪನಂಗೈದರು ; ಅನಂತರದಲ್ಲಿ ಯಮಪಾಶದಿಂದ ಮುಕ್ತನಾದ ಆ ಬ್ರಾಹ್ಮಣನು ಭಯರಹಿತನಾಗಿ ತನ್ನ ಸ್ವಭಾವವನ್ನೈದಿ ಆ ದಿವ್ಯಪುರುಷರದರ್ಶನದಿಂದ ಉತ್ಸವವುಳ್ಳವನಾಗಿ ಆ ವಿಷ್ಣುದೂತರನ್ನೇ ಶಿರಸ್ಸಿನಿಂದ ನಮಸ್ಕರಿಸಿದನು ; ಆ ವಿಷ್ಣುದೂತರು ತಮ್ಮನ್ನು ಕುರಿತು ಒಂದು ವಿಜ್ಞಾಪನಂಗೈಯಲಿಚ್ಛೈಸುತಲಿರುವ ಅಜಾಮಿಳನ ತಾತ್ಪರ್ಯವನ್ನು ತಿಳಿದು ಶೀಘ್ರದಿಂದ ಅವನು ನೋಡುತಲಿರುವಾಗಲೇ ಅಂತರ್ಧಾನವನ್ನೈದಿದರು ; ಅಜಾಮಿಳನು ಈರೀತಿಯಿಂದ ಯಮಭಟರ ದೆಸೆಯಿಂದ ವೇದತ್ರಯಪ್ರತಿಪಾದ್ಯವಾದ ತ್ರಿಗುಣಾತ್ಮಕವಾದ ಧರ್ಮಸ್ವರೂಪವನ್ನು ವಿಷ್ಣುದೂತರ ದೆಸೆಯಿಂದಲೂ ಸಾಕ್ಷಾದ್ಭಗವಂತನಿಂದಲೂ ನಿರೂಪಿಸಲ್ಪಟ್ಟ ಪರಿಶುದ್ಧವಾದ ನಿರ್ಗುಣಸ್ವರೂಪವಾದ ಧರ್ಮವನ್ನು ಶ್ರವಣಂಗೈದವನಾಗಿ ಆ ಮಹಾತ್ಮ್ಯಶ್ರವಣದಿಂದ ಭಗವಂತನಲ್ಲಿ ಶೀಘ್ರದಿಂದ ಭಕ್ತಿಯುಳ್ಳವನಾಗಿ ತನ್ನ ಪಾಪವನ್ನು ಸ್ಮರಿಸುತಲಿರುವ ಆ ದ್ವಿಜನಿಗೆ ಅಧಿಕವಾದ ಪಶ್ಚಾತ್ತಾಪವು ಹುಟ್ಟಿತು ; ಯಾವ ನನ್ನಿಂದ ಶೂದ್ರಸ್ತ್ರೀಗೆ ಪುತ್ರಪ್ರಾಯನಾಗೋಣದರಿಂದ ಬ್ರಾಹ್ಮಣತ್ವವು ನಾಶಂಗೈಯಲ್ಪಟ್ಟಿತೋ ಅಂಥಾ ಜಿತೇಂದ್ರಿಯನಲ್ಲದಿರುವ ನನಗೆ ಮಹತ್ತಾದ ಕಷ್ಟವು ಪ್ರಾಪ್ತವಾಯಿತು ; ಯಾವ ನಾನು ಬಾಲಕಳಾದ ಸತ್ಕುಲಪ್ರಸೂತಳಾದ ಪತ್ನಿಯನ್ನು ಬಿಟ್ಟು ಸುರಾಪಾನಂಗೈಯುತ ವ್ಯಭಿಚಾರಿಣಿಯಾದ ನೀಚಸ್ತ್ರೀಯನ್ನು ವರಿಸಿದವನಾದೆನೋ ಅಂಥಾ ಪಾಪಕರ್ತೃವಾಗಿ ವಂಶಕ್ಕೆ ಕಳಂಕರೂಪನಾಗಿ ಸತ್ಪುರುಷರ ಸಮೂಹದಿಂದ ನಿಂದಿಸಲು ಯೋಗ್ಯನಾಗಿರುವ ನನ್ನನ್ನು ಸುಡಬೇಕು ;

ಮತ್ತು ವೃದ್ಧರಾಗಿ ಅನಾಥರಾಗಿ ಮತ್ತೊಬ್ಬ ಪುತ್ರಾದಿಗಳಿಲ್ಲದವರಾಗಿ ಅತ್ಯಂತ ತಪ್ತರಾಗಿರುವ ನನ್ನ ತಾಯಿ ತಂದೆಗಳು ಕೃತಜ್ಞನಲ್ಲದಿರುವ ನನ್ನಿಂದ ನೀಚಬುದ್ಧಿಯಿಂದ ಕಟಕಟಾ ತ್ಯಾಗಂಗೈಯಲ್ಪಟ್ಟರು ; ಅದುಕಾರಣ ಧರ್ಮವಿಮುಖರಾದ ಕಾಮುಕರು ಯಾವ ನರಕದಲ್ಲಿ ಬಿದ್ದು ಯಾತನೆಗಳನ್ನನುಭವಿಸುತಲಿಧಾರೋ ಅಂಥಾ ಅತಿ ಭಯಂಕರವಾದ ನರಕದಲ್ಲಿ ನಿಶ್ಚಯವಾಗಿ ನಾನು ಬೀಳುತ್ತೇನೆಂದು ಮನಸ್ಸಿನಲ್ಲಿ ಈರೀತಿ ಯೋಚಿಸಿ ಇದುಯೇನು ಸ್ವಪ್ನವೋ ಅಲ್ಲದೆ ಜಾಗ್ರದವಸ್ಥೆಯಲ್ಲೇ ಈ ಆಶ್ಚರ್ಯವನ್ನು ಕಂಡವನಾದೆನೋ ಪಾಶಧಾರಿಗಳಾದ ಯಾವ ಯಮದೂತರು ನನ್ನನ್ನು ಸೆಳದರೋ ಆಗ ಸೆಳದ ಯಮಭಟರು ಈಗ ಎಲ್ಲಿಹೋದರು ; ಪಾಶಗಳಿಂದ ಕಟ್ಟಿ ಯಮಭಟರಿಂದ ನರಕವನ್ನೈದಿಸಲ್ಪಡುತಲಿರುವ ನನ್ನನ್ನು ಯಾವ ದಿವ್ಯಪುರುಷರು ಬಿಡಿಸಿದರೋ ಆ ಮನೋಹರವಾದ ರೂಪವುಳ್ಳ ನಾಲ್ವರಾದ ಆ ಸಿದ್ಧಪುರುಷರು ಈಗ ಎಲ್ಲಿಹೋದರೋ ತಿಳಿಯಲಿಲ್ಲ ; ಯಾವತೆರದಲ್ಲೂ ನಾನು ಈ ಜನ್ಮದಲ್ಲಿ ಪಾಪಿಯೇಸರಿ ; ಆದಾಗ್ಯೂ ಅಂಥಾ ನನ್ನಮನಸ್ಸು ಯಾವ ದೇವತಾ ಶ್ರೇಷ್ಠರ ದರ್ಶನದಿಂದ ಪರಿಶುದ್ಧವಾಯಿತೋ ಅಂಥಾ ದೇವೋತ್ತಮರ ದರ್ಶನಕ್ಕೋಸ್ಕರ ಪೂರ್ವಜನ್ಮದಲ್ಲಿ ನನ್ನಿಂದ ಒಂದು ಮಹತ್ತಾದ ಪುಣ್ಯವು ಮಾಡಲ್ಪಟ್ಟದ್ದೀತು ; ಅಂಥಾ ಪೂರ್ವಪುಣ್ಯವಿಲ್ಲದಿದ್ದರೆ ಪ್ರಾಣಗಳನ್ನು ಬಿಡುವವನಾಗಿ ಅಶುಚಿಯಾಗಿ ಶೂದ್ರಸ್ತ್ರೀಗೆ ಪತಿಯಾಗಿರುವ ನನ್ನ ಜಿಹ್ವೆಯು ಸ್ಮರಿಸುವವರ ಚಿತ್ತವನ್ನು ಸ್ವಾಧೀನವನ್ನುಮಾಡುವ ಶ್ರೀಹರಿಯ ನಾಮವನ್ನು ಎಂತು ಉಚ್ಚರಿಸಲು ಯೋಗ್ಯವಾಗುವದು ; ವಂಚಕನಾಗಿ ಪಾಪಿಯಾಗಿ ಜಾತಿಭ್ರಷ್ಟನಾಗಿರುವ ನಾನೆಲ್ಲಿ ? ಮಂಗಳಕರವಾದ ಪಾವನವಾದ ನಾರಾಯಣನೆಂಬ ಹರಿನಾಮವೆಲ್ಲಿ ? ಅದುಕಾರಣ ಇತಃಪರದಲ್ಲಿ ನಾನು ಯಾವರೀತಿಯಿಂದ ನನ್ನನ್ನು ಪುನಹಾ ನರಕದಲ್ಲಿ ಕೆಡಹುವನಾಗದಿರುವೆನೋ ಆರೀತಿಯಿಂದ ಇಂದ್ರಿಯ ಮನಃಪ್ರಾಣಗಳನ್ನು ನಿಗ್ರಹಿಸಿ ಮುಕ್ತಿಗೋಸ್ಕರ ಪ್ರಯತ್ನಂಗೈಯುವನಾಗುತ್ತೇನೆ ; ಅವಿದ್ಯಾಕಾಮಕರ್ಮಗಳಿಂದ ನಿರ್ಮಿತವಾದ ಈ ಸಂಸಾರಬಂಧವನ್ನು ಬಿಟ್ಟು ಸರ್ವಭೂತಮಿತ್ರನಾಗಿ ಉಪಶಾಂತನಾಗಿ ದಯಾಶೀಲನಾಗಿ ಆತ್ಮಜ್ಞನಾಗಿ ಯಾವ ಸ್ತ್ರೀರೂಪವಾದ ಮಾಯೆಯಿಂದ ಅಧಮನಾದ ನಾನು ವಿಲಾಸಾರ್ಥವಾದ ಮೃಗದಂತೆ ಸ್ವಾಧೀನಂಗೈಯಲ್ಪಟ್ಟೆನೋ ಅಂಥಾ ಸ್ತ್ರೀರೂಪವಾದ ಮಾಯೆಯಿಂದ ಆಕ್ರಮಿಸಲ್ಪಟ್ಟ ನನ್ನನ್ನು ಆ ಮಾಯಾಬಂಧದಿಂದ ಬಿಡಿಸುವನಾಗುತ್ತೇನೆ ; ನಾನು ಸತ್ಯರೂಪವಾದ ಆತ್ಮವಸ್ತುವಿನಲ್ಲಿ ಬುದ್ಧಿಯುಳ್ಳವನಾಗಿ ದೇಹಾದಿಗಳಲ್ಲಿ ಇದೇ ನಾನು—ಇದೇ ನನ್ನದೆಂಬ ಬುದ್ಧಿಯನ್ನು ಬಿಟ್ಟು ಹರಿನಾಮಕೀರ್ತನಾದಿಗಳಿಂದ ಪರಿಶುದ್ಧವಾದ ನನ್ನ ಚಿತ್ತವನ್ನು ಭಗವಂತನಲ್ಲಿ ಸಮರ್ಪಿಸುತ್ತೇನೆ' ಎಂದು ಅಜಾಮಿಳನು ಈರೀತಿಯಲ್ಲಿ ಸತ್ಪುರುಷರಲ್ಲಿ ಕ್ಷಣಮಾತ್ರವುಂಟಾದ ಸಂಗದಿಂದ ಪಶ್ಚಾತ್ತಾಪಯುಕ್ತನಾಗಿ ವಿರಕ್ತಿಯಿಂದ ಸಮಸ್ತವಾದ ಪುತ್ರಾದಿ ಸ್ನೇಹವನ್ನು ಬಿಟ್ಟು ಗಂಗಾದ್ವಾರವೆಂಬ ಮಹಾಕ್ಷೇತ್ರವನ್ನೈದಿ ಒಂದು ದೇವಾಲಯದಲ್ಲಿ ಕುಳಿತು ಯೋಗಶಕ್ತಿಯಿಂದ ಇಂದ್ರಿಯಸಮೂಹವನ್ನು ಜಯಿಸಿ ಪರಮಾತ್ಮನಾದ ಶ್ರೀವಾಸುದೇವನಲ್ಲಿ ಸಮಾಧಿಯಿಂದ ಚಿತ್ತವನ್ನು ನಿಲ್ಲಿಸಿ ದೇಹೇಂದ್ರಿಯಾದಿಗಳಲ್ಲಿ ಆಸಕ್ತವಾಗದಂತೆ ಮನಸ್ಸನ್ನು ಪರಿಶುದ್ಧಂಗೈದು ಏಕಾಗ್ರಚಿತ್ತತೆಯಿಂದ ಭಗವಂತನಿಗೆ ಸ್ವರೂಪಭೂತನಾದ ಕೇವಲ ಅನುಭವರೂಪನಾದ ಬ್ರಹ್ಮನಲ್ಲಿ ಮನಸ್ಸನ್ನು ನಿಲ್ಲಿಸಿದಂಥಾವನಾದನು ; ಆ ದ್ವಿಜನು ಯಾವಸಮಯದಲ್ಲಿ ನಿಶ್ಚಲವಾದ ಬುದ್ಧಿಯುಳ್ಳವನಾಗಿ ಸಮಾಧಿಯಲ್ಲಿದ್ದನೊ ಆ ಕಾಲದಲ್ಲಿ ತನ್ನ ಮುಂದುಗಡೆಯಲ್ಲಿ ವಿಷ್ಣುದೂತರನ್ನು ಕಂಡನು ; ಪೂರ್ವದಲ್ಲಿ ಕಾಣಲ್ಪಟ್ಟ ಆ ವಿಷ್ಣುದೂತರನ್ನೇ ಜ್ಞಾಪಿಸಿಕೊಂಡು ಸಾಷ್ಟಾಂಗ ನಮಸ್ಕಾರವನ್ನುಮಾಡಿ ಆ ವಿಷ್ಣುದೂತರ ದರ್ಶನವಾದ ನಂತರದಲ್ಲಿ ಆ ಗಂಗಾತೀರದಲ್ಲಿ ತನ್ನ ಕಳೇಬರವನ್ನು ಬಿಟ್ಟು ಭಗವಂತನ ಪಾರ್ಶ್ವದಲ್ಲಿರುವ ಮಹಾಪುರುಷರಿಗೆ ಸಮಾನವಾದ ರೂಪವನ್ನು ಆ ಕ್ಷಣದಲ್ಲೇ ಪಡದವನಾಗಿ ಆ ದ್ವಿಜನು ವಿಷ್ಣುದೂತರೊಡನೆ ಆಕಾಶಮಾರ್ಗದಿಂದ ಸುವರ್ಣಮಯವಾದ ವಿಮಾನವನ್ನೇರಿ ವೈಕುಂಠಲೋಕವನ್ನೈದಿದನು !

''ಎಲೈ ಪರೀಕ್ಷಿದ್ರಾಯನೇ ಕೇಳು ; ಈರೀತಿ ಸರ್ವಧರ್ಮದಿಂದಲೂ ಭ್ರಷ್ಟನಾಗಿ ಶೂದ್ರಸ್ತ್ರೀವಲ್ಲಭನಾಗಿ ನಿಂದಿತನಾದ ವ್ಯಾಪಾರವುಳ್ಳವನಾಗಿ ನಷ್ಟಗಳಾದ ಏಕಪತ್ನೀವ್ರತಾದಿಗಳುಳ್ಳವನಾಗಿ ಯಮದೂತರಿಂದ ನರಕದಲ್ಲಿ

ಕೆಡಹಲ್ಪಟ್ಟವನಾಗಿರುವ ಅಜಾಮಿಳನು ಕೂಡ ಶ್ರೀಹರಿನಾಮೋಚ್ಚಾರಣ ಪ್ರಭಾವದಿಂದ ಮುಕ್ತಿಯನ್ನು ಪಡೆವನು ; ಅದುಕಾರಣ ಮುಕ್ತಿಯನ್ನು ಪಡೆಯಲಿಚ್ಛೆಯುಳ್ಳ ಪುರುಷರಿಗೆ ಹರಿನಾಮಕೀರ್ತನಕ್ಕಿಂತಲೂ ಪಾಪವನ್ನು ಛೇದಿಸುವದು ಮತ್ತೊಂದಿಲ್ಲ ; ಯಾವ ಹರಿನಾಮಕೀರ್ತನದಿಂದ ಮನಸ್ಸು ಕರ್ಮಗಳಲ್ಲಿ ಆಸಕ್ತವಾಗುವದಿಲ್ಲವೋ ಆ ಹರಿನಾಮಕೀರ್ತನಕ್ಕಿಂತಲೂ ಅನ್ಯಗಳಾದ ಪ್ರಾಯಶ್ಚಿತ್ತಗಳಿಂದ ಆ ಮನಸ್ಸು ರಜಸ್ತಮೋಗುಣಗಳಿಂದ ಮಲಿನವಾಗದಿರುವದು ; ಆದ್ದರಿಂದ ಪುರುಷರಿಗೆ ಹರಿನಾಮಕ್ಕಿಂತಲೂ ಮುಕ್ತಿಸಾಧನವಾದದ್ದು ಒಂದೂ ಇಲ್ಲ ; ಯಾವ ಪುರುಷನು ಶ್ರದ್ಧಾಯುಕ್ತನಾಗಿ ಪರಮರಹಸ್ಯವಾದ ಪಾಪಹರವಾದ ಈ ಇತಿಹಾಸವನ್ನು ಶ್ರವಣಂಗೈಯುವನೋ ಯಾವವನು ಭಕ್ತಿಯಿಂದ ಪಠಣಂಗೈಯುವನೋ ಆ ಪುರುಷನು ನರಕವನ್ನು ಹೊಂದುವದಿಲ್ಲ ; ಯಮಭಟರ ದೃಷ್ಟಿಗೂ ಗೋಚರನಾಗುವದಿಲ್ಲ ; ಪುರುಷನು ಆಚಾರಭ್ರಷ್ಟನಾದಾಗ್ಯೂ ಈ ಇತಿಹಾಸ ಪಠನ ಶ್ರವಣಗಳಿಂದ ವಿಷ್ಣುಲೋಕವನ್ನೈದಿ ಜಗತ್ಪೂಜ್ಯನಾಗುವನು ; ದೇಹವನ್ನು ಬಿಡುತಲಿರುವ ಶ್ರದ್ಧಾರಹಿತನಾದ ಅಜಾಮಿಳನು ಕೂಡ ಪುತ್ರನನ್ನು ಕರೆಯಲೋಸುಗ ಹರಿನಾಮವನ್ನುಚ್ಚರಿಸಿ ವೈಕುಂಠವನ್ನೈದಿದನು ; ಹಾಗಿರುವಲ್ಲಿ ಶ್ರದ್ಧಾಪೂರ್ವಕವಾಗಿ ಹರಿನಾಮಸ್ಮರಣಂಗೈವ ಪುರುಷನು ವೈಕುಂಠವನ್ನೈದುವನೆಂದು ಹೇಳತಕ್ಕದ್ದೇನು '' ಎಂದು ನುಡಿದನು.

೩ನೇ ಅಧ್ಯಾಯ.

ಯಮನು ವಿಷ್ಣುನಾಮ ಪ್ರಭಾವವನ್ನು ವರ್ಣಿಸಿ ತನ್ನ ಭಟರನ್ನು ಸಮಾಧಾನಂಗೈದದ್ದು.

ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ಈ ಸಮಸ್ತಜನರು ಯಾವವನ ವಶದಲ್ಲಿರುವರೆಯೊ ಅಂಥಾ ಯಮದೇವನು ತನ್ನ ಭಟರಿಂದ ವಿಜ್ಞಾಪನಂಗೈಯಲ್ಪಟ್ಟ ವೃತ್ತಾಂತವನ್ನು ಕೇಳಿ ತಿರಸ್ಕರಿಸಲ್ಪಟ್ಟ ಆಜ್ಞೆಯುಳ್ಳವನಾಗಿ ವಿಷ್ಣುದೂತರಿಂದ ತಿರಸ್ಕರಿಸಲ್ಪಟ್ಟ ತನ್ನ ದೂತರನ್ನು ಕುರಿತು ಯಾವ ಅರ್ಥವನ್ನು ನಿರೂಪಿಸಿದನು ? ಯಮದೇವನ ಆಜ್ಞಾಭಂಗವು ಒಬ್ಬನಿಂದಲೂ ಪೂರ್ವದಲ್ಲಿ ಕೃತವಾಗಲಿಲ್ಲವಲ್ಲ ? ಈರೀತಿ ಯಮಭಟರಿಗೆ ತಿರಸ್ಕಾರವೂ ಪೂರ್ವದಲ್ಲಿ ಕೇಳಲ್ಪಡಲಿಲ್ಲವಾದಕಾರಣ ಈ ಅರ್ಥದಲ್ಲಿ ಲೋಕಕ್ಕೆ ಇರುವ ಸಂಶಯವನ್ನು ನಿನಗಿಂತಲೂ ಅನ್ಯನಾದ ಪುರುಷನು ಪರಿಹರಿಸಲಾರನೆಂದು ನಿನಗೆ ನಿಶ್ಚಯವಾಗಿ ತೋರುತಲಿದೆ '' ಎಂದು ವಿಜ್ಞಾಪಿಸಿದನು.

ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು "ಎಲೈ ಪರೀಕ್ಷಿದ್ರಾಯನೇ, ಅನಂತರದಲ್ಲಿ ಆ ಯಮಭಟರು ಈರೀತಿ ವಿಷ್ಣುದೂತರಿಂದ ಭಗ್ನವಾದ ಪ್ರಯತ್ನವುಳ್ಳವರಾಗಿ ಸಂಯಮನೀಪುರಾಧಿಪತಿಯಾದ ಯಮನನ್ನು ಕುರಿತು 'ಎಲೈ ಪ್ರಭುವಾದ ಯಮನೇ, ಈ ಪ್ರಪಂಚದಲ್ಲಿ ತ್ರಿವಿಧಗಳಾದ ಕರ್ಮಗಳನ್ನು ಮಾಡುತಲಿರುವ ಪ್ರಾಣಿಗಳಿಗೆ ಕರ್ಮಫಲಪ್ರಕಾರಕ್ಕೆ ಕಾರಣಭೂತರಾದ ಶಿಕ್ಷಕರು ಎಷ್ಟುಮಂದಿ ಇರುವರೆ ? ಈ ಲೋಕದಲ್ಲಿ ಶಿಕ್ಷಕರು ಬಹುಮಂದಿ ಇದ್ದರೆ ಯಾವವನಿಗೂ ಸುಖದುಃಖಗಳುಂಟಾಗಲಾರವು ? ಬಹುಮಂದಿ ಶಿಕ್ಷಕರಿದ್ದಲ್ಲಿ ಈ ಪ್ರಾಣಿಗೆ ಸುಖವುಂಟಾಗಲೆಂದು ಕೆಲವರೂ ಇವನಿಗೆ ದುಃಖವುಂಟಾಗಲೆಂದು ಕೆಲವರೂ ಈರೀತಿ ಅನ್ಯೋನ್ಯ ವಿರೋಧವುಂಟಾದಲ್ಲಿ ಯಾರಿಗೆ ಸುಖ ದುಃಖಗಳುಂಟಾಗುವವು ; ಬಹುಮಂದಿ ಶಿಕ್ಷಕರಿಗೂ ವಿರೋಧವಿಲ್ಲದೆ ಏಕವಾಕ್ಯತೆ ಇದ್ದಲ್ಲಿ ಅವರೊಳಗೆ ಒಬ್ಬ ಶಿಕ್ಷಕನು ಒಬ್ಬನಿಗೆ ಸುಖವನ್ನುಂಟುಮಾಡಲಿಚ್ಛೈಸುವನು ; ಮತ್ತೊಬ್ಬ ಶಿಕ್ಷಕನು ಅವನಿಗೆ ದುಃಖವನ್ನುಂಟುಮಾಡಲಿಚ್ಛೈಸುವನು ; ಆ ಶಿಕ್ಷಕರಿಗಿಬ್ಬರಿಗೂ ಏಕವಾಕ್ಯತೆ ಇದ್ದಲ್ಲಿ ಅವರ ಅನ್ಯೋನ್ಯ ಸಮ್ಮತಿಯಿಂದ ಪ್ರಾಣಿಗಳಿಗೆ ಸುಖದುಃಖಗಳೆರಡೂ ಉಂಟಾಗದೇ ಹೋಗುವವು ; ಲೋಕದಲ್ಲಿ ಯಾವ ಪ್ರಾಣಿಗಾದರೂ ಸುಖದುಃಖಗಳು ಒಂದೇ ಸಮಯದಲ್ಲಿ ಸಮವಾಗಿ ಅನುಭವ ವಿಷಯಗಳಾಗುವದಿಲ್ಲ ; ಲೋಕದಲ್ಲಿ ಕರ್ಮಗಳು ನಾನಾಪ್ರಕಾರಗಳಾಗಿ ನಾನಾವಿಧವಾಗಿರುವದೆಂಬ ಮರ್ಯಾದೆಯಿಂದ ಬಹುಮಂದಿಗೆ ಶಿಕ್ಷಕತ್ವವು ಘಟಿಸಬಹುದೆಂದರೆ ಅವರಲ್ಲಿ ಯಾವರೀತಿಯಿಂದ ಸಕಲ ಭೂಮಂಡಲಾಧಿಪತಿಯಾದ್ದರಿಂದ ಮೂಲಪ್ರ

ಭುವಾದ ಚಕ್ರವರ್ತಿಗೆ ಮುಖ್ಯವಾದ ಶಿಕ್ಷಕತ್ವವು ಸ್ವಲ್ಪ ಭೂಮಿಗೆ ಅಧಿಪತಿಗಳಾದ್ದರಿಂದ ಅಸ್ವತಂತ್ರರಾದ ಮಂಡ ಲಾಧಿಪತಿಗಳಲ್ಲಿ ಉಪಚಾರಮಾತ್ರದಿಂದ ಆರೋಪಿಸಲ್ಪಡುವದೋ ಅದೇರೀತಿ ಸರ್ವ ಪ್ರಾಣಿಗಳಿಗೂ ಸುಖ ದುಃಖ ನಿಯಾಮಕನಾದ ಒಬ್ಬನಲ್ಲಿರುವ ಮುಖ್ಯ ಶಿಕ್ಷಕತ್ವವು ಬಹುಮಂದಿಯಲ್ಲಿ ಉಪಚಾರಮಾತ್ರದಿಂದ ಆರೋಪಿಸಲ್ಪಡು ವದೇಹೊರ್ತು ಮುಖ್ಯವಲ್ಲ; ಅದುಕಾರಣ ಈಶ್ವರನೊಡನೆ ಕೂಡಿರುವ ಸಕಲ ಪ್ರಾಣಿಗಳಿಗೂ ಪ್ರಭುವಾದ ದಂ ಡಧರನಾದ ನೀನೊಬ್ಬನೇ ಮುಖ್ಯ ಶಿಕ್ಷಕನು ; ನೀನೇ ಅವರ ಪಾಪ ಪುಣ್ಯಗಳನ್ನು ವಿಭಾಗಂಗೈದು ಸುಖ ದುಃಖ ಗಳನ್ನು ಕಲ್ಪಿಸುವವನಾದ್ದರಿಂದ ಸರ್ವ ನಿಯಾಮಕನಾದ ಅಂಥಾ ನಿನ್ನ ದಂಡನೆಯು ಭಗ್ನವಾಗಿ ಈ ಲೋಕದಲ್ಲಿ ನಡೆಯುವದಿಲ್ಲ; ದಿವ್ಯ ದೇಹಗಳುಳ್ಳ ಆಶ್ಚರ್ಯಕರರಾದ ನಾಲ್ಕುಮಂದಿ ಸಿದ್ಧಪುರುಷರಿಂದ ನಿನ್ನ ಆಜ್ಞೆಯು ಅತಿ ಕ್ರಮಿಸಲ್ಪಟ್ಟಿತು ; ನಿನ್ನ ಆಜ್ಞೆಯಿಂದ ನಮ್ಮಿಂದ ನರಕವನ್ನೈದಿಸಲ್ಪಡುತಲಿರುವ ಪಾತಕಿಯಾದ ಒಬ್ಬ ಪುರುಷ ನನ್ನು ಆ ಸಿದ್ಧಪುರುಷರು ಬಲಾತ್ಕಾರದಿಂದ ಆ ಪಾಶಗಳನ್ನು ಛೇದಿಸಿ ನಿನ್ನದೆಶೆಯಿಂದ ಬಿಡಿಸಿದರು ; ಈಗ ನಮಿ ಗೂ ನಮ್ಮ ಸ್ವಾಮಿಯಾದ ನಿನಗೂ ನೀನು ಹಿತವನ್ನಪೇಕ್ಷಿಸುವನಾದರೆ ನಾವು ಅವರನ್ನು ತಿಳಿಯಲಿಚ್ಛೈಸುತಲಿ ಧೇವೆ ; ಅದ್ದರಿಂದ ಅವರ ವೃತ್ತಾಂತವನ್ನು ನಮಿಗೆ ನಿರೂಪಿಸು ; ಆ ಪಾತಕಿಯಿಂದ ಒಂದುಬಾರಿ ನಾರಾಯಣನೆಂದು ಉಚ್ಚರಿಸಲ್ಪಟ್ಟಮಾತ್ರಕ್ಕೆ ಆ ಸಿದ್ಧರು ಆ ಪಾಪಿಯನ್ನು ಕುರಿತು ಭಯಪಡಬೇಡವೆಂದು ಆ ಕ್ಷಣದಲ್ಲೇ ಅಲ್ಲಿಗೆ ಬಂ ದಕಾರಣ ಅಮಿತಪ್ರಭಾವವುಳ್ಳ ಅವರ ಸಾಮರ್ಥ್ಯವನ್ನು ನಮಿಗೆ ನಿರೂಪಿಸು' ಎಂದು ಸಕಲ ಪ್ರಜಾಶಿಕ್ಷಕನಾದ ಯಮದೇವನು ತನ್ನ ಭಟರಿಂದ ಚನ್ನಾಗಿ ಪ್ರಶ್ನೆಗೈಯಲ್ಪಟ್ಟವನಾಗಿ ಶ್ರೀಹರಿ ಪಾದಾರವಿಂದಗಳನ್ನು ಸ್ಮರಿಸುತ ಆ ದೂತರನ್ನು ಕುರಿತು 'ಎಲೈ ದೂತರೇ ಕೇಳಿ : ಯಾವ ಸರ್ವೇಶ್ವರನಲ್ಲಿ ಈ ಸಮಸ್ತ ಪ್ರಪಂಚವೂ ಉದ್ದವಾಗಿ ಯೂ ಅಡ್ಡವಾಗಿಯೂ ಇರುವ ತಂತುಗಳಲ್ಲಿ ವಸ್ತ್ರದಂತೆ ಪೋಣಿಸಲ್ಪಟ್ಟಿಧೆಯೋ ಯಾವವನ ಅಂಶಭೂತರಾದ ಬ್ರಹ್ಮ ರುದ್ರಾದಿಗಳಿಂದ ಈ ಪ್ರಪಂಚಕ್ಕೆ ಉತ್ಪತ್ತಿ ಸ್ಥಿತಿ ಲಯಗಳುಂಟಾಗುವವೋ ಯಾವನ ವಶದಲ್ಲಿ ಈ ಲೋಕದಲ್ಲಿ ನಾಸಿಕದಲ್ಲಿ ಪೋಣಿಸಲ್ಪಟ್ಟ ಹಗ್ಗದಿಂದ ಎತ್ತಿನಂತೆ ಸ್ವಾಧೀನವಾಗಿರುವದೋ ಅಂಥಾ ಒಬ್ಬ ಮಹಾಪು ರುಷನು ಈ ಜಂಗಮಾಜಂಗಮಾತ್ಮಕವಾದ ಪ್ರಪಂಚಕ್ಕೆ ನನಿಗಿಂತಲೂ ನಿಯಾಮಕನಾಗಿರುವನು ; ನಾನಾದರೋ ಈ ಜಂಗಮಾಜಂಗಮಾತ್ಮಕವಾದ ಪ್ರಪಂಚದಲ್ಲಿ ಜಂಗಮಾತ್ಮಕವಾದ ಪ್ರಾಣಿಗಳಿಗೆ ಮಾತ್ರವೇ ನಿಯಾಮಕನು ; ಆ ಪ್ರಾಣಿಗಳಲ್ಲಿಯೂ ಮನುಷ್ಯರಿಗೆ ಮಾತ್ರವೇ ಅವರಲ್ಲಿಯೂ ಪಾಪಿಗಳಿಗೆ ಮಾತ್ರವೇ ಆ ಈಶ್ವರನ ಆಜ್ಞೆಯಿಂದ ನಿಯಾಮಕನಾಗಿಧೇನೆ ; ಅವನು ಸರ್ವೇಶ್ವರನು ; ನಾನು ಅವನ ಕಿಂಕರನು ; ಯಾವ ಹರಿಯು ಬ್ರಾಹ್ಮಣಾದಿ ನಾ ಮಗಳಿಂದ ತನ್ನ ವಾಗ್ರೂಪವಾದ ವೇದವೆಂಬ ಬಳೆಯಲ್ಲಿ ಹಗ್ಗದಿಂದ ಕಟ್ಟಲ್ಪಟ್ಟ ಎತ್ತುಗಳಂತೆ ಈ ಸಮಸ್ತ ಜನರ ನ್ನು ಬಂಧಿಸುತಲಿಧಾನೋ ಬ್ರಾಹ್ಮಣಾದಿ ನಾಮಗಳು ಅವರವರಿಗೆ ಉಚಿತಗಳಾದ ಕರ್ಮಗಳು ಇವೇ ಮೊದಲಾದ ದೃಢ ಬಂಧನ ಸಾಧನಗಳಿಂದ ಕಟ್ಟಲ್ಪಟ್ಟ ಭಯದೊಡನೆ ಕೂಡಿದವರಾಗಿರುವ ಈ ಸಮಸ್ತಜನರೂ ಯಾವವನ ಅಧೀನರಾ ಗಿ ಕರ್ಮಗಳನ್ನು ಮಾಡುತಲಿಧಾರೋ ಆ ಶ್ರೀಹರಿಯೊಬ್ಬನೇ ಸರ್ವನಿಯಾಮಕನು ; ನಾನು ಇಂದ್ರನು ನಿಋತಿಯು ವರುಣನು ಚಂದ್ರನು ಅಗ್ನಿಯು ಈಶಾನನು ವಾಯುವು ಸೂರ್ಯನು ಬ್ರಹ್ಮನು ದ್ವಾದಶಾದಿತ್ಯರು ವಿಶ್ವೇದೇವರು ಅಷ್ಟ ವಸುಗಳು ಸಾಧ್ಯರು ಸಪ್ತಮರುದ್ಗಣಗಳು ಏಕಾದಶರುದ್ರರು ಸಿದ್ಧರು ದೇವತಾಶ್ರೇಷ್ಠರಾದ ನವಪ್ರಜೇಶರು ಭೃ ಗು ಮೊದಲಾದ ಮಹಾಮುನಿಗಳು ರಜಸ್ತಮೋಗುಣ ಸಂಬಂಧರಹಿತರಾಗಿ ಸತ್ವಗುಣವೇ ಮುಖ್ಯವಾಗುಳ್ಳ ಬ್ರಹ್ಮಾ ದಿಗಳೂ ಮಾಯಾಮೋಹಿತರಾಗಿ ಯಾವ ಶ್ರೀ ವಾಸುದೇವನ ವ್ಯಾಪಾರವನ್ನರಿಯರೋ ಆ ಬ್ರಹ್ಮಾದಿಗಳಿಗಿಂತಲೂ ಅನ್ಯರಾದ ಪುರುಷರು ಆ ಹರಿಯ ವ್ಯಾಪಾರವನ್ನರಿಯಲಾರರೆಂದು ಹೇಳತಕ್ಕದ್ದೇನು ! ಯಾವರೀತಿಯಿಂದ ರೂಪಗ ಳು ತಮಿಗೆ ಪ್ರಕಾಶಕವಾದ ಚಕ್ಷುಸ್ಸುಗಳನ್ನು ತಿಳಿಯಲಾರವೋ ಅದೇರೀತಿ ಪ್ರಾಣಿಗಳು ತಮ್ಮ ಹೃದಯಮಧ್ಯದಲ್ಲಿ ಜೀವರಿಗೆ ದ್ರಷ್ಟೃವಾಗಿ ಸಕಲವಿಷಯ ಪ್ರಕಾಶಕವಾಗಿರುವ ಯಾವ ವಾಸುದೇವನನ್ನು ವಾಕ್ಕುಗಳಿಂದಲೂ ಮನ ಸ್ಸಿನಿಂದಲೂ ಇಂದ್ರಿಯಗಳಿಂದಲೂ ಪ್ರಾಣಗಳಿಂದಲೂ ಚಿತ್ತದಿಂದಲೂ ತಿಳಿಯುವವರಾಗುವದಿಲ್ಲವೋ ಅಂಥಾ ಪ್ರ ಭಾವವುಳ್ಳ ಪರಮೇಶ್ವರನು ನನಿಗಿಂತಲೂ ಅನ್ಯನಾಗಿಧಾನೆ ; ಅಂಥಾ ಸ್ವತಂತ್ರನಾದ ಮಾಯ ನಿಯಾಮಕನಾದ

ಪರಮಾತ್ಮನಾದ ಶ್ರೀಹರಿಯ ದೂತರು ಮನೋಹರರಾಗಿ ಹೇಗೆ ಸಮಾನಗಳಾದ ರೂಪ ಸೌಂದರ್ಯಾದಿಗಳು ಪ್ರಭಾವ ಮೊದಲಾದ ಗುಣಗಳು ಭಕ್ತವಾತ್ಸಲ್ಯಾದಿ ಧರ್ಮಗಳೂ ಉಳ್ಳವರಾಗಿ ಈ ಲೋಕದಲ್ಲಿ ಬಹುತರವಾಗಿ ಸಂಚರಿಸುತಲಿಧಾರೆ; ದೇವತೆಗಳಿಗೆ ಪೂಜ್ಯರಾಗಿ ತೇಜಸ್ಸಿನಿಂದ ನೋಡಲಶಕ್ಯರಾಗಿ ಅತ್ಯಾಶ್ಚರ್ಯಕರರಾಗಿರುವ ಶ್ರೀವಿಷ್ಣುದೂತರು ವಿಷ್ಣುವಿನ ಭಕ್ತರಾದ ಮನುಷ್ಯರನ್ನು ಶತೃಗಳಿಂದಲೂ ನನ್ನಿಂದಲೂ ಅಗ್ನಿಮೊದಲಾದ್ದರಿಂದಲೂ ರಕ್ಷಿಸುತಲಿದ್ಧಾರೆ; ಅವರು ವಿಷ್ಣುದೂತರಾದರೆ ಅಧರ್ಮಯುಕ್ತನಾದ ಅಜಾಮಿಳನಲ್ಲಿ ಎಂತು ಪಕ್ಷಪಾತವನ್ನು ಮಾಡಿದರೆಂದಲ್ಲಿ: ಸಾಕ್ಷಾದ್ಭಗವಂತನಿಂದ ನಿರೂಪಿಸಲ್ಪಟ್ಟ ಧರ್ಮರಹಸ್ಯವನ್ನು ಭೃಗು ಮೊದಲಾದ ಋಷಿಗಳು ದೇವತೆಗಳು ಸಿದ್ಧರು ಅಸುರರು ವಿದ್ಯಾಧರರು ಚಾರಣರು ಮೊದಲಾದ ಸಕಲ ದೇವತಾಜಾತಿಗಳೂ ಅರಿಯರೆಂದಲ್ಲಿ ಮನುಷ್ಯರು ಎಂತು ತಿಳಿಯುವರು! ಎಲೈ ಭಟರೇ, ಬ್ರಹ್ಮನು ನಾರದನು ರುದ್ರನು ಸನತ್ಕುಮಾರನು ಕಪಿಲನು ಸ್ವಾಯಂಭುವಮನುವು ಪ್ರಹ್ಲಾದನು ಜನಕರಾಯನು ಬಲಿಯು ಶುಕನು ನಾನು ಬ್ರಹ್ಮದೇವನೇ ಮೊದಲಾಗುಳ್ಳ ನಾವು ಈ ಹನ್ನೆರಡು ಮಂದಿಯು ಅತಿ ರಹಸ್ಯವಾದ ಪರಿಶುದ್ಧವಾದ ತಿಳಿಯಲಶಕ್ಯವಾದ ಮೋಕ್ಷಸಾಧನವಾದ ಆ ಭಗವಂತನಿಂದ ಉಪದೇಶಂಗೈಯಲ್ಪಟ್ಟ ಆ ಧರ್ಮರಹಸ್ಯವನ್ನು ತಿಳಿಯುತಲಿಧೇವೆ; ಈ ಲೋಕದಲ್ಲಿ ನಾಮಸಂಕೀರ್ತನ ಮೊದಲಾದ್ದರಿಂದ ಭಗವಂತನಲ್ಲಿ ಭಕ್ತಿಯುಂಟಾಗುವದೇ ಪುರುಷರಿಗೆ ಪರಮಧರ್ಮವೆಂದು ಸಕಲಶಾಸ್ತ್ರಸಿದ್ಧವಾಗಿದೆ; ಮಹಾಪಾಪಿಯಾದ ಅಜಾಮಿಳನು ಯಾವ ನಾಮಸ್ಮರಣ ಪ್ರಭಾವಮಾತ್ರದಿಂದ ಮೃತ್ಯುಪಾಶದಿಂದ ಬಿಡಿಸಲ್ಪಟ್ಟವನಾದನೋ ಅಂಥಾ ಶ್ರೀಹರಿಯ ನಾಮೋಚ್ಚಾರಣ ಪ್ರಭಾವವನ್ನು ನೋಡಿದಿರೆ! ಆಭಾಸ ನಾಮೋಚ್ಚಾರಣ ಮಾತ್ರದಿಂದಲೇ ಪಾಪಕ್ಷಯವಾದರೆ ಶ್ರದ್ಧಾಭಕ್ತಿಗಳಿಂದ ಹರಿನಾಮವನ್ನು ಆವರ್ತಿಸುವದೆಂಬ ವಿಧಿಯು ವ್ಯರ್ಥವೆಂದಲ್ಲಿ: ಯಾವ ಕಾರಣದಿಂದ ಮಹಾಪಾತಕಿಯಾಗಿ ಅಶುಚಿಯಾಗಿ ಮೃತ್ಯುಗ್ರಸ್ತನಾದ್ದರಿಂದ ಅಸ್ಫುಟವಾದ ಚಿತ್ತವುಳ್ಳವನಾಗಿ ಅದರಲ್ಲೂ ಪುತ್ರನನ್ನು ಕುರಿತು ಅಕ್ಷರಗಳು ಸ್ಫುಟಗಳಾಗದಂತೆ ನಾರಾಯಣನೆಂದು ಕೂಗಿದ ಮಾತ್ರದಿಂದ ಮುಕ್ತಿಯನ್ನು ಪಡದನೋ ಅದುಕಾರಣ ಭಗವಂತನ ಗುಣಗಳನ್ನು ಚರಿತ್ರೆಗಳನ್ನು ನಾಮಗಳನ್ನು ಚನ್ನಾಗಿ ಕೀರ್ತನಂಗೈವದು ಯಾವದುಂಟೋ ಈ ಭಗವಂತನ ಗುಣಾದಿ ಸಂಕೀರ್ತನವು ಪಾಪಕ್ಷಯಕ್ಕೋಸ್ಕರ ಉಪಯೋಗಿಸುವದಲ್ಲ; ಸಕಲ ಪಾತಕಗಳನ್ನು ಪರಿಹರಿಸಿ ಮುಕ್ತಿಯನ್ನುಂಟುಮಾಡುವದು; ಮೃತಸಂಜೀವನವೆಂಬ ಔಷಧವನ್ನು ಅರಿಯದೆ ವೈದ್ಯರು ರೋಗನಿವರ್ತಿಗೋಸ್ಕರ ಶುಂಠಿ ಹಿಪ್ಪಲಿ ಮೆಣಸು ಮೊದಲಾದ ದ್ರವ್ಯಗಳನ್ನು ಎಂತು ವಿಧಿಸುವರೋ ಅದೇರೀತಿಯಿಂದ ಬ್ರಹ್ಮದೇವನು ಮೊದಲಾದ ನಾವು ಹನ್ನೆರಡು ಜನರು ಹೊರ್ತು ಈ ಮನ್ವಾದಿಗಳು ಈ ಧರ್ಮರಹಸ್ಯವನ್ನರಿಯದೇ ದ್ವಾದಶಾಬ್ದ ಕೃಚ್ಛ್ರ ಚಾಂದ್ರಾಯಣಗಳು ಮೊದಲಾದ ಪ್ರಾಯಶ್ಚಿತ್ತಗಳನ್ನು ವಿಧಿಸುವ ಶಾಸ್ತ್ರಗಳನ್ನು ಕಲ್ಪಿಸಿದರು; ಭಗವಂತನ ಮಾಯೆಯಿಂದ ಅತ್ಯಂತ ಮೋಹಯುಕ್ತವಾದ ಬುದ್ಧಿಯುಳ್ಳವರಾದ್ದರಿಂದ ಮಧುರವಾಗಿ ಪುಷ್ಪಗಳಂತಿರುವ ಅರ್ಥವಾದಗಳಿಂದ ಮನೋಹರವಾಗಿ ತ್ರಿಗುಣಾತ್ಮಕವಾಗಿರುವ ವೇದದಲ್ಲಿ ಅತ್ಯಂತಾಸಕ್ತವಾದ ಬುದ್ಧಿಯುಳ್ಳ ಈ ಮನ್ವಾದಿಗಳು ಮಹತ್ತಾದ ಯಜ್ಞಕರ್ಮದಲ್ಲಿ ಶ್ರದ್ಧೆಯಿಂದ ಪ್ರವರ್ತಿಸುತ ಬಹುತರವಾಗಿ ಈ ಧರ್ಮರಹಸ್ಯವನ್ನರಿಯರು; ಆದಕಾರಣ ಜ್ಞಾನಿಗಳು ಈರೀತಿ ಪರ್ಯಾಲೋಚನಂಗೈದು ಭಗವಂತನಾದ ಶ್ರೀಹರಿಯಲ್ಲಿ ಸರ್ವಪ್ರಕಾರದಿಂದಲೂ ಭಕ್ತಿಯೋಗವನ್ನು ಮಾಡುತಲಿಧಾರೆ; ಅಂಥಾ ಜ್ಞಾನಿಗಳು ನಿಮ್ಮ ದಂಡನೆಗೆ ಯೋಗ್ಯರಾಗುವದಿಲ್ಲ; ಅಂಥಾ ಪುರುಷರಿಗೆ ಹರಿನಾಮಸಂಕೀರ್ತನವು ಇಷ್ಟಗ್ಗೇವುಂಟಾದರೆ ಎಂದಿಗೂ ಪಾತಕವಿಲ್ಲ; ದಯಾಳುಗಳಾಗಿ ಸರ್ವತ್ರ ಸಮದೃಷ್ಟಿಯುಳ್ಳವರಾಗಿ ಶ್ರೀಹರಿಯನ್ನು ಶರಣುಹೊಂದಿದವರಾಗಿ ದೇವತೆಗಳಿಂದಲೂ ಸಿದ್ಧರಿಂದಲೂ ವರ್ಣಿಸಲ್ಪಡುವ ತಮ್ಮ ಪುಣ್ಯಕಥೆಗಳುಳ್ಳವರಾಗಿರುವ ಯಾವ ಮಹಾತ್ಮರುಂಟೋ ಅವರ ಸಮೀಪವನ್ನು ಕುರಿತು ಹೋಗಬೇಡಿ; ಶ್ರೀಹರಿಯ ಗದಾಯುಧದಿಂದ ಚನ್ನಾಗಿ ಪ್ರಹರಿಸಲ್ಪಟ್ಟವರಾಗಿದ್ದೀರಿ; ಇಂಥಾ ಭಗವದ್ಭಕ್ತರನ್ನು ದಂಡಿಸುವದರಲ್ಲಿ ಕಾಲವು ಸಮರ್ಥವಲ್ಲ; ನಾನೂ ಸಮರ್ಥನಲ್ಲ; ಹಾಗಾದರೆ ಯಾರು ದಂಡನೆಗೆ ಯೋಗ್ಯರೆಂದರೆ: ಶ್ರೀಹರಿಯನ್ನು ಹೊರ್ತು ಮತ್ತೊಂದರಲ್ಲಿ ಆಸಕ್ತಿಯಿಲ್ಲದೆ ವಿರಕ್ತರಾದ ರಸಜ್ಞರಾದ ಮಹಾಯತಿಗಳೆಂಬ ಹಂಸಪಕ್ಷಿಗಳ ಸಮೂಹಗಳಿಂದ ನಿರಂತರವಲ್ಲಿಯೂ

ಸೇವಿಸಲ್ಪಡುತ್ತಲಿರುವ ಹರಿಪಾದಗಳೆಂಬ ಕಮಲಗಳಲ್ಲಿ ಮಕರಂದರೂಪವಾದ ಭಕ್ತಿರಸದಲ್ಲಿ ಪರಾಙ್ಮುಖರಾಗಿ ಸ್ವಧರ್ಮರಹಿತರಾಗಿ ಗೃಹದಲ್ಲಿ ಅತ್ಯಂತಾಸಕ್ತಿಯುಳ್ಳವರಾಗಿರುವ ದುಷ್ಟರನ್ನು ನನ್ನ ಸಮೀಪವನ್ನೈದಿಸುವವರಾಗಿ; ಯಾರಜಿಹ್ವೆಯು ಭಗವಂತನ ಗುಣಗಳನ್ನೂ ನಾಮಧೇಯಗಳನ್ನೂ ನುಡಿಯುವದಿಲ್ಲವೋ ಯಾರ ಮನಸ್ಸು ಭಗವಂತನ ಪಾದಾರವಿಂದವನ್ನು ಸ್ಮರಿಸುವದಿಲ್ಲವೋ ಯಾರ ಶಿರಸ್ಸು ಶ್ರೀಕೃಷ್ಣನಿಗೋಸುಗ ಒಂದುಬಾರಿಯಾದರೂ ನಮಸ್ಕರಿಸುವದಿಲ್ಲವೋ ವಿಷ್ಣುವ್ರತಗಳನ್ನು ಮಾಡದಿರುವ ಅಂಥಾ ದುಷ್ಟರನ್ನು ನನ್ನ ಸಮೀಪವನ್ನೈದಿಸುವವರಾಗಿ; ಸ್ವಕೀಯರ್ಯರಾದ ಭಟರಿಂದ ಯಾವ ಕಾರಣದಿಂದ ಅನ್ಯಾಯವು ಮಾಡಲ್ಪಟ್ಟಿತೋ ಅದುಕಾರಣ ಭಗವಂತನಾದ ಪುರಾಣಪುರುಷನಾದ ಶ್ರೀನಾರಾಯಣನು ನಮ್ಮ ಅಪರಾಧವನ್ನು ಕ್ಷಮಿಸಲಿ; ತನ್ನ ಮಹಾತ್ಮ್ಯವನ್ನರಿಯದವರಾಗಿ ತನ್ನನ್ನು ಭಜಿಸುವರಾಗಿ ತನ್ನವರಾಗಿ ಅಂಜಲಿಬಂಧಯುಕ್ತರಾಗಿರುವ ನಮ್ಮ ಮಹತ್ತಾದ ಅಪರಾಧದಲ್ಲಿ ಕ್ಷಮೆಯುಂಟಾಗುವದು ಯುಕ್ತವೇಸರಿ, ಅಂಥಾ ನಾರಾಯಣನಿಗೋಸ್ಕರ ನಮಸ್ಕಾರವು' ಎಂದು ಯಮನು ತನ್ನ ಭಟರನ್ನು ಕುರಿತು ನಿರೂಪಿಸಿದನು.

"ಎಲೈ ಪರೀಕ್ಷಿದ್ರಾಯನೇ, ಅದುಕಾರಣ ಜಗತ್ತಿಗೆ ಮಂಗಳರೂಪವಾದ ಶ್ರೀಹರಿನಾಮಸಂಕೀರ್ತನವು ಮಹಾಪಾಪಗಳಿಗೂ ಮುಖ್ಯವಾದ ಪ್ರಾಯಶ್ಚಿತ್ತವೆಂದು ತಿಳಿಯುವನಾಗು; ಶ್ರೀಹರಿಯ ಉತ್ಕೃಷ್ಟಗಳಾದ ಚರಿತ್ರೆಗಳನ್ನು ಬಾರಿಬಾರಿಗೂ ಶ್ರವಣ ಪಠಣಗಳನ್ನು ಮಾಡುತ್ತಲಿರುವ ಪುರುಷರಿಗೆ ಚನ್ನಾಗಿ ಪುಟ್ಟಿದ ಭಕ್ತಿಯಿಂದ ಚಿತ್ತವು ಎಂತು ಪರಿಶುದ್ಧವಾಗುವದೋ ಆರೀತಿ ವ್ರತಾದಿಗಳಿಂದ ಚಿತ್ತಶುದ್ಧಿಯುಂಟಾಗಲಾರದು; ಶ್ರೀಕೃಷ್ಣನ ಪಾದಗಳೆಂಬ ಕಮಲಗಳಲ್ಲಿರುವ ಮಕರಂದವನ್ನು ಆಸ್ವಾದನಗೈಯುತಲಿರುವ ಪುರುಷನು ತನ್ನಿಂದ ಇವು ತುಚ್ಛಗಳೆಂದು ತ್ಯಾಗಗೈಯಲ್ಪಟ್ಟವಾಗಿ ಪಾಪಸಂಪಾದಕವಾಗಿರುವ ವಿಷಯಗಳಲ್ಲಿ ಪುನಃ ರಮಿಸುವವನಾಗನು; ಆ ಕೃಷ್ಣನ ಪಾದಾರವಿಂದ ಮಕರಂದರಸದ ಸ್ವರೂಪವನ್ನರಿಯದಿರುವ ಪುರುಷನು ಕಾಮದಿಂದ ತಿರಸ್ಕರಿಸಲ್ಪಟ್ಟವನಾಗಿ ತನ್ನ ಪಾಪವನ್ನು ಪರಿಹರಿಸಿಕೊಳ್ಳುವದಕ್ಕೋಸ್ಕರ ಯಾವ ಕರ್ಮದಿಂದ ಪುನಃ ಪಾಪವೇ ಸಂಭವಿಸುವದೋ ಅಂಥಾ ಚಿತ್ತಶುದ್ಧಿಕರವಲ್ಲದ ಪ್ರಾಯಶ್ಚಿತ್ತಾದಿರೂಪವಾದ ಕರ್ಮವನ್ನಪೇಕ್ಷಿಸನು; ಆ ಯಮದೂತರು ಈರೀತಿ ತಮ್ಮ ಪ್ರಭುವಿನಿಂದ ನಿರೂಪಿಸಲ್ಪಟ್ಟ ಭಗವಂತನ ಮಹಾತ್ಮ್ಯವನ್ನು ಸ್ಮರಿಸಿಕೊಂಡು ಆಶ್ಚರ್ಯಯುಕ್ತವಾದ ಬುದ್ಧಿಯುಳ್ಳವರಾಗಿ ಆ ಯಮನಿಂದ ನಿರೂಪಿಸಲ್ಪಟ್ಟ ಅರ್ಥವನ್ನು ಯುಕ್ತವೇಸರಿಯೆಂದು ತಿಳಿದವರಾದರು; ಅದು ಮೊದಲುಗೊಂಡು ವಿಷ್ಣುಭಕ್ತರು ನಮ್ಮನ್ನೇ ಕೊಂದಾರೆಂದು ಶಂಕಿಸುತಲಿರುವವರಾಗಿ ವಿಷ್ಣುಭಕ್ತರನ್ನು ನೋಡುವದಕ್ಕೋಸ್ಕರಲೂ ಭಯಪಡುತಲಿರ್ಧಾರೆ! ಎಲೈ ಪರೀಕ್ಷಿದ್ರಾಯನೇ, ಪೂರ್ವದಲ್ಲಿ ಮಲಯಪರ್ವತದಲ್ಲಿ ಜ್ಞಾನಾದಿಗುಣಸಂಪನ್ನನಾದ ಅಗಸ್ತ್ಯನು ಪೀಠದಲ್ಲಿ ಕುಳಿತು ಶ್ರೀಹರಿಯ ಪೂಜಾಸಮಯದಲ್ಲಿ ಹರಿನಾಮವೇ ಸಕಲಪಾಪಕ್ಷಯಕ್ಕೂ ಮುಕ್ತಿಗೂ ಮುಖ್ಯಸಾಧನವೆಂದು ಈ ಅರ್ಥದಲ್ಲಿ ವಿಶ್ವಾಸವನ್ನು ಪುಟ್ಟಿಸಲೋಸುಗ ಪ್ರಮಾಣಪೂರ್ವಕವಾಗಿ ಬಾರಿಬಾರಿಗೂ ಹರಿಪಾದಗಳನ್ನು ಸ್ಪರ್ಶಿಸುತಲಿರುವನು; ರಹಸ್ಯವಾದ ಈ ಅಜಾಮಿಳೋಪಾಖ್ಯಾನವನ್ನು ನಿನಿಗೋಸ್ಕರ ನಿರೂಪಿಸಿದೆನು" ಎಂದು ನುಡಿದನು.

೪ನೇ ಅಧ್ಯಾಯ.

ಪ್ರಜಾಸೃಷ್ಟಿಗೋಸ್ಕರ ದಕ್ಷಪ್ರಜೇಶನು ತಪಸ್ಸಿನಿಂದ ಹಂಸಮುಖ್ಯವೆಂಬ ಸ್ತೋತ್ರದಿಂದ ಶ್ರೀಹರಿಯನ್ನು ಭಜಿಸಿದ್ದು.

ಆ ಬಳಿಕ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ಸ್ವಾಯಂಭುವಮನುವಿನ ಪ್ರಸ್ತಾಪದಲ್ಲಿ ದೇವ ಅಸುರ ಮನುಷ್ಯ ಸರ್ಪ ಮೃಗ ಪಕ್ಷಿಗಳ ಸೃಷ್ಟಿಯ ಕ್ರಮವನ್ನು ಪೂರ್ವದಲ್ಲಿ ನಿನ್ನಿಂದ

ಸಂಕ್ಷೇಪವಾಗಿ ನಿರೂಪಿಸಲ್ಪಟ್ಟಿತು ; ಈಗ ಆ ಸೃಷ್ಟಿಕ್ರಮವನ್ನು ವಿಸ್ತರದಿಂದ ನಿನ್ನಿಂದ ಕೇಳಲಿಚ್ಛೈಸುತಲಿಧೇನೆ ; ಯಾವ ಶಕ್ತಿಯಿಂದ ಯಾವಪ್ರಕಾರದಿಂದ ಭಗವಂತನು ಈ ಪ್ರಪಂಚವನ್ನು ಸೃಷ್ಟಿಸಿದನೋ ಆ ಶಕ್ತಿಸ್ವರೂಪವನ್ನು ಆಪ್ರಕಾರವನ್ನು ತಿಳಿಯಲಿಚ್ಛೈಸುತಲಿಧೇನೆ ” ಎಂದು ಪ್ರಶ್ನೆಗೈದನು.

“ ಆ ವಾಕ್ಯವನ್ನು ಕೇಳಿ ಸರ್ವಜ್ಞನಾಗಿ ಮಹಾಯೋಗಿಯಾದ ಶುಕಮುನಿಯು ಬಹುಪ್ರಕಾರದಿಂದ ಸಂತೋಷಪಟ್ಟು ಆ ಸೃಷ್ಟಿಕ್ರಮವನ್ನು ನಿರೂಪಿಸಿ ಭಗವಂತನು ದಕ್ಷಾದಿರೂಪದಿಂದ ಸೃಜಿಸಿದವನಾದನೆಂದು ಪೇಳಲೋಸುಗ ಪ್ರಜೇಶನ ಜನ್ಮವನ್ನು ನಿರೂಪಿಸುವೆನು ! ಎಲೈ ಅರಸೆ, ಪ್ರಾಚೀನಬರ್ಹಿಸ್ಸೆಂಬ ಮಹಾರಾಯನಿಗೆ ಪುತ್ರರಾದ ಪ್ರಚೇತಸ್ಸುಗಳೆಂಬ ನಾಮಧೇಯವುಳ್ಳ ಹತ್ತುಮಂದಿ ಪುತ್ರರು ಸಮುದ್ರಮಧ್ಯದಲ್ಲಿ ಬಹುಕಾಲ ತಪಸ್ಸಂಗೈದು ಯಾವಾಗ ಆ ಸಮುದ್ರಮಧ್ಯದಿಂದ ಹೊರಕ್ಕೆ ಹೊರಟು ಬಂದರೋ ಆ ಸಮಯದಲ್ಲಿ ಅವರಿಗೆ ತಂದೆಯಾದ ಪ್ರಾಚೀನಬರ್ಹಿಸ್ಸೆಂಬ ಅರಸು ನಾರದೋಪದೇಶದಿಂದ ವಿರಕ್ತನಾಗಿ ವನವನ್ನೈದಲು ಅರಾಜಕವಾಗಿ ಬಹುವೃಕ್ಷಗಳಿಂದ ವ್ಯಾಪಿಸಲ್ಪಟ್ಟದ್ದಾಗಿರುವ ಭೂಮಿಯನ್ನು ನೋಡಿ ಆ ಪ್ರಚೇತಸ್ಸುಗಳು ವೃದ್ಧಿಹೊಂದಿರುವ ಆ ವೃಕ್ಷಗಳಲ್ಲಿ ಅತ್ಯಂತ ಕೋಪಯುಕ್ತರಾಗಿ ತಪಸ್ಸಿನಿಂದ ಜ್ವಲಿಸುತಲಿರುವ ಕ್ರೋಧವುಳ್ಳವರಾಗಿ ಆ ವೃಕ್ಷಗಳನ್ನು ದಹಿಸಲಿಚ್ಛೆಯಿಂದ ತಮ್ಮ ಮುಖದಿಂದ ಅಗ್ನಿಯನ್ನೂ ವಾಯುವನ್ನೂ ಬಿಟ್ಟವರಾದರು ; ಅನಂತರದಲ್ಲಿ ಆ ಅಗ್ನಿ ವಾಯುಗಳಿಂದ ದಹಿಸಲ್ಪಡುತಲಿರುವ ವೃಕ್ಷಗಳನ್ನು ನೋಡಿ ಸಮಸ್ತ ವೃಕ್ಷಗಳಿಗೂ ಕಲೆಗಳಿಗೂ ಸಮಸ್ತಗಳಾದ ಓಷಧಿಗಳಿಗೂ ಅಧಿಪತಿಯಾದ ಮಹಾತ್ಮನಾದ ಚಂದ್ರನು ಅವರ ಕ್ರೋಧವನ್ನು ಪರಿಹರಿಸುವನಾಗಿ ಅವರನ್ನು ಕುರಿತು ‘ಎಲೈ ಪುಣ್ಯಶಾಲಿಗಳಾದ ಪ್ರಚೇತಸ್ಸುಗಳಿರಾ, ಅತಿ ದೀನಗಳಾದ ವೃಕ್ಷಗಳಿಗೆ ನೀವು ದ್ರೋಹವನ್ನು ಮಾಡಲು ಯೋಗ್ಯರಲ್ಲ ; ನೀವು ವಿಶೇಷವಾಗಿ ವೃದ್ಧಿಹೊಂದಿಸಲೋಸುಗ ಇಚ್ಛೈಸುತಲಿದ್ದೀರಿ ; ಸಕಲ ಪ್ರಜೆಗಳಿಗೂ ಪತಿಗಳೆಂದು ಪ್ರಸಿದ್ಧಿಯನ್ನು ಪಡೆದಿದ್ದೀರಿ ; ಆದಕಾರಣ ಈ ವೃಕ್ಷಗಳನ್ನು ದಹಿಸುವದು ನಿಮಗೆ ಯೋಗ್ಯವಲ್ಲ ; ಸಕಲ ಪ್ರಜೇಶರಿಗೂ ಅಧಿಪತಿಯಾದ ನಾಶರಹಿತನಾದ ಭಗವಂತನಾದ ಶ್ರೀಹರಿಯು ಆದಿಯಲ್ಲಿ ವೃಕ್ಷಗಳನ್ನೂ ಓಷಧಿಗಳನ್ನೂ ಭಕ್ಷ್ಯವನ್ನೂ ಸೃಜಿಸಿದನು ; ಅದು ಹ್ಯಾಗೆಂದರೆ : ಚರಗಳಾದ ಮನುಷ್ಯಾದಿ ಭೂತಗಳಿಗೆ ಸ್ಥಾವರಗಳಾದ ವೃಕ್ಷಾದಿ ಭೂತಗಳೇ ಅನ್ನವು ; ಪಾದಗಳಿಂದ ಸಂಚರಿಸುತಲಿರುವ ಪ್ರಾಣಿಗಳಿಗೆ ಪಾದರಹಿತಗಳಾದ ಪ್ರಾಣಿಗಳೇ ಅನ್ನವು ; ಹಸ್ತಯುಕ್ತಗಳಿಗೆ ಹಸ್ತಗಳಿಲ್ಲದಿರುವ ಪ್ರಾಣಿಗಳೇ ಅನ್ನವು ; ಅವುಗಳಲ್ಲೂ ಪಾದದ್ವಯಯುಕ್ತವಾದ ಪ್ರಾಣಿಗಳಿಗೆ ನಾಲ್ಕು ಪಾದಗಳುಳ್ಳ ಪಶ್ವಾದಿಗಳೇ ಅನ್ನವು ; ಹೀಗಿರುವಲ್ಲಿ ಈ ವೃಕ್ಷಗಳು ಪ್ರಾಣಿಗಳಿಗೆ ಅನ್ನರೂಪವಾದ್ದರಿಂದ ಇವನ್ನು ದಹಿಸುವದು ಯುಕ್ತವಲ್ಲ ; ಅದುಕಾರಣ ದಹಿಸುತಲಿರುವ ಈ ಕ್ರೋಧವನ್ನು ನಿಗ್ರಹಿಸಿ ನಿಮ್ಮ ತಂದೆಯಿಂದಲೂ ನಿಮ್ಮ ತಾತನಿಂದಲೂ ಪ್ರಪಿತಾಮಹನಿಂದಲೂ ಸೇವಿಸಲ್ಪಟ್ಟ ಉಪಶಾಂತಿಯನ್ನೈದುವರಾಗೀ ; ಮತ್ತೂ ನೀವು ಪ್ರಜಾಸೃಷ್ಟಿಗೋಸುಗ ಬ್ರಹ್ಮದೇವನಿಂದಲೂ ನಿಮ್ಮ ತಂದೆಯಾದ ಪ್ರಾಚೀನಬರ್ಹಿಸ್ಸಿನಿಂದಲೂ ಆಜ್ಞಾಪಿಸಲ್ಪಟ್ಟವರಾಗಿದ್ದೀರಾದಕಾರಣ ಈ ವೃಕ್ಷಗಳನ್ನು ದಹಿಸಲು ಯೋಗ್ಯರಲ್ಲ ; ಲೋಕದಲ್ಲಿ ಬಾಲಕರಿಗೆ ಮಾತಾಪಿತೃಗಳೇ ಬಂಧುಗಳು ; ನೇತ್ರಗಳಿಗೆ ರೆಪ್ಪೆಗಳೇ ಬಂಧುಗಳು ; ಸ್ತ್ರೀಯರಿಗೆ ಪತಿಯೇ ಬಂಧುವು ; ಪ್ರಜೆಗಳಿಗೆ ಅರಸೇ ಬಂಧುವು ; ಭಿಕ್ಷುಕರಿಗೆ ಗೃಹಸ್ಥನೇ ಬಂಧುವು ; ಅಜ್ಞಾನಿಗಳಿಗೆ ಜ್ಞಾನಿಯೇ ಬಂಧುವು ; ಆದ್ದರಿಂದ ಅರಸುಗಳಾದ ನಿಮಗೆ ಪ್ರಜೆಗಳ ಜೀವನಕ್ಕೆ ಉಪಯುಕ್ತಗಳಾದ ವೃಕ್ಷಾದಿಗಳನ್ನು ದಹಿಸುವದು ಯೋಗ್ಯವಲ್ಲ ; ಸಕಲ ಭೂತಗಳ ಮಧ್ಯದಲ್ಲಿ ಪರಮೇಶ್ವರನಾದ ಶ್ರೀಹರಿಯು ಆತ್ಮರೂಪದಿಂದ ಇದ್ದಾನಾದ್ದರಿಂದ ಸಕಲ ಪ್ರಪಂಚವೂ ಭಗವಂತನ ಸ್ಥಾನವೆಂಬ ಜ್ಞಾನದಿಂದ ನೋಡುವವರಾಗೀ ; ಈರೀತಿ ಸರ್ವತ್ರ ಈಶ್ವರಭಾವನೆಯನ್ನು ಮಾಡುವಲ್ಲಿ ಶ್ರೀಹರಿಯು ನಿಮ್ಮಲ್ಲಿ ಪ್ರಸನ್ನನಾಗುವನು ; ಯಾವ ಪುರುಷನು ಆಕಸ್ಮಿಕವಾಗಿ ವೃದ್ಧಿಹೊಂದಿರುವ ಕ್ರೋಧವನ್ನು ಆತ್ಮವಿಚಾರದಿಂದ ನಿಗ್ರಹಿಸುವನೋ ಆ ಪುರುಷನು ಸಕಲ ವಿಷಯಗಳನ್ನೂ ತ್ಯಜಿಸುವದರಲ್ಲಿ ಯೋಗ್ಯನಾಗುವನು ; ಇನ್ನುಮೇಲೆ ದೀನಗಳಾದ ಈ ವೃಕ್ಷಗಳನ್ನು ದಹಿಸಬೇಡಿ ; ಮಿಕ್ಕ ಪ್ರಜೆಗಳಿಗೂ ನಿಮಿ

ಗೂ ಸಹಾ ಶುಭವುಂಟಾಗಲಿ; ಅತ್ಯಂತ ಶ್ರೇಷ್ಠಗಳಾದ ವಾರ್ಕ್ಷಿಯೆಂಬ ನಾಮಧೇಯವುಳ್ಳ ಈ ಕನ್ಯೆಯನ್ನು ಪತ್ನಿಭಾವದಿಂದ ಗ್ರಹಿಸುವರಾಗೀ' ಎಂದು ಚಂದ್ರನು ಅವರಿಗೆ ಹಿತವಾದ ಅರ್ಥವನ್ನು ಉಪದೇಶಂಗೈದು ವೃಕ್ಷಗಳಿಂದ ಪೋಷಿಸಲ್ಪಟ್ಟವಳಾದಕಾರಣ ವಾರ್ಕ್ಷಿ ಎಂಬ ನಾಮಧೇಯವುಳ್ಳವಳಾಗಿ ಅಪ್ಸರಸ್ತ್ರೀಗೆ ಮಗಳಾಗಿರುವ ಆ ಕನ್ಯೆಯನ್ನು ಪ್ರಚೇತಸ್ಸುಗಳಿಗೆ ಇತ್ತು ತನ್ನ ಲೋಕವನ್ನೈದಿದನು! ಎಲೈ ಅರಸೆ, ಅನಂತರದಲ್ಲಿ ಹತ್ತುಮಂದಿಯಾದ ಆ ಪ್ರಚೇತಸ್ಸುಗಳು ಚಂದ್ರನ ಆಜ್ಞೆಯಿಂದ ಆ ವಾರ್ಕ್ಷಿಯೆಂಬ ಕನ್ಯೆಯನ್ನು ಧರ್ಮದಿಂದ ವಿವಾಹವನ್ನು ಮಾಡಿಕೊಂಡರು; ಯಾವವನ ಪ್ರಜಾಸೃಷ್ಟಿಯಿಂದ ಮೂರುಲೋಕಗಳು ಅತ್ಯಂತವಾಗಿ ಪೂರಿಸಲ್ಪಟ್ಟವೋ ಅಂಥಾ ದಕ್ಷಪ್ರಜೇಶನು ಆ ಪ್ರಚೇತಸ್ಸುಗಳದೆಶೆಯಿಂದ ವಾರ್ಕ್ಷಿದೇವಿಯಲ್ಲಿ ಜನಿಸಿದನು; ಹೆಣ್ಣುಮಕ್ಕಳಲ್ಲಿ ಅತಿ ವಾತ್ಸಲ್ಯಶಾಲಿಯಾದ ಆ ದಕ್ಷಪ್ರಜೇಶ್ವರನು ತನ್ನ ರೇತಸ್ಸಿನಿಂದಲೂ ಮನಸ್ಸಿನಿಂದಲೂ ಪ್ರಾಣಿಗಳನ್ನು ಯಾವರೀತಿಯಿಂದ ಸೃಜಿಸಿದನೋ ಆ ಪ್ರಕಾರವನ್ನು ನನ್ನ ದೆಶೆಯಿಂದ ಏಕಾಗ್ರಚಿತ್ತನಾಗಿ ಕೇಳು: ದಕ್ಷನು ಪೂರ್ವದಲ್ಲಿ ಮನಸ್ಸಿನಿಂದಲೇ ಸ್ವರ್ಗ ಭೂಲೋಕ ಪಾತಾಳವಾಸಿಗಳಾದ ದೇವ ಮನುಷ್ಯ ಅಸುರರೆಂಬ ಪ್ರಜೆಗಳನ್ನು ಸೃಜಿಸಿ ತನ್ನಿಂದ ಮಾಡಲ್ಪಟ್ಟ ಪ್ರಜಾಸೃಷ್ಟಿಯನ್ನು ಅತ್ಯಂತ ವೃದ್ಧಿಹೊಂದದಿರುವದನ್ನಾಗಿ ತಿಳಿದು ವಿಂಧ್ಯಪರ್ವತದ ಸಮೀಪದಲ್ಲಿರುವ ಪರ್ವತವನ್ನೈದಿ ಚರಿಸಲಶಕ್ಯವಾದ ತಪಸ್ಸಂಗೈದನು; ಆ ಪರ್ವತದಲ್ಲಿ ಶ್ರೇಷ್ಠವಾದ ಸಕಲಪಾಪಹರವಾದ ಅಘಮರ್ಷಣವೆಂಬ ತೀರ್ಥದಲ್ಲಿ ಕಾಲತ್ರಯದಲ್ಲೂ ಸ್ನಾನಾಚಮನಗಳನ್ನು ಮಾಡುತಲಿರುವವನಾಗಿ ತಪಸ್ಸಿನಿಂದ ಶ್ರೀಹರಿಯನ್ನು ಸಂತೋಷಪಡಿಸಿ ಹಂಸಮುಖ್ಯವೆಂಬ ಸ್ತೋತ್ರದಿಂದ ಭಗವಂತನಾದ ಶ್ರೀಹರಿಯನ್ನು ಸ್ತೋತ್ರಂಗೈದನು; ಯಾವ ಸ್ತೋತ್ರದಿಂದ ಶ್ರೀಹರಿಯು ದಕ್ಷನಿಗೆ ಪ್ರಸನ್ನನಾದನೋ ಅಂಥಾ ಉತ್ತಮವಾದ ಸ್ತೋತ್ರವನ್ನು ನಿನಗೋಸ್ಕರ ನಿರೂಪಿಸುತ್ತೇನೆ! ಅಮೋಘವಾದ ಚಿಚ್ಛಕ್ತಿಯುಳ್ಳವನಾದ್ದರಿಂದ ಸರ್ವೋತ್ತಮನಾಗಿ ಮಾಯೆಗೂ ಜೀವನಿಗೂ ನಿಯಾಮಕನಾಗಿದ್ದರೂ ಪ್ರಮಾಣರಹಿತನಾದ್ದರಿಂದ ವಿಷಯಗಳಲ್ಲಿ ಯಥಾರ್ಥಬುದ್ಧಿಯುಳ್ಳ ಆ ಜೀವರಿಂದ ಕಾಣಲ್ಪಡದಿರುವ ನಿಜಸ್ವರೂಪವುಳ್ಳವನಾಗಿ ತಾನೇ ತನಗೆ ಪ್ರಕಾಶಕನಾಗಿರುವ ಶ್ರೀಹರಿಗೋಸ್ಕರ ನಮಸ್ಕಾರಂಗೈಯ್ಯುತ್ತೇನೆ! ಸಖನಾದ ಜೀವನು ಯಾವ ದೇಹದಲ್ಲಿ ವಾಸಂಗೈಯ್ಯುತಲಿರುವವನಾದಾಗ್ಯೂ ಆ ದೇಹದಲ್ಲಿ ಸಾಕ್ಷಿರೂಪದಿಂದ ಸಮಸ್ತವನ್ನೂ ನೋಡುತಲಿರುವ ಯಾವ ಸಖನಾದ ಶ್ರೀಹರಿಯು ಇಂದ್ರಿಯಾದಿ ಪ್ರೇರಕತ್ವವನ್ನು ಆ ಇಂದ್ರಿಯಾದಿ ಪ್ರಕಾಶತ್ವಮೊದಲಾದ್ದನ್ನು ಸಹ ವಿಷಯವು ತನ್ನನ್ನು ಗ್ರಹಿಸುವ ಇಂದ್ರಿಯಾದಿಗಳಿಗೆ ಇರುವ ಪ್ರಕಾಶತ್ವವನ್ನು ತಿಳಿಯುವನಾಗುವದಿಲ್ಲವೋ ಅಂಥಾ ಶ್ರೀಹರಿಗೋಸ್ಕರ ನಮಸ್ಕಾರವು! ಜೀವನು ವಿಷಯದಂತೆ ಜಡನಾಗದೆ ಚೇತನ ರೂಪನಾದ್ದರಿಂದ ಆ ಶ್ರೀಹರಿಗಿರುವ ಇಂದ್ರಿಯಪ್ರೇರಕತ್ವಾದಿ ಶಕ್ತಿಗಳಿಂದ ತಿಳಿಯುವನಾಗಬಹುದು; ದೇಹ ಪ್ರಾಣಗಳು ಇಂದ್ರಿಯಗಳು ಅಂತಃಕರಣಗಳು ಪಂಚಭೂತಗಳು ಪಂಚತನ್ಮಾತ್ರೆಗಳು ಸಹ ದೃಶ್ಯವಾದ ತಮ್ಮ ಸ್ವರೂಪವನ್ನೂ ಅನ್ಯವಾದ ಇಂದ್ರಿಯ ಸಮೂಹವನ್ನೂ ಆ ವಿಷಯಗಳಿಗಿಂತಲೂ ಆ ಇಂದ್ರಿಯಸಮೂಹಕ್ಕಿಂತಲೂ ಅನ್ಯವಾದ ಇಂದ್ರಿಯಾದ್ಯಭಿಮಾನಿ ದೇವತೆಗಳ ಸಮೂಹವನ್ನೂ ಸಹಾ ಅರಿಯವು; ಜೀವನಾದರೋ ಸಮಸ್ತ ದೇಹೇಂದ್ರಿಯಾದಿಗಳನ್ನೂ ಅದಕ್ಕೆ ಕಾರಣಗಳಾದ ಸತ್ವರಜಸ್ತಮೋಗುಣಗಳನ್ನೂ ತಿಳಿಯುತಲಿಧಾನೆ; ಸಮಸ್ತವನ್ನು ತಿಳಿಯುವನಾಗಿ ಸರ್ವಜ್ಞನಾದಾಗ್ಯೂ ಅಪರಿಚ್ಛಿನ್ನನಾದ ಯಾವ ಶ್ರೀಹರಿಯನ್ನರಿಯನೋ ಅಂಥಾ ಭಗವಂತನನ್ನು ಸ್ತುತಿಸುತ್ತೇನೆ ಎಂದು ಈರೀತಿ ಭಗವಂತನ ಸ್ಥಾನವು ಯಾರಿಂದಲೂ ನೋಡಲಶಕ್ಯವೆಂಬ ಅರ್ಥವನ್ನು ನಿರೂಪಿಸಿ ಸ್ವಪ್ರಕಾಶತ್ವವನ್ನು ನಿರೂಪಿಸುವೆನು; ನಾಮರೂಪಪ್ರಕಾಶಕವಾದ ಮನಸ್ಸಿಗೆ ಸುಷುಪ್ತಿಯಲ್ಲಿ ಉಂಟಾಗುವ ವಿಲಯವು ಜಾಗ್ರತ್ಸ್ವಪ್ನಗಳಲ್ಲಿ ಉಂಟಾಗುವ ವಿಕ್ಷೇಪಗಳು ಇವೆರಡೂ ಇಲ್ಲದೆ ಅನುಭವ ಸ್ಮೃತಿಗಳು ನಷ್ಟವಾಗೋಣದರಿಂದ ಯಾವಾಗ ಸಮಾಧಿಯುಂಟಾಗುವದೋ ಆ ಸಮಯದಲ್ಲಿ ಯಾವ ಪರಮಾತ್ಮನು ಕೇವಲವಾದ ಸ್ವರೂಪಜ್ಞಾನದಿಂದ ತೋರುತಲಿರುವನೋ ಅಂಥಾ ಶುದ್ಧವಾದ ಪರಿಶುದ್ಧವಾದ ಮನಸ್ಸೇ ಅಭಿವ್ಯಕ್ತಸ್ಥಾನವಾಗುಳ್ಳ ಶ್ರೀಹರಿಗೋಸ್ಕರ ನಮಸ್ಕಾರವು! ಇಂಥಾ ಪರಮಾತ್ಮನು ಯಾರಿಗೆ ತೋರುವನೆಂದರೆ: ಅರಣಿಯಲ್ಲಿ ಗೂಢನಾಗಿ ಸಾಮಿಧೇನಿಗಳೆಂಬ ಆ ಹದಿನೈದು ಮಂತ್ರಗಳಿಂದ ಪ್ರಕಾಶಂಗೈಯಲು ಯೋಗ್ಯವಾಗಿ ವೇದಪ್ರಮಾಣಸಿದ್ಧನಾಗಿ

ಅಗ್ನಿಯನ್ನು ಎಂತು ಋತ್ವಿಕ್ಕರು ಮಥಿಸಿ ಕೊಡುವರೋ ಅದೇರೀತಿ ವಿವೇಕಿಗಳು ತಮ್ಮ ಬುದ್ಧಿಯಿಂದ ಹೃದಯ ಮಧ್ಯದಲ್ಲಿ ನಿಶ್ಚಲವಾಗಿ ಮಾಡಲ್ಪಟ್ಟ ಪರಮಾತ್ಮನನ್ನು ತನ್ನ ಶಕ್ತಿಗಳಾದ ಇಪ್ಪತ್ತೇಳು ಉಪಾಧಿಗಳಿಂದ ಗುಪ್ತವಾಗಿ ಮಾಡಲ್ಪಟ್ಟ ಇಪ್ಪತ್ತೆಂಟನೆಯವನನ್ನಾಗಿ ಜಡಗಳಾದ ಅಹಂಕಾರಾದಿಗಳ ದೆಶೆಯಿಂದ ಬಿಂಗಡಿಸಿ ಧ್ಯಾನಿಸ್ಯೆಯುತಲಿರ್ಧಾರೋ ಸಮಸ್ತ ವೃತ್ತಿವಿಶೇಷಗಳುಳ್ಳ ಮಾಯೆಯ ನಿಷೇಧದಿಂದ ಸ್ವರೂಪಸುಖಾನುಭವವುಳ್ಳವನಾಗಿ ನಾನಾವಿಧ ನಾಮಗಳುಳ್ಳವನಾಗಿ ನಾನಾರೂಪಗಳುಳ್ಳವನಾಗಿ ಅಪ್ರಕಾಶವಾದ ಮಾಯೆಯುಳ್ಳವನಾಗಿರುವ ಅಂಥಾ ಪರಮಾತ್ಮನಾದ ಶ್ರೀಹರಿಯು ನನಗೆ ಪ್ರಸನ್ನನಾಗಲಿ! ಯಾವದ್ಯಾವದು ವಾಕ್ಕಿನಿಂದ ಹೇಳಲ್ಪಟ್ಟಿಧೆಯೋ ಯಾವದು ಬುದ್ಧಿಯಿಂದ ನಿಶ್ಚೈಸಲ್ಪಟ್ಟಿಧೆಯೋ ಯಾವದು ಇಂದ್ರಿಯಗಳಿಗೆ ಗೋಚರಿಸಲ್ಪಟ್ಟಿಧೆಯೋ ಯಾವದು ಮನಸ್ಸಿನಿಂದ ಸಂಕಲ್ಪಿಸಲ್ಪಟ್ಟಿಧೆಯೋ ತ್ರಿಗುಣಸ್ವರೂಪವಾದ ಆ ಸಮಸ್ತವೂ ಯಾವ ಪರಮಾತ್ಮನ ಸ್ವರೂಪವಲ್ಲವೋ ಆ ತ್ರಿಗುಣಗಳ ಉತ್ಪತ್ತಿ ಲಯಗಳಿಗೆ ಅಧಿಷ್ಠಾನರೂಪನಾದ ಶ್ರೀಹರಿಗೋಸ್ಕರ ನಮಸ್ಕಾರವು! ವಸ್ತುತಃ ಬ್ರಹ್ಮನಿಗೆ ಸರ್ವಸ್ವರೂಪತ್ವವಿಲ್ಲದಿದ್ದರೂ ಮಾಯೆಯಿಂದ ಸರ್ವಶಬ್ದವಾಚ್ಯನಾದ್ದರಿಂದ ಸರ್ವಪ್ರಪಂಚರೂಪತ್ವವು ಉಂಟಾಗುವದು! ಯಾವ ಅಧಿಕರಣದಲ್ಲಿ ಯಾವ ಉಪಾದಾನದದೆಶೆಯಿಂದ ಯಾವ ಕರಣದಿಂದ ಯಾವ ಸಂಪ್ರದಾನಕ್ಕೋಸ್ಕರ ಅತ್ಯಂತ ಇಷ್ಟವಾದ ಕರ್ಮವನ್ನು ಯಾವಪ್ರಕಾರದಿಂದ ಯಾವವನ ಸಂಬಂಧಿಯಾದ ಸ್ವತಂತ್ರನಾದ ಕರ್ತನು ಮಾಡುತ್ತಲಿಧಾನೋ ಯಾವವನು ಅನ್ಯನಿಂದ ಮಾಡಿಸಲ್ಪಡುತಲಿಧಾನೋ ಅಧಿಕರಣ ಮೊದಲಾದ ಆ ಸಮಸ್ತ ಕಾರಕಾದಿ ಸ್ವರೂಪನಾಗಿ ಸಮಸ್ತ ಪ್ರಪಂಚಕ್ಕೂ ಕಾರಣನಾಗಿ ಸಮಸ್ತಕ್ಕಿಂತಲೂ ಪೂರ್ವದಲ್ಲಿ ಸಿದ್ಧನಾಗಿ ಜಗತ್ಕಾರಣರಾದ ಬ್ರಹ್ಮಾದಿಗಳಿಗೂ ಮನ್ವಾದಿಗಳಿಗೂ ಮೂಲಕಾರಣನಾಗಿ ತನಗಿಂತಲೂ ಅನ್ಯಗಳಾದ ವಿಜಾತೀಯ ಸಜಾತೀಯ ವಸ್ತುಗಳಿಂದ ರಹಿತನಾಗಿರುವ ಯಾವ ಪರಮಾತ್ಮನುಂಟೋ ಅಂಥಾ ಸರ್ವಾತ್ಮನಾದ ಸರ್ವಕಾರಣನಾದ ಅದ್ವಿತೀಯನಾದ ವಾಸುದೇವನಿಗೋಸ್ಕರ ನಮಸ್ಕಾರವು! ಇಂಥಾ ಬ್ರಹ್ಮನೇ ಜಗತ್ಕಾರಣನಾದರೆ ಅನೇಕರಾದ ಶಾಸ್ತ್ರಜ್ಞರು ಸ್ವಭಾವ ಮೊದಲಾದದ್ದೇ ಜಗತ್ಕಾರಣವೆಂದೂ ಮೀಮಾಂಸಕರು ಜಗತ್ತು ನಿತ್ಯವೆಂದೂ ಎಂತು ಪರಸ್ಪರ ವಿವಾದವಂಗೈಯ್ಯುವರೆಂದಲ್ಲಿ: ಯಾವವನ ಮಾಯಾ ಅವಿದ್ಯೆ ಮೊದಲಾದ ಶಕ್ತಿಗಳು ವಾಗ್ಮಿಗಳಾಗಿ ಶಾಸ್ತ್ರಜ್ಞರಾಗಿರುವ ವಾದಿಗಳ ಪರಸ್ಪರ ವಿವಾದಕ್ಕೆ ಬಂದುಕಡೆಯಲ್ಲಿ ಪರಸ್ಪರ ಸಂವಾದಕ್ಕೂ ಸ್ಥಾನಗಳಾಗಿ ಶಾಸ್ತ್ರಜ್ಞರಿಗೆ ಬಾರಿಬಾರಿಗೂ ಚಿತ್ತಮೋಹವನ್ನುಂಟುಮಾಡುತಲಿವೆಯೋ ಅನಂತಗುಣಪರಿಪೂರ್ಣನಾದ ಸರ್ವವ್ಯಾಪಕನಾದ ಅಂಥಾ ವಾಸುದೇವನಿಗೋಸ್ಕರ ಉಪಾಸನಾಶಾಸ್ತ್ರದಲ್ಲಿ ವಿರಾಡ್ರೂಪನಾಗಿ ಉಪಾಸನಾಕ್ರಮದಲ್ಲಿ ಉಪಾಸ್ಯನಾಗಿ ಈಶ್ವರನಿಗೆ ಪಾತಾಳಾದಿ ಲೋಕಗಳೇ ಪಾದ ಮೊದಲಾದ ಅವಯವಗಳೆಂದು ಈಶ್ವರನಲ್ಲಿ ಪಾದಾದಿಗಳು ಕಲ್ಪಿಸಲ್ಪಡುತಲಿವೆ; ಜ್ಞಾನಶಾಸ್ತ್ರದಲ್ಲಿ ಈಶ್ವರನಿಗೆ ಪಾದಾದಿಗಳಿಲ್ಲವೆಂದು ನಿಷೇಧಿಸಲ್ಪಡುತಲಿವೆಯಾದಕಾರಣ ಪಾದಾದಿಗಳು ಉಂಟೆಂದೂ ಇಲ್ಲವೆಂದೂ ಬಬ್ಬ ಬ್ರಹ್ಮನಲ್ಲೇ ಕಲ್ಪಿತಗಳಾಗಿ ಪ್ರತ್ಯೇಕ ವಿಷಯಗಳುಳ್ಳವಾದರೆ ಪರಸ್ಪರ ವಿರೋಧವಿಲ್ಲದಿರುವದಾದಕಾರಣ ಒಂದು ವಸ್ತುವನ್ನೇ ವಿಷಯೀಕರಿಸುವರಾಗಿ ಪ್ರತ್ಯೇಕಗಳಾಗಿ ಪರಸ್ಪರ ವಿರುದ್ಧಗಳಾಗಿರುವ ಪಾದಾದಿ ಯುಕ್ತತ್ವ ಪಾದಾದಿ ರಹಿತತ್ವಗಳೆಂಬ ಧರ್ಮಗಳುಳ್ಳ ಉಪಾಸನಾಶಾಸ್ತ್ರ ಜ್ಞಾನಶಾಸ್ತ್ರಗಳಲ್ಲಿ ಯಾವ ಪರಮಾತ್ಮನೂ ವಿಧಿನಿಷೇಧಗಳಿಗೆ ಪಾದಾದಿಗಳೇ ವಿಷಯಗಳಾಗುವವೇ ಹೊರ್ತು ತಾನು ವಿಷಯನಲ್ಲದಿರುವದಾದಕಾರಣ ಸರ್ವತ್ರ ಅನುವರ್ತಿಸಿಕೊಂಡು ತೋರುವನಾಗಿ ವಿಧಿನಿಷೇಧಗಳು ಅಧಿಷ್ಠಾನವನ್ನು ಹೊರ್ತು ಉಂಟಾಗಲಾರದಾದಕಾರಣ ಅದಕ್ಕೆ ಅಧಿಷ್ಠಾನರೂಪದಿಂದ ಸಿದ್ಧನಾಗಿ ಅಪರಿಚ್ಛಿನ್ನನಾಗಿ ಸರ್ವಪ್ರಕಾಶಕನಾಗಿ ತಾನು ವಿವಾದಾಸ್ಪದನಾಗದಿರುವನೋ ಅಂಥಾ ಬ್ರಹ್ಮಸ್ವರೂಪನಾದ ಶ್ರೀ ವಾಸುದೇವನಿಗೋಸ್ಕರ ನಮಸ್ಕಾರವು! ಯಾವ ಶ್ರೀಹರಿಯು ತಾನು ಪ್ರಾಕೃತಗಳಾದ ನಾಮರೂಪಗಳಿಂದ ರಹಿತನಾದಾಗ್ಯೂ ತನ್ನ ಪಾದಾರವಿಂದವನ್ನು ಭಜಿಸುವ ಪುರುಷರನ್ನು ಅನುಗ್ರಹಿಸಲೋಸುಗ ಅವತಾರಗಳಿಂದ ಶುದ್ಧಸತ್ವಮಯಗಳಾದ ರೂಪಗಳನ್ನು ತನ್ನ ಕರ್ಮಗಳಿಂದ ಅನೇಕ ನಾಮಗಳನ್ನು ಸಹ ಐದಿದವನಾದನೋ ಅಂಥಾ ಚಿಂತಿಸಲಶಕ್ಯವಾದ ಸಾಮರ್ಥ್ಯವುಳ್ಳ ಅಪರಿಚ್ಛಿನ್ನನಾದ ಭಗವಂತನಾದ ಪರಮಾತ್ಮನು ನನಗೆ ಪ್ರಸನ್ನನಾಗಲಿ; ಯಾವರೀತಿಯಿಂದ ವಾಯುವು ಚಂಪಕಾದಿ ಪುಷ್ಪಗಂಧವ

ನ್ನಾಶ್ರಯಿಸಿ ನಾನಾವಿಧ ಗಂಧವುಳ್ಳಂಥಾದ್ದಾಗಿ ತೋರುವದೋ ಯಾವರೀತಿ ವಾಯುವು ಆ ಪುಷ್ಪರಜಸ್ಸುಗಳ ಧೂಸರತ್ವಾದಿ ಧರ್ಮಗಳನ್ನಾಶ್ರಯಿಸಿ ತಾನೂ ನಾನಾರೂಪಗಳೊಡನೆ ಯುಕ್ತವಾಗಿ ತೋರುವದೋ ಅದೇರೀತಿ ಯಾವ ಹರಿಯು ನಿಕೃಷ್ಟಗಳಾದ ಉಪಾಸನಾಮಾರ್ಗಗಳಿಂದ ಅವರವರ ಉಪಾಸನಾನುಸಾರದಿಂದ ಪುರುಷರ ದೇಹಗಳಲ್ಲಿ ಅಂತರ್ಯಾಮಿಯಾಗಿ ಅವರವರಿಗೆ ಇಷ್ಟಗಳಾದ ದೇವತೆಗಳ ಸ್ವರೂಪಗಳಿಂದ ಹೃದಯದಲ್ಲಿ ತೋರುತಲಿಧಾನೋ ಸಕಲ ದೇವತಾರೂಪದಿಂದ ಫಲವನ್ನೀವ ಅಂಥಾ ಈಶ್ವರನಾದ ಶ್ರೀಹರಿಯೇ ನನ್ನ ಮನೋರಥವನ್ನು ಸತ್ಯವನ್ನಾಗಿ ಮಾಡಲಿ ಎಂಬದಾಗಿ ಅಘಮರ್ಷಣವೆಂಬ ತೀರ್ಥದ ಸಮೀಪದಲ್ಲಿ ಈರೀತಿ ಸ್ತೋತ್ರಮಾಡುತಲಿರುವ ಆ ದಕ್ಷಪ್ರಜೇಶನಿಗೆ ಭಕ್ತವತ್ಸಲನಾದ ಭಗವಂತನು ಗರುಡನ ಹೆಗಲಿನಲ್ಲಿ ಇರಿಸಲ್ಪಟ್ಟ ಪಾದಗಳುಳ್ಳವನಾಗಿ ದೀರ್ಘಗಳಾದ ಅಷ್ಟಭುಜಗಳುಳ್ಳವನಾಗಿ ಆ ಅಷ್ಟಭುಜಗಳಿಂದ ಚಕ್ರ ಶಂಖ ಚರ್ಮ ಬಾಣ ಧನುಃ ಪಾಶ ಗದೆ ಖಡ್ಗಗಳನ್ನು ಧರಿಸಿದವನಾಗಿ ಪೀತಾಂಬರವನ್ನುಟ್ಟವನಾಗಿ ಮೇಘದಂತೆ ಶ್ಯಾಮವರ್ಣನಾಗಿ ನೋಟದಲ್ಲಿ ಪ್ರಸನ್ನವಾದ ಮುಖವುಳ್ಳವನಾಗಿ ವನಮಾಲೆಯಿಂದ ಹೊಳೆಯುತಲಿರುವ ಸಮಸ್ತಾವಯವಗಳುಳ್ಳವನಾಗಿ ವಕ್ಷಸ್ಥಳದಲ್ಲಿ ಪ್ರಕಾಶಿಸುತಲಿರುವ ಶ್ರೀವತ್ಸವೆಂಬ ಚಿನ್ಹೆಯೂ ಕೌಸ್ತುಭವೆಂಬ ಮಾಣಿಕ್ಯವೂ ಉಳ್ಳವನಾಗಿ ಉನ್ನತವಾದ ಕಿರೀಟವೂ ಹಸ್ತಕಡಗಗಳೂ ಉಳ್ಳವನಾಗಿ ದೇದೀಪ್ಯಮಾನಗಳಾದ ಮಕರಕುಂಡಲಗಳುಳ್ಳವನಾಗಿ ಒಡ್ಯಾಣ ಅಂಗುಳ್ಯಾಭರಣಗಳು ಕಾಲುಕಡಗಗಳು ತೋಳುಬಂದಿಗಳು ಇವೇ ಮೊದಲಾಗುಳ್ಳ ಆಭರಣಗಳಿಂದ ಹೊಳೆಯುವವನಾಗಿರುವ ಶ್ರೀಹರಿಯು ಈರೀತಿ ಮೂರು ಲೋಕಗಳಿಗೂ ಮೋಹಕರವಾದ ಪುರುಷೋತ್ತಮನೆಂಬ ಮೂರ್ತಿಯನ್ನು ಧರಿಸುತಲಿರುವವನಾಗಿ ನಾರದ ಸನಕಾದಿಗಳಿಂದಲೂ ವಿಷ್ವಕ್ಸೇನಾದಿ ಗಣಪಾಲಕರಿಂದಲೂ ಬ್ರಹ್ಮಾದಿ ದೇವತೆಗಳಿಂದಲೂ ಸೇವಿಸಲ್ಪಡುವವನಾಗಿ ಗಾನಮಾಡುತಲಿರುವ ಸಿದ್ಧ ಗಂಧರ್ವ ಚಾರಣರಿಂದ ಸ್ತುತಿಸಲ್ಪಡುವವನಾಗಿ ಪ್ರತ್ಯಕ್ಷನಾದನು ; ಆಗ ದಕ್ಷನು ಆಶ್ಚರ್ಯಕರವಾದ ಭಗವಂತನ ಆ ದಿವ್ಯರೂಪವನ್ನು ಕಂಡು ಆಶ್ಚರ್ಯಯುಕ್ತನಾಗಿ ಅತಿ ಸಂತುಷ್ಟವಾದ ಮನಸ್ಸುಳ್ಳವನಾಗಿ ದಂಡದಂತೆ ಭೂಮಿಯಲ್ಲಿ ಸಾಷ್ಟಾಂಗ ನಮಸ್ಕಾರವನ್ನು ಮಾಡಿದನು ; ಆ ಸಮಯದಲ್ಲಿ ದಕ್ಷನು ಅತಿ ಶೀಘ್ರವಾಗಿ ಪರ್ವತಗಳಿಂದ ಬರುತಲಿರುವ ಪ್ರವಾಹಗಳಿಂದ ನದಿಯಂತೆ ಅತಿ ವೇಗಯುಕ್ತವಾದ ಸಂತೋಷದಿಂದ ಪೂರಿಸಲ್ಪಟ್ಟ ವಾಗಾದಿ ಸಮಸ್ತ ಇಂದ್ರಿಯಗಳಿಂದ ಸ್ವಲ್ಪವಾಗಿಯಾದರೂ ನುಡಿಯಲು ಸಮರ್ಥನಾಗಲಿಲ್ಲ ; ಅನಂತರದಲ್ಲಿ ಸಕಲ ಭೂತಗಳ ತಾತ್ಪರ್ಯವನ್ನು ತಿಳಿಯುತಲಿರುವ ಶ್ರೀ ಪುರುಷೋತ್ತಮನು ಆರೀತಿ ನಮಸ್ಕರಿಸುತಲಿರುವ ಪ್ರಜಾಸೃಷ್ಟಿಯನ್ನು ಮಾಡಲಿಚ್ಛೆಯುಳ್ಳ ಭಕ್ತನಾದ ಆ ದಕ್ಷನನ್ನು ಕುರಿತು 'ಎಲೈ ಪ್ರಚೇತಸ್ಸರಿಗೆ ಪುತ್ರನಾದ ಪುಣ್ಯಶಾಲಿಯಾದ ದಕ್ಷನೆ, ಯಾವ ಕಾರಣದಿಂದ ನನ್ನಲ್ಲಿ ಆಸಕ್ತವಾದ ಶ್ರದ್ಧೆಯಿಂದ ನೀನು ನನ್ನಲ್ಲಿ ಪರಮ ಭಕ್ತಿಯನ್ನು ಹೊಂದಿದವನಾದೆಯೋ ಅದುಕಾರಣ ನೀನು ತಪಸ್ಸಿದ್ಧಿಯನ್ನು ಚನ್ನಾಗಿ ಪಡದವನಾದೆ ; ನೀನು ಯಾವಕಾರಣ ಪ್ರಜಾಸೃಷ್ಟಿಯಿಂದ ಈ ಪ್ರಪಂಚವನ್ನು ವೃದ್ಧಿಹೊಂದಿಸಲೋಸುಗ ತಪಸ್ಸಂಗೈದೆಯೋ ಅದುಕಾರಣ ನಿನ್ನಲ್ಲಿ ನಾನು ಪ್ರೀತಿಯುಕ್ತನಾದೆನು ; ಪ್ರಜೆಗಳು ವೃದ್ಧಿಹೊಂದುವದ್ಯಾವದುಂಟೋ ಆ ಪ್ರಜಾಸೃಷ್ಟಿಯೇ ನನಿಗೆ ಅತ್ಯಂತ ಇಷ್ಟವಾದದ್ದು ; ಅಂಥಾ ನನ್ನ ಇಷ್ಟಾರ್ಥವನ್ನು ನೀನು ಉಂಟುಮಾಡಿದವನಾದೆ ; ಆದಕಾರಣ ನಿನಗೆ ನಾನು ಪ್ರಸನ್ನನಾದೆನು ! ಎಲೈ ದಕ್ಷನೆ, ಚತುರ್ಮುಖನು ರುದ್ರನು ಪ್ರಜೇಶ್ವರರಾದ ಮರೀಚಿ ಮೊದಲಾದ ನೀವು ಮನುಗಳು ದೇವಶ್ರೇಷ್ಠರಾದ ನನ್ನ ವಿಭೂತಿ ಮೂರ್ತಿಗಳಾದ ದೇವತಾಶ್ರೇಷ್ಠರು ಪ್ರಜೆಗಳ ಸೃಷ್ಟಿಗೆ ಕಾರಣಭೂತರಾದಕಾರಣ ನೀವು ಪ್ರಜೆಗಳನ್ನು ಸೃಷ್ಟಿಸುವದು ಉಚಿತವೇ ಸರಿ ; ಯಮ ನಿಯಮಗಳೊಡನೆ ಯುಕ್ತವಾದ ಧ್ಯಾನವೇ ನನ್ನ ಹೃದಯವು, ಮಂತ್ರಜಪದೊಡನೆ ಯುಕ್ತವಾದ ಧ್ಯಾನವೇ ನನ್ನ ದೇಹವು ; ಧ್ಯಾನಾದಿವಿಷಯದಲ್ಲಿ ಪುರುಷವ್ಯಾಪಾರವೇ ನನ್ನ ಪ್ರಯತ್ನವು ; ವಿಧ್ಯುಕ್ತವಾಗಿ ಅನುಷ್ಠಾನಗೈಯಲ್ಪಟ್ಟ ಕ್ರಮಗಳೇ ನನ್ನ ಅವಯವಗಳು ; ಆ ಕ್ರತುಗಳಿಂದ ಪುಟ್ಟಿದ ವಿಶೇಷಗಳೇ ನನ್ನ ಆತ್ಮನು ; ಆ ಕ್ರತುಗಳಲ್ಲಿ ಹವಿಸ್ಸು ಮೊದಲಾದ ದ್ರವ್ಯಗಳನ್ನು ಭಕ್ಷಿಸುವ ಇಂದ್ರಾದಿ ದೇವತೆಗಳೇ ನನ್ನ ಪ್ರಾಣಗಳು ; ಸಂತಾನವೃದ್ಧಿಗೆ ತಪಸ್ಸೇ ಮುಖ್ಯಸಾಧನವೆಂಬ ಅರ್ಥವನ್ನು ಉಪಾಖ್ಯಾನಮುಖದಿಂದ ಭಗವಂತನು ಉಪದೇಶಗೈದ

ನು! ಎಲೈ ದಕ್ಷನೆ, ಪ್ರಪಂಚಸೃಷ್ಟಿಗೆ ಪೂರ್ವಕಾಲದಲ್ಲಿ ಮತ್ತೊಂದು ವಸ್ತುವಿಲ್ಲದೆ ಮತ್ತೊಂದು ವ್ಯಾಪಾರವಿಲ್ಲದೆ ನಾನೊಬ್ಬನೇ ಇದ್ದೆನು; ನನಿಗಿಂತಲೂ ಮತ್ತೊಂದು ಗ್ರಾಹಕವಾದದ್ದೂ ಗ್ರಾಹ್ಯವಾದದ್ದೂ ಸ್ವಲ್ಪವಾದರೂ ಇಲ್ಲ; ನಾನು ಕೇವಲ ಚೈತನ್ಯಸ್ವರೂಪನಾಗಿ ಇಂದ್ರಿಯ ವೃತ್ತಿಗಳಿಂದ ಗ್ರಹಿಸಲ್ಪಡುವವನಾಗದಿರುವಕಾರಣ ಸರ್ವತ್ರ ನಿದ್ರೆಗೈಯುವನಂತಿದ್ದೆನು; ಅನಂತಗುಣ ಪರಿಪೂರ್ಣನಾದ ಅಪರಿಚ್ಛಿನ್ನನಾದ ನನ್ನಲ್ಲಿ ಮಾಯಾಗುಣಗಳಿಂದ ಯಾವಸಮಯದಲ್ಲಿ ಗುಣಮಯವಾದ ನನ್ನ ಶರೀರರೂಪವಾದ ಯಾವಬ್ರಹ್ಮಾಂಡವು ಉತ್ಪನ್ನವಾಯಿತೋ ಆ ಸಮಯದಲ್ಲಿ ಬ್ರಹ್ಮಾಂಡದ ದೆಶೆಯಿಂದಲೇ ಅಯೋನಿಜನಾದ ಬ್ರಹ್ಮದೇವನು ಆವಿರ್ಭವಿಸಿದನು; ನನ್ನ ಶಕ್ತಿವಿಶೇಷದಿಂದ ಪ್ರೇರಿಸಲ್ಪಟ್ಟವನಾದಕಾರಣ ಆ ಬ್ರಹ್ಮದೇವನು ಸೃಷ್ಟಿಯಲ್ಲಿ ಉದ್ಯುಕ್ತನಾಗಿ ಯಾವಸಮಯದಲ್ಲಿ ತನ್ನನ್ನು ಪ್ರಪಂಚಸೃಷ್ಟಿಯಲ್ಲಿ ಅಸಮರ್ಥನನ್ನಾಗಿ ತಿಳಿಯುವನೋ ಆ ಸಮಯದಲ್ಲಿ ನನ್ನನ್ನು ಕುರಿತು ತಪಸ್ಸಂಗೈಯುವನಾಗೆಂದು ಪ್ರೇರಿಸಲ್ಪಟ್ಟವನಾಗಿ ಉತ್ಕೃಷ್ಟವಾದ ತಪಸ್ಸಂಗೈದನು; ಆ ಬ್ರಹ್ಮದೇವನು ಆ ತಪಃಪ್ರಭಾವದಿಂದ ಮೊದಲು ನವಪ್ರಜೇಶ್ವರರಾದ ನಿಮ್ಮನ್ನು ಸೃಜಿಸಿದನು! ಎಲೈ ದಕ್ಷನೆ, ಪಂಚಜನೆಂಬ ಪ್ರಜೇಶ್ವರನ ಪುತ್ರಿಯಾದ ಅಸಿಕ್ನಿಯೆಂಬ ಕನ್ಯೆಯನ್ನು ನೀನು ಪತ್ನಿಭಾವದಿಂದ ಪರಿಗ್ರಹಿಸು; ನೀನು ರತಿವ್ಯಾಪಾರವೆಂಬ ಧರ್ಮವುಳ್ಳ ಅಸಿಕ್ನಿದೇವಿಯಲ್ಲಿ ಪ್ರಜಾಸೃಷ್ಟಿಯನ್ನು ಪುನಹಾ ಪ್ರಚುರಮಾಡು; ನಿನಗಿಂತಲೂ ಈ ಪ್ರಜೆಗಳು ಸ್ತ್ರೀರೂಪವಾದ ನನ್ನ ಮಾಯೆಯೊಡನೆ ಕೂಡಿ ರತಿವ್ಯಾಪಾರದಿಂದಲೇ ಸಂತಾನವೃದ್ಧಿಯನ್ನೂ ನನ್ನ ಪೂಜೆಯನ್ನೂ ಮಾಡುವವರಾಗುತ್ತಾರೆ' ಎಂದು ಸಕಲಪ್ರಪಂಚಕ್ಕೂ ಮೂಲಕಾರಣನಾದ ಭಗವಂತನು ದಕ್ಷಪ್ರಜೇಶ್ವರನನ್ನು ಕುರಿತು ಆಜ್ಞಾಪಿಸಿ ದಕ್ಷನು ನೋಡುತ್ತಿರಲು ಸ್ವಪ್ನದಲ್ಲಿ ಲಬ್ಧವಾದ ವಸ್ತುವಿನಂತೆ ಅಲ್ಲೇ ಅಂತರ್ಧಾನವನ್ನೈದಿದನು."

೫ನೇ ಅಧ್ಯಾಯ.

ದಕ್ಷನು ನಾರದಮುನಿಯನ್ನು ಶಪಿಸಿದ್ದು.

"ಎಲೈ ಪರೀಕ್ಷಿದ್ರಾಯನೇ ಕೇಳು: ಅನಂತರದಲ್ಲಿ ಆ ದಕ್ಷನು ವಿಷ್ಣುಮಾಯೆಯಿಂದ ಪ್ರೇರಿಸಲ್ಪಟ್ಟವನಾಗಿ ಪಂಚಜನಪುತ್ರಿಯಾದ ಆ ಅಸಿಕ್ನಿದೇವಿಯಲ್ಲಿ ಹರ್ಯಶ್ವರೆಂಬ ನಾಮಧೇಯವುಳ್ಳ ಹತ್ತುಸಾವಿರಮಂದಿ ಪುತ್ರರನ್ನು ಪಡೆದನು; ಏಕಪ್ರಕಾರವಾದ ಆಚಾರವು ಸ್ವಭಾವವೂ ಉಳ್ಳ ಆ ದಕ್ಷಪುತ್ರರು ಪ್ರಜಾಸೃಷ್ಟಿಗೋಸುಗ ತಂದೆಯಿಂದ ಆಜ್ಞಾಪಿಸಲ್ಪಟ್ಟವರಾಗಿ ಪಶ್ಚಿಮದಿಕ್ಕನ್ನು ಕುರಿತು ತೆರಳಿ ಆ ದಿಕ್ಕಿನಲ್ಲಿ ಸಿಂಧುವೆಂಬ ನದಿಗೂ ಸಮುದ್ರಕ್ಕೂ ಎಲ್ಲಿ ಸಂಗಮವುಂಟಾಗಿದೆಯೋ ಆ ಸಂಗಮಸ್ಥಾನದಲ್ಲಿರುವ ಅತಿ ವಿಸ್ತೃತವಾದ ಮುನಿಗಳಿಂದಲೂ ಸಿದ್ಧರಿಂದಲೂ ಸೇವಿಸಲ್ಪಟ್ಟ ನಾರಾಯಣಸರಸ್ಸೆಂಬ ತೀರ್ಥವನ್ನು ಐದಿದರು; ಹತ್ತುಸಾವಿರ ಮಂದಿಯಾದ ಆ ಹರ್ಯಶ್ವರೆಂಬ ದಕ್ಷಪುತ್ರರು ಆ ನಾರಾಯಣಸರಸ್ಸಿನಲ್ಲಿ ಮಾಡಲ್ಪಟ್ಟ ಸ್ನಾನಾಚಮನಮಾತ್ರದಿಂದಲೇ ಪರಿಹರಿಸಲ್ಪಟ್ಟ ರಾಗಾದಿದೋಷಗಳುಳ್ಳ ಅಂತಃಕರಣವುಳ್ಳವರಾಗಿ ಪರಮಹಂಸಧರ್ಮದಲ್ಲಿ ವಿಶೇಷವಾಗಿ ಪುಟ್ಟಿದ ಬುದ್ಧಿಯುಳ್ಳವರಾದಾಗ್ಯೂ ತಂದೆಯ ಆಜ್ಞೆಯಿಂದ ಬದ್ಧರಾಗಿ ಸಂತಾನವೃದ್ಧಿಗೋಸ್ಕರ ತೀಕ್ಷ್ಣವಾದ ತಪಸ್ಸಂಗೈದರು; ಆ ಸಮಯದಲ್ಲಿ ಪ್ರಜಾವೃದ್ಧಿಗೋಸ್ಕರ ಉದ್ಯುಕ್ತರಾಗಿರುವ ಆ ದಕ್ಷಪುತ್ರರನ್ನು ದೇವಋಷಿಯಾದ ನಾರದಮುನಿಯು ಕಂಡು ಈ ದಕ್ಷಪುತ್ರರು ಮೋಕ್ಷಕ್ಕೆ ಅಧಿಕಾರಿಗಳಾದಾಗ್ಯೂ ಪ್ರವೃತ್ತಿಮಾರ್ಗಗಳಾದ ಕರ್ಮಗಳಿಂದ ವ್ಯರ್ಥರಾಗುವರೆಂದು ದಯೆಯಿಂದ ಅವರನ್ನು ಕುರಿತು ಗೂಢಾರ್ಥಗಳುಳ್ಳ ವಚನಗಳಿಂದ 'ಎಲೈ ಹರ್ಯಶ್ವರರೇ ಕೇಳಿ: ನೀವು ಬಾಲಕರಾದ್ದರಿಂದ ಅಜ್ಞಾನಿಗಳಾಗಿ ಭೂಮಿಯ ಅಂತವನ್ನು ಕಾಣದೆ ಒಬ್ಬನೇ ಪುರುಷನಾಗುಳ್ಳ ರಾಷ್ಟ್ರವನ್ನು ನಿರ್ಗಮನವಿಲ್ಲದಿರುವ ಬಿಲವನ್ನು ನಾನಾವಿಧರೂಪಗಳುಳ್ಳ ಸ್ತ್ರೀಯನ್ನು ವ್ಯಭಿಚಾರಿಣಿಯಾದ ಸ್ತ್ರೀಗೆ ಪತಿಯಾದ ಪುರುಷನನ್ನು ಎರಡು ಪಾರ್ಶ್ವಗಳಲ್ಲೂ ಪ್ರವಹಿಸುತಲಿರುವ ನದಿಯನ್ನು ಆಶ್ಚರ್ಯಕರವಾದ ಇಪ್ಪತ್ತೈದು ಪದಾರ್ಥಗಳಿಗೆ ಆವಾಸಸ್ಥಾನವಾದ ಗೃಹವನ್ನು ಒಂದು ಕಡೆಯಲ್ಲಿ ವಿಚಿತ್ರಗಳಾದ ಕದಗಳುಳ್ಳ ಹಂಸಪಕ್ಷಿಯನ್ನು ಕ್ಷುರಗಳಿಂದಲೂ

ವಜ್ರಗಳಿಂದಲೂ ನಿರ್ಮಿಸಲ್ಪಟ್ಟಂಥಾದ್ದಾಗಿ ತೀಕ್ಷ್ಣವಾಗಿ ದೃಢವಾಗಿರುವ ಸ್ವತಂತ್ರವಾದ ಭ್ರಮಣವೇ ಸ್ವಭಾವವಾಗುಳ್ಳ ವಸ್ತುವನ್ನು ಅರಿಯದೆ ನೀವು ಸರ್ವಜ್ಞನಾದ ನಿಮ್ಮ ತಂದೆಯು ಉಪದೇಶವನ್ನು ನಿಮಗೆ ಅನುಗುಣವನ್ನಾಗಿ ತಿಳಿಯದೆ ಕಟಕಟಾ ಎಂತು ಪ್ರಜಾಸೃಷ್ಟಿಯನ್ನು ಮಾಡುವರಾದೀರಿ' ಎಂಬ ಪರೋಕ್ಷವಾದ ತಾತ್ಪರ್ಯಾರ್ಥವಿರುವಂತೆ ತೋರುತಲಿರುವ ನಾರದಮುನಿಯಿಂದ ಪೇಳಲ್ಪಟ್ಟ ಹತ್ತು ವಾಕ್ಯಗಳಿಗೆ ಉತ್ಪತ್ತಿಸಿದ್ಧವಾದ ವಿಚಾರಶಕ್ತಿಯುಳ್ಳ ತಮ್ಮ ಬುದ್ಧಿಯಿಂದ ಈಪ್ರಕಾರವಾಗಿ ಅರ್ಥಗಳನ್ನು ನಿರ್ಣಯಿಸಿದರು; ಜೀವನಾಮಕವಾಗಿ ಆತ್ಮನಿಗೆ ಬಂಧಕಾರಣವಾಗಿರುವ ಯಾವ ಲಿಂಗಶರೀರವುಂಟೋ ಆ ಲಿಂಗಶರೀರವೇ ಭೂಮಿಯು ಶಬ್ದಕ್ಕೆ ಅರ್ಥವು; ಒಬ್ಬನೇ ಪುರುಷನೆಂಬುವದಕ್ಕೆ ಸರ್ವಸಾಕ್ಷಿಯಾಗಿ ತಾನೇ ತನಗೆ ಆಧಾರನಾಗಿ ಭಗವಂತನಾಗಿ ಸರ್ವಾತೀತನಾಗಿರುವ ಈಶ್ವರನೊಬ್ಬನೇ ಸ್ತೋತ್ರಂಗೈಯಲು ಯೋಗ್ಯನು; ಅಂಥಾ ಈಶ್ವರನನ್ನು ಕಾಣದೆ ಈಶ್ವರನಿಗೆ ಸಮರ್ಪಿಸಲ್ಪಡದಿರುವ ತುಚ್ಛಗಳಾದ ಕರ್ಮಗಳಿಂದ ಪುರುಷನಿಗೆ ನಿತ್ಯಮುಕ್ತತ್ವ ಉಂಟಾಗಲಾರದೆಂಬ ಅರ್ಥವು; ನಿರ್ಗಮನವಿಲ್ಲದಿರುವ ಬಿಲವೆಂಬದಕ್ಕೆ ಪುರುಷನು ಯಾವ ಬ್ರಹ್ಮನನ್ನು ಹೊಂದಿ ಮಹಾಬಿಲರೂಪವಾದ ಪಾತಾಳವನ್ನು ಹೊಂದಿದವನಂತೆ ತಿರಿಗಿ ಬರದೆ ಹೋಗುವನೋ ಪ್ರತ್ಯಗ್ಜ್ಯೋತಿಸ್ವರೂಪನಾದ ಅಂಥಾ ಬ್ರಹ್ಮನನ್ನು ತಿಳಿಯದಿರುವ ಪುರುಷರಿಗೆ ಈ ನಶ್ವರಗಳಾದ ಸ್ವರ್ಗಾದಿಗಳಿಗೆ ಸಾಧನಗಳಾದ ಕರ್ಮಗಳಿಂದ ಯಾವ ಪುರುಷಾರ್ಥವುಂಟಾದೀತು ಎಂಬ ಅರ್ಥವು; ನಾನಾವಿಧರೂಪಗಳುಳ್ಳ ಸ್ತ್ರೀಯೆಂಬದಕ್ಕೆ ನಾನಾವಿಧರೂಪಗಳುಳ್ಳ ಬುದ್ಧಿಯು ವ್ಯಭಿಚಾರಿಣಿಯಂತೆ ಆತ್ಮನಿಗೆ ಅತಿ ಮೋಹಕಗಳಾದ ಸತ್ವಾದಿಗುಣಗಳೊಡನೆ ಯುಕ್ತವಾಗಿದೆಯಾದಕಾರಣ ಆ ಬುದ್ಧಿಗೆ ಪರ್ಯವಸಾನರೂಪವಾದ ವಿವೇಕವನ್ನು ಹೊಂದದಿರುವ ಪುರುಷನಿಗೆ ಅಶಾಶ್ವತಗಳಾದ ಕರ್ಮಗಳಿಂದೇನು ಫಲವೆಂಬ ಅರ್ಥವು; ವ್ಯಭಿಚಾರಿಣಿಗೆ ಪತಿಯಾದ ಪುರುಷನೆಂಬದಕ್ಕೆ ದುಷ್ಟಳಾದ ಪತ್ನಿಯುಳ್ಳ ಪುರುಷನು ಯಾವರೀತಿ ಸ್ವಾತಂತ್ರ್ಯವಿಲ್ಲದವನಾಗಿ ದುಷ್ಟಳಾದ ಆ ಪತ್ನಿಯನ್ನನುಸರಿಸಿ ದುಃಖಾದಿಗಳನ್ನೈದುವನೋ ಆರೀತಿ ಅಂಥಾ ಬುದ್ಧಿಯ ಸಂಗದಿಂದ ನಷ್ಟವಾದ ಸ್ವಾತಂತ್ರ್ಯವುಳ್ಳವನಾಗಿ ಆ ಬುದ್ಧಿಯ ಸುಖದುಃಖರೂಪಗಳಾದ ಗತಿಗಳನ್ನು ಹೊಂದುತಲಿರುವ ಜೀವನನ್ನು ಅರಿಯದಿರುವ ಪುರುಷನಿಗೆ ಅವಿವೇಕದಿಂದ ಪ್ರಾಪ್ತಗಳಾದ ಕರ್ಮಗಳಿಂದ ಈ ಲೋಕದಲ್ಲಿ ಏನು ಫಲವೆಂಬ ಅರ್ಥವು; ಎರಡುಪ್ರಕಾರವಾಗಿ ಪ್ರವಹಿಸುತಲಿರುವ ನದಿಯೆಂಬದಕ್ಕೆ ಉಭಯಮುಖದಿಂದ ಸೃಷ್ಟಿಪ್ರಳಯಗಳನ್ನು ಮಾಡುವದಾಗಿ ತಡಿಗಳಂತೆ ನಿರ್ಗಮನಸ್ಥಾನರೂಪಗಳಾದ ತಪೋವಿದ್ಯಾದಿಗಳ ಸಮೀಪದಲ್ಲಿ ನದಿಯಂತೆ ನಿರ್ಗಮನಕ್ಕೆ ಪ್ರತಿಬಂಧವನ್ನು ಮಾಡಲೋಸುಗ ಕ್ರೋಧ ಅಹಂಕಾರಾದಿಗಳಿಂದ ಅತಿ ವೇಗವನ್ನು ಮಾಡುತಲಿರುವ ಮಾಯೆಯನ್ನು ಅದರ ವೇಗದಿಂದ ಪರವಶನಾದ್ದರಿಂದ ವಿಚಾರಿಸುವನಾಗದಿರುವ ಪುರುಷನಿಗೆ ಯಾವ ಕಲ್ಪಿತಗಳಾದ ಕರ್ಮಗಳಿಂದ ಭೂಲೋಕದಲ್ಲಿ ಏನೂ ಫಲವಿಲ್ಲವೆಂಬ ಅರ್ಥವು; ಇಪ್ಪತ್ತೈದು ಪದಾರ್ಥಗಳಿಗೆ ಆವಾಸಸ್ಥಾನವಾದ ಗೃಹವೆಂಬದಕ್ಕೆ ಪ್ರಕೃತಿ ಮೊದಲಾದ ಇಪ್ಪತ್ತೈದು ತತ್ವಗಳಿಗೆ ಆತ್ಮನು ಅಂತರ್ಯಾಮಿಯಾಗಿ ಆಶ್ಚರ್ಯಕರವಾದ ಆವಾಸಸ್ಥಾನರೂಪವಾಗಿಧಾನೆಯಾದಕಾರಣ ಕಾರ್ಯಾಕಾರಣಗಳ ಸಂಘಕ್ಕೆ ಅಧ್ಯಕ್ಷನಾಗಿರುವ ಅಂಥಾ ಪರಮಾತ್ಮನನ್ನರಿಯದಿರುವ ಪುರುಷನಿಗೆ ಮಿಥ್ಯಾಭೂತಗಳಾದ ಕರ್ಮಗಳಿಂದೇನು ಫಲವು ಎಂಬ ಅರ್ಥವು; ಬಂದುಕಡೆಯುಳ್ಳ ಹಂಸಪಕ್ಷಿಯೆಂಬದಕ್ಕೆ ಈಶ್ವರಪ್ರತಿಪಾದಕವಾಗಿ ಬಂಧಮೋಕ್ಷಗಳ ಸ್ವರೂಪವನ್ನು ರೂಪಿಸುವದಾಗಿ ಚಿಜ್ಜಡರೂಪವಾದ 'ವಸ್ತುವನ್ನು ವಿಭಾಗಂಗೈಯ್ಯುವದಾಗಿರುವ ಶಾಸ್ತ್ರವನ್ನು ಅಭ್ಯಾಸಂಗೈದವನಾಗದಿರುವ ಅಜ್ಞಾನಿಯಾದ ಪುರುಷನಿಗೆ ಬಹಿರ್ಮುಖಗಳಾದ ಕರ್ಮಗಳಿಂದೇನು ಪುರುಷಾರ್ಥವೆಂಬ ಅರ್ಥವು; ಭ್ರಮಣಸ್ವರೂಪವಾಗಿರುವ ವಸ್ತುವೆಂಬದಕ್ಕೆ ನಿರಂತರದಲ್ಲಿಯೂ ಸುತ್ತುವದಾಗಿ ತೀಕ್ಷ್ಣವಾಗಿ ಸಮಸ್ತವಾದ ಜಗತ್ತನ್ನು ಮರೆಯುತಲಿರುವ ಸ್ವತಂತ್ರವಾದ ಕಾಲಚಕ್ರವನ್ನು ಅರಿಯದಿರುವ ಪುರುಷನಿಗೆ ತುಚ್ಛಗಳಾದ ಕಾಮ್ಯಕರ್ಮಗಳಿಂದ ಏನು ಫಲವುಂಟಾಗುವದೆಂಬ ಅರ್ಥವು; ತಂದೆಯು ಉಪದೇಶವನ್ನರಿಯದಿರುವ ನೀವೆಂಬದಕ್ಕೆ ಉಪನಯನರೂಪವಾದ ಎರಡನೆಯ ಜನ್ಮಕ್ಕೆ ಕಾರಣನಾದ್ದರಿಂದ ತಂದೆಯಂತಿರುವ ಶಾಸ್ತ್ರದ ಉಪದೇಶವು ನಿವೃತ್ತಿಮಾರ್ಗಕ್ಕೆ ಯೋಗ್ಯನಾದ ಪುರುಷನಿಗೆ ನಿವೃತ್ತಿಯನ್ನುಂಟುಮಾಡುವದೆಂಬ ಅರ್ಥವನ್ನು ಯಾವ ಪುರುಷನು

ಅರಿಯನೋ ಅವನು ಕೇವಲ ಗುಣಮಯವಾದ ಪ್ರವೃತ್ತಿಮಾರ್ಗದಲ್ಲೇ ವಿಶ್ವಾಸವುಳ್ಳವನಾಗಿ ಎಂತು ಸೃಷ್ಟ್ಯಾದಿಗಳಲ್ಲಿ ಪ್ರವರ್ತಿಶ್ಯಾನು ಎಂಬ ಅರ್ಥವು.

"ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಆ ಹರ್ಯಶ್ವರರೆಂಬ ದಕ್ಷಪುತ್ರರು ನಾರದಮುನಿಯಿಂದ ನಿರೂಪಿಸಲ್ಪಟ್ಟ ಗೂಢಾರ್ಥಯುಕ್ತಗಳಾದ ಆ ವಾಕ್ಯಗಳಿಗೆ ಈರೀತಿ ತಾತ್ಪರ್ಯವನ್ನು ನಿಶ್ಚಯಿಸಿದಂಥಾವರಾಗಿ ಸಕಲರೂ ಒಂದೇ ಬುದ್ಧಿಯೊಡನೆ ಕೂಡಿದವರಾಗಿ ಆ ನಾರದಮುನಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಪುನರಾವೃತ್ತಿ ಇಲ್ಲದಿರುವ ಮೋಕ್ಷಮಾರ್ಗವನ್ನೈದಿದರು; ಅನಂತರದಲ್ಲಿ ಆ ನಾರದಮುನಿಯು ವೀಣಾಪಾಣಿಯಾಗಿ ಸ್ವರಬ್ರಹ್ಮನಲ್ಲಿ ಸಾಕ್ಷಾತ್ಕರಿಸಲ್ಪಟ್ಟ ಶ್ರೀಹರಿಯ ಪಾದಾರವಿಂದದಲ್ಲಿ ಅಖಂಡವಾದ ಚಿತ್ತವನ್ನು ನಿಲ್ಲಿಸಿ ಲೋಕಗಳನ್ನು ಸಂಚರಿಸಿದನು; ಆ ಬಳಿಕ ದಕ್ಷನು ನಾರದಮುನಿಯ ಉಪದೇಶದಿಂದ ಸತ್ಸ್ವಭಾವವುಳ್ಳ ತನ್ನ ಪುತ್ರರು ಪುನರಾವೃತ್ತಿಯಿಲ್ಲದ ಮೋಕ್ಷಮಾರ್ಗವನ್ನೈದಿದರೆಂಬ ವೃತ್ತಾಂತವನ್ನು ಕೇಳಿ ದುಃಖಪಡುತ ಅತ್ಯಂತ ಪಶ್ಚಾತ್ತಾಪವನ್ನೈದಿ ಲೋಕದಲ್ಲಿ ಸತ್ಪುತ್ರರನ್ನು ಪಡೆಯುವದು ಬಹು ದುಃಖಕ್ಕೆ ಕಾರಣವೆಂದು ಚಿಂತಿಸಿ ಬ್ರಹ್ಮದೇವನಿಂದ ಸಮಾಧಾನಂಗೈಯಲ್ಪಟ್ಟವನಾಗಿ ಪುನಹಾ ಅಸಿಕ್ನಿದೇವಿಯಲ್ಲಿ ಶಬಳಾಶ್ವರೆಂಬ ನಾಮಗಳುಳ್ಳ ಸಹಸ್ರಸಂಖ್ಯಾತರಾದ ಪುತ್ರರನ್ನು ಪಡದನು; ದೃಢವ್ರತರಾದ ಶಬಳಾಶ್ವರೆಂಬ ಆ ದಕ್ಷಪುತ್ರರು ಪ್ರಜಾಸೃಷ್ಟಿಗೋಸ್ಕರ ತಂದೆಯಿಂದ ಆಜ್ಞಾಪಿಸಲ್ಪಟ್ಟವರಾಗಿ ತಮ್ಮ ಅಣ್ಣಂದಿರು ಯಾವ ತೀರ್ಥದ ಸಮೀಪದಲ್ಲಿ ತಪಸ್ಸಿದ್ಧಿಯನ್ನು ಪಡದರೋ ಅಂಥಾ ನಾರಾಯಣ ಸರಸ್ಸೆಂಬ ತೀರ್ಥವನ್ನೈದಿ ಆ ತೀರ್ಥೋದಕದ ಸೇವೆಯಿಂದ ಪರಿಹರಿಸಲ್ಪಟ್ಟ ರಾಗದ್ವೇಷಾದಿಗಳುಳ್ಳ ಅಂತಃಕರಣವುಳ್ಳವರಾಗಿ ಪ್ರಣವ ಮಂತ್ರವನ್ನು ಜಪಿಸುತ ಮಹತ್ತಾದ ತಪಸ್ಸಂಗೈದರು; ಆ ದಕ್ಷಪುತ್ರರು ಆ ತೀರ್ಥದ ಸಮೀಪದಲ್ಲಿ ಕೆಲವು ಮಾಸಗಳು ಜಲಾಹಾರಿಗಳಾಗಿ ಕೆಲವು ಮಾಸಗಳು ವಾಯು ಭಕ್ಷಕರಾಗಿ ಈ ಮಂತ್ರವನ್ನು ಆವರ್ತಿಯಂಗೈಯುತ ಶ್ರೀಹರಿಯನ್ನು ಪೂಜಿಸಿದರು; ಆ ಮಂತ್ರಾರ್ಥವೇನಂದರೆ: ಪುರುಷನಾದ ಪರಿಶುದ್ಧನಾದ ಮಹಾತ್ಮನಾದ ಸತ್ವಗುಣಕ್ಕೆ ಆಶ್ರಯನಾದ ಪರಮಹಂಸನಾದ ಶ್ರೀಮನ್ನಾರಾಯಣನಿಗೋಸ್ಕರ ನಮಸ್ಕಾರಂಗೈಯುತ್ತೇವೆ ಎಂಬ ಅರ್ಥವುಳ್ಳ ಮಂತ್ರವನ್ನು ಜಪಿಸುತ ಹರಿಯನ್ನು ಪೂಜೆಮಾಡಿದರು; ನಾರದಮುನಿಯು ಪ್ರಜಾಸೃಷ್ಟಿಯಲ್ಲಿ ಬುದ್ಧಿಯುಳ್ಳ ಆ ಶಬಳಾಶ್ವರರ ಸಮೀಪವನ್ನೈದಿ ಪುನಹಾ ಅವರನ್ನು ಅರ್ಥಾಂತರ ಸೂಚಕಗಳಾದ ವಚನಗಳಿಂದ ಪೂರ್ವದಂತೆ ಬೋಧಿಸಿದನು! ಎಲೈ ದಕ್ಷಪುತ್ರರೇ, ನುಡಿಯುತಲಿರುವ ನನ್ನ ಉಪದೇಶವನ್ನು ಶ್ರದ್ಧೆಯಿಂದ ಕೇಳಿ: ಸಹೋದರರಲ್ಲಿ ಅತಿ ವಾತ್ಸಲ್ಯವುಳ್ಳ ನೀವು ನಿಮ್ಮ ಅಣ್ಣಂದಿರ ಮಾರ್ಗವನ್ನು ನೋಡುವರಾಗಿ; ಲೋಕದಲ್ಲಿ ಧರ್ಮಜ್ಞನಾದ ಯಾವ ತಮ್ಮನು ಅಣ್ಣಂದಿರ ಉತ್ಕೃಷ್ಟವಾದ ಮಾರ್ಗವನ್ನನುಸರಿಸಿ ನಡೆಯುವನೋ ಪುಣ್ಯವೇ ಬಂಧುವಾಗುಳ್ಳ ಆ ಪುರುಷನು ಮರುತ್ತುಗಳ ಲೋಕದಲ್ಲಿ ಭ್ರಾತೃವಾತ್ಸಲ್ಯರಾದ ಆ ಮರುತ್ತುಗಳೆಂಬ ದೇವತೆಗಳೊಡನೆ ಸಂತೋಷಪಡುವನು; ಎಂದು ತತ್ವಜ್ಞಾನಸಾಧಕವಾದ ದರ್ಶನವುಳ್ಳ ಆ ನಾರದಮುನಿಯು ಶಬಳಾಶ್ವರರಿಗೆ ಇಷ್ಟುಮಾತ್ರವಾದ ಅರ್ಥವನ್ನು ಉಪದೇಶಂಗೈದು ಅದೃಶ್ಯನಾದನು; ಅನಂತರದಲ್ಲಿ ಆ ಶಬಳಾಶ್ವರರು ನಾರದೋಪದೇಶದಿಂದ ತಮ್ಮ ಅಣ್ಣಂದಿರ ಮಾರ್ಗವನ್ನೇ ಅನುಸರಿಸಿ ಉತ್ಕೃಷ್ಟವಾಗಿ ಸಮಾಧಿಯಿಂದ ತಿಳಿಯಲು ಯೋಗ್ಯವಾಗಿ ಅನುಗುಣವಾಗಿರುವ ತತ್ವಮಾರ್ಗವನ್ನೈದಿದವರಾಗಿ ಅತೀತಂಗಳಾದ ರಾತ್ರಿಗಳಂತೆ ಈಗ್ಯೂ ಹಿಂದಕ್ಕೆ ತಿರುಗಿ ಬರಲಿಲ್ಲ; ಅಷ್ಟರಲ್ಲೇ ದಕ್ಷನು ಅನೇಕಗಳಾದ ಉತ್ಪಾತಗಳನ್ನು ನೋಡುತ ಪೂರ್ವದಂತೆ ನಾರದೋಪದೇಶದಿಂದ ಶಬಳಾಶ್ವರೆಂಬ ಪುತ್ರರು ವಿರಕ್ತರಾಗಿ ಹೋದರೆಂಬ ವೃತ್ತಾಂತವನ್ನು ಕೇಳಿ ದಕ್ಷನು ಪುತ್ರಶೋಕದಿಂದ ಅತ್ಯಂತ ಮೂರ್ಛಿತನಾಗಿ ನಾರದನಲ್ಲಿ ಅತ್ಯಂತ ಕೋಪವನ್ನು ಮಾಡಿದನು; ಆ ಸಮಯದಲ್ಲಿ ಅನುಗ್ರಹಾರ್ಥವಾಗಿ ಪುನಹಾ ಬಂದ ನಾರದನನ್ನು ಕಂಡು ಅತಿ ಕೋಪದಿಂದ ಅತ್ಯಂತವಾಗಿ ಚಲಿಸುತಲಿರುವ ಅಧರೋಷ್ಟವುಳ್ಳವನಾಗಿ 'ಎಲೈ ದುಷ್ಟನಾದ ನಾರದನೆ, ಸಜ್ಜನರ ವೇಷವನ್ನು ಧರಿಸಿರುವ ನಿನ್ನಿಂದ ಧರ್ಮನಿಷ್ಠರಾದ ನನ್ನ ಪುತ್ರರಿಗೆ ವಿರಕ್ತವಾದ ಸನ್ಯಾಸಮಾರ್ಗವನ್ನು ತೋರಿಸಿ ಮಹತ್ತಾದ ಅಕಾರ್ಯವು ಮಾಡ

ಲ್ಪಟ್ಟಿತು! ಎಲೈ ಪಾಪಿಯೆ, ಋಣತ್ರಯದಿಂದ ವಿಮುಕ್ತರಲ್ಲದವರಾಗಿ ವಿಚಾರಿಸಲ್ಪಡದಿರುವ ಕರ್ಮಸ್ವರೂಪವು ಳ್ಳವರಾಗಿರುವ ನನ್ನ ಪುತ್ರರಿಗೆ ಈ ಲೋಕದಲ್ಲಿ ಭೋಗತ್ಯಾಗವುಂಟಾದ್ದರಿಂದ ಇಷ್ಟಾರ್ಥ ವಿಘಾತವು ಮತ್ತು ಋಣತ್ರಯ ವಿಮೋಚನವೂ ಇಲ್ಲದೆ ಮೋಕ್ಷಕ್ಕೆ ಅಧಿಕಾರವಿಲ್ಲವಾದ್ದರಿಂದ ಲೋಕದಲ್ಲಿ ಇಷ್ಟಾರ್ಥ ವಿಘಾತವು ನಿನ್ನಿಂದ ಮಾಡಲ್ಪಟ್ಟಿತು ; ಈರೀತಿ ಪುರುಷರಿಗೆ ಪುತ್ರಾದಿವಿಷಯಕವಾದ ಬುದ್ಧಿಯನ್ನು ಭೇದಿಸುತಲಿರುವ ನಿರ್ದಯನಾದ ನೀನು ಶ್ರೀಹರಿಯ ಕೀರ್ತಿಯನ್ನು ನಾಶಗೈಯ್ಯುತಲಿರುವವನಾಗಿ ಆ ಶ್ರೀಹರಿಯ ಗಣಪಾಲಕರ ಮಧ್ಯದಲ್ಲಿ ಲಜ್ಜಾರಹಿತನಾಗಿ ಎಂತು ಸಂಚರಿಸುತಲಿದ್ದೀಯೆ ; ಲಜ್ಜಾರಹಿತತ್ವವೆಂತೆಂದರೆ : ಮಿತ್ರಘ್ನನಾಗಿ ವೈರವಿಲ್ಲದಿರುವ ಪುರುಷರಿಗೆ ವೈರವನ್ನುಂಟುಮಾಡುವನಾಗಿರುವ ನಿನ್ನೊಬ್ಬನನ್ನು ಹೊರ್ತು ಭಗವದ್ಭಕ್ತರಾದ ಸಮಸ್ತರೂ ಸಕಲ ಭೂತಗಳನ್ನೂ ಅನುಗ್ರಹಿಸುವದರಲ್ಲಿ ಆಸಕ್ತರಾಗಿದ್ಧಾರೆ ; ನೀನು ಈರೀತಿ ಪ್ರಾಣಿಗಳಿಗೆ ಅಹಿತವನ್ನು ಮಾಡುತ ಎಂತು ಲಜ್ಜೆಪಡುವದಿಲ್ಲ' ಅಂದನು. ಅದಕ್ಕೆ ನಾರದನು ದಕ್ಷನನ್ನು ಕುರಿತು 'ಎಲೈ ದಕ್ಷನೇ, ವೈರಾಗ್ಯದಿಂದ ಉಪಶಾಂತಿಯು ಉಪಶಾಂತಿಯಿಂದ ಸ್ನೇಹ ವಿಚ್ಛೇದವೂ ಉಂಟಾಗುವದು ; ವಿರಕ್ತನಾಗಿರುವವನಿಗೆ ಋಣತ್ರಯವಿಮೋಚನವು ಅವಶ್ಯಕವಲ್ಲ ; ಯಾವಾಗ ವಿರಕ್ತಿಯುಂಟಾಗುವದೋ ಆಗಲೇ ಗೃಹಾದಿಗಳನ್ನು ತ್ಯಜಿಸಿ ಹೊರಡಬೇಕೆಂಬ ಈ ಅರ್ಥವು ಶ್ರುತಿಸಿದ್ಧವಾಗಿರುವಧಾದ್ದರಿಂದ ನಿನ್ನ ಪುತ್ರರಿಗೆ ವೈರಾಗ್ಯೋಪದೇಶದಿಂದ ನನ್ನಿಂದ ಅನುಗ್ರಹ ಮಾಡಲ್ಪಟ್ಟಿತೇ ಹೊರ್ತು ಅಕಾರ್ಯವು ಮಾಡಲ್ಪಡಲಿಲ್ಲ' ಅಂದನು. ದಕ್ಷನು 'ಎಲೈ ನಾರದನೇ, ಹ್ಯಾಗಾದರೂ ನಿನ್ನಿಂದ ಮಾಡಲ್ಪಟ್ಟ ವೈರಾಗ್ಯೋಪದೇಶವು ನನ್ನ ಪುತ್ರರಿಗೆ ಅನುಗ್ರಹ ಮಾಡಲ್ಪಟ್ಟಿತೆಂದು ನೀನು ತಿಳಿಯುತಲಿದ್ದೀಯೆ ; ಆದರೂ ಜ್ಞಾನವಿಲ್ಲದೆ ಅಸತ್ಯವಾದ ಅವಧೂತವೇಷವನ್ನು ಧರಿಸಿರುವ ನೀನು ಈರೀತಿ ಬುದ್ಧಿಚಾಪಲ್ಯದಿಂದ ಪುತ್ರರಿಗೆ ವೈರಾಗ್ಯವನ್ನುಂಟುಮಾಡಿದವನಾದಾಗ್ಯೂ ಅವರಿಗೆ ವಿರಕ್ತಿಯುಂಟಾಗಲಾರದು ; ವಿರಕ್ತಿಯನ್ನು ಹೊರ್ತು ಉಪಶಾಂತಿಯುಂಟಾಗಲಾರದು ; ಉಪಶಾಂತಿಯನ್ನು ಹೊರ್ತು ಪುತ್ರಾದಿಗಳಲ್ಲಿರುವ ಸ್ನೇಹಪಾಶಕ್ಕೆ ವಿಚ್ಛೇದವುಂಟಾಗಲಾರದು ; ಪುರುಷನು ವಿಷಯಗಳನ್ನು ಅನುಭವಿಸದೆ ಆ ವಿಷಯಗಳು ದುಃಖಕ್ಕೆ ಹೇತುಗಳೆಂದು ತಿಳಿಯುವದಿಲ್ಲ ; ಯಾವರೀತಿ ತಾನು ವಿಷಯಗಳನ್ನು ಅನುಭವಿಸಿ ಅನಂತರದಲ್ಲಿ ಈ ವಿಷಯಗಳು ದುಃಖಕರಗಳೆಂಬ ಜ್ಞಾನದಿಂದ ಪಶ್ಚಾತ್ತಾಪವನ್ನು ಹೊಂದುವನೋ ಆರೀತಿ ಪರೋಪದೇಶದಿಂದ ಪಶ್ಚಾತ್ತಾಪವನ್ನು ಹೊಂದಲಾರನು! ಎಲೈ ಮುನಿಯೆ, ವೇದೋಕ್ತ ಕರ್ಮಗಳಿಗೆ ಮರ್ಯಾದಾಸ್ಥಾನರೂಪರಾಗಿ ಸಾತ್ವಿಕರಾಗಿ ಗೃಹಸ್ಥಾಶ್ರಮದಲ್ಲಿರುವ ನಮಗೆ ನೀನು ಸಹಿಸಲಶಕ್ಯವಾದ ಯಾವ ಅಹಿತವ್ಯಾಪಾರವನ್ನು ಮಾಡಿದೆಯೋ ಅದು ನಮ್ಮಿಂದ ಸಹಿಸಲ್ಪಟ್ಟಿತು! ಎಲೈ ಸಂತಾನ ವಿಚ್ಛೇದಕವಾದ ಮೂಢನೇ, ಆದಾಗ್ಯೂ ಯಾವ ಕಾರಣದಿಂದ ನೀನು ನನ್ನ ಪುತ್ರರಿಗೆ ಸ್ಥಾನಭ್ರಂಶವನ್ನುಂಟುಮಾಡಿದೆಯೋ ಅದುಕಾರಣ ಲೋಕಗಳಲ್ಲಿ ಸುತ್ತುತಲಿರುವ ನಿನಗೆ ಎಲ್ಲೂ ಸ್ಥಾನವಿಲ್ಲದೆ ಹೋಗಲಿ' ಎಂದು ದಕ್ಷನಿಂದ ಕೊಡಲ್ಪಟ್ಟ ಶಾಪವನ್ನು ಸಜ್ಜನ ಸಮ್ಮತನಾದ ನಾರದಮುನಿಯು ಹಾಗೇ ಆಗಲೀ ಎಂದು ಸ್ವೀಕರಿಸಿದನು ; ತಪೋನಿಷ್ಠನಾದ ಪುರುಷನು ತನಗೆ ಶಾಪವುಂಟಾದಲ್ಲಿ ತಾನು ಪ್ರತಿಶಾಪವನ್ನು ಕೊಡುವದಕ್ಕೆ ಸಮರ್ಥನಾದಾಗ್ಯೂ ಅದನ್ನು ಸಹಿಸಬೇಕೆಂಬ ಇಷ್ಟುಮಾತ್ರವಾದ ಅರ್ಥವನ್ನು ಸಜ್ಜನರು ಹೇಳುವರು ; ಆದ್ದರಿಂದ ಪ್ರತಿಶಾಪವನ್ನು ಕೊಡದೆ ದಕ್ಷನ ಶಾಪವನ್ನು ಪರಿಗ್ರಹಿಸಿದನು."

---

೬ ನೇ ಅಧ್ಯಾಯ.

ದಕ್ಷನ ಪುತ್ರಿಯರ ಪುತ್ರಪೌತ್ರರ ನಾಮಧೇಯಗಳು.

"ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಪುತ್ರಶೋಕದಿಂದ ಪೀಡಿತನಾದ ದಕ್ಷನು ನಾರದನ ಭಯದಿಂದ ಪುತ್ರರನ್ನು ಪಡೆಯಬೇಕೆಂದು ಅಪೇಕ್ಷಿಸದೆ ಪುನಹಾ ಬ್ರಹ್ಮದೇವನಿಂದ ಸಮಾಧಾನಗೈಯಲ್ಪಟ್ಟವನಾಗಿ ಆ ಅಸಿಕ್ನಿದೇವಿಯಲ್ಲಿ ಪಿತೃಭಕ್ತಿಯುಕ್ತರಾದ ಅರವತ್ತುಮಂದಿ ಪುತ್ರಿಯರನ್ನು ಪಡೆದನು ; ಆ ಅರವತ್ತುಮಂದಿ ಪುತ್ರಿಯರಲ್ಲಿ

ಹತ್ತು ಮಂದಿಯನ್ನು ಧರ್ಮನಿಗೂ ಕಾಶ್ಯಪನಿಗೆ ಹದಿಮೂರುಮಂದಿಯನ್ನೂ ಚಂದ್ರನಿಗೆ ಇಪ್ಪತ್ತೇಳುಮಂದಿಯನ್ನೂ ಭೂತ ಅಂಗೀರಸ್ಸು ಕೃತಾಶ್ವರೆಂಬ ಈ ಮೂವ್ವರಿಗೆ ಒಬ್ಬೊಬ್ಬರಿಗೆ ಇಬ್ಬರಿಬ್ಬರು ಪುತ್ರಿಯರನ್ನೂ ತಾರ್ಕ್ಷ್ಯನೆಂಬ ನಾಮಧೇಯವುಳ್ಳ ಕಶ್ಯಪನಿಗೆ ಮಿಕ್ಕ ನಾಲ್ವರು ಪುತ್ರಿಯರನ್ನೂ ಇತ್ತನು! ಎಲೈ ಅರಸೆ, ಯಾವ ದಕ್ಷಪುತ್ರಿಯರ ಪುತ್ರ ಪೌತ್ರರಿಂದ ಈ ಮೂರು ಲೋಕಗಳು ಅತ್ಯಂತವಾಗಿ ಪೂರಿಸಲ್ಪಟ್ಟವೋ ಅಂಥಾ ದಕ್ಷಪುತ್ರಿಯರ ನಾಮಧೇಯಗಳನ್ನೂ ಅವರ ಪುತ್ರ ಪೌತ್ರರ ನಾಮಧೇಯಗಳನ್ನೂ ನನ್ನದೆಸೆಯಿಂದ ಕೇಳು : ಭಾನು ಲಂಬಾ ಕಕುಬ್ ಜಾಮಿ ವಿಶ್ವ ಸಾಧ್ಯಾ ಮರುತ್ವತಿ ವಸು ಮುಹೂರ್ತಾ ಸಂಕಲ್ಪೆಗಳೆಂಬ ಈ ಹತ್ತುಮಂದಿಯೂ ಧರ್ಮನ ಪತ್ನೀರುಗಳು ; ಇವರ ಪುತ್ರರ ನಾಮಧೇಯಗಳನ್ನು ಕೇಳು : ಭಾನುದೇವಿಯಲ್ಲಿ ದೇವಋಷಭನೆಂಬ ಪುತ್ರನು ಜನಿಸಿದನು ; ಆ ದೇವಋಷಭನಿಂದ ಇಂದ್ರಸೇನನು ಜನಿಸಿದನು ; ಲಂಬಾದೇವಿಯ ಗರ್ಭದಲ್ಲಿ ಖದ್ಯೋತನು ಪುಟ್ಟಿದನು ; ಆ ಖದ್ಯೋತನನಿಗೆ ಸ್ತನಯಿತ್ನುವೆಂಬ ಪುತ್ರನು ಜನಿಸಿದನು ; ಕಕುಬ್ದೇವಿಯಲ್ಲಿ ಸಂಕಟನೆಂಬ ಪುತ್ರನು ಜನಿಸಿದನು ; ಅವನಿಂದ ಕೀಟಕನು ಜನಿಸಿದನು ; ಜಾಮೀದೇವಿಯಲ್ಲಿ ಭೂಮಿಯಲ್ಲಿರುವ ದುರ್ಗಂಧಗಳಿಗೆ ಅಭಿಮಾನಿದೇವತೆಯು ಸ್ವರ್ಗನೆಂಬ ಪುತ್ರನೂ ಜನಿಸಿದನು ; ಆ ಸ್ವರ್ಗನಿಗೆ ನಂದಿಯೆಂಬ ಪುತ್ರನು ಜನಿಸಿದನು ; ವಿಶ್ವಾದೇವಿಯಲ್ಲಿ ವಿಶ್ವೇದೇವತೆಗಳು ಹುಟ್ಟಿದರು ; ಆ ವಿಶ್ವೇದೇವರಿಗೆ ಸಂತಾನವಿಲ್ಲವೆಂದು ಋಷಿಗಳು ಹೇಳುವರು ; ಸಾಧ್ಯಾದೇವಿಯಲ್ಲಿ ಸಾಧ್ಯರೆಂಬ ದೇವತೆಗಳು ಜನಿಸಿದರು ; ಆ ಸಾಧ್ಯರಿಗೆ ಅರ್ಥಸಿದ್ಧಿಯೆಂಬ ಪುತ್ರನು ಜನಿಸಿದನು ; ಮರುತ್ವತಿದೇವಿಯಲ್ಲಿ ಮರುತ್ವಂತನು ಜಯಂತನು ಎಂಬ ಈರ್ವರು ಜನಿಸಿದರು ; ಆ ಜಯಂತನು ಸಾಕ್ಷಾದ್ವಾಸುದೇವನ ಅಂಶಭೂತನು ; ಅವನನ್ನೇ ಉಪೇಂದ್ರನೆಂದು ಪೇಳುವರು ; ಮುಹೂರ್ತಾದೇವಿಯಲ್ಲಿ ಮುಹೂರ್ತಗಳಿಗೆ ಅಧಿದೇವತೆಗಳು ಹುಟ್ಟಿದರು ; ಆ ಮುಹೂರ್ತಾದಿ ದೇವತೆಗಳು ಪ್ರಾಣಿಗಳಿಗೆ ತಮ್ಮ ತಮ್ಮ ಮುಹೂರ್ತದಿಂದ ಜನಿಸುವ ಫಲವನ್ನು ಕೊಡುತಲಿಧಾರೆ ; ಸಂಕಲ್ಪಾದೇವಿಯಲ್ಲಿ ಸಂಕಲ್ಪನೆಂಬ ಪುತ್ರನು ಜನಿಸಿದನು ; ಆ ಸಂಕಲ್ಪನಿಗೆ ಕಾಮನೆಂಬ ಪುತ್ರನು ಜನಿಸಿದನು ; ವಸುದೇವಿಯಲ್ಲಿ ಅಷ್ಟವಸುಗಳು ಪುಟ್ಟಿದರು ; ಅವರ ನಾಮಧೇಯಗಳನ್ನು ಕೇಳು : ದ್ರೋಣ ಪ್ರಾಣ ಧ್ರುವ ಅರ್ಕ ಅಗ್ನಿ ದೋಷ ವಸ್ತು ವಿಭಾವಸುಗಳೆಂಬ ಇವು ಅಷ್ಟವಸುಗಳ ನಾಮಧೇಯಗಳು ; ಆ ದ್ರೋಣನಿಂದ ಅಭಿಮತಿದೇವಿಯಲ್ಲಿ ಹರ್ಷ ಶೋಕ ಭಯಗಳು ಜನಿಸಿದವು ; ಪ್ರಾಣನಿಂದ ಊರ್ಜಸ್ವತೀಯೆಂಬ ಪತ್ನಿಯಲ್ಲಿ ಸಹ ಆಯುಃ ಪುರೋಜವರೆಂಬ ಮೂವ್ವರು ಪುತ್ರರು ಜನಿಸಿದರು ; ಧ್ರುವನಿಂದ ಧರಣೀದೇವಿಯು ನಾನಾವಿಧಗಳಾದ ಪಟ್ಟಣಗಳನ್ನು ಪೆತ್ತಳು ; ಅರ್ಕನಿಂದ ವಾವಾಸನೆಯೆಂಬ ಪತ್ನಿಯಲ್ಲಿ ಅಭಿಲಾಷವೊದಲಾದ ಪುತ್ರರು ; ಹುಟ್ಟಿದರು ಅಗ್ನಿಗೆ ಪತ್ನಿಯಾದ ವಸೋರ್ಧಾರಾದೇವಿಯಲ್ಲಿ ದ್ರವಿಣಕ ವೊದಲಾದ ಪುತ್ರರು ಹುಟ್ಟಿದರು ; ಆ ಅಗ್ನಿಗೆ ಕೃತ್ತಿಕಾದೇವಿಯಲ್ಲಿ ಕುಮಾರಸ್ವಾಮಿಯು ಜನಿಸಿದನು ; ಆ ಕುಮಾರಸ್ವಾಮಿಯಿಂದ ವಿಶಾಖ ವೊದಲಾದ ಪುತ್ರರು ಜನಿಸಿದರು ; ದೋಷನ ದೆಸೆಯಿಂದ ಶರ್ವರೀದೇವಿಯಲ್ಲಿ ಶ್ರೀಹರಿಯ ಅಂಶಭೂತನಾದ ಶಿಂಶುಮಾರನು ಹುಟ್ಟಿದನು ; ವಸ್ತುವಿನಿಂದ ಅಂಗೀರಸಿದೇವಿಯಲ್ಲಿ ಶಿಲ್ಪಾಚಾರ್ಯನಾದ ವಿಶ್ವಕರ್ಮನು ಜನಿಸಿದನು ; ಆ ವಿಶ್ವಕರ್ಮನದೆಸೆಯಿಂದ ಚಾಕ್ಷುಸಮನುವು ಜನಿಸಿದನು ; ಆ ಮನುವಿನಿಂದ ವಿಶ್ವರು ಸಾಧ್ಯರು ಜನಿಸಿದರು ; ವಿಭಾವಸುವಿನಿಂದ ಪೂಷಾದೇವಿಯು ವ್ಯುಷ್ಟ ರೋಚಿಸ್ಸು ಆತಪರೆಂಬ ಮೂವರು ಪುತ್ರರನ್ನು ಪಡದಳು ; ಆ ಆತಪನಿಂದ ಯಾವ ದಿವಸದಲ್ಲಿ ಸಕಲ ಪ್ರಾಣಿಗಳು ತಮ್ಮತಮ್ಮ ಕರ್ಮಗಳಲ್ಲಿ ಜಾಗ್ರತೆಯುಳ್ಳವರಾಗುವರೋ ಪಂಚಯಾಮಗಳುಳ್ಳ ಅಂಥಾ ದಿವಸವು ಪುಟ್ಟಿತು ; ಅನಂತರದಲ್ಲಿ ಭೂತನ ಪತ್ನಿಯಾದ ಸುರೂಪಾದೇವಿಯು ಅನೇಕ ಕೋಟಿ ರುದ್ರರನ್ನು ಪೆತ್ತಳು ; ರೈವತ ಅಜ ಭವ ಭೀಮ ವಾಮನ ಉಗ್ರ ವೃಷಾಕಪಿ ಅಜೈಕಪಾತ್ ಅಹಿರ್ಬುಧ್ನ್ಯ ಬಹುರೂಪ ಮಹಾನ್ ಎಂಬ ಹನ್ನೊಂದು ಮೂರ್ತಿಗಳುಳ್ಳ ರುದ್ರರಿಗೆ ಹನ್ನೊಂದು ಕೋಟಿ ಮಂದಿ ರುದ್ರರು ಗಣಪಾಲಕರೆಂದು ತಿಳಿಯುತಕ್ಕದ್ದು ; ಆ ಭೂತನಿಂದಲೇ ಮತ್ತೊಬ್ಬಳಾದ ಪತ್ನಿಯಲ್ಲಿ ಭಯಂಕರರಾದ ರುದ್ರಗಣಂಗಳಾದ ಪ್ರೇತಾದಿಗಳು ಜನಿಸಿದರು ; ಪ್ರಜೇಶ್ವರನಾದ ಅಂಗೀರಸ್ಸನಿಗೆ ಪತ್ನಿಯಾದ ಸ್ವಧಾದೇವಿಯು ಪಿತೃಗಳನ್ನು ಪೆತ್ತಳು ; ಸತಿಯೆಂಬ ಮತ್ತೊಬ್ಬ ಪತ್ನಿಯು ಅಥರ್ವಣ ವೇದವನ್ನು ಮಿತ್ರಭಾವದಿಂದ

ಪಡದಳು; ಕೃಶಾಶ್ವನು ಅರ್ಚಿಸ್ಸೆಂಬ ಪತ್ನಿಯಲ್ಲಿ ಧೂಮ್ರಕೇಶನನ್ನು ಪಡದನು; ಧಿಷಣೆಯೆಂಬ ಮತ್ತೊಬ್ಬಳಾದ ಪತ್ನಿಯಲ್ಲಿ ವೇದಶಿರಸ್ಸುದೇವಲ ಯುವನ ಮನುಗಳೆಂಬ ನಾಲ್ವರು ಪುತ್ರರನ್ನು ಪಡದನು; ತಾರ್ಕ್ಷ್ಯನೆಂಬ ನಾಮಾಂತರವುಳ್ಳ ಕಸ್ಯಪನಿಗೆ ವಿನತಾ ಕದ್ರು ಪತಂಗಿ ಯಾಮಿನಿಗಳೆಂಬ ಪತ್ನಿಯರಲ್ಲಿ ಪತಂಗೀದೇವಿಯು ಪಕ್ಷಿಗಳನ್ನು ಪೆತ್ತಳು; ಯಾಮಿನಿದೇವಿಯು ಮಿಡಿಚೆಗಳನ್ನು ಪೆತ್ತಳು; ವಿನತಾದೇವಿಯು ಸಾಕ್ಷಾದ್ವಿಷ್ಣುವಾಹನವಾದ ಗರುಡನನ್ನೂ ಸೂರ್ಯಸಾರಥಿಯಾದ ಅರುಣನನ್ನೂ ಪಡದಳು; ಕದ್ರೂದೇವಿಯು ಅಸಂಖ್ಯಾತಗಳಾದ ಸರ್ಪಗಳನ್ನು ಪಡದಳು; ಕೃತ್ತಿಕೆ ಮೊದಲಾದ ಇಪ್ಪತ್ತೇಳು ನಕ್ಷತ್ರಗಳು ಚಂದ್ರನಿಗೆ ಪತ್ನಿಯರಾಗಿದ್ದರು; ಆದಾಗ್ಯೂ ಆ ಚಂದ್ರನು ರೋಹಿಣೀದೇವಿಯಲ್ಲೇ ಪ್ರೇಮದಿಂದ ಅತ್ಯಂತಾಸಕ್ತನಾಗಿ ಇತರ ನಕ್ಷತ್ರಗಳನ್ನು ಪೇಕ್ಷಿಸಿದ್ದರಿಂದ ಅತ್ಯಂತ ಕೋಪಯುಕ್ತನಾದ ದಕ್ಷನ ಶಾಪದಿಂದ ಕ್ಷಯರೋಗದಿಂದ ಪೀಡಿತನಾಗಿ ಆ ನಕ್ಷತ್ರಗಳಲ್ಲಿ ಸಂತಾನಗಳನ್ನು ಪಡೆಯಲಿಲ್ಲ; ಆ ಬಳಿಕ ಚಂದ್ರನು ದಕ್ಷನನ್ನು ಸಮಾಧಾನಂಗೈದು ಅವನ ಪ್ರಸಾದದಿಂದ ಕೃಷ್ಣಪಕ್ಷದಲ್ಲಿ ಖಂಡಿಸಲ್ಪಟ್ಟ ತಲೆಗಳನ್ನು ಪುನಹಾ ಪಡದನೇ ಹೊರ್ತು ಪುತ್ರರನ್ನು ಪಡೆಯಲಿಲ್ಲ! ಎಲೈ ಪರೀಕ್ಷಿದ್ರಾಯನೆ, ಯಾವ ಕಶ್ಯಪ ಪತ್ನಿಯರಿಂದ ಈ ಜಗತ್ತು ಜನಿಸಲ್ಪಟ್ಟಿತೋ ಅಂಥಾ ಲೋಕಮಾತೃಗಳಾದ ಕಶ್ಯಪ ಪತ್ನಿಯರ ಶುಭಕರಗಳಾದ ನಾಮಧೇಯಗಳನ್ನು ಕೇಳು: ಅದಿತಿ ದಿತಿ ದನು ಕಾಷ್ಠಾ ಅರಿಷ್ಟಾ ಸುರಸಾ ಇಳಾ ಮುನಿ ಕ್ರೋಧವಶಾ ತಾಮ್ರಾ ಸುರಭಿ ಸರಮಾ ತಿಮಿಗಳೆಂಬ ಇವು ಕಶ್ಯಪ ಪತ್ನಿಯರ ನಾಮಧೇಯಗಳು; ಈ ಹದಿಮೂರು ಮಂದಿಯಾದ ಕಶ್ಯಪ ಪತ್ನಿಯರಲ್ಲಿ ತಿಮಿದೇವಿಯು ಮತ್ಸ್ಯ ಮೊದಲಾದ ಜಲಜಂತುಗಳನ್ನು ಪೆತ್ತಳು; ಸರಮಾದೇವಿಯು ದುಷ್ಟಮೃಗಗಳನ್ನು ಪಡದಳು; ಸುರಭಿದೇವಿಯು ಗೋವುಗಳನ್ನೂ ಮಹಿಷಗಳನ್ನೂ ಎರಡು ಗೊರಸುಗಳುಳ್ಳ ಆಡು ಕುರಿ ಮೊದಲಾದ ಪಶುಜಾತಿಗಳನ್ನೂ ಪಡದಳು; ತಾಮ್ರಾದೇವಿಯು ಗಿಡ ಹದ್ದು ಮೊದಲಾದ ಪ್ರಾಣಿಗಳನ್ನು ಪೆತ್ತಳು; ಮುನಿದೇವಿಯು ಅಪ್ಸರಸ್ತ್ರೀಯರ ಸಮೂಹಗಳನ್ನು ಪಡದಳು; ಕ್ರೋಧವಶಾದೇವಿಯು ನಾನಾಜಾತೀಯಗಳಾದ ಸರ್ಪಗಳನ್ನು ಪೆತ್ತಳು; ಇಳಾದೇವಿಯಿಂದ ನಾನಾವಿಧಗಳಾದ ವೃಕ್ಷಗಳು ಪುಟ್ಟಿದವು; ಸುರಸಾದೇವಿಯಲ್ಲಿ ರಾಕ್ಷಸರು ಜನಿಸಿದರು; ಅರಿಷ್ಟಾದೇವಿಯಲ್ಲಿ ಗಂಧರ್ವರು ಜನಿಸಿದರು; ಕಾಷ್ಠಾದೇವಿಯು ಒಂದು ಗೊರಸುಳ್ಳ ಅಶ್ವ ಮೊದಲಾದ ಪಶುಜಾತಿಯನ್ನು ಪೆತ್ತಳು; ದನುದೇವಿಯಲ್ಲಿ ಅರವತ್ತೊಂದು ಮಂದಿ ಪುತ್ರರು ಜನಿಸಿದರು; ಅವರಲ್ಲಿ ಮುಖ್ಯವಾದವರನ್ನು ಕೇಳು: ದ್ವಿಮೂರ್ಧಾ ಶಂಬರಾ ಅರಿಷ್ಟಾ ಹಯಗ್ರೀವ ವಿಭಾವಸು ಅಯೋಮುಖ ಶಂಖುಶಿರ ಸ್ವರ್ಭಾನು ಕಪಿಲ ಅರುಣ ಪುಲೋಮ ವೃಷಪರ್ವಾ ಏಕಚಕ್ರಾ ಅನುತಾಪನ ಧೂಮ್ರಕೇಶ ವಿರೂಪಾಕ್ಷ ವಿಪ್ರಜಿತ್ತಿ ದುರ್ಜಯರೆಂಬ ಇವರು ದನುಪುತ್ರರಲ್ಲಿ ಮುಖ್ಯರಾದವರು; ಅವರಲ್ಲಿ ಸ್ವರ್ಭಾನುವಿಗೆ ಪುತ್ರಿಯಾದ ಸುಪ್ರಭೆಯನ್ನು ನಮುಚಿಯೆಂಬ ಅಸುರನು ವಿವಾಹವನ್ನು ಮಾಡಿಕೊಂಡನು; ವೃಷಪರ್ವನಿಗೆ ಪುತ್ರಿಯಾದ ಶರ್ಮಿಷ್ಠಾದೇವಿಯನ್ನು ನಹುಷರಾಯನಿಗೆ ಪುತ್ರನಾದ ಮಹಾಬಲನಾದ ಯಯಾತಿರಾಯನು ವಿವಾಹವನ್ನು ಮಾಡಿಕೊಂಡನು; ದನು ಪುತ್ರನಾದ ವೈಶ್ವಾನರನಿಗೆ ಉಪದಾನವಿ ಹಯಶಿರ ಪುಲೋಮ ಕಾಲಕೇಯರೆಂಬ ನಾಲ್ವರು ಪುತ್ರಿಯರು ಜನಿಸಿದರು; ಆ ನಾಲ್ವರಲ್ಲಿ ಉಪದಾನವಿಯನ್ನು ಹಿರಣ್ಯಾಕ್ಷನು ವಿವಾಹವನ್ನು ಮಾಡಿಕೊಂಡನು; ಕ್ರತುವೆಂಬ ಪ್ರಜೇಶ್ವರನು ಹಯಶಿರೆಯನ್ನು ಪತ್ನಿಭಾವದಿಂದ ಪರಿಗ್ರಹಿಸಿದನು; ಪೂಜ್ಯನಾದ ಕಶ್ಯಪನು ಬ್ರಹ್ಮದೇವನಿಂದ ಪ್ರೇರಿಸಲ್ಪಟ್ಟವನಾಗಿ ಆ ವೈಶ್ವಾನರನ ಪುತ್ರಿಯರಾದ ಪುಲೋಮೆಯನ್ನು ಕಾಲಕೆಯನ್ನು ಪರಿಗ್ರಹಿಸಿದನು; ಆ ಪುಲೋಮೆಯಲ್ಲಿ ಮಹಾಶೂರರಾದ ಅರವತ್ತುಸಾವಿರ ಮಂದಿ ಪುತ್ರರು ಜನಿಸಿದರು; ಅದೇರೀತಿ ಕಾಲಿಕಾಗರ್ಭದಲ್ಲಿ ಅರವತ್ತುಸಾವಿರ ಮಂದಿ ಪುತ್ರರು ಜನಿಸಿದರು; ಪೂರ್ವದಲ್ಲಿ ನಿನಗೆ ಪಿತಾಮಹನಾದ ಅರ್ಜುನನು ಇಂದ್ರನಿಗೆ ಪ್ರೀತಿಯನ್ನುಂಟುಮಾಡಲೋಸುಗ ಸ್ವರ್ಗವನ್ನೈದಿದಂಥಾವನಾಗಿ ಯಜ್ಞವಿಘ್ನಕರರಾದ ಪುಲೋಮ ನಾಮಕರಾದ ಪುಲೋಮ ಪುತ್ರರಾದ ಅರವತ್ತು ಸಾವಿರ ಮಂದಿ ದಾನವರನ್ನು ಕಾಲಕಾಪುತ್ರರಾದ ಕಾಲಕೇಯರೆಂಬ ನಾಮಧೇಯವುಳ್ಳ ಅರವತ್ತುಸಾವಿರ ಮಂದಿ ದಾನವರನ್ನೂ ಆ ಪೌಲೋಮ ಕಾಲಕಾಗರ್ಭಗಳಲ್ಲಿ ಜನಿಸಿರುವ ನಿವಾತಕವಚರೆಂಬ ಅರವತ್ತುಸಾವಿರ ಮಂದಿ ದಾ

ನವರನ್ನೂ ಅಸಹಾಯನಾಗಿ ತಾನೊಬ್ಬನೇ ಸಂಹರಿಸಿದನು; ವಿಪ್ರಚಿತ್ತಿಯು ಸಿಂಹಿಕಾನಾಮಕಳಾದ ಪತ್ನಿಯಲ್ಲಿ ರಾಹುವೇ ಜ್ಯೇಷ್ಠನಾಗುಳ್ಳ ನೂರು ಮಂದಿ ಪುತ್ರರನ್ನೂ ನೂರು ಮಂದಿ ಕೇತುಗಳನ್ನೂ ಪಡೆದನು; ಆ ರಾಹು ಕೇತುಗಳು ಈಶ್ವರಪ್ರಸಾದದಿಂದ ಗ್ರಹಭಾವವನ್ನು ಪಡೆದರು! ಎಲೈ ಅರಸೆ, ಇತಃಪರದಲ್ಲಿ ಯಾವ ವಂಶದಲ್ಲಿ ಶ್ರೀಮನ್ನಾರಾಯಣನು ತನ್ನ ಅಂಶದಿಂದ ಅವತರಿಸಿದನೋ ಅಂಥಾ ಅದಿತಿದೇವಿಯ ವಂಶವನ್ನು ಕ್ರಮದಿಂದ ಕೇಳು: ವಿವಸ್ವಂತ ಅರ್ಯಮ ಪೂಷಾ ತ್ವಷ್ಟಾ ಸವಿತಾ ಭಗ ಧಾತಾ ವಿಧಾತಾ ವರುಣ ಮಿತ್ರ ಶಕ್ರ ಉರುಕ್ರಮರೆಂಬ ದ್ವಾದಶಾದಿತ್ಯರು ಅದಿತೀದೇವಿಯಲ್ಲಿ ಜನಿಸಿದರು; ಆ ದ್ವಾದಶಾದಿತ್ಯರಲ್ಲಿ ವಿವಸ್ವಂತನೆಂಬ ಸೂರ್ಯನು ಸಂಜ್ಞಾದೇವಿಯಲ್ಲಿ ವೈವಸ್ವತನೆಂಬ ಮನುವಿನನ್ನು ಯಮನನ್ನು ಯಮುನಾನದಿಯನ್ನೂ ಪಡೆದನು; ಆ ಸಂಜ್ಞಾದೇವಿಯು ಆ ಸೂರ್ಯನ ತೇಜಸ್ಸನ್ನು ಸಹಿಸಲಾರದೆ ಹೆಣ್ಣುಕುದುರೆಯಾಗಿ ಭೂಮಿಯಲ್ಲಿ ಸಂಚರಿಸುತ ಬಂದು ಸಮಯದಲ್ಲಿ ಆ ಸೂರ್ಯನ ದೆಶೆಯಿಂದ ಅಶ್ವಿನೀದೇವತೆಗಳನ್ನು ಪೆತ್ತಳು; ಛಾಯಾದೇವಿಯು ಆ ವಿವಸ್ವಂತನ ದೆಶೆಯಿಂದ ಶನೈಶ್ಚರನನ್ನೂ ಸಾವರ್ಣಿಯೆಂಬ ಮನುವನ್ನೂ ತಪತಿಯೆಂಬ ಪುತ್ರಿಯನ್ನೂ ಪಡೆದಳು; ಆ ತಪತೀದೇವಿಯು ಸಂವರಣನೆಂಬ ಋಷಿಯಿಂದ ವಿವಾಹಂಗೈಯಲ್ಪಟ್ಟಳು; ಅರ್ಯಮನು ಮಾತೃಕಾದೇವಿಯಲ್ಲಿ ಭೂತಭವಿಷ್ಯದ್ಜ್ಞಾನವುಳ್ಳ ಚರ್ಷಣಿಗಳೆಂಬ ಪುತ್ರರನ್ನು ಪಡೆದನು; ಆ ಚರ್ಷಣಿಗಳಲ್ಲಿ ಆತ್ಮಾನುಸಂಧಾನವಿಶೇಷದಿಂದ ಮನುಷ್ಯಜಾತಿಯು ಕಲ್ಪಿಸಲ್ಪಟ್ಟಿತು; ಪೂರ್ವದಲ್ಲಿ ದಕ್ಷನಿಗೋಸ್ಕರ ಕೋಪಯುಕ್ತನಾಗಿರುವ ಶ್ರೀರುದ್ರನನ್ನು ನೋಡಿ ದಂತಗಳನ್ನು ಪ್ರಕಟಂಗೈದು ನಕ್ಕಂಥಾವನಾದಕಾರಣ ಶ್ರೀರುದ್ರನಿಂದ ಮುರಿಯಲ್ಪಟ್ಟ ದಂತಗಳುಳ್ಳವನಾದ್ದರಿಂದ ಪಿಷ್ಟವನ್ನು ಭಕ್ಷಿಸುತಲಿರುವ ಪೂಷನು ಪುತ್ರರನ್ನು ಪಡೆಯಲಿಲ್ಲ; ತ್ವಷ್ಟ್ರುವು ದೈತ್ಯರಿಗೆ ತಂಗಿಯಾದ ರಚನೆಯನ್ನು ವಿವಾಹ ಮಾಡಿಕೊಂಡು ಆಕೆಯಲ್ಲಿ ಸನ್ನಿವೇಶ ವಿಶ್ವರೂಪರೆಂಬ ಈರ್ವರು ಪುತ್ರರನ್ನು ಪಡೆದನು; ಇಂದ್ರಾದಿ ದೇವತೆಗಳು ಯಾವಾಗ ತಮ್ಮಿಂದ ತಿರಸ್ಕರಿಸಲ್ಪಟ್ಟವನಾಗಿರುವ ಆಂಗೀರಸ್ಸಿಗೆ ಪುತ್ರನಾದ ಗುರುವಾದ ಬೃಹಸ್ಪತಿಯಿಂದ ತ್ಯಾಗಂಗೈಯಲ್ಪಟ್ಟರೋ ಆ ಸಮಯದಲ್ಲಿ ವಿಶ್ವರೂಪನು ಶತ್ರುಗಳಾದ ದೈತ್ಯರಿಗೆ ಸೋದರಳಿಯನಾದಾಗ್ಯೂ ಆ ವಿಶ್ವರೂಪನನ್ನೇ ದೇವತೆಗಳು ನಮಗೆ ಪುರೋಹಿತನಾಗೆಂದು ವರಿಸಿದರು.”

೭ನೇ ಅಧ್ಯಾಯ.

ವಿಶ್ವರೂಪನನ್ನು ದೇವತೆಗಳು ತಮ್ಮ ಪೌರೋಹಿತ್ಯಕ್ಕಾಗಿ ಪ್ರಾರ್ಥಿಸಿದ್ದು.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು “ಎಲೈ ಶುಕಮುನಿಯೆ, ಏನುಕಾರಣ ಗುರುವಾದ ಬೃಹಸ್ಪತಿಯಿಂದ ತನ್ನ ಶಿಷ್ಯರಾದ ದೇವತೆಗಳು ತ್ಯಾಗಂಗೈಯಲ್ಪಟ್ಟರು? ಗುರುವಾದ ಬೃಹಸ್ಪತಿಯಲ್ಲಿ ಶಿಷ್ಯರಾದ ದೇವತೆಗಳಿಗೆ ಸಂಭವಿಸಿದ ಆ ಅಪರಾಧವನ್ನು ನನಗೆ ನಿರೂಪಿಸು” ಎಂದು ಪ್ರಶ್ನೆಗೈದನು.

ಆ ವಾಕ್ಯವನ್ನು ಕೇಳಿ ಶುಕಮುನಿಯು “ಎಲೈ ಪರೀಕ್ಷಿದ್ರಾಯನೆ, ಇಂದ್ರನು ತ್ರಿಲೋಕ ಸಾಂಬ್ರಾಜ್ಯದಿಂದುಂಟಾದ ಮದದಿಂದ ಅತಿಕ್ರಮಿಸಲ್ಪಟ್ಟ ಸನ್ಮಾರ್ಗವುಳ್ಳವನಾಗಿ ಸಪ್ತಮರುತ್ತುಗಳಿಂದಲೂ ಅಷ್ಟವಸುಗಳಿಂದಲೂ ಏಕಾದಶ ರುದ್ರರಿಂದಲೂ ದ್ವಾದಶಾದಿತ್ಯರಿಂದಲೂ ಅನೇಕ ದೇವತೆಗಳಿಂದಲೂ ವಿಶ್ವೇದೇವತೆಗಳಿಂದಲೂ ಸಾಧ್ಯರಿಂದಲೂ ಅಶ್ವಿನೀದೇವತೆಗಳಿಂದಲೂ ಸುತ್ತಲೂ ಸೇವಿಸಲ್ಪಡುತಲಿರುವವನಾಗಿ ಸಿದ್ಧ ಚಾರಣ ಗಂಧರ್ವರಿಂದಲೂ ತತ್ವಜ್ಞರಾದ ಮುನಿಗಳಿಂದಲೂ ವಿದ್ಯಾಧರರಿಂದಲೂ ಅಪ್ಸರಸ್ತ್ರೀಯರಿಂದಲೂ ಕಿನ್ನರರಿಂದಲೂ ಪಕ್ಷಿಶ್ರೇಷ್ಠರಿಂದಲೂ ಸರ್ಪಾಧಿಪತಿಗಳಿಂದಲೂ ಉಪಚರಿಸಲ್ಪಡುತ ಸ್ತುತಿಸಲ್ಪಡುತಲಿರುವವನಾಗಿ ತನ್ನ ಕೀರ್ತಿ ಪ್ರಕಾಶಗಳಾದ ಪದಪದ್ಯಗಳಿಂದ ಸಮೀಪದಲ್ಲಿ ಮನೋಹರವಾದ ಗಾನಂಗೈಯಲ್ಪಡುತ ಸಭಾಸ್ಥಾನದಲ್ಲಿ ದಿವ್ಯ ಸಿಂಹಾಸನಾರೂಢನಾಗಿ ಪೂರ್ಣಚಂದ್ರನಂತೆ ಅತಿ ಮನೋಹರವಾದ ಶ್ವೇತಚ್ಛತ್ರವನ್ನೂ ಮಹಾರಾಜಚಿನ್ಹೆಗಳಿಂದ ಮಿಕ್ಕಂಥಾ ಚಾಮರಧ್ವಜ

ನಾದಿಗಳಿಂದಲೂ ದಿವ್ಯಸ್ತ್ರೀಯರಿಂದಲೂ ನಾಲ್ಕು ಕಡೆಯಲ್ಲೂ ಉಪಚರಿಸಲ್ಪಡುತಲಿರುವವನಾಗಿ ತನ್ನ ಅರ್ಧಸಿಹ್ಮಾಸನ
ದಲ್ಲಿ ಕುಳಿತಿರುವ ಶಚೀದೇವಿಯೊಡನೆ ಅತ್ಯಂತವಾಗಿ ಹೊಳೆಯುತಲಿರುವವನಾಗಿ ಅತಿ ಸಂತೋಷದಿಂದ ಸಕಲದೇವತೆ
ಗಳಿಗೂ ದರ್ಶನವನ್ನು ಕೊಡುತಲಿದ್ದನು ; ಈರೀತಿ ಮಹಾಸಾಮ್ರಾಜ್ಯಯುಕ್ತನಾಗಿರುವ ಆ ಇಂದ್ರನು ಐಶ್ವರ್ಯ
ಮದದಿಂದ ಯಾವಾಗ ದೇವತೆಗಳಿಗೂ ತನಿಗೂ ಸಹ ಪರಮಗುರುವಾಗಿ ಋಷಿಶ್ರೇಷ್ಠನಾಗಿ ದೇವಾಸುರರಿಂದ ನಮ
ಸ್ಕೃತನಾಗಿ ತನ್ನ ಸಭಾಸ್ಥಾನವನ್ನೈದಿದವನಾಗಿರುವ ಬೃಹಸ್ಪತಿಯನ್ನು ನೋಡಿ ಪ್ರತ್ಯುತ್ಥಾನ ಪೀಠಪ್ರದಾನ
ಅರ್ಘ್ಯಾದಿಗಳಿಂದ ಉಪಚರಿಸದೆ ಸಂತೋಷಪಡುವವನಾಗದೆ ಸಿಹ್ಮಾಸನದಿಂದ ಏಳಲಿಲ್ಲ ; ಆ ಸಮಯದಲ್ಲಿ ಬೃಹಸ್ಪ
ತಿಯು ಐಶ್ವರ್ಯಮದದಿಂದ ಇಂದ್ರನಿಗುಂಟಾದ ಚಿತ್ತವಿಕಾರವನ್ನು ತಿಳಿದು ಆ ಸಭೆಯಿಂದ ಹೊರಕ್ಕೆ ಬಂದು ಮೌ
ನದಿಂದ ತನ್ನ ಗೃಹವನ್ನೈದಿದನು ; ಇಂದ್ರನು ತನ್ನಿಂದ ಮಾಡಲ್ಪಟ್ಟ ಗುರುತಿರಸ್ಕಾರವನ್ನು ತಾನೇ ಸ್ಮರಿಸಿಕೊಂಡು
ಆ ದೇವಸಭೆಯಲ್ಲಿ ತನ್ನನ್ನು ತಾನೇ ಅತ್ಯಂತವಾಗಿ ನಿಂದಿಸಿದನು ; ಯಾವ ಕಾರಣದಿಂದ ಸ್ವಲ್ಪಬುದ್ಧಿಯುಳ್ಳವನಾ
ಐಶ್ವರ್ಯಮತ್ತನಾಗಿರುವ ನನ್ನಿಂದ ಅಂಥಾ ಗುರುವು ತಿರಸ್ಕರಿಸಲ್ಪಟ್ಟನೋ ಅದುಕಾರಣ ನನ್ನಿಂದ ಅಕಾರ್ಯ
ಮಾಡಲ್ಪಟ್ಟಿತು ; ಕಟಕಟಾ ಸತ್ವಗುಣಪ್ರಧಾನರಾದ ದೇವತೆಗಳಿಗೆ ಅಧಿಪತಿಯಾದ ನಾನು ಯಾವ ತ್ರಿ
ಮ್ರಾಜ್ಯದಿಂದ ಅಸುರರಭಾವವನ್ನೈದಿಸಲ್ಪಟ್ಟವನಾದೆನೋ ಅಂಥಾ ತ್ರಿಲೋಕಸಾಮ್ರಾಜ್ಯವನ್ನು
ಯಾವ ಪುರುಷನು ಅಕ್ಷೇಪಿಶ್ಯಾನು ; ಲೋಕದಲ್ಲಿ ಮಹಾರಾಜಯೋಗ್ಯವಾದ ಸಿಹ್ಮಾಸನದಲ್ಲಿ ಕು
ವು ಪ್ರತ್ಯುತ್ಥಾನಾದಿಗಳನ್ನು ಮಾಡುವವನಾಗಬಾರದೆಂದು ಯಾವ ಪುರುಷರು ಪೇಳುತಲಿಧಾರೋ
ರಹಸ್ಯವನ್ನರಿಯರು ! ದುರ್ಮಾರ್ಗವನ್ನು ಉಪದೇಶಂಗೈಯುತಲಿರುವ ಆ ಪುರುಷರ ವಚನದಲ್ಲಿ
ಸಂಗೈವರೋ ಆ ಪುರುಷರು ಶಿಲಾಮಯವಾದ ಹರಿಗೋಲಿನಿಂದ ಹೊಂದಿರುವ ಜನರಂತೆ ಸಪ್ತಪಾತ
ತಲೂ ಕೆಳಗಿರುವ ಅಂಧತಮಸ್ಸೆಂಬ ನರಕದಲ್ಲಿ ಮಗ್ನರಾಗುವರು ; ಇನ್ನುಮೇಲೆ ನಾನು ಶಠಭಾವ
ಗಂಭೀರವಾದ ಬುದ್ಧಿಯುಳ್ಳ ದೇವಾಚಾರ್ಯನಾದ ಬೃಹಸ್ಪತಿಯ ಚರಣಗಳನ್ನು ನನ್ನ ಶಿರಸ್ಸಿನಿಂದ
ಹಾ ಆ ಗುರುವಿನ ಪ್ರಸಾದವನ್ನು ಸಂಪಾದಿಸುತ್ತೇನೆಂಬದಾಗಿ ಚಿಂತಿಸುತ್ತಿರಲು ಸರ್ವಜ್ಞನಾದ ಬ
ಇಂದ್ರನ ಗೃಹದಿಂದ ಹೊರಕ್ಕೆ ಬಂದವನಾಗಿ ಅಮಿತವಾದ ತನ್ನ ಮಾಯೆಯಿಂದ ಅಂತರ್ಧಾ
ವಂತನಾದ ಇಂದ್ರನು ಬಹುಪ್ರಕಾರದಿಂದ ಪರೀಕ್ಷಿಸುವನಾದಾಗ್ಯೂ ಚನ್ನಾಗಿ ಆ ಗುರುವಿ
ತಿಳಿಯದೆ ಬುದ್ಧಿಯಿಂದ ಜ್ಞಾನವನ್ನುಗೈಯುತ ದುಃಖಯುಕ್ತನಾಗಿ ಚಿತ್ತಸ್ವಾಸ್ಥ್ಯವನ್ನು
ಇರುವಲ್ಲಿ ಅಸುರರು ಆ ವೃತ್ತಾಂತವನ್ನು ಕೇಳಿ ಆ ಕ್ಷಣದಲ್ಲೇ ತಮಗೆ ಆಚಾರ್ಯನಾದ ಶುಕ್ರನ ಮತ
ಆಯುಧಪಾಣಿಗಳಾಗಿ ದುಸ್ಸಹವಾದ ಮದದಿಂದ ದೇವತೆಗಳನ್ನು ಕುರಿತು ಯುದ್ಧಂಗೈಯ್ಯಲೋಸುಗ
ಗೈದರು ; ಇಂದ್ರಾದಿ ದೇವತೆಗಳು ಮಹಾಯುದ್ಧದಲ್ಲಿ ಆ ಅಸುರರಿಂದ ಬಿಡಲ್ಪಟ್ಟ ಮಹಾತೀಕ್ಷ್ಣಗಳಾದ
ಳಿಂದ ಛೇದಿಸಲ್ಪಟ್ಟ ಶರೀರಗಳು ತೊಡೆಗಳು ಭುಜಗಳೂ ಉಳ್ಳವರಾಗಿ ಪರಾಜಯವನ್ನೈದಿ ಬೊಗ್ಗಿದ ಶಿರಸ್ಸುಗಳು
ಳ್ಳವರಾಗಿ ಬ್ರಹ್ಮನನ್ನು ಶರಣುಹೊಂದಿದರು ; ಆ ಸಮಯದಲ್ಲಿ ಭಗವಂತನಾದ ಬ್ರಹ್ಮದೇವನು ಅಸುರರಿಂದ ಭಗ್ನ
ರಾದ ದೇವತೆಗಳನ್ನು ನೋಡಿ ಅತ್ಯಂತ ದಯೆಯಿಂದ ಅವರನ್ನು ಸಮಾಧಾನಂಗೈಯುತ 'ಎಲೈ ದೇವತಾಶ್ರೇಷ್ಠರೆ,
ಕಟಕಟಾ ನೀವು ಬ್ರಹ್ಮನಿಷ್ಠನಾದ ಜಿತೇಂದ್ರಿಯನಾದ ಬ್ರಾಹ್ಮಣೋತ್ತಮನಾದ ಬೃಹಸ್ಪತಿಯನ್ನು ಸಭಾಸ್ಥಾನ
ದಲ್ಲಿ ಪ್ರತ್ಯುತ್ಥಾನಾಭಿವಾದನ ಮೊದಲಾದ್ದರಿಂದ ಸಂತೋಷಪಡಿಸಿದವರಾಗಲಿಲ್ಲವೆಂಬದ್ಯಾವದುಂಟೋ ಅದೇ ನಿಮಗೆ
ಮಹತ್ತಾದ ಅನಿಷ್ಟಕ್ಕೆ ಕಾರಣವಾಯಿತು ; ಅತಿ ತೀಕ್ಷ್ಣರಾಗಿ ನಿಮ್ಮಿಂದ ಸಂಹರಿಸಲು ಯೋಗ್ಯರಾಗಿರುವ ಅಸು
ರರ ದೆಶೆಯಿಂದ ಅತ್ಯಂತವಾಗಿ ವೃದ್ಧಿಹೊಂದಿರುವ ನಿಮಗೆ ಪರಾಜಯವುಂಟಾಯಿತೆಂಬದ್ಯಾವದುಂಟೋ ಆ ಪರಾಜ
ಯವೇ ನಿಮ್ಮ ಅನ್ಯಾಯವ್ಯಾಪಾರಕ್ಕೆ ಫಲಸ್ವರೂಪವಾಯಿತು ; ಗುರು ತಿರಸ್ಕಾರವೇ ಕ್ಷಯಿಸುವದಕ್ಕೆ ಕಾರಣವು ;
ಗುರು ಸತ್ಕಾರವೇ ವೃದ್ಧಿಗೆ ಕಾರಣವು ! ಎಲೈ ಇಂದ್ರನೇ, ಪೂರ್ವದಲ್ಲಿ ತಮಗೆ ಗುರುವಾದ ಶುಕ್ರನ ತಿರಸ್ಕಾರ
ದಿಂದ ಅತ್ಯಂತ ಕ್ಷೀಣರಾಗಿ ಈಗ ಅತ್ಯಂತ ಭಕ್ತಿಯಿಂದ ಆ ಶುಕ್ರನನ್ನೇ ಸೇವಿಸಿ ವೃದ್ಧಿಯನ್ನೈದಿರುವ ಶತೃಗಳಾದ

ಅಸುರರನ್ನು ನೋಡು! ಎಲೈ ದೇವತೆಗಳಿರಾ, ಶುಕ್ರನೇ ದೇವತೆಯಾಗುಳ್ಳ ಅಸುರರು ಈಗಲೇ ಬಂದು ನನ್ನ
ಸ್ಥಾನವಾದ ಸತ್ಯಲೋಕವನ್ನು ಆಕ್ರಮಿಸುವರು; ಹೀಗಿರುವಲ್ಲಿ ನಿಮ್ಮ ಸ್ಥಾನವಾದ ಸ್ವರ್ಗವನ್ನು ಆಕ್ರಮಿಸಿದ
ರೆಂದು ಏನು ಹೇಳತಕ್ಕದ್ದು; ಭೇದಿಸುವದಕ್ಕೆ ಅಶಕ್ಯರಾದ ಮಂತ್ರಾಲೋಚನೆಯುಳ್ಳವರಾಗಿ ಶುಕ್ರನಿಗೆ ಶಿಷ್ಯರಾ
ಗಿರುವ ಅಸುರರು ಸ್ವರ್ಗಲೋಕವನ್ನು ಗಣನೆಮಾಡುವರಲ್ಲ; ಯಾವಕಾರಣದಿಂದ ಬ್ರಾಹ್ಮಣರು ಶ್ರೀಹರಿಯು
ಗೋವುಗಳು ಇವರೇ ಅನುಗ್ರಹ ಕರ್ತರಾಗುಳ್ಳ ಅರಸುಗಳಿಗೆ ಮಾತ್ರವೇ ಅರಿಷ್ಟಗಳುಂಟಾಗದೆ ಬ್ರಾಹ್ಮಣಾದಿಗ
ಳಲ್ಲಿ ಭಕ್ತಿರಹಿತರಾದವರಿಗೆ ಅನಿಷ್ಟಗಳುಂಟಾಗುವವೋ ಅದುಕಾರಣ ನೀವು ಬ್ರಾಹ್ಮಣನಾದ ತಪಸ್ವಿಯಾದ
ತ್ವಷ್ಟೃಪುತ್ರನಾದ ಆತ್ಮಜ್ಞನಾದ ವಿಶ್ವರೂಪನನ್ನು ಶೀಘ್ರದಿಂದ ಆಚಾರ್ಯಭಾವದಿಂದ ಭಜಿಸುವರಾಗಿ; ಅವನಿಗೆ
ಸುರರಲ್ಲಿರುವ ಪಕ್ಷಪಾತವನ್ನು ಸಹಿಸುವರಾದರೆ ನಿಮ್ಮಿಂದ ಪೂಜಿಸಲ್ಪಟ್ಟವನಾಗಿ ಆ ವಿಶ್ವರೂಪನು ನಿಮ್ಮ ಇಷ್ಟಾ
ಗಳನ್ನು ಕಲ್ಪಿಸುವನಾಗುತ್ತಾನೆ' ಎಂಬದಾಗಿ ಬ್ರಹ್ಮದೇವನಿಂದ ಆಜ್ಞಾಪಿಸಲ್ಪಟ್ಟವರಾಗಿ ಇಂದ್ರಾದಿ ದೇವತೆಗಳು
ೋವ್ಯಥೆಯನ್ನು ಬಿಟ್ಟು ತ್ವಷ್ಟೃಪುತ್ರನಾದ ವಿಶ್ವರೂಪನ ಸಮೀಪವನ್ನೈದಿ ಅವನನ್ನಾಲಿಂಗನಂಗೈದು 'ಎಲೈ
ನೆ, ನಿನಗೆ ಶುಭವುಂಟಾಗಲಿ; ನಾವು ಅತಿಥಿಗಳಾಗಿ ನಿನ್ನಾಶ್ರಮವನ್ನೈದಿದೆವು; ಈ ತಂದೆಗಳಾದ ನಮಗೆ
ಾದ ಇಷ್ಟಾರ್ಥವು ಪುತ್ರನಾದ ನಿನ್ನಿಂದ ಸಂಪಾದಿಸಲ್ಪಟ್ಟಂಥಾದ್ದಾಗಲಿ; ಲೋಕದಲ್ಲಿ ಸತ್ಪುತ್ರರು
ಗ್ಯೂ ಅವರಿಗೆ ಮಾತಾಪಿತೃಗಳ ಶುಶ್ರೂಷೆಯು ಉತ್ಕೃಷ್ಟವಾದ ಧರ್ಮವೆಂದು ಶಾಸ್ತ್ರವಿರು
ವೆ ಬ್ರಹ್ಮಚಾರಿಗಳಾಗಿರುವ ಪುರುಷರಿಗೆ ಮಾತಾಪಿತೃಗಳ ಶುಶ್ರೂಷೆಯು ಉತ್ಕೃಷ್ಟವಾದ ಧರ್ಮ
ಳತಕ್ಕದ್ದು! ಎಲೈ ಗುರುವೇ, ಉಪನಯನಪೂರ್ವಕವಾಗಿ ವೇದೋಪದೇಶಂಗೈದಿರುವ ಆಚಾ
ದ್ವೇದಸ್ವರೂಪನು; ತಂದೆಯು ಸಾಕ್ಷಾದ್ಬ್ರಹ್ಮದೇವಸ್ವರೂಪನು; ಅಣ್ಣನು ಇಂದ್ರಸ್ವರೂಪನು;
ೂಮಿಸ್ವರೂಪಳು; ಅಕ್ಕನು ದಯಾಸ್ವರೂಪಳು; ಅತಿಥಿಯು ಧರ್ಮಸ್ವರೂಪನು; ಅಭ್ಯಾಗತ
ಪನು; ಸಕಲ ಭೂತಗಳು ಶ್ರೀಹರಿಸ್ವರೂಪಗಳು; ಆದ್ದರಿಂದ ಪ್ರಕೃತದಲ್ಲಿ ಅತ್ಯಂತವಾಗಿ ಆರ್ತ
ಶತೃಗಳಿಂದುಂಟಾದ ತಿರಸ್ಕಾರವೆಂಬ ಆರ್ತಿಯನ್ನು ನೀನು ತಪಸ್ಸಿನಿಂದ ಪರಿಹರಿಸುವನಾಗಿ
ಪಾಲಿಸುವನಾಗು; ಬ್ರಹ್ಮನಿಷ್ಠನಾದ ಬ್ರಾಹ್ಮಣೋತ್ತಮನಾದ ಪೂಜ್ಯನಾದ ನಿನ್ನನ್ನು
ಿ ವರಿಸುತಲಿಧೇವೆ; ನಿನ್ನ ತೇಜೋವಿಶೇಷದಿಂದ ಯಾವರೀತಿ ನಾವು ಶತೃಗಳಾದ ಅಸು
ಯಿಸುವೆವೋ ಆರೀತಿ ನಮಗೆ ನೀನು ಸಹಾಯಕನಾಗು; ನೀನು ನಮಗೆ ಉಪಾಧ್ಯಾಯ
ಷ್ಠರಾದ ನಮಗೆ ನೀವು ಎಂತು ಅಭಿವಾದನಂಗೈಯುವರಾದೀರಿ; ಜ್ಯೇಷ್ಠರಿಂದ ಕನಿಷ್ಠನಿಗೆ ಅಭಿವಾ
ೋಗ್ಯವೆಂದಲ್ಲಿ ಫಲನಿಮಿತ್ತಕವಾದ ಕನಿಷ್ಠಪಾದಾಭಿವಂದನವು ನಿಂದಿತವಲ್ಲ; ಮತ್ತೂ ಮಂತ್ರೋಪ
ವ್ಯತಿರಿಕ್ತ ವಿಷಯದಲ್ಲಿ ಜ್ಯೇಷ್ಠನಿಗೆ ವಯಸ್ಸು ಕಾರಣವಾಗುವದು; ಮಂತ್ರವಿಷಯದಲ್ಲಿ ವಯಸ್ಸು
ರಣವಲ್ಲವಾದ್ದರಿಂದ ಮಂತ್ರೋಪದೇಶವಂಗೈಯುವನಾದಕಾರಣ ನೀನು ನಮಗೆ ಜ್ಯೇಷ್ಠನಾಗುತಲಿದ್ದೀಯೆ'
ಎಂಬದಾಗಿ ದೇವತಾಸಮೂಹಗಳಿಂದ ಪೌರೋಹಿತ್ಯಕ್ಕೋಸ್ಕರ ಪ್ರಾರ್ಥಿಸಲ್ಪಟ್ಟ ವಿಶ್ವರೂಪನು ಆ ದೇವತೆಗಳನ್ನು
ಕುರಿತು ಮುಗುಳುನಗೆಯೊಡಗೂಡಿದ ಮುಖವುಳ್ಳವನಾಗಿ ಮೃದುವಚನದಿಂದ 'ಎಲೈ ನಾಥರಾದ ದೇವತೆಗಳಿರಾ,
ಅಧರ್ಮಕ್ಕೆ ಕಾರಣವಾದ್ದರಿಂದ ಧರ್ಮಶೀಲರಾದ್ದರಿಂದ ನಿಂದಿಸಲ್ಪಟ್ಟದ್ದಾಗಿ ಪೂರ್ವದಲ್ಲಿ ಸಿದ್ಧವಾಗಿರುವ ಬ್ರಹ್ಮ
ವರ್ಚಸ್ಸನ್ನು ನಾಶಂಗೈಯ್ಯುವದಾಗಿರುವ ಈ ಪೌರೋಹಿತ್ಯವನ್ನು ಲೋಕೇಶ್ವರರಾದ ನಿಮ್ಮಿಂದ ಯಾಚಿಸಲ್ಪಟ್ಟ
ವನಾಗಿ ನಿಮ್ಮ ಶಿಕ್ಷೆಗೆ ಯೋಗ್ಯನಾಗಿರುವ ನನ್ನಂಥಾ ಪುರುಷನು ಎಂತು ನಿಮ್ಮ ವಚನವನ್ನು ನಿಷೇಧಿಸುವ
ನು; ಗುರುಗಳ ವಚನವನ್ನು ತಿರಸ್ಕರಿಸುವವನಾಗದೆ ಅವರ ಆಜ್ಞೆಯನ್ನು ಪಾಲನಂಗೈವದೆ ಶಿಷ್ಯನಿಗೆ ಸ್ವಾ
ರ್ಥವೆಂಬ ಅರ್ಥವು ಶಾಸ್ತ್ರದಿಂದ ನಿರೂಪಿಸಲ್ಪಡುತಲಿದೆ; ಪೌರೋಹಿತ್ಯವಿದ್ದಲ್ಲಿ ಧನಲಾಭವುಂಟಾಗುವದು; ಆ
ಧನದಿಂದ ಧರ್ಮವು ಸಿದ್ಧಿಸುವದು; ಇಲ್ಲದೇ ಹೋದರೆ ನಿರ್ಧನನಾದ ಪುರುಷನಿಗೆ ಎಂತು ಧರ್ಮಸಿದ್ಧಿಯುಂಟಾಗು
ವದು; ಅದುಕಾರಣವೇ ಜನರು ಧನದಿಂದ ಸಂತೋಷಪಡುತಲಿದ್ದಾರೆ! ಎಲೈ ದೇವತೆಗಳಿರಾ, ಗದ್ದೆ ಹೊಲಗಳಲ್ಲಿ

ಅವುಗಳಿಗೆ ಅಧಿಪತಿಗಳಾದ ಪುರುಷರಿಂದ ಉಪೇಕ್ಷೆಯಿಂದ ಬಿಡಲ್ಪಟ್ಟ ಧಾನ್ಯದ ನುಚ್ಚುಗಳನ್ನು ಬಂದೊಂದನ್ನಾಗಿ ಗ್ರಹಿಸುವದೇ ಶೀಲವೃತ್ತಿಯು; ಕುಯಿದ ಗದ್ದೆ ಹೊಲಗಳಲ್ಲಿ ಬಿದ್ದಿರುವ ಭತ್ತಮೊದಲಾದ ಕಾಳುಗಳನ್ನು ಗ್ರಹಿಸುವದೇ ಉಂಛವೃತ್ತಿಯು; ದರಿದ್ರರಾದ ನಮಗೆ ಆ ಶೀಲವೃತ್ತಿ ಉಂಛವೃತ್ತಿಗಳೇ ಧನಗಳಾಗಿವೆದು; ಈ ಗೃಹಸ್ಥಾಶ್ರಮದಲ್ಲಿ ಆ ಎರಡು ವೃತ್ತಿಗಳಿಂದಲೇ ಮಹಾತ್ಮರಿಗೆ ಆತಿಥ್ಯಾದಿಗಳನ್ನು ಮಾಡುತಲಿರುವ ನಾನು ಪೌರೋಹಿತ್ಯದಿಂದ ದುಷ್ಟಬುದ್ಧಿಯುಳ್ಳ ಪುರುಷನು ಸಂತೋಷಪಡುವ ಅಂಥಾ ನಿಂದಿತವಾದ ಪೌರೋಹಿತ್ಯವನ್ನು ಎಂತು ಅಂಗೀಕರಿಸಲಿ; ಆದಾಗ್ಯೂ ಗುರುಗಳಾದ ನಿಮ್ಮಿಂದ ಪ್ರಾರ್ಥಿಸಲ್ಪಟ್ಟ ಈ ಕಾರ್ಯವನ್ನು ಕುರಿತು ನಾನು ನಿಷೇಧ ವಚನವನ್ನು ನುಡಿಯುವದಿಲ್ಲ; ನಿಮ್ಮಿಂದ ಪ್ರಾರ್ಥಿಸಲ್ಪಟ್ಟ ಸಮಸ್ತ ಕಾರ್ಯವನ್ನು ನಾನು ಪ್ರಾಣಗಳಿಂದಲೂ ಅರ್ಥಗಳಿಂದಲೂ ಸಾಧಿಸುತ್ತೇನೆ' ಎಂದು ಮಹಾ ತಪಸ್ವಿಯಾದ ವಿಶ್ವರೂಪನು ದೇವತೆಗಳಿಗೋಸ್ಕರ ಪೌರೋಹಿತ್ಯವನ್ನು ನಿರ್ವಹಿಸಿದನು; ಅನಂತರದಲ್ಲಿ ಸಮರ್ಥನಾದ ವಿಶ್ವರೂಪನು ಶುಕ್ರಾಚಾರ್ಯರ ನೀತಿವಿದ್ಯೆಯಿಂದ ಅಸುರರ ಸಾಮ್ರಾಜ್ಯವು ರಕ್ಷಿಸಲ್ಪಟ್ಟಿದ್ದಾದಾಗ್ಯೂ ಆ ಅಸುರರ ಸಾಮ್ರಾಜ್ಯವನ್ನು ಶ್ರೀ ನಾರಾಯಣ ಕವಚಾತ್ಮಕವಾದ ಮಂತ್ರ ವಿಶೇಷದಿಂದ ಜಯಿಸಿ ಪುನಹಾ ತ್ರೈಲೋಕ್ಯಾಧಿಪತ್ಯವನ್ನು ಇಂದ್ರನಿಗೆ ಇತ್ತನು; ಉತ್ಕೃಷ್ಟವಾದ ಬುದ್ಧಿಯುಳ್ಳ ಸಮರ್ಥನಾದ ವಿಶ್ವರೂಪನು ಯಾವ ಶ್ರೀ ನಾರಾಯಣ ಕವಚಮಂತ್ರದಿಂದ ಇಂದ್ರನು ರಕ್ಷಿಸಲ್ಪಟ್ಟವನಾಗಿ ಅಸುರ ಸೈನ್ಯಗಳನ್ನು ಜಯಿಸಿದನೋ ಅಂಥಾ ನಾರಾಯಣ ಕವಚಮಂತ್ರವನ್ನು ಇಂದ್ರನಿಗೆ ಉಪದೇಶಂಗೈದನು.

೮ನೇ ಅಧ್ಯಾಯ.

ವಿಶ್ವರೂಪನು ಇಂದ್ರನಿಗೆ ನಾರಾಯಣಕವಚವನ್ನು ಉಪದೇಶಿಸಿದ್ದು.

ಆ ಬಳಿಕ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ಇಂದ್ರನು ಯಾವ ಕವಚಮಂತ್ರದಿಂದ ರಕ್ಷಿಸಲ್ಪಟ್ಟವನಾಗಿ ಸಮಸ್ತಗಳಾದ ಅಸುರಸೇನೆಗಳನ್ನು ಕ್ರೀಡಿಸುವನಂತೆ ಲೀಲಾಮಾತ್ರದಿಂದ ಜಯಿಸಿ ತ್ರೈಲೋಕ್ಯಸಾಮ್ರಾಜ್ಯವನ್ನಾಳಿದನೋ ಅಂಥಾ ಶ್ರೀನಾರಾಯಣಕವಚವನ್ನು ನನಿಗೆ ನಿರೂಪಿಸು! ಇಂದ್ರನು ಯಾವಪ್ರಕಾರದಿಂದ ಆ ಕವಚದಿಂದ ರಕ್ಷಿತನಾಗಿ ಯುದ್ಧದಲ್ಲಿ ಶಸ್ತ್ರಪಾಣಿಗಳಾದ ಶತ್ರುಗಳನ್ನು ಜಯಿಸಿದನೊ ಆಪ್ರಕಾರವನ್ನು ನನಿಗೆ ನಿರೂಪಿಸು" ಎಂದು ಪ್ರಶ್ನೆಗೈದನು.

ಶುಕಮುನಿಯು "ಎಲೈ ಪರೀಕ್ಷಿದ್ರಾಯನೆ, ವಿಶ್ವರೂಪನು ದೇವತೆಗಳಿಂದ ನಮಗೆ ಪುರೋಹಿತನಾಗೆಂದು ವರಿಸಲ್ಪಟ್ಟವನಾಗಿ ತನ್ನನ್ನು ಪ್ರಶ್ನೆಗೈಯುತಲಿರುವ ಇಂದ್ರನಿಗೋಸ್ಕರ ಶ್ರೀನಾರಾಯಣಕವಚವನ್ನು ಉಪದೇಶಂಗೈದ ಆ ಉಪದೇಶಕ್ರಮವನ್ನು ನನ್ನಿಂದ ಏಕಾಗ್ರಚಿತ್ತನಾಗಿ ಶ್ರವಣಂಗೈಯುವನಾಗು; ಉಪಾಸಕನಾದ ಪುರುಷನು ಹಸ್ತ ಪಾದ ಪ್ರಕ್ಷಾಳನಂಗೈದು ಪವಿತ್ರಯುಕ್ತನಾಗಿ ಆಚಮನಂಗೈದು ತನಿಗೆ ಅನುಕೂಲವಾದ ಆಸನದಲ್ಲಿ ಉತ್ತರಾಭಿಮುಖನಾಗಿ ಕುಳಿತು ಪರಿಶುದ್ಧನಾಗಿ ಅಷ್ಟಾಕ್ಷರ ದ್ವಾದಶಾಕ್ಷರ ಮಂತ್ರಗಳನ್ನು ಮೌನಯುಕ್ತನಾಗಿ ಅಂಗನ್ಯಾಸ ಕರನ್ಯಾಸಗಳಂಗೈದು ಉಪಾಸಕನು ಆಧ್ಯಾತ್ಮಿಕ ಆಧಿಭೌತಿಕ ಆಧಿದೈವಿಕಗಳೆಂಬ ತಾಪತ್ರಯಗಳಿಂದ ಭಯವುಂಟಾದಲ್ಲಿ ತಾನು ನಾರಾಯಣಸ್ವರೂಪನಾಗಿ ನಾರಾಯಣಾತ್ಮಕವಾದ ಕವಚವನ್ನು ಧರಿಸಬೇಕು; ಅಷ್ಟಾಕ್ಷರನ್ಯಾಸವನ್ನು ನಿರೂಪಿಸುವೆನು ಕೇಳು: ಮೊದಲು ಪಾದಗಳಲ್ಲಿ ಜಾನುಪ್ರದೇಶಗಳಲ್ಲಿ ಉದರದಲ್ಲಿ ಹೃದಯದಲ್ಲಿ ವಕ್ಷಸ್ಸಿನಲ್ಲಿ ಮುಖದಲ್ಲಿ ಶಿರಸ್ಸಿನಲ್ಲಿ ನಾರಾಯಣಾಷ್ಟಾಕ್ಷರೀಯ ಪ್ರಣವಾದಿಯಾಗಿರುವ ಎಂಟು ಅಕ್ಷರಗಳನ್ನು ಈ ಪಾದಾದಿ ಶಿರಸ್ಸುಪರ್ಯಂತಗಳಾದ ಅಷ್ಟಾಕ್ಷರಗಳಲ್ಲಿ ಒಂದೊಂದು ಅಕ್ಷರವನ್ನು ಪ್ರಣವಸಂಪುಟಿತವಾಗಿ ನ್ಯಾಸಂಗೈವವನಾಗಬೇಕು; ಅಥವಾ ಈ ಪ್ರಣವಾದಿ ಎಂಟು ಅಕ್ಷರಗಳನ್ನು ವ್ಯತ್ಯಸ್ತವಾಗಿ ಒಂದೊಂದು ಅಕ್ಷರವನ್ನು ಪ್ರಣವಸಂಪುಟಿತವಾಗಿ ಶಿರಸ್ಸನ್ನು ಮೊದಲುಗೊಂಡು ಪಾದಪರ್ಯಂತವಾದ ಈ ಎಂಟು ಸ್ಥಾನಗಳಲ್ಲಿ ನ್ಯಾಸಂಗೈಯುವ

ವನಾಗಬೇಕು; ಅನಂತರದಲ್ಲಿ ವಾಸುದೇವ ದ್ವಾದಶಾಕ್ಷರಿಯಿಂದ ಪ್ರಣವಾದಿ ಯಕಾರಾಂತಗಳಾದ ಹನ್ನೆರಡಕ್ಷರಗಳಲ್ಲಿ ಒಂದೊಂದು ಅಕ್ಷರವನ್ನು ಪ್ರಣವಸಂಪ್ರಟಿತವಾಗಿ ದಕ್ಷಿಣಹಸ್ತ ತರ್ಜನಿಯನ್ನು ಮೊದಲುಗೊಂಡು ವಾಮಹಸ್ತ ತರ್ಜನೀಪರ್ಯಂತವು ಎಂಟು ಅಂಗುಳೀಗಳಲ್ಲಿ ಎಂಟು ಅಕ್ಷರಗಳನ್ನು ನ್ಯಾಸಂಗೈಯಬೇಕು; ಮಿಕ್ಕ ನಾಲ್ಕು ಅಕ್ಷರಗಳನ್ನು ದಕ್ಷಿಣವಾಮಹಸ್ತಾಂಗುಷ್ಠಗಳ ಮಧ್ಯಪರ್ವಗಳನ್ನು ಬಿಟ್ಟು ಆದ್ಯಂತಗಳಾದ ನಾಲ್ಕು ಪರ್ವಗಳಲ್ಲಿ ಒಂದೊಂದು ಅಕ್ಷರವನ್ನಾಗಿ ನ್ಯಾಸಂಗೈಯುವನಾಗಬೇಕು; ಉಪಾಸಕನು ವಿಷ್ಣುಷಡಕ್ಷರಿಯಿಂದ ಹೃದಯದಲ್ಲಿ ಪ್ರಣವವನ್ನು ಶಿರಸ್ಸಿನಲ್ಲಿ ವಿಕಾರವನ್ನು ಭ್ರೂಮಧ್ಯದಲ್ಲಿ ಷಕಾರವನ್ನು ಶಿಖಾಸ್ಥಾನದಲ್ಲಿ ಣಕಾರವನ್ನು ನೇತ್ರಗಳಲ್ಲಿ ವೆಕಾರವನ್ನು ಸಕಲ ಸಂಸ್ಥಾನಗಳಲ್ಲಿ ನಕಾರವನ್ನು ಸಹಾ ನ್ಯಾಸಂಗೈದು ಮಕಾರವನ್ನು ಅಸ್ತ್ರರೂಪದಿಂದ ಧ್ಯಾನಂಗೈದು ವಿಸರ್ಗಗಳೊಡನೆ ಷಡೆಂಬ ಅಕ್ಷರದೊಡನೆ ಯುಕ್ತವಾದ್ದರಿಂದ ಅಸ್ತ್ರಮಂತ್ರವಾದ ಆ ಮಕಾರವನ್ನು ದಿಗ್ಬಂಧನದಲ್ಲಿ ಪ್ರಯೋಗಿಸಬೇಕು; ಈರೀತಿ ನ್ಯಾಸಂಗೈವ ಪುರುಷನು ಆ ಮಂತ್ರಸ್ವರೂಪನೇ ಆಗುವನು; ಐಶ್ವರ್ಯಾಧಿ ಷಟ್ಛಕ್ತಿಗಳೊಡನೆ ಯುಕ್ತನಾದ ತೇಜಸ್ತಪಸ್ಸುಗಳೇ ಶರೀರವಾಗುಳ್ಳ ಈಶ್ವರರೂಪನಾದ ಪರಮಾತ್ಮನನ್ನು ಈರೀತಿ ಧ್ಯಾನಂಗೈದು ಅನಂತರದಲ್ಲಿ ನಾರಾಯಣಕವಚ ಮಂತ್ರವನ್ನು ಪಠಿಸಬೇಕು; ಗರುಡನ ಹೆಗಲಿನಲ್ಲಿರಿಸಲ್ಪಟ್ಟ ಪಾದಪದ್ಮಗಳುಳ್ಳವನಾಗಿ ಶಂಖ ಚಕ್ರ ಚರ್ಮ ಖಡ್ಗ ಗದಾ ಬಾಣ ಧನುಃ ಪಾಶಗಳನ್ನು ಧರಿಸಿದವನಾಗಿ ಅಷ್ಟಭುಜಗಳುಳ್ಳ ಅಣಿಮಾದ್ಯಷ್ಟೈಶ್ವರ್ಯಯುಕ್ತನಾಗಿರುವ ಶ್ರೀಹರಿಯು ನನಿಗೆ ಸರ್ವರಕ್ಷಣೆಯನ್ನು ಮಾಡಲಿ! ಮತ್ಸ್ಯಮೂರ್ತಿಯು ಜಲದಲ್ಲಿ ಜಲಜಂತುಸಮೂಹಗಳೆಂಬ ವರುಣಪಾಶದದೆಶೆಯಿಂದ ನನ್ನನ್ನು ರಕ್ಷಿಸಲಿ! ಭೂಮಿಯಲ್ಲಿ ಕಪಟಬ್ರಹ್ಮಚಾರಿಯಾದ ವಾಮನಮೂರ್ತಿಯು ನನ್ನನ್ನು ರಕ್ಷಿಸಲಿ! ಆಕಾಶದಲ್ಲಿ ಸರ್ವಸ್ವರೂಪನಾದ ತ್ರಿವಿಕ್ರಮನು ನನ್ನನ್ನು ರಕ್ಷಿಸಲಿ! ಯಾವ ನೃಸಿಂಹಮೂರ್ತಿಯು ಅಟ್ಟಹಾಸಂಗೈಯುತಲಿರಲು ದಶದಿಕ್ಕುಗಳು ಪ್ರತಿಧ್ವನಿಯಂಗೈದವೋ ಗರ್ಭಗಳೂ ಬೆದರಿ ಕೆಳಕ್ಕೆ ಬಿದ್ದವೋ ಅಸುರಾಧಿಪತಿಯಾದ ಹಿರಣ್ಯಕಶಿಪುವಿಗೆ ವೈರಿಯಾದ ಅಂಥಾ ನೃಸಿಂಹಮೂರ್ತಿಯು ಅರಣ್ಯದಲ್ಲಿ ಯುದ್ಧಪ್ರಾರಂಭದಲ್ಲಿ ಇವು ಮೊದಲಾದ ಸ್ಥಾನಗಳಲ್ಲಿ ನನ್ನನ್ನು ಸಲಹುವನಾಗಲಿ! ಯಜ್ಞಸ್ವರೂಪಗಳಾದ ಅವಯವಗಳುಳ್ಳವನಾಗಿ ತನ್ನ ಕೋರದಾಡೆಯಿಂದ ಪ್ರಳಯಕಾಲದ ಸಮುದ್ರದದೆಶೆಯಿಂದ ಭೂಮಿಯನ್ನೆತ್ತಿದವನಾಗಿ ಪ್ರಸಿದ್ಧನಾಗಿರುವ ವರಾಹಮೂರ್ತಿಯು ಮಾರ್ಗದಲ್ಲಿ ನನ್ನನ್ನು ರಕ್ಷಿಸಲಿ! ಪರಶುರಾಮನು ಪರ್ವತಶಿಖರಗಳಲ್ಲಿ ನನ್ನನ್ನು ರಕ್ಷಿಸಲಿ! ಲಕ್ಷ್ಮಣಸ್ವಾಮಿಯೊಡನೆ ಕೂಡಿರುವ ಶ್ರೀರಾಮನು ಪ್ರಯಾಣಕಾಲದಲ್ಲಿ ನನ್ನನ್ನು ರಕ್ಷಿಸಲಿ! ಅಭಿಚಾರಾದಿರೂಪಗಳಾದ ಸಮಸ್ತ ಪ್ರಮಾದಿಗಳ ದೆಶೆಯಿಂದ ಶ್ರೀನಾರಾಯಣನು ನನ್ನನ್ನು ರಕ್ಷಿಸಲಿ! ವಿಷದದೆಶೆಯಿಂದ ನರಮೂರ್ತಿಯು ನನ್ನನ್ನು ರಕ್ಷಿಸಲಿ! ಯೋಗೀಶ್ವರನಾದ ದತ್ತಾತ್ರೇಯನು ಯೋಗಭ್ರಂಶದಿಂದ ನನ್ನನ್ನು ರಕ್ಷಿಸಲಿ! ಕಪಿಲಮೂರ್ತಿಯು ಕರ್ಮಬಂಧದಿಂದ ನನ್ನನ್ನು ರಕ್ಷಿಸಲಿ! ಸನತ್ಕುಮಾರನು ಮನ್ಮಥನದೆಶೆಯಿಂದ ನನ್ನನ್ನು ರಕ್ಷಿಸಲಿ! ಹಯಗ್ರೀವನು ಮಾರ್ಗದಲ್ಲಿ ದೇವತೆಗಳಿಗೆ ನಮಸ್ಕಾರಂಗೈಯ್ಯದೆ ನಡೆಯೋಣದರಿಂದ ಪುಟ್ಟಿದ ಪಾಪದಿಂದ ನನ್ನನ್ನು ರಕ್ಷಿಸಲಿ! ನಾರದಮುನಿಯು ದೇವಪೂಜಾಕಾಲದಲ್ಲಿ ಮತ್ತೊಂದು ವ್ಯಾಸಂಗದಿಂದ ಆ ಪೂಜೆಗೆ ವಿಚ್ಛೇದವುಂಟಾಗೋಣದರಿಂದ ನನ್ನನ್ನು ರಕ್ಷಿಸಲಿ; ಕೂರ್ಮಮೂರ್ತಿಯು ಸಮಸ್ತ ನರಕಗಳದೆಶೆಯಿಂದ ನನ್ನನ್ನು ರಕ್ಷಿಸಲಿ! ಸರ್ವಜ್ಞನಾದ ವ್ಯಾಸಮುನಿಯು ಅಜ್ಞಾನದಿಂದ ನನ್ನನ್ನು ರಕ್ಷಿಸಲಿ! ಬುದ್ಧಮೂರ್ತಿಯು ಪಾಷಂಡರ ಸಂಗತಿಯಿಂದ ಉಂಟಾಗುವ ಪ್ರಮಾದದಿಂದ ನನ್ನನ್ನು ರಕ್ಷಿಸಲಿ! ಧರ್ಮಸಂರಕ್ಷಣೆಗೋಸ್ಕರ ಅವತರಿಸುವ ಕಲ್ಕಿಮೂರ್ತಿಯು ಕಾಲಕಲ್ಮಷರೂಪವಾದ ಕಲಿಕಾಲದಿಂದ ನನ್ನನ್ನು ರಕ್ಷಿಸಲಿ! ಭಗವಂತನಾದ ಧನ್ವಂತರಿಯು ಅಪಥ್ಯದದೆಶೆಯಿಂದ ನನ್ನನ್ನು ರಕ್ಷಿಸಲಿ! ಜಿತೇಂದ್ರಿಯನಾದ ಋಷಭಮೂರ್ತಿಯು ಶೀತೋಷ್ಣಾದಿ ದ್ವಂದ್ವಭಯದಿಂದ ನನ್ನನ್ನು ರಕ್ಷಿಸಲಿ! ಯಜ್ಞಮೂರ್ತಿಯು ಜನಾಪವಾದದಿಂದ ನನ್ನನ್ನು ರಕ್ಷಿಸಲಿ! ಬಲಭದ್ರನು ಜನರಿಂದ ಮಾಡಲ್ಪಡುವ ಘಾತದಿಂದ ನನ್ನನ್ನು ರಕ್ಷಿಸಲಿ! ಆದಿಶೇಷನು ಕ್ರೋಧಯುಕ್ತವಾದ ಸರ್ಪಸಮೂಹದಿಂದ ನನ್ನನ್ನು ರಕ್ಷಿಸಲಿ! ಗದಾಯುಕ್ತನಾದ ಕೇಶವನು ಪ್ರಾತಃಕಾಲದಲ್ಲಿ ನನ್ನನ್ನು ರಕ್ಷಿಸಲಿ! ವೇಣುಧಾರಿಯಾದ ಗೋವಿಂ

ದನು ಸಂಗವಕಾಲದಲ್ಲಿ ನನ್ನನ್ನು ರಕ್ಷಿಸಲಿ! ಉತ್ಕೃಷ್ಟವಾದ ಶಕ್ತಿಯುಳ್ಳ ಶ್ರೀ ನಾರಾಯಣನು ಪೂರ್ವಾಹ್ಣದಲ್ಲಿ ನನ್ನನ್ನು ರಕ್ಷಿಸಲಿ! ಚಕ್ರಪಾಣಿಯಾದ ವಿಷ್ಣುವು ಮಧ್ಯಾಹ್ನದಲ್ಲಿ ನನ್ನನ್ನು ರಕ್ಷಿಸಲಿ! ಭಯಂಕರವಾದ ಧನುಸ್ಸನ್ನು ಧರಿಸಿರುವ ಮಧುಸೂದನನು ಅಪರಾಹ್ಣದಲ್ಲಿ ನನ್ನನ್ನು ರಕ್ಷಿಸಲಿ! ಹೃಷೀಕೇಶನು ಪ್ರದೋಷಕಾಲದಲ್ಲಿ ನನ್ನನ್ನು ರಕ್ಷಿಸಲಿ! ಶ್ರೀ ಪದ್ಮನಾಭನೊಬ್ಬನೆ ಅರ್ಧರಾತ್ರಿಪರ್ಯಂತವಾದ ಕಾಲದಲ್ಲಿಯೂ ಅರ್ಧರಾತ್ರಿಯಲ್ಲಿಯೂ ನನ್ನನ್ನು ರಕ್ಷಿಸಲಿ! ಈಶ್ವರನಾದ ಶ್ರೀವತ್ಸವೆಂಬ ಚಿನ್ಹೆಯನ್ನು ವಕ್ಷಸ್ಥಳದಲ್ಲಿ ಧರಿಸುತಲಿರುವ ಶ್ರೀಹರಿಯು ಅಪರರಾತ್ರಿಯಲ್ಲಿ ನನ್ನನ್ನು ರಕ್ಷಿಸಲಿ! ಖಡ್ಗಧರನಾದ ಈಶ್ವರನಾದ ಜನಾರ್ದನನು ಉಷಃಕಾಲದಲ್ಲಿ ನನ್ನನ್ನು ರಕ್ಷಿಸಲಿ! ದಾಮೋದರನು ಪ್ರಾತಃಕಾಲದಲ್ಲಿ ನನ್ನನ್ನು ರಕ್ಷಿಸಲಿ! ಕಾಲಸ್ವರೂಪನಾದ ಭಗವಂತನಾದ ವಿಶ್ವೇಶ್ವರನು ತ್ರಿಸಂಧ್ಯಾಕಾಲದಲ್ಲಿ ನನ್ನನ್ನು ರಕ್ಷಿಸಲಿ! ಎಲೈ ಸುದರ್ಶನವೇ, ಪ್ರಳಯಾಗ್ನಿಯಂತೆ ತೀಕ್ಷ್ಣವಾದ ಅಂಚುಳ್ಳ ಸುತ್ತಲೂ ಭ್ರಮಿಸುತಲಿರುವ ಚಕ್ರಸ್ವರೂಪನಾದ ನೀನು ಭಗವಂತನಿಂದ ಪ್ರಯೋಗಿಸಲ್ಪಟ್ಟದ್ದಾಗಿ ಅಗ್ನಿಯು ವಾಯುವಿನೊಡಗೂಡಿ ಎಂತು ಶುಷ್ಕವಾದ ತೃಣಸಮೂಹವನ್ನು ದಹಿಸುವದೋ ಅದೇರೀತಿ ಶೀಘ್ರದಿಂದ ಶತ್ರುಸೈನ್ಯವನ್ನು ಅತ್ಯಂತವಾಗಿ ದಹಿಸು ದಹಿಸು! ಸಿಡಿಲಿನಂತೆ ಸ್ಪರ್ಶವುಳ್ಳ ಅಗ್ನಿಕಣಗಳೊಡನೆ ಯುಕ್ತವಾದ ಎಲೈ ಗದೆಯೆ, ನೀನು ಶ್ರೀಹರಿಗೆ ಅತ್ಯಂತ ಇಷ್ಟವಾಗಿದ್ದೀಯೆ; ನಾನು ಭಗವಂತನಿಗೆ ದಾಸನಾಗಿದ್ದೇನೆಯಾದಕಾರಣ ನೀನು ಕೂಷ್ಮಾಂಡ ವೈನಾ ಯಕ್ಷ ರಕ್ಷೋ ಭೂತಗ್ರಹಗಳನ್ನು ಪೀಡಿಸು ಪೀಡಿಸು! ವೈರಿಗಳನ್ನು ಚೂರ್ಣವನ್ನು ಮಾಡು ಚೂರ್ಣವನ್ನು ಮಾಡು! ಎಲೈ ಪಾಂಚಜನ್ಯವೇ, ನೀನು ಶ್ರೀಹರಿಯಿಂದ ಪೂರಿಸಲ್ಪಟ್ಟದ್ದಾಗಿ ಭಯಂಕರವಾದ ಧ್ವನಿಯಿಂದ ಹೃದಯಗಳಿಗೆ ಕಂಪವನ್ನುಂಟುಮಾಡುತಲಿರುವನಾಗಿ ವೈರಿಗಳಾದ ರಾಕ್ಷಸ ಪ್ರಮಥ ಪ್ರೇತ ಮಾತೃ ಪಿಶಾಚ ಬ್ರಹ್ಮರಾಕ್ಷಸಗ್ರಹಗಳನ್ನೂ ಘೋರದೃಷ್ಟಿಯುಳ್ಳ ಇತರ ಗ್ರಹಗಳನ್ನೂ ಓಡಿಸುವದಾಗು ಓಡಿಸುವದಾಗು! ತೀಕ್ಷ್ಣವಾದ ಅಂಚುಳ್ಳ ಎಲೈ ನಂದಕವೆಂಬ ಖಡ್ಗವೇ, ನೀನು ಶ್ರೀಹರಿಯಿಂದ ಪ್ರಯೋಗಿಸಲ್ಪಟ್ಟದ್ದಾಗಿ ನನ್ನ ಶತ್ರುಸೇನೆಗಳನ್ನು ಛೇದಿಸು ಛೇದಿಸು! ಚಂದ್ರಾಕೃತಿಯಾಗಿ ನೂರುಮಂಡಲಗಳುಳ್ಳ ಎಲೈ ಚರ್ಮವೇ, ನೀನು ಶತ್ರುಗಳ ನೇತ್ರಗಳನ್ನೂ ಕ್ರೂರದೃಷ್ಟಿಯುಳ್ಳ ಪುರುಷರ ನೇತ್ರಗಳನ್ನೂ ಮುಚ್ಚು ಮುಚ್ಚು! ಭೂತಗ್ರಹಗಳಿಂದ ಯಾವ ಕೇತುಗಳಿಂದ ಯಾವ ಮನುಷ್ಯರಿಂದ ಯಾವ ಸರ್ಪಗಳಿಂದ ಯಾವ ವ್ಯಾಘ್ರಾದಿಗಳಿಂದ ಯಾವ ಭೂತಗಳಿಂದ ಯಾವ ಪಾಪಗಳಿಂದ ನಮಗೆ ಭಯವುಂಟಾಗುವದೋ ಗ್ರಹಕೇತುಮೊದಲಾದ ಆ ಸಮಸ್ತಗಳು ಶ್ರೀ ನಾರಾಯಣನ ನಾಮಸ್ವರೂಪವಾದ ಅಸ್ತ್ರಮಂತ್ರದ ಉಚ್ಚಾರಣೆಯಿಂದ ಈಕ್ಷಣವೇ ಕ್ಷಯಿಸುವಂಥಾವಾಗಲಿ! ನಮ್ಮ ಇಷ್ಟಾರ್ಥಗಳಿಗೆ ಪ್ರತಿಕೂಲವಾದ ಪ್ರಾಣಿಗಳು ಕ್ಷಯಿಸುವರಾಗಲಿ! ಸ್ತೋತ್ರರೂಪಗಳಾದ ಸಾಮಗಳಿಂದ ಸ್ತುತಿಸಲ್ಪಡುತಲಿರುವ ವೇದಮೂರ್ತಿಯಾದ ಅತಿ ಸಮರ್ಥನಾದ ಶ್ರೀಹರಿವಾಹನವಾದ ಗರುಡನು ಸಮಸ್ತ ಕಷ್ಟಗಳದೆಶೆಯಿಂದ ನಮ್ಮನ್ನು ರಕ್ಷಿಸುವನಾಗಲಿ! ಶ್ರೀಹರಿಯ ನಾಮಧೇಯಗಳು ಆಕೃತಿಗಳು ವಾಹನಗಳು ಆಯುಧಗಳು ಸಮಸ್ತ ವಿಪತ್ತುಗಳ ದೆಶೆಯಿಂದ ನಮ್ಮನ್ನು ಸಲಹುವವಾಗಲಿ! ಶ್ರೀಹರಿಯ ಗಣಪಾಲಕಶ್ರೇಷ್ಠರು ನಮ್ಮ ಬುದ್ಧಿ ಇಂದ್ರಿಯ ಮನಃ ಪ್ರಾಣಗಳನ್ನು ರಕ್ಷಿಸುವರಾಗಲಿ! ಮೂರ್ತಾಮೂರ್ತಸ್ವರೂಪವಾದ ಈ ಸಮಸ್ತ ಪ್ರಪಂಚವೂ ತತ್ವದಿಂದ ಶ್ರೀ ವಾಸುದೇವಸ್ವರೂಪವೇ ಸರಿಯೆಂಬ ಅರ್ಥವು ಯಥಾರ್ಥವಾದರೆ ಆ ಸತ್ಯದಿಂದ ನಮಗೆ ಸಮಸ್ತಗಳಾದ ಉಪದ್ರವಗಳು ಕ್ಷಯಿಸುವಂಥಾದ್ದಾಗಲಿ! ಶ್ರೀಹರಿಯು ತಾನು ಭೇದರಹಿತನಾದಾಗ್ಯೂ ಏಕಾತ್ಮಭಾವದಿಂದ ಮಾಡಲ್ಪಡುವ ಧ್ಯಾನಗಳಿಗೆ ತನ್ನ ಮಾಯೆಯಿಂದ ಭೂಷಣ ಆಯುಧ ಆಕೃತಿ ನಾಮಧೇಯಸ್ವರೂಪಗಳಾದ ನಾನಾಶಕ್ತಿಗಳನ್ನು ಧರಿಸುತಲಿದ್ದಾನೆಂಬದೇ ಯಥಾರ್ಥವಾದರೆ ಆ ಸತ್ಯಪ್ರಮಾಣದಿಂದಲೇ ಸರ್ವಜ್ಞನಾದ ಭಗವಂತನಾದ ಸರ್ವವ್ಯಾಪಕನಾದ ಶ್ರೀಹರಿಯು ತನ್ನ ಸಮಸ್ತ ರೂಪಗಳಿಂದ ನಮ್ಮನ್ನು ಸರ್ವಕಾಲದಲ್ಲಿಯೂ ಸರ್ವಪ್ರದೇಶಗಳಲ್ಲಿಯೂ ರಕ್ಷಿಸಲಿ! ತನ್ನ ತೇಜಸ್ಸಿನಿಂದ ಕಬಳಿಸಲ್ಪಟ್ಟ ಸೂರ್ಯಾದಿ ಸಮಸ್ತ ತೇಜಸ್ಸುಗಳುಳ್ಳ ಭಗವಂತನಾದ ಶ್ರೀ ನೃಸಿಂಹನು ತನ್ನ ಅಟ್ಟಹಾಸದಿಂದ ಲೋಕಭಯವನ್ನು ಪರಿಹರಿಸುವನಾಗಿ ದಿಕ್ಕುಗಳಲ್ಲಿ ಊರ್ಧ್ವಭಾಗದಲ್ಲಿ ಅಧೋಭಾಗದಲ್ಲಿ ಸುತ್ತಲೂ ಒಳಗೆ ಹೊರಗೆ ನಮ್ಮನ್ನು ಸಲಹಲಿ! ಎಂಬದಾಗಿ ವಿಶ್ವ

ರೂಪನು ಇಂದ್ರನಿಗೆ ನಾರಾಯಣ ಕವಚೋಪದೇಶಂಗೈದು ಇಂದ್ರನನ್ನು ಕುರಿತು 'ಎಲೈ ಇಂದ್ರನೆ, ಯಾವ ಕವಚದಿಂದ ನೀನು ರಕ್ಷಿಸಲ್ಪಟ್ಟವನಾಗಿ ಶೀಘ್ರದಿಂದ ಅಸುರರನ್ನು ಜಯಿಸುವೆಯೋ ಅಂಥಾ ಶ್ರೀನಾರಾಯಣ ಸ್ವರೂಪವಾದ ಕವಚವು ನನ್ನಿಂದ ನಿನಗೋಸ್ಕರ ಉಪದೇಶಂಗೈಯಲ್ಪಟ್ಟಿತು; ಈ ಕವಚಮಂತ್ರವನ್ನು ಜಪಿಸುವ ಪುರುಷನು ತನ್ನ ನೇತ್ರದಿಂದ ಯಾವ ಯಾವ ಪುರುಷನನ್ನು ನೋಡುವನೋ ತನ್ನ ಪಾದದಿಂದ ಯಾವ ಪ್ರಾಣಿಯನ್ನು ಮುಟ್ಟುವನೋ ಆಯಾ ಪ್ರಾಣಿಯು ಸಮಸ್ತ ಭಯದಿಂದ ಬಿಡಲ್ಪಡುವನು; ಈ ಕವಚಮಂತ್ರವನ್ನು ಜಪಿಸುವ ಪುರುಷನಿಗೆ ರಾಜ ಚೋರಾದಿ ಗ್ರಹಾದಿಗಳಿಂದಲೂ ವ್ಯಾಧಿ ಮೊದಲಾದ್ದರಿಂದಲೂ ಮತ್ತೊಂದರಿಂದಲೂ ಒಂದು ಸ್ಥಳದಲ್ಲಿ ಒಂದು ಕಾಲದಲ್ಲಾದರೂ ಭಯವುಂಟಾಗಲಾರದು! ಎಲೈ ಇಂದ್ರನೆ, ಪೂರ್ವದಲ್ಲಿ ಈ ನಾರಾಯಣಕವಚವನ್ನು ಧರಿಸುತಲಿದ್ದ ಕೌಶಿಕಗೋತ್ರೋತ್ಪನ್ನನಾದ ಒಬ್ಬ ಬ್ರಾಹ್ಮಣನು ಯೋಗಧಾರಣೆಯಿಂದ ನಿರ್ಜಲವಾದ ಪ್ರದೇಶದಲ್ಲಿ ತನ್ನ ದೇಹವನ್ನು ಬಿಟ್ಟನು; ಎಲ್ಲಿ ಆ ಬ್ರಾಹ್ಮಣನು ದೇಹವನ್ನು ಬಿಟ್ಟನೋ ಆ ಪ್ರದೇಶಕ್ಕೆ ಮೇಲೆ ಒಂದು ಸಮಯದಲ್ಲಿ ಆಕಾಶದಲ್ಲಿ ಚಿತ್ರರಥನೆಂಬ ಗಂಧರ್ವಾಧಿಪತಿಯು ತನ್ನ ಸ್ತ್ರೀಯರಿಂದ ಸುತ್ತಲೂ ಸೇವಿಸಲ್ಪಡುತಲಿರುವವನಾಗಿ ವಿಮಾನದಿಂದ ಸಂಚರಿಸುತ ಆ ಅಪ್ಸರಸ್ತ್ರೀಯರೊಡನೆ ಅಧೋಮುಖನಾಗಿ ಆಕ್ಷಣದಲ್ಲೇ ಆ ಸ್ಥಳದಲ್ಲಿ ಬಿದ್ದನು; ಆಗ ಆ ಚಿತ್ರರಥನು ವಾಲಖಿಲ್ಯರೆಂಬ ಋಷಿಗಳ ವಚನದಿಂದ ಆ ಬ್ರಾಹ್ಮಣನ ಅಸ್ಥಿಗಳನ್ನು ತೆಗದುಕೊಂಡು ಹೋಗಿ ಪೂರ್ವವಾಹಿನಿಯಾದ ಸರಸ್ವತೀನದಿಯಲ್ಲಿ ನಿಕ್ಷೇಪಂಗೈದು ಸ್ನಾನವನ್ನು ಮಾಡಿ ಆತ್ಯಾಶ್ಚರ್ಯಯುಕ್ತನಾಗಿ ಗಂಧರ್ವಲೋಕವನ್ನೈದಿದನು! ಎಲೈ ಇಂದ್ರನೆ, ಇಂಥಾ ಪ್ರಭಾವವುಳ್ಳ ಈ ನಾರಾಯಣಕವಚ ಮಂತ್ರವನ್ನು ಯಾವ ಪುರುಷನು ಪರ್ವಾದಿ ಕಾಲವಿಶೇಷಗಳಲ್ಲಿ ಶ್ರವಣಂಗೈವನೋ ಯಾವವನು ಶ್ರದ್ಧೆಯಿಂದ ಪಠನಂಗೈವನೋ ಆ ಪುರುಷನನ್ನು ಸಮಸ್ತ ಭೂತಗಳೂ ನಮಸ್ಕರಿಸುವವು; ಸಕಲ ಭಯದದೆಶೆಯಿಂದ ಆ ಪುರುಷನು ಬಿಡಲ್ಪಡುವನು' ಎಂದು ವಿಶ್ವರೂಪನಿಂದ ನಿರೂಪಿಸಲ್ಪಟ್ಟ ಈ ಕವಚಮಂತ್ರವನ್ನು ಇಂದ್ರನು ಪಡದು ಅದರ ಪ್ರಭಾವದಿಂದ ಯುದ್ಧದಲ್ಲಿ ಅಸುರರನ್ನು ಜಯಿಸಿ ತ್ರಿಲೋಕಸಾಮ್ರಾಜ್ಯವನ್ನು ಅನುಭವಿಸಿದನು."

---

೯ ನೇ ಅಧ್ಯಾಯ.

ದೇವತೆಗಳು ವೃತ್ರಾಸುರನ ಭಯದಿಂದ ಶ್ರೀಹರಿಯನ್ನು ಸ್ತೋತ್ರಂಗೈದದ್ದು.

ಎಲೈ ಪರೀಕ್ಷಿದ್ರಾಯನೆ, ವಿಶ್ವರೂಪನಿಗೆ ಸೋಮಪಾನಂಗೈವದೊಂದು ಸುರಾಪಾನಂಗೈವದೊಂದು ಅನ್ನವಂ ಭಕ್ಷಿಸುವದೊಂದು ಇಂಥಾ ಶಿರಸ್ಸುಗಳು ಮೂರು ಇದ್ದವೆಂದು ನಾವು ಕೇಳುತಲಿದ್ದೇವೆ; ಆ ವಿಶ್ವರೂಪನು ತನಗೆ ದೇವತೆಗಳು ತಂದೆಗಳಾದ್ದರಿಂದ ಯಜ್ಞದಲ್ಲಿ ಪ್ರಕಟವಾಗಿ ಇದು ಇಂದ್ರನಿಗೆಂದು ಇದು ಅಗ್ನಿಗೆಂದು ಈರೀತಿ ವಾಕ್ಕಿನಿಂದ ಘಟ್ಟ್ಯಾಗಿ ವಿನಯದೊಡನೆ ದೇವತೆಗಳಗೋಸ್ಕರ ಹವಿರ್ಭಾಗವನ್ನು ಉದ್ದೇಶಂಗೈದು ಆ ವಿಶ್ವರೂಪನೇ ರಹಸ್ಯವಾಗಿ ಅಸುರರಿಗೆ ಹವಿರ್ಭಾಗವನ್ನು ಕೊಟ್ಟನು; ಅವನು ಮಾತೃಸ್ನೇಹದಿಂದ ಅಸುರರನ್ನು ಅನುಸರಿಸಿರುವನಾದಕಾರಣ ಪ್ರಕಟವಾಗಿ ದೇವತೆಗಳನ್ನು ಕುರಿತು ಯಜ್ಞವನ್ನು ಮಾಡುತಲಿರುವವನಾದಾಗ್ಯೂ ಯಾವ ಉಪಾಯದಿಂದಲಾದರೂ ಅಸುರರಿಗೆ ಹವಿರ್ಭಾಗವನ್ನು ಅರ್ಪಿಸುತ್ತಿದ್ದನು; ಈರೀತಿ ಇರಲು ಇಂದ್ರನು ಆ ವಿಶ್ವರೂಪನ ದೇವತಿರಸ್ಕಾರರೂಪವಾದ ಆ ಕಪಟವ್ಯಾಪಾರವನ್ನು ನೋಡಿ ಭೀತನಾಗಿ ಕ್ರೋಧದಿಂದ ಆ ವಿಶ್ವರೂಪನ ಶಿರಸ್ಸುಗಳನ್ನು ಛೇದಿಸಿದನು; ಆ ವಿಶ್ವರೂಪನ ಮೂರು ಶಿರಸ್ಸುಗಳಲ್ಲಿ ಸೋಮಪಾನಂಗೈವ ಶಿರಸ್ಸು ಕಪಿಂಜರವೆಂಬ ಪಕ್ಷಿಯ ರೂಪವನ್ನು ಧರಿಸಿತು; ಸುರಾಪಾನಂಗೈವ ಶಿರಸ್ಸು ಕಲವಿಂಕವೆಂಬ ಪಕ್ಷಿಯ ರೂಪವನ್ನು ಧರಿಸಿತು; ಅನ್ನವನ್ನು ಭಕ್ಷಿಸುವ ಶಿರಸ್ಸು ತಿತ್ತಿರಿಯೆಂಬ ಪಕ್ಷಿಯ ರೂಪವನ್ನು ಧರಿಸಿತು; ಅನಂತರದಲ್ಲಿ ಇಂದ್ರನು ಪ್ರಾಪ್ತವಾದ ಬ್ರಹ್ಮಹತ್ಯೆಯನ್ನು ನಿವಾರಿಸಲು ಸಮರ್ಥನಾದಾಗ್ಯೂ ಆ ಬ್ರಹ್ಮಹತ್ಯೆಯನ್ನು ಅಂಜಲಿಯಿಂದ ಸ್ವೀಕರಿಸಿ

ದವನಾಗಿ ಸಂವತ್ಸರಪರ್ಯಂತವು ಬ್ರಹ್ಮಹತ್ಯಾಸಹಿತನಾಗಿದ್ದು ಸಂವತ್ಸರದಮೇಲೆ ಲೋಕಾಪವಾದವನ್ನು ಪರಿಹರಿಸ ಲೋಸುಗ ಆ ಪಾಪವನ್ನು ಭೂಮಿಯಲ್ಲಿ ಜಲದಲ್ಲಿ ವೃಕ್ಷಗಳಲ್ಲಿ ಸ್ತ್ರೀಯರಲ್ಲಿ ನಾಲ್ಕುಪ್ರಕಾರವಾಗಿ ಭಾಗಂಗೈದು ಬಿಟ್ಟನು ; ಆ ಸಮಯದಲ್ಲಿ ಭೂಮಿಯು ನನ್ನಲ್ಲಿರುವ ಹಳ್ಳಗಳು ತಮ್ಮಿಂದ ತಾವೇ ಪೂರಿಸಲ್ಪಟ್ಟಂಥಾವಾದರೆ ಆಗ ನಾನು ಈ ಪಾಪವನ್ನು ಸ್ವೀಕರಿಸುವೆನೆಂದು ವರವನ್ನು ಕೇಳಿ ಆ ವರಲಾಭದಿಂದ ಆ ಪಾಪದಲ್ಲಿ ಚತುರ್ಥಾಂಶವನ್ನು ಸ್ವೀಕರಿಸಿದಳು ; ಅದುಕಾರಣ ಭೂಮಿಯಲ್ಲಿ ಬ್ರಹ್ಮಹತ್ಯೆಯು ಊಷರರೂಪದಿಂದ ಒಂದೊಂದುಕಡೆಯಲ್ಲಿ ಕಾಣಲ್ಪಡುತಲಿಧೆ ; ಅದೇರೀತಿ ವೃಕ್ಷಗಳು ತಮಗೆ ಛೇದವುಂಟಾದಲ್ಲಿ ಪುನಃ ವೃದ್ಧಿಯುಂಟಾಗಲೆಂಬ ವರವನ್ನು ಪಡದು ಆ ಪಾಪದಲ್ಲಿ ಚತುರ್ಥಾಂಶವನ್ನು ಸ್ವೀಕರಿಸಿದವು ; ಅದುಕಾರಣ ವೃಕ್ಷಗಳಲ್ಲಿ ಪಾಪವು ನಿಷಿದ್ಧವಾದ ನಿರ್ಯಾಸರೂಪದಿಂದ ಕಾಣಲ್ಪಡುತಲಿಧೆ ; ಅದೇರೀತಿ ಸ್ತ್ರೀಯರು ಪ್ರಸವಕಾಲಪರ್ಯಂತವು ತಮ್ಮ ಗರ್ಭಕ್ಕೆ ಉಪಹತಿ ಇಲ್ಲದಂತೆ ಪುರುಷ ಸಂಭೋಗವುಂಟಾಗಲಿ ಎಂಬ ವರವನ್ನು ಪಡದು ಆ ಪಾಪದಲ್ಲಿ ಚತುರ್ಥಾಂಶವನ್ನು ಪರಿಗ್ರಹಿಸಿದರು ; ಅದುಕಾರಣ ಬ್ರಹ್ಮಹತ್ಯೆಯು ಸ್ತ್ರೀಯರಲ್ಲಿ ಪ್ರತಿಮಾಸದಲ್ಲಿಯೂ ನಿಷಿದ್ಧವಾದ ರಜೋರೂಪದಿಂದ ಕಾಣಲ್ಪಡುತಲಿಧೆ ; ಅದೇರೀತಿ ಜಲಗಳು ತಮಗೆ ಅನೇಕಪ್ರಕಾರವಾಗಿ ವ್ಯಯವುಂಟಾದಾಗ್ಯೂ ಪುನಃ ದ್ರವಿಸೋಣದರಲ್ಲಿ ವೃದ್ಧಿಯುಂಟಾಗಲಿ ಎಂಬ ವರವನ್ನು ವರಿಶಿ ಚತುರ್ಥಾಂಶವಾದ ಬ್ರಹ್ಮಹತ್ಯೆಯನ್ನು ವಹಿಸಿದವು ; ಅದುಕಾರಣ ಜಲಗಳಲ್ಲಿ ಆ ಪಾಪವು ನೊರೆಗಳ ರೂಪದಿಂದ ಕಾಣಲ್ಪಡುತಲಿಧೆ ; ಆದ್ದರಿಂದ ಜಲಾರ್ಥಿಯಾದ ಪುರುಷನು ಅದರಲ್ಲಿರುವ ನೊರೆಗಳನ್ನು ಹೊರಗೆ ಪರಿಹರಿಸಿ ಸ್ವೀಕರಿಸುತಲಿಧಾನೆ! ಆ ಬಳಿಕ ವಿಶ್ವರೂಪನ ತಂದೆಯಾದ ತ್ವಷ್ಟ್ರುವು ಪುತ್ರನಾಶದಿಂದ ದುಃಖಿತನಾಗಿ ಇಂದ್ರನನ್ನು ಸಂಹರಿಸುವದಕ್ಕೋಸ್ಕರ ಶತ್ರುವನ್ನು ಹುಟ್ಟಿಸಲು ಇಚ್ಛೈಸಿ ಇಂದ್ರಶತ್ರುವಾದವನೇ ವೃದ್ಧಿಹೊಂದುವನಾಗು ; ಶೀಘ್ರದಿಂದ ಶತ್ರುವಾದ ಇಂದ್ರನನ್ನು ಜಯಿಸುವನಾಗೆಂದು ಯಜ್ಞದಲ್ಲಿ ಅಗ್ನಿಯಲ್ಲಿ ಹೋಮಂಗೈದನು ; ತ್ವಷ್ಟ್ರುವಿನ ಮಂತ್ರಸ್ವರವ್ಯತ್ಯಾಸದಿಂದ ಹುಟ್ಟಿದ ಅಪರಾಧದಿಂದ ಇಂದ್ರನೇ ಶತ್ರುವಾಗುಳ್ಳ ಲೋಕಗಳಿಗೆ ಭಯಂಕರವಾದ ರೂಪವುಳ್ಳ ಒಬ್ಬ ಅಸುರನು ಯುಗಪ್ರಳಯಕಾಲದಲ್ಲಿ ಕಾಲಮೃತ್ಯು ಆವಿರ್ಭವಿಸುವಂತೆ ದಕ್ಷಿಣಾಗ್ನಿಯ ದೆಶೆಯಿಂದೆದ್ದನು ; ಆ ಅಸುರನು ಬಾಣವನ್ನು ಬಿಟ್ಟರೆ ಎಷ್ಟುಪರ್ಯಂತವು ಹೋಗುವದೋ ಅಷ್ಟುಪ್ರಮಾಣದಿಂದ ಪ್ರತಿದಿನದಲ್ಲಿ ನಾಲ್ಕುಕಡೆಯಲ್ಲಿಯೂ ವೃದ್ಧಿಹೊಂದುವನಾಗಿ ದಹಿಸಲ್ಪಟ್ಟ ಪರ್ವತದಂತೆ ಕೃಷ್ಣವರ್ಣನಾಗಿ ಸಂಧ್ಯಾಕಾಲದಲ್ಲಿರುವ ಮೇಘಸಮೂಹದಂತೆ ಪ್ರಕಾಶಯುಕ್ತನಾಗಿ ತಪ್ತವಾದ ತಾಮ್ರದಂತೆ ಅತಿ ರಕ್ತವರ್ಣಗಳಾದ ಕೇಶಗಳುಳ್ಳ ಗಡ್ಡಮೀಶೆಗಳುಳ್ಳವನಾಗಿ ಮಧ್ಯಾಹ್ನದಲ್ಲಿರುವ ಸೂರ್ಯನಂತೆ ಭಯಂಕರಗಳಾದ ನೇತ್ರಗಳುಳ್ಳವನಾಗಿ ದೇದೀಪ್ಯಮಾನವಾದ ತ್ರಿಶೂಲದಲ್ಲಿ ಭೂಮಿ ಆಕಾಶಗಳನ್ನಿಟ್ಟುಕೊಂಡು ನರ್ತನಂಗೈವನಾಗಿ ಘರ್ಜಿಸುವನಾಗಿ ಪಾದವಿನ್ಯಾಸದಿಂದ ಭೂಮಿಯನ್ನು ಕಂಪಿಸುವಂತೆ ಮಾಡುವನಾಗಿ ಅಂತರಿಕ್ಷಪ್ರದೇಶವನ್ನು ಪಾನಂಗೈಯ್ಯುತಲಿರುವ ನಾಲಿಗೆಯಿಂದ ನಕ್ಷತ್ರಗಳನ್ನು ನೆಕ್ಕುತಲಿರುವನಾಗಿ ಮೂರು ಲೋಕಗಳನ್ನು ಕಬಳಿಸುತಲಿರುವ ಭಯಂಕರಗಳಾದ ಕೋರದಾಡೆಗಳುಳ್ಳ ಮಹಾ ಗುಹೆಯಂತೆ ಅಗಾಧವಾದ ಮಹತ್ತಾದ ಇಂಥಾ ಮುಖದಿಂದ ಬಾರಿಬಾರಿಗೂ ಕಬಳಿಸುವನಾಗಿದ್ದನು ; ಈರೀತಿ ಇರುವ ಆ ಅಸುರರನ್ನುನೋಡಿ ಸಕಲ ಲೋಕಗಳಲ್ಲಿರುವ ಪ್ರಾಣಿಗಳು ಅತ್ಯಂತ ಭಯದಿಂದ ಹತ್ತುದಿಕ್ಕುಗಳನ್ನು ಕುರಿತು ಓಡಿದರು ; ತ್ವಷ್ಟ್ರುವಿನ ತಪೋರೂಪನಾದ ಯಾವ ಅಸುರನಿಂದ ತನ್ನ ಶರೀರದಿಂದ ಈ ಮೂರುಲೋಕಗಳು ಆಚ್ಛಾದನಂಗೈಯಲ್ಪಟ್ಟವೋ ಅದುಕಾರಣ ಪಾಪಿಯಾದ ಅತಿ ಭಯಂಕರನಾದ ಆ ಅಸುರನಿಗೆ ವೃತ್ರಾಸುರನೆಂಬ ನಾಮಧೇಯವುಂಟಾಯಿತು ; ಅನಂತರದಲ್ಲಿ ಇಂದ್ರಾದಿ ದೇವಶ್ರೇಷ್ಠರು ಸಕಲ ದೇವಸೇನೆಗಳೊಡನೆ ಯುಕ್ತರಾಗಿ ತಮ್ಮ ತಮ್ಮ ದಿವ್ಯಗಳಾದ ಶಸ್ತ್ರಾಸ್ತ್ರ ಸಮೂಹಗಳಿಂದ ಆ ವೃತ್ರನನ್ನು ಪರಿಹರಿಸಿದರು ; ಆಗ ವೃತ್ರನು ದೇವತೆಗಳಿಂದ ಬಿಡಲ್ಪಟ್ಟ ಶಸ್ತ್ರಾಸ್ತ್ರ ಸಮೂಹಗಳನ್ನು ಸಮಗ್ರವಾಗಿ ಕಬಳಿಸಿದನು ; ದೇವತೆಗಳು ಆಶ್ಚರ್ಯಯುಕ್ತರಾಗಿ ಅತ್ಯಂತ ದುಃಖಿಗಳಾಗಿ ಅವನ ತೇಜಸ್ಸಿನಿಂದ ನಷ್ಟವಾದ ತೇಜಸ್ಸುಳ್ಳವರಾಗಿ ಮೂರುಲೋಕಗಳೂ ಆ ವೃತ್ರಾಸುರನಿಂದ ಆಕ್ರಮಿಸಲ್ಪಟ್ಟಿರುವದಾದಕಾರಣ ಎಲ್ಲಿ ಹೋಗಲು ಅಶಕ್ಯವಾದ್ದರಿಂದ ಆ ಯುದ್ಧರಂಗದಲ್ಲೇ ನಿಂತು

ಈ ಮಹಾ ಭಯದಿಂದ ಸಂರಕ್ಷಣವು ಮತ್ತೊಬ್ಬನಿಂದ ಆಗಲಾರದೆಂದು ತಿಳಿದು ಅಂತರ್ಯಾಮಿಯಾದ ಆದಿಪುರುಷನಾದ ಶ್ರೀಹರಿಯನ್ನು ಏಕಾಗ್ರಚಿತ್ತರಾಗಿ ಸ್ತುತಿಸಿದರು! ಆಕಾಶ ವಾಯು ಅಗ್ನಿ ಜಲ ಭೂಮಿಗಳಿಂದ ನಿರ್ಮಿಸಲ್ಪಟ್ಟ ಮೂರು ಲೋಕಗಳು ಆ ಲೋಕಾಧಿಪತಿಗಳಾದ ಬ್ರಹ್ಮಾದಿಗಳು ಅವರಿಗಿಂತಲೂ ಈಚೆಗೆ ಜನಿಸಿರುವ ನಾವು ಸಹ ಭಯಪಡುತಲಿರುವವರಾಗಿ ಯಾವ ಕಾಲರೂಪವಾದ ಮೃತ್ಯುವಿಗೋಸ್ಕರ ಉಪಹಾರವನ್ನು ವಹಿಸುತಲಿದ್ದೇವೋ ಅಂಥಾ ಕಾಲರೂಪವಾದ ಮೃತ್ಯುವು ಯಾವ ಶ್ರೀಹರಿಯ ದೆಸೆಯಿಂದ ಭಯಪಡುತಲಿದೆಯೋ ಅಂಥಾ ಶ್ರೀಹರಿಯಿಂದಲೇ ನಮಗೆ ಸಂರಕ್ಷಣವುಂಟಾಗಲಿ! ಅಹಂಕಾರರಹಿತನಾಗಿ ವಾಗಾದಿ ಇಂದ್ರಿಯವ್ಯಾಪಾರ ರಹಿತನಾಗಿ ತನ್ನ ಲಾಭದಿಂದಲೇ ಪೂರ್ಣಕಾಮನಾಗಿ ಉಪಾಧಿಕಲ್ಪಿತವಾದ ಪರಿಚ್ಛೇದವಿಲ್ಲದವನಾಗಿರುವ ಪರಮೇಶ್ವರನಾದ ಶ್ರೀಹರಿಯನ್ನು ಬಿಟ್ಟು ಯಾವವನು ಅನ್ಯನನ್ನು ಶರಣುಹೊಂದುತಲಿದ್ದಾನೆಯೋ ಆ ಪುರುಷನು ಅತ್ಯಂತ ಮೂಢನು; ಯಾವಕಾರಣ ಪುರುಷನು ಶುನಕ ಪುಚ್ಛದಿಂದ ಸಮುದ್ರವನ್ನು ದಾಟಲು ಇಚ್ಛೈಸುವನೋ ಅದುಕಾರಣ ಅವನು ಅತ್ಯಂತ ಮೂಢನೇ ಸರಿ; ಯಾವರೀತಿ ಶುನಕಪುಚ್ಛದಿಂದ ಸಮುದ್ರವು ದಾಟಲಶಕ್ಯವೋ ಅದೇರೀತಿ ಹರಿಯನ್ನು ಬಿಟ್ಟು ಅನ್ಯನನ್ನು ಆಶ್ರಯಿಸೋಣದರಿಂದ ವ್ಯಸನ ಸಮುದ್ರವು ದಾಟಲಶಕ್ಯವೆಂದು ತಿಳಿ; ಪೂರ್ವದಲ್ಲಿ ಸತ್ಯವ್ರತನೆಂಬ ಮನುವು ಯಾವ ಮತ್ಸ್ಯಮೂರ್ತಿಯ ಮಹತ್ತಾದ ಕೊಂಬಿನಲ್ಲಿ ಭೂಮಿಯೆಂಬ ತನ್ನ ವಾಡೆಯನ್ನು ಬಂಧಿಸಿ ಸಂಕಟವನ್ನು ದಾಟಿದನೋ ಅಂಥಾ ಮತ್ಸ್ಯಮೂರ್ತಿಯೊಬ್ಬನೇ ಈಗ ದುಸ್ಸಹವಾದ ವೃತ್ರಾಸುರನ ಭಯದಿಂದ ಆಶ್ರಿತರಾದ ನಮ್ಮನ್ನು ನಿಶ್ಚಯವಾಗಿ ರಕ್ಷಿಸುತ್ತಾನೆ; ಪೂರ್ವದಲ್ಲಿ ಅತ್ಯಂತವಾಗಿ ಬೀಸುತಲಿರುವ ಮಹಾವಾಯುಗಳಿಂದ ಅಭಿವೃದ್ಧಿ ಹೊಂದುತಲಿರುವ ತೆರೆಗಳ ಅಟ್ಟಹಾಸಗಳಿಂದ ಭಯಂಕರವಾದ ಪ್ರಳಯ ಸಮುದ್ರದ ಜಲದಲ್ಲಿ ಅಸಹಾಯನಾದ ಬ್ರಹ್ಮದೇವನು ನಿನ್ನ ನಾಭಿಕಮಲದಿಂದ ಬೀಳುವನಾಗಿ ಆ ಮಹಾ ಭಯವನ್ನು ಯಾವ ವಾಸುದೇವನ ಅನುಗ್ರಹದಿಂದ ದಾಟಿದನೋ ಅಂಥಾ ಶ್ರೀಹರಿಯೇ ನಮ್ಮನ್ನು ಈ ಭಯದಿಂದ ಕಡೆಹಾಯಿಸಲಿ! ಒಬ್ಬನಾದ ಯಾವ ಶ್ರೀಹರಿಯು ತನ್ನ ಮಾಯೆಯಿಂದ ನಮ್ಮನ್ನು ಸೃಜಿಸಿದನೋ ನಾವು ಯಾವವನಿಂದ ಅನುಗ್ರಹಿಸಲ್ಪಟ್ಟವರಾಗಿ ಪ್ರಪಂಚವನ್ನು ಸೃಜಿಸುತಲಿದ್ದೇವೋ ನಾವು ಪ್ರತ್ಯೇಕಪ್ರತ್ಯೇಕವಾಗಿ ನಾವೇ ಈಶ್ವರರೆಂಬ ದುರಭಿಮಾನವುಳ್ಳವರಾದ್ದರಿಂದ ನಮಗಿಂತಲೂ ಪೂರ್ವದಲ್ಲೇ ಅಂತರ್ಯಾಮಿರೂಪದಿಂದ ಇಚ್ಛೈಸುವ ಯಾವ ಶ್ರೀಹರಿಯ ರೂಪವನ್ನು ಕಾಣೆವೋ ಅಂಥಾ ಭಗವಂತನನ್ನೇ ಶರಣುಹೊಂದುತಲಿದ್ದೇವೆ; ಯಾವ ಶ್ರೀಹರಿಯು ತಾನು ಒಬ್ಬನಾಗಿ ನಿತ್ಯನಾಗಿದ್ದಾಗ್ಯೂ ತನ್ನ ಮಾಯೆಯಿಂದ ದೇವ ಋಷಿ ತಿರ್ಯಗ್ಜಂತು ಮನುಷ್ಯರಲ್ಲಿ ವಾಮನ ಪರಶುರಾಮ ಮತ್ಸ್ಯ ಕೂರ್ಮಾದಿ ದೇಹಗಳಿಂದ ಅವತರಿಸಿ ಶತೃಗಳಾದ ದೈತ್ಯಾದಿಗಳಿಂದ ಅತ್ಯಂತ ಪೀಡಿತರಾದ ನಮ್ಮನ್ನು ತನ್ನ ಸ್ವಾಧೀನಂಗೈದು ಪ್ರತಿಯುಗದಲ್ಲಿಯೂ ರಕ್ಷಿಸುವನೋ ಅಂಥಾ ಶ್ರೀಹರಿಯನ್ನು ನಾವು ಶರಣುಹೊಂದುತಲಿದ್ದೇವೆ; ಆತ್ಮರೂಪದಿಂದ ದೇವತಾಸ್ವರೂಪನಾಗಿ ಪ್ರಪಂಚಾತ್ಮಕನಾದಾಗ್ಯೂ ವಿಕಾರರಹಿತನಾಗಿ ಸಕಲ ಜಗತ್ತಿಗೂ ಮೂಲಕಾರಣನಾಗಿ ಪ್ರಕೃತಿ ಪುರುಷಸ್ವರೂಪನಾಗಿ ಶರಣುಹೊಂದಲು ಯೋಗ್ಯನಾಗಿರುವ ಸರ್ವಸ್ವರೂಪನಾದ ಶ್ರೀಹರಿಯನ್ನು ದೇವತೆಗಳಾದ ನಾವು ಸಮಸ್ತರೂ ಶರಣುಹೊಂದುತಲಿದ್ದೇವೆ; ಅಂಥಾ ಪರಮಾತ್ಮನಾದ ಶ್ರೀಹರಿಯು ನಮಗೆ ಸುಖವನ್ನುಂಟುಮಾಡಲಿ! ಎಂಬದಾಗಿ ದೇವತೆಗಳು ಸ್ತೋತ್ರಂಗೈಯುತ್ತಿರಲು ಆಗ ಶಂಖ ಚಕ್ರ ಗದಾಧರನಾದ ಶ್ರೀಹರಿಯು ಮೊದಲು ಆ ದೇವತೆಗಳ ಹೃದಯದಲ್ಲಿ ಆವಿರ್ಭವಿಸಿದನು; ದೇವತೆಗಳು ಪುನಹಾ ತಮ್ಮ ಮುಂದುಗಡೆಯಲ್ಲಿ ಆವಿರ್ಭವಿಸಿ ಶ್ರೀವತ್ಸವೆಂಬ ಚಿನ್ಹೆಯನ್ನೂ ಕೌಸ್ತುಭಮಾಣಿಕ್ಯವನ್ನೂ ಇವು ಎರಡು ಹೊರ್ತು ಮಿಕ್ಕ ಪೀತಾಂಬರ ಅಲಂಕಾರ ಆಯುಧಾದಿಗಳಿಂದ ತನಿಗೆ ಸಮಾನರಾದ ಹದಿನಾರುಮಂದಿ ಸುನಂದನಾದಿ ದಿವ್ಯಪುರುಷರಿಂದ ಸೇವಿಸಲ್ಪಡುವವನಾಗಿ ವಿಕಸಿತವಾದ ಶರತ್ಕಾಲದಲ್ಲಿರುವ ಕಮಲದಂತೆ ಮನೋಹರಗಳಾದ ನೇತ್ರಗಳುಳ್ಳವನಾಗಿರುವ ಭಗವಂತನನ್ನು ಕಂಡು ಆ ಶ್ರೀಹರಿಯ ದರ್ಶನದಿಂದ ಪುಟ್ಟಿದ ಆನಂದದಿಂದ ವಿವಶರಾಗಿ ಭೂಮಿಯಲ್ಲಿ ದಂಡದಂತೆ ಸಾಸ್ಟಾಂಗಪ್ರಣಾಮಂಗೈದು ಮೆಲ್ಲಮೆಲ್ಲನೆ ಎದ್ದವರಾಗಿ ಆ ಭಗವಂತನನ್ನು ಸ್ತೋತ್ರಂಗೈದರು! ಯಜ್ಞಕ್ಕೆ ಸ್ವರ್ಗಾದಿಫಲಗಳನ್ನು ಪುಟ್ಟಿಸುವ ಸಾಮರ್ಥ್ಯವುಳ್ಳವನಾಗಿ ಆ ಸ್ವರ್ಗಾದಿರೂಪಫಲಗಳಿಗೆ ಪರಿಚ್ಛೇದವನ್ನುಂಟುಮಾಡುವ

ಕಾಲಸ್ವರೂಪನಾದಾಗ್ಯೂ ವಿಘ್ನಕರ್ತೃಗಳಾದ ದೈತ್ಯರಲ್ಲಿ ಪ್ರಯೋಗಿಸಲ್ಪಟ್ಟ ಚಕ್ರವುಳ್ಳವನಾಗಿ ಇಂಥಾ ಪ್ರಭಾವಗಳಿಂದ ಶುಭಕರಗಳಾದ ಅನೇಕ ನಾಮಗಳುಳ್ಳವನಾಗಿರುವ ನಿನಗೋಸ್ಕರ ನಮಸ್ಕಾರವನ್ನು ಮಾಡುತಲಿಧೇವೆ! ಎಲೈ ಶ್ರೀಹರಿಯೆ, ಗುಣತ್ರಯಕ್ಕೆ ನಿಯಾಮಕನಾದ ನಿನ್ನತ್ರಿಗುಣಾತ್ಮಕಗಳಾದ ಮೂರ್ತಿಗಳಿಗೂ ಪರವಾಗಿರುವ ಯಾವ ನಿರ್ಗುಣಸ್ವರೂಪವುಂಟೋ ಅಂಥಾ ನಿನ್ನ ನಿರ್ಗುಣಸ್ವರೂಪವನ್ನು ಈಗ ಇರುವ ಪ್ರಾಕೃತಪುರುಷರು ತಿಳಿಯಲು ಯೋಗ್ಯರಲ್ಲವಾದಕಾರಣ ನಾವು ಸುಮ್ಮನೆ ನಿನಗೋಸ್ಕರ ನಮಸ್ಕಾರವನ್ನು ಮಾಡುತಲಿಧೇವೆ; ನಿನ್ನ ಭಗವತ್ಸ್ವರೂಪವು ತಿಳಿಯಲು ಅಶಕ್ಯವು! ಎಲೈ ಭಗವಂತನೇ, ನಾರಾಯಣನೇ, ವಾಸುದೇವನೇ, ಆದಿಪುರುಷನೇ, ಮಹಾನುಭಾವನೇ, ಪರಮಮಂಗಳಮೂರ್ತಿಯೆ, ಪರಮಸುಂದರನೆ, ಅತಿ ದಯಾಶೀಲನೆ, ನೀನು ಮಹಾ ಯತಿಗಳಿಂದ ಪರಿಶುದ್ಧ ಧರ್ಮವುಳ್ಳ ಅಷ್ಟಾಂಗಯೋಗದಿಂದುಂಟಾದ ಏಕಾಗ್ರಚಿತ್ತತೆಯಿಂದ ಪರಿಚರ್ಯಾಂಗೈಯಲ್ಪಟ್ಟ ಅತಿ ಸ್ಫುಟವಾದ ಭಗವತ್ಪೂಜನೆಯಿಂದ ತೆರೆಯಲ್ಪಟ್ಟ ಅಜ್ಞಾನಸ್ವರೂಪವಾದ ಕದವುಳ್ಳ ದ್ವಾರರೂಪವಾದ ಚಿತ್ತದಲ್ಲಿ ಅತಿ ಸ್ಫುಟವಾದ ಪ್ರತ್ಯಗಾತ್ಮಪ್ರಸಂಚದಲ್ಲಿ ತನ್ನಿಂದ ತಾನೇ ಅಭಿವ್ಯಕ್ತವಾದ ನಿಜಾನಂದಾನುಭವಸ್ವರೂಪನಾಗಿರುವೆ! ಯಾವ ಕಾರಣದಿಂದ ಆಶ್ರಯರಹಿತನಾಗಿ ಶರೀರರಹಿತನಾಗಿ ನಮ್ಮ ಸಹಾಯ ವ್ಯಾಪಾರವನ್ನು ಅಪೇಕ್ಷಿಸದೆ ವಿಕಾರವನ್ನು ಹೊಂದದೆ ನಿನ್ನಿಂದಲೇ ನಿರ್ಗುಣನಾದಾಗ್ಯೂ ಸಗುಣವಾದ ಈ ಪ್ರಪಂಚವನ್ನು ಸೃಜಿಸಿ ಪಾಲಿಸುತ ಸಹ್ಮರಿಸುತಲಿದ್ದೀಯೋ ಅದುಕಾರಣ ನಿನ್ನ ಈ ಕ್ರೀಡಾಸಾಧನವು ಅನ್ಯರಿಂದ ತಿಳಿಯಲಶಕ್ಯವು! ಎಲೈ ಶ್ರೀಹರಿಯೆ, ಯಾವರೀತಿಯಿಂದ ದೇವದತ್ತನು ಈ ಲೋಕದಲ್ಲಿ ಒಂದು ಗೃಹವನ್ನು ನಿರ್ಮಿಸಿ ಆ ಗೃಹದಲ್ಲಿ ತನ್ನ ಪಾಪ ಪುಣ್ಯ ಫಲಗಳನ್ನು ಅನುಭವಿಸುವನೋ ಅದೇರೀತಿ ಬ್ರಹ್ಮಸ್ವರೂಪನಾದ ನೀನು ಜೀವಸ್ವರೂಪದಿಂದ ದೇಹಾದಿಗಳಲ್ಲಿ ತಗಲಿಕೊಂಡು ಅಸ್ವತಂತ್ರನಾಗಿ ಸುಖದುಃಖಗಳನ್ನು ಅನುಭವಿಸುವೆ; ಆತ್ಮಾರಾಮನಾಗಿ ಉಪಶಾಂತಿಶೀಲನಾಗಿ ಚ್ಯುತಿಯಿಲ್ಲದಿರುವ ಜ್ಞಾನಶಕ್ತಿಯುಳ್ಳವನಾಗಿ ಸಾಕ್ಷಿರೂಪದಿಂದುದಾಸೀನನಾಗಿ ಇರುವೆ; ಈರೀತಿ ಪರಸ್ಪರ ವಿರೋಧದಿಂದ ಆತ್ಮನು ತಿಳಿಯಲಶಕ್ಯನೆಂದು ನಿರೂಪಿಸಿ ಆ ವಿರೋಧ ಪರಿಹರಪೂರ್ವಕವಾಗಿ ಜ್ಞಾನಪ್ರಕಾರವನ್ನು ನಿರೂಪಿಸುತ 'ಎಲೈ ಶ್ರೀಹರಿಯೆ, ಭಗವಂತನಾಗಿ ಅಪರಿಮಿತಗಳಾದ ಸದ್ಗುಣ ಸಮೂಹಗಳುಳ್ಳವನಾಗಿ ಸ್ವತಂತ್ರನಾಗಿ ಊಹಿಸಲಶಕ್ಯವಾದ ಮಾಹಾತ್ಮ್ಯೆಯುಳ್ಳವನಾಗಿ ಹೀಗಾದರೂ ಹಾಗಾದರೂ ಎಂಬದೇ ವಿಕಲ್ಪವು; ಎಲ್ಲಿ ಯಾವದು ಯುಕ್ತವೆಂಬದೇ ವಿತರ್ಕವು; ಹೀಗೇ ಸರಿಯೆಂಬದು ವಿಚಾರವು; ಅದರಲ್ಲಿ ಪ್ರಮಾಣ ಭಾಗಗಳು ಅವಕ್ಕೆ ಅನುಕೂಲಗಳಾದ ಕುತರ್ಕಗಳು ವಸ್ತುತಃ ನಿಜಸ್ವರೂಪವನ್ನು ಸ್ಪೃಜಿಸದಿರುವ ವಿಕಲ್ಪಗಳಾದ ಶಾಸ್ತ್ರಗಳಿಂದ ವ್ಯಾಕುಲವಾದ ಅಂತಃಕರಣವನ್ನು ಆಶ್ರಯಿಸಿಕೊಂಡಿರುವ ದುರಗ್ರಹದಿಂದ ವಾದಿಸುತಲಿರುವ ಶಾಸ್ತ್ರಜ್ಞರ ವಿವಾದಕ್ಕೆ ಗೋಚರವಲ್ಲದವನಾಗಿ ಉಪಶಾಂತಿಯನ್ನು ಹೊಂದಿರುವ ಮಾಯಾವಿಕಲ್ಪವಾದ ಸಂಸಾರವುಳ್ಳವನಾಗಿ ಕೇವಲ ಸ್ವರೂಪಮಾತ್ರನಾಗಿರುವ ನಿನ್ನಲ್ಲಿ ನಿನ್ನ ಮಾಯೆಯನ್ನು ಮಧ್ಯದಲ್ಲಿರಿಸಿಕೊಂಡು ಯಾವ ಕರ್ತೃತ್ವಾದಿ ಧರ್ಮಗಳೂ ಸಂಭವಿಸಲಾರವು; ಆ ಕರ್ತೃತ್ವಾದಿಗಳು ಪ್ರಾಮಾಣಿಕಗಳಾದರೆ ಆಗ ಆ ಕರ್ತೃತ್ವಾದಿಧರ್ಮಗಳಿಗೂ ಅಕರ್ತೃತ್ವಾದಿ ಕರ್ಮಗಳಿಗೂ ಸಹಾ ಪರಸ್ಪರ ವಿರೋಧವುಂಟಾಗುವದು; ಅದು ಹ್ಯಾಗಂದರೆ; ನಿಜಸ್ವರೂಪ ಬುದ್ಧೀಹೊರ್ತು ಸ್ವರೂಪದ್ವಯವಿಲ್ಲವಾದ್ದರಿಂದ ಅಯಥಾರ್ಥಗಳಾದ ಆ ಕರ್ತೃತ್ವ ಅಕರ್ತೃತ್ವಾದಿಗಳಿಗೆ ಪರಸ್ಪರ ವಿರೋಧವಿಲ್ಲ; ಯಾವರೀತಿಯಿಂದ ಸರ್ಪಾದಿ ವಿಷಯಗಳಾದ ಬುದ್ಧಿಗಳುಳ್ಳ ಪುರುಷರಿಗೆ ಖಂಡವಾದ ರಜ್ಜುವು ಸರ್ಪದಂತೆ ತೋರುವದೋ ಅದೇರೀತಿ ನೀನು ಸಮವಿಷಮಗಳಾದ ಬುದ್ಧಿಗಳುಳ್ಳ ಪುರುಷರ ತಾತ್ಪರ್ಯಾನುಸಾರವಾಗಿ ತೋರುತಲಿದ್ದೀಯೆಂಬದಾಗಿ ವಿರೋಧವನ್ನು ಪರಿಹರಿಸಿ ನಿಶ್ಚಯಿಸಲ್ಪಟ್ಟ ಪರಮಾರ್ಥವನ್ನು ಕೇಳು: ಯಾವ ನೀನು ನಾನಾರೂಪದಿಂದ ತೋರುತಲಿದ್ದೀಯೋ ಅಂಥಾ ನೀನು ಸಕಲ ವಸ್ತುಗಳಲ್ಲಿ ಸದ್ರೂಪನಾಗಿ ಸರ್ವೇಶ್ವರನಾಗಿ ಸಕಲ ಜಗತ್ತಿಗೂ ಕಾರಣಭೂತನಾಗಿ ಸರ್ವಜೀವರಿಗೂ ಅಂತರ್ಯಾಮಿಯಾದ್ದರಿಂದ ಸಮಸ್ತಗಳಾದ ವಿಷಯಗಳ ಪ್ರಕಾಶಗಳಿಂದ ಉಪಲಕ್ಷಿತನಾಗಿ ಒಬ್ಬನೇ ಅವಶಿಷ್ಟನಾಗಿರುವೆ! ಎಲೈ ಮಧುಸೂದನನೆ, ಪುರುಷಾರ್ಥಪರಿಜ್ಞಾನದಲ್ಲಿ ನಿಪುಣನಾಗಿ ಪರಮಾತ್ಮನಾದ ನೀನೇ ಪ್ರಿಯನಾಗಿ ಮಿತ್ರನಾಗುಳ್ಳ ನಿನ್ನ ಮಾಯೆಯೆಂಬ ಅಮೃತ

ಸಮುದ್ರದಲ್ಲಿ ಬಿಂದುಮಾತ್ರವು ಬಂದುಬಾರಿ ಆಸ್ವಾದನಂಗೈಯಲ್ಪಟ್ಟದ್ದರಿಂದ ತಮ್ಮ ಮನಸ್ಸಿನಲ್ಲಿ ಅತಿಶಯದಿಂದ
ಸ್ರವಿಸುತ ವಿಚ್ಛೇದವಿಲ್ಲದಿರುವ ಸುಖದಿಂದ ಮರೆಯಲ್ಪಟ್ಟ ದುಷ್ಟಶತ್ರುಗಳಾದ ವಿಷಯಗಳಿಂದುಂಟಾದ ಸುಖಲೇಶಾ
ಭಾಷಗಳುಳ್ಳವರಾದ್ದರಿಂದ ರಾಗಾದಿರಹಿತರಾಗಿ ಏಕಾಂತಶೀಲರಾದಕಾರಣ ಭಗವಂತನಾದ ಸರ್ವಭೂತಪ್ರಿಯನಾದ
ಸರ್ವಾತ್ಮಕನಾದ ನಿನ್ನಲ್ಲಿ ನಿರಂತರದಲ್ಲೂ ವಿಶ್ರಾಂತರಾದ ಮನಸ್ಸುಳ್ಳವರಾಗಿರುವ ಪರಮಭಾಗವತರಿಗೆ ಯಾವ ನಿನ್ನ
ಪಾದಾರವಿಂದ ಸೇವೆಯಿಂದ ಈ ಸಂಸಾರ ಬಂಧವು ಇಲ್ಲದೆ ಹೋಗುವದೋ ಅಂಥಾ ನಿನ್ನ ಪಾದಾರವಿಂದದ
ಸೇವೆಯನ್ನು ಎಂತು ಪುನಹಾ ಬಿಡುತ್ತಾರೆ! ಎಲೈ ತ್ರಿಲೋಕಗಳೇ ಸ್ವರೂಪವಾಗಿಯೂ ಗೃಹವಾಗಿಯೂ
ಉಳ್ಳವನೇ, ಎಲೈ ತ್ರಿವಿಕ್ರಮನೆ, ತ್ರಿಲೋಕಗಳನ್ನು ಪಾಲಿಸುವವನೆ, ತ್ರಿಲೋಕಗಳಿಗೂ ಮನೋಹರವಾದ
ಪ್ರಭಾವವುಳ್ಳ ಶ್ರೀಹರಿಯೆ, ದೈತ್ಯದಾನವ ಮಾನವಾದಿಗಳು ಕೂಡ ನಿನ್ನ ವಿಭೂತಿಮೂರ್ತಿಗಳೇ ಸರಿ; ಆದಾಗ್ಯೂ
ಪೂರ್ವದಲ್ಲಿ ನೀನು ಆ ದೈತ್ಯಾದಿಗಳಿಗೆ ಇದು ಉದ್ಯೋಗಕಾಲವೆಂದು ತಿಳಿದು ನಿನ್ನ ಮಾಯೆಯಿಂದ ವಾಮನ ನೃಸಿ
ಹ್ಮ ಮತ್ಸ್ಯ ಕೂರ್ಮಾದಿ ಅವತಾರಗಳನ್ನು ತಾಳಿ ಅವರವರ ಅಪರಾಧಾನುಗುಣವಾಗಿ ಆ ದೈತ್ಯಾದಿಗಳನ್ನು ದಂಡಿ
ಸಲಿಲ್ಲವೆ; ಅದೇರೀತಿ ಈಗಲೂ ನೀನು ದುಷ್ಟರನ್ನು ಸಂಹರಿಸಲಿಚ್ಛೈಸಿದರೆ ದುಷ್ಟನಾದ ಈ ವೃತ್ರಾಸುರನನ್ನು
ಜಯಿಸು! ಎಲೈ ತಂದೆಯೆ, ಎಲೈ ತಾತನಾದ ಶ್ರೀಹರಿಯೆ, ನಿನ್ನವರಾಗಿ ನಿನ್ನ ಪಾದಾರವಿಂದ ಧ್ಯಾನವೆಂಬ ನೆಗಳಿಂದ
ಬಂಧಿಸಲ್ಪಟ್ಟ ಹೃದಯವುಳ್ಳವರಾಗಿ ನಿನ್ನ ಮೂರ್ತಿಯನ್ನು ಪ್ರಕಟಂಗೈಯೋಣದರಿಂದ ಸ್ವಾಧೀನಂಗೈಯಲ್ಪಟ್ಟವ
ರಾಗಿರುವ ನಮ್ಮ ಮನಸ್ತಾಪವನ್ನು ದಯೆಯಿಂದ ಅನುರಾಗಯುಕ್ತವಾದ ಪ್ರಸನ್ನವಾದ ಮನೋಹರವಾದ ಶೀತಳ
ವಾದ ಮುಗುಳುನಗೆಯೊಡನೆಕೂಡಿದ ಸವಿನೋಟದಿಂದ ಸ್ರವಿಸುತಲಿರುವ ಮಧುರವಾದ ಪ್ರಿಯವಚನವೆಂಬ ಅಮೃ
ತಧಾರೆಯಿಂದ ಉಪಶಾಂತಿಯನ್ನು ಹೊಂದಿಸಲು ಯೋಗ್ಯನಾಗಿರುವೆ! ಎಲೈ ಭಗವಂತನೆ, ಯಾವರೀತಿ ಅಗ್ನಿಗೆ
ಅದರ ಅಂಶಭೂತಗಳಾದ ಕಿಡಿಗಳು ಮೊದಲಾದ್ದರಿಂದ ಪ್ರಕಾಶವು ಮಾಡಲ್ಪಡಲಾರದೋ ಅದೇರೀತಿ ಸಮಸ್ತ ಲೋ
ಕಗಳ ಉತ್ಪತ್ತಿ ಸ್ಥಿತಿ ಲಯಗಳಿಗೆ ಸಾಧನವಾದ ದಿವ್ಯವಾದ ಮಾಯಾವಿನೋದವುಳ್ಳವನಾದಕಾರಣ ಸಮಸ್ತ ಜೀವಸ
ಮೂಹಗಳ ಹೃದಯಮಧ್ಯಗಳಲ್ಲಿ ಬ್ರಹ್ಮಸ್ವರೂಪದಿಂದ ಅಂತರ್ಯಾಮಿರೂಪದಿಂದ ಹೊರಗೆ ಪ್ರತಿರೂಪದಿಂದಲೂ
ದೇಶ ಕಾಲ ದೇಹಾದ್ಯವಸ್ಥಾದಿ ವಿಶೇಷಗಳನ್ನತಿಕ್ರಮಿಸದೆ ಆ ಜೀವಸಮೂಹಗಳಿಗೆ ಮೂಲಕಾರಣನಾಗಿ ಅವಕ್ಕೆ
ಪ್ರಕಾಶಕನಾದ್ದರಿಂದ ಆ ದೇಶಕಾಲಾದಿ ಸಮಸ್ತವನ್ನನುಭವಿಸುತಲಿರುವವನಾದಕಾರಣ ಸಮಸ್ತಗಳಾದ ಬುದ್ಧ್ಯಾದಿ
ಗಳಿಗೂ ಸಾಕ್ಷಿರೂಪವಾದ ಆಕಾಶದಂತೆ ವಿಹಿತವಾದ ಸ್ವರೂಪವುಳ್ಳ ಉಪಾಧಿರಹಿತನಾದ ಸತ್ವಮೂರ್ತಿಯಾದ ನಿನಗೆ
ನಮ್ಮಿಂದ ಯಾವ ಅರ್ಥವು ವಿಜ್ಞಾಪಿಸತಕ್ಕದ್ದು; ಸರ್ವಜ್ಞನಾದ ನಿನ್ನಿಂದ ನಮ್ಮ ಸಮಸ್ತ ಅಭಿಪ್ರಾಯವು ತಿಳಿಯ
ಲ್ಪಟ್ಟಿಧೆ; ನೀನು ಸರ್ವಜ್ಞನಾದಕಾರಣ ನಾವು ಯಾವ ಕಾರ್ಯಾಪೇಕ್ಷೆಯಿಂದ ನಿನ್ನನ್ನು ಶರಣುಹೊಂದಿದೇವೋ
ಪರಮಗುರುವಾದ ನಿನ್ನ ಪಾವನವಾದ ಅನೇಕ ಪಾಪಯುಕ್ತವಾದ ಸಂಸಾರತಾಪವನ್ನು ಪರಿಹರಿಸುವ ಪಾದಾರವಿಂ
ದದ ಛಾಯೆಯನ್ನು ಹೊಂದಿರುವ ನಮಗೆ ಇಷ್ಟವಾದ ಆ ಕಾರ್ಯವನ್ನು ನೀನೇ ಕಲ್ಪಿಸು! ಎಲೈ ಶ್ರೀಹರಿಯೆ,
ಯಾವ ವೃತ್ರಾಸುರನಿಂದ ನಮ್ಮ ತೇಜಸ್ಸುಗಳು ಶಸ್ತ್ರಗಳು ಅಸ್ತ್ರಗಳೂ ಕಬಳಿಸಲ್ಪಟ್ಟವೋ ಅಂಥಾ ತೇಜಸ್ವಿ
ಯಾದ ಮೂರುಲೋಕಗಳನ್ನೂ ಕಬಳಿಸುತಲಿರುವ ಆ ವೃತ್ರಾಸುರನನ್ನು ಶೀಘ್ರದಿಂದ ಜಯಿಸು; ಹೃದಯಾಕಾ
ಶವೆಂಬ ಗೃಹವುಳ್ಳವನಾಗಿ ಬುದ್ಧ್ಯಾದಿಗಳಿಗೆ ಸಾಕ್ಷಿಯಾಗಿ ನಿರಂತರದಲ್ಲೂ ಆನಂದಸ್ವರೂಪನಾಗಿ ಮನೋಹರವಾದ
ಕೀರ್ತಿಯುಳ್ಳವನಾಗಿ ಆರ್ತಿಹರನಾಗಿ ಆದಿರಹಿತನಾಗಿ ಸತ್ಪುರುಷರಿಂದ ಸೇವಿಸಲ್ಪಡುವವನಾಗಿ ಸಂಸಾರರೂಪವಾದ
ಮಾರ್ಗದಲ್ಲಿರುವ ಪುರುಷನು ತನ್ನನ್ನು ಶರಣುಹೊಂದಿದಲ್ಲಿ ಅವನಿಗೆ ಪರ್ಯವಸಾನಕಾಲದಲ್ಲಿ ಸರ್ವರಿಂದ ಪೂಜಿಸ
ಲ್ಪಟ್ಟ ಉತ್ಕೃಷ್ಟಫಲಸ್ವರೂಪನಾಗಿರುವ ವಾಸುದೇವನಿಗೋಸ್ಕರ ನಮಸ್ಕಾರ! ಎಂಬದಾಗಿ ದೇವತೆಗಳಿಂದ ಶ್ರದ್ಧಾ
ಪೂರ್ವಕವಾಗಿ ಸ್ತುತಿಸಲ್ಪಟ್ಟ ಶ್ರೀಹರಿಯು ಆ ಸ್ತೋತ್ರಕ್ರಮವನ್ನು ಕೇಳಿ ಸಂತುಷ್ಟನಾಗಿ ಆ ದೇವತೆಗಳನ್ನು
ಕುರಿತು 'ಎಲೈ ದೇವತೆಗಳಿರಾ, ಯಾವ ಜ್ಞಾನದಿಂದ ಪುರುಷರಿಗೆ ಆತ್ಮನು ಸಂಸಾರಿಯೆಂಬ ಸ್ಮೃತಿಯು ನನ್ನಲ್ಲಿ ಉ
ತ್ತಮವಾದ ಭಕ್ತಿಯೂ ಉಂಟಾಗುವದೋ ಅಂಥಾ ನನ್ನ ಸ್ತೋತ್ರಯುಕ್ತವಾದ ಜ್ಞಾನದಿಂದ ನಾನು ನಿಮಗೆ ಪ್ರ

ಸನ್ನನಾದೆನು! ಎಲೈ ದೇವತಾಶ್ರೇಷ್ಠರೆ, ನಾನು ಪ್ರಸನ್ನನಾಗುತ್ತಿರಲು ಪುರುಷರಿಗೆ ಯಾವದೂ ಅಸಾಧ್ಯವಾಗಲಾರದು; ಆದಾಗ್ಯೂ ನನ್ನಲ್ಲೇ ಅತ್ಯಂತವಾಗಿ ಆಸಕ್ತವಾದ ಬುದ್ಧಿಯುಳ್ಳ ತತ್ವಜ್ಞನಾದ ಪುರುಷನು ನನಿಗಿಂತಲೂ ಅನ್ಯನಾದ ಇಷ್ಟಾರ್ಥವನ್ನು ಅಪೇಕ್ಷಿಸುವದಿಲ್ಲ; ವಿಷಯಗಳಲ್ಲಿ ತತ್ವದೃಷ್ಟಿಯುಳ್ಳ ಅಜ್ಞನು ತನ್ನ ಶ್ರೇಯಸ್ಸಾಧನವನ್ನರಿಯನು; ಅನ್ಯನಾದ ಪುರುಷನುಸಹಾ ಅವನಂತೆ ತತ್ವವನ್ನು ತಿಳಿಯುವನಾದರೆ ವಿಷಯಾಪೇಕ್ಷೆಯುಳ್ಳ ಆ ಪುರುಷನಿಗೆ ಇಷ್ಟಗಳಾದ ಅರ್ಥಗಳನ್ನು ಕೊಡುವೆನು; ಉತ್ತಮವೈದ್ಯನು ಯಾವರೀತಿ ರೋಗಿಯು ಚಾಪಲ್ಯದಿಂದ ಅಪೇಕ್ಷಿಸುತಲಿರುವವನಾದಾಗ್ಯೂ ಅವನಿಗೆ ಅಪಥ್ಯವಾದ ವಸ್ತುವನ್ನು ಕೊಡುವದಿಲ್ಲವೋ ಆದೇರೀತಿ ಮುಕ್ತಿಸಾಧನವಾದ ನಿವೃತ್ತಿಮಾರ್ಗವನ್ನು ತಿಳಿದಿರುವ ಪುರುಷನು ಅಜ್ಞನಾದ ಪುರುಷನಿಗೋಸ್ಕರ ಪ್ರವೃತ್ತಿಮಾರ್ಗವನ್ನುಉಪದೇಶಂಗೈಯುವದಿಲ್ಲ! ಎಲೈ ಇಂದ್ರನೆ, ಎಲೈ ದೇವತೆಗಳಿರಾ, ನಿಮಗೆ ಶುಭವುಂಟಾಗಲಿ; ನೀವು ಇಲ್ಲಿಂದ ದಧೀಚಿಯೆಂಬ ಋಷಿಶ್ರೇಷ್ಠನ ಆಶ್ರಮವನ್ನೈದಿ ಆ ಋಷಿಯು ದಿವ್ಯವ್ರತ ತಪಸ್ಸುಗಳಿಂದ ದೃಢವಾಗಿರುವ ಶರೀರವನ್ನು ಶೀಘ್ರದಿಂದ ಯಾಚಿಸಿ; ಆ ದಧೀಚಿಯು ಪೂರ್ವದಲ್ಲಿ ತಾನು ಪರಿಶುದ್ಧವಾದ ಬ್ರಹ್ಮವಿದ್ಯಾಸ್ವರೂಪವನ್ನು ತಿಳಿದು ಅನಂತರದಲ್ಲಿ ಅಶ್ವಿನೀ ದೇವತೆಗಳಿಂದ ಶ್ರದ್ಧೆಯಿಂದ ಯಾಚಿಸಲ್ಪಟ್ಟವನಾಗಿ ಅಶ್ವಶಿರಸ್ಸೆಂಬ ನಾಮದಿಂದ ಪ್ರಸಿದ್ಧವಾದ ಯಾವ ಬ್ರಹ್ಮವಿದ್ಯೆಯುಂಟೋ ಪರಿಶುದ್ಧವಾದ ಅಂಥಾ ಬ್ರಹ್ಮವಿದ್ಯೆಯನ್ನು ಅಶ್ವಿನೀ ದೇವತೆಗಳಿಗೆ ಉಪದೇಶಂಗೈದು ಅವರಿಗೆ ಜೀವನ್ಮುಕ್ತತ್ವವನ್ನುಂಟುಮಾಡಿದನು; ಯಾವಕಾರಣ ತ್ವಷ್ಟೃವು ದಧೀಚಿಯಿಂದ ಯಾವ ನಾರಾಯಣ ಕವಚವನ್ನುಉಪದೇಶಗೊಂಡು ತಾನು ತನ್ನ ಪುತ್ರನಾದ ವಿಶ್ವರೂಪನಿಗೆ ಉಪದೇಶಂಗೈದನೋ ಯಾವ ಕವಚವನ್ನು ವಿಶ್ವರೂಪನಿಂದ ನೀನು ಉಪದೇಶಂಗೈಸಿಕೊಂಡೆಯೋ ಅದುಕಾರಣ ಆ ದಧೀಚಿಋಷಿಯು ನನ್ನ ಸ್ವರೂಪನಾದ ಅಭೇದ್ಯವಾದ ಆ ನಾರಾಯಣಕವಚವನ್ನು ಚನ್ನಾಗಿ ತಿಳಿದವನಾದಕಾರಣ ಅಂಥಾ ಕವಚವಿದ್ಯೆಯಿಂದಲೂ ಸಾರಭೂತವಾದ ಆ ಋಷಿಯ ಶರೀರವನ್ನು ಯಾಚಿಸಿದರೆ ಧರ್ಮಜ್ಞನಾದ ಆ ಮುನಿಯು ನಿಮ್ಮಿಂದ ಯಾಚಿಸಲ್ಪಟ್ಟವನಾಗಿ ನಿಮಗೋಸ್ಕರ ತನ್ನ ಅಸ್ಥಿಗಳನ್ನು ಕೊಡುತ್ತಾನೆ; ವಿಶೇಷವಾದ ಶಿಷ್ಯವಾತ್ಸಲ್ಯದಿಂದ ಅಶ್ವಿನೀ ದೇವತೆಗಳಿಗೋಸ್ಕರವಾದರೂ ಅಸ್ಥಿಗಳನ್ನುಕೊಡುತ್ತಾನೆ; ಆ ಬಳಿಕ ಆ ಅಸ್ಥಿಗಳಿಂದ ವಿಶ್ವಕರ್ಮನು ವಜ್ರಾಯುಧವೆಂಬ ಆಯುಧಶ್ರೇಷ್ಠವನ್ನು ನಿರ್ಮಿಸುತ್ತಾನೆ! ಎಲೈ ಇಂದ್ರನೆ, ಅನಂತರದಲ್ಲಿ ನೀನು ನಿನ್ನ ತೇಜಸ್ಸಿನಿಂದ ಅಧಿಕಶಕ್ತಿಯುಳ್ಳವನಾಗಿ ಆ ದಿವ್ಯವಾದ ವಜ್ರಾಯುಧದಿಂದ ವೃತ್ರಾಸುರನ ತೇಜಸ್ಸನ್ನು ಛೇದಿಸುತ್ತೀಯೆ; ಆ ವೃತ್ರಾಸುರನು ನಿನ್ನಿಂದ ಛೇದಿಸಲ್ಪಡಲು ಅನಂತರದಲ್ಲಿ ನೀವು ತೇಜಸ್ಸನ್ನು ಅಸ್ತ್ರಗಳನ್ನು ಆಯುಧಗಳನ್ನುಸಹಾ ಪುನಹಾ ಪಡೆಯುವರಾಗುತ್ತೀರಿ; ನಿಮಗೆ ಶುಭವುಂಟಾಗಲಿ; ನನ್ನಲ್ಲಿ ಭಕ್ತಿಯುಳ್ಳ ಪುರುಷರು ಬಂದು ಸಮಯದಲ್ಲಾದರೂ ದುಃಖವನ್ನೈದುವದಿಲ್ಲ' ಎಂದು ಶ್ರೀಹರಿಯು ಇಂದ್ರಾದಿ ದೇವತೆಗಳಿಗೆ ಅನುಗ್ರಹಿಸಿದನು."

೧೦ನೇ ಅಧ್ಯಾಯ.

ಇಂದ್ರನು ದಧೀಚಿಮುನಿಯ ಅಸ್ಥಿಗಳಿಂದ ನಿರ್ಮಿತವಾದ ವಜ್ರಾಯುಧವನ್ನು ಪಿಡಿದು ವೃತ್ರಾಸುರನೊಡನೆ ಯುದ್ಧಂಗೈದದ್ದು.

ಎಲೈ ಪರೀಕ್ಷಿದ್ರಾಯನೆ, ಭಗವಂತನಾದ ಶ್ರೀಹರಿಯು ಈರೀತಿ ಇಂದ್ರನನ್ನು ಕುರಿತು ಆಜ್ಞಾಪಿಸಿ ಆ ಇಂದ್ರಾದಿ ದೇವತೆಗಳು ನೋಡುತ್ತಿರಲು ಅಲ್ಲೇ ಅಂತರ್ಧಾನವನ್ನೈದಿದನು; ಅನಂತರದಲ್ಲಿ ಇಂದ್ರಾದಿ ದೇವತೆಗಳಿಂದ ಶರೀರವನ್ನು ಯಾಚಿಸಲ್ಪಟ್ಟ ಮಹಾತ್ಮನಾದ ಆ ದಧೀಚಿಮುನಿಯು ಸಂತೋಷದಿಂದ ಮುಗುಳುನಗೆಯೊಡನೆ ದೇವತೆಗಳನ್ನು ಕುರಿತು "ಎಲೈ ತಂದೆಗಳಿರಾ, ನೀವು ಪ್ರಾಣಿಗಳಿಗೆ ಮೃತಿಸಮಯದಲ್ಲುಂಟಾಗುವ ಸಹಿಸಲಶಕ್ಯವಾದ ಜೀವವನ್ನು ಅಪಹರಿಸುವ ದುಃಖವನ್ನು ಅರಿಯಿರಿ; ಈ ಲೋಕದಲ್ಲಿ ಜೀವಿಸಲಿಚ್ಛೆಯುಳ್ಳ ಜನರಿಗೆ ಯಾವ ದೇ

ಹವು ಅಪ್ರಿಯವಾಗಿರುವದೋ ಅಂಥಾ ದೇಹವನ್ನು ಪುರುಷನು ಯಾಚಿಸುತಲಿರುವ ವಿಷ್ಣುವಿಗೋಸ್ಕರ ಸಮರ್ಪಿಸಲು ಉತ್ಸಾಹಂಗೈವನು; ಎಂಬ ದಧೀಚಿಮುನಿಯ ವಚನವನ್ನು ಕೇಳಿ ದೇವತೆಗಳು 'ಎಲೈ ಮುನಿಯೆ, ಸಕಲ ಭೂತಗಳಲ್ಲಿಯು ದಯಾಪರರಾಗಿ ಉತ್ತಮಪುರುಷರಿಂದ ಸ್ತುತಿಸಲು ಯೋಗ್ಯಗಳಾದ ಚರಿತ್ರೆಗಳುಳ್ಳವರಾಗಿ ಮಹಾತ್ಮರಾಗಿರುವ ನಿಮ್ಮಂಥಾ ಪುರುಷರಿಗೆ ಕೊಡಲಶಕ್ಯವಾದ ವಸ್ತುವು ಯಾವದಿದೆ! ಎಲೈ ಋಷಿಯೆ, ಯಾಚಕನಾದ ಪುರುಷನು ದಾತೃವಾದ ಪುರುಷನ ಸಂಕಟವನ್ನು ತಿಳಿಯನು; ಆ ಯಾಚಕನು ದಾತೃವಿನ ಸಂಕಟವನ್ನು ತಿಳಿದವನಾದರೆ ಆಗ ಅವನನ್ನು ಯಾಚಿಸನು; ಅದುಕಾರಣ ನಾವು ಸ್ವಾರ್ಥಪರರಾದ್ದರಿಂದ ನಿನ್ನ ಸಂಕಟವನ್ನರಿಯೆವು; ದಾತೃವಾದ ಪುರುಷನು ದಾನಸಮರ್ಥನಾದರೆ ಇಲ್ಲವೆಂದು ನುಡಿಯುವದಿಲ್ಲ' ಎಂಬ ದೇವತೆಗಳ ವಾಕ್ಯವನ್ನು ಕೇಳಿ ದಧೀಚಿಮುನಿಯು 'ಎಲೈ ದೇವತೆಗಳಿರಾ, ನಿಮ್ಮ ಮುಖದ ದೆಶೆಯಿಂದ ಧರ್ಮವನ್ನು ಶ್ರವಣಂಗೈಯಲಿಚ್ಛೆಯುಳ್ಳ ನನ್ನಿಂದ ನೀವು ಪ್ರತ್ಯುತ್ತರವನ್ನು ಕೇಳಲ್ಪಟ್ಟರೇ ಹೊರ್ತು ಮತ್ತೊಂದಿಲ್ಲ; ಈಗಲೇ ನಾನು ನನ್ನನ್ನು ಬಿಟ್ಟು ಪೋಗುವ ಈ ದೇಹವನ್ನು ನಿಮಗೆ ಹಿತಾರ್ಥವಾಗಿ ಬಿಡುತ್ತೇನೆ! ಎಲೈ ಇಂದ್ರನೆ, ಯಾವ ಪುರುಷನು ಅಸಿತ್ಯವಾದ ಈ ಶರೀರದಿಂದ ಭೂತನ ದೆಶೆಯಿಂದ ಶಾಶ್ವಿತವಾದ ಕೀರ್ತಿಯನ್ನು ಸಂಪಾದಿಸುವದಕ್ಕೆ ಇಚ್ಛೈಸುವದಿಲ್ಲವೋ ಆ ಪುರುಷನು ಪಾಷಾಣ ವೃಕ್ಷಾದಿಗಳಿಂದಲೂ ಕಟಕಟಾ ಇವನು ವ್ಯರ್ಥನಾದನೆಂದು ದುಃಖಿಸಲ್ಪಡಲು ಯೋಗ್ಯನಾಗುವನು; ಯಾವ ಪುರುಷನು ಅನ್ಯಪ್ರಾಣಿಗಳ ಶೋಕದಿಂದ ಶೋಕಿಸುವನೋ ಅನ್ಯರ ಸಂತೋಷದಿಂದ ಸಂತೋಷಪಡುವನೋ ಆ ಪುರುಷನ ಆ ಧರ್ಮವೇ ಉತ್ಕೃಷ್ಟವಾದದ್ದು; ಅದಕ್ಕಿಂತಲೂ ಅಧಿಕವಾದ ಧರ್ಮವಿಲ್ಲ; ಆ ಧರ್ಮವೇ ಶಾಶ್ವಿತವಾದಂಥಾದ್ದು; ಅದೇ ಮಹಾಪುರುಷರಿಂದ ಪೂಜಿಸಲ್ಪಟ್ಟಂಥಾದ್ದು! ಎಲೈ ದೇವತೆಗಳಿರಾ, ಲೋಕದಲ್ಲಿ ಶುನಕಗಳಿಗೂ ನರಿಮೊದಲಾದ ಜಂತುಗಳಿಗೂ ಭಕ್ಷಿಸಲು ಯೋಗ್ಯಗಳಾದ ಕ್ಷಣಭಂಗುರಗಳಾದ ತನಗೆ ಉಪಯುಕ್ತಗಳಲ್ಲದಿರುವ ದೇಹ ಪುತ್ರ ಧನಗಳಿಂದ ಅನ್ಯರಿಗೆ ಉಪಕರಿಸುವನಾಗನೆಂಬುದು ಯಾವದುಂಟೋ ಅದು ಅತಿ ದೈನ್ಯವು; ಅತ್ಯಂತ ಕಷ್ಟವು; ಎಂದು ದೇವತೆಗಳನ್ನು ಕುರಿತು ಹೇಳಿ ಈರೀತಿ ದೃಢವಾದ ನಿಶ್ಚಯವುಳ್ಳವನಾಗಿರುವ ಅಥರ್ವಣಶಾಖಾಪ್ರವರ್ತಕನಾದ ಆ ದಧೀಚಿಮುನಿಯು ಪರಬ್ರಹ್ಮನಾದ ಶ್ರೀ ವಾಸುದೇವನಲ್ಲಿ ತನ್ನನ್ನು ಐಕ್ಯವನ್ನು ಹೊಂದಿಸುತ ದೇಹವನ್ನು ಬಿಟ್ಟನು; ಈರೀತಿ ಗ್ರಹಿಸಲ್ಪಟ್ಟ ಇಂದ್ರಿಯ ಪ್ರಾಣ ಮನೋ ಬುದ್ಧಿಗಳುಳ್ಳವನಾಗಿ ನಷ್ಟವಾದ ಅವಿದ್ಯಾ ಬಂಧವುಳ್ಳವನಾಗಿ ಆ ದಧೀಚಿಮುನಿಯು ಪರಮ ಯೋಗನಿಷ್ಠನಾಗಿ ತತ್ವಾರ್ಥವನ್ನು ನೋಡುತ ಬಿಡಲ್ಪಟ್ಟ ದೇಹವನ್ನು ತಿಳಿಯಲಿಲ್ಲ! ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಇಂದ್ರನು ವಿಶ್ವಕರ್ಮನಿಂದ ದಧೀಚಿಮುನಿಯ ಅಸ್ಥಿಗಳಿಂದ ನಿರ್ಮಿಸಲ್ಪಟ್ಟ ವಜ್ರಾಯುಧವನ್ನು ತನ್ನ ಹಸ್ತದಿಂದ ಪಿಡಿದು ಉತ್ಸಾಹಯುಕ್ತನಾಗಿ ಭಗವಂತನ ತೇಜಸ್ಸಿನೊಡನೆ ಯುಕ್ತನಾಗಿ ಸಮಸ್ತ ದೇವಸಮೂಗಳಿಂದ ಸುತ್ತಲೂ ಸೇವಿಸಲ್ಪಡುತಲಿರುವವನಾಗಿ ಮುನಿಸಮೂಹಗಳಿಂದ ಸ್ತೋತ್ರಂಗೈಸಿಕೊಳ್ಳುವನಾಗಿ ಮೂರು ಲೋಕಗಳನ್ನು ಸಂತೋಷಪಡಿಸುತ ಗಜೇಂದ್ರವನ್ನೇರಿ ಆ ಗಜೇಂದ್ರನ ಉಪರಿಭಾಗದಲ್ಲಿ ಅತ್ಯಂತವಾಗಿ ಪ್ರಕಾಶಿಸಿದನು; ಅನಂತರದಲ್ಲಿ ಇಂದ್ರನು ಅಸುರ ಸೇನಾಧಿಪತಿಗಳಿಂದ ಸುತ್ತಿಕೊಳ್ಳಲ್ಪಟ್ಟ ವೃತ್ರಾಸುರನನ್ನು ತನ್ನ ಸಾಮರ್ಥ್ಯವಿಶೇಷದಿಂದ ಪ್ರಳಯಕಾಲದ ರುದ್ರನಂತೆ ಕ್ರೋಧಯುಕ್ತನಾಗಿ ಎದುರಿಸಿ ಅಟ್ಟಿ ನಡದನು! ಎಲೈ ಅರಸೆ, ಆಮೇಲೆ ಪ್ರಥಮ ಮಹಾಯುಗದಲ್ಲಿ ತ್ರೇತಾಯುಗ ಪ್ರಾರಂಭವಾಗುತ್ತಿರಲು ನರ್ಮದಾನದಿಯ ತೀರದಲ್ಲಿ ಅಸುರರೊಡನೆ ದೇವತೆಗಳಿಗೆ ಮಹತ್ತಾದ ಯುದ್ಧವು ವೃದ್ಧಿಹೊಂದಿತು; ಏಕಾದಶರುದ್ರರು ದ್ವಾದಶಾದಿತ್ಯರು ಅಷ್ಟವಸುಗಳು ಅಶ್ವಿನೀ ದೇವತೆಗಳು ಪಿತೃದೇವತೆಗಳು ಅಗ್ನಿಯು ಸಪ್ತಮರುತ್ತುಗಳು ಋಭುಗಳೆಂಬ ದೇವತಾ ವಿಶೇಷಗಳು ಅನೇಕ ಋಷಿಗಳು ಸಾಧ್ಯರು ವಿಶ್ವೇದೇವತೆಗಳು ಇವರೇ ಮೊದಲಾಗುಳ್ಳ ಅನೇಕ ದೇವತೆಗಳೊಡನೆ ಕೂಡಿದವನಾಗಿ ಯುದ್ಧದಲ್ಲಿ ಸನ್ನದ್ಧನಾಗಿ ವಜ್ರಾಯುಧವನ್ನು ಧರಿಸಿ ಅತ್ಯಂತ ಕಾಂತಿಯಿಂದ ಪ್ರಕಾಶಿಸುತ್ತಿರುವ ಇಂದ್ರನನ್ನು ವೃತ್ರಮೊದಲಾದ ಅಸುರರು ನೋಡಿ ಕ್ರೋಧಯುಕ್ತರಾಗಿ ನಮುಚಿ ಶಂಬರ ಅನರ್ವ ದ್ವಿಮೂರ್ಧ ಋಷಭ ಅಂಬರ ಹಯಗ್ರೀವ ಶಂಕುಶಿರ ವಿಪ್ರಚಿತ್ತಿ ಅಯೋಮುಖ ಪುಲೋಮ ವೃಷಪರ್ವ ಹೇತಿ ಪ್ರಹೇತಿ ಉತ್ಕಟ ಇವರೇ ಮೊದಲಾಗುಳ್ಳ ದೈತ್ಯಾಧಿಪತಿಗಳೂ

ಸಾಧಾರಣರಾದ ದೈತ್ಯರೂ ದಾನವರೂ ಯಕ್ಷರೂ ಅನೇಕಕೋಟಿ ರಾಕ್ಷಸರೂ ಮಾಲಿ ಸುಮಾಲಿ ಮೊದಲಾದ ಮಹಾ ವೀರರೂ ಸುವರ್ಣಮಯಗಳಾದ ರಥ ಭೂಷಣಗಳುಳ್ಳವರಾಗಿ ಮೃತ್ಯುವಿನಿಂದಲೂ ಪ್ರವೇಶಿಸಲಶಕ್ಯವಾದ ಇಂದ್ರನ ಸೇನಾಮುಖವನ್ನು ಅಡ್ಡಗೈಸಿ ಅತ್ಯಂತ ಮದದಿಂದ ಸಿಹ್ಮನಾದಂಗೈದು ನಿರ್ಭಯರಾಗಿ ಗದೆಗಳಿಂದಲೂ ಪರಿಘಗಳಿಂದಲೂ ಬಾಣಗಳಿಂದಲೂ ಪ್ರಾಸಗಳಿಂದಲೂ ಮುದ್ಗರಗಳಿಂದಲೂ ತೋಮರಗಳಿಂದಲೂ ಶೂಲಗಳಿಂದಲೂ ಕೊಡಲಿಗಳಿಂದಲೂ ಖಡ್ಗಗಳಿಂದಲೂ ಶತಘ್ನಿಗಳಿಂದಲೂ ಭೃಸುಂಡಿಗಳಿಂದಲೂ ಆಗ್ನೇಯ ಮೊದಲಾದ ಅಸ್ತ್ರಗಳಿಂದಲೂ ಆ ದೇವತೆಗಳನ್ನು ನಾಲ್ಕುಕಡೆಯಲ್ಲಿಯೂ ಅಟ್ಟಿ ಪ್ರಹರಿಸಿದರು; ಆಗ ದೇವತೆಗಳು ಈರೀತಿ ಅಸುರರಿಂದ ಕರಿಯಲ್ಪಟ್ಟ ಬಂದರಹಿಂದೆ ಬಂದು ತಗಲಿಕೊಂಡು ಬೀಳುತಲಿರುವ ಬಾಣವರ್ಷಗಳಿಂದ ನಾಲ್ಕು ದಿಕ್ಕುಗಳಲ್ಲಿಯೂ ಅಂತರಿಕ್ಷವನ್ನೈದಿ ವರ್ಷಿಸುವ ಮೇಘಗಳಿಂದ ನಕ್ಷತ್ರಗಳಂತೆ ಮುಚ್ಚಲ್ಪಟ್ಟವರಾಗಿ ಕಾಣಪ್ಪಡಲಿಲ್ಲ; ಆಗ ಅಸುರರಿಂದ ಪ್ರಯೋಗಿಸಲ್ಪಟ್ಟ ಶಸ್ತ್ರಾಸ್ತ್ರಸಮೂಹಗಳು ವೇಗಯುಕ್ತಗಳಾದ ಹಸ್ತಗಳುಳ್ಳ ದೇವತೆಗಳಿಂದ ಆಕಾಶದಲ್ಲಿ ಸಹಸ್ರಪ್ರಕಾರಗಳಿಂದ ಛೇದಿಸಲ್ಪಟ್ಟಂಥಾವಾಗಿ ದೇವಸೇನಾಪತಿಗಳನ್ನೈದಲಿಲ್ಲ; ಅನಂತರದಲ್ಲಿ ಆ ಅಸುರರು ಕ್ಷೀಣಗಳಾದ ಶಸ್ತ್ರಾಸ್ತ್ರಸಮೂಹಗಳುಳ್ಳವರಾಗಿ ಪರ್ವತ ಶಿಖರಗಳಿಂದಲೂ ವೃಕ್ಷಗಳಿಂದಲೂ ಪಾಷಾಣಗಳಿಂದಲೂ ದೇವತೆಗಳಮೇಲೆ ವರ್ಷವನ್ನು ಕರದರು; ಆಗ ದೇವತೆಗಳು ತಮ್ಮ ತಮ್ಮ ಶಸ್ತ್ರಗಳಿಂದ ಪೂರ್ವದಂತೆ ಆ ಪರ್ವತ ಶಿಖರಗಳನ್ನು ಛೇದಿಸಿದರು; ಆ ಬಳಿಕ ವೃತ್ರನ ಸೇನಾಪತಿಗಳು ಶಸ್ತ್ರಸಮೂಹಗಳಿಂದಲೂ ವೃಕ್ಷಗಳಿಂದಲೂ ಶಿಲೆಗಳಿಂದಲೂ ನಾನಾವಿಧಗಳಾದ ಪರ್ವತಶಿಖರಗಳಿಂದಲೂ ಪೆಟ್ಟುಬೀಳದೆ ಸುಖಯುಕ್ತರಾಗಿರುವ ಇಂದ್ರಸೇನಾಪತಿಗಳನ್ನು ನೋಡಿ ಭಯಪಟ್ಟ ದೈತ್ಯರಿಂದ ಬಾರಿಬಾರಿಗೂ ಮಾಡಲ್ಪಟ್ಟ ಯುದ್ಧ ಪ್ರಯಾಸಗಳು ಶ್ರೀಹರಿಯೇ ಸಹಾಯನಾಗುಳ್ಳದೇವತೆಗಳಲ್ಲಿ ಯಾವರೀತಿ ಕ್ಷುದ್ರಜನರಿಂದ ಪ್ರಯೋಗಿಸಲ್ಪಟ್ಟ ಅಶುಭಕರಗಳಾದ ನಿಷ್ಠುರವಚನಗಳು ಮಹಾತ್ಮರಲ್ಲಿ ವ್ಯರ್ಥಗಳಾಗುವವೋ ಅದೇರೀತಿ ವ್ಯರ್ಥಗಳಾದವು; ದೈತ್ಯರು ಹರಿಭಕ್ತಿ ರಹಿತರಾದ ಕಾರಣ ನಷ್ಟವಾದ ಯುದ್ಧೋತ್ಸಾಹವೂ ಶತ್ರುಗಳಿಂದ ಅಪಹರಿಸಲ್ಪಟ್ಟ ಧೈರ್ಯವೂ ಉಳ್ಳವರಾಗಿ ರಣರಂಗದಲ್ಲಿ ತಮ್ಮ ಸಮಸ್ತವಾದ ಪ್ರಯಾಸವನ್ನು ನಿಷ್ಫಲವಾದ್ದನ್ನಾಗಿತಿಳಿದು ಸೇನಾಮುಖದಲ್ಲಿ ತಮ್ಮ ಸ್ವಾಮಿಯಾದ ವೃತ್ರಾಸುರನನ್ನು ಬಿಟ್ಟು ಪಲಾಯನಂಗೈದರು; ಆಗ ಮಾನಶೀಲನಾಗಿ ವೀರನಾದ ವೃತ್ರಾಸುರನು ಶತ್ರುಭಯದಿಂದ ಓಡುತಲಿರುವ ತನ್ನ ಸೇನಾಪತಿಗಳನ್ನೂ ಪೂರ್ವದಲ್ಲೇ ಅತಿ ತೀವ್ರವಾದ ಭಯದಿಂದ ಪಲಾಯಿತಂಗಳಾದ ಭಗ್ನಗಳಾದ ತನ್ನ ಸೇನೆಗಳನ್ನೂ ನೋಡಿ ನಕ್ಕು ಆ ಸಮಯಕ್ಕೆ ಉಚಿತವಾದ ಮಾನವಂತರಿಗೆ ಇಷ್ಟವಾದ ವಚನವನ್ನು ನುಡಿಯುತ—ಎಲೈ ವಿಪ್ರಚಿತ್ತಿಯೆ, ನಮುಚಿಯೆ, ಪುಲೋಮನೆ, ಮಯನೆ, ಅನರ್ಥನೆ, ಶಂಬರನೆ ನೀವೆಲ್ಲರೂ ನನ್ನ ವಚನವನ್ನು ಕೇಳಿ: ಯಾವ ಮೃತ್ಯುವಿಗೆ ಈ ಲೋಕಗಳಲ್ಲಿ ಸರ್ವಪ್ರಕಾರಗಳಿಂದಲೂ ಪ್ರತಿಕ್ರಿಯೆಯುಂಟಾಗಲಾರದೋ ಅಂಥಾ ಮೃತ್ಯುವು ಜನ್ಮವನ್ನು ಪಡದ ಪುರುಷನಿಗೆ ನಿತ್ಯವಾಗಿರುವದು; ಆ ಮೃತ್ಯುವಿನಿಂದ ಈ ಲೋಕದಲ್ಲಿ ಕೀರ್ತಿಯೂ ಸ್ವರ್ಗವೂ ಇವೆರಡೂ ಉಂಟಾಗುವವಾದರೆ ಅಂಥಾ ಸಮಯದಲ್ಲಿ ಯಾವ ಪುರುಷನಾದರೂ ಪ್ರಾಪ್ತವಾದ ಮೃತ್ಯುವನ್ನು ಅಪೇಕ್ಷಿಸದಿರುವನೇ! ಎಲೈ ಅಸುರರೆ, ಈ ಲೋಕದಲ್ಲಿ ಪುರುಷನು ಯೋಗನಿಷ್ಠನಾಗಿ ವಾಯುನಿಗ್ರಹಂಗೈದು ಬ್ರಹ್ಮನಲ್ಲಿ ಚಿತ್ತಸಮಾಧಿಯಿಂದ ಕಳೇಬರವನ್ನು ಬಿಡುವದು ಒಂದು ಮೃತ್ಯುವು; ಪುರುಷನು ರಣಭೂಮಿಯಲ್ಲಿ ಪರಾಙ್ಮುಖನಾಗದೆ ಮುಂದೆ ನಿಂತು ದೇಹವನ್ನು ಬಿಡುವದು ಒಂದು ಮೃತ್ಯುವು; ಸಕಲ ಶಾಸ್ತ್ರಸಮ್ಮತಗಳಾದ ಈ ಎರಡು ಮೃತ್ಯುಗಳು ಪುಣ್ಯಹೀನರಾದ ಪುರುಷರಿಂದ ಪಡೆಯಲು ಶಕ್ಯಗಳಲ್ಲ—ಎಂದು ನುಡಿದನು.”

೧೧ನೇ ಅಧ್ಯಾಯ.

ವೃತ್ರಾಸುರನು ಇಂದ್ರನಿಗೆ ಭಕ್ತಿಜ್ಞಾನಫಲಗಳನ್ನು ನಿರೂಪಿಸಿದ್ದು.

"ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಪಲಾಯನದಲ್ಲುದ್ಯುಕ್ತರಾಗಿರುವ ವಿಪ್ರಚಿತ್ತಿಮೊದಲಾದ ಅಸುರರು ಭಯಗ್ರಸ್ತರಾದ್ದರಿಂದ ಜ್ಞಾನರಹಿತರಾಗಿ ಈರೀತಿ ನುಡಿಯುತಲಿರುವ ವೃತ್ರಾಸುರನ ಧರ್ಮಯುಕ್ತವಾದ ವಚನವನ್ನು ಅಂಗೀಕರಿಸಲಿಲ್ಲ; ಆಗ ವೃತ್ರನು ಕಾಲಾನುಸಾರಿಗಳಾದ ದೇವರ್ಕಳಿಂದ ಅನಾಯಕವಾದಂತೆ ಓಡಿಸಲ್ಪಡುತಲಿರುವ ಭಗ್ನವಾದ ಅಸುರಸೇನೆಯನ್ನು ನೋಡಿ ಸಹಿಸದೆ ಸಂತಾಪವನ್ನು ಹೊಂದಿ ತನ್ನ ಪರಾಕ್ರಮದಿಂದ ದೇವತೆಗಳನ್ನು ಅಡ್ಡಗೈಸಿ ಅಧಿಕ ಕೋಪಯುಕ್ತನಾಗಿ 'ಎಲೈ ದೇವತೆಗಳಿರಾ, ಶೂರರಾಗಿ ಮಾತೃಗಳಿಗೆ ಪುತ್ರರೆನ್ನಿಸಿಕೊಳ್ಳಲಾರದೆ ಪುರೀಷಪ್ರಾಯರಾಗಿ ಓಡುತಲಿರುವ ದೈತ್ಯರನ್ನು ಪೃಷ್ಠಭಾಗದಲ್ಲಿ ಪ್ರಹರಿಸುವ ನಿಮಗೆ ಯಾವ ಕೀರ್ತಿಯುಂಟಾದೀತು; ಶೂರರೆಂಬ ಅಭಿಮಾನವುಳ್ಳ ಪುರುಷರಿಗೆ ಭೀತರಾದ ಪುರುಷರ ವಧೆಯು ಕೀರ್ತಿಸಾಧನವಾಗಲಾರದು; ಸ್ವರ್ಗಸಾಧನವೂ ಆಗಲಾರದು! ಎಲೈ ಕ್ಷುದ್ರರೇ, ನಿಮಗೆ ಯುದ್ಧದಲ್ಲಿ ಶ್ರದ್ಧೆಯು ಹೃದಯದಲ್ಲಿ ಧೈರ್ಯವೂ ಉಂಟಾಗಿ ಇಹಲೋಕದಲ್ಲುಂಟಾಗುವ ವಿಷಯಭೋಗಗಳಲ್ಲಿ ಅಭಿಲಾಷೆಯಿದ್ದರೆ ನನ್ನ ಮುಂದುಗಡೆಯಲ್ಲಿ ಕ್ಷಣಮಾತ್ರವು ನಿಲ್ಲಿ' ಎಂದು ಕೋಪಯುಕ್ತನಾಗಿ ಮಹಾ ಬಲಶಾಲಿಯಾದ ವೃತ್ರಾಸುರನು ತನ್ನ ಮಹತ್ತಾದ ದೇಹದಿಂದ ಶತೃಗಳಾದ ದೇವಸಮೂಹಗಳನ್ನು ಭಯಪಡಿಸಿ ಅಟ್ಟಹಾಸದಿಂದ ಸಕಲ ಲೋಕಗಳೂ ಮೂರ್ಛೆಯನ್ನೈದುವಹಾಗೆ ಅಟ್ಟಹಾಸಂಗೈದನು; ಆಗ ಸಕಲ ದೇವಸಮೂಹಗಳೂ ಆ ವೃತ್ರಾಸುರನ ಅಟ್ಟಹಾಸದಿಂದ ಶಿಡಿಲಿನಿಂದ ಪೆಟ್ಟು ಬಿದ್ದವರಂತೆ ಮೂರ್ಛಿತರಾಗಿ ಬಿದ್ದರು; ಆಗ ದುಸ್ಸಹವಾದ ಮದವುಳ್ಳವನಾಗಿ ಶೂಲಧರನಾಗಿ ಅಡಿಗಳನ್ನು ಭೂಮಿಯಿಂದ ಕಂಪಿಸುವಂತೆ ಮಾಡುತಲಿರುವ ವೃತ್ರಾಸುರನು ತನ್ನ ಬಲದಿಂದ ಪೀಡಿತರಾಗಿ ಮುಚ್ಚಲ್ಪಟ್ಟ ನೇತ್ರಗಳುಳ್ಳ ದೇವಸೇನೆಯನ್ನು ಯಾವರೀತಿಯಿಂದ ಗಜಸಮೂಹಕ್ಕೆ ಪತಿಯಾದ ಮದ್ದಾನೆಯು ಪಾದಗಳಿಂದ ಪದ್ಮವನವನ್ನು ಮರ್ದಿಸುವದೋ ಆರೀತಿ ತನ್ನ ಪಾದಗಳಿಂದ ಮರ್ದಿಸಿದನು; ಅನಂತರದಲ್ಲಿ ದೇವೇಂದ್ರನು ಆ ವೃತ್ರಾಸುರನನ್ನು ನೋಡಿ ಅತ್ಯಂತ ಕೋಪಯುಕ್ತನಾಗಿ ತನಗೆ ಅಭಿಮುಖನಾಗಿ ಬರುತಲಿರುವ ಆ ವೃತ್ರನಮೇಲೆ ಮಹತ್ತಾದ ಗದೆಯನ್ನು ಪ್ರಯೋಗಿಸಿದನು; ಆಗ ವೃತ್ರನು ಎದುರಾಗಿ ಬರುತಲಿರುವ ಸಹಿಸಲಶಕ್ಯವಾದ ಆ ಗದೆಯನ್ನು ಲೀಲಾಮಾತ್ರದಿಂದ ವಾಮಹಸ್ತದಿಂದ ಗ್ರಹಿಸಿದನು; ಆಗ ಅತಿ ಪರಾಕ್ರಮಶಾಲಿಯಾಗಿ ವಿಶೇಷವಾದ ಕೋಪಯುಕ್ತನಾಗಿ ಸಿಹ್ಮನಾದಂಗೈಯ್ಯುತ ಆ ಗದೆಯಿಂದಲೇ ಐರಾವತವನ್ನು ಕುಂಭಸ್ಥಳದಲ್ಲಿ ಹೊಡೆದನು; ಆಗ ಯುದ್ಧದಲ್ಲಿ ಅವನ ಪರಾಕ್ರಮವಿಶೇಷವನ್ನು ಸಮಸ್ತ ಶೂರರೂ ಶ್ಲಾಘಿಸಿದರು; ಐರಾವತವು ವೃತ್ರಾಸುರನ ಗದಾಪ್ರಹಾರದಿಂದ ಪೀಡಿಸಲ್ಪಟ್ಟದ್ದಾಗಿ ಶಿಡಿಲಿನಿಂದ ಪೆಟ್ಟುಬಿದ್ದ ಪರ್ವತದಂತೆ ವ್ಯಾಕುಲವಾಗಿ ಭೇದಿಸಲ್ಪಟ್ಟ ಕುಂಭಸ್ಥಳವುಳ್ಳದ್ದಾಗಿ ರಕ್ತವನ್ನು ಸುರಿಸುತ ಅತ್ಯಂತ ದೀನವಾಗಿ ಇಂದ್ರನೊಡನೆ ಕೂಡಿ ಏಳು ಧನುಸ್ಸುಗಳ ಪ್ರಮಾಣದಿಂದ ಹಿಂದಕ್ಕೆ ತಿರುಗಿತು; ವೃತ್ರಾಸುರನು ಮಹಾತ್ಮನಾದ್ದರಿಂದ ಭಗ್ನವಾದ ವಾಹನವುಳ್ಳವನಾಗಿ ಖಿನ್ನವಾದ ಮನಸ್ಸುಳ್ಳ ಆ ಇಂದ್ರನಿಗೋಸ್ಕರ ಪುನಹ ಗದಾಯುಧವನ್ನು ಪ್ರಯೋಗಿಸಲಿಲ್ಲ; ಇಂದ್ರನು ಅಮೃತವನ್ನು ಸ್ರವಿಸುತಲಿರುವ ತನ್ನ ಹಸ್ತಸ್ಪರ್ಶದಿಂದ ನಷ್ಟವಾದ ಪ್ರಹಾರವ್ಯಥೆಯುಳ್ಳ ವಾಹನವುಳ್ಳವನಾಗಿ ಪುನಹ ಯುದ್ಧಕ್ಕೆ ನಿಂತನು; ಆಗ ಆ ವೃತ್ರನು ಪುನಹಾ ಯುದ್ಧವನ್ನು ಮಾಡಬೇಕೆಂಬ ಇಚ್ಛೆಯಿಂದ ಅಣ್ಣನಾದ ವಿಶ್ವರೂಪನನ್ನು ಸಂಹರಿಸಿದ ವಜ್ರಾಯುಧಧರನಾದ ಶತೃವಾದ ಇಂದ್ರನನ್ನು ನೋಡಿ ಅವನ ಕ್ರೂರವಾದ ಪಾಪಕರ್ಮವನ್ನು ಸ್ಮರಿಸಿ ಶೋಕದಿಂದ ನಗುತ 'ಎಲೈ ಇಂದ್ರನೆ, ಬ್ರಾಹ್ಮಣನಾಗಿ ನಿನಗೆ ಗುರುವಾಗಿ ನನಿಗೆ ಅಣ್ಣನಾಗಿರುವ ವಿಶ್ವರೂಪನನ್ನು ನೀನು ಸಂಹರಿಸಿದ್ದರಿಂದ ಬ್ರಹ್ಮಹತ್ಯೆಯನ್ನೂ ಗುರುಹತ್ಯೆಯನ್ನೂ ಮಾಡಿದವನಾದೆ; ಅಂಥಾ ಪಾಪಿಯಾದ ಶತೃವಾದ ನೀನು ಈಗ ನನ್ನ ಮುಂದುಗಡೆಯಲ್ಲಿ ನಿಂತದ್ದೇ ನನಿಗೆ ಭಾಗ್ಯವು! ಎಲೈ ಘಾತಕನೆ, ನನ್ನ ಶೂಲದಿಂದ ಭೇದಿಸಲ್ಪಟ್ಟ ಪಾಷಾಣಸಮವಾದ ಹೃದಯವುಳ್ಳ ನಿನ್ನಿಂದ ಈಗ ನಾನು ಶೀಘ್ರದಿಂದ ನನ್ನ ಅಣ್ಣನಾದ

ವಿಶ್ವರೂಪನ ಋಣದದೆಶೆಯಿಂದ ಮುಕ್ತನಾಗುವೆನೆಂಬದು ನನ್ನ ಭಾಗ್ಯವೇ ಸರಿ ; ಸ್ವರ್ಗಕಾಮಿಯಾದ ಯಾವ ನೀನು ನಮಗೆ ಅಣ್ಣನಾದ ಆತ್ಮಸ್ವರೂಪಜ್ಞನಾದ ಗುರುವಾದ ಪಾಪರಹಿತನಾದ ದೀಕ್ಷಾಬದ್ಧನಾದ ವಿಶ್ವರೂಪನ ಶಿರಸ್ಸುಗಳನ್ನು ದಯಾರಹಿತನಾಗಿ ಖಡ್ಗದಿಂದ ಪಶುವಿನ ಶಿರಸ್ಸನ್ನು ಛೇದಿಸುವಂತೆ ಛೇದಿಸಿದ ಪಾಪಿಯಾಗಿ ಲಜ್ಜಾ ಲಕ್ಷ್ಮೀ ದಯಾ ಕೀರ್ತಿಗಳಿಂದ ತ್ಯಜಿಸಲ್ಪಟ್ಟವನಾಗಿ ದುಷ್ಟವಾದ ಸ್ವಕೃತ್ಯದಿಂದ ರಾಕ್ಷಸಾದಿಗಳಿಂದ ನಿಂದಿಸಲು ಯೋಗ್ಯನಾಗಿ ಅತಿ ಪ್ರಯಾಸದಿಂದ ನನ್ನ ಶೂಲದಿಂದ ಛೇದಿಸಲ್ಪಟ್ಟ ದೇಹವುಳ್ಳವನಾಗಿ ಅಗ್ನಿಯಿಂದ ದಹಿಸಲ್ಪಡದವನಾಗಿರುವ ನಿನ್ನನ್ನು ಹದ್ದುಗಳು ಭಕ್ಷಿಸುತಲಿವೆ ! ಎಲೈ ಇಂದ್ರನೆ, ಮೂಢರಾದ ಇತರ ದೇವತೆಗಳು ಘಾತಕನಾದ ಯಾವ ನಿನ್ನ ಹಿಂದುಗಡೆಯಲ್ಲಿ ಆಯುಧಧಾರಿಗಳಾಗಿ ನನ್ನನ್ನು ಪ್ರಹರಿಸುತಲಿಧಾರೋ ಈಗ ಅತಿ ತೀಕ್ಷ್ಣವಾದ ನನ್ನ ತ್ರಿಶೂಲದಿಂದ ಛೇದಿಸಲ್ಪಟ್ಟ ಕಂಠಗಳುಳ್ಳ ಆ ದೇವತೆಗಳಿಂದ ಪರಿವಾರಯುಕ್ತನಾದ ಭೈರವಾದಿ ದೇವತೆಗಳನ್ನು ಸಂತೋಷಪಡಿಸುತ್ತೇನೆ ! ಎಲೈ ವೀರನೆ, ಹಾಗಲ್ಲದಿದ್ದರೆ ನೀನು ಈ ಯುದ್ಧದಲ್ಲಿ ವಜ್ರಾಯುಧದಿಂದ ನನ್ನ ಶಿರಸ್ಸನ್ನು ಛೇದಿಸುವವನಾದರೆ ಆಗ ನಾನು ಕರ್ಮಬಂಧದ ದೆಶೆಯಿಂದ ಮುಕ್ತನಾಗಿ ನನ್ನ ದೇಹವನ್ನು ಭೂತಗಳಿಗೆ ಬಲಿಯನ್ನಿತ್ತು ಮಹಾ ವೀರಸ್ಥಾನವನ್ನೈದುತ್ತೇನೆ ! ಎಲೈ ಇಂದ್ರನೆ, ಮುಂದುಗಡೆಯಲ್ಲಿ ನಿಂತಿರುವ ವೈರಿಯಾದ ನನ್ನಲ್ಲಿ ಅಮೋಘವಾದ ವಜ್ರಾಯುಧವನ್ನು ಏನುಕಾರಣ ಪ್ರಯೋಗಿಸುವದಿಲ್ಲ ; ಲುಬ್ಧನನ್ನು ಕುರಿತು ಮಾಡಲ್ಪಟ್ಟ ಯಾಚನೆಯಂತೆ ನಿನ್ನ ಗದಾಯುಧವು ಎಂತು ನಿಷ್ಫಲವಾಯಿತೋ ಅದೇರೀತಿ ವಜ್ರಾಯುಧವು ನಿಷ್ಫಲವಾದೀತೆಂದು ಸಂಶಯಗೈಯಬೇಡ ; ನಿನ್ನ ವಜ್ರಾಯುಧವು ಶ್ರೀಹರಿಯ ತೇಜಸ್ಸಿನಿಂದಲೂ ದಧೀಚಿಮುನಿಯ ತಪಸ್ಸಿನಿಂದಲೂ ತೀಕ್ಷ್ಣವಾಗಿ ಮಾಡಲ್ಪಟ್ಟಿರುವದಾದಕಾರಣ ಆ ವಜ್ರಾಯುಧದಿಂದಲೇ ಶ್ರೀಹರಿಯಿಂದ ಪ್ರೇರಿಸಲ್ಪಟ್ಟಿರುವ ನೀನು ಶತೃವಾದ ನನ್ನನ್ನು ಜಯಿಸು ; ಯಾರಲ್ಲಿ ಭಗವದನುಗ್ರಹವು ಪೂರ್ಣವಾಗಿದೆಯೋ ಅವರಿಗೆ ಜಯವು ಸಂಪತ್ತು ಸಕಲ ಗುಣಗಳೂ ಉಂಟಾಗುವವು ; ಪೂರ್ವದಲ್ಲಿ ಸ್ವಾಮಿಯಾದ ಸಂಕರ್ಷಣಮೂರ್ತಿಯು ನನಗೆ ಯಾವರೀತಿ ನಿರೂಪಿಸಿದನೋ ಅದೇರೀತಿ ನಾನು ಆ ಶ್ರೀಸಂಕರ್ಷಣನ ಚರಣಾರವಿಂದದಲ್ಲಿ ಮನಸ್ಸನ್ನು ನಿಲ್ಲಿಸಿ ನಿನ್ನ ವಜ್ರಾಯುಧವೇಗದಿಂದ ಛೇದಿಸಲ್ಪಟ್ಟ ವಿಷಯಭೋಗರೂಪವಾದ ಸಂಸಾರವುಳ್ಳವನಾಗಿ ದೇಹವನ್ನು ಬಿಟ್ಟು ಮಹಾಯೋಗಿಗಳ ಗತಿಯನ್ನೈದುತ್ತೇನೆ ; ಭಗವಂತನಾದ ಸಂಕರ್ಷಣನು ತನ್ನ ಭೃತ್ಯನಾದ ನನಗೋಸ್ಕರ ಸ್ವರ್ಗಲೋಕಾಧಿಪತ್ಯವನ್ನೀವನೆಂದು ಸಂಶಯಗೈಯಬೇಡ ; ಯಾವ ಸಂಪತ್ತುಗಳದೆಶೆಯಿಂದ ದ್ವೇಷವು ಭಯವು ಮನೋವ್ಯಥೆಯು ಮದವು ಕಲಹವು ವ್ಯಸನವು ಅತ್ಯಂತ ಪ್ರಯಾಸವು ಈ ಸಮಸ್ತವೂ ಉಂಟಾಗುವವೋ ಅಂಥಾ ದ್ವೇಷಾದಿಗಳಿಗೆ ಕಾರಣಗಳಾದ ಸ್ವರ್ಗ ಭೂ ಪಾತಾಳಲೋಕಗಳಲ್ಲಿರುವ ಸಂಪತ್ತುಗಳನ್ನು ತತ್ವಜ್ಞರಾದ ತನ್ನ ಭಕ್ತರಿಗೆ ಶ್ರೀಹರಿಯು ನಿಶ್ಚಯವಾಗಿ ಕೊಡುವದಿಲ್ಲ ; ನಮ್ಮ ಸ್ವಾಮಿಯಾದ ಶ್ರೀಹರಿಯು ತನ್ನ ಭಕ್ತನಾದ ಪುರುಷನಿಗೆ ಧರ್ಮಾರ್ಥ ಕಾಮ ವಿಷಯವಾದ ಪ್ರಯಾಸಕ್ಕೆ ವಿಘ್ನವನ್ನು ಮಾಡುತಲಿಧಾನೆ ; ಆದರೆ ವಿರಕ್ತರಿಗೆ ವಿಷಯವಾಗುಳ್ಳ ಯಾವ ಭಗವತ್ಪ್ರಸಾದವು ಅನ್ಯರಿಂದ ಪಡೆಯಲಶಕ್ಯವೋ ಅಂಥಾ ಭಗವತ್ಪ್ರಸಾದವು ಆ ಧರ್ಮಾರ್ಥ ಕಾಮವಿಷಯಪ್ರಸಾದ ವಿಘ್ನದಿಂದಲೇ ತನಿಗೆ ಉಂಟಾಯಿತೆಂದು ಪುರುಷನಿಂದ ಊಹಿಸತಕ್ಕದ್ದೇ ಹೊರ್ತು ಐಶ್ವರ್ಯಾದಿಗಳಿಂದ ನನಿಗೆ ಭಗವತ್ಪ್ರಸಾದವುಂಟಾಯಿತೆಂದು ಊಹಿಸತಕ್ಕದ್ದಲ್ಲ' ಎಂದು ವೃತ್ರನು ಈರೀತಿ ತನ್ನ ಅಭಿಪ್ರಾಯವನ್ನು ಇಂದ್ರನಿಗೆ ತಿಳಿಸಿ ಭಗವಂತನನ್ನು ಪ್ರಾರ್ಥಿಸಿದನು ! ಎಲೈ ಶ್ರೀಹರಿಯೆ, ನಾನು ನಿನ್ನ ಪಾದಾರವಿಂದಗಳನ್ನು ಆಶ್ರಯಿಸಿರುವ ಪರಮಭಾಗವತರಿಗೆ ಬಾರಿಬಾರಿಗೂ ದಾಸಾನುದಾಸನಾದೆನು; ನನ್ನ ಮನಸ್ಸು ಪ್ರಾಣನಾಥನಾದ ನಿನ್ನ ಗುಣಗಳನ್ನೇ ಸ್ಮರಿಸುವದಾಗಲಿ ; ನನ್ನ ವಾಕ್ಕು ನಿನ್ನ ನಾಮಗುಣಗಳನ್ನು ಕೀರ್ತನಗೈಯುವದಾಗಲಿ ; ನನ್ನ ಶರೀರವು ನಿನ್ನ ಸೇವೆಯನ್ನೇ ಆಚರಿಸುವದಾಗಲಿ ! ಎಲೈ ಸಕಲ ಸೌಭಾಗ್ಯನಿಧಿಯಾದ ಶ್ರೀಹರಿಯೆ; ನಾನು ನಿನ್ನೊಬ್ಬನನ್ನು ಹೊರ್ತು ಧ್ರುವಪದವನ್ನೂ ಇಂದ್ರಪದವನ್ನೂ ಬ್ರಹ್ಮಪದವನ್ನೂ ಸಾರ್ವಭೌಮತ್ವವನ್ನೂ ಪಾತಾಳಲೋಕಾಧಿಪತ್ಯವನ್ನೂ ಅಷ್ಟಮಹಾ ಯೋಗಸಿದ್ಧಿಗಳನ್ನೂ ಮೋಕ್ಷಸಾಮ್ರಾಜ್ಯವನ್ನೂ ಅಪೇಕ್ಷಿಸುವದಿಲ್ಲ ! ಎಲೈ ಹರಿಯೆ, ಪುಟ್ಟದಿರುವ ಪಕ್ಷಗಳುಳ್ಳ ಪಕ್ಷಿಗಳು ಘೂಕ ಮೊದಲಾದ

ದುಷ್ಟಪಕ್ಷಿಗಳಿಂದ ಪೀಡಿಸಲ್ಪಟ್ಟವಾಗಿ ತಾಯಿಯಾದ ಪಕ್ಷಿಯನ್ನು ಎಂತು ನೋಡಲಿಚ್ಛೈಸುವವೋ ಹಗ್ಗದಿಂದ ಕಟ್ಟಲ್ಪಟ್ಟು ಕ್ಷುತ್ತಿನಿಂದ ದೀನಗಳಾದ ಎಳೆಯಕರುಗಳು ಎಂತು ಮಾತೃಸ್ತನ್ಯವನ್ನು ಅಪೇಕ್ಷಿಸುವವೋ ದೂರ ದೇಶಗತನಾದ ಪ್ರಿಯನಾದ ಪತಿಯನ್ನು ಕಾಂತೆಯು ಕಾಮನಿಂದ ಬಾಧಿಸಲ್ಪಟ್ಟವಳಾಗಿ ಎಂತು ನೋಡಲಿಚ್ಛೈಸುವಳೋ ಅದೇರೀತಿ ನನ್ನ ಮನಸ್ಸು ನಿನ್ನನ್ನು ನೋಡಲಿಚ್ಛೈಸುತಲಿದೆ! ಎಲೈ ಹರಿಯೆ, ಕಾಮಗಳಿಂದ ಸಂಸಾರ ಚಕ್ರದಲ್ಲಿ ತಗಲಿಕೊಂಡು ಸಂತಪ್ತನಾಗುತಲಿರುವ ನನಿಗೆ ಪುಣ್ಯಶ್ಲೋಕರಾಗಿ ನಿನ್ನ ಭಕ್ತರಲ್ಲೇ ಆಸಕ್ತಿಯುಂಟಾಗಲಿ; ಮೊದಲೇ ದೇಹಾದಿಗಳಲ್ಲಿ ಆಸಕ್ತಚಿತ್ತನಾದ ನನಿಗೆ ನಿನ್ನ ಮಾಯೆಯಿಂದ ದೇಹ ಪುತ್ರ ಕಳತ್ರ ಗೃಹಾದಿಗಳಲ್ಲಿ ಪುನಹ ಆಸಕ್ತಿಯುಂಟಾಗಬೇಡ ಎಂದು ಪ್ರಾರ್ಥಿಸಿದನು.''

೧೨ನೇ ಅಧ್ಯಾಯ.

ಇಂದ್ರನು ವೃತ್ರಾಸುರನನ್ನು ಸಂಹರಿಸಿದ್ದು.

"ಎಲೈ ಪರೀಕ್ಷಿದ್ರಾಯನೆ, ಈರೀತಿಯಿಂದ ವೃತ್ರಾಸುರನು ಯುದ್ಧದಲ್ಲಿ ದೇಹವನ್ನು ಬಿಡಲಿಚ್ಛೆಯುಳ್ಳವನಾಗಿ ವೈರಿಯನ್ನು ಜಯಿಸುವದಕ್ಕಿಂತಲೂ ಮೃತ್ಯುವನ್ನೇ ಉತ್ಕೃಷ್ಟವನ್ನಾಗಿ ತಿಳಿದು ತನ್ನ ಹಸ್ತದಿಂದ ಶೂಲಾಯುಧವನ್ನು ಪಿಡಿದು ಮಹಾ ಪ್ರಳಯಕಾಲದಲ್ಲಿ ವಿಷ್ಣುವನ್ನು ಕುರಿತು ಬಂದ ಕೈಟಭಾಸುರನಂತೆ ಇಂದ್ರನಿಗೆ ಅಭಿಮುಖನಾಗಿ ಹೋಗಿ ಪ್ರಳಯಾಗ್ನಿಯಂತೆ ಅತಿ ಭಯಂಕರಗಳಾದ ಶಿಖೆಗಳುಳ್ಳ ತ್ರಿಶೂಲವನ್ನು ಅತಿ ವೇಗದಿಂದ ತಿರಿಗಿಸಿ ಇಂದ್ರನಮೇಲೆ ಪ್ರಯೋಗಂಗೈದು ಧೈರ್ಯದಿಂದ ಅಟ್ಟಹಾಸಂಗೈದು ಎಲೈ ಪಾಪಿಯಾದ ಇಂದ್ರನೆ, ನೀನು ಮೃತನಾಗುತ್ತೀಯೋ ಎಂದು ಕೋಪದಿಂದ ನುಡಿದನು; ಆಗ ದೇವೇಂದ್ರನು ಅಂತರಿಕ್ಷದಲ್ಲಿ ತಿರುಗುತ ಗ್ರಹದಂತೆಯೂ ಕೊಳ್ಳಿಯಂತೆಯೂ ನೋಡಲಶಕ್ಯವಾಗಿ ಬರುತಲಿರುವ ಶೂಲಾಯುಧವನ್ನು ಕಂಡು ಭಯಪಡದೆ ನೂರು ತುದಿಗಳುಳ್ಳ ವಜ್ರಾಯುಧದಿಂದ ಸರ್ಪರಾಜನಾದ ವಾಸುಕಿಯ ದೇಹದಂತೆ ದೀರ್ಘವಾದ ಆ ವೃತ್ರಾಸುರನ ಭುಜವನ್ನು ಛೇದಿಸಿದನು; ಆಗ ಆ ವೃತ್ರನು ಛೇದಿಸಲ್ಪಟ್ಟ ಭುಜವುಳ್ಳವನಾಗಿ ಅತಿ ಕೋಪಯುಕ್ತನಾಗಿ ವಜ್ರಾಯುಧಧರನಾದ ಇಂದ್ರನ ಸಮಿಪವನ್ನೈದಿ ಪರಿಘಾಯುಧದಿಂದ ಇಂದ್ರನ ದವಡೆಯಲ್ಲಿ ಪ್ರಹರಿಸಿ ಅದರಿಂದಲೇ ಐರಾವತವನ್ನು ಹೊಡೆಯಲು ಇಂದ್ರನ ಹಸ್ತದಿಂದ ವಜ್ರಾಯುಧವು ಕೆಳಕ್ಕೆ ಬಿತ್ತು; ಆಗ ದೇವತೆಗಳು ಅಸುರರು ಸಿದ್ಧ ಚಾರಣ ಸಮೂಹಗಳೂ ಆ ವೃತ್ರನ ಅತ್ಯಂತ ಆಶ್ಚರ್ಯಕರವಾದ ಪರಾಕ್ರಮವನ್ನು ಬಹುಮಾನಂಗೈದು ಇಂದ್ರನ ಸಂಕಟವನ್ನು ನೋಡಿ ಕಟಕಟಾ ಎಂದು ಅತ್ಯಂತವಾಗಿ ದುಃಖಿಸಿದರು; ಆಮೇಲೆ ಇಂದ್ರನು ವೈರಿಯ ಸನ್ನಿಧಿಯಲ್ಲಿ ತನ್ನ ಹಸ್ತದಿಂದ ಕೆಳಕ್ಕೆ ಬಿದ್ದಿರುವ ವಜ್ರಾಯುಧವನ್ನು ನೋಡಿ ಲಜ್ಜಿತನಾಗಿ ಪುನಹಾ ಪರಿಗ್ರಹಿಸಲಿಲ್ಲ; ಆಗ ವೃತ್ರನು ಇಂದ್ರನನ್ನು ಕುರಿತು 'ಎಲೈ ಇಂದ್ರನೆ, ಇದು ದುಃಖಿಸುವದಕ್ಕೆ ಕಾಲವಲ್ಲ; ಪುನಹ ಹಸ್ತದಿಂದ ವಜ್ರಾಯುಧವನ್ನು ಪಿಡಿದು ನಿನಗೆ ಶತ್ರುವಾದ ನನ್ನನ್ನು ಜಯಿಸು; ಜಗತ್ತಿನ ಸೃಷ್ಟಿ ಸ್ಥಿತಿ ಸಂಹಾರಗಳಿಗೆ ನಿಯಾಮಕನಾದ ಸರ್ವಜ್ಞನಾದ ಆದಿಪುರುಷನಾದ ನಿತ್ಯನಾದ ಶ್ರೀಹರಿಯನ್ನು ಹೊರ್ತು ಯುದ್ಧಂಗೈಯಲಿಚ್ಛೈಸುವವನಾಗಿ ಪರಾಧೀನನಾದ ಆತ್ಮನುಳ್ಳವನಾಗಿ ಶಸ್ತ್ರಧಾರಿಗಳಾಗಿರುವ ಶೂರರಿಗೆ ನಿರಂತರವು ಜಯವುಂಟಾಗಲಾರದು; ಜಯವು ಒಂದು ಸಮಯದಲ್ಲಿ ಉಂಟಾಗುವದು; ಒಂದು ಸಮಯದಲ್ಲಿ ಉಂಟಾಗದು; ತಮ್ಮ ಪಾಲಕರೊಡನೆ ಕೂಡಿರುವ ಈ ಲೋಕಗಳು ಯಾವವನ ವಶದಲ್ಲಿದ್ದುಕೊಂಡು ಬಲೆಯಿಂದ ಕಟ್ಟಲ್ಪಟ್ಟ ಪಕ್ಷಿಗಳಂತೆ ಕಾಲವಿವಶಗಳಾದ ವ್ಯಾಪಾರದಲ್ಲಿ ಪ್ರವರ್ತಿಸುತಲಿವೆಯೋ ಆ ಭಗವಂತನೇ ಜಯಮೊದಲಾದ್ದಕ್ಕೆ ಕಾರಣಭೂತನೇ ಹೊರ್ತು ಮತ್ತೊಂದಲ್ಲ! ಎಲೈ ಇಂದ್ರನೇ, ಇಂದ್ರಿಯಶಕ್ತಿ ಮನಶ್ಯಕ್ತಿಸ್ವರೂಪನಾಗಿ ದೇಹಶಕ್ತಿಸ್ವರೂಪನಾಗಿ ಪ್ರಾಣಶಕ್ತಿಸ್ವರೂಪನಾಗಿ ಮುಕ್ತಿಸ್ವರೂಪನಾಗಿ ಮೃತ್ಯುಸ್ವರೂಪನಾಗಿರುವ ಶ್ರೀಹರಿಯನ್ನು ಸಮಸ್ತಕ್ಕೂ ಕಾರಣನನ್ನಾಗಿ ತಿಳಿಯದೆ ಮೂಢಜನರು ಜಡಸ್ವರೂಪವಾದ ದೇಹವನ್ನು ಕಾರಣವನ್ನಾಗಿ ತಿಳಿಯುತಲಿಧಾರೆ; ದಾರುವಿನಿಂದ ನಿರ್ಮಿಸಲ್ಪಟ್ಟ

ದರು ; ಆಗ ಸ್ತ್ರೀ ಪ್ರತಿಮೆಯೂ ಯಂತ್ರದಿಂದ ನಿರ್ಮಿಸಲ್ಪಟ್ಟಮೃಗವು ಎಂತು ಪರಾಧೀನವಾದ ಚೇಷ್ಟೆಯುಳ್ಳದ್ದೋ ಅದೇರೀತಿ ಸಕಲ ಭೂತಗಳನ್ನು ಈಶ್ವರಾಧೀನ ವ್ಯಾಪಾರವುಳ್ಳಂಥಾವನ್ನಾಗಿ ತಿಳಿ ; ಪುರುಷನು ಪ್ರಕೃತಿಯೂ ಮಹತ್ತತ್ವವು ಅಹಂಕಾರವು ಪಂಚತನ್ಮಾತ್ರಗಳು ಇಂದ್ರಿಯಗಳು ಕರ್ಮವಾಸನೆಗಳೂ ಯಾವ ಶ್ರೀಹರಿಯ ಅನುಗ್ರಹವನ್ನು ಹೊರ್ತು ಈ ಪ್ರಪಂಚದ ಸೃಷ್ಟ್ಯಾದಿಗಳಲ್ಲಿ ಸಮರ್ಥಗಳಾಗಲಾರವೋ ಅವನೇ ಸಮಸ್ತಕ್ಕೂ ಕಾರಣನೆಂದು ತಿಳಿ ; ಈ ಅರ್ಥವನ್ನು ತಿಳಿಯದಿರುವ ಪುರುಷನು ಅಸ್ವತಂತ್ರನಾದ ಜೀವನನ್ನು ಸ್ವತಂತ್ರನಾಗಿ ತಿಳಿಯುತಲಿದ್ಧಾನೆ ; ಸ್ವತಂತ್ರನಾದ ಶ್ರೀಹರಿಯು ಭೂತಗಳಿಂದ ಭೂತಗಳನ್ನು ಸೃಜಿಸುತಲಿದ್ಧಾನೆ ; ಭೂತಗಳಿಂದಲೇ ಭೂತಗಳನ್ನು ಗ್ರಾಸಂಗೈಯಿಸುತಲಿದ್ಧಾನೆ ; ನಿನ್ನಿಂದ ಪರಾಜಿತನಾದ ನನಗೆ ಜಯವುಂಟಾಗುವದೆಂಬ ಶಂಕೆಯಿಲ್ಲ ; ಏನುಕಾರಣ ಬಲಾತ್ಕಾರದಿಂದ ನನ್ನನ್ನು ಯುದ್ಧದಲ್ಲಿ ಪ್ರವರ್ತಿಸುವಂತೆ ಮಾಡುತ್ತೀಯೆಯೆಂದಲ್ಲಿ ಅಪೇಕ್ಷಿಸದಿರುವ ಪುರುಷನಿಗೆ ಎಂತು ತಮಗೆ ತಾವೇ ಅಪಕೀರ್ತಿ ದಾರಿದ್ರ್ಯಾದಿಗಳು ಸಂಭವಿಸುವವೋ ಅದೇರೀತಿ ಪುರುಷನಿಗೆ ಜಯಾದಿಗಳು ಸಂಭವಿಸುವಕಾಲದಲ್ಲಿ ಆಯುಸ್ಸು ಕೀರ್ತಿ ಪ್ರಭುತ್ವ ಜಯವು ಮೊದಲಾದ ಇಷ್ಟಾರ್ಥಗಳು ತಮಗೆ ತಾವೇ ಸಂಭವಿಸುತ್ತಲಿವೆ ; ಸಮಸ್ತವೂ ಈಶ್ವರಾಧೀನವಾದ್ದರಿಂದ ಪುರುಷನು ಕೀರ್ತಿ ಅಪಕೀರ್ತಿಗಳಲ್ಲಿಯೂ ಜಯ ಪರಾಜಯಗಳಲ್ಲಿಯೂ ಜೀವಿಸುವದರಲ್ಲಿಯೂ ಮರಣದಲ್ಲಿಯೂ ಸಂತೋಷವನ್ನೂ ದುಃಖವನ್ನೂ ಸಹ ಹೊಂದದೆ ಸಮದೃಷ್ಟಿಯುಳ್ಳವನಾಗಬೇಕು ; ಸತ್ವರಜಸ್ತಮಸ್ಸುಗಳೆಂಬ ಇವು ಮೂರು ಪ್ರಕೃತಿಯಗುಣಗಳೇ ಹೊರ್ತು ಆತ್ಮನ ಗುಣಗಳಲ್ಲ ; ಆತ್ಮನಾದರೋ ಆ ಪ್ರಕೃತಿಗೆ ಆ ಗುಣಗಳಿಗೆ ಸಾಕ್ಷಿರೂಪನಾಗಿರುವನೆಂಬ ಅರ್ಥವನ್ನು ಯಾವನು ತಿಳಿಯುತಲಿದ್ಧಾನೋ ಆ ಪುರುಷನು ಸುಖದುಃಖಾದಿಗಳಿಂದ ಬದ್ಧನಾಗುವದಿಲ್ಲ ! ಎಲೈ ಇಂದ್ರನೇ, ಶಕ್ತಿಯಿದ್ದಷ್ಟು ನಿನ್ನ ಪ್ರಾಣಗಳನ್ನಪಹರಿಸಲಿಚ್ಛೆಯಿಂದ ನಿನ್ನೊಡನೆ ಯುದ್ಧದಲ್ಲಿ ಕೂಡಿದವನಾಗಿ ನಿನ್ನಿಂದ ಛೇದಿಸಲ್ಪಟ್ಟ ಆಯುಧವೂ ಭುಜವೂ ಉಳ್ಳವನಾಗಿ ಪರಾಜಿತನಾಗಿರುವ ನನ್ನನ್ನು ನೋಡಿ ಸುಖ ದುಃಖ ರಹಿತನಾಗು ; ಜಯಾಪಜಯಗಳು ನಿಯತಗಳಲ್ಲವೆಂಬ ಅರ್ಥವನ್ನು ಪಗಡೆಯ ದೃಷ್ಟಾಂತದಿಂದ ನಿರೂಪಿಸುವನು : ಪ್ರಾಣಗಳೆಂಬ ಪಣದ್ರವ್ಯವುಳ್ಳದ್ದಾಗಿ ಬಾಣಗಳೆಂಬ ದಾಳಗಳುಳ್ಳದ್ದಾಗಿ ಇತ್ತಲತ್ತಲೂ ಚಲಿಸುತಲಿರುವ ವಾಹನಗಳೆಂಬ ಹಲಿಗೆಗಳುಳ್ಳದ್ದಾಗಿರುವ ಯುದ್ಧವೆಂಬ ಈ ಪಗಡೆ ಆಟದಲ್ಲಿ ಇವನಿಗೆ ಜಯವೆಂದವನಿಗೆ ಪರಾಜಯವೆಂದು ನಿಶ್ಚಯವಾಗಿ ತಿಳಿಯಲ್ಪಡುವದಿಲ್ಲವೆಂಬ ಕಪಟರಹಿತವಾದ ವೃತ್ರಾಸುರನ ವಚನವನ್ನು ಕೇಳಿ ಇಂದ್ರನು ಆ ವಚನವನ್ನು ಬಹುಮಾನಂಗೈದು ಪುನಹ ಹಸ್ತದಿಂದ ವಜ್ರಾಯುಧವನ್ನು ಹಿಡಿದು ನಗುತ ಆಶ್ಚರ್ಯಪಡದೆ ವೃತ್ರನನ್ನು ಕುರಿತು ‘ಎಲೈ ವೃತ್ರನೇ, ನಿನಗೆ ಇಂಥಾ ತತ್ವಜ್ಞಾನವುಂಟಾದ್ದರಿಂದ ನೀನು ಕೃತಾರ್ಥನೇ ಸರಿ ; ಆತ್ಮಸ್ವರೂಪಜ್ಞನಾದ್ದರಿಂದ ಅತ್ಯಂತ ಇಷ್ಟನಾದ ಈಶ್ವರನಾದ ಹರಿಯನ್ನು ನೀನು ಸರ್ವಭಾವದಿಂದಲೂ ಸೇವಿಸಿದವನಾಗಿದ್ದೀಯೆ ; ನೀನು ಯಾವಕಾರಣದಿಂದ ಅಸುರರ ಭಾವವನ್ನು ಬಿಟ್ಟು ಮಹಾ ಪುರುಷತ್ವವನ್ನು ಪಡದೆಯೋ ಅದುಕಾರಣ ನೀನು ಸರ್ವರಿಗೂ ದೇಹವನ್ನುಂಟುಮಾಡುವ ವಿಷ್ಣುಮಾಯೆಯನ್ನು ದಾಟಿದವನಾದೆ ; ರಜೋಗುಣವೇ ಸ್ವಭಾವವಾಗುಳ್ಳ ನಿನಗೆ ಸರ್ವಾತ್ಮಕನಾದ ಭಗವಂತನಾದ ಶ್ರೀ ವಾಸುದೇವನಲ್ಲಿ ದೃಢವಾದ ಬುದ್ಧಿಯುಂಟಾಯಿತೆಂಬದು ಮಹತ್ತಾದ ಆಶ್ಚರ್ಯವಲ್ಲವೆ ! ಮೋಕ್ಷಕ್ಕೆ ನಿಯಾಮಕನಾದ ಭಗವಂತನಾದ ಶ್ರೀಹರಿಯಲ್ಲಿ ನಿನಗೆ ಭಕ್ತಿಯು ದೃಢವಾಗಿ ಮುಕ್ತಿಯೆಂಬ ಮಹಾಸಮುದ್ರದಲ್ಲಿ ಕ್ರೀಡಿಸುವ ನಿನಗೆ ಸ್ವಲ್ಪಗಳಾದ ಹಳ್ಳಗಳಲ್ಲಿ ನಿಂತಿರುವ ಜಲಗಳೊಡನೆ ಸಮಾನಗಳಾದ ಈ ಸ್ವರ್ಗಾದಿಗಳಿಂದೇನು ಫಲವು ! ಈರೀತಿ ಧರ್ಮಸ್ವರೂಪವನ್ನು ತಿಳಿಯಲಿಚ್ಛೆಯಿಂದ ಪರಸ್ಪರವಾಗಿ ಸಂಭಾಷಣಂಗೈಯುತಲಿರುವ ಮಹಾ ವೀರರಾದ ಯುದ್ಧಗಳಲ್ಲಿ ಪ್ರಮುಖರಾದ ಇಂದ್ರ ವೃತ್ರಾಸುರರು ಯುದ್ಧಂಗೈದರು ; ಆಗ ಶತ್ರುಸಂಹಾರಕನಾದ ವೃತ್ರನು ಆಯೋಮಯವಾಗಿ ಭಯಂಕರವಾದ ಪರಿಘಾಯುಧವನ್ನು ವಾಮಹಸ್ತದಿಂದ ತಿರಿಗಿಸಿ ಇಂದ್ರನಮೇಲೆ ಪ್ರಯೋಗಿಸಿದನು ; ಅನಂತರದಲ್ಲಿ ದೇವೇಂದ್ರನು ನೂರು ಹರಿತಂಗಳುಳ್ಳ ವಜ್ರಾಯುಧದಿಂದ ಬಂದೇಸಮಯದಲ್ಲಿ ಆ ವೃತ್ರನ ಪರಿಘಾಯುಧವನ್ನು ಗಜದ ಸೊಂಡಿಲಕ್ಕೆ ಸಮಾನವಾದ ಅವನ ವಾಮ ಭುಜವನ್ನೂ ಛೇದಿಸಿದನು ; ಆಗ ಛೇದಿಸಲ್ಪಟ್ಟ ಮೂಲಪ್ರದೇಶವುಳ್ಳ ಭುಜಗಳಿಂದ ರಕ್ತವನ್ನು ಸುರಿಸುತ ಆ ವೃತ್ರನು ಪೂರ್ವ

ದಲ್ಲಿ ಇಂದ್ರನಿಂದ ಛೇದಿಸಲ್ಪಟ್ಟ ಪಕ್ಷಗಳುಳ್ಳದ್ದಾಗಿ ಆಕಾಶದಿಂದ ಕೆಳಕ್ಕೆ ಬಿದ್ದಿರುವ ಮಹಾ ಪರ್ವದಂತೆ ಪ್ರಕಾಶಿಸಿದನು ; ಅನಂತರದಲ್ಲಿ ನಾಲಿಗೆಯ ಕೆಳಗಿನ ಭಾಗವನ್ನು ಭೂಮಿಯಲ್ಲಿ ನಿಲ್ಲಿಸಿ ಮೇಲಿನ ಭಾಗವನ್ನು ಸ್ವರ್ಗದಲ್ಲಿ ನಿಲ್ಲಿಸಿ ಆಕಾಶದಂತೆ ಅಗಾಧವಾಗಿರುವ ಬಾಯಿಯಿಂದ ಮಹಾ ಸರ್ಪದಂತೆ ಭಯಂಕರವಾದ ನಾಲಿಗೆಯಿಂದ ಮೃತ್ಯುವಿಗೆ ಸಮಾನಗಳಾದ ಕೋರೆದಾಡೆಗಳಿಂದಲೂ ಮೂರು ಲೋಕಗಳನ್ನೂ ಗ್ರಾಸಮಾಡುವವನಂತೆ ತೋರುತ ಅತ್ಯುನ್ನತವಾಗಿ ಅತಿ ವಿಸ್ತೃತವಾದ ದೇಹವುಳ್ಳವನಾಗಿ ತನ್ನ ವೇಗದಿಂದ ಪರ್ವತಗಳನ್ನು ಚಲಿಸುವಂತೆ ಮಾಡುತ ಪಾದಗಳಿಂದ ಚರಿಸುವ ಹಿಮವತ್ಪರ್ವತದಂತೆ ಅಡಿಗಳಿಂದ ಭೂಮಿಯನ್ನು ಚೂರ್ಣಮಾಡುತ ಮಹಾ ಬಲಶಾಲಿಯಾಗಿ ಮಹಾ ಪ್ರಭಾವಯುಕ್ತನಾಗಿರುವ ಆ ವೃತ್ರಾಸುರನು ಹೆಬ್ಬಾವಿನಂತೆ ಐರಾವತದೊಡನೆ ಇಂದ್ರನನ್ನು ಕಬಳಿಸಿದನು ; ಆಗ ಬ್ರಹ್ಮದೇವನೊಡನೆಯೂ ಮಹಾಮುನಿಗಳೊಡನೆಯೂ ಕೂಡಿರುವ ದೇವತೆಗಳು ವೃತ್ರನಿಂದ ಗ್ರಾಸಮಾಡಲ್ಪಟ್ಟ ಇಂದ್ರನನ್ನು ನೋಡಿ ಅತಿ ಖಿನ್ನರಾಗಿ ಹಾ ! ಕಟಕಟಾ—ಎಂದು ದುಃಖಿಸಿದರು ; ಆಗ ಇಂದ್ರನು ವೃತ್ರನಿಂದ ಕಬಳಿಸಲ್ಪಟ್ಟವನಾಗಿ ಅವನ ಉದರವನ್ನೈದಿದವನಾದಾಗ್ಯೂ ಕವಚಸ್ವರೂಪನಾದ ಶ್ರೀನಾರಾಯಣನಿಂದ ರಕ್ಷಿಸಲ್ಪಟ್ಟವನಾದ್ದರಿಂದ ಯೋಗಬಲದಿಂದಲೂ ಮಾಯಾಬಲದಿಂದಲೂ ಮೃತಿಯನ್ನೈದದೆ ತನ್ನ ವಜ್ರಾಯುಧದಿಂದ ಅವನ ಉದರವನ್ನು ಛೇದಿಸಿ ಹೊರಕ್ಕೆಬಂದು ಪರಾಕ್ರಮದಿಂದ ಪರ್ವತ ಶಿಖರದಂತಿರುವ ಆ ವೃತ್ರನ ಶಿರಸ್ಸನ್ನು ಛೇದಿಸಲು ಅತಿ ವೇಗಯುಕ್ತವಾದ ವಜ್ರಾಯುಧವು ವೃತ್ರಸಂಹಾರಾರ್ಥವಾಗಿ ಅವನ ಕಂಠವನ್ನು ಸುತ್ತಲೂ ಛೇದಿಸುತ ತಿರುಗುತ ಸೂರ್ಯಾದಿಗಳ ದಕ್ಷಿಣೋತ್ತರಗತಿರೂಪವಾದ ಕಾಲಚಕ್ರದಲ್ಲಿ ಮುನ್ನೂರಅರವತ್ತು ದಿವಸಗಳ ಯಾವ ಸಮೂಹವುಂಟೋ ಅಷ್ಟುಮಾತ್ರವಾದ ದಿನಸಮೂಹದಿಂದ ಆ ವೃತ್ರನ ಕಂಠವನ್ನು ಭೂಮಿಯಲ್ಲಿ ಕೆಡಹಿತು ; ಆ ವೃತ್ರಸಂಹಾರ ಸಮಯದಲ್ಲಿ ಅಂತರಿಕ್ಷದಲ್ಲಿ ದಿವ್ಯ ಭೇರಿಗಳು ಧ್ವನಿಗೈದವು; ಗಂಧರ್ವರು ಸಿದ್ಧರು ಮಹರ್ಷಿ ಸಮೂಹಗಳೊಡನೆ ಕೂಡಿ ವೃತ್ರಸಂಹಾರಕನಾದ ಇಂದ್ರನ ಸಾಮರ್ಥ್ಯಪ್ರಕಾಶಕಗಳಾದ ಮಂತ್ರಗಳಿಂದ ಇಂದ್ರನನ್ನು ಸ್ತುತಿಸುತ ಅತಿ ಸಂತೋಷದಿಂದ ಪುಷ್ಪವರ್ಷವನ್ನು ಕರದರು ; ಆ ಸಮಯದಲ್ಲಿ ವೃತ್ರಾಸುರನ ಶರೀರದ್ದೆಸೆಯಿಂದ ಆತ್ಮಜ್ಯೋತಿಯು ಸಮಸ್ತ ಲೋಕಗಳು ನೋಡುತ್ತಿರಲು ಶ್ರೀಹರಿಯಲ್ಲಿ ಐಕ್ಯವನ್ನು ಪಡೆಯಿತು.''

೧೩ ನೇ ಅಧ್ಯಾಯ.

ವೃತ್ರಸಂಹಾರದಿಂದ ಪ್ರಾಪ್ತವಾದ ಬ್ರಹ್ಮಹತ್ಯಾಭಯದಿಂದ ಅದೃಶ್ಯನಾದ ಇಂದ್ರನನ್ನು ಶ್ರೀಹರಿಯು ರಕ್ಷಿಸಿದ್ದು.

ಶುಕಮುನಿಯು ''ಎಲೈ ಪರೀಕ್ಷಿದ್ರಾಯನೆ, ಆ ಬಳಿಕ ವೃತ್ರನು ಇಂದ್ರನಿಂದ ಸಂಹರಿಸಲ್ಪಡಲು ಸಮಸ್ತ ಲೋಕಪಾಲಕರೊಡನೆ ಕೂಡಿರುವ ಸಮಸ್ತ ಲೋಕಗಳು ಆಕ್ಷಣದಲ್ಲೇ ಸಮಸ್ತ ಸಂತಾಪವನ್ನು ಬಿಟ್ಟು ಪರಮಾನಂದವನ್ನೈದಿದವು ; ಬ್ರಹ್ಮ ರುದ್ರಾದಿ ದೇವತೆಗಳು ದೇವರ್ಷಿಗಳು ಪಿತೃದೇವತೆಗಳು ದೈತ್ಯರು ಗಂಧರ್ವಾದಿಗಳು ಸಮಸ್ತ ಭೂತಗಳು ಸಹ ಸುಖಯುಕ್ತನಲ್ಲದಿರುವ ಇಂದ್ರನನ್ನು ಕೇಳದೆ ತಮಗೆ ತಾವೇ ತಮ್ಮ ತಮ್ಮ ಸ್ಥಾನಗಳನ್ನು ಕುರಿತೈದಿದರು'' ಎಂದು ನುಡಿದನು.

ಆ ವಚನವನ್ನು ಕೇಳಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು ''ಎಲೈ ಶುಕಮುನಿಯೆ, ಇಂದ್ರನಿಗೆ ವ್ಯಸನವುಂಟಾಗುವದಕ್ಕೆ ಕಾರಣವನ್ನು ನಾನು ಕೇಳಲಿಚ್ಛೈಸುತಲಿಧ್ದೇನೆ ; ಯಾವ ಇಂದ್ರನಿಂದ ಸಮಸ್ತ ದೇವತೆಗಳೂ ಸುಖಯುಕ್ತರಾದರೋ ಅಂಥಾ ಇಂದ್ರನಿಗೆ ಎಂತು ದುಃಖವುಂಟಾಯಿತು ?'' ಎಂದು ಪ್ರಶ್ನೆಗೈದನು.

ಶುಕಮುನಿಯು '' ಎಲೈ ಪರೀಕ್ಷಿದ್ರಾಯನೆ, ಮೊದಲು ವೃತ್ರನ ಪರಾಕ್ರಮದಿಂದ ಅತಿ ಭಯಯುಕ್ತರಾಗಿರುವ ಸಮಸ್ತ ದೇವತೆಗಳು ಋಷಿಗಳೊಡನೆ ಕೂಡಿ ವೃತ್ರನನ್ನು ಸಂಹಾರಗೈಯಲೋಸುಗ ಇಂದ್ರನನ್ನು ಪ್ರಾರ್ಥಿಸಿ

ಇಂದ್ರನು ಬ್ರಹ್ಮಹತ್ಯೆಯ ದೆಶೆಯಿಂದ ಭಯಪಟ್ಟು ವೃತ್ರನನ್ನು ಸಂಹರಿಸಲು ಅಂಗೀಕರಿಸದೆ ದೇವತೆಗಳನ್ನು ಕುರಿತು 'ಎಲೈ ದೇವತೆಗಳಿರಾ, ವಿಶ್ವರೂಪನ ಸಂಹಾರದಿಂದುತ್ಪನ್ನವಾದ ಪಾಪವು ಸ್ತ್ರೀ ಭೂಮಿ ಜಲ ವೃಕ್ಷಗಳ ಅನುಗ್ರಹದಿಂದ ವಿಭಾಗಂಗೈದು ಪರಿಗ್ರಹಿಸಲ್ಪಟ್ಟಿತು; ಈಗ ಪುನಹ ವೃತ್ರವಧದಿಂದ ಜನಿಸುವ ಬ್ರಹ್ಮಹತ್ಯೆಯನ್ನು ಎಲ್ಲಿ ಕಳೆಯಲಿ' ಎಂಬ ಇಂದ್ರನ ವಾಕ್ಯವನ್ನು ಕೇಳಿ ದೇವತೆಗಳು 'ಎಲೈ ಇಂದ್ರನೆ, ನಿನಗೆ ಶುಭವುಂಟಾಗಲಿ; ನಿನ್ನಿಂದ ಬ್ರಹ್ಮಹತ್ಯಾನಿವರ್ತಕವಾದ ಅಶ್ವಮೇಧವೆಂಬ ಮಹಾ ಯಾಗವನ್ನು ನಾವು ಗೈಸುವವರಾಗುತ್ತೇವೆ; ನೀನು ಆ ಪಾಪದ ದೆಶೆಯಿಂದ ಭಯಪಡಬೇಡ; ಅಶ್ವಮೇಧವೆಂಬ ಮಹಾಯಜ್ಞದಿಂದ ಪರಮಾತ್ಮನಾದ ಈಶ್ವರನಾದ ಪರಮಪುರುಷನಾದ ಶ್ರೀ ನಾರಾಯಣದೇವನನ್ನು ಸಂತೋಷಪಡಿಸಿದರೆ ಸಮಸ್ತ ಲೋಕಗಳ ಸಂಹಾರದಿಂದ ಪುಟ್ಟಿದ ಪಾಪದದೆಶೆಯಿಂದ ಮುಕ್ತನಾಗುತ್ತೀಯೆ; ಹೀಗಿರುವಲ್ಲಿ ಈ ವೃತ್ರಸಂಹಾರದಿಂದ ಪುಟ್ಟಿದ ಪಾಪದದೆಶೆಯಿಂದ ಮುಕ್ತನಾಗುವೆಯೆಂದು ಹೇಳತಕ್ಕದ್ದೇನು; ಹ್ಯಾಗೆಂದರೆ: ಬ್ರಹ್ಮಹತ್ಯೆಯನ್ನು ಮಾಡುವವನು ಪಿತೃಘಾತಕನು ಮಾತೃಘಾತಕನು ಗುರುಸಂಹಾರಕನು ಶುನಕಮಾಂಸವನ್ನು ಭಕ್ಷಿಸುವವನು ಅನೇಕ ಪಾಪಯುಕ್ತನಾದವನು ಪುಲ್ಕಸನು ಇಂಥಾ ಮಹಾ ಪಾತಕಿಗಳಾದರೂ ಶ್ರೀಹರಿಯ ನಾಮೋಚ್ಚಾರಣಮಾತ್ರದಿಂದ ಪರಿಶುದ್ಧರಾಗುವರು! ಎಲೈ ಇಂದ್ರನೆ, ನಮ್ಮಿಂದ ವಿಧ್ಯುಕ್ತವಾಗಿ ಮಾಡಲ್ಪಡುವ ಅಶ್ವಮೇಧವೆಂಬ ಮಹಾ ಯಜ್ಞದಿಂದ ನೀನು ಶ್ರದ್ಧಾಯುಕ್ತನಾಗಿ ಶ್ರೀ ನಾರಾಯಣನನ್ನು ಪೂಜಿಸಿದವನಾಗಿ ಬ್ರಹ್ಮದೇವನೊಡನೆ ಕೂಡಿರುವ ಚರಾಚರಾತ್ಮಕವಾದ ಈ ಪ್ರಪಂಚವನ್ನು ಸಂಹರಿಸಿದವನಾದಾಗ್ಯೂ ಅದರಿಂದ ಪಾಪಲೇಶವು ನಿನಗುಂಟಾಗಲಾರದು; ಹೀಗಿರುವಲ್ಲಿ ಈ ವೃತ್ರನ ಸಂಹಾರದಿಂದ ಪುಟ್ಟಿದ ಪಾಪವು ನಿನಿಗೆ ಉಂಟಾಗಲಾರದು; ಎಂದು ಈರೀತಿ ಋಷಿಗಳಿಂದ ಪ್ರೇರಿಸಲ್ಪಟ್ಟವನಾಗಿ ಇಂದ್ರನು ವೃತ್ರನನ್ನು ಸಂಹರಿಸಿದನು; ಅನಂತರದಲ್ಲಿ ವೃತ್ರನ ಸಂಹಾರದಿಂದ ಪುಟ್ಟಿದ ಬ್ರಹ್ಮಹತ್ಯೆಯು ಆಕ್ಷಣದಲ್ಲೇ ಇಂದ್ರನನ್ನೈದಿತು; ಈರೀತಿ ದೇವತೆಗಳಿಂದ ಗೈಸಲ್ಪಟ್ಟ ಬ್ರಹ್ಮಹತ್ಯೆಯಿಂದ ಇಂದ್ರನೊಬ್ಬನೇ ಸಂತಾಪವನ್ನು ವಹಿಸಿದನೇ ಹೊರ್ತು ಮತ್ತೊಬ್ಬರು ವಹಿಸಲಿಲ್ಲ; ಈ ಇಂದ್ರನು ಸುಖಸ್ವಲ್ಪವನ್ನಾದರೂ ಹೊಂದಲಿಲ್ಲ; ಮತ್ತು ಲಜ್ಜಾಯುಕ್ತನಾಗಿ ಅಪರಾಧವನ್ನೈದಿದವನಾಗಿರುವ ಇಂದ್ರನನ್ನು ಧೈರ್ಯಾದಿ ಗುಣಗಳೂ ಸುಖಪಡಿಸಲಿಲ್ಲ; ಆಗ ಹಿಂದುಕಡೆಯಲ್ಲಿ ಅಟ್ಟಿಕೊಂಡು ಬರುವದಾಗಿ ಚಂಡಾಲಸ್ತ್ರೀಯಂತೆ ಅತಿ ಮಲಿನವಾದ ರೂಪವನ್ನು ಧರಿಸಿರುವದಾಗಿ ಜರೆಯಿಂದ ಕಂಪಿಸುತಲಿರುವ ಶರೀರವುಳ್ಳದ್ದಾಗಿ ಕ್ಷಯರೋಗದಿಂದ ವ್ಯಾಪಿಸಲ್ಪಟ್ಟದ್ದಾಗಿ ರಕ್ತಯುಕ್ತವಾದ ವಸ್ತ್ರವನ್ನುಟ್ಟಿರುವದಾಗಿ ನರೆಯಿಂದ ವ್ಯಾಪ್ತಗಳಾದ ಕೇಶಗಳನ್ನು ಹರಡಿಕೊಂಡು ಎಲೈ 'ನಿಲ್ಲು ನಿಲ್ಲು' ಎಂದು ನುಡಿಯುತ ಮತ್ಸ್ಯದಂತೆ ದುರ್ಗಂಧಯುಕ್ತವಾದ ವಾಯುವಿನ ಗಂಧದಿಂದ ಮಾರ್ಗವನ್ನು ಅತಿ ದುರ್ಗಂಧಯುಕ್ತವನ್ನಾಗಿ ಮಾಡುತಲಿರುವ ಆ ಬ್ರಹ್ಮಹತ್ಯೆಯನ್ನು ನೋಡಿ ಇಂದ್ರನು ಭಯದಿಂದ ಅಂತರಿಕ್ಷವನ್ನೂ ಸಕಲ ದಿಕ್ಕುಗಳನ್ನೂ ಹೊಕ್ಕಾಗ್ಯೂ ನಿರ್ವಾಹವಿಲ್ಲದೆ ಈಶಾನದಿಕ್ಕನ್ನೈದಿ ಶೀಘ್ರದಿಂದ ಅಲ್ಲಿರುವ ಮಾನಸಸರಸ್ಸನ್ನು ಪ್ರವೇಶಿಸಿದನು; ಆಗ ಇಂದ್ರನು ಆ ಸರೋವರದಲ್ಲಿ ವಾಸಂಗೈಯುತ ಅಗ್ನಿಯೇ ದೂತನಾಗುಳ್ಳವನಾದಕಾರಣ ತನಿಗೆ ಹವಿರ್ಭಾಗಗಳನ್ನು ಸಮರ್ಪಿಸಲೋಸುಗ ತನ್ನ ದೂತನಾದ ಅಗ್ನಿಗೆ ಆ ಜಲದಲ್ಲಿ ಪ್ರವೇಶವಿಲ್ಲದಿರೋಣದರಿಂದ ಭೋಗರಹಿತನಾಗಿ ಬ್ರಹ್ಮಹತ್ಯೆಯದೆಶೆಯಿಂದ ತನಿಗೆ ಎಂದಿಗೆ ಮೋಕ್ಷವುಂಟಾಗುವದೆಂದು ಚಿಂತಿಸುತ ಜಲಗಳಿಂದ ಕಾಣಲ್ಪಡದೆ ತಾವರೇ ದಂಟಿನ ಗರ್ಭದಲ್ಲಿರುವ ಸೂಕ್ಷ್ಮತಂತುಗಳಲ್ಲಿ ಸಾವಿರವರ್ಷಗಳು ಸೂಕ್ಷ್ಮರೂಪವಾಗಿ ವಾಸಂಗೈದನು; ಈರೀತಿ ಮಾನಸಸರೋವರದಲ್ಲಿ ಇಂದ್ರನು ಅದೃಶ್ಯನಾಗಿ ವಾಸಂಗೈಯುತ್ತಿರಲು ಅಷ್ಟರಲ್ಲೇ ನಹುಷರಾಯನು ವಿದ್ಯಾ ತಪೋ ಯೋಗಶಕ್ತಿಗಳಿಂದ ಸ್ವರ್ಗವನ್ನಾಳುವ ಸಾಮರ್ಥ್ಯವುಳ್ಳವನಾಗಿ ಸ್ವರ್ಗರಾಜ್ಯಾಧಿಪತ್ಯವನ್ನೈದಿ ಸಂಪತ್ತಿನಿಂದಲೂ ಪ್ರಭುತ್ವದಿಂದಲೂ ಉಂಟಾದ ಮದದಿಂದ ಮೂಢವಾದ ಬುದ್ಧಿಯುಳ್ಳವನಾಗಿ ಶಚೀದೇವಿಯಿಂದ ಉಪಾಯದಿಂದ ಅಜಗರಭಾವವನ್ನೈದಿಸಲ್ಪಟ್ಟನು; ಅದೆಂತೆಂದರೆ: ಸ್ವರ್ಗವನ್ನಾಳುತ್ತಿರುವ ನಹುಷನು ಒಂದು ಸಮಯದಲ್ಲಿ ಶಚೀದೇವಿಯನ್ನು ಕುರಿತು—ಎಲೈ ಶಚೀದೇವಿಯೆ, ನಾನೇ ಇಂದ್ರನು; ನನ್ನನ್ನು ಹೊಂದಿದವಳಾಗು—ಎಂದು ನುಡಿದನು; ಶಚೀದೇವಿಯು ನಹುಷನು ತನ್ನನ್ನು ಅಪೇಕ್ಷಿಸುವ ವೃತ್ತಾಂ

ತವನ್ನು ಬೃಹಸ್ಪತಿಗೆ ತಿಳಿಸಲು ಆ ಬೃಹಸ್ಪತಿಯು ಶಚೀದೇವಿಯನ್ನು ಕುರಿತು—ಎಲೈ ಶಚಿಯೆ, ನೀನು ನಹುಷನನ್ನು ಕುರಿತು ಎಲೈ ಅರಸೆ, ಬ್ರಾಹ್ಮಣರಿಂದ ವಹಿಸಲ್ಪಟ್ಟ ಪಲ್ಲಕ್ಕಿಯಲ್ಲಿ ಕುಳಿತು ನೀನು ಬರುವನಾದರೆ ಆಗ ನಿನ್ನನ್ನು ಹೊಂದುವಳಾಗುತ್ತೇನೆಯೇ ಹೊರತು ಮತ್ತೊಂದುಪ್ರಕಾರದಿಂದ ಹೊಂದುವಳಾಗುವದಿಲ್ಲವೆಂದು ನುಡಿ; ಹೀಗಾದಲ್ಲಿ ಆವನು ಬ್ರಾಹ್ಮಣಶಾಪದಿಂದ ಪುನಹಾ ಭೂಮಿಯಲ್ಲಿ ಬೀಳುವನೆಂದು ನಿರೂಪಿಸಲು ಆಗ ಅದೇರೀತಿ ಶಚಿಯಿಂದ ಪ್ರೇರಿಸಲ್ಪಟ್ಟವನಾಗಿ ನಹುಷನು ಅಗಸ್ತ್ಯಾದಿ ಋಷಿಗಳಿಂದ ತನ್ನ ಪಲ್ಲಕ್ಕಿಯನ್ನು ಹೊರಿಸಿಕೊಂಡು ಶೀಘ್ರದಿಂದ ನಡೆಯುವನಾಗು-ನಡೆಯುವನಾಗು—ಎಂದು ಅಗಸ್ತ್ಯಮುನಿಯನ್ನು ಪಾದದಿಂದ ಸ್ಪರ್ಶಿಸಿದನು; ಆಗ ಕೋಪಯುಕ್ತನಾದ ಅಗಸ್ತ್ಯಮುನಿಯಿಂದ ನೀನು ಸರ್ಪನಾಗೆಂದು ಶಪಿಸಲ್ಪಟ್ಟವನಾಗಿ ನಹುಷನು ಅಜಗರಭಾವವನ್ನೈದಿದನೆಂಬ ಅರ್ಥವು ಪುರಾಣಪ್ರಸಿದ್ಧವಾಗಿರುವದು; ಅನಂತರದಲ್ಲಿ ಇಂದ್ರನು ಬ್ರಾಹ್ಮಣರ ವಚನದಿಂದ ಕರೆಯಲ್ಪಟ್ಟವನಾಗಿ ಸತ್ಯಕ್ಕೆ ಪಾಲಕನಾದ ಶ್ರೀಹರಿಯ ಧ್ಯಾನದಿಂದ ಪರಿಹರಿಸಲ್ಪಟ್ಟ ಪಾಪವುಳ್ಳವನಾಗಿ ಆ ಮಾನಸಸರಸ್ಸನ್ನು ಬಿಟ್ಟು ಸ್ವರ್ಗವನ್ನೈದಿದನು; ಆ ಬ್ರಹ್ಮಹತ್ಯವು ನಷ್ಟವಾದ ಸಾಮರ್ಥ್ಯವುಳ್ಳದ್ದಾಗಿ ಈಶಾನದಿಕ್ಕಿಗೆ ಅಭಿಮಾನಿಯಾದ ಶ್ರೀ ರುದ್ರನಿಂದ ಮಾನಸಸರಸ್ಸಿನಲ್ಲಿರುವ ಪದ್ಮಗಳಲ್ಲಿ ವಾಸಂಗೈಯುವ ಲಕ್ಷ್ಮೀದೇವಿಯಿಂದ ರಕ್ಷಿಸಲ್ಪಡುತಲಿರುವ ಇಂದ್ರನನ್ನು ಬಾಧಿಸಲು ಸಮರ್ಥವಾಗಲಿಲ್ಲ! ಎಲೈ ಅರಸೆ ಕೇಳು: ಆ ಬಳಿಕ ಬ್ರಹ್ಮಋಷಿಗಳು ಪುನಹ ಇಂದ್ರನನ್ನೈದಿ ಶ್ರೀಹರಿ ಪೂಜೆಯುಳ್ಳ ಅಶ್ವಮೇಧವೆಂಬ ಮಹಾ ಯಜ್ಞವನ್ನು ತೊಡಗಿ ಆ ಯಜ್ಞದಲ್ಲಿ ವಿಧ್ಯುಕ್ತನಾಗಿ ಇಂದ್ರನನ್ನು ದೀಕ್ಷಾಯುಕ್ತನಂಗೈದರು; ಆಗ ಬ್ರಹ್ಮಸ್ವರೂಪಜ್ಞರಾದ ಋಷಿಗಳಿಂದ ಅನುಷ್ಠಾನಂಗೈಯಲ್ಪಟ್ಟ ಅಶ್ವಮೇಧದಲ್ಲಿ ಇಂದ್ರನಿಂದ ಸಕಲ ದೇವತಾತ್ಮಕವಾದ ಮೂರ್ತಿಯುಳ್ಳ ಶ್ರೀಹರಿಯು ಪೂಜಿಸಲ್ಪಟ್ಟವನಾಗಿ ವೃತ್ರವಧೆಯಿಂದ ಜನಿಸಿದ ಅಧಿಕವಾದ ಪಾತಕವನ್ನು ಸೂರ್ಯನು ಹಿಮವನ್ನು ಪರಿಹರಿಸುವಂತೆ ನಿಶ್ಶೇಷವಾಗಿ ಪರಿಹರಿಸಿದನು; ಅನಂತರದಲ್ಲಿ ಮಹಾತ್ಮನಾದ ಇಂದ್ರನು ಶಾಸ್ತ್ರೋಕ್ತವಾಗಿ ಮರೀಚಿಮೊದಲಾದ ಋಷಿಗಳಿಂದ ಅನುಷ್ಠಾನಂಗೈಸಲ್ಪಟ್ಟ ಅಶ್ವಮೇಧದಿಂದ ಸರ್ವಯಜ್ಞಾಧಿಪತಿಯಾದ ಪುರಾಣಪುರುಷನಾದ ಶ್ರೀಹರಿಯನ್ನು ಪೂಜಿಸಿ ಪಾಪರಹಿತನಾಗಿ ಸುಖದಿಂದ ಸ್ವರ್ಗವನ್ನಾಳಿದನು! ಎಲೈ ಅರಸೆ, ಸಕಲ ಪಾಪಗಳನ್ನು ಪರಿಹರಿಸುವದಾಗಿ ಶ್ರೀಹರಿಸಂಕೀರ್ತನೆಯುಳ್ಳದ್ದಾಗಿ ಭಕ್ತಿಗೆ ವೃದ್ಧಿಕರವಾಗಿ ಪರಮಭಾಗವತರ ವರ್ಣನೆಯುಳ್ಳದ್ದಾಗಿ ಇಂದ್ರನ ಪಾಪವಿಮೋಚನವೂ ಇಂದ್ರನ ವಿಜಯವೂ ಉಳ್ಳದ್ದಾಗಿ ಮಹತ್ತಾದ ಇಂದ್ರಿಯ ಶಕ್ತಿಯನ್ನುಂಟುಮಾಡುವದಾಗಿ ಧನಕರವಾಗಿ ಕೀರ್ತಿಕರವಾಗಿ ಪಾಪಹರವಾಗಿ ಶತ್ರುಜಯಕರವಾಗಿ ಶುಭಕರವಾಗಿ ಆಯುರ್ವೃದ್ಧಿಕರವಾಗಿರುವ ಈ ಉಪಾಖ್ಯಾನವನ್ನು ಪಂಡಿತರು ನಿರಂತರದಲ್ಲಿಯೂ ಪಠನಂಗೈದು ವಿಶೇಷವಾಗಿ ಪ್ರತಿ ಪರ್ವಕಾಲದಲ್ಲಿಯೂ ಶ್ರವಣಂಗೈವರಾದರೆ ಸಕಲ ಪಾಪಗಳಿಂದಲೂ ವಿಮುಕ್ತರಾಗಿ ಶ್ರೀಹರಿಯ ಸಾಯುಜ್ಯವನ್ನೈದುವರು" ಎಂದು ನುಡಿದನು.

---

೧೪ ನೇ ಅಧ್ಯಾಯ.

ಚಿತ್ರಕೇತೂಪಾಖ್ಯಾನ.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ರಜಸ್ತಮೋಗುಣಗಳೇ ಸ್ವಭಾವವಾಗುಳ್ಳ ಪಾಪಿಯಾದ ವೃತ್ರನಿಗೆ ಶ್ರೀ ನಾರಾಯಣನಲ್ಲಿ ಎಂತು ದೃಢವಾದ ಬುದ್ಧಿಯುಂಟಾಯಿತು; ಶುದ್ಧವಾದ ಸ್ವಗುಣಗಳುಳ್ಳ ದೇವತೆಗಳಿಗೂ ನಿರ್ಮಲವಾದ ಚಿತ್ತವುಳ್ಳ ಋಷಿಗಳಿಗೂ ಶ್ರೀಹರಿಯ ಪಾದಾರವಿಂದದಲ್ಲಿ ಭಕ್ತಿಯು ಬಹುತರವಾಗಿ ಪುಟ್ಟುವದಿಲ್ಲ; ಭೂಮಿಯಲ್ಲಿರುವ ಪರಮಾಣುಗಳಂತೆ ಅಪರಮಿತಗಳಾದ ಪ್ರಾಣಿಗಳು ಈ ಲೋಕದಲ್ಲಿರುವವು; ಆದರೂ ಸಂಖ್ಯೆಯಿಲ್ಲದಿರುವ ಆ ಪ್ರಾಣಿಗಳ ಮಧ್ಯದಲ್ಲಿ ಮನುಷ್ಯಾದಿಗಳಾದ ಕೆಲವು ಪ್ರಾಣಿಗಳುಮಾತ್ರವೇ ಧರ್ಮವನ್ನಾಚರಿಸುತಲಿರ್ಧಾರೆ; ಧರ್ಮನಿರತರಾದ ಆ ಮನುಷ್ಯಾದಿಗಳಲ್ಲಿಯೂ ಬಹುತರವಾಗಿ ಕೆಲವರೇ ಮೋಕ್ಷಾರ್ಥಿಗಳಾಗಿಹರು; ಮೋಕ್ಷಾರ್ಥಿಗಳಾದ ಅನೇಕಸಹಸ್ರ ಪುರುಷರಲ್ಲಿ ಬಬ್ಬನೇ ಗೃಹಾದಿ

ಸಂಗದಿಂದ ಮುಕ್ತನಾಗಿ ತತ್ವವನ್ನು ತಿಳಿಯುತಲಿಧಾನೆ; ತತ್ವಜ್ಞರಾದ ಅನೇಕಕೋಟಿ ಸಂಖ್ಯೆಯುಳ್ಳ ಮುಕ್ತರಲ್ಲಿ ಉಪಶಾಂತಚಿತ್ತನಾಗಿ ಶ್ರೀನಾರಾಯಣನಲ್ಲಿ ಪರಮ ಭಕ್ತಿಯುಳ್ಳವನಾಗಿರುವ ಪುರುಷನು ಅತ್ಯಂತ ದುರ್ಲಭನಾಗಿಹನು! ಎಲೈ ಶುಕಮುನಿಯೆ, ಹೀಗಿರುವಲ್ಲಿ ಪಾಪಿಯಾದ ಸಮಸ್ತ ಲೋಕಗಳನ್ನು ಸಂತಾಪಪಡಿಸುವ ಆ ವೃತ್ರಾಸುರನು ಮಹತ್ತಾದ ಯುದ್ಧದಲ್ಲಿ ಎಂತು ಶ್ರೀ ವಾಸುದೇವನಲ್ಲಿ ದೃಢವಾದ ಬುದ್ಧಿಯುಳ್ಳವನಾದನು; ವೃತ್ರನು ಎಂತು ಯುದ್ಧದಲ್ಲಿ ತನ್ನ ಪರಾಕ್ರಮದಿಂದ ಇಂದ್ರನನ್ನು ಸಂತೋಷಪಡಿಸಿದನು; ಅಂಥಾ ವೀರನಾದ ವೃತ್ರನಿಗೆ ಭಗವಂತನಲ್ಲಿ ದೃಢವಾದ ಬುದ್ಧಿಯುಂಟಾಯಿತೆಂಬ ಈ ಅರ್ಥದಲ್ಲಿ ನನಿಗೆ ಅತ್ಯಂತವಾಗಿ ಸಂಶಯವುಂಟಾಗಿಧೆ; ಅದು ಕಾರಣ ವಿಸ್ತರದಿಂದ ಆ ವೃತ್ತಾಂತವನ್ನು ಕೇಳಲುತ್ಸಾಹವುಳ್ಳ ನನಿಗೆ ನೀನು ವಿಸ್ತರದಿಂದ ನಿರೂಪಿಸು'' ಎಂದು ಪ್ರಶ್ನೆಗೈದನು.

ಶ್ರದ್ಧಾಯುಕ್ತನಾದ ಪರೀಕ್ಷಿದ್ರಾಯನ ಆ ವಚನವನ್ನು ಕೇಳಿ ಸರ್ವಜ್ಞನಾದ ಶುಕಮುನಿಯು ಸಂತೋಷಪಟ್ಟು "ಎಲೈ ಪರೀಕ್ಷಿದ್ರಾಯನೆ, ಪೂರ್ವದಲ್ಲಿ ನಾರದಮುನಿಯುದೆಸೆಯಿಂದಲೂ ವ್ಯಾಸಮುನಿಯುದೆಶೆಯಿಂದಲೂ ದೇವಲನೆಂಬ ಮುನಿಯ ದೆಶೆಯಿಂದಲೂ ಕೇಳಲ್ಪಟ್ಟ ಈ ವಕ್ಷ್ಯಮಾಣವಾದ ಇತಿಹಾಸವನ್ನು ನೀನು ಏಕಾಗ್ರಚಿತ್ತನಾಗಿ ಸಮಗ್ರವಾಗಿ ಕೇಳು: ಪೂರ್ವದಲ್ಲಿ ಶೂರಸೇನಗಳೆಂಬ ದೇಶಗಳಲ್ಲಿ ಯಾವ ಅರಸಿಗೆ ಭೂಮಿಯು ಸಮಸ್ತ ಇಷ್ಟಾರ್ಥಗಳನ್ನು ಕೊಡುತಲಿತ್ತೋ ಅಂಥಾ ಧರ್ಮಾತ್ಮನಾದ ಚಿತ್ರಕೇತುವೆಂಬ ನಾಮದಿಂದ ಪ್ರಖ್ಯಾತನಾದ ಒಬ್ಬ ಚಕ್ರವರ್ತಿ ಇದ್ದನು; ಆ ರಾಯನಿಗೆ ಕೋಟಿಮಂದಿ ಪತ್ನಿಯರು ಇದ್ದರು; ಆ ಅರಸು ಸೌಂದರ್ಯವೂ ದಾತೃತ್ವವೂ ಯೌವನವೂ; ಸತ್ಕುಲಜನ್ಮವೂ ವಿದ್ಯೆಯೂ ಪ್ರಭುತ್ವ ಶಕ್ತಿಯೂ ಸಂಪತ್ತೂ ಇವು ಮೊದಲಾದ ಸಮಸ್ತ ಗುಣಗಳಿಂದ ಪರಿಪೂರ್ಣನಾಗಿ ಪುತ್ರೋತ್ಪಾದನದಲ್ಲಿ ಸಮರ್ಥನಾದರೂ ಕೋಟಿಮಂದಿ ಪತ್ನೀರಲ್ಲಿ ಒಬ್ಬಳಲ್ಲಾದರೂ ಸಂತಾನವನ್ನು ಪಡೆಯಲಿಲ್ಲವಾದಕಾರಣ ಆ ಅರಸಿಗೆ ಮಹತ್ತಾದ ಚಿಂತೆಯುಂಟಾಯಿತು; ಆದ್ದರಿಂದ ಚಕ್ರವರ್ತಿಯಾದ ಆ ಚಿತ್ರಕೇತುವಿಗೆ ಸಮಸ್ತ ಸಂಪತ್ತುಗಳೂ ಅತಿ ಸೌಂದರ್ಯಶಾಲಿನಿಯರಾದ ಆ ಸ್ತ್ರೀಯರೂ ಅಖಂಡವಾದ ಈ ಭೂಮಿಯೂ ಸಂತೋಷಕಾರಣಗಳಾಗದೆ ಚಿಂತಿಸುತ್ತಿರಲು ಒಂದು ಸಮಯದಲ್ಲಿ ಸರ್ವಜ್ಞನಾದ ಅಂಗಿರಸ್ಸೆಂಬ ಮಹಾಮುನಿಯು ಮೂರುಲೋಕಗಳನ್ನು ಸಂಚರಿಸುತ ದೈವಯೋಗದಿಂದ ಆ ಚಿತ್ರಕೇತುರಾಯನ ಗೃಹವನ್ನೈದಿದನು; ಆಗ ಅರಸು ಪ್ರತ್ಯುತ್ಥಾನ ಅರ್ಘ್ಯಾದಿ ಪೂಜೆಗಳಿಂದ ಆ ಋಷಿಯನ್ನು ವಿಧಿಯಿಂದ ಪೂಜಿಸಿ ಅನಂತರದಲ್ಲಿ ಪರಿಗ್ರಹಿಸಲ್ಪಟ್ಟ ಆತಿಥ್ಯವುಳ್ಳವನಾಗಿ ಪೀಠವಲ್ಲಿ ಸುಖದಿಂದ ಕುಳಿತಿರುವ ಆ ಮುನಿಯ ಸಮೀಪದಲ್ಲಿ ಭಕ್ತಿಯಿಂದ ಏಕಾಗ್ರಚಿತ್ತನಾಗಿ ಕುಳಿತಿರಲು ಆ ಅಂಗಿರಸ್ಸು ವಿನಯದಿಂದ ನಮ್ರನಾಗಿ ಭೂಮಿಯಲ್ಲಿ ಕುಳಿತಿರುವ ಚಿತ್ರಕೇತುವನ್ನು ಸಮಾಧಾನಂಗೈದು ಸಲ್ಲಾಪವನ್ನು ಮಾಡಿ 'ಎಲೈ ಚಿತ್ರಕೇತುರಾಯನೆ, ನಿನಗೆ ಕ್ಷೇಮವೆ? ನಿನ್ನ ಗುರು ಮೊದಲಾದ ಸಪ್ತ ರಾಜ್ಯಾಂಗಗಳಿಗೆ ಶುಭವೆ? ಯಾವರೀತಿಯಿಂದ ಜೀವನು ಮಹತ್ತತ್ವ ಮೊದಲಾದ ಸಮಸ್ತ ಸಪ್ತಪ್ರಕೃತಿಗಳಿಂದ ನಿರಂತರವು ರಕ್ಷಿಸಲ್ಪಡುವನೋ ಅದೇರೀತಿ ಅರಸು ಗುರು ಮಂತ್ರಿ ದೇಶ ಕೋಶ ದಂಡ ಮಿತ್ರರೆಂಬ ಈ ಏಳು ರಾಜ್ಯಾಂಗಗಳಿಂದ ನಿರಂತರವು ರಕ್ಷಿಸಲ್ಪಡುವನಾಗಿ ತನ್ನನ್ನು ಆ ಗುರುಮೊದಲಾದವರ ಅಧೀನಂಗೈದು ರಾಜ್ಯಸೌಖ್ಯವನ್ನು ಪಡೆಯುವನು; ಅದೇರೀತಿ ಗುರು ಮೊದಲಾದವರು ಆ ಅರಸಿನಿಂದ ತಮ್ಮಲ್ಲಿರಿಸಲ್ಪಟ್ಟ ರಾಜ್ಯಭಾರವುಳ್ಳವರಾಗಿ ಧನಗಳಿಂದ ಪುಷ್ಟರಾಗಿ ಸೌಖ್ಯವನ್ನು ಪಡೆಯುವರು; ನಿನ್ನ ಪತ್ನೀರು ಪ್ರಜೆಗಳು ವರ್ತಕರು ಮಂತ್ರಿಗಳು ಪುರವಾಸಿಗಳು ಆಯಾ ದೇಶಾಧಿಕಾರಿಗಳಾದ ಅರಸುಗಳು ಭೃತ್ಯರು ಸಾಮಾಜಿಕರು ನಿನ್ನಾಜ್ಞಾನುಸಾರಿಗಳಾಗಿಧಾರೆಯು? ಯಾವ ಅರಸಿಗೆ ಮನಸ್ಸು ಸ್ವಾಧೀನವಾಗಿರುವದೋ ಆ ಅರಸಿಗೆ ಸಮಸ್ತರೂ ಸ್ವಾಧೀನರಾಗಿರುವರು; ಅಂಥಾ ಅರಸಿಗೆ ತಮ್ಮ ಪಾಲಕರೊಡನೆ ಕೂಡಿರುವ ಸಮಸ್ತ ಲೋಕಗಳು ಆಲಶ್ಯವನ್ನು ಬಿಟ್ಟು ಕಾಣಿಕೆಗಳನ್ನು ಸಮರ್ಪಿಸುವರು! ಎಲೈ ಅರಸೆ, ನೀನು ಮನಸ್ಸಿನಿಂದ ಸಂತೋಷಪಡದವನಾಗಿದ್ದಿ; ಈರೀತಿ ಸಂತೋಷವಿಲ್ಲದಿರುವದಕ್ಕೆ ನೀನೇ ಕಾರಣವೋ ಅಲ್ಲದೆ ಅನ್ಯರು ಕಾರಣವೊ; ಯಾವಕಾರಣ ನಾನು

ನಿನ್ನ ಮುಖವನ್ನು ಚಿಂತೆಯಿಂದ ವಿವರ್ಣವಾಗಿ ನೋಡುತಲಿದ್ದೇನೆಯೋ ಆದುಕಾರಣ ನಿನ್ನ ಇಷ್ಟಾರ್ಥವು ಸೇರಿಹೋಗಿರುವದಾಗಿ ತಿಳಿಯುತಲಿದ್ದೇನೆ' ಎಂದು ಸರ್ವಜ್ಞನಾದ ಅಂಗಿರಸ್ಸಿನಿಂದ ವಿಕಲ್ಪಿಸಿ ಪ್ರಶ್ನೆಗೈಯಲ್ಪಟ್ಟವನಾಗಿ ಸಂತಾನವನ್ನು ಪಡೆಯಲಿಚ್ಛೆಯುಳ್ಳ ಆ ಚಿತ್ರಕೇತುವು ವಿನಯದಿಂದ ನಮ್ರನಾಗಿ ಆ ಮುನಿಯನ್ನು ಕುರಿತು 'ಎಲೈ ಮುನಿಯೆ, ಪಾಪರಹಿತರಾದ ನಿಮ್ಮಂಥಾ ಮಹಾ ಯೋಗಿಗಳಿಗೆ ಸಮಸ್ತ ಪ್ರಾಣಿಗಳಲ್ಲಿ ಒಳಗೆ ಹೋಗಿರುವ ಯಾವ ಅರ್ಥವು ತಪೋ ಜ್ಞಾನ ಸಮಾಧಿಗಳಿಂದ ತಿಳಿಯಲ್ಪಡದಿರುವದು; ಸಮಸ್ತವೂ ನಿಮಗೆ ವಿದಿತವಾಗಿಯೇ ಇದೆ; ಆದಾಗ್ಯೂ ನಿಮ್ಮ ಆಜ್ಞೆಯಿಂದ ಪ್ರೇರಿಸಲ್ಪಟ್ಟವನಾಗಿ ಪ್ರಶ್ನೆಗೈಯ್ಯುತಲಿರುವ ಸರ್ವಜ್ಞರಾದ ನಿಮಗೆ ನನ್ನ ಮನೋರಥವನ್ನು ತಿಳಿಸುವೆನು; ಕ್ಷುತ್ತಿನಿಂದಲೂ ಬಾಯಾರಿಕೆಯಿಂದಲೂ ಅನ್ನಪಾನಗಳನ್ನು ಅಪೇಕ್ಷಿಸುತಲಿರುವ ಪುರುಷನನ್ನು ಎಂತು ಗಂಧಪುಷ್ಪಾದಿಗಳು ಸಂತೋಷಪಡಿಸಲಾರವೋ ಅದೇರೀತಿ ಸಂತಾನರಹಿತನಾದ ನನ್ನನ್ನು ಇಂದ್ರಾದಿ ಲೋಕಪಾಲಕರಿಂದ ಪ್ರಾರ್ಥಿಸಲು ಯೋಗ್ಯಗಳಾದ ಈ ಸಮಸ್ತ ಭೂಲೋಕಾಧಿಪತ್ಯ ಸಂಪತ್ತುಗಳೂ ಸುಖಪಡಿಸಲಾರವು! ಎಲೈ ಸರ್ವಜ್ಞನಾದ ಮುನಿಯೆ, ಆದುಕಾರಣ ನೀನು ನಮ್ಮನ್ನು ರಕ್ಷಿಸುವ ತಂದೆ ತಾತ ಮುತ್ತಾತ ಮೊದಲಾದ ವೃದ್ಧರೊಡನೆ ನಾವು ಸಂತಾನವಿಲ್ಲದಿರೋಣದರಿಂದ ಪ್ರಾಪ್ತವಾಗುವ ದಾಟಲಶಕ್ಯವಾದ ನರಕವನ್ನು ಯಾವರೀತಿಯಿಂದ ದಾಟುವೆವೋ ಆರೀತಿ ನಮಗೆ ಶ್ರೇಯಸ್ಸನ್ನುಂಟುಮಾಡು' ಎಂದು ಚಿತ್ರಕೇತುವಿನಿಂದ ಪ್ರಾರ್ಥಿಸಲ್ಪಟ್ಟವನಾಗಿ ದಯಾಶೀಲನಾಗಿ ಬ್ರಹ್ಮಪುತ್ರನಾದ ಅಂಗಿರಸ್ಸು ಆ ಅರಸಿಗೆ ಸಂತಾನಾರ್ಥವಾಗಿ ಚರುವಿಶೇಷವನ್ನು ಪಾಕಂಗೈದು ಆ ಚರುವಿನಿಂದ ತ್ವಷ್ಟ್ರವೆಂಬ ದೇವತೆಯನ್ನು ಕುರಿತು ಯಾಗಂಗೈದನು; ಅನಂತರದಲ್ಲಿ ಆ ಮುನಿಯು ಆ ಅರಸಿನ ಪತ್ನೀರಲ್ಲಿ ಜ್ಯೇಷ್ಠಳಾದ ಕೃತದ್ಯುತಿಯೆಂಬ ಪಟ್ಟದರಾಣಿಗೆ ಸಂತಾನಾರ್ಥವಾಗಿ ಯಜ್ಞವಿಶೇಷವಾದ ಚರುವನ್ನಿತ್ತನು; ಆಗ ಆ ಮುನಿಯು ಚಿತ್ರಕೇತುವನ್ನು ಕುರಿತು 'ಎಲೈ ಅರಸೆ, ನಿನಗೆ ಸಂತೋಷವನ್ನೂ ದುಃಖವನ್ನೂ ಉಂಟುಮಾಡುವ ಒಬ್ಬ ಮಗನು ಜನಿಸುವನೆಂದು ಆಜ್ಞಾಪಿಸಿ ಬ್ರಹ್ಮಲೋಕವನ್ನೈದಿದನು; ಕೃತ್ತಿಕಾದೇವಿಯು ಅಗ್ನಿಯದೆಶೆಯಿಂದ ಎಂತು ಗರ್ಭದಲ್ಲಿ ಸ್ಕಂಧನೆಂಬ ಪುತ್ರನನ್ನು ಧರಿಸಿದಳೋ ಅದೇರೀತಿ ಆ ಯಜ್ಞವಿಶೇಷವಾದ ಚರುವಿನ ಭಕ್ಷಣದಿಂದ ಕೃತದ್ಯುತಿದೇವಿಯು ಚಿತ್ರಕೇತುವಿನ ದೆಶೆಯಿಂದ ಗರ್ಭದಲ್ಲಿ ಪುತ್ರನನ್ನು ಧರಿಸಿದಳು; ಶೂರಸೇನ ದೇಶಗಳಿಗೆ ಅಧಿಪತಿಯಾದ ಚಿತ್ರಕೇತುವಿನ ವೀರ್ಯವಿಶೇಷದಿಂದ ಉತ್ಪನ್ನವಾದ ಯಾವ ಕೃತದ್ಯುತಿದೇವಿಯ ಗರ್ಭವುಂಟೋ ಆ ಗರ್ಭವು ಪ್ರತಿದಿವಸದಲ್ಲಿಯೂ ಶುಕ್ಲಪಕ್ಷದಲ್ಲಿ ಚಂದ್ರನಂತೆ ಮೆಲ್ಲಮೆಲ್ಲಗೆ ವೃದ್ಧಿಹೊಂದಿತು; ಅನಂತರದಲ್ಲಿ ಪ್ರಸವಕಾಲವು ಪ್ರಾಪ್ತವಾಗುತ್ತಿರಲು ಕೃತದ್ಯುತಿದೇವಿಯ ಗರ್ಭದಲ್ಲಿ ಪುತ್ರನು ತನ್ನ ಜನ್ಮವನ್ನು ಶ್ರವಣಂಗೈಯ್ಯುವ ಶೂರಸೇನದೇಶಗಳಲ್ಲಿರುವ ಪ್ರಜೆಗಳಿಗೆ ಅತಿ ಸಂತೋಷವನ್ನುಂಟುಮಾಡುವವನಾಗಿ ಜನಿಸಿದನು; ಚಿತ್ರಕೇತುವು ಪುತ್ರಜನ್ಮವನ್ನು ಕೇಳಿ ಸಂತುಷ್ಟನಾಗಿ ಸ್ನಾನಂಗೈದು ಪರಿಶುದ್ಧನಾಗಿ ಸರ್ವಾಲಂಕಾರಭೂಷಿತನಾಗಿ ಬ್ರಾಹ್ಮಣರಿಂದ ಸ್ವಸ್ತಿವಾಚನಂಗೈಸಿ ಪುತ್ರನಿಗೆ ಜಾತಕರ್ಮವನ್ನು ಮಾಡಿಸಿ ಬ್ರಾಹ್ಮಣರಿಗೆ ಸುವರ್ಣವನ್ನೂ ರಜತವನ್ನೂ ದಿವ್ಯವಸ್ತ್ರಗಳನ್ನೂ ದಿವ್ಯಾಭರಣಗಳನ್ನೂ ಗ್ರಾಮಗಳನ್ನೂ ಅನೇಕ ಅಶ್ವಗಳನ್ನೂ ಗಜಗಳನ್ನೂ ಅರವತ್ತುಕೋಟಿ ಗೋವುಗಳನ್ನೂ ಇತ್ತನು; ಅತ್ಯುತ್ಸಾಹವಂತನಾದ ಆ ಅರಸು ಪುತ್ರನಿಗೆ ಧನ ಕೀರ್ತಿ ಆಯುಸ್ಸುಗಳನ್ನು ವೃದ್ಧಿಹೊಂದಿಸಲೋಸುಗ ಮೇಘರಾಜನಂತೆ ಮಿಗಿಲಾದ ಸಮಸ್ತ ಜನರಿಗೂ ಇಷ್ಟಾರ್ಥಗಳನ್ನು ಅತ್ಯಂತವಾಗಿ ವರ್ಷಿಸಿದನು; ಅನಂತರದಲ್ಲಿ ದರಿದ್ರನಿಗೆ ಅತಿ ಕಷ್ಟದಿಂದ ಪಡೆಯಲ್ಪಟ್ಟ ಧನದಲ್ಲಿ ಎಂತು ಆಸಕ್ತಿಯು ವೃದ್ಧಿಹೊಂದುವದೋ ಅದೇರೀತಿ ಚಿತ್ರಕೇತುವಿಗೆ ಅತಿ ಶ್ರಮದಿಂದ ಪಡೆಯಲ್ಪಟ್ಟ ಪುತ್ರನಲ್ಲಿ ದಿನದಿನದಲ್ಲಿ ಸ್ನೇಹವು ವೃದ್ಧಿಹೊಂದಿತು; ತಾಯಿಯಾದ ಕೃತದ್ಯುತಿದೇವಿಗೂ ಪುತ್ರನಲ್ಲಿ ಮೋಹಕಾರಣವಾದ ಸ್ನೇಹವು ವೃದ್ಧಿಹೊಂದಿತು; ಅವಳ ಸಪತ್ನೀರಿಗೆ ಪುತ್ರೇಚ್ಛೆ ಎಂಬ ಜ್ವರದಿಂದ ಸಂತಾಪವು ಹುಟ್ಟಿತು; ಪ್ರತಿದಿನದಲ್ಲಿಯೂ ಪುತ್ರನನ್ನು ಲಾಲಿಸುತಲಿರುವ ಚಿತ್ರಕೇತುವಿಗೆ ಪುತ್ರವತಿಯಾದ ಕೃತದ್ಯುತಿದೇವಿಯಲ್ಲಿ ಅಧಿಕವಾದ ಪ್ರೀತಿಯುಂಟಾಯಿತು; ಪುತ್ರರನ್ನು ಪಡೆಯದಿರುವ ಅನ್ಯರಾದ ಪತ್ನೀರಲ್ಲಿ ಪ್ರೀತಿಹುಟ್ಟಲಿಲ್ಲ; ಅನಂತರದಲ್ಲಿ ಕೃತದ್ಯುತಿಯ ಸಪತ್ನೀರು ಅಸೂಯೆಯಿಂದಲೂ ತಾವು ಪುತ್ರರನ್ನು ಪಡೆಯದಿರು

ಪದರಿಂದಲೂ ಪುಟ್ಟಿದ ದುಃಖದಿಂದ ಪತಿಗೆ ತಮ್ಮಲ್ಲುಂಟಾದ ಅನಾದರಣೆಯಿಂದ ತಮ್ಮನ್ನು ತಾವೇ ನಿಂದಿಸುವವರಾಗಿ ಸಂತಾಪಪಟ್ಟರು ; ಸಂತಾನರಹಿತಳಾದಕಾರಣ ಪಾಪಯುಕ್ತಳಾಗಿ ಪತಿಗೆ ಗೃಹದಲ್ಲಿ ಸಮ್ಮತಳಲ್ಲದವಳಾಗಿ ಪುತ್ರವತಿಯರಾದ ಪತ್ನಿಯರಿಂದ ದಾಸಿಯಂತೆ ಅವಮಾನಂಗೈಯಲ್ಪಡುವಳಾಗಿರುವ ಸ್ತ್ರೀಯನ್ನು ಸಹಬೇಕು ; ದಾಸಿಯರಿಗೆ ತಮ್ಮ ಸ್ವಾಮಿಯ ಸೇವೆಯಿಂದ ಸಂತಾಪವು ಉಂಟಾಗುವದಿಲ್ಲವಾದಕಾರಣ ನಾವು ಉದಾಸೀನಮಾನಸರೂ ಅಲ್ಲ ; ಸ್ವಾಮಿಯಿಂದ ಅತ್ಯಂತವಾಗಿ ಬಹುಮಾನವನ್ನು ಪಡದಿರುವ ದಾಸಿಗೆ ದಾಸಿಯಾದ ಸ್ತ್ರೀಯು ಯಾವರೀತಿ ಭಾಗ್ಯಹೀನಳೋ ಆರೀತಿ ನಾವು ಭಾಗ್ಯರಹಿತರಾದೆವು ’ ಎಂದು ಆ ಕೃತದ್ಯುತಿದೇವಿಯ ಸಪತ್ನೀಯರು ಸಂತಾಪಪಟ್ಟರು !

“ಎಲೈ ಪರೀಕ್ಷಿದ್ರಾಯನೆ ಕೇಳು : ಸಪತ್ನಿಯಾದ ಕೃತದ್ಯುತಿದೇವಿಯ ಪುತ್ರಸಂಪತ್ತಿನಿಂದ ಈರೀತಿ ಸಂತಾಪಪಡುತ ತಮ್ಮ ಪತಿಗೆ ಅಸಮ್ಮತವಾದ ಜೀವನವುಳ್ಳವರಾಗಿರುವ ಆ ಪತ್ನಿಯರಿಗೆ ಅರಸಿನಲ್ಲಿ ಪ್ರಬಲವಾದ ದ್ವೇಷವುಂಟಾಯಿತು ; ಹೀಗಿರುವಲ್ಲಿ ಕ್ರೂರಚಿತ್ತರಾದ ಆ ಸ್ತ್ರೀಯರು ಅತಿ ದ್ವೇಷದಿಂದ ನಷ್ಟವಾದ ಬುದ್ಧಿಯುಳ್ಳವರಾಗಿ ತಮ್ಮ ಪತಿಯ ಅನಾದರಣೆಯನ್ನು ಸಹಿಸಲಾರದೆ ಆ ಪುತ್ರನಿಗೆ ರಹಸ್ಯವಾಗಿ ವಿಷವನ್ನಿತ್ತರು ; ಅನಂತರದಲ್ಲಿ ಕೃತದ್ಯುತಿದೇವಿಯು ಸಪತ್ನೀರ ಮಹತ್ತಾದ ಆ ದುಷ್ಕೃತ್ಯವನ್ನು ತಿಳಿಯದೆ ಬಾಲಕನು ನಿದ್ರೆಗೈಯುತಲಿಧಾನೆಂದು ಚಿಂತಿಸಿ ಗೃಹದಲ್ಲಿ ಸಂಚರಿಸುತಲಿದ್ದಳು ; ಆ ಬಳಿಕ ಸುಬುದ್ಧಿಯುಳ್ಳ ಕೃತದ್ಯುತಿದೇವಿಯು ತನ್ನ ಪುತ್ರನು ಬಹುಕಾಲ ಮಲಗಿಧಾನೆಂದು ಯೋಚಿಸಿ ಸ್ತನ್ಯವನ್ನು ಕೊಟ್ಟು ಪೋಷಿಸುವ ಬಲತಾಯಿಯನ್ನು ಕುರಿತು—ಎಲೈ ಬಾಲಕನನ್ನು ಕರತಾ—ಎಂದು ಹೇಳಿಕಳುಹಿಸಿದಳು ; ಆಗ ಆಕೆಯು ಕೃತದ್ಯುತಿದೇವಿಯ ಆಜ್ಞೆಯಿಂದ ಬಾಲಕನ ಸಮೀಪವನ್ನೈದಿ ಮೇಲಕ್ಕೆ ಪೋಗಿರುವ ಕರೀಹಾಲೆ ಗುಡ್ಡೆಗಳುಳ್ಳ ನೇತ್ರಗಳೊಡನೆ ಯುಕ್ತನಾದ ಪ್ರಾಣೇಂದ್ರಿಯಾದಿ ರಹಿತನಾಗಿ ಮಲಗಿರುವ ಬಾಲಕನನ್ನು ನೋಡಿ ಕಟಕಟಾ—ಕೆಟ್ಟೆನೆಂದು ದೀನಸ್ವರದಿಂದ ಭೂಮಿಯಲ್ಲಿ ಬಿದ್ದಳು ; ಆಗ ಕೃತದ್ಯುತಿದೇವಿಯು ತನ್ನ ಹಸ್ತಗಳಿಂದ ತನ್ನ ವಕ್ಷಸ್ಥಳಗಳನ್ನು ಘಟ್ಟಿಯಾಗಿ ಬಡಿಯುತಲಿರುವ ಆ ಸ್ತ್ರೀಯ ದೀನಸ್ವರವನ್ನು ಕೇಳಿ ಅತಿ ತ್ವರೆಯಿಂದ ಪುತ್ರನ ಸಮೀಪವನ್ನೈದಿ ಆಕಸ್ಮಿಕವಾಗಿ ಮೃತನಾದ ಪುತ್ರನನ್ನು ನೋಡಿ ಅಮಿತವಾದ ಶೋಕದಿಂದ ಚೆದರಿದ ಕೇಶಗಳೂ ವಸ್ತ್ರಗಳೂ ಉಳ್ಳವಳಾಗಿ ಭೂಮಿಯಲ್ಲಿ ಬಿದ್ದು ಮೂರ್ಛೆಯನ್ನೈದಿದಳು ; ಆಮೇಲೆ ಆ ಅರಸಿನ ಅಂತಃಪುರದಲ್ಲಿರುವ ಪುರುಷರು ಸ್ತ್ರೀಯರು ಸಹ ಆ ರೋದನಧ್ವನಿಯನ್ನು ಕೇಳಿ ಬಾಲಕನ ಸಮೀಪಕ್ಕೆ ಬಂದು ಅವರೊಡನೆ ಸಮಾನವಾದ ವ್ಯಸನವುಳ್ಳವರಾಗಿ ದುಃಖಪಟ್ಟರು ; ಶಿಶುದ್ರೋಹವಂಗೈದಿರುವ ಮಿಗಿಲಾದ ರಾಜಪತ್ನಿಯರು ತಾವು ಆಗ ಅನೃತವಾಗಿ ಪ್ರಳಾಪಂಗೈದರು ; ಆ ಸಮಯದಲ್ಲಿ ಚಿತ್ರಕೇತುವು ಕಾಣಲ್ಪಡದಿರುವ ಮೃತ್ಯುನಿಮಿತ್ತವುಳ್ಳ ಪುತ್ರನ ವಾರ್ತೆಯನ್ನು ಕೇಳಿ ಅನುಸರಿಸಿ ಹಿಂದೆಬರುವ ಸಾಮಾಜಿಕರುಳ್ಳವನಾಗಿ ಬ್ರಾಹ್ಮಣರಿಂದ ಸುತ್ತಲ್ಪಟ್ಟು ಸ್ನೇಹಾನುಬಂಧದಿಂದ ವೃದ್ಧಿಹೊಂದಿಸಲ್ಪಟ್ಟ ಶೋಕದಿಂದ ಕಣ್ಣು ಕಾಣದೆ ಮಾರ್ಗದಲ್ಲಿ ಜಾರಿಬೀಳುತ ಮೂರ್ಛೆಯನ್ನೈದಿದನು ; ಆ ಅರಸು ಶೋಕವೇಗದಿಂದ ಚೆದರಿದ ಕೇಶಗಳೂ ವಸ್ತ್ರಗಳೂ ಉಳ್ಳವನಾಗಿ ದೀರ್ಘವಾಗಿ ನಿಶ್ವಾಸವನ್ನು ಬಿಡುತ ಬಾಷ್ಪಜಲ ಬಿಂದುಗಳಿಂದ ಮುಚ್ಚಲ್ಪಡೋಣದರಿಂದ ಅಡ್ಡಗೈಸಲ್ಪಟ್ಟ ಕಂಠಮಾರ್ಗವುಳ್ಳವನಾಗಿ ಮಾತನಾಡಿಸಲು ಸಮರ್ಥನಾಗದೆ ಮೃತನಾದ ಬಾಲಕನ ಪಾದಮೂಲದಲ್ಲಿ ಬಿದ್ದನು ; ಆಗ ಕೃತದ್ಯುತಿದೇವಿಯು ಬಹಳ ಶೋಕದಿಂದ ಪೀಡಿತನಾದ ಪತಿಯನ್ನೂ ವಂಶಕ್ಕೆ ಒಬ್ಬನೇ ಆ ಮೃತನಾದ ಪುತ್ರನನ್ನೂ ನೋಡಿ ನೋಡುತಲಿರುವ ಜನರಿಗೂ ಅರಸಿಗೂ ಸಾಮಾಜಿಕರಿಗೂ ಮನೋವ್ಯಥೆಯನ್ನು ವೃದ್ಧಿಹೊಂದಿಸುತ ಕುಂಕುಮಲೇಪದಿಂದ ಅಲಂಕರಿಸಲ್ಪಟ್ಟ ಸ್ತನಯುಗ್ಮವನ್ನೂ ಅಂಜನದೊಡನೆ ಕೂಡಿರುವ ನೇತ್ರಗಳನ್ನೂ ಜಲಬಿಂದುಗಳಿಂದ ನೆನೆಯಿಸುತ ಜಾರುತಲಿರುವ ಪುಷ್ಪಮಾಲೆಗಳುಳ್ಳವಳಾಗಿ ಕೇಶಗಳನ್ನು ಹರಡಿಕೊಂಡು ಕುರರಿಯೆಂಬ ಪಕ್ಷಿಯಂತೆ ಸುತನನ್ನು ಕುರಿತು ಸುಸ್ವರದಿಂದ ವಿಚಿತ್ರವಾಗಿ ರೋದನಂಗೈಯುತ ಬ್ರಹ್ಮದೇವನನ್ನು ಕುರಿತು ‘ಎಲೈ ಬ್ರಹ್ಮದೇವನೇ, ಯಾವಕಾರಣದಿಂದ ನೀನು ನಿನ್ನ ಸೃಷ್ಟಿಗೆ ಅನುಕೂಲವಿಲ್ಲದಿರುವ ವ್ಯಾಪಾರವನ್ನು ಗೈಯ್ಯುತಲಿದ್ದೀಯೋ ಅದುಕಾರಣ ನೀನು ಅತಿ ಮೂಢನಾಗಿ ತೋರುತಲಿದ್ದೀಯೆ ; ವೃದ್ಧನು ಜೀವಿಸುತಲಿರಲು ಬಾಲಕನಿಗೆ ಮೃತಿಯುಂಟಾಗುವದು ಅತ್ಯಂತ ಅನುಚಿತವು ; ವೃದ್ಧನಿಗೆ ಸೃಷ್ಟಿ

ಸಾಮರ್ಥ್ಯವಿಲ್ಲದಕಾಲದಲ್ಲಿ ಬಾಲಕನು ಮೃತನಾದರೆ ನಿನ್ನ ಸೃಷ್ಟಿಯು ನಡೆಯದಕಾರಣ ನೀನು ಮೂರ್ಖನಂತೆ ತೋರುತಲಿದ್ದೀಯೆ; ಪ್ರಕೃತಕ್ಕೆ ನೀನು ಸೃಷ್ಟಿಯಲ್ಲಿ ವಿಪರೀತ ವ್ಯಾಪಾರವುಳ್ಳವನಾಗಿ ಪ್ರಾಣಿಗಳಿಗೆ ಅತಿ ದುಃಖ ಕರನಾದ್ದರಿಂದ ನಿತ್ಯವಾದ ಶತ್ರುವಾಗುತಲಿದ್ದೀಯೋ ಹೊರತು ದಯಾಶೀಲನಲ್ಲ; ಜನ್ಮ ಮೃತಿಗಳು ಕರ್ಮಾಧೀನ ಗಳಾದ್ದರಿಂದ ಪುತ್ರನು ಜೀವಿಸುತಲಿರಲು ತಂದೆಯು ಮೃತನಾಗಬೇಕು; ತಂದೆಯು ಜೀವಿಸುತಲಿರಲು ಪುತ್ರನು ಮೃತನಾಗಬಾರದೆಂದು ಪ್ರಾಣಿಗಳ ಜನ್ಮ ಮರಣಗಳಿಗೆ ಕ್ರಮವುಂಟಾಗಲಾರದೆಂದು ನುಡಿಯುವನಾದರೆ ಆಗ ಜೀವರ ಕರ್ಮಗಳಿಂದಲೇ ಜನ್ಮಾದಿಗಳುಂಟಾಗಲಿ; ನಿನ್ನಿಂದ ಮಾಡತಕ್ಕ ವ್ಯಾಪಾರವೇನಿದೆ; ನನ್ನನ್ನು ಹೊರತು ಜಡಗಳಾದ ಕರ್ಮಗಳಿಂದೇನು; ಆದಾಗ್ಯೂ ನಿನ್ನ ಸೃಷ್ಟಿಗಳನ್ನು ವೃದ್ಧಿಹೊಂದಿಸಲೋಸುಗ ನಿನ್ನಿಂದ ಯಾವ ಸ್ನೇಹವು ಪುತ್ರಾದಿಗಳಲ್ಲಿ ಕಲ್ಪಿಸಲ್ಪಟ್ಟಿತೋ ಅದನ್ನು ನೀನೇ ಛೇದಿಸುತಲಿದ್ದೀಯೆ; ಲೋಕದಲ್ಲಿ ಇಂಥಾ ದುಃಖವನ್ನು ನೋಡಿ ಯಾವವನುತಾನೇ ಪುತ್ರಾದಿಗಳಲ್ಲಿ ಸ್ನೇಹವನ್ನು ಮಾಡುವನು’ ಎಂದು ಬ್ರಹ್ಮದೇವನನ್ನು ಕುರಿತು ದುಃಖಿಸಿ ಪುನಹಾ ಪುತ್ರನನ್ನು ಕುರಿತು ‘ಎಲೈ ಪುತ್ರನೆ, ದೀನಳಾದ ಅನಾಥಳಾದ ನನ್ನನ್ನು ತ್ಯಾಗಂಗೈಯುವದು ನಿನಗೆ ಯುಕ್ತವಲ್ಲ; ನಿನ್ನ ಶೋಕದಿಂದ ತಪ್ತನಾದ ನಿನ್ನ ತಂದೆಯನ್ನು ನೋಡು; ಅಪುತ್ರವಂತರಿಂದ ದಾಟಲಶಕ್ಯವಾದ ಯಾವ ನರಕವುಂಟೋ ಆ ನರಕವನ್ನು ಪುತ್ರನಾದ ನಿನ್ನಿಂದ ನಾವು ಶೀಘ್ರದಿಂದ ತರಿಸುವೆವು; ನಿರ್ದಯನಾದ ಯಮನೊಡನೆ ನೀನು ದೂರವಾಗಿ ಹೋಗುವನಾಗಬೇಡ! ಎಲೈ ರಾಜಪುತ್ರನೆ, ಏಳು ಏಳು; ನಿನ್ನ ಸ್ನೇಹಿತರಾದ ಬಾಲಕರು ಕ್ರೀಡಿಸಲೋಸುಗ ನಿನ್ನನ್ನು ಕರಿಯುತಲಿದ್ದಾರೆ; ನೀನು ಬಹುಕಾಲದಿಂದ ನಿದ್ರೆಗೈಯ್ಯುವನಾದ್ದರಿಂದ ಕ್ಷುತ್ತಿನಿಂದ ಪೀಡಿತನಾಗಿದ್ದೀಯೆ; ಶೀಘ್ರದಿಂದ ಭೋಜನಂಗೈಯ್ಯುವನಾಗು; ಸ್ತನ್ಯವನ್ನು ಪಾನಂಗೈಯ್ಯುವನಾಗು; ನಿನ್ನವರಾದ ನಮ್ಮ ಶೋಕಗಳನ್ನು ಪರಿಹರಿಸು! ಎಲೈ ಪುತ್ರನೆ, ಭಾಗ್ಯಹೀನಳಾದ ನಾನು ಮೊದಲು ನಿನ್ನ ಪಾರ್ಶ್ವವನ್ನೈದಿ ಪೂರ್ವದಂತೆ ಮನೋಹರವಾದ ಮುಗುಳುನಗೆಯುಳ್ಳ ಸಂತೋಷಯುಕ್ತಗಳಾದ ನೋಟಗಳುಳ್ಳ ನಿನ್ನ ಮುಖಪದ್ಮವನ್ನು ನೋಡಲಿಲ್ಲ; ನಿನ್ನ ಸವಿನುಡಿಗಳನ್ನು ಕೇಳಲಿಲ್ಲವಾದಕಾರಣ ನಿರ್ದಯನಾದ ಯಮನಿಂದ ನೀನು ಕಳೆಯಲ್ಪಟ್ಟವನಾಗಿ ಪುನಹಾ ಆಗಮನವಿಲ್ಲದ ಪರಲೋಕವನ್ನೈದಿದವನಾದೆ’ ಎಂದು ಈರೀತಿ ಕೃತದ್ಯುತಿದೇವಿಯು ಮೃತನಾದ ಪುತ್ರನನ್ನು ಕುರಿತು ವಿಚಿತ್ರಗಳಾದ ದೀನವಚನಗಳಿಂದ ದುಃಖಿಸುತ್ತಿರಲು ಆಗ ಚಿತ್ರಕೇತುರಾಯನು ಪುತ್ರಶೋಕದಿಂದ ಅತಿ ಸಂತಪ್ತನಾಗಿ ಕಂಠಧ್ವನಿಯನ್ನು ಬಿಡುತ ದುಃಖಿಸಿದನು; ಈರೀತಿ ದಂಪತಿಗಳಾದ ಕೃತದ್ಯುತಿ ಚಿತ್ರಕೇತುರಾಯನು ದುಃಖಪಡುತ್ತಿರಲು ಅವರನ್ನನುವರ್ತಿಸಿಕೊಂಡಿರುವ ಸಮಸ್ತರಾದಪುರುಷರೂ ಸ್ತ್ರೀಯರೂ ದುಃಖಪಟ್ಟರು; ಈರೀತಿ ಶೋಕವನ್ನೈದಿ ಪ್ರಜ್ಞಾಹೀನವಾಗಿ ಅನಾಮಕವಾದ ಭೂಲೋಕ ವೃತ್ತಾಂತವನ್ನು ಜ್ಞಾನದಿಂದ ತಿಳಿದು ಮಹರ್ಷಿಯಾದ ಅಂಗೀರಸ್ಸು ನಾರದನೊಡನೆ ಯುಕ್ತನಾಗಿ ಪುನಹಾ ಚಿತ್ರಕೇತುರಾಯನ ಸಮೀಪವನ್ನೈದಿದನು.”

೧೫ನೇ ಅಧ್ಯಾಯ.

ನಾರದಮುನಿಯು ಚಿತ್ರಕೇತುವಿಗುಂಟಾದ ಪುತ್ರಶೋಕವನ್ನು ತತ್ವೋಪದೇಶದಿಂದ ಪರಿಹರಿಸಿದ್ದು.

ಅನಂತರದಲ್ಲಿ ಅಂಗಿರಸ್ಸು ನಾರದಮುನಿಯು ಇವರೀರ್ವರೂ ಈರೀತಿ ಮೃತನಾದ ಪುತ್ರನ ಸಮೀಪದಲ್ಲಿ ಮೃತನಂತೆ ಬಿದ್ದಿರುವ ಶೋಕದಿಂದ ಪೀಡಿತನಾದ ಚಿತ್ರಕೇತುರಾಯನನ್ನು ಕುರಿತು ತತ್ವವಚನಗಳಿಂದ ಸಂತವಿಡುತ “ಎಲೈ ಚಿತ್ರಕೇತುವೆ, ನೀನು ಯಾವನನ್ನು ಕುರಿತು ದುಃಖಪಡುತ್ತೀಯೆ? ಈ ಬಾಲಕನು ನಿನಗೆ ಯಾವ ಸಂಬಂಧಿಯು? ನೀನು ಇವನಿಗೆ ಯಾವಸಂಬಂಧಿಯು? ಪ್ರವಾಹರೂಪವಾದ ಸೃಷ್ಟಿಕ್ರಮದಲ್ಲಿ ಈ ಬಾಲಕನು ನಿನಗೆ ಪುತ್ರನು; ಇವನಿಗೆ ನೀನು ತಂದೆಯು; ಯಾರು ಪೂರ್ವಜನ್ಮದಲ್ಲಿ ಪುತ್ರಾದಿರೂಪದಿಂದ ಕೂಡಿದವರಾಗಿದ್ದರೋ ಅವರೇ ಮರಣದಲ್ಲಿ ಪುನಃ ವಿಯುಕ್ತರಾಗಿ ವರ್ತಮಾನಜನ್ಮದಲ್ಲಿ ಆ ಪುರುಷನಿಗಾದರೂ ಅನ್ಯರಿಗಾದರೂ ಪುತ್ರಾದಿ

ಭಾವಗಳನ್ನು ಪಡೆಯುತಲಿಧಾರೋ ಆ ಪುರುಷರೇ ಈ ಜನ್ಮಕ್ಕಿಂತಲೂ ಮತ್ತೊಂದು ಜನ್ಮದಲ್ಲಿ ಅವನಿಗಾದರೂ ಮತ್ತೊಬ್ಬನಿಗಾದರೂ ಪತ್ನ್ಯಾದಿಗಳು ಶತೃ ಪುತ್ರಾದಿಗಳಾದರೂ ಆಗುವರಾದಕಾರಣ ಇವನು ಪುತ್ರನು ಇವನು ತಂದೆಯು ಎಂದು ನಿಯಮವಿಲ್ಲ; ಯಾವರೀತಿ ನದೀಪ್ರವಾಹವೇಗದಿಂದ ಮರಳುಗಳು ಪರಸ್ಪರ ಸಂಯೋಗ ವಿಯೋಗಗಳನ್ನೈದುವವೋ ಅದೇರೀತಿ ಕಾಲವೇಗದಿಂದ ಜೀವರು ಪರಸ್ಪರ ಸಂಯೋಗ ವಿಯೋಗಗಳನ್ನೈದುವರು; ಆದರೂ ಬಹುಕಾಲದಿಂದ ಅಪುತ್ರನಾಗಿರುವ ನನಗೆ ವಾರ್ಧಿಕ್ಯದಲ್ಲಿ ಪುತ್ರನು ಜನಿಸಿ ಮೃತನಾದನೆಂದು ದುಃಖಿಸುವೆನು; ಯಾವರೀತಿಯಿಂದ ಬೀಜಗಳಲ್ಲಿ ಬೀಜಾಂತರಗಳು ಹುಟ್ಟಿ ಬಂದುವೇಳೆ ಕೆಲವು ಬೀಜಗಳಲ್ಲಿ ಹುಟ್ಟದೆ ನಷ್ಟವಾಗುವವೋ ಆರೀತಿ ಈಶ್ವರಮಾಯೆಯಿಂದ ಪ್ರೇರಿಸಲ್ಪಟ್ಟ ಈ ಪ್ರಾಣಿಗಳು ಪುತ್ರಾದಿರೂಪದಿಂದ ಪಿತ್ರಾದಿರೂಪರಾದ ಪ್ರಾಣಿಗಳಲ್ಲಿ ಜನಿಸುತಲಿಧಾರೆ; ಕೆಲವರಲ್ಲಿ ಜನಿಸುವದಿಲ್ಲ, ಕೆಲವರಲ್ಲಿಜನಿಸಿ ನಾಶವನ್ನೈದುತಲಿಧಾರೆಯಾದಕಾರಣ ಧಾನ್ಯಗಳಿಗೆ ಪರಸ್ಪರವಾಗಿ ಜನ್ಯಜನಕ ಭಾವವಿದ್ದಾಗ್ಯೂ ಎಂತು ಪಿತೃ ಪುತ್ರಾದಿಭಾವವಿರುವದಿಲ್ಲವೋ ಅದೇ ರೀತಿ ಪ್ರಾಣಿಗಳಲ್ಲಿ ವಸ್ತುತಃ ಪಿತೃಪುತ್ರಾದಿ ಭಾವವಿಲ್ಲವಾದಕಾರಣ ನೀನು ದುಃಖಿಸಬೇಡ! ಎಲೈ ಅರಸೆ, ನಾವೂ ನೀನೂ ವರ್ತಮಾನಕಾಲದಲ್ಲಿರುವ ಚರಾಚರಾತ್ಮಗಳಾದ ಈ ಭೂತಗಳೂ ಯಾವರೀತಿಯಿಂದ ಈ ಜನ್ಮಕ್ಕಿಂತಲೂ ಮೃತ್ಯುವಿಗಿಂತಲೂ ಪೂರ್ವದಲ್ಲಿ ಇಲ್ಲವೋ ಅದೇರೀತಿ ಈಗಲೂ ಅವು ವಸ್ತುತಃ ಇಲ್ಲ; ಈ ಸಮಸ್ತವೂ ಆದ್ಯಂತಗಳಲ್ಲಿಲ್ಲವಾದಕಾರಣ ಸ್ವಪ್ನಪದಾರ್ಥದಂತೆ ವರ್ತಮಾನಕಾಲದಲ್ಲಿಯೂ ಅಸತ್ಯವೇ ಸರಿಯೆಂದು ತಿಳಿ; ಸಮಸ್ತವೂ ಅಸತ್ಯವಾದರೆ ನಾನು ಇವನಿಗೆ ತಂದೆಯು—ಇವನು ನನಗೆ ಬಾಲಕನು ಎಂಬ ಅಭಿಮಾನವುಂಟಾಗುವದಿಲ್ಲ; ಸರ್ವಭೂತನಿಯಾಮಕನಾದ ಈಶ್ವರನು ತಾನು ಪೂರ್ವನಾದ್ದರಿಂದ ಅಪೇಕ್ಷೆಯಿಲ್ಲದವನಾದರೂ ಬಾಲಕನಂತೆ ಲೀಲೆಯಿಂದ ತನ್ನಿಂದ ಮಾಯೆಯಿಂದ ಸೃಜಿಸಲ್ಪಟ್ಟ ಅಸ್ವತಂತ್ರಗಳಾದ ಭೂತಗಳಿಂದ ಭೂತಗಳನ್ನು ಸೃಜಿಸಿ ಪಾಲನಂಗೈಯುತ ಸಂಹರಿಸುತಲಿಧಾನೆ! ಎಲೈ ಅರಸೆ, ಯಾವರೀತಿ ಬೀಜದದೆಶೆಯಿಂದ ಮತ್ತೊಂದು ಬೀಜವು ಜನಿಸುವದೋ ಅದೇ ರೀತಿ ಪಿತೃದೇಹದಿಂದ ಮಾತೃದೇಹದಲ್ಲಿ ಪುತ್ರನಾದ ಪ್ರಾಣಿಯ ದೇಹವು ಹುಟ್ಟುತಲಿಧೆ; ಜೀವನಾದರೋ ಭೂಮಿಯಂತೆ ಸ್ಥಿರನಾಗಿರುವನು; ಜನ್ಮಾದಿ ವ್ಯವಹಾರವು ದೇಹಗಳಿಗೇ ಹೊರ್ತು ಆತ್ಮನಿಗಿಲ್ಲ; ಸತ್ತಾಮಾತ್ರರೂಪನಾದ ಬ್ರಹ್ಮನಲ್ಲಿ ಎಂತು ಸಾಮಾನ್ಯವಿಶೇಷವಿಭಾಗವು ಅಜ್ಞಾನದಿಂದ ಕಲ್ಪಿತವಾಗಿಧೆಯೋ ಅದೇರೀತಿ ಇವನು ದೇಹವಂತನು—ಇದು ದೇಹವೆಂಬದಾಗಿ ಈ ಜೀವ ದೇಹಗಳ ಪರಸ್ಪರ ವಿಭಾಗವು ಅನಾದಿಯಾಗಿ ಅಜ್ಞಾನಕಲ್ಪಿತವಾಗಿದೆ; ಅದುಕಾರಣ ಮನಃಕಲ್ಪಿತವಾಗಿ ಆತ್ಮನಿಗಿಂತಲೂ ಅನ್ಯವಾಗಿ ಅಹಂಕಾರ ಮಮಕಾರಗಳಿಗೆ ವಿಷಯವಾಗಿರುವ ಈ ಸಮಸ್ತವನ್ನೂ ಬಿಡು; ಪರಮಾತ್ಮನಾದ ಈಶ್ವರನಾದ ಭಗವಂತನಾದ ಶ್ರೀವಾಸುದೇವನಲ್ಲೇ ಮನವನ್ನು ನಿಲ್ಲಿಸು" ಎಂದು ಸಮಾಧಾನಂಗೈದನು.

ಆ ಮುನಿಯ ವಚನವನ್ನು ಕೇಳಿ ಸಮಾಧಾನಂಗೈಯಲ್ಪಟ್ಟ ಚಿತ್ರಕೇತುರಾಯನು ಮನೋವ್ಯಥೆಯಿಂದ ಬಾಡಿರುವ ತನ್ನ ಮುಖವನ್ನು ಹಸ್ತದಿಂದ ತೊಡದು "ಎಲೈ ಮಹಾತ್ಮರಾದ ಮುನಿಗಳಿರಾ, ತತ್ವಜ್ಞರಾದ ಶ್ರೇಷ್ಠರಲ್ಲಿ ಅತಿಶ್ರೇಷ್ಠರಾಗಿ ಅವಧೂತವೇಷದಿಂದ ಗೂಢವಾಗಿ ಇಲ್ಲಿ ಬಂದಿರುವ ನೀವು ಯಾರು? ಭಗವದ್ಭಕ್ತಿಯುಳ್ಳವರಾದ ಬ್ರಾಹ್ಮಣರು ಪಾಮರಬುದ್ಧಿಯುಳ್ಳ ನಮ್ಮಂಥವರಿಗೆ ತತ್ವೋಪದೇಶಂಗೈಯಲೋಸುಗ ಅವಧೂತವೇಷದಿಂದ ಸ್ವೇಚ್ಛೆಯಿಂದ ಭೂಮಿಯಲ್ಲಿ ಸಂಚರಿಸುತಲಿಧಾರೆ; ಸನತ್ಕುಮಾರನು ನಾರದನು ಋಭುವು ಅಂಗಿರಸ್ಸು ದೇವಲಕನು ಅಸಿತನು ಅಪಾಂತರತಮನು ವ್ಯಾಸನು ಮಾರ್ಕಂಡೇಯನು ಗೌತಮನು ವಶಿಷ್ಠನು ಪರಶುರಾಮನು ಕಪಿಲನು ಶುಕನು ದೂರ್ವಾಸನು ಯಾಜ್ಞವಲ್ಕ್ಯನು ಜಾತುಕರ್ಣನು ಆರುಣಿಯು ರೋಮಶನು ಚ್ಯವನನು ದತ್ತಾತ್ರೇಯನು ಆಸುರಿಯು ಪತಂಜಲಿಯು ವೇದಶಿರಸ್ಸು ಬೋಧ್ಯನು ಪಂಚಶಿರಸ್ಸು ಹಿರಣ್ಯನಾಭನು ಕೌಸಲ್ಯನು ಶೃತದೇವನು ಕೃತಧ್ವಜನು ಇವರೇ ಮೊದಲಾಗುಳ್ಳ ಮಹರ್ಷಿಗಳೂ ಅನ್ಯರಾದ ಮಹಾಸಿದ್ಧಪುರುಷರೂ ಕೂಡಾ ಜ್ಞಾನಕ್ಕೆ ಸಾಧನಭೂತರಾಗಿ ಭೂಮಿಯಲ್ಲಿ ಸಂಚರಿಸುತಲಿಧಾರೆ; ಅದುಕಾರಣ ಗ್ರಾಮಪಶುಪ್ರಾಯನಾಗಿ ಮೂಢಬುದ್ಧಿಯುಳ್ಳವ

ನಾಗಿ ಅಜ್ಞಾನವೆಂಬ ಮಹತ್ತಾದ ಅಂಧಕಾರದಲ್ಲಿ ಮಗ್ನನಾಗಿರುವ ನನಗೆ ನೀವೇ ರಕ್ಷಕರಾದ್ದರಿಂದ ನಿಮ್ಮಿಂದ ನನಗೆ ಜ್ಞಾನವೆಂಬ ದೀಪವು ಪ್ರಕಾಶಗೈಯಲ್ಪಡಲಿ" ಎಂದು ಪ್ರಾರ್ಥಿಸಿದನು.

ಚಿತ್ರಕೇತುರಾಯನ ವಾಕ್ಯವನ್ನು ಕೇಳಿ ಅಂಗೀರಸನು "ಎಲೈ ಅರಸೆ, ಪುತ್ರನನ್ನು ಪಡೆಯಲಿಚ್ಛೆಯುಳ್ಳ ನಿನಗೆ ಪುತ್ರಪ್ರದನಾದ ಅಂಗಿರಸನೆಂಬ ಮುನಿಯೇ ನಾನು ; ಈತನು ಸಾಕ್ಷಾದ್ಬ್ರಹ್ಮಪುತ್ರನಾಗಿ ಸರ್ವಜ್ಞನಾದ ನಾರದಮುನಿಯು ; ಏನುಕಾರಣ ಇಲ್ಲಿಗೆ ಬಂದವರಾದಿರಿಯೆಂದರೆ : ಪುತ್ರಶೋಕದಿಂದ ದಾಟಲಶಕ್ಯವಾದ ಅಜ್ಞಾನವೆಂಬ ಅಂಧಕಾರದಲ್ಲಿ ಮಗ್ನನಾಗಿ ಶೋಕ ಮೋಹಗಳನ್ನೈದಲು ಯೋಗ್ಯನಲ್ಲದವನಾಗಿ ಶ್ರೀವಿಷ್ಣುಭಕ್ತನಾಗಿರುವ ನಿನ್ನನ್ನು ನಾವು ಸ್ಮರಿಸಿಕೊಂಡು ಬ್ರಾಹ್ಮಣಪ್ರಿಯನಾದ ಭಗವದ್ಭಕ್ತನಾದ ಪುರುಷನು ದುಃಖಿಸಲು ಯೋಗ್ಯನಲ್ಲವೆಂದು ತಿಳಿದು ನಿನ್ನನ್ನು ಅನುಗ್ರಹಿಸಲೋಸುಗ ನಾವು ಇಲ್ಲಿಗೆ ಬಂದೆವು ; ನಾನು ಪೂರ್ವದಲ್ಲಿ ಯಾವಾಗ ನಿನ್ನ ಗೃಹವನ್ನೈದಿದೆನೋ ಆಗಲೇ ನಿನಗೆ ತತ್ವೋಪದೇಶವನ್ನುಗೈಯುತ್ತಿದ್ದೆನು ; ನಿನಗೆ ಈ ಸಂಸಾರದಲ್ಲಿರುವ ಆಸಕ್ತಿಯನ್ನು ತಿಳಿದು ನಾನು ಪುತ್ರನನ್ನು ಕೊಟ್ಟವನಾದೆನೇ ಹೊರತು ತತ್ವೋಪದೇಶವನ್ನು ಮಾಡಲಿಲ್ಲ ; ಪುತ್ರವಂತರಿಗುಂಟಾಗುವ ಸಂತಾಪವು ಈಗ ನಿನ್ನಿಂದಲೇ ಅನುಭವಿಸಲ್ಪಡುತಲಿರ್ಧೆಯಲ್ಲ ; ಇದೇರೀತಿ ಪತ್ನೀಯರು ಗೃಹಗಳು ಧನಗಳು ನಾನಾವಿಧಗಳಾದ ಪ್ರಭುತ್ವಗಳು ಸಂಪತ್ತುಗಳು ಶಬ್ದಾದಿ ವಿಷಯಗಳು ರಾಜ್ಯವಿಭವಗಳೂ ಕೂಡಾ ಅನಿತ್ಯಗಳೆಂದು ತಿಳಿ! ಎಲೈ ಶೂರಸೇನ ದೇಶಾಧಿಪತಿಯೆ, ಭೂಮಿಯು ಸೇನೆಯು ಕೋಶವು ಭೃತ್ಯರು ಮಂತ್ರಿಗಳು ಮಿತ್ರರು ಈ ಸಮಸ್ತರಾದ ಜನರೂ ಕೇವಲ ಶೋಕ ಮೋಹ ಭಯ ಸಂತಾಪಗಳೀವರೇ ಹೊರತು ಸುಖವನ್ನು ಕೊಡಲಾರರು ; ಈ ಪತ್ನೀ ಪುತ್ರಾದಿ ಸಮಸ್ತ ವಸ್ತುಗಳು ಗಂಧರ್ವನಗರದಂತೆ ಬಂದುಕಡೆಯಲ್ಲಿ ಕೂಡುವವು ; ಬಂದುಕಡೆಯಲ್ಲಿ ನಷ್ಟವಾಗುವವು ; ಸ್ವಪ್ನದಂತೆಯೂ ಮಾಯೆಯಂತೆಯೂ ಮನೋರಥದಂತೆಯೂ ಮನೋಮಾತ್ರ ಕಲ್ಪಿತಗಳಾಗಿ ಪರಮಾರ್ಥವಾದ ಸ್ವರೂಪವಿಲ್ಲದವಾಗಿ ಕಾಣಲ್ಪಡುತಲಿವೆಯಾದಕಾರಣ ಇವೆಲ್ಲವೂ ಅಸತ್ಯಗಳೆಂದು ತಿಳಿ ; ಶಾಸ್ತ್ರಜ್ಞರಾದ ಕೆಲವರು ಪತ್ನೀಪುತ್ರ ಧನಾದಿಗಳು ಪುಣ್ಯಾಕರ್ಮದಿಂದ ಕಲ್ಪಿಸಲ್ಪಟ್ಟವೆಂದು ತಿಳಿಯುತಲಿರಲು ನೀನು ಎಂತು ಮನಃಕಲ್ಪಿತವೆಂದು ಪೇಳುವೆಯೆಂದಲ್ಲಿ: ಕರ್ಮವಾಸನೆಗಳಿಂದ ಅರ್ಥಗಳನ್ನು ಧ್ಯಾನಂಗೈವ ಪುರುಷನ ಮನಸ್ಸೆಂಬ ನಿಮಿತ್ತಕಾರಣದಿಂದಲೇ ನಾನಾವಿಧಗಳಾದ ಕರ್ಮಗಳು ಆವಿರ್ಭವಿಸುವವಾದಕಾರಣ ಕರ್ಮಗಳು ಮನೋಜನ್ಯಗಳಾದ್ದರಿಂದ ಅವುಗಳಿಂದ ಮಿಥ್ಯಾಭೂತಗಳಾದ ಪತ್ನೀ ಪುತ್ರಾದಿ ರೂಪ ಅರ್ಥಗಳೂ ಕೂಡ ಮನಃಕಲ್ಪಿತಗಳೇ ಸರಿಯೆಂದು ತಿಳಿ ; ಈರೀತಿ ಪುತ್ರಾದಿಗಳು ದುಃಖಾದಿ ಹೇತುಗಳೆಂದು ನಿರೂಪಿಸಿ ಅವುಗಳಲ್ಲಿಯೂ ದೇಹಸಂಬಂಧವೇ ಮುಖ್ಯವಾಗಿ ಅನರ್ಥಕಾರಣವೆಂದು ನಿರೂಪಿಸಿ ಅಧಿಭೂತ ಅಧಿದೈವ ಅಧ್ಯಾತ್ಮರೂಪವಾದ ಈ ದೇಹವು ನಾನೆಂದು ತಿಳಿಯುವ ಜೀವನಿಗೆ ನಾನಾವಿಧಗಳಾದ ಕ್ಲೇಶಗಳನ್ನೂ ಸಂತಾಪಗಳನ್ನೂ ಕಲ್ಪಿಸುವದೆಂದು ಋಷಿಗಳು ಹೇಳುವರು ; ಅದುಕಾರಣ ನೀನು ಏಕಾಗ್ರವಾದ ಮನದಿಂದ ಆತ್ಮನ ತತ್ವವನ್ನು ಭಾವಿಸಿ ಆತ್ಮನಿಗಿಂತಲೂ ಅನ್ಯವಾದ ಅರ್ಥದಲ್ಲಿ ಇದು ನಿತ್ಯವೆಂಬ ವಿಶ್ವಾಸವನ್ನು ಬಿಟ್ಟು ಉಪಶಾಂತಿಯನ್ನಾಶ್ರಯಿಸುವನಾಗು" ಎಂದು ಈರೀತಿ ಚಿತ್ರಕೇತುರಾಯನಿಗೆ ಅಂಗಿರಸನು ತತ್ವೋಪದೇಶಂಗೈಯುತ್ತಿರಲು ಈ ತತ್ವಸ್ವರೂಪವು ಈಶ್ವರಪ್ರಸಾದವನ್ನು ಹೊರತು ತಿಳಿಯಲಶಕ್ಯವೆಂದು ತಿಳಿದು ನಾರದಮುನಿಯು ಆ ಈಶ್ವರಪ್ರಸಾದಕ್ಕೋಸ್ಕರ ಚಿತ್ರಕೇತುವಿಗೆ ಬಂದು ಮಂತ್ರವನ್ನು ಉಪದೇಶಂಗೈದನು ! ಎಲೈ ಅರಸೆ, ಪುರುಷನು ಸಪ್ತರಾತ್ರಿಗಳಲ್ಲಿ ಯಾವ ಮಂತ್ರವನ್ನು ಜಪಿಸಿ ಸಂಕರ್ಷಣಮೂರ್ತಿಯನ್ನು ಪ್ರತ್ಯಕ್ಷಂಗೈವನೋ ಅಂಥಾ ಪರಮಶ್ರೇಯಸ್ಕರವಾದ ಈ ಮಂತ್ರವನ್ನು ನೀನು ನಿಯಮಯುಕ್ತನಾಗಿ ನನ್ನೆಡೆಯಿಂದ ಪರಿಗ್ರಹಿಸು ! ಎಲೈ ಅರಸೆ, ಪುರಾತನರಾದ ರುದ್ರಾದಿ ದೇವತೆಗಳು ಯಾವ ಸಂಕರ್ಷಣಮೂರ್ತಿಯ ಪಾದಪದ್ಮವನ್ನಾಶ್ರಯಿಸಿ ಈ ಸಂಸಾರ ಭ್ರಾಂತಿಯನ್ನೂ ಭೇದಬುದ್ಧಿಯನ್ನೂ ಸಹಾ ಬಿಟ್ಟು ಆ ಕ್ಷಣದಲ್ಲೇ ಸಮಾನಾಧಿಕರಹಿತವಾದ ಉತ್ಕೃಷ್ಟವಾದ ಆ ಸಂಕರ್ಷಣಮಹಿಮೆಯನ್ನೈದಿದರೋ ಅದೇರೀತಿ ನೀನು ಈ ಮಂತ್ರಜಪದಿಂದ ಸಂಕರ್ಷಣನ ಮಹಿಮೆಯನ್ನು ಪಡೆಯುವನಾಗುತ್ತೀಯೆ—ಎಂದು ನುಡಿದನು.

೧೬ ನೇ ಅಧ್ಯಾಯ.

ನಾರದಮುನಿಯು ಚಿತ್ರಕೇತುರಾಯನಿಗೆ ಮಹಾಮಂತ್ರವನ್ನು ಉಪದೇಶಿಸಿದ್ದು.

ಅನಂತರದಲ್ಲಿ ನಾರದಮುನಿಯು ಆ ಪುತ್ರನ ಮುಖದಿಂದಲೇ ಪಿತೃಪುತ್ರಾದಿಸಂಬಂಧವು ಅಸತ್ಯವೆಂಬ ಅರ್ಥವನ್ನು ತಿಳಿಯಲೋಸುಗ ತನ್ನ ಯೋಗಬಲದಿಂದ ಮೃತನಾದ ಆ ಬಾಲಕನನ್ನು ನೆನೆದು ದುಃಖಿಸುತಲಿರುವ ಬಂಧುಗಳಿಗೆ ತೋರಿಸಿ—ಎಲೈ ಜೀವಾತ್ಮನೇ, ನಿನಗೆ ಶುಭವುಂಟಾಗಲಿ ; ನಿನ್ನ ನಿಮಿತ್ತವಾಗಿ ಉಂಟಾದ ಶೋಕದಿಂದ ಅತಿ ತಪ್ತರಾದ ತಾಯಿತಂದೆಗಳನ್ನೂ ಮಿತ್ರ ಬಂಧುಗಳನ್ನೂ ನೋಡು ; ಈ ತಾಯಿತಂದೆ ಮೊದಲಾದವರು ಅತ್ಯಂತ ದುಃಖಪಡುತಲಿಧಾರೆಯಾದಕಾರಣ ನೀನು ಪುನಹಾ ಈ ಕಳೇಬರವನ್ನು ಪ್ರವೇಶಿಸಿ ಪುತ್ರರೊಡನೆ ಕೂಡಿ ಮಿಗಿಲಾದ ಆಯುಸ್ಸನ್ನೂ ತಂದೆಯಿಂದ ಕೊಡಲ್ಪಟ್ಟ ಭೋಗಗಳನ್ನೂ ಅನುಭವಿಸಿ ಅನಂತರದಲ್ಲಿ ಸಿಂಹಾಸನವನ್ನೇರಿ ರಾಜ್ಯವನ್ನಾಳುವನಾಗು—ಎಂಬ ನಾರದನ ವಚನವನ್ನು ಕೇಳಿ ಆ ಜೀವನು ನಾನು ಮೃತನಾದಲ್ಲಿ ಪುತ್ರದೃಷ್ಟಿಯಿಂದ ಶೋಕವುಂಟಾದರೆ ಶತೃದೃಷ್ಟಿಯಿಂದ ಸಂತೋಷವೆಂತು ಉಂಟಾಗುವದು ! ಎಲೈ ನಾರದಮುನಿಯೆ, ಕರ್ಮಗಳಿಂದ ದೇವ ಮನುಷ್ಯ ಪಶ್ವಾದಿ ಗರ್ಭಗಳಲ್ಲಿ ಸುತ್ತಿಸಲ್ಪಡುತಲಿರುವ ನನಗೆ ಇವರು ಯಾವ ಜನ್ಮದಲ್ಲಿ ತಾಯಿತಂದೆಗಳಾಗಿದ್ದರು ; ಸಮಸ್ತರು ಸಮಸ್ತರಿಗೆ ಜನ್ಮಕ್ರಮವಶದಿಂದ ಪರಸ್ಪರವಾಗಿ ಬಂಧುಗಳು ಜ್ಞಾತಿಗಳು ಸಂಹಾರಕರು ರಕ್ಷಕರು ಈ ಉಭಯರಿಗೆ ಮಧ್ಯರಾಗಿರುವ ಜನರು ದ್ರವ್ಯಾದಿನಿಮಿತ್ತವಾಗಿ ದ್ವೇಷಂಗೈಯ್ಯುವ ಶತೃಗಳು ಉದಾಸೀನರೂ ಆಗುತಲಿಧಾರೆ ; ಆದಕಾರಣ ಈ ಪಿತೃಪುತ್ರಾದಿ ಸಂಬಂಧವು ನಿಯತವಲ್ಲ ; ಕರ್ಮಗಳಿಂದ ಸುತ್ತುವದರಲ್ಲಿ ದೃಷ್ಟಾಂತವನ್ನು ಪೇಳುವೆನು ಕೇಳಿ : ಯಾವರೀತಿಯಿಂದ ಕ್ರಯವಿಕ್ರಯಗಳಿಗೆ ಯೋಗ್ಯಗಳಾದ ಸುವರ್ಣಾದಿ ವಸ್ತುಗಳು ಇತ್ತತ್ತ ವ್ಯಾಪಾರಿಗಳಲ್ಲಿ ಸುತ್ತುತಲಿವೆಯೋ ಅದೇರೀತಿ ಜೀವನು ಸಮಸ್ತ ಯೋನಿಗಳಲ್ಲಿ ಸುತ್ತುತಲಿಧಾನೆ ; ಒಂದೇ ಜನ್ಮದಲ್ಲಿಯೂ ಸಂಬಂಧನಿಯಮವಿಲ್ಲವೆಂದು ದೃಷ್ಟಾಂತಪೂರ್ವಕವಾಗಿ ಪೇಳುವೆನು : ಮನುಷ್ಯರಲ್ಲಿ ಜೀವಿಸುತಲಿರುವ ಪಶ್ವಾದಿಗಳ ಸಂಬಂಧವುಕೂಡ ವಿಕ್ರಯಾನಂತರದಲ್ಲಿ ನಷ್ಟವಾಗೋಣದರಿಂದ ನಿಯತವಲ್ಲವಾದಕಾರಣ ಎಷ್ಟುಪರ್ಯಂತವು ಯಾತರ ಸಂಬಂಧವಿರುವದೋ ಅಷ್ಟುಪರ್ಯಂತವೇ ಇದು ನನ್ನದೆಂಬ ಅಭಿಮಾನವಿರುವದು ; ಇದೇರೀತಿ ಜೀವನು ಪಿತ್ರಾದಿ ಸಂಬಂಧವನ್ನೈದಿದವನಾದಾಗ್ಯೂ ಜನ್ಮಾದಿಗಳು ದೇಹಕ್ಕೇ ಹೊರ್ತು ತನಿಗೆ ಇಲ್ಲವಾದ್ದರಿಂದ ನಿತ್ಯವಾಗಿ ವಸ್ತುತಃ ನಾನು ಇವನಿಗೆ ಪುತ್ರನೆಂಬ ಅಭಿಮಾನವಿಲ್ಲದವನಾಗಿರುವ ಜೀವನು ತಂದೆಮೊದಲಾದ ಯಾವ ಸಂಬಂಧಿಗಳಲ್ಲಿ ಎಷ್ಟುಪರ್ಯಂತವು ಕರ್ಮವಶದಿಂದ ಇರುವನೋ ಅಷ್ಟುಪರ್ಯಂತವೇ ಆ ತಂದೆ ಮೊದಲಾದವರಿಗೆ ಸ್ವತ್ತಾಗಿರುವನೇ ಹೊರ್ತು ವಿಕ್ರಯಾದ್ಯನಂತರದಲ್ಲಿ ಸ್ವತ್ತಾಗಲಾರನು ; ಮರಣಾನಂತರದಲ್ಲಿಯೂ ಕಳೇಬರವು ಸ್ವತ್ತು ಅಲ್ಲವಾದಕಾರಣ ಇದರಲ್ಲಿ ಎಂತು ಪ್ರವೇಶಂಗೈವೆನು ? ನಿತ್ಯನಾಗಿ ಕ್ಷಯರಹಿತನಾಗಿ ಜನ್ಮಾದಿರಹಿತನಾಗಿ ಜನ್ಮಾದಿಗಳುಳ್ಳ ದೇಹಾದಿ ಸಮಸ್ತಗಳಿಗೆ ಆಶ್ರಯನಾಗಿ ಸ್ವಪ್ರಕಾಶನಾಗಿ ಒಬ್ಬನಾಗಿ ಸಮರ್ಥನಾಗಿರುವ ಈ ಜೀವನು ತನ್ನ ಮಾಯಾ ಗುಣಗಳಿಂದ ವಸ್ತುತಃ ತಾನೇ ಬ್ರಹ್ಮನಾದ್ದರಿಂದ ತನ್ನನ್ನೇ ಪ್ರಪಂಚಾತ್ಮಕನಾಗಿ ಸೃಜಿಸುತಲಿಧಾನೆ ; ಈ ಜೀವನು ಹಿತವನ್ನೂ ಅಹಿತವನ್ನೂಗೈಯ್ಯುವ ಮಿತ್ರ ಶತೃಮೊದಲಾದವರ ವಿಚಿತ್ರಗಳಾದ ಬುದ್ಧಿಗಳಿಗೆ ಸಾಕ್ಷಿಯಾಗಿ ಪುತ್ರಾದಿಸಂಬಂಧರಹಿತನಾದಕಾರಣ ಈ ಜೀವನಿಗೆ ಪ್ರಿಯನೂ ಅಪ್ರಿಯನೂ ಸ್ವಕೀಯನೂ ಪರಕೀಯನೂ ಇಲ್ಲ ; ದೇಹಾದಿಗಳಿಗೆ ಅಧೀನನಲ್ಲದೆ ಸ್ವತಂತ್ರನಾಗಿ ಕಾರ್ಯಕಾರಣಗಳಿಗೆ ಸಾಕ್ಷಿಯಾಗಿರುವವನಾದಕಾರಣ ಉದಾಸೀನನಂತಿರುವ ಈ ಜೀವನು ಸುಖ ದುಃಖವನ್ನೂ ಕರ್ಮಫಲಗಳಿಂದ ರಾಜ್ಯಾದಿಗಳನ್ನೂ ಗ್ರಹಿಸುವದಿಲ್ಲ ; ಅದುಕಾರಣ ಇಂಥಾ ನನಿಗೂ ನಿಮಗೂ ಸಂಬಂಧವಿಲ್ಲವಾದ್ದರಿಂದ ನೀವು ದುಃಖಿಸುವರಾಗಬೇಡಿ—ಎಂದು ಆ ಜೀವನು ನಾರದಾದಿಗಳನ್ನು ಕುರಿತು ತತ್ವವನ್ನು ನಿರೂಪಿಸಿ ತನ್ನ ಲೋಕವನ್ನೈದಿದನು ; ಆಗ ಬಂಧುಗಳೆಲ್ಲರೂ ಅತ್ಯಾಶ್ಚರ್ಯಯುಕ್ತರಾಗಿ ಆ ತತ್ವವಚನಗಳ ಶ್ರವಣದಿಂದ ತಮ್ಮ ಸ್ನೇಹವೆಂಬ ನಿಗಳವನ್ನು ಛೇದಿಸಿ ಆ ಬಾಲಕನ ನಿಮಿತ್ತವಾದ ಶೋಕವನ್ನು ಬಿಟ್ಟುಬಿಟ್ಟರು ; ಅನಂತರದಲ್ಲಿ ಬಂಧುಗಳು ಸ್ವ

ಕ್ಷೀಣನಾದ ಆ ಬಾಲಕನ ಶರೀರವನ್ನು ಸಂಸ್ಕರಿಸಿ ಅವನಿಗೆ ಉಚಿತಗಳಾದ ಕರ್ಮಗಳಂಗೈದು ತ್ಯಜಿಸಲಶಕ್ಯವಾದ ಶೋಕ ಮೋಹ ಭಯ ಸಂತಾಪಗಳನ್ನುಂಟುಮಾಡುವ ಸ್ನೇಹವನ್ನು ಬಿಟ್ಟರು; ಆಗ ಬಾಲಕ ಘಾತಕಿಯರಾದ ಮಿಗಿಲಾದ ಆ ರಾಜಪತ್ನೀಯರು ಬಾಲಹತ್ಯೆಯಿಂದ ನಷ್ಟವಾದ ಕಾಂತಿಯುಳ್ಳವರಾಗಿ ಪುತ್ರಾದಿಗಳು ದುಃಖಕ್ಕೆ ಕಾರಣಭೂತಗಳೆಂದು ತಿಳಿದು ಅಂಗಿರಸ್ಸಿನಿಂದ ನಿರೂಪಿಸಲ್ಪಟ್ಟ ತತ್ವವಚನವನ್ನು ಸ್ಮರಿಸಿಕೊಂಡು ತಮಗೆ ಪುತ್ರರಾಗಬೇಕೆಂಬ ಅಪೇಕ್ಷೆಯನ್ನು ಬಿಟ್ಟು ಮತ್ಸರರಹಿತರಾಗಿ ಯಮುನಾತೀರದಲ್ಲಿ ಬ್ರಾಹ್ಮಣರಿಂದ ನಿರೂಪಿಸಲ್ಪಟ್ಟ ಬಾಲಹತ್ಯೆಯನ್ನು ಪರಿಹರಿಸುವ ಒಂದು ವ್ರತವಿಶೇಷವನ್ನಾಚರಿಸಿದರು; ಚಿತ್ರಕೇತುರಾಯನು ಈರೀತಿ ಆ ದೇವ ಋಷಿವಚನದಿಂದ ಆತ್ಮಸ್ವರೂಪವನ್ನು ತಿಳಿದು ಸರಸ್ಸಿನಲ್ಲಿರುವ ಕೆಸರಿನ ದೆಶೆಯಿಂದ ಹೊರಕ್ಕೆ ಬರುವ ಗಜದಂತೆ ಗೃಹವೆಂಬ ಪಾಳುಭಾವಿಯ ದೆಶೆಯಿಂದ ಹೊರಕ್ಕೆ ಬಂದು ಯಮುನಾನದಿಯ ಪುಣ್ಯಾಕರವಾದ ಜಲದಲ್ಲಿ ವಿಧಿಯುಕ್ತವಾಗಿ ಮೌನದಿಂದ ಪಿತೃತರ್ಪಣಾದಿಗಳಂಗೈದು ಜಿತೇಂದ್ರಿಯನಾಗಿ ಬ್ರಹ್ಮಪುತ್ರರಾದ ಅಂಗಿರಸ್ಸು ನಾರದಮುನಿಗಳನ್ನು ವಂದಿಸಿದನು; ಆಗ ಸರ್ವಜ್ಞನಾದ ನಾರದಮುನಿಯು ಸಂತುಷ್ಟನಾಗಿ ತಮ್ಮನ್ನು ಶರಣುಹೊಂದಿರುವ ಮನೋನಿಗ್ರಹವುಳ್ಳ ಆ ಚಿತ್ರಕೇತುವಿಗೋಸ್ಕರ ಈ ಅರ್ಥವುಳ್ಳ ಮಹಾಮಂತ್ರವನ್ನುಪದೇಶಂಗೈದನು: ಭಗವಂತನಾದ ಪ್ರದ್ಯುಮ್ನನಾದ ಅನಿರುದ್ಧನಾದ ವಾಸುದೇವನಾದ ಸಂಕರ್ಷಣನಾದ ನಿನಿಗೋಸ್ಕರ ಮನದಿಂದ ನಮಸ್ಕಾರಂಗೈಯುತಲಿದ್ದೇವೆ! ಜ್ಞಾನಮಾತ್ರಸ್ವರೂಪವಾದ ಪರಮಾನಂದವೇ ಮೂರ್ತಿಯಾಗುಳ್ಳ ತನ್ನಲ್ಲೇ ರಮಿಸುತಲಿರುವ ನಷ್ಟವಾದ ಭೇದದೃಷ್ಟಿಯುಳ್ಳ ನಿನಿಗೋಸ್ಕರ ನಮಸ್ಕಾರವು! ಆತ್ಮಾನಂದವನ್ನನುಭವಿಸೋಣದರಿಂದ ನಿರಾಕರಿಸಲ್ಪಟ್ಟ ಮಾಯಾನಿಮಿತ್ತಗಳಾದ ರಾಗದ್ವೇಷಾದಿಗಳುಳ್ಳ ಅನಂತಶಕ್ತಿಯುಕ್ತನಾದ ಮಹಾತ್ಮನಾದ ಋಷೀಕೇಶನಿಗೋಸ್ಕರ ನಮಸ್ಕಾರವು! ಮನದೊಡನೆ ರಾಗಾದಿ ಸಕಲೇಂದ್ರಿಯಗಳು ತನ್ನನ್ನೈದುವವಾಗದ ನಿವ್ಯಾಪಾರಗಳಾಗುತ್ತಿರಲು ಆಗ ನಾಮರೂಪರಹಿತನಾಗಿ ಚಿನ್ಮಾತ್ರನಾಗಿ ಕಾರ್ಯಕಾರಣಗಳಾದ ಪ್ರಪಂಚಮಾಯೆಗಳಿಗೆ ಮೂಲಕಾರಣನಾಗಿ ಒಬ್ಬನೇ ಪ್ರಕಾಶಿಸುತ್ತಲಿರುವನೋ ಅಂಥಾ ಶ್ರೀಹರಿಯು ನಮ್ಮನ್ನು ಸಲಹಲಿ! ಈ ಸಮಸ್ತ ಪ್ರಪಂಚವು ಯಾವವನಿಂದ ಜನಿಸಿ ಯಾವವನಲ್ಲಿ ಪುನಹಾ ವಿಲಯವನ್ನೈದುವದೋ ಯಾವನು ಘಟಾದಿಗಳಲ್ಲಿ ಶುದ್ಧವಾದ ಮೃತ್ತಿಕೆಯಂತೆ ಸರ್ವತ್ರ ವ್ಯಾಪಕನಾಗಿರುವನೋ ಅಂಥಾ ಪರಬ್ರಹ್ಮನಾದ ಶ್ರೀಹರಿಗೋಸ್ಕರ ನಮಸ್ಕಾರವು! ಒಳಗೆ ಹೊರಗೆ ಆಕಾಶದಂತೆ ಸರ್ವತ್ರ ವ್ಯಾಪಕನಾಗಿದ್ದಾಗ್ಯೂ ಯಾವ ಬ್ರಹ್ಮನನ್ನು ಪ್ರಾಣಗಳು ಕ್ರಿಯಾಶಕ್ತಿಯಿಂದ ಸೃಜಿಸಲಾರವೋ ಮನೋಬುದ್ಧಿ ಇಂದ್ರಿಯಗಳನ್ನು ಜ್ಞಾನಶಕ್ತಿಯಿಂದ ತಿಳಿಯಲಾರವೋ ಅಂಥಾ ಪರಬ್ರಹ್ಮನನ್ನು ನಮಸ್ಕರಿಸುತ್ತೇವೆ! ಯಾವರೀತಿ ಅಗ್ನಿಯಿಂದ ತಪ್ತವಾದ ಲೋಹವು ದಹಿಸಲ್ಪಡುವದೋ ಅದೇರೀತಿ ಈ ದೇಹ ಇಂದ್ರಿಯ ಪ್ರಾಣ ಮನೋ ಬುದ್ಧಿಗಳು ಯಾವ ಬ್ರಹ್ಮನ ಚೈತನ್ಯಾಂಶದೊಡನೆ ಕೂಡಿ ಜಾಗ್ರತ್ಸ್ವಪ್ನಗಳಲ್ಲಿ ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸಿ ಸುಷುಪ್ತಿ ಮೂರ್ಛಾದಿಗಳಲ್ಲಿ ಆ ದೇಹಾದಿಗಳು ಯಾವ ಚೈತನ್ಯಸಂಬಂಧವಿಲ್ಲದಿರೋಣದರಿಂದ ತಮ್ಮ ತಮ್ಮ ವಿಷಯಗಳಲ್ಲಿ ಪ್ರವರ್ತಿಸಲಾರವೋ ಜಾಗ್ರದಾದಿ ಅವಸ್ಥೆಗಳಲ್ಲಿ ದ್ರಷ್ಟ್ರವೆಂಬ ಸಂಜ್ಞೆಯನ್ನೈದುವ ಆ ಪರಬ್ರಹ್ಮನಿಗೋಸ್ಕರ ನಮಸ್ಕಾರವು! ಮಹಾಪುರುಷನಾದ ಮಹಾನುಭಾವನಾದ ಮಹಾ ವಿಭೂತಿಮೂರ್ತಿಗಳಾದ ಬ್ರಹ್ಮಾದಿಗಳಿಗೆ ಅಧಿಪತಿಯಾದ ಭಗವಂತನಿಗೋಸ್ಕರ ನಮಸ್ಕಾರವು! ಎಲ್ಲೈ ಸಮಸ್ತರಾದ ಪರಮಭಾಗವತರ ಸಮೂಹದ ಹಸ್ತಗಳೆಂಬ ಕಮಲಗಳ ಮೊಗ್ಗುಗಳಿಂದ ಸೇವಿಸಲ್ಪಡುವ ಚರಣಾರವಿಂದ ಯುಗ್ಮವುಳ್ಳ ಉತ್ಕೃಷ್ಟನಾದ ಸರ್ವೇಶ್ವರನಾದ ನಿನಿಗೋಸ್ಕರ ನಮಸ್ಕಾರವು! ಎಂಬ ಅರ್ಥವುಳ್ಳ ಈ ಮಂತ್ರವನ್ನು ನಾರದಮುನಿಯು ಭಕ್ತನಾದ ಶರಣಾಗತನಾದ ಚಿತ್ರಕೇತುವಿಗೆ ಉಪದೇಶಂಗೈದು ಅಂಗಿರಸ್ಸಿನೊಡನೆ ಕೂಡಿ ಬ್ರಹ್ಮಲೋಕವನ್ನೈದಿದನು; ಅನಂತರದಲ್ಲಿ ಚಿತ್ರಕೇತುರಾಯನು ನಾರದೋಕ್ತಪ್ರಕಾರವಾಗಿ ಏಳುದಿವಸಗಳಲ್ಲಿ ಜಲಮಾತ್ರವನ್ನು ಭುಜಿಸುತ ಏಕಾಗ್ರಚಿತ್ತನಾಗಿ ಆ ಮಂತ್ರವನ್ನು ವಿಧಿಯಿಂದ ಜಪಿಸಿ ಆ ಮಂತ್ರದ ಪ್ರಭಾವದಿಂದ ವ್ಯತ್ರಿಯಿಲ್ಲದಂತೆ ವಿದ್ಯಾಧರಾಧಿಪತ್ಯವನ್ನು ಪಡೆದನು; ಚಿತ್ರಕೇತುರಾಯನು ಕೆಲವು ದಿವಸಗಳಲ್ಲಿ ಆ ಮಂತ್ರಶಕ್ತಿಯಿಂದ ಪ್ರಕಾಶಯುಕ್ತವಾದ ಮನಸ್ಸಿನಿಂದ ಉತ್ಕೃಷ್ಟಗಮನವುಳ್ಳವನಾಗಿ ದೇವೋತ್ತಮನಾದ ಆದಿ

ಶೇಷನ ಚರಣಾರವಿಂದ ಸನ್ನಿಧಿಯನ್ನೈದಿದನು ; ಆ ಶೇಷಲೋಕದಲ್ಲಿ ಚಿತ್ರಕೇತುವು ತಾವರೇದಂಟಿನಂತೆ ಶುಭ್ರವರ್ಣನಾಗಿ ನೀಲಾಂಬರವನ್ನುಟ್ಟು ಪ್ರಕಾಶಿಸುವ ಕಿರೀಟಗಳೂ ಭುಜಕೀರ್ತಿಗಳೂ ಕಟಿಸೂತ್ರವೂ ಹಸ್ತಕಡಗಗಳೂ ಪ್ರಸನ್ನಗಳಾದ ಮುಖಗಳೂ ರಕ್ತವರ್ಣಗಳಾದ ನೇತ್ರಗಳೂ ಉಳ್ಳವನಾಗಿ ಮಹಾಯೋಗೀಶ್ವರರ ಸಮೂಹಗಳಿಂದ ಸುತ್ತಲೂ ಸೇವಿಸಲ್ಪಡುತ ಮಹಾಪ್ರಭುವಾಗಿರುವ ಶೇಷಮೂರ್ತಿಯನ್ನು ಕಂಡನು ; ಆಗ ಆ ರಾಯನು ಶೇಷಮೂರ್ತಿಯ ದರ್ಶನದಿಂದ ಪರಿಹರಿಸಲ್ಪಟ್ಟ ಸಮಸ್ತಪಾಪಗಳುಳ್ಳವನಾಗಿ ಪರಿಶುದ್ಧವಾದ ರಾಗಾದಿರಹಿತವಾದ ಅಂತಃಕರಣವುಳ್ಳವನಾಗಿ ಪರಮಭಕ್ತಿರಸದೊಡನೆ ಕೂಡಿ ಆನಂದಬಾಷ್ಪಯುಕ್ತಗಳಾದ ನೇತ್ರಗಳುಳ್ಳವನಾಗಿ ರೋಮಾಂಚಯುಕ್ತನಾಗಿ ಆ ಆದಿಶೇಷನನ್ನು ಶರಣುಹೊಂದಿ ಅತ್ಯಂತ ಭಕ್ತಿಯಿಂದ ಬಾರಿಬಾರಿಗೂ ನಮಸ್ಕರಿಸಿ ಆ ಆದಿಶೇಷಮೂರ್ತಿಯ ಪಾದಪದ್ಮಗಳ ಪೀಠವನ್ನು ಆನಂದಬಾಷ್ಪಗಳಿಂದ ಬಾರಿಬಾರಿಗೂ ನೆನೆಯಿಸುತ ಹರ್ಷದಿಂದ ಅಡ್ಡಗೈಸಲ್ಪಟ್ಟ ಸಮಗ್ರಗಳಾದ ಅಕ್ಷರಗಳ ಉಚ್ಚಾರಣೆವುಳ್ಳವನಾಗಿರುವ ಆ ಚಿತ್ರಕೇತುರಾಯನು ಶೇಷಮೂರ್ತಿಯನ್ನು ಸ್ತುತಿಸಲೋಸುಗ ಬಹುಕಾಲ ಸಮರ್ಥನಾಗದೆ ಬುದ್ಧಿಯಿಂದ ಮನಸ್ಸನ್ನು ಸಮಾಧಾನಂಗೈದು ಸಮಸ್ತಗಳಾದ ಚಕ್ಷುರಾದಿ ಇಂದ್ರಿಯಗಳ ಬಾಹ್ಯಸಂಚಾರವನ್ನು ನಿಗ್ರಹಿಸಿ ಪುನಹಾ ಪಡೆಯಲ್ಪಟ್ಟ ವಾಕ್ಕುಳ್ಳವನಾಗಿ ಜಗದ್ಗುರುವೆಂಬ ಪಾಂಚರಾತ್ರವೆಂಬ ಆಗಮದಿಂದ ನಿರೂಪಿಸಲ್ಪಟ್ಟ ಮೂರ್ತಿಯುಳ್ಳ ಆದಿಶೇಷನನ್ನು ಕುರಿತು—ಎಲೈ ಸ್ವಾಮಿಯೇ, ನೀನು ಅನ್ಯರಿಂದ ಜಯಿಸಲ್ಪಡದಿರುವವನಾದಾಗ್ಯೂ ಸಮವಾದ ಬುದ್ಧಿಯುಳ್ಳ ಮನೋನಿಗ್ರಹವುಳ್ಳ ಭಕ್ತರಿಂದ ಅತ್ಯಂತ ದಯಾಶೀಲನಾದ್ದರಿಂದ ಸ್ವಾಧೀನನಾಗಿ ಮಾಡಲ್ಪಟ್ಟೆ ; ಯಾವ ನೀನು ಫಲಾಪೇಕ್ಷಾರಹಿತವಾದ ಮನದಿಂದ ಭಜಿಸುವ ಭಕ್ತರಿಗೆ ನಿನ್ನನ್ನೇ ಕೊಡುವೆಯೋ ಅಂಥಾ ನಿನ್ನಿಂದ ನಿಷ್ಕಾಮರಾದ ಆ ಭಕ್ತರು ಸ್ವಾಧೀನರಾಗಿ ಮಾಡಲ್ಪಟ್ಟರು ! ಎಲೈ ಭಗವಂತನೆ, ಈ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳು ನಿನ್ನ ಲೀಲೆಯೇ ಹೊರ್ತು ಮತ್ತೊಂದಲ್ಲ ; ಬ್ರಹ್ಮಾದಿಗಳಾದರೋ ಸೃಷ್ಟ್ಯಾದಿಗಳಲ್ಲಿ ಸಮರ್ಥರಲ್ಲ ; ಅವರೂ ನಿನ್ನಂಶಭೂತನಾದ ವಿರಾಟ್ಪುರುಷನ ಅಂಶಭೂತರಾಗಿದ್ದಾಗ್ಯೂ ಪ್ರತ್ಯೇಕ ಪ್ರತ್ಯೇಕವಾಗಿ ನಾವೇ ಈಶ್ವರರೆಂಬ ಅಭಿಮಾನದಿಂದ ವ್ಯರ್ಥವಾಗಿ ಪರಸ್ಪರ ಕಲಹಿಸುತಲಿಧಾರೆ ! ಎಲೈ ಸ್ವಾಮಿಯೆ, ನೀನು ಸೂಕ್ಷ್ಮವಾದ ಮೂಲಕಾರಣವಾದ ಪರಮಾಣುವಿಗೂ ಮಹತ್ತಾದ ಕಾರ್ಯಕ್ಕೂ ಸಹ ಆದಿಯಲ್ಲಿಯೂ ಮಧ್ಯದಲ್ಲಿಯೂ ಅಂತ್ಯದಲ್ಲಿಯೂ ಇದ್ದೀಯೆ ; ನೀನೇ ಆದಿಮಧ್ಯಾಂತರಹಿತನು ; ಆದಕಾರಣ ನಿತ್ಯನು. ಸತ್ಯಗಳಂತೆ ತೋರುತಲಿರುವ ಕಾರ್ಯಗಳಿಗೆ ಆದಿ ಮಧ್ಯ ಅಂತಕಾಲಗಳಲ್ಲಿ ಯಾವದು ನಾಶವಿಲ್ಲದಿರುವದೋ ಅದೇ ಸುವರ್ಣದಂತೆ ಶಾಶ್ವತವಾದಂಥಾದ್ದಾದಕಾರಣ ನೀನು ಶಾಶ್ವತನೇ ಹೊರ್ತು ನಿನ್ನಿಂದ ಸೃಜಿಸಲ್ಪಟ್ಟ ಆ ಬ್ರಹ್ಮಾದಿಗಳು ಶಾಶ್ವತರಲ್ಲ ! ಈರೀತಿ ಕಾಲಪರಿಚ್ಛೇದವಿಲ್ಲವೆಂದು ನಿರೂಪಿಸಿ ದೇಶಪರಿಚ್ಛೇದವಿಲ್ಲವೆಂದು ನಿರೂಪಿಸುವನು : ಒಂದಕ್ಕಿಂತ ಒಂದು ದಶಗುಣವಿಸ್ತಾರವುಳ್ಳವಾಗಿರುವ ಭೂಮಿ ಮೊದಲಾದ ಸಪ್ತಾವರಣಗಳಿಂದ ಸುತ್ತಲ್ಪಟ್ಟ ಬ್ರಹ್ಮಾಂಡಕೋಶವು ಅನೇಕಕೋಟಿ ಬ್ರಹ್ಮಾಂಡದೊಡನೆ ಕೂಡ ಪರಮಾಣುವಿನಂತೆ ನಿನ್ನಲ್ಲಿ ಭ್ರಮಿಸುತಲಿಧೆಯಾದಕಾರಣ ನೀನೇ ಅನಂತನೆಂದು ಹೇಳಲ್ಪಡುವೆ ! ಎಲೈ ಹರಿಯೆ, ಯಾವರೀತಿ ರಾಜಸೇವಕರ ಸಂಪತ್ತುಗಳು ರಾಜಕುಲನಾಶನಾಂತರದಲ್ಲೇ ನಷ್ಟವಾಗುವವೋ ಅದೇರೀತಿ ವಿಷಯಗಳಲ್ಲಿ ಇಚ್ಛೆಯುಳ್ಳ ಪಶುಪ್ರಾಯರಾದ ಮೂಢರು ನಿನ್ನ ವಿಭೂತಿಮೂರ್ತಿಗಳಾದ ಇಂದ್ರಾದಿಗಳನ್ನು ಉಪಾಸನಂಗೈಯುವರೇ ಹೊರ್ತು ಪರಮಾತ್ಮನಾದ ನಿನ್ನನ್ನು ಉಪಾಸನಂಗೈಯುವದಿಲ್ಲ ; ಅದೇರೀತಿ ಅಂಥಾ ಪಶುಪ್ರಾಯರಾದ ಆ ಮನುಷ್ಯರ ಸಂಪತ್ತುಗಳು ಇಂದ್ರಾದಿಗಳ ವಿಲಯಾನಂತರದಲ್ಲಿ ನಷ್ಟಗಳಾಗುವವು ! ಎಲೈ ಪರಮಪುರುಷನೆ, ಯಾವರೀತಿ ಹುರಿಯಲ್ಪಟ್ಟ ಬೀಜಗಳು ಭೂಮಿಯಲ್ಲಿ ಬಿತ್ತಲ್ಪಟ್ಟರೂ ಮೊಳೆಯುವದಿಲ್ಲವೋ ಅದೇರೀತಿ ಗುಣಸಂಬಂಧರಹಿತನಾದ ಜ್ಞಾನಸ್ವರೂಪನಾದ ನಿನ್ನಲ್ಲಿ ವಿಷಯವಾಸನೆಗಳು ಮಾಡಲ್ಪಟ್ಟಂಥಾವಾದರೂ ಆವು ದೇಹಾಂತರವನ್ನುಂಟುಮಾಡಲಾರವು ; ಯಾವಕಾರಣದಿಂದ ಈ ಜೀವನಿಗೆ ಗುಣಸಮೂಹ ಸಂಬಂಧದಿಂದಲೇ ಶೀತೋಷ್ಣಾದಿ ದ್ವಂದ್ವಸಮೂಹಗಳುಂಟಾಗುವವೋ ಅದುಕಾರಣ ಫಲಾಪೇಕ್ಷೆಯಿಂದಲಾದರೂ ನಿರ್ಗುಣನಾದ ನಿನ್ನ ಭಜನದಿಂದ ಮೆಲ್ಲಮೆಲ್ಲನೆ ಪುರುಷನಿಗೆ ಗುಣಸಂಬಂಧವಿಲ್ಲದೇ ಹೋಗುವದು ! ಎಲೈ ಹರಿಯೇ, ವಿರಕ್ತರಾಗಿ ಪರಮಾತ್ಮಸ್ವರೂಪದಲ್ಲೇ

ರಮಿಸುತಲಿರುವ ಸನಕಾದಿ ಮುನಿಗಳು ಮುಕ್ತಿಗೋಸ್ಕರ ಯಾವ ರಹಸ್ಯಧರ್ಮವನ್ನು ಆಚರಿಸುತಲಿಧಾರೆಯೋ ದೋಷರಹಿತವಾದ ಆ ಭಾಗವತಧರ್ಮವನ್ನು ಯಾವಾಗ ನೀನು ಆದಿಯಲ್ಲೇ ನಿರೂಪಿಸಿದೆಯೋ ಆಗಲೇ ನಿನ್ನಿಂದ ಸರ್ವೋತ್ಕೃಷ್ಟತ್ವವು ಸಾಧಿಸಲ್ಪಟ್ಟಿತು ; ಯಾವರೀತಿ ಕಾಮ್ಯಕರ್ಮದಲ್ಲಿ ಪುರುಷರಿಗೆ ನೀನೂ ನಾನೆಂದೂ ನನ್ನದೂ ನಿನ್ನದೆಂದೂ ವಿಷಮವಾದ ಬುದ್ಧಿಯುಂಟಾಗುವದೋ ಆರೀತಿ ಭಾಗವತಧರ್ಮದಲ್ಲಿ ವಿಷಮಬುದ್ಧಿಯುಂಟಾಗುವದಿಲ್ಲವಾದಕಾರಣ ಅದೇ ದೋಷರಹಿತವಾದದ್ದು ; ಶತ್ರುಕ್ಷಯವುಂಟಾಗಬೇಕೆಂಬ ಇಚ್ಛೆಯಿಂದ ಗೈಯಲ್ಪಟ್ಟ ಯಾವ ಶ್ಯೇನ ಯಾಗಾದಿ ಧರ್ಮವುಂಟೋ ಆ ಧರ್ಮವು ರಾಗದ್ವೇಷಾದಿ ಯುಕ್ತವಾದ್ದರಿಂದ ಪರಿಶುದ್ಧವಲ್ಲ ; ಅನಿತ್ಯವಾದ ಫಲವುಳ್ಳದ್ದರಿಂದ ನಶ್ವರವಾದದ್ದು ; ಬಹುತರ ಹಿಂಸಾದಿಗಳುಳ್ಳದ್ದರಿಂದ ಅತ್ಯಂತ ಅಧರ್ಮಯುಕ್ತವಾದದ್ದು ; ಮತ್ತು ಕಾಮ್ಯಕರ್ಮದಲ್ಲಿರುವ ದೋಷವನ್ನು ವಿಸ್ತರಿಸಿ ಹೇಳುವೆನು ; ತನಿಗೂ ಪರನಿಗೂ ಸಹಸ್ರದ್ರೋಹಂಗೈಯ್ಯುವ ಆ ಕಾಮ್ಯಕರ್ಮದಿಂದ ತನಿಗೂ ಪರನಿಗೂ ಕೂಡ ಯಾವ ಕ್ಷೇಮವಾದರೂ ಯಾವ ಪುರುಷಾರ್ಥವಾದರೂ ಉಂಟಾದೀತೆ ? ಆದರಿಂದ ಕ್ಷೇಮವೂ ಇಲ್ಲ ; ಪುರುಷಾರ್ಥವೂ ಇಲ್ಲ ; ಅತ್ಯಂತ ಕಾಯಕ್ಲೇಶದಿಂದ ಸರ್ವಾಂತರ್ಯಾಮಿಯಾದ ನಿನಿಗೆ ಉಪದ್ರವವುಂಟಾಗುವದು ; ಅದೇರೀತಿ ಪರಪೀಡೆಯಿಂದ ಅಧರ್ಮವೂ ನಿನಗೆ ಕೋಪವೂ ಉಂಟಾಗುವದು ; ಅದುಕಾರಣ ರಾಗಾದಿಗಳಿಂದ ಮೂಢನಾದ ಪುರುಷನಿಗೆ ಅತಿಪ್ರಯಾಸದಿಂದ ವೇದಮಾರ್ಗದಲ್ಲಿ ಪ್ರವೇಶವುಂಟಾಗುವದಕ್ಕೋಸ್ಕರ ನಿನ್ನಿಂದ ಕಾಮ್ಯಕರ್ಮವು ನಿರೂಪಿಸಲ್ಪಟ್ಟಿತೇಹೊರ್ತು ತತ್ವದೃಷ್ಟಿಯಿಂದ ನಿರೂಪಿಸಲ್ಪಡಲಿಲ್ಲ ; ಸ್ಥಾವರ ಜಂಗಮಾತ್ಮಕವಾದ ಪ್ರಾಣಿಗಳ ಸಮೂಹಗಳಲ್ಲಿ ಸಮಬುದ್ಧಿಯುಳ್ಳ ಪರಮಭಾಗವತರು ಯಾವ ಧರ್ಮವನ್ನಾಚರಿಸುತಲಿಧಾರೆೋ ಅಂಥಾ ಭಾಗವತ ಧರ್ಮವು ಯಾವ ಧರ್ಮವು ಯಾವ ದೃಷ್ಟಿಯಿಂದ ನಿರೂಪಿಸಲ್ಪಟ್ಟಿತೋ ನಿನ್ನ ಆ ದೃಷ್ಟಿಯು ತತ್ವಾರ್ಥವನ್ನು ಬಿಡಲಿಲ್ಲ ! ಎಲೈ ಹರಿಯೇ, ಬಂದುಬಾರಿಯಾದರೂ ಯಾವ ನಿನ್ನ ನಾಮಶ್ರವಣದಿಂದ ಚಂಡಾಲನೂಕೂಡ ಸಂಸಾರಬಂಧದಿಂದ ಮುಕ್ತನಾಗುವನೋ ಅಂಥಾ ನಿನ್ನ ದರ್ಶನದಿಂದ ಪುರುಷನಿಗೆ ಸಕಲಪಾಪ ಕ್ಷಯವಾಗುವದೆಂಬ ಈ ಅರ್ಥವು ಆಶ್ಚರ್ಯಕರವಲ್ಲ ! ಎಲೈ ಸ್ವಾಮಿಯೆ, ಅದುಕಾರಣ ನಾವು ಈಗ ಇಂಥಾ ನಿನ್ನ ದರ್ಶನದಿಂದ ಪರಿಹರಿಸಲ್ಪಟ್ಟ ಚಿತ್ತ ದೋಷಗಳುಳ್ಳವರಾಗಿ ಕೃತಾರ್ಥರಾದೆವು ; ನಿನ್ನ ಭಕ್ತನಾದ ನಾರದಮುನಿಯಿಂದ ಯಾವ ಅರ್ಥವು ನಿರೂಪಿಸಲ್ಪಟ್ಟಿತೋ ಆ ಅರ್ಥವು ಎಂತು ಅಸತ್ಯವಾಗುವದು ! ಎಲೈ ಅನಂತಮೂರ್ತಿಯೆ, ಸರ್ವಪ್ರಕಾಶಕನಾದ ಸೂರ್ಯನಿಗೆ ಮಿಂಚುಹುಳು ಖದ್ಯೋತಗಳಿಂದ ಯಾವರೀತಿ ಪ್ರಕಾಶಂಗೈಯ್ಯುವದಿಲ್ಲವೋ ಅದೇರೀತಿ ಸರ್ವಪ್ರಪಂಚಾತ್ಮಕನಾದ ಪರಮಗುರುವಾದ ನಿನಗೆ ಈ ಪ್ರಪಂಚವಲ್ಲಿ ಸಮಸ್ತ ವ್ಯಾಪಾರವೂ ತಿಳಿಯಲ್ಪಟ್ಟಧೆಯಾದಕಾರಣ ನಮ್ಮಂಥಾ ಜನರಿಂದ ವಿಜ್ಞಾಪಿಸತಕ್ಕದ್ದೇನಿದೆ ; ಸಮಸ್ತವಾದ ಜಗತ್ತಿನ ಉತ್ಪತ್ತಿ ಸ್ಥಿತಿ ಲಯಗಳಲ್ಲಿ ಸಮರ್ಥನಾಗಿ ನಿಕೃಷ್ಟರಾದ ಯೋಗಿಗಳಿಗೆ ಭೇದದೃಷ್ಟಿಯಿಂದ ತಿಳಿಯಲ್ಪಡದಿರುವ ನಿಜತತ್ವವುಳ್ಳವನಾಗಿ ಪರಬ್ರಹ್ಮನಾಗಿರುವ ಭಗವಂತನಾದ ನಿನಿಗೋಸ್ಕರ ನಮಸ್ಕಾರವು ! ಚೇಷ್ಟಾಯುಕ್ತನಾಗುವ ಯಾವ ನಿನ್ನನ್ನು ಅನುಸರಿಸಿ ಬ್ರಹ್ಮಾದಿಗಳು ಚೇಷ್ಟಿಸುತಲಿಧಾರೋ ನೋಡುತಲಿರುವ ಯಾವ ನಿನ್ನನ್ನು ಚಕ್ಷುರಾದಿ ಜ್ಞಾನೇಂದ್ರಿಯಗಳು ಸ್ಫುಟವಾಗಿ ನೋಡುತಲಿವೆಯೋ ಈ ಭೂಮಂಡಲವು ಯಾವ ನಿನ್ನ ಶಿರಸ್ಸಿನಲ್ಲಿ ಸಾಸಿವೆಯಕಾಳಿನಂತೆ ತೋರುತಲಿಧೆಯೋ ಸಹಸ್ರ ಶಿರಸ್ಸುಗಳುಳ್ಳ ಅಂಥಾ ಭಗವಂತನಾದ ನಿನಗೋಸ್ಕರ ನಮಸ್ಕಾರವು—ಎಂದು ಚಿತ್ರಕೇತುರಾಯನಿಂದ ಸ್ತುತಿಸಲ್ಪಟ್ಟವನಾಗಿ ಶೇಷಮೂರ್ತಿಯು ಸಂತುಷ್ಟನಾಗಿ ವಿದ್ಯಾಧರಾಧಿಪತಿಯಾದ ಆ ಚಿತ್ರಕೇತುವನ್ನು ಕುರಿತು 'ಎಲೈ ಚಿತ್ರಕೇತುರಾಯನೇ, ಅಂಗಿರಸ್ಸು ನಾರದ ಮುನಿಗಳಿಂದ ನಿನಿಗೋಸ್ಕರ ನನ್ನ ವಿಷಯವಾಗಿ ಯಾವ ಉಪದೇಶವು ಮಾಡಲ್ಪಟ್ಟಿತೋ ಆ ತತ್ವೋಪದೇಶದಿಂದಲೂ ಆ ಮಂತ್ರದಿಂದಲೂ ಈಗ ನನ್ನ ದರ್ಶನದಿಂದಲೂಕೂಡ ನೀನು ಕೃತಾರ್ಥನಾದೆ ; ಯಾವಕಾರಣದಿಂದ ನಾನು ಸಮಸ್ತ ಭೂತಗಳಿಗೆ ಪ್ರಕಾಶಕನಾಗಿ ಕಾರಣನಾಗಿಧೇನೋ ಅದುಕಾರಣ ಸಕಲ ಭೂತಗಳೂ ನಾನೇ ; ಆ ಭೂತಗಳನ್ನನುಭವಿಸುವವನೂ ಕೂಡಾ ನಾನೇ ಸರಿ ; ಭೋಕ್ತೃ ಭೋಗ್ಯಾತ್ಮಕವಾದ ಸಮಸ್ತ ಪ್ರಪಂಚವು ನನಗಿಂತಲೂ ವ್ಯತಿರಿಕ್ತವಾಗಿಲ್ಲ ; ಸರ್ವಪ್ರಕಾಶಕನಾದ ಶಬ್ದಬ್ರಹ್ಮನೂ ಮೂಲಕಾರಣವಾದ ಪರಬ್ರಹ್ಮನೂ ಇವರಿಬ್ಬರೂ

ಶಾಶ್ವತಗಳಾದ ನನ್ನ ದೇಹಗಳೆಂದು ತಿಳಿ; ಭೋಗ್ಯವಾದ ಪ್ರಪಂಚದಲ್ಲಿ ಭೋಕ್ತೃರೂಪದಿಂದ ವ್ಯಾಪಿಸಿಕೊಂಡಿರುವ ಜೀವಾತ್ಮನನ್ನು ಅದೇರೀತಿ ಆ ಜೀವಾತ್ಮನಲ್ಲಿ ಭೋಗ್ಯರೂಪದಿಂದ ವ್ಯಾಪಿಸಿಕೊಂಡಿರುವ ಪ್ರಪಂಚವನ್ನೂ ಪುರುಷನು ನೋಡುವವನಾಗಬೇಕು; ಈ ಜೀವಾತ್ಮ ಪ್ರಪಂಚಗಳೆರಡನ್ನೂ ಕಾರಣಾತ್ಮಕನಾದ ನನ್ನಿಂದ ವ್ಯಾಪಿಸಲ್ಪಟ್ಟಂಥಾವನ್ನಾಗಿಯೂ ನನ್ನಲ್ಲೇ ಕಲ್ಪಿಸಲ್ಪಟ್ಟಂಥಾವನ್ನಾಗಿಯೂ ಪುರುಷನು ನೋಡಬೇಕು; ನಿದ್ರೆಗೈಯ್ಯುವ ಪುರುಷನು ಯಾವರೀತಿ ಸ್ವಪ್ನದಲ್ಲಿ ಪ್ರದೇಶಾಂತರದಲ್ಲಿರುವ ಪರ್ವತವನಾದಿರೂಪವಾದ ಪ್ರಪಂಚವನ್ನು ತನ್ನಲ್ಲಿ ನೋಡುತ ಆ ಸ್ವಪ್ನದಲ್ಲಿ ಎಚ್ಚರಗೊಂಡವನಾಗಿ ತನ್ನನ್ನು ಹಾಸಿಗೆಯಲ್ಲಿರುವವನನ್ನಾಗಿ ತಿಳಿಯುತ ಜಾಗ್ರದವಸ್ಥೆಯನ್ನನುಭವಿಸುವನೋ ಅದೇರೀತಿ ಪ್ರಸಿದ್ಧಗಳಾದ ಜಾಗ್ರದಾದಿಗಳೆಂಬ ಜೀವೋಪಾಧಿಯಾದ ಬುದ್ಧಿಯ ಅವಸ್ಥಾವಿಶೇಷಗಳು ಆತ್ಮನ ಮಾಯಾಮಾತ್ರದಿಂದ ಕಲ್ಪಿತಗಳೇ ಸರಿಯೆಂದು ತಿಳಿದು ಆ ಜಾಗ್ರದಾದಿಗಳಿಗೆ ಸಾಕ್ಷಿಯಾದ ಆ ಜಾಗ್ರದಾದಿ ಅವಸ್ಥೆಗಳಿಲ್ಲದಿರುವ ಪರಮಾತ್ಮನನ್ನು ಸ್ಮರಿಸಬೇಕು; ನಿದ್ರೆಗೈಯ್ಯುವ ಜೀವನು ಯಾವ ರೂಪದಿಂದ ನಿದ್ರಾಕಾಲದಲ್ಲಿ ತನ್ನ ನಿದ್ರೆಯನ್ನೂ ಇಂದ್ರಿಯ ಗೋಚರವಲ್ಲದಿರುವ ಸುಖವನ್ನೂ ತಿಳಿಯುತಲಿಧಾನೋ ಅಂಥಾ ಜೀವಾತ್ಮಸ್ವರೂಪವನ್ನೇ ಬ್ರಹ್ಮನಾದ ನನ್ನನ್ನಾಗಿ ತಿಳಿಯುವನಾಗು; ನಿದ್ರೆಯನ್ನೂ ಜಾಗ್ರತೆಯನ್ನೂ ಸಹಾ ಅನುಸಂಧಾನಗೈಯ್ಯುವ ಪುರುಷನ ಆ ನಿದ್ರಾ ಜಾಗ್ರತೆಗಳಿಗೆ ಪ್ರಕಾಶವಾದ ರೂಪದಿಂದ ಯಾವ ಜ್ಞಾನವು ಅನುವರ್ತಿಸಿಕೊಂಡು ಆ ನಿದ್ರಾ ಜಾಗ್ರತೆಗಳಿಗಿಂತಲೂ ವ್ಯತಿರಿಕ್ತವಾಗಿ ಚ್ಯುತಿಯಿಲ್ಲದಿಹದೋ ಅಂಥಾ ಜ್ಞಾನವೂ ಪರಬ್ರಹ್ಮನೂ ನಾನೇಹೊರ್ತು ಮತ್ತೊಂದಲ್ಲವೆಂದು ತಿಳಿಯುವನಾಗು; ಇಂಥಾ ಬ್ರಹ್ಮನಾದ ನನ್ನ ಸ್ವರೂಪವು ಯಾವಾಗ ಪುರುಷನಿಂದ ಮರೆಯಲ್ಪಡುವದೋ ಆಗ ಆ ಬ್ರಹ್ಮಸ್ವರೂಪವು ಜೀವಾತ್ಮನಿಗಿಂತಲೂ ಪ್ರತ್ಯೇಕವಾಗಿ ತೋರುವದು; ಆದಕಾರಣ ಅಭೇದಜ್ಞಾನದಿಂದ ಪುರುಷನಿಗೆ ಈ ಜನ್ಮಕ್ಕಿಂತಲೂ ಅನಂತರದಲ್ಲಿ ಮತ್ತೊಂದು ಜನ್ಮವೂ ಮೃತಿಗಿಂತಲೂ ಅನಂತರದಲ್ಲಿ ಪುನಹಾ ಮೃತಿಯೂ ಈರೀತಿ ಸಂಸಾರಬಂಧವುಂಟಾಗುವದು; ಯಾವ ಪುರುಷನು ಈ ಲೋಕದಲ್ಲಿ ಶಾಸ್ತ್ರಜನ್ಯಜ್ಞಾನ ಬ್ರಹ್ಮಾಪರೋಕ್ಷಜ್ಞಾನಗಳಿಗೆ ಜನ್ಮಭೂಮಿಯಾದ ಮನುಷ್ಯಜನ್ಮವನ್ನು ಪಡೆದು ಆತ್ಮತತ್ವವನ್ನು ತಿಳಿಯುವನಾಗುವದಿಲ್ಲವೋ ಆ ಪುರುಷನು ಎಂದಿಗೂ ಮೋಕ್ಷವನ್ನೈದುವನಾಗನು; ಆದುಕಾರಣ ವಿವೇಕಿಯಾದ ಪುರುಷನು ಪ್ರವೃತ್ತಿಮಾರ್ಗದಲ್ಲಿ ಅತ್ಯಂತ ಕ್ಲೇಶವನ್ನೂ ಅದರಿಂದುಂಟಾಗುವ ವಿಪರೀತ ಫಲವನ್ನೂ ಸಹಾ ಸ್ಮರಿಸಿಕೊಂಡು ನಿವೃತ್ತಿಮಾರ್ಗದಲ್ಲಿ ಮೋಕ್ಷವುಂಟಾಗುವದೆಂದು ತಿಳಿದು ಫಲಸಂಕಲ್ಪದದೆಸೆಯಿಂದ ಪರಾಙ್ಮುಖನಾಗಬೇಕು; ಲೋಕದಲ್ಲಿ ದಂಪತಿಗಳು ಸುಖಕ್ಕೋಸ್ಕರಲೂ ದುಃಖನಿವೃತ್ತಿಗೋಸ್ಕರಲೂ ಕರ್ಮಗಳನ್ನೈದುತಲಿಧಾರೆ; ಆ ಕರ್ಮಗಳಿಂದ ದುಃಖನಿವೃತ್ತಿಯೂ ಸುಖಪ್ರಾಪ್ತಿಯೂ ಇಲ್ಲ; ಶ್ರೇಯಸ್ಸಾಧನ ವಿಷಯದಲ್ಲಿ ನಾವೇ ನಿಪುಣರೆಂದು ಅಭಿಮಾನಯುಕ್ತರಾದ ಮನುಷ್ಯರಿಗೆ ಈರೀತಿ ಉಂಟಾಗುವ ವಿಪರೀತ ಫಲವನ್ನೂ ಜಾಗ್ರದಾದಿ ಸ್ಥಿತಿತ್ರಯಕ್ಕಿಂತಲೂ ವಿಲಕ್ಷಣನಾದ ಸೂಕ್ಷ್ಮನಾದ ಪರಮಾತ್ಮಸ್ಥಿತಿಯನ್ನೂ ತಿಳಿದು ಇಹಲೋಕ ಪರಲೋಕಗಳಲ್ಲುಂಟಾಗುವ ವಿಷಯಭೋಗಗಳಲ್ಲಿ ವಿರಕ್ತನಾಗಿ ವಿವೇಕಬಲದಿಂದ ಶಾಸ್ತ್ರಜನ್ಯಜ್ಞಾನ ಬ್ರಹ್ಮಾಪರೋಕ್ಷಜ್ಞಾನಗಳಿಂದ ಸಂತುಷ್ಟನಾದ ಪುರುಷನು ನನ್ನ ಭಕ್ತನಾಗಬೇಕು; ಪರಮಾತ್ಮನಿಗೂ ಜೀವಾತ್ಮನಿಗೂ ಸಹಾ ಐಕ್ಯವನ್ನು ತಿಳಿಯುವದು ಯಾವದುಂಟೋ ಅದೇ ನಮಗೆ ಪರಮಪುರುಷಾರ್ಥವೆಂದು ಯೋಗಗಳಲ್ಲಿ ಸಮರ್ಥವಾದ ಬುದ್ಧಿಯುಳ್ಳ ಪುರುಷರಿಂದ ಸರ್ವಭಾವದಿಂದಲೂ ತಿಳಿಯತಕ್ಕದ್ದು! ಎಲೈ ಚಿತ್ರಕೇತುರಾಯನೇ, ನೀನು ಅಪ್ರಮತ್ತನಾಗಿ ಶಾಸ್ತ್ರಜನ್ಯ ಬ್ರಹ್ಮಾಪರೋಕ್ಷಗಳೊಡನೆ ಯುಕ್ತನಾಗಿ ಶ್ರದ್ಧೆಯಿಂದ ಈ ನನ್ನ ಉಪದೇಶವಚನದ ಅರ್ಥವನ್ನು ಭಾವಿಸುತಿದ್ದರೆ ಶೀಘ್ರದಿಂದ ಕೃತಾರ್ಥನಾಗುತ್ತೀ ಎಂದು" ಭಗವಂತನಾಗಿ ಜಗದ್ಗುರುವಾಗಿ ಸರ್ವಾತ್ಮಕನಾದ ಶ್ರೀಹರಿಯು ತತ್ವೋಪದೇಶದಿಂದ ಚಿತ್ರಕೇತುವನ್ನು ಕುರಿತು ಸಮಾಧಾನಗೈದು ಅವನು ನೋಡುತ್ತಿರಲು ಅಲ್ಲೇ ಅಂತರ್ಧಾನವನ್ನೈದಿದನು.

೧೭ ನೇ ಅಧ್ಯಾಯ.

ಚಿತ್ರಕೇತುರಾಯನು ಪಾರ್ವತಿಯ ಶಾಪದಿಂದ ವೃತ್ರಾಸುರಭಾವವನ್ನೈದಿದ್ದು.

ಅನಂತರದಲ್ಲಿ ಆ ವಿದ್ಯಾಧರಾಧಿಪತಿಯಾದ ಚಿತ್ರಕೇತುರಾಯನು ಯಾವದಿಕ್ಕಿನಲ್ಲಿ ಆ ಶೇಷಮೂರ್ತಿಯು ಅಂತರ್ಧಾನವನ್ನೈದಿದನೋ ಆ ದಿಕ್ಕಿಗೆ ನಮಸ್ಕಾರಂಗೈದು ಖೇಚರನಾಗಿ ಸಂಚರಿಸಿದನು ; ಅನಂತರದಲ್ಲಿ ಮಹಾಯೋಗಿಯಾದ ಆ ಚಿತ್ರಕೇತುರಾಯನು ಅನೇಕ ಕೋಟಿ ವರ್ಷಗಳು ಉಪಹತಿಯಿಲ್ಲದಿರುವ ದೇಹಶಕ್ತಿಯು ಇಂದ್ರಿಯ ಶಕ್ತಿಯು ಉಳ್ಳವನಾಗಿ ಮುನಿಗಳಿಂದಲೂ ಸಿದ್ಧಚಾರಣರಿಂದಲೂ ಸ್ತೋತ್ರಂಗೈಯಲ್ಪಡುತ ಸಂಕಲ್ಪಮಾತ್ರದಿಂದುಂಟಾಗುವ ನಾನಾವಿಧ ಸಿದ್ಧಿಗಳುಳ್ಳ ಹಿಮವತ್ಪರ್ವತದ ವನಗಳಲ್ಲಿ ವಿದ್ಯಾಧರ ಸ್ತ್ರೀಯರಿಂದ ಪರಮೇಶ್ವರನಾದ ಶ್ರೀಹರಿಯನ್ನು ಗಾನಪೂರ್ವಕವಾಗಿ ಸ್ತೋತ್ರಂಗೈಯುತ ಕ್ರೀಡಿಸಿದನು ! ಈರೀತಿ ಚಿತ್ರಕೇತುವು ಶ್ರೀಹರಿಯಿಂದ ಕೊಡಲ್ಪಟ್ಟ ಹೊಳೆಯುತಲಿರುವ ತನ್ನ ವಿಮಾನದಿಂದ ಸಂಚರಿಸುತ ಒಂದು ಸಮಯದಲ್ಲಿ ಸಿದ್ಧಚಾರಣರಿಂದ ಸುತ್ತಲೂ ಸೇವಿಸಲ್ಪಡುತ ಋಷಿಗಳ ಸಭೆಯಲ್ಲಿ ಎಡದ ತೊಡೆಯಲ್ಲಿರುವ ಪಾರ್ವತೀದೇವಿಯನ್ನೂ ವಾಮ ಭುಜದಿಂದ ಆಲಿಂಗನಂಗೈದು ಕುಳಿತಿರುವ ಶ್ರೀರುದ್ರಮೂರ್ತಿಯನ್ನೂ ಕಂಡು ಆ ಶ್ರೀ ರುದ್ರಮೂರ್ತಿಯ ಸಮೀಪದಲ್ಲಿ ನಿಂತು ಪಾರ್ವತೀದೇವಿಯು ಕೇಳುತ್ತಿರಲು ರುದ್ರಮೂರ್ತಿಯನ್ನು ಕುರಿತು "ಎಲೈ ನೋಡಿದಿರಾ, ಸಾಕ್ಷಾತ್ ಲೋಕಗುರುವಾದ ಧರ್ಮೋಪದೇಶ ಕರ್ತೃವಾದ ಪುರುಷರಲ್ಲಿ ಮುಖ್ಯನಾದ ಈ ರುದ್ರಮೂರ್ತಿಯು ಸಭೆಯಲ್ಲಿ ಪತ್ನಿಯೊಡನೆ ಕೂಡಿಧಾನೆ ; ಜಟಾಧಾರಿಯಾಗಿ ತೀಕ್ಷ್ಣವಾದ ತಪಸ್ಸುಳ್ಳವನಾಗಿ ಬ್ರಹ್ಮಸ್ವರೂಪವನ್ನು ಉಪದೇಶಂಗೈಯುವನಾಗಿ ಸಭಾಪತಿಯಾಗಿರುವ ಈ ರುದ್ರನು ಪಾಮರನಂತೆ ಲಜ್ಜಾರಹಿತನಾಗಿ ಕಾಂತೆಯನ್ನು ತೊಡೆಯಲ್ಲಿರಿಸಿಕೊಂಡಿಧಾನೆ; ಲೋಕದಲ್ಲಿ ಪ್ರಾಕೃತನಾದ ಪುರುಷನುಕೂಡ ಬಹುತರವಾಗಿ ಏಕಾಂತದಲ್ಲೇ ಕಾಂತೆಯನ್ನು ತೊಡೆಯಲ್ಲಿ ವಹಿಸುವನು; ಮಹಾ ವ್ರತನಿಷ್ಠನಾದ ಈ ರುದ್ರಮೂರ್ತಿಯಾದರೋ ಮಹಾ ಸಭೆಯಲ್ಲಿ ಸ್ತ್ರೀಯನ್ನು ತೊಡೆಯಲ್ಲಿರಿಸಿಕೊಂಡಿಧಾನೆ" ಎಂದು ನುಡಿದನು.

ಆ ವಚನವನ್ನು ಕೇಳಿ ಗಂಭೀರವಾದ ಬುದ್ಧಿಯುಳ್ಳ ಭಗವಂತನಾದ ಶ್ರೀ ರುದ್ರನು ಆ ಸಭೆಯಲ್ಲಿ ಸುಮ್ಮನಿದ್ದನು ; ಆಗ ಆ ಸಭೆಯಲ್ಲಿರುವ ದೇವರ್ಷಿಗಳೂ ಸಹಾ ಆ ಸ್ವಾಮಿಯಾದ ರುದ್ರನಂತೆ ಸುಮ್ಮನೆ ಕೇಳುತಲಿದ್ದರು ; ಪರಮೇಶ್ವರನ ಪ್ರಭಾವವನ್ನು ಅರಿಯದಿರುವ ಆ ಚಿತ್ರಕೇತು ಈರೀತಿ ದುರ್ವಾಕ್ಯವನ್ನು ನುಡಿಯುತ್ತಿರಲು ಆ ಸಮಯದಲ್ಲಿ ಪಾರ್ವತೀದೇವಿಯು ಕೋಪದಿಂದ ನಾನೇ ಜಿತೇಂದ್ರಿಯನೆಂಬ ಅಭಿಮಾನವುಳ್ಳ ದುಷ್ಟನಾದ ಆ ಚಿತ್ರಕೇತುವನ್ನು ಕುರಿತು ವಿಶೇಷದಿಂದ ವಿಶುದ್ಧಕರ್ಮವನ್ನಾಚರಿಸುವ ಈ ವಿದ್ಯಾಧರನು ಲೋಕದಲ್ಲಿ ಈಗ ಲಜ್ಜಾರಹಿತರಾದ ನಮ್ಮಂಥಾವರಿಗೆ ಪ್ರಭುವಾಗಿ ನಿಯಾಮಕನಾಗಿ ದಂಡಿಸುವನಾಗಿಧಾನೆ ; ಯಾವ ಬ್ರಹ್ಮಾದಿಗಳು ಶಾಸ್ತ್ರಾರ್ಥವನ್ನತಿಕ್ರಮಿಸಿ ನಡೆಯುವ ಸ್ವಭಾವವುಳ್ಳ ಪರಮೇಶ್ವರನನ್ನು ತಡೆಯುವರಾಗುವದಿಲ್ಲವೋ ಅಂಥಾ ಬ್ರಹ್ಮನೂ ಬ್ರಹ್ಮನಿಗೆ ಪುತ್ರರಾದ ಭೃಗು ನಾರದಾದಿಗಳೂ ಸನತ್ಕುಮಾರನೂ ಕಪಿಲಮುನಿಯೂ ಸ್ವಾಯಂಭುವ ಮನುವೂ ಸಹಾ ಆ ಧರ್ಮಸ್ವರೂಪವನ್ನರಿಯರು ; ಈ ಕ್ಷತ್ರಿಯಾಧಮನು ಈರೀತಿ ಜ್ಞಾನಿಗಳನ್ನು ತಿರಸ್ಕರಿಂಗೈದು ಈ ಬ್ರಹ್ಮಾದಿಗಳಿಂದ ಧ್ಯಾನಂಗೈಯಲು ಯೋಗ್ಯವಾದ ಪಾದಾರವಿಂದವುಳ್ಳ ಪರಮಧರ್ಮಮೂರ್ತಿಯಾದ ಜಗದ್ಗುರುವಾದ ಪರಮೇಶ್ವರನನ್ನು ಯಾವ ಕಾರಣದಿಂದ ನಿಂದಿಸುತಲಿಧಾನೋ ಅದುಕಾರಣ ಈ ದುಷ್ಟನು ದಂಡಿಸಲು ಯೋಗ್ಯನಲ್ಲವೆ ; ಯಾವಕಾರಣ ಈ ದುಷ್ಟನು ತಾನೇ ಮಹಾತ್ಮನೆಂದು ನಿಶ್ಚಯಿಸಲ್ಪಟ್ಟ ಬುದ್ಧಿಯುಳ್ಳವನಾಗಿ ಅತ್ಯಂತ ಶಠನಾಗಿಧಾನೋ ಅದುಕಾರಣ ಇವನು ಸತ್ಪುರುಷರಿಂದ ಸೇವಿಸಲ್ಪಡುವ ಶ್ರೀಹರಿಯ ಪಾದಾರವಿಂದಗಳ ಭಜನಕ್ಕೆ ಯೋಗ್ಯನಲ್ಲ ; ಆದ್ದರಿಂದ 'ಎಲೈ ಮಗನೆ ಯಾವರೀತಿಯಿಂದ ನೀನು ಈ ಲೋಕದಲ್ಲಿ ಪುನಹಾಮಹಾತ್ಮರಿಗೆ ಅಪರಾಧಂಗೈಯುವನಾಗುವದಿಲ್ಲವೋ ಆರೀತಿ ಎಲೈ ದುರ್ಬುದ್ಧಿಯುಳ್ಳವನೇ ನೀನು ಪಾಪಯುಕ್ತವಾದ ಅಸುರಯೋನಿಯನ್ನೈದುವನಾಗು ' ಎಂದು ಈರೀತಿ ಪಾರ್ವತಿಯಿಂದ ಶಪಿಸಲ್ಪಟ್ಟವನಾಗಿ ಆ ಚಿತ್ರಕೇತುರಾಯನು ವಿಮಾನದಿಂದ

ಇಳಿದು ನಮ್ರನಾದ ಶಿರಸ್ಸಿನಿಂದ ಪಾರ್ವತೀದೇವಿಯನ್ನು ಪ್ರಸನ್ನಳಂಗೈದು 'ಎಲೈ ದೇವಿಯೆ, ನಿನ್ನ ಶಾಪವನ್ನು ನಾನು ಅಂಜಲಿಯಿಂದ ಪರಿಗ್ರಹಿಸುತ್ತೇನೆ ; ದೇವತೆಗಳಿಂದ ಮನುಷ್ಯರಿಗೋಸ್ಕರ ಯಾವದು ನಿರೂಪಿಸಲ್ಪಡುವದೋ ಅದು ಅವನಿಗೆ ಪ್ರಾಚೀನಕರ್ಮದಿಂದ ಲಬ್ಧವಾದಂಥಾದ್ದೇ ಸರಿ ; ಪ್ರಾಣಿಯು ಈ ಸಂಸಾರಚಕ್ರದಲ್ಲಿ ಅಜ್ಞಾನದಿಂದ ಮೋಹಿತನಾಗಿ ಸುತ್ತುತ ಸಮಸ್ತದೇಶಗಳಲ್ಲಿಯೂ ಸಮಸ್ತಕಾಲಗಳಲ್ಲಿಯೂ ದುಃಖವನ್ನೂ ಸುಖವನ್ನೂ ಸಹಾ ಅನುಭವಿಸುತಲಿಧಾನೆ ; ಆದಕಾರಣ ಇದು ಸಂಸಾರಸ್ವಭಾವವೇ ಸರಿ ; ಈ ಶಾಪಪ್ರಧಾನವು ನಿನ್ನ ದೋಷವೂ ಅಲ್ಲ; ನನ್ನ ದೋಷವೂ ಅಲ್ಲ ; ಆತ್ಮನಿಗೆ ಯಾವವನು ಸುಖವನ್ನೂ ದುಃಖವನ್ನೂ ಸಹಾ ಕಲ್ಪಿಸುವನೋ ಅವನನ್ನು ನಾನು ಕಾಣುವದಿಲ್ಲ ; ಅಜ್ಞಾನಾದ ಪುರುಷನು ಈ ಸುಖ ದುಃಖಗಳಿಗೆ ತನ್ನನ್ನೂ ಪರರನ್ನೂ ಸಹಾ ಕರ್ತೃವನ್ನಾಗಿ ತಿಳಿಯುತಲಿಧಾನೆ ; ಮಾಯಾಸ್ವರೂಪಗಳಾದ ತ್ರಿಗುಣಗಳ ಪ್ರವಾಹರೂಪವಾದ ಈ ಸಂಸಾರದಲ್ಲಿ ಯಾವದು ಶಾಪವು ಯಾವದು ಅನುಗ್ರಹವು ಯಾವದು ಸ್ವರ್ಗವು ಯಾವದು ನರಕವು ಯಾವದು ಸುಖವು ಯಾವದು ದುಃಖವು ವಸ್ತುತಃ ಇವುಗಳಲ್ಲಿ ಒಂದೂ ಸತ್ಯವಲ್ಲ ; ಬಂಧಾದಿರಹಿತನಾದ ಒಬ್ಬನಾದ ಪರಮೇಶ್ವರನು ತನ್ನ ಮಾಯೆಯಿಂದ ಸಮಸ್ತ ಪ್ರಾಣಿಗಳನ್ನೂ ಸೃಜಿಸಿ ಆ ಪ್ರಾಣಿಗಳಿಗೆ ಬಂಧವನ್ನೂ ಮೋಕ್ಷವನ್ನೂ ಸುಖವನ್ನೂ ದುಃಖವನ್ನೂ ಸಹಾ ಕಲ್ಪಿಸುತಲಿಧಾನೆ ; ನಿಸ್ಸಂಗನಾದ ಸರ್ವತ್ರ ಸಮನಾದ ಆ ಪರಮೇಶ್ವರನಿಗೆ ಪ್ರಿಯನೂ ಅಪ್ರಿಯನೂ ಜ್ಞಾತಿಯೂ ಬಂಧುವೂ ಸ್ವಕೀಯನೂ ಪರಕೀಯನೂ ಒಬ್ಬನೂ ಇಲ್ಲವಾದ್ದರಿಂದ ಇಂಥಾ ನಿಸ್ಸಂಗನಾದ ಪರಮಾತ್ಮನಿಗೆ ಎಂತು ರಾಗವು ಸಂಭವಿಸುವದು ; ಎಂತು ದೋಷವು ಸಂಭವಿಸುವದು ; ಆದಾಗ್ಯೂ ಈಶ್ವರನ ಮಾಯೆಯಿಂದುಂಟಾದ ಪುಣ್ಯಪಾಪರೂಪವಾದ ಕರ್ಮವೇ ಈ ಪ್ರಾಣಿಗಳಿಗೆ ಸುಖ ದುಃಖ ಹಿತ ಅಹಿತ ಬಂಧ ಮೋಕ್ಷ ಜನ್ಮ ಮರಣ ಸಂಸ್ಕಾರಗಳನ್ನು ಕಲ್ಪಿಸುವದಕ್ಕೆ ಸಮರ್ಥವಾಗುತಲಿಧೆ ! ಎಲೈ ದಯಾಶೀಲೆಯಾದ ದೇವಿಯೆ, ನಾನು ಕೇವಲವಾಗಿ ನಿನ್ನ ಪ್ರಸಾದವನ್ನು ಅಪೇಕ್ಷಿಸುವೆನೇ ಹೊರ್ತು ಶಾಪಪರಿಹಾರವನ್ನು ಅಪೇಕ್ಷಿಸುವನಲ್ಲ ; ಆದ್ದರಿಂದ ನನ್ನಿಂದ ಹೇಳಲ್ಪಟ್ಟ ವಚನಾಪರಾಧವನ್ನು ಕ್ಷಮಿಸು ' ಎಂದು ಆ ಚಿತ್ರಕೇತುವು ಈರೀತಿ ಪಾರ್ವತಿ ಪರಮೇಶ್ವರರನ್ನು ಪ್ರಸನ್ನರಂಗೈದು ಅವರು ಆಶ್ಚರ್ಯಯುಕ್ತರಾಗಿ ನೋಡುತ್ತಿರಲು ಅಲ್ಲಿಂದ ವಿಮಾನದಿಂದ ತೆರಳಿದನು ; ಅನಂತರದಲ್ಲಿ ಭಗವಂತನಾದ ಶ್ರೀರುದ್ರನು ದೇವ ಋಷಿ ಸಿದ್ಧ ದೈತ್ಯರು ಪ್ರಮಥನಾಥರು ಕೇಳುತ್ತಿರಲು ಪಾರ್ವತಿಯನ್ನು ಕುರಿತು 'ಎಲೈ ಪಾರ್ವತೀದೇವಿಯೆ , ಆಶ್ಚರ್ಯಕರವಾದ ಧರ್ಮವುಳ್ಳ ಶ್ರೀಹರಿಯ ದಾಸರಿಗೆ ದಾಸರಾದ ನಿಸ್ಪೃಹರಾದ ಮಹಾತ್ಮರ ಮಹಿಮೆಯನ್ನು ನೀನು ನೋಡಿದೆಯೋ ! ಸ್ವರ್ಗ ಮೋಕ್ಷ ನರಕಗಳಲ್ಲಿಯೂ ಫಲವು ಸಮವೇ ಸರಿಯೆಂದು ತಿಳಿಯುವ ಸ್ವಭಾವವುಳ್ಳವರಾಗಿ ನಾರಾಯಣನಲ್ಲೇ ಪರಮಭಕ್ತಿಯುಳ್ಳವರಾಗಿರುವ ಮಹಾತ್ಮರು ಬಂದರಿಂದಲೂ ಭಯಪಡುವರಲ್ಲ ; ಪ್ರಾಣಿಗಳಿಗೆ ಈಶ್ವರಮಾಯೆಯಿಂದ ಪ್ರಾಪ್ತವಾದ ಶರೀರಸಂಬಂಧದಿಂದ ಸುಖ ದುಃಖಗಳು ಜನ್ಮ ಮರಣಗಳು ಶಾಪಾನುಗ್ರಹಗಳು ಇವೇ ಮೊದಲಾಗುಳ್ಳ ದ್ವಂದ್ವಗಳು ಸಂಭವಿಸುತಲಿವೆ ; ಆ ಸುಖದುಃಖಾದಿ ದ್ವಂದ್ವಾದಿಗಳಲ್ಲಿ ಇದು ಇಷ್ಟವು ಇದು ಅಯಿಷ್ಟವು ಎಂಬ ಭೇದದಂತೆ ಯಾವದು ತೋರುತಲಿಧೆಯೋ ಆ ಭೇದವು ಮತ್ತು ಆತ್ಮನಲ್ಲಿ ತೋರುವ ಸುಖದುಃಖಾದಿ ಭೇದವೂ ಕೂಡಾ ಪುರುಷನ ಸ್ವಪ್ನದಲ್ಲಿ ತೋರುವ ಸುಖದುಃಖಾದಿ ಭೇದದಂತೆ ಅವಿವೇಕದಿಂದ ಕಲ್ಪಿಸಲ್ಪಡುತಲಿಧೆ ; ಆದ್ದರಿಂದ ಭಗವಂತನಲ್ಲಿ ಭಕ್ತಿಯುಕ್ತವಾದ ಜ್ಞಾನ ವೈರಾಗ್ಯಬಲವುಳ್ಳ ಪುರುಷರಿಗೆ ಈ ಲೋಕದಲ್ಲಿ ಇದು ಉತ್ಕೃಷ್ಟವೆಂಬ ಬುದ್ಧಿಯಿಂದ ಆಶ್ರಯಿಸತಕ್ಕ ಪದಾರ್ಥವಿಲ್ಲ ; ನಾನು ಬ್ರಹ್ಮದೇವನು ಸನಕಾದಿಗಳು ನಾರದನು ಮರೀಚಿ ಮೊದಲಾದ ಬ್ರಹ್ಮಪುತ್ರರಾದ ಋಷಿಗಳು ಇಂದ್ರಾದಿ ದೇವಶ್ರೇಷ್ಠರೂ ಸಹ ಯಾವ ಶ್ರೀಹರಿಯ ತಾತ್ಪರ್ಯವನ್ನು ತಿಳಿಯುವವರಾಗುವದಿಲ್ಲವೋ ಅಂಥಾ ಭಗವಂತನ ಸ್ವರೂಪವನ್ನು ವಸ್ತುತಃ ಕಾಲವು ಹರಿಯ ಅಂಶಗಳಿಗೆ ಅಂಶಭೂತರಾದಾಗ್ಯೂ ನಮಗಿಂತಲೂ ಈಶ್ವರನು ಅನ್ಯನೆಂದು ತಿಳಿಯುವ ಅಜ್ಞಾನಿಗಳು ಎಂತು ತಿಳಿಯುವರು ! ಎಲೈ ದೇವಿಯೆ, ಈ ಹರಿಗೆ ಅತ್ಯಂತ ಪ್ರಿಯನೂ ಸ್ವಕೀಯ್ಯನೂ ಒಬ್ಬನೂ ಇಲ್ಲ ; ಸಕಲ ಭೂತಗಳಿಗೂ ಆತ್ಮಸ್ವರೂಪನಾದ್ದರಿಂದ ಶ್ರೀಹರಿಯು ಸಮಸ್ತ ಭೂತಗಳಿಗೂ ಪ್ರಿಯನಾಗಿಧಾನೆ ; ಮಹಾತ್ಮನಾದ ಈ ಚಿತ್ರಕೇತುವು ಅವನಿಗೆ ಅತಿಪ್ರಿಯನಾದ ಭಕ್ತನು ; ಸರ್ವತ್ರ

ಸಮದೃಷ್ಟಿಯುಳ್ಳವನು ; ಉಪಶಾಂತನಾದವನು ; ನಾನು ಕೂಡ ಆ ಹರಿಗೆ ಅತಿಪ್ರಿಯನಾದಕಾರಣ ನನಿಗೆ ಚಿತ್ರಕೇತುವಿನಲ್ಲಿ ಕೋಪವು ಉಂಟಾಗಲಿಲ್ಲ; ಅದುಕಾರಣ ಮಹಾತ್ಮರಾದ ಉಪಶಾಂತರಾದ ಸರ್ವತ್ರ ಸಮದೃಷ್ಟಿಯುಳ್ಳ ಶ್ರೀಹರಿಯ ಭಕ್ತರಾದ ಪುರುಷರಲ್ಲಿ ನಿಸ್ಪೃಹತ್ವ ವಿಷಯವಾಗಿ ಆಶ್ಚರ್ಯವು ಮಾಡತಕ್ಕದ್ದಲ್ಲ ; ಎಂಬ ಭಗವಂತನಾದ ಈಶ್ವರನ ವಚನವನ್ನು ಕೇಳಿ ಪಾರ್ವತೀದೇವಿಯು ಆಶ್ಚರ್ಯಪಡುವದನ್ನು ಬಿಟ್ಟು ಪ್ರಸನ್ನವಾದ ಬುದ್ಧಿಯುಳ್ಳವಳಾದಳು ; ಆಗ ಪರಮಭಾಗವತನಾದ ಆ ಚಿತ್ರಕೇತುರಾಯನು ಪ್ರತಿಶಾಪವನ್ನು ಕೊಡಲು ಸಮರ್ಥನಾದಾಗ್ಯೂ ಈರೀತಿ ಪಾರ್ವತಿಯ ಶಾಪವನ್ನು ಶಿರಸ್ಸಿನಿಂದ ಗ್ರಹಿಸಿದನು ; ಇದು ಸತ್ಪುರುಷರ ಲಕ್ಷಣವು ; ಆ ಚಿತ್ರಕೇತುವೆ ತ್ವಷ್ಟ್ರುವಿನ ಯಜ್ಞದಲ್ಲಿ ದಕ್ಷಿಣಾಗ್ನಿಯ ದೆಶೆಯಿಂದ ಶಾಸ್ತ್ರಜ್ಞಾನ ಬ್ರಹ್ಮಪರೋಕ್ಷಜ್ಞಾನಗಳೊಡನೆ ಯುಕ್ತನಾಗಿ ವೃತ್ರನೆಂದು ಪ್ರಸಿದ್ಧನಾಗಿ ಆಸುರಭಾವದಿಂದ ಜನಿಸಿದನು ! “ಎಲೈ ಅರಸೆ, ವೃತ್ರನಿಗೆ ಅಸುರಭಾವದಿಂದ ಉತ್ಪತ್ತಿಯುಂಟಾಗುವದಕ್ಕೂ ಭಗವಂತನಲ್ಲಿ ದೃಢಬುದ್ಧಿಯುಂಟಾಗುವದಕ್ಕೂ ಯಾವ ಕಾರಣವನ್ನು ನೀನು ನನ್ನನ್ನು ಕೇಳಿದವನಾದೆಯೋ ಆ ಸಮಸ್ತವೂ ನಿನಗೋಸ್ಕರ ನನ್ನಿಂದ ನಿರೂಪಿಸಲ್ಪಟ್ಟಿತು ; ವಿಷ್ಣುಭಕ್ತರ ಮಾಹಾತ್ಮ್ಯವನ್ನು ಪ್ರಕಾಶಂಗೈವ ಪುಣ್ಯಕರವಾದ ಮಹಾತ್ಮನಾದ ಚಿತ್ರಕೇತುವಿನ ಈ ಇತಿಹಾಸವನ್ನು ಶ್ರವಣಂಗೈವ ಪುರುಷನು ಸಂಸಾರಬಂಧದಿಂದ ಬಿಡಿಸಲ್ಪಡುವನು ; ಯಾವ ಪುರುಷನು ಪ್ರಾತಃಕಾಲದಲ್ಲಿ ಎದ್ದು ಶ್ರದ್ಧೆಯಿಂದ ಮೌನಯುಕ್ತನಾಗಿ ಶ್ರೀಹರಿಯನ್ನು ಸ್ಮರಿಸಿ ಈ ಚಿತ್ರಕೇತುರಾಯನ ಉಪಾಖ್ಯಾನವನ್ನು ಪಠನಂಗೈವನೋ ಆ ಪುರುಷನು ಮುಕ್ತಿಯನ್ನು ಪಡೆಯುವನು ” ಎಂದು ನುಡಿದನು.

---

೧೮ ನೇ ಅಧ್ಯಾಯ.

ಸವಿತೃ ಮೊದಲಾದ ಅದಿತಿ ಪುತ್ರರ ವಂಶಗಳನ್ನೂ ಇಂದ್ರನಿಂದ ದಿತಿದೇವಿಯ ಗರ್ಭವು ಭೇದಿಸಲ್ಪಟ್ಟದ್ದನ್ನೂ ನಿರೂಪಿಸಿದ್ದು.

“ಎಲೈ ಪರೀಕ್ಷಿದ್ರಾಯನೇ, ಸವಿತೃವಿಗೆ ಪತ್ನಿಯಾದ ಪೃಶ್ನಿದೇವಿಯು ಸಾವಿತ್ರಿದೇವಿಯನ್ನೂ ವ್ಯಾಹೃತಿತ್ರಯವನ್ನೂ ಅಗ್ನಿಹೋತ್ರವನ್ನೂ ಪಶುಯಾಗವನ್ನೂ ಅಗ್ನಿಷ್ಟೋಮವನ್ನೂ ಚಾತುರ್ಮಾಸ್ಯವನ್ನೂ ಪಂಚಮಹಾಯಜ್ಞಗಳನ್ನೂ ಪೆತ್ತಳು ; ಭಗನಿಗೆ ಪತ್ನಿಯಾದ ಸಿದ್ಧಿದೇವಿಯು ಅಹಿಮನು ಪ್ರಭುವು ವಿಭುವು ಎಂಬ ಈ ಮೂವರು ಪುತ್ರರನ್ನೂ ಆಸಿಕ್ನಿಯೆಂಬ ಪುತ್ರಿಯನ್ನೂ ಪಡದಳು ; ಧಾತೃವಿಗೆ ಪತ್ನಿಯಾದ ಕುಹೂದೇವಿಯು ಸಾಯಂಕಾಲವೆಂಬ ಪುತ್ರನನ್ನು ಪಡದಳು ; ಸಿನೀವಾಲಿಯೆಂಬ ಮತ್ತೊಬ್ಬ ಪತ್ನಿಯು ದರ್ಶನೆಂಬ ಪುತ್ರನನ್ನು ಪೆತ್ತಳು ; ರಾಕಾದೇವಿಯೆಂಬ ಮತ್ತೊಬ್ಬ ಪತ್ನಿಯು ಪ್ರಾತಃಕಾಲವೆಂಬ ಪುತ್ರನನ್ನು ಪಡದಳು ; ಅನುಮತಿಯೆಂಬ ಮತ್ತೊಬ್ಬಳಾದ ಪತ್ನಿಯು ಪೂರ್ಣಮಾಸನೆಂಬ ಪುತ್ರನನ್ನು ಪಡದಳು ; ವಿಧಾತೃವು ಕ್ರಿಯಾದೇವಿಯಲ್ಲಿ ಪಂಚಚಿತಿಗಳೆಂಬ ಅಗ್ನಿಗಳನ್ನು ಪಡದಳು ; ವರುಣನ ಪತ್ನಿಯಾದ ಚರ್ಷಣೀದೇವಿಯಲ್ಲಿ ಪೂರ್ವದಲ್ಲಿ ಬ್ರಹ್ಮಪುತ್ರನಾದ ಭೃಗುವು ಪುನಹಾ ಜನಿಸಿದನು ; ಆ ವರುಣನಿಗೆ ಹುತ್ತದ ದೆಶೆಯಿಂದ ಮಹಾಯೋಗಿಯಾದ ವಾಲ್ಮೀಕಿಯೆಂಬ ಪುತ್ರನು ಜನಿಸಿದನು; ಈ ಭೃಗು ವಾಲ್ಮೀಕಿಗಳಿಬ್ಬರೂ ವರುಣನಿಗೆ ಅಸಾಧಾರಣರಾದ ಪುತ್ರರು ; ಇದೇರೀತಿ ಮಿತ್ರನಿಗೆ ಉತ್ಸರ್ಗಾದಿಗಳೂ ಅಸಾಧಾರಣರಾದ ಪುತ್ರರೂ ಈ ಮಿತ್ರಾವರುಣರಿಬ್ಬರಿಗೂ ಪೂರ್ವದಲ್ಲಿ ಊರ್ವಶೀಯೆಂಬ ಅಪ್ಸರಸ್ತ್ರೀಯನ್ನು ನೋಡಿ ಅವಳ ಸನ್ನಿಧಾನದಲ್ಲಿ ಮೋಹದಿಂದ ಸ್ಖಲಿತವಾದ ತಮ್ಮ ವೀರ್ಯವನ್ನು ಜಲಪೂರ್ಣವಾದ ಕುಂಭದಲ್ಲಿ ಬಿಟ್ಟವರಾದಕಾರಣ ಆ ಮಿತ್ರಾವರುಣರಿಬ್ಬರಿಗೂ ಆ ಕುಂಭದಲ್ಲಿ ಅಗಸ್ತ್ಯ ವಶಿಷ್ಠರೆಂಬ ಇಬ್ಬರು ಪುತ್ರರು ಸಾಧಾರಣವಾಗಿ ಜನಿಸಿದರು ; ಮಿತ್ರನು ರೇವತಿಯಲ್ಲಿ ಉತ್ಸರ್ಗ ಅರಿಷ್ಟ ಪಿಪ್ಪಲರೆಂಬ ಮೂವರು ಪುತ್ರರನ್ನು ಪಡದನು ; ಇಂದ್ರನು ಶಚೀದೇವಿಯಲ್ಲಿ ಜಯಂತ ಋಷಭ ಮೀಢುಷರೆಂಬ ಮೂರುಮಂದಿ ಪು

ತ್ರರನ್ನು ಪಡೆದನು; ಕಪಟ ವಾಮನರೂಪಿಯಾದ ಉರುಕ್ರಮನೆಂಬ ದೇವನಿಗೆ ಕೀರ್ತಿಯೆಂಬ ಪತ್ನಿಯಲ್ಲಿ ಬೃಹಲ್ಲೋಕನೆಂಬ ಪುತ್ರನು ಜನಿಸಿದನು; ಆ ಬೃಹಲ್ಲೋಕನಿಗೆ ಸೌಭಗ ಮೊದಲಾದ ಪುತ್ರರು ಜನಿಸಿದರು; ಕಶ್ಯಪನ ಪತ್ನಿಯಾದ ಅದಿತಿದೇವಿಯಲ್ಲಿ ವಾಮನಮೂರ್ತಿಯು ಯಾವಪ್ರಕಾರದಿಂದ ಅವತರಿಸಿದನೋ ಆಪ್ರಕಾರವನ್ನೂ ಮಹಾತ್ಮನಾದ ಆ ವಾಮನಮೂರ್ತಿಯ ಚರಿತ್ರೆಗಳನ್ನೂ ಸುಗುಣಗಳನ್ನೂ ಸಾಮರ್ಥ್ಯವನ್ನೂ ಸಹಾ ನಿನಗೆ ಅಷ್ಟಮಸ್ಕಂಧದಲ್ಲಿ ವಿಸ್ತರದಿಂದ ನಿರೂಪಿಸುತ್ತೇನೆ; ಯಾವ ದೈತ್ಯವಂಶದಲ್ಲಿ ಪರಮಭಾಗವತರಾದ ಪೂಜ್ಯರಾದ ಪ್ರಹ್ಲಾದ ಬಲಿಗಳು ಜನಿಸಿದರೋ ಅಂಥಾ ಕಶ್ಯಪ ಪುತ್ರರಾದ ದೈತ್ಯರ ಉತ್ಪತ್ತಿ ಕ್ರಮವನ್ನೂ ಅದಿತಿ ಪುತ್ರರಾದ ದ್ವಾದಶಾದಿತ್ಯರ ಸಂತತಿಯನ್ನೂ ದಿತೀದೇವಿಯ ಪುತ್ರರ ಸಂತತಿಯನ್ನೂ ನಿರೂಪಿಸುವೆನು ಕೇಳು: ದಿತೀದೇವಿಗೆ ದೈತ್ಯದಾನವರಿಂದ ಸೇವಿಸಲ್ಪಡುವ ಹಿರಣ್ಯಕಶಿಪು ಹಿರಣ್ಯಾಕ್ಷರೆಂಬ ನಾಮಧೇಯಗಳುಳ್ಳ ಇಬ್ಬರು ಪುತ್ರರು ಜನಿಸಿದರು; ಆ ಹಿರಣ್ಯಕಶಿಪುವು ಜಂಭನೆಂಬ ಅಸುರನಿಗೆ ಪುತ್ರಿಯಾದ ತನಗೆ ಪತ್ನಿಯಾದ ಕಯಾಧುವೆಂಬ ಅಸುರಸ್ತ್ರೀಯಲ್ಲಿ ಪ್ರಹ್ಲಾದ ಅನುಹ್ಲಾದ ಸಂಹ್ಲಾದ ಹ್ಲಾದರೆಂಬ ನಾಲ್ವರು ಪುತ್ರರನ್ನು ಪಡೆದನು; ಆ ಪ್ರಹ್ಲಾದಾದಿಗಳಿಗೆ ತಂಗಿಯಾದ ಸಿಂಹಿಕೆಯು ವಿಪ್ರಜಿತ್ತಿಯೆಂಬ ತನ್ನ ಪತಿಯ ದೆಸೆಯಿಂದ ಅಮೃತವನ್ನು ಪಾನಮಾಡುತ್ತಲಿರುವ ಯಾವ ರಾಹುವಿನ ಶಿರಸ್ಸನ್ನು ಹರಿಯು ತನ್ನ ಚಕ್ರದಿಂದ ಛೇದಿಸಿದನೋ ಅಂಥಾ ರಾಹುವೆಂಬ ಪುತ್ರನನ್ನು ಪಡೆದಳು; ಸಂಹ್ಲಾದಪತ್ನಿಯಾದ ಕೃತಿಯು ಪಂಚಜನನೆಂಬ ಪುತ್ರನನ್ನು ಪಡೆದಳು; ಹ್ಲಾದನ ಪತ್ನಿಯಾದ ಧಮನಿಯು ಇಲ್ವಲನು ಅತಿಥಿಯಾಗಿ ಅಗಸ್ತ್ಯಮುನಿಗೋಸ್ಕರ ಮೇಷರೂಪಿಯಾದ ಯಾವ ವಾತಾಪಿಯನ್ನು ವಂಚನೆಮಾಡಿದನೋ ಅಂಥಾ ಇಲ್ವಲ ವಾತಾಪಿಗಳನ್ನು ಹೆತ್ತಳು; ಅನುಹ್ಲಾದನಿಗೆ ಸೂರ್ಮಿಯೆಂಬ ಪತ್ನಿಯಲ್ಲಿ ಬಾಷ್ಕಲಮಹಿಷರೆಂಬ ಇಬ್ಬರು ಪುತ್ರರು ಜನಿಸಿದರು; ಪ್ರಹ್ಲಾದನಿಗೆ ವಿರೋಚನನೆಂಬ ಪುತ್ರನು ಹುಟ್ಟಿದನು; ಆ ವಿರೋಚನನಿಗೆ ದೇವಿಯೆಂಬ ಪತ್ನಿಯಲ್ಲಿ ಬಲಿಯೆಂಬ ಪುತ್ರನು ಹುಟ್ಟಿದನು; ಆ ಬಲಿಯದೆಸೆಯಿಂದ ಅಶನಾದೇವಿಯಲ್ಲಿ ಬಾಣಾಸುರನೇ ಜ್ಯೇಷ್ಠನಾಗುಳ್ಳ ನೂರುಮಂದಿ ಪುತ್ರರು ಜನಿಸಿದರು; ಅಂಥಾ ಬಲಿಯ ಪುಣ್ಯಕೀರ್ತಿಗಳನ್ನು ಸಂಪಾದಿಸುವ ಚರಿತ್ರೆಯನ್ನು ಮುಂದೆ ನಿರೂಪಿಸುತ್ತೇನೆ; ಯಾವ ಬಾಣಾಸುರನ ಪಾರ್ಶ್ವದಲ್ಲಿ ಭಗವಂತನಾದ ಶ್ರೀ ರುದ್ರನು ಅವನ ಪಟ್ಟಣಕ್ಕೆ ಪಾಲಕನಾಗಿ ಈಗ್ಯೂ ವಾಸಮಾಡುತಲಿರ್ದಾನೋ ಅಂಥಾ ಬಾಣನು ಅತಿ ಭಕ್ತಿಯಿಂದ ಈಶ್ವರನನ್ನು ಪೂಜಿಸಿ ಆ ಈಶ್ವರನ ಗಣಪಾಲಕತ್ವವನ್ನು ಪಡೆದನು; ದಿತೀದೇವಿಗೆ ನಾಲ್ವತ್ತೊಂಭತ್ತುಮಂದಿಯಾದ ಮರುತ್ತುಗಳು ಜನಿಸಿದರು; ಆ ಮರುತ್ತುಗಳೆಲ್ಲರೂ ಇಂದ್ರನಿಂದ ದೇವತ್ವವನ್ನೈದಿಸಲ್ಪಟ್ಟವರಾಗಿ ಪುತ್ರರನ್ನು ಪಡೆಯಲಿಲ್ಲ" ಎಂದು ನುಡಿದನು.

ಆ ವಚನವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಗುರುವಾದ ಮುನಿಯೆ, ಆ ಮರುತ್ತುಗಳು ಎಂತು ಇಂದ್ರನಿಂದ ಉತ್ಪತ್ತಿ ಸಿದ್ಧವಾದ ಅಸುರಭಾವವನ್ನು ಪರಿಹರಿಸಿ ದೇವತ್ವವನ್ನೈದಿಸಲ್ಪಟ್ಟರು? ಅವರಿಂದ ಅಂಥಾ ಸತ್ಕರ್ಮವು ಏನುಮಾಡಲ್ಪಟ್ಟಿತು? ಎಲೈ ಋಷಿಯೆ, ಈ ಮುನಿಗಳೂ ನಾನೂ ಸಹಾ ಈ ಅರ್ಥವನ್ನು ನಿನ್ನಿಂದ ತಿಳಿಯಲೋಸುಗ ಶ್ರದ್ಧೆಯಿಂದ ಅಪೇಕ್ಷಿಸುತಲಿರ್ದೇವೆಯಾದಕಾರಣ ಆ ಅರ್ಥವನ್ನು ನಮಗೆ ನಿರೂಪಿಸು" ಎಂದು ಕೇಳಿದನು.

ಈರೀತಿ ಪರೀಕ್ಷಿದ್ರಾಯನಿಂದ ಹೇಳಲ್ಪಟ್ಟ ಶ್ರದ್ಧಾಯುಕ್ತವಾದ ಮಿತಗಳಾದ ಅಕ್ಷರಗಳುಳ್ಳ ಅನೇಕಾರ್ಥಯುಕ್ತವಾದ ವಾಕ್ಯವನ್ನು ಕೇಳಿ ಸರ್ವಜ್ಞನಾದ ಶುಕಮುನಿಯು ಆ ವಾಕ್ಯವನ್ನು ಸನ್ಮಾನಮಾಡುತ ಏಕಾಗ್ರವಾದ ಚಿತ್ತದಿಂದ ಪರೀಕ್ಷಿದ್ರಾಯನನ್ನು ಕುರಿತು—ಎಲೈ ಪರೀಕ್ಷಿದ್ರಾಯನೆ, ಯುದ್ಧದಲ್ಲಿ ಹಿಂದುಗಡೆಯಲ್ಲಿ ಇಂದ್ರನಿಗೆ ಸಹಾಯನಾಗಿರುವ ಶ್ರೀ ವಿಷ್ಣುವಿನಿಂದ ಸಂಹರಿಸಲ್ಪಟ್ಟ ಪುತ್ರರುಳ್ಳವಳಾಗಿ ದಿತೀದೇವಿಯು ಶೋಕದಿಂದ ವೃದ್ಧಿಹೊಂದಿದ ಕೋಪದಿಂದ ಜ್ವಲಿಸುತ ಯಾವಾಗ ನನ್ನ ಪುತ್ರರಾದ ದೈತ್ಯರಿಗೆ ಸಂಹಾರಕನಾದ ಇಂದ್ರಿಯಗಳಿಂದ ರಮಿಸುತಲಿರುವ ಅತಿ ಕ್ರೂರನಾದ ಕಠಿಣಚಿತ್ತನಾದ ಪಾಪಿಯಾದ ಇಂದ್ರನನ್ನು ಸಂಹಾರಮಾಡಿಸಿ ಸುಖದಿಂದ ನಿದ್ರೆಮಾಡುವವಳಾಗು

ವೇನು ; ಅರಸಾದವನು ಸ್ವದೇಹರಕ್ಷಣಾರ್ಥವಾಗಿ ಶತೃಗಳನ್ನು ಸಂಹಾರಮಾಡುವನು ; ಆ ಅರ್ಥದಲ್ಲಿ ಆಶ್ಚರ್ಯವೇನೆಂದರೆ : ಪೂರ್ವೀಕರಾದ ಅರಸುಗಳು ಪ್ರಭುವೆಂದು ಹೇಳಲ್ಪಡುವ ಯಾವ ದೇಹವು ಮೃತಿಯಾದಮೇಲೆ ಮೂರು ದಿವಸಗಳಲ್ಲಿ ಕ್ರಿಮಿಗಳಿಂದಲೂ ಶುನಕಗಳಿಂದ ಭಕ್ಷಿಸಲ್ಪಟ್ಟಲ್ಲಿ ಮಲವೆಂದೂ ದಹಿಸಲ್ಪಟ್ಟಲ್ಲಿ ಭಸ್ಮವೆಂದೂ ನಾಮಧೇಯವುಳ್ಳದ್ದಾಯಿತೋ ಅಂಥಾ ದೇಹಕ್ಕೋಸ್ಕರ ಈಗ ಯಾವ ಅರಸು ನರಕಪ್ರಾಪ್ತಿ ಸಾಧಕವಾದ ಭೂತದ್ರೋಹವನ್ನು ಆಚರಿಸುತಲಿಧಾನೋ ಅವನು ತನಿಗೆ ಇಷ್ಟವಾದ ಅರ್ಥವನ್ನು ಅರಿಯುವದಿಲ್ಲ; ಈ ದೇಹಾದಿಗಳು ಸ್ಥಿರಗಳೆಂದು ತಿಳಿಯುವನಾದಕಾರಣ ತಡೆಯಿಲ್ಲದಿರುವ ಮನಸ್ಸುಳ್ಳ ಇಂದ್ರನಿಗಿರುವ ಮದವನ್ನು ಪರಿಹರಿಸುವ ಪುತ್ರನು ನನಿಗೆ ಯಾವ ಸಾಧನದಿಂದುಂಟಾಗುವನು ಎಂದು ಚಿಂತಿಸಿ ಪತಿಗೆ ಪ್ರಿಯವನ್ನಾಚರಿಸುವದೇ ಅಂಥಾ ಪುತ್ರನನ್ನು ಪಡೆಯುವದಕ್ಕೆ ಸಾಧನವಾಗುವದೇ ಹೊರ್ತು ಮತ್ತೊಂದಿಲ್ಲವೆಂಬ ಅಭಿಪ್ರಾಯದಿಂದ ದಿತಿದೇವಿಯು ಶುಶ್ರೂಷೆಯಿಂದಲೂ ಅನುರಾಗದಿಂದಲೂ ವಿನಯದಿಂದಲೂ ಬಹಿರಿಂದ್ರಿಯ ನಿಗ್ರಹದಿಂದಲೂಕೂಡ ಪತಿಯಾದ ಕಶ್ಯಪಮುನಿಗೆ ಬಾರಿಬಾಗೂ ಪ್ರಿಯವನ್ನಾಚರಿಸಿದಳು; ಕಸ್ಯಪಮುನಿಯು ಜ್ಞಾನವಂತನಾದಾಗ್ಯೂ ಈರೀತಿ ಚತುರೆಯಾದ ದಿತಿದೇವಿಯಿಂದ ಶುಶ್ರೂಷಾದಿಗಳಿಂದ ಜಡನಾಗಿ ಮಾಡಲ್ಪಟ್ಟವನಾದ್ದರಿಂದ ಆಕೆಗೆ ಅಧೀನನಾಗಿ—ಎಲೈ ದಿತಿದೇವಿಯೆ, ನಿನ್ನ ಇಷ್ಟಾರ್ಥ ಪೂರ್ತಿಯನ್ನು ಮಾಡುವೆನೆಂದು ಅಂಗೀಕರಿಸಿದ್ದು ಸ್ತ್ರೀವಿಷಯದಲ್ಲಿ ಆಶ್ಚರ್ಯವಲ್ಲ! ಆದಿಯಲ್ಲಿ ಬ್ರಹ್ಮದೇವನು ಪ್ರಾಣಿಗಳು ಸಂಗರಹಿತರಾಗಿರುವದನ್ನು ನೋಡಿ ಮೈಥುನದಿಂದ ಸೃಷ್ಟಿಯನ್ನು ವೃದ್ಧಿಹೊಂದಿಸಲೋಸುಗ ತನ್ನ ಅರ್ಧದೇಹವನ್ನೇ ಸ್ತ್ರೀಯನ್ನಾಗಿ ಮಾಡಿದನು ; ಆ ಸ್ತ್ರೀಯಿಂದ ಪುರುಷರ ಬುದ್ಧಿಯು ಅಪಹರಿಸಲ್ಪಟ್ಟಿತು—ಎಂದು ನುಡಿದು ದಿತಿದೇವಿಯಿಂದ ಸೇವಿಸಲ್ಪಟ್ಟ ಸರ್ವಜ್ಞನಾದ ಕಶ್ಯಪಮುನಿಯು ಅತ್ಯಂತ ಪ್ರೀತಿಯುಕ್ತನಾಗಿ ಮುಗುಳುನಗೆಯೊಡನೆ ಕೂಡಿ ದಿತಿದೇವಿಯನ್ನು ಸಂತೋಷಪಡಿಸಿ "ಎಲೈ ದೋಷರಹಿತಳಾದ ದಿತಿಯೆ, ನಾನು ನಿನಿಗೆ ಶುಶ್ರೂಷಾದಿಗಳಿಂದ ಪ್ರಸನ್ನನಾದೆನು ; ಇಷ್ಟವಾದ ವರವನ್ನು ವರಿಸುವಳಾಗು ; ಪತಿಯು ಪ್ರಸನ್ನನಾಗುತ್ತಿರಲು ಸ್ತ್ರೀಯರಿಗೆ ಇಹಲೋಕ ಪರಲೋಕದಲ್ಲಿಯೂ ಯಾವ ಇಷ್ಟಾರ್ಥವು ಅಸಾಧ್ಯವಾದೀತು ; ಸ್ತ್ರೀಯರಿಗೆ ಪತಿಯೇ ಪರದೇವತೆಯೆಂದು ಋಷಿಗಳಿಂದ ಹೇಳಲ್ಪಟ್ಟಿಧೆ; ಸಕಲ ಪ್ರಾಣಿಗಳ ಹೃದಯದಲ್ಲಿ ವಾಸಗೈಯುತಲಿರುವ ಲಕ್ಷ್ಮೀಪತಿಯಾದ ಭಗವಂತನಾದ ಶ್ರೀ ವಾಸುದೇವನೇ ನಾನಾವಿಧಗಳಾದ ನಾಮಧೇಯಗಳಿಂದಲೂ ರೂಪಗಳಿಂದಲೂ ಅನೇಕಪ್ರಕಾರವಾಗಿ ಕಲ್ಪಿತಗಳಾದ ಇಂದ್ರಾದಿ ದೇವತಾ ದೇಹಗಳಿಂದಲೂ ಸೂಚಿಸಲ್ಪಡುವನಾಗಿ ಅವರವರ ಅಧಿಕಾರಾನುಸಾರವಾಗಿ ಪುರುಷರಿಂದ ಪೂಜಿಸಲ್ಪಡುತಲಿಧಾನೆ; ಆ ವಾಸುದೇವನೇ ಪತಿರೂಪವನ್ನು ಧರಿಸಿ ಸ್ತ್ರೀಯರಿಂದ ಪೂಜಿಸಲ್ಪಡುತಲಿಧಾನೆ! ಎಲೈ ದಿತಿಯೆ, ಅದುಕಾರಣ ಶ್ರೇಯಸ್ಸನ್ನು ಪಡೆಯಲಿಚ್ಛೆಯುಳ್ಳ ಪತಿವ್ರತೆಯರಾದ ಸ್ತ್ರೀಯರು ಏಕಾಗ್ರಚಿತ್ತದಿಂದ ಪತಿಯನ್ನೇ ಪರಮಾತ್ಮನನ್ನಾಗಿಯೂ ಈಶ್ವರನನ್ನಾಗಿಯೂ ಭಾವಿಸಿ ಪೂಜಿಸುತಲಿಧಾರೆ! ಎಲೈ ಭಾಗ್ಯವತಿಯೆ, ನಾನು ನಿನ್ನಿಂದ ಇಂಥಾ ಈಶ್ವರಭಾವನೆಯಿಂದಲೂ ಭಕ್ತಿಯಿಂದಲೂ ಪೂಜಿಸಲ್ಪಟ್ಟವನಾದೆನು ; ಅದುಕಾರಣ ಪತಿಭಕ್ತಿ ರಹಿತರಾದ ಸ್ತ್ರೀಯರಿಗೆ ಪಡೆಯಲಶಕ್ಯವಾದ ನಿನ್ನ ಇಷ್ಟಾರ್ಥವನ್ನು ನಾನು ಕಲ್ಪಿಸುತ್ತೇನೆ" ಎಂದು ನುಡಿದನು.

ಆ ವಚನವನ್ನು ಕೇಳಿ ದಿತಿಯು "ಎಲೈ ಋಷಿಯೆ, ನೀನು ನನಿಗೆ ವರವನ್ನು ಕೊಡುವವನಾದರೆ ಯಾವ ಇಂದ್ರನು ತನಿಗೆ ಸಹಾಯನಾದ ವಿಷ್ಣುವಿನಿಂದ ತನ್ನ ಪುತ್ರರಾದ ಹಿರಣ್ಯಾಕ್ಷ ಹಿರಣ್ಯಕಶಿಪ್ರಗಳನ್ನು ಸಂಹಾರಂಗೈಸಿದನೋ ಆ ಇಂದ್ರನನ್ನು ಸಂಹರಿಸುವ ಮೃತ್ಯುರಹಿತನಾದ ಪುತ್ರನನ್ನು ನಷ್ಟರಾದ ಪುತ್ರರುಳ್ಳ ನಾನು ಅಪೇಕ್ಷಿಸುತಲಿಧೇನೆ" ಎಂದು ನುಡಿದಳು.

ಕಶ್ಯಪನು "ಎಲೈ ದಿತಿಯೆ, ಮಹತ್ತಾದ ಅಧರ್ಮವು ನಿನಿಗೆ ಪ್ರಾಪ್ತವಾಯಿತೆಂದು ಖಿನ್ನವಾದ ಮನಸ್ಸುಳ್ಳವನಾಗಿ ಸಂತಾಪಪಟ್ಟು ಇಂದ್ರಿಯಚಾಪಲ್ಯವುಳ್ಳ ನಾನು ಈ ಪ್ರಪಂಚದಲ್ಲಿ ಸ್ತ್ರೀರೂಪವಾದ ಮಾಯೆಯಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳವನಾಗಿ ದೀನನಾಗಿ ನರಕದಲ್ಲಿ ಬೀಳುತ್ತೇನೆ ; ಈ ಅರ್ಥದಲ್ಲಿ ಸಂಶಯವಿಲ್ಲ ; ಅಜ್ಞನಾದ ನಾನು

ಇಂದ್ರಿಯಾಧೀನನಾಗಿ ಪುರುಷಾರ್ಥದಿಂದ ಭ್ರಷ್ಟನಾದೆನೇ ಹೊರ್ತು ತನ್ನ ಸ್ವಭಾವವನ್ನನುವರ್ತಿಸುವ ಸ್ತ್ರೀಯ ಅಪರಾಧವೇನಿದೆ; ಸ್ತ್ರೀ ಮುಖವು ಶರತ್ಕಾಲದಲ್ಲಿರುವ ಪದ್ಮದಂತೆ ವಿಕಾಸಯುಕ್ತವಾಗಿರುವದು; ನುಡಿಯು ಶ್ರೋತ್ರಗಳಿಗೆ ಅಮೃತಪ್ರಾಯವಾಗಿರುವದು; ಹೃದಯವಾದರೋ ತೀಕ್ಷ್ಣವಾದ ಶಸ್ತ್ರಕ್ಕೆ ಸಮಾನವಾಗಿರುವದು; ಅದುಕಾರಣ ಅವರ ವ್ಯಾಪಾರವನ್ನು ಯಾವವನು ತಿಳಿದಾನು? ಸ್ವಾರ್ಥಾಪೇಕ್ಷೆಯಿಂದ ಆತ್ಮನಂತೆ ಅತ್ಯಂತ ಪ್ರಿಯಭಾವದಿಂದ ತೋರುತಲಿರುವ ಸ್ತ್ರೀಯರಿಗೆ ಒಬ್ಬನಾದರೂ ಪರಮಾರ್ಥವಾಗಿ ಪ್ರಿಯನಾದವನಿಲ್ಲ; ಸ್ತ್ರೀಯರು ಸ್ವಾರ್ಥನಿಮಿತ್ತವಾಗಿ ಪತಿಯನ್ನಾದರೂ ಪುತ್ರನನ್ನಾದರೂ ಸಹೋದರನನ್ನಾದರೂ ಸಂಹರಿಸುವರು; ಪ್ರಕೃತದಲ್ಲಿ ನಿನಗೆ ಇಷ್ಟಾರ್ಥವನ್ನು ಕೊಡುವೆನೆಂದು ಪ್ರತಿಜ್ಞೆಮಾಡಲ್ಪಟ್ಟ ಅರ್ಥವು ಅಸತ್ಯವಾಗಬಾರದು; ಇಂದ್ರನೂ ಕೂಡ ವಧೆಗೆ ಯೋಗ್ಯನಾಗಬಾರದು; ಈ ಉಭಯಾರ್ಥವು ನನಗೆ ಎಂತು ಸಿದ್ಧಿಸುವದು" ಎಂದು ಸರ್ವಜ್ಞನಾದ ಕಶ್ಯಪಮುನಿಯು ಈರೀತಿ ಮನದಲ್ಲಿ ಚಿಂತಿಸಿ ಸ್ವಲ್ಪ ಕೋಪಯುಕ್ತನಾಗಿ ತನ್ನನ್ನು ತಾನೇ ನಿಂದಿಸುತ ದಿತಿಯನ್ನು ಕುರಿತು––ಎಲೈ ಭಾಗ್ಯವತಿಯೇ ಕೇಳು: ಒಂದು ಸಂವತ್ಸರಪರ್ಯಂತವು ವಿಷ್ಣುಪದವೆಂಬ ಈ ವ್ರತವನ್ನು ನೀನು ವಿಧಿಯುಕ್ತವಾಗಿ ಆಚರಿಸುವವಳಾದರೆ ಆ ವ್ರತಪೂರ್ತಿಯಾದನಂತರದಲ್ಲಿ ನಿನಗೆ ಇಂದ್ರನನ್ನು ಸಂಹರಿಸುವ ಪುತ್ರನು ಜನಿಸುತ್ತಾನೆ; ಆ ವ್ರತಮಧ್ಯದಲ್ಲಿ ಒಂದು ಸಮಯದಲ್ಲಾದರೂ ನಿಯಮ ಲೋಪವುಂಟಾದರೆ ಆಗ ದೇವತೆಗಳಿಗೆ ಹಿತನಾದ ಪುತ್ರನು ಹುಟ್ಟುವನು—ಎಂಬ ಪತಿಯ ವಾಕ್ಯವನ್ನು ಕೇಳಿ ದಿತಿಯು—ಎಲೈ ಋಷಿಯೇ, ಈ ವ್ರತವನ್ನು ನಾನು ಆಚರಿಸುವವಳಾಗುತ್ತೇನೆ; ಆ ವ್ರತದಲ್ಲಿ ಅವಶ್ಯಕಗಳಾದ ಕರ್ಮಗಳನ್ನೂ ನಿಷಿದ್ಧಗಳಾದ ಕರ್ಮಗಳನ್ನೂ ವ್ರತಭಂಗಗಳಲ್ಲದಿರುವ ಕರ್ಮಗಳನ್ನೂ ನಿರೂಪಿಸು—ಎಂದು ಪ್ರಾರ್ಥಿಸಿದಳು.

ಆ ವಾಕ್ಯವನ್ನು ಕೇಳಿ ಕಶ್ಯಪಮುನಿಯು ಮೊದಲು ಮುಪ್ಪತ್ತೊಂದು ನಿಷಿದ್ಧಗಳನ್ನು ನಿರೂಪಿಸುವನು: "ಎಲೈ ದಿತಿಯೇ, ಈ ವ್ರತನಿಷ್ಠಳಾದ ಸ್ತ್ರೀಯು ಭೂತಸಮೂಹಗಳನ್ನು ಹಿಂಸೆಮಾಡಬಾರದು; ಮತ್ತೊಬ್ಬರನ್ನು ಶಪಿಸಬಾರದು; ಅನೃತವನ್ನು ನುಡಿಯಬಾರದು; ನಖ ರೋಮಗಳನ್ನು ಛೇದಿಸಬಾರದು; ಅಶುಭಕರಗಳಾದ ಕಪಾಲ ಅಸ್ಥಿ ಮೊದಲಾದವನ್ನು ಸ್ಪರ್ಶಿಸಬಾರದು; ನಿರ್ವಾಣವಾಗಿ ಜಲದಲ್ಲಿ ಪ್ರವೇಶಂಗೈದು ಸ್ನಾನವನ್ನು ಮಾಡಲಾಗದು; ಅಶುದ್ಧವಾದ ವಸ್ತ್ರವನ್ನುಡಬಾರದು; ದುರ್ಜನರೊಡನೆ ಸಂಭಾಷಣಂಗೈಯ್ಯಬಾರದು; ಕೋಪಿಸಬಾರದು; ಪೂರ್ವದಲ್ಲಿ ಧರಿಸಲ್ಪಟ್ಟ ಪುಷ್ಪಮಾಲೆಯನ್ನು ಒಂದು ಸಮಯದಲ್ಲಾದರೂ ಪುನಹಾ ಧರಿಸಬಾರದು; ಭೋಜನದಲ್ಲಿ ಐದು ನಿಷಿದ್ಧಗಳನ್ನು ನಿರೂಪಿಸುವನು: ಉಚ್ಛಿಷ್ಟವಾದ ಅನ್ನವನ್ನೂ ಇರುವೆ ಮೊದಲಾದ್ದರಿಂದ ದೋಷಯುಕ್ತವಾದ ಅನ್ನವನ್ನೂ ಮಾಂಸವನ್ನೂ ಶೂದ್ರನಿಂದ ತರಲ್ಪಟ್ಟ ಅನ್ನವನ್ನೂ ರಜಸ್ವಲಾ ಸ್ತ್ರೀಯಿಂದ ನೋಡಲ್ಪಟ್ಟ ಅನ್ನವನ್ನೂ ಭಕ್ಷಿಸಬಾರದು; ಅಂಜಲಿಯಿಂದ ಜಲಪಾನಂಗೈಯ್ಯಬಾರದು; ಗೃಹದಿಂದ ಹೊರಕ್ಕೆ ಹೊರಡುವ ಸಮಯದಲ್ಲಿ ಏಳು ನಿಷೇಧಗಳನ್ನು ನಿರೂಪಿಸುವನು: ಈ ವ್ರತವನ್ನಾಚರಿಸುವ ಸ್ತ್ರೀಯು ಅಪರಿಶುದ್ಧಳಾಗಿಯೂ ಆಚಮನರಹಿತಳಾಗಿಯೂ ಸಂಧ್ಯಾಕಾಲದಲ್ಲಿ ಬಿಚ್ಚಲ್ಪಟ್ಟ ಕೇಶಗಳುಳ್ಳವಳಾಗಿಯೂ ಅಲಂಕಾರರಹಿತಳಾಗಿಯೂ ಮೌನವಿಲ್ಲದೆ ಉತ್ತರೀಯರಹಿತಳಾಗಿಯೂ ಗೃಹದಿಂದ ಹೊರಗೆ ಸಂಚರಿಸಬಾರದು; ಶಯನಕಾಲದಲ್ಲಿ ಎಂಟು ನಿಷೇಧಗಳನ್ನು ನಿರೂಪಿಸುವನು: ಈ ವ್ರತದಲ್ಲಿ ಸ್ತ್ರೀಯು ಪಾದಪ್ರಕ್ಷಾಳನವಿಲ್ಲದೆ ಅಪರಿಶುದ್ಧಳಾಗಿ ಆರ್ದ್ರಗಳಾದ ಪಾದಗಳುಳ್ಳವಳಾಗಿ ಉತ್ತರ ಪಶ್ಚಿಮ ಶಿರಸ್ಸುಳ್ಳವಳಾಗಿ ಇತರ ಜನರೊಡನೆ ಕೂಡಿ ದಿಗಂಬರಳಾಗಿ ಶಯನದಲ್ಲಿ ಪವಳಿಸಬಾರದು; ದ್ವಿಸಂಧ್ಯಾಕಾಲಗಳಲ್ಲಿ ನಿದ್ರೆಗೈಯಬಾರದು; ಮಾಡತಕ್ಕದ್ದಾವದೆಂದರೆ: ವ್ರತನಿಷ್ಠಳಾದವಳು ಪರಿಶುದ್ಧವಾದ ವಸ್ತ್ರವನ್ನು ಧರಿಸಿ ನಿರಂತರವು ತಾನು ಪರಿಶುದ್ಧಳಾಗಿ ಸಮಸ್ತ ಶುಭಗಳೊಡನೆ ಕೂಡಿದವಳಾಗಿ ಪ್ರಥಮಭೋಜನಕ್ಕಿಂತಲೂ ಮುಂದೆಯೇ ಗೋವುಗಳನ್ನೂ ಬ್ರಾಹ್ಮಣರನ್ನೂ ಲಕ್ಷ್ಮಿಯನ್ನೂ ಶ್ರೀಹರಿಯನ್ನೂ ಪೂಜಿಸಬೇಕು; ಸುವಾಸಿನೀಯರಾದ ಸ್ತ್ರೀಯರನ್ನು ಪುಷ್ಪಮಾಲಿಕೆಗಳಿಂದಲೂ ಗಂಧ ಉಪಹಾರ ಅಲಂಕಾರಗಳಿಂದಲೂ ಪೂಜಿಸಬೇಕು; ಮತ್ತು ಪತಿಯನ್ನು ಪೂಜಿಸಿ ಸಮೀಪದಲ್ಲಿ ನಿಂತಿರಬೇಕು; ಪತಿ

ಯನ್ನು ಉದರ ಮಧ್ಯವನ್ನೈದಿರುವನಾಗಿ ಧ್ಯಾನಂಗೈಯಬೇಕು ! ಎಲೈ ದಿತಿಯೆ, ಈರೀತಿ ಸಂವತ್ಸರಪರ್ಯಂತವು ಪುತ್ರೋತ್ಪತ್ತಿಕರವಾದ ವಿಷ್ಣುಪದವೆಂಬ ಈ ವ್ರತವನ್ನು ನೀನು ವಿಘ್ನವಿಲ್ಲದಂತೆ ಆಚರಿಸುವಳಾದರೆ ಆಗ ನಿನಗೆ ಇಂದ್ರನನ್ನು ಸಂಹರಿಸುವ ಪುತ್ರನು ಜನಿಸುತ್ತಾನೆ " ಎಂಬ ಕಶ್ಯಪೋಪದೇಶವನ್ನು ಹಾಗೇ ಆಗಲಿ ಎಂದು ಅಂಗೀಕರಿಸಿ ದಿತಿಯು ಸಂತುಷ್ಟಚಿತ್ತಳಾಗಿ ಆ ವ್ರತವನ್ನು ವಿಧ್ಯುಕ್ತವಾಗಿ ಆಚರಿಸುತ ಆ ಪತಿಯುದೆಸೆಯಿಂದ ಗರ್ಭವನ್ನು ಧರಿಸಿದಳು ; ಅನಂತರದಲ್ಲಿ ಪ್ರಾಜ್ಞನಾದ ಇಂದ್ರನು ತನಿಗೆ ಮಾತೃಭಗಿನಿಯಾದ ದಿತಿದೇವಿಯು ಅಭಿಪ್ರಾಯವನ್ನು ತಿಳಿದು ಆ ಆಶ್ರಮದಲ್ಲಿ ವಾಸಂಗೈಯುತಲಿರುವ ದಿತಿಯನ್ನು ಶುಶ್ರೂಷೆಯಿಂದ ಶೇವಿಸಿದನು ; ಇಂದ್ರನು ನಿತ್ಯದಲ್ಲಿಯೂ ವನದ ದೆಸೆಯಿಂದ ಪುಷ್ಪಗಳನ್ನೂ ಕಂದಮೂಲ ಫಲಗಳನ್ನೂ ಸಮಿತ್ತುಗಳನ್ನೂ ಪತ್ರ ಅಂಕುರಗಳನ್ನೂ ಮೃಜ್ಜಲಗಳನ್ನೂ ತಂದು ಆಯಾ ಕಾಲಗಳಲ್ಲಿ ದಿತಿಗೆ ಉಪಹಾರಂಗೈದನು : ಈರೀತಿ ಇಂದ್ರನು ವ್ರತನಿಷ್ಠಳಾದ ದಿತಿದೇವಿಯ ವ್ರತಕ್ಕೆ ರಂಧ್ರವನ್ನೈದಲಿಚ್ಛೆಯುಳ್ಳವನಾಗಿ ಕಪಟಯುಕ್ತನಾದಾಗ್ಯೂ ಯಾವರೀತಿ ಮೃಗಸಂಹಾರಕನಾದ ಕಿರಾತನು ಮೃಗಗಳನ್ನು ವಂಚಿಸಲೋಸುಗ ಮೃಗವೇಷವನ್ನು ಧರಿಸುವನೋ ಆರೀತಿ ಸಾತ್ವಿಕವೇಷವನ್ನು ಧರಿಸಿ ದಿತಿಯನ್ನು ಸೇವಿಸಿದನು ! ಎಲೈ ಅರಸೆ, ಇಂದ್ರನು ಈರೀತಿ ವ್ರತರಂಧ್ರವನ್ನು ಹುಡುಕುವದರಲ್ಲೇ ಆಸಕ್ತನಾದಾಗ್ಯೂ ಆ ವ್ರತರಂಧ್ರವನ್ನೈದಿದವನಾಗದೆ ಯಾವ ಉಪಾಯದಿಂದ ತನಿಗೆ ಕ್ಷೇಮವುಂಟಾದೀತೆಂಬ ತೀವ್ರವಾದ ಚಿಂತೆಯನ್ನು ಹೊಂದಿ ಯೋಚಿಸುತ್ತಿರಲು ಒಂದು ಸಮಯದಲ್ಲಿ ಆ ದಿತಿಯು ಸಂಧ್ಯಾಕಾಲದಲ್ಲಿ ವ್ರತಾಚರಣೆಯಿಂದ ಕೃಶಳಾಗಿ ಅಶುದ್ಧಳಾಗಿ ಸ್ನಾನಾಚಮನಾದಿಗಳಿಲ್ಲದವಳಾಗಿ ಪಾದಪ್ರಕ್ಷಾಳನ ರಹಿತಳಾಗಿ ದೈವದಿಂದ ಮೋಹಯುಕ್ತಳಾಗಿ ನಿದ್ರೆಗೈದಳು ; ಆ ಸಮಯದಲ್ಲಿ ಯೋಗೀಶ್ವರನಾದ ಇಂದ್ರನು ಆ ವ್ರತರಂಧ್ರವನ್ನೈದಿ ನಿದ್ರೆಯಿಂದ ಅಪಹರಿಸಲ್ಪಟ್ಟ ಮನಸ್ಸುಳ್ಳ ದಿತಿಯ ಉದರವನ್ನು ತನ್ನ ಯೋಗಮಾಯೆಯಿಂದ ಪ್ರವೇಶಿಸಿ ಸುವರ್ಣದಂತೆ ಹೊಳೆಯುತಲಿರುವ ಆ ಗರ್ಭವನ್ನು ವಜ್ರಾಯುಧದಿಂದ ಏಳುಪ್ರಕಾರವಾಗಿ ಛೇದಿಸಿ ರೋದನಂಗೈಯುತಲಿರುವ ಆ ಗರ್ಭದ ಏಳು ಖಂಡಗಳನ್ನು ಒಂದೊಂದನ್ನಾಗಿ ದುಃಖಿಸಬೇಡ ! ದುಃಖಿಸಬೇಡ ! ಎಂದು ಲಾಲಿಸುವಂತೆ ಪುನಹಾ ಏಳುಪ್ರಕಾರವಾಗಿ ಛೇದಿಸಿದನು ; ಈರೀತಿ ಛೇದಿಸಲ್ಪಡುತಲಿರುವ ಆ ಗರ್ಭಗಳೆಲ್ಲವೂ ಅಂಜಲಿಬಂಧಂಗೈದು 'ಎಲೈ ಇಂದ್ರನೆ, ನಾವು ನಿನಗೆ ತಮ್ಮಂದಿರಾದ ಮರುತ್ತುಗಳಲ್ಲವೇ ; ಯಾತಕ್ಕೋಸ್ಕರ ನಮ್ಮನ್ನು ಛೇದಿಸುತಲಿದ್ದೀಯೆ ' ಎಂದು ನುಡಿದವು ! ಆಗ ಇಂದ್ರನು ತನ್ನಲ್ಲೇ ಅಭಿಪ್ರಾಯವುಳ್ಳ ತನ್ನ ಶೇನಾಪಾಲಕರಾದ ಮರುತ್ತುಗಳ ಸಮೂಹಗಳನ್ನು ಕುರಿತು 'ಎಲೈ ಮರುತ್ತುಗಳಿರಾ, ನೀವು ನನಿಗೆ ತಮ್ಮಂದಿರೇಸರಿ ; ಭಯಪಡಬೇಡಿ ' ಎಂದು ನುಡಿದನು ! ಎಲೈ ಅರಸೆ, ಅಶ್ವತ್ಥಾಮನ ಅಸ್ತ್ರದಿಂದ ನಿನ್ನಂತೆ ಆ ದಿತಿಯು ಗರ್ಭವು ಬಹುಪ್ರಕಾರವಾಗಿ ವಜ್ರಾಯುಧದಿಂದ ಛೇದಿಸಲ್ಪಟ್ಟಂಥಾದ್ದಾದಾಗ್ಯೂ ಶ್ರೀ ವಾಸುದೇವನ ದಯೆಯಿಂದ ಮೃತಿಯನ್ನೈದಲಿಲ್ಲ; ಅದೇನುಕಾರಣವೆಂದರೆ : ಪುರುಷನು ಆದಿಪುರುಷನಾದ ಶ್ರೀಹರಿಯನ್ನು ಒಂದುಬಾರಿ ಪೂಜಿಸಿ ಸಾಯುಜ್ಯವನ್ನು ಪಡೆಯುವನು ; ಹೀಗಿರುವಲ್ಲಿ ದಿತಿಯಿಂದ ಸ್ವಲ್ಪ ನ್ಯೂನವಾಗಿ ಸಂವತ್ಸರಪರ್ಯಂತವು ಶ್ರೀಹರಿಯು ಪೂಜಿಸಲ್ಪಟ್ಟದ್ದರಿಂದ ಆ ಪೂಜಾ ಪ್ರಭಾವದಿಂದ ಆ ಗರ್ಭವು ವಜ್ರಾಯುಧಪ್ರಹಾರದಿಂದ ನಷ್ಟವಾಗದೆ ವೃದ್ಧಿಹೊಂದಿತು ; ಅನಂತರದಲ್ಲಿ ಇಂದ್ರನೊಡನೆ ಕೂಡಿ ಐವತ್ತುಮಂದಿಯಾದ ಮರುತ್ತುಗಳೆಂಬ ದೇವತೆಗಳು ಇಂದ್ರನಿಂದಲೇ ಮಾತೃದೋಷವನ್ನು ಪರಿಹರಿಸಿ ಯಜ್ಞಗಳಲ್ಲಿ ಸೋಮಪಾನಂಗೈಯಲು ಯೋಗ್ಯರಾಗಿ ಮಾಡಲ್ಪಟ್ಟರು ; ಆಗ ಪತಿವ್ರತೆಯಾದ ದಿತಿದೇವಿಯು ನಿದ್ರೆಯದೆಸೆಯಿಂದ ಎಚ್ಚರಂಗೊಂಡು ಅಗ್ನಿಯಂತೆ ಪ್ರಕಾಶಿಸುತ ಇಂದ್ರನೊಡನೆ ಕೂಡಿರುವ ತನ್ನ ಪುತ್ರರನ್ನು ಕಂಡು ಅತ್ಯಂತವಾಗಿ ಸಂತೋಷಪಟ್ಟು ಇಂದ್ರನನ್ನು ಕುರಿತು 'ಎಲೈ ಇಂದ್ರನೆ, ನಾನು ದೇವತೆಗಳಿಗೆ ಭಯಂಕರನಾದ ಒಬ್ಬ ಪುತ್ರನನ್ನು ಪಡೆಯಲಿಚ್ಛೈಸಿ ಸಹಿಸಲಶಕ್ಯವಾದ ತಪಸ್ಸನ್ನಾಚರಿಸಿದೆನು ; ಒಬ್ಬ ಪುತ್ರನು ಜನಿಸಬೇಕೆಂದು ನನ್ನಿಂದ ಸಂಕಲ್ಪಿಸಲ್ಪಟ್ಟಾಗ್ಯೂ ಎಂತು ನಾಲ್ವತ್ತೊಂಭತ್ತುಮಂದಿ ಪುತ್ರರು ಜನಿಸಿದರು ; ಈ ಅರ್ಥವು ನಿನ್ನಿಂದ ತಿಳಿಯಲ್ಪಟ್ಟದ್ದರೆ ನನಿಗೆ ನೀನು ಅನೃತವಿಲ್ಲದೆ ಸತ್ಯವಾಗಿ ಹೇಳು ' ಎಂದು ನುಡಿದಳು.

ಈರೀತಿ ದಿತಿಯು ನಿಷ್ಕಪಟವಾಗಿ ನುಡಿಯಲು ಇಂದ್ರನು ಕೂಡ ಕಪಟವಿಲ್ಲದೆ ದಿತಿಯನ್ನು ಕುರಿತು "ಎಲೈ ತಾಯೆ ಕೇಳು: ನಾನು ನಿನ್ನ ತಾತ್ಪರ್ಯವನ್ನು ತಿಳಿದು ನಿನ್ನ ಸಮೀಪವನ್ನೈದಿ ವ್ರತರಂಧ್ರವನ್ನು ಹೊಂದಿ ಸ್ವಾರ್ಥದಲ್ಲೇ ಬುದ್ಧಿಯುಳ್ಳವನಾಗಿ ಧರ್ಮವನ್ನು ತಿಳಿಯದೆ ನಿನ್ನ ಗರ್ಭವನ್ನು ಏಳುಪ್ರಕಾರವಾಗಿ ಛೇದಿಸಿದೆನು; ಆಗ ಆ ಏಳುಮಂದಿ ಕುಮಾರರೂ ಪುನಹ ಏಳುಪ್ರಕಾರಗಳಿಂದ ಛೇದಿಸಲ್ಪಟ್ಟರೂ ನಾಶವನ್ನೈದಲಿಲ್ಲ! ಎಲೈ ತಾಯೆ, ಆಗ ಆ ಪರಮಾಶ್ಚರ್ಯವನ್ನು ನೋಡಿ ನಾನು ಶ್ರೀಹರಿಪೂಜಾಭಕ್ತಿಯು ಕಾರ್ಯಾಭಿಮುಖವಾಯಿತೆಂದು ನಿಶ್ಚಯಿಸಿದೆನು; ಅದುಕಾರಣ ಯಾವ ಪುರುಷರು ನಿಷ್ಕಾಮರಾಗಿ ಶ್ರೀಹರಿಯ ಪೂಜೆಯನ್ನೇ ಅಪೇಕ್ಷಿಸುತ ಮೋಕ್ಷವನ್ನು ಕೂಡಾ ಇಚ್ಛೈಸುವವರಾಗುವದಿಲ್ಲವೋ ಅವರೇ ಸ್ವಾರ್ಥಸಂಪಾದನೆಯಲ್ಲಿ ನಿಪುಣರೆಂದು ಋಷಿಗಳು ಸ್ಮರಿಸುತಲಿಧಾರೆ; ಜ್ಞಾನಿಯಾದ ಯಾವ ಪುರುಷನಾದರೂ ಆತ್ಮಪ್ರದನಾದ ತನಿಗೆ ಆತ್ಮನಾದ ಜಗದೀಶ್ವರನಾದ ಶ್ರೀಹರಿಯನ್ನು ಪೂಜಿಸದೆ ಯಾವ ವಿಷಯಭೋಗದಿಂದ ನರಕವುಂಟಾಗುವದೋ ಅಂಥಾ ವಿಷಯಭೋಗವನ್ನಪೇಕ್ಷಿಸುವನಾದಾನೇ! ಎಲೈ ಪೂಜ್ಯಳಾದ ತಾಯೆ, ಅಜ್ಞನಾದ ನನ್ನ ಈ ದುರ್ಜನವ್ಯಾಪಾರವನ್ನು ನೀನು ಕ್ಷಮಿಸು; ದೈವಯೋಗದಿಂದ ನಿನ್ನ ಗರ್ಭವು ಸಪ್ತವಾಗಿ ಪುನಹಾ ವೃದ್ಧಿಹೊಂದಿತು" ಎಂದು ವಿಜ್ಞಾಪಿಸಿ ಪ್ರಭುವಾದ ಇಂದ್ರನು ತನ್ನ ಶುದ್ಧಭಾವದಿಂದ ಸಂತುಷ್ಟಳಾದ ಆ ದಿತಿಯಿಂದ ಆಜ್ಞಾಪಿಸಲ್ಪಟ್ಟವನಾಗಿ ಆ ಮರುತ್ತುಗಳೊಡಗೂಡಿ ತಾಯಿಯಾದ ದಿತಿದೇವಿಗೆ ನಮಸ್ಕರಿಸಿ ಸ್ವರ್ಗವನ್ನೈದಿದನು! ಎಲೈ ಅರಸೆ, ನೀನು ನನ್ನನ್ನು ಯಾವವನ್ನು ಕುರಿತು ಪ್ರಶ್ನೆಗೈದೆಯೋ ಶುಭಕರವಾದ ಮರುತ್ತುಗಳ ಜನ್ಮಕ್ರಮವು ಈರೀತಿ ಸಮಗ್ರವಾಗಿ ನಿನಗೋಸ್ಕರ ನಿರೂಪಿಸಲ್ಪಟ್ಟಿತು—ಎಂದು ನುಡಿದನು.

೧೯ನೇ ಅಧ್ಯಾಯ.

ಶುಕಮುನಿಯು ಪರೀಕ್ಷಿದ್ರಾಯನಿಗೆ ವಿಷ್ಣುಪದವೆಂಬ ವ್ರತದ ವಿಧಾನವನ್ನು ನಿರೂಪಿಸಿದ್ದು.

ಪರೀಕ್ಷಿದ್ರಾಯನು "ಎಲೈ ಶುಕಮುನಿಯೆ, ನಿನ್ನಿಂದ ಪುತ್ರೋತ್ಪತ್ತಿಕರವಾದ ಯಾವ ವ್ರತವು ನಿರೂಪಿಸಲ್ಪಟ್ಟಿತೋ ಮತ್ತೂ ಯಾವ ವ್ರತಾಚರಣದಿಂದ ಶ್ರೀಹರಿಯು ಪ್ರಸನ್ನನಾಗುವನೋ ಆ ವ್ರತವಿಧಾನವನ್ನು ತಿಳಿಯಲಿಚ್ಛೈಸುತ್ತೇನೆ; ಅದನ್ನು ನಿರೂಪಿಸು" ಎಂದು ಪ್ರಶ್ನೆಗೈದನು.

ಶುಕಮುನಿಯು "ಎಲೈ ಪರೀಕ್ಷಿದ್ರಾಯನೇ, ಸ್ತ್ರೀಯು ಪತಿಯ ಅನುಜ್ಞೆಯಿಂದ ಮಾರ್ಗಶಿರ ಶುದ್ಧಪ್ರತಿಪತ್ತಿನಲ್ಲಿ ಸಕಲ ಇಷ್ಟಾರ್ಥ ಸಾಧಕವಾದ ಈ ವ್ರತವನ್ನು ಉಪಕ್ರಮಿಸಬೇಕು; ಸ್ತ್ರೀಯು ಮೊದಲು ಮರುತ್ತುಗಳ ಉತ್ಪತ್ತಿಯನ್ನು ಶ್ರವಣಗೈದು ಬ್ರಾಹ್ಮಣರ ಅನುಜ್ಞೆಯನ್ನು ಪಡದು ದಂತಧಾವನಪೂರ್ವಕವಾಗಿ ಸ್ನಾನಗೈದು ಶುಭ್ರವಸ್ತ್ರಗಳನ್ನುಟ್ಟು ಸರ್ವಾಲಂಕಾರಭೂಷಿತಳಾಗಿ ಭೋಜನಕ್ಕಿಂತಲು ಪೂರ್ವದಲ್ಲಿ ಪ್ರಾತಃಕಾಲದಲ್ಲಿ ಲಕ್ಷ್ಮಿಯೊಡನೆ ಶ್ರೀನಾರಾಯಣನನ್ನು ಪೂಜಿಸಿ ಮೊದಲು ಈ ಅರ್ಥವುಳ್ಳ ಮಂತ್ರಗಳಿಂದ ನಮಸ್ಕಾರಗೈಯ್ಯಬೇಕು! ಎಲೈ ಪೂರ್ಣಕಾಮನಾದ ಶ್ರೀಹರಿಯೆ, ನೀನು ಅಪೇಕ್ಷಾರಹಿತನಾಗಿ ಮಹಾಲಕ್ಷ್ಮಿಗೆ ಪತಿಯಾಗಿ ಅಣಿಮಾದ್ಯಷ್ಟಸಿದ್ಧಿಗೆ ಆಶ್ರಯನಾಗಿರುವೆಯಾದಕಾರಣ ನಿನಗೆ ಸಮಸ್ತವೂ ಪರಿಪೂರ್ಣವಾಗಿಧೆ; ಅನ್ಯರಿಂದ ಆಗತಕ್ಕದ್ದು ಸ್ವಲ್ಪವೂ ಇಲ್ಲವಾದ್ದರಿಂದ ನಾನು ನಿನಗೋಸ್ಕರ ನಮಸ್ಕಾರಗೈಯುತ್ತೇನೆ! ಎಲೈ ಈಶ್ವರನೆ, ನೀನು ದಯೆಯಿಂದಲೂ ಐಶ್ವರ್ಯದಿಂದಲೂ ತೇಜಸ್ಸಿನಿಂದಲೂ ಮನಃಶಕ್ತಿಯಿಂದಲೂ ಇಂದ್ರಿಯಶಕ್ತಿಯಿಂದಲೂ ಸತ್ಯಸಂಕಲ್ಪ ಮೊದಲಾದ ಗುಣಗಳಿಂದಲೂ ಕೂಡಾ ಸಾಕಲ್ಯವಾಗಿ ಸೇವಿಸಲ್ಪಡುತಲಿದ್ಧೀಯೆ; ಆದಕಾರಣ ಸರ್ವವ್ಯಾಪಕನೂ ಭಗವಂತನೂ ಆಗುತಲಿದ್ಧೀಯೆ; ವಿಷ್ಣುಪತ್ನಿಯಾಗಿ ಮಹಾ ಮಾಯಾರೂಪಳಾಗಿ ಮಹಾ ಪುರುಷನಾದ ಶ್ರೀಹರಿಯಂತೆ ನಿರಪೇಕ್ಷತ್ವಾದಿ ಗುಣಗಳುಳ್ಳವಳಾಗಿ ಲೋಕಹಿತಳಾಗಿ ಮೇಧಾರೂಪಳಾಗಿ ಮಹಾ ಭಾಗ್ಯವತಿಯಾಗಿ ಲೋಕಮಾತೆ

ಯಾಗಿರುವ ಎಲೈ ಮಹಾಲಕ್ಷ್ಮಿಯೆ ನಿನಗೆ ನಮಸ್ಕಾರವು! ಎಂದು ನಮಸ್ಕರಿಸಿ ಭಗವಂತನಾದ ಮಹಾಪುರುಷನಾದ ಮಹಾನುಭಾವನಾದ ಲಕ್ಷ್ಮೀಪತಿಯಾದ ಮಹಾವಿಭೂತಿಗಳೊಡನೆ ಕೂಡಿರುವ ಶ್ರೀಹರಿಗೋಸ್ಕರ ಪೂಜೆಯನ್ನು ಸಮರ್ಪಿಸುತ್ತೇನೆ! ಎಂಬ ಈ ಅರ್ಥವುಳ್ಳ ಮಂತ್ರದಿಂದಲೇ ಸ್ತ್ರೀಯು ಪ್ರತಿದಿನದಲ್ಲಿಯೂ ಶ್ರೀಮಹಾವಿಷ್ಣುವಿಗೆ ಆವಾಹನಾಸನ ಅರ್ಘ್ಯ ಪಾದ್ಯ ಸ್ನಾನ ವಸ್ತ್ರ ಉಪವೀತ ಭೂಷಣ ಗಂಧ ಪುಷ್ಪ ಧೂಪದೀಪ ನೈವೇದ್ಯಗಳು ಮೊದಲಾದ ಉಪಚಾರಗಳನ್ನು ಏಕಾಗ್ರಚಿತ್ತಳಾಗಿ ಸಮರ್ಪಿಸಿ ಸ್ವಾಮಿಗೆ ಉಪಹಾರಂಗೈದು ಮಿಕ್ಕ ದ್ರವ್ಯದಿಂದ ಅಗ್ನಿಯಲ್ಲಿ ಹನ್ನೆರಡಾವರ್ತಿ ಆಹುತಿಗಳಂಗೈಯಬೇಕು; ಆ ಹೋಮಮಂತ್ರಾರ್ಥವೆಂತೆನೆ: ಭಗವಂತನಾದ ಮಹಾಪುರುಷನಾದ ಲಕ್ಷ್ಮೀಪತಿಗೋಸ್ಕರ ನಮಸ್ಕಾರವೆಂಬ ಈ ಅರ್ಥವುಳ್ಳ ಮಂತ್ರದಿಂದ ಅಗ್ನಿಯಲ್ಲಿ ದ್ವಾದಶಾಹುತಿಗಳಂಗೈಯಬೇಕು; ಮತ್ತು ಸ್ತ್ರೀಯು ಸಕಲ ಸಂಪತ್ತುಗಳನ್ನು ಅಪೇಕ್ಷಿಸುವಳಾದರೆ ವರಪ್ರದರಾದ ಸಕಲೇಷ್ಟಾರ್ಥಪ್ರದರಾದ ಲಕ್ಷ್ಮೀನಾರಾಯಣರಿಬ್ಬರನ್ನೂ ಸರ್ವಕಾಲದಲ್ಲಿಯೂ ಭಕ್ತಿಯಿಂದ ಪೂಜಿಸಬೇಕು; ಹೋಮಾನಂತರದಲ್ಲಿ ಭಕ್ತಿಯುಕ್ತವಾದ ಮನಸ್ಸಿನಿಂದ ದಂಡವಂತೆ ಭೂಮಿಯಲ್ಲಿ ನಮಸ್ಕಾರಂಗೈದು ಆ ಮಂತ್ರವನ್ನು ದಶಾವರ್ತಿ ಜಪಿಸಿ ಅನಂತರದಲ್ಲಿ ಸ್ತೋತ್ರಂಗೈಯಬೇಕು; ಸ್ತೋತ್ರಪ್ರಕಾರವೆಂತೆನೆ: ಎಲೈ ಮಹಾಲಕ್ಷ್ಮೀ ಮಹಾವಿಷ್ಣುಗಳಿರಾ, ನೀವು ಪ್ರಪಂಚಕ್ಕೆ ನಿಯಾಮಕರು; ಮತ್ತೂ ಪ್ರಪಂಚಕ್ಕೆ ಮೂಲಕಾರಣಸ್ವರೂಪರು! ಎಲೈ ಹರಿಯೆ, ಈ ಲಕ್ಷ್ಮಿಯು ಚ್ಯುತಿಯಿಲ್ಲದಿರುವ ಮಾಯಾಶಕ್ತಿಗಳುಳ್ಳ ಸೂಕ್ಷ್ಮವಾದ ಪ್ರಕೃತಿಯಲ್ಲವೆ; ನೀನೇ ಆ ಪ್ರಕೃತಿಗೆ ಅಧ್ಯಕ್ಷನಾದ ಸಾಕ್ಷಾತ್ಪರಮಪುರುಷನಲ್ಲವೆ; ನೀನು ಸಮಸ್ತಯಜ್ಞಸ್ವರೂಪನು; ಈ ಲಕ್ಷ್ಮಿಯು ಯಜ್ಞವನ್ನು ನೆರವೇರಿಸುವ ಭಾವನೆಯೆಂಬ ವೈದಿಕವ್ಯಾಪಾರಸ್ವರೂಪಳು; ಈ ಲಕ್ಷ್ಮಿಯು ಲೋಕಸಿದ್ಧವಾದ ಕ್ರಿಯಾಸ್ವರೂಪಳು; ನೀನು ಆ ಕ್ರಿಯಾಫಲವನ್ನು ಅನುಭವಿಸುವವನು; ಈ ಲಕ್ಷ್ಮಿಯು ಸಕಲವಿಷಯಸ್ವರೂಪಳು; ನೀನು ಆ ವಿಷಯಪ್ರಕಾಶಕನಾಗಿ ವಿಷಯಭೋಕ್ತೃವಾದವನು; ನೀನು ಸಮಸ್ತ ಶರೀರಗಳಲ್ಲಿಯೂ ಆತ್ಮಸ್ವರೂಪನಾಗಿರುವೆ; ಈ ಲಕ್ಷ್ಮಿಯು ಇಂದ್ರಿಯಗಳಿಗೆ ಆಶ್ರಯಳಾಗಿರುವ ಲಕ್ಷ್ಮಿಯು ನಾಮಸ್ವರೂಪಳು; ನೀನು ಆ ನಾಮರೂಪಗಳಿಗೆ ಪ್ರಕಾಶರೂಪನಾಗಿ ಆಧಾರಭೂತನಾಗಿರುವೆ! ಎಲೈ ಸತ್ಪುರುಷರಿಂದ ಶ್ಲಾಘಿಸಲು ಯೋಗ್ಯನಾದ ಹರಿಯೆ, ಉತ್ಕೃಷ್ಟರಾದ ನೀವಿಬ್ಬರೂ ಮೂರು ಲೋಕಗಳಿಗೆ ವರಪ್ರದರಾದರೆ ಈಗ ನನ್ನ ಇಷ್ಟಾರ್ಥಗಳು ಸತ್ಯಗಳಾಗಲಿ ಎಂದು ಲಕ್ಷ್ಮಿಯೊಡನೆ ಕೂಡಿರುವ ವರಪ್ರದನಾದ ಶ್ರೀಹರಿಯನ್ನು ಸ್ತುತಿಸಿ ಉಪಹಾರದ್ರವ್ಯಗಳನ್ನು ಮತ್ತೊಂದುಕಡೆಯಲ್ಲಿಟ್ಟು ಪುನಹಾ ಹರಿಗೆ ಆಚಮನವನ್ನು ಸಮರ್ಪಿಸಿ ಪೂಜಿಸಬೇಕು; ಅನಂತರದಲ್ಲಿ ಸ್ತ್ರೀಯು ಭಕ್ತಿಯಿಂದ ಏಕಾಗ್ರವಾದ ಮನದೊಡಗೂಡಿ ಸ್ತೋತ್ರದಿಂದ ಸ್ತುತಿಸಿ ನಿರ್ಮಾಲ್ಯವನ್ನು ಆಘ್ರಾಣಂಗೈದು ಪುನಹಾ ಹರಿಯನ್ನು ಪೂಜಿಸಬೇಕು; ತರುವಾಯ ವ್ರತನಿಷ್ಠಳಾದ ಸ್ತ್ರೀಯು ಉತ್ಕೃಷ್ಟವಾದ ಭಕ್ತಿಯಿಂದ ಈಶ್ವರನೆಂಬ ಬುದ್ಧಿಯಿಂದಲೂ ಆಯಾಯ ಪ್ರಿಯವ್ಯಾಪಾರಗಳಿಂದಲೂ ಪತಿಯನ್ನು ಸೇವಿಸಬೇಕು; ಆ ಪತಿಯು ಕೂಡ ತಾನು ಪ್ರೇಮಶೀಲನಾಗಿ ನಾನಾಪ್ರಕಾರಗಳಾದ ಆ ಸಮಸ್ತ ಕರ್ಮಗಳಿಗೆ ಅನುಕೂಲನಾಗಿರಬೇಕು; ದಂಪತಿಗಳಲ್ಲಿ ಒಬ್ಬರಿಂದಗೈಯಲ್ಪಟ್ಟ ಸತ್ಕರ್ಮವು ಇಬ್ಬರಿಗೂ ಉಂಟಾಗುವದಾದಕಾರಣ ಪತ್ನಿಗೆ ರಜೋದರ್ಶನಾದಿಗಳಿಂದ ದೇವಪೂಜಾದಿಗಳಲ್ಲಿ ಯೋಗ್ಯತೆಯಿಲ್ಲದೆ ಅಶುಚಿತ್ವವುಂಟಾದ ಕಾಲದಲ್ಲಿ ಪತಿಯು ಏಕಾಗ್ರಚಿತ್ತನಾಗಿ ಈ ವ್ರತವನ್ನಾಚರಿಸಬೇಕು; ಯಾವರೀತಿಯಿಂದಲಾದರೂ ಈ ವಿಷ್ಣುವ್ರತವನ್ನು ವಿಘ್ನವಿಲ್ಲದಂತೆ ಆಚರಿಸಬೇಕು; ಸ್ತ್ರೀಯು ಬ್ರಾಹ್ಮಣರನ್ನು ಸುವಾಸಿನಿಯರನ್ನು ಸಹಾ ಗಂಧಮಾಲ್ಯ ಉಪಹಾರ ಅಲಂಕಾರಗಳಿಂದ ಭಕ್ತಿಯಿಂದ ನಿಯಮಯುಕ್ತಳಾಗಿ ಪ್ರತಿದಿನದಲ್ಲಿಯೂ ಪೂಜಿಸಿ ಶ್ರೀಹರಿಯನ್ನು ಸ್ವಸ್ಥಾನದಲ್ಲಿ ಉದ್ವಾಸನಂಗೈದು ಮುಂದುಗಡೆಯಲ್ಲಿ ಹರಿಗೆ ನಿವೇದಿತವಾದ ಪದಾರ್ಥವನ್ನು ಆತ್ಮಸಿದ್ಧಿಗೋಸ್ಕರಲೂ ಸಮಸ್ತ ಇಷ್ಟಾರ್ಥಗಳನ್ನು ಪಡೆಯುವದಕ್ಕೋಸ್ಕರಲೂ ಭಕ್ಷಿಸಬೇಕು; ಈ ಪೂಜಾವಿಧಾನದಿಂದ ಮಾರ್ಗಶಿರ ಮಾಸವನ್ನು ಆರಂಭಿಸಿಕೊಂಡು ದ್ವಾದಶ ಮಾಸಗಳನ್ನು ಕಳೆದು ಕಾರ್ತೀಕ ಮಾಸದ ಅಂತ್ಯದಿನದಲ್ಲಿ ಉಪವಾಸಂಗೈದು ಪುನಹಾ ಮಾರ್ಗಶಿರ ಶುದ್ಧ ಪಾಡ್ಯದಲ್ಲಿ ಸೂರ್ಯೋದಯವಾಗಲು ಸ್ನಾನವನ್ನು ಮಾಡಿ ಆಚಮನಂಗೈದು ಪೂರ್ವದಂತೆ ಹರಿಪೂಜೆಯನ್ನಾಚರಿಸಿ ಕ್ಷೀರ

ದಿಂದ ಪಕ್ವವಾದ ಚರುವಿನೊಡನೆ ಆಜ್ಯದಿಂದ ಪರ್ವಸ್ಥಾಲೀಪಾಕವಿಧಾನದಿಂದ ವ್ರತನಿಷ್ಠಳಾದ ಸ್ತ್ರೀಯೂ ಪತಿಯೂ ಸಹಾ ಅಗ್ನಿಯಲ್ಲಿ ದ್ವಾದಶಾಹುತಿಗಳಂಗೈಯಬೇಕು ; ಅನಂತರದಲ್ಲಿ ಆತ್ಮಜ್ಞನಾದ ಪತಿಯೂ ವೃಷ್ಟಾನ್ನಾದಿಗಳಿಂದ ಭಕ್ತಿಯಿಂದ ಹನ್ನೆರಡುಮಂದಿ ಬ್ರಾಹ್ಮಣರಿಗೆ ಭೋಜನಂಗೈಸಿ ಬ್ರಾಹ್ಮಣರಿಗೋಸ್ಕರ ಗುಡಯುಕ್ತಗಳಾದ ತಿಲಗಳನ್ನೂ ಉದಕುಂಭಗಳನ್ನೂ ದಾನಂಗೈದು ಸಂತುಷ್ಟರಾದ ಆ ಬ್ರಾಹ್ಮಣರಿಂದ ಪ್ರಯೋಗಿಸಲ್ಪಟ್ಟ ಆಶೀರ್ವಾದಗಳನ್ನು ಶಿರಸ್ಸಿನಿಂದ ಪರಿಗ್ರಹಿಸಿ ಅವರನ್ನು ಕುರಿತು ಭಕ್ತಿಯಿಂದ ಶಿರಸ್ಸಿನಿಂದ ನಮಸ್ಕಾರಂಗೈದು ಅವರ ಅನುಜ್ಞೆಯಿಂದ ಭುಂಜಿಸಬೇಕು ; ಅನಂತರದಲ್ಲಿ ಪತಿಯೂ ಮೌನದಿಂದ ಬಂಧುಗಳೊಡನೆ ಆಚಾರ್ಯನನ್ನು ಮುಂದುಗಡೆಯಲ್ಲಿರಿಸಿಕೊಂಡು ಸುಪುತ್ರಪ್ರಾಪ್ತಿಗೆ ಕಾರಣವಾದ ಸೌಭಾಗ್ಯ ವೃದ್ಧಿಕರವಾದ ಆ ಚರುವಿನ ಶೇಷವನ್ನು ತನ್ನ ಪತ್ನಿಗೋಸ್ಕರ ಕೊಡಬೇಕು ; ಈ ಲೋಕದಲ್ಲಿ ಪುರುಷರು ಈ ವಿಷ್ಣುಪದವ್ರತವನ್ನಾಚರಿಸಿ ಮಾಹಾತ್ಮ್ಯವನ್ನೂ ಸಂಪತ್ತನ್ನೂ ಪುತ್ರರನ್ನೂ ದೀರ್ಘಸೌಮಂಗಲ್ಯವನ್ನೂ ಕೀರ್ತಿಯನ್ನೂ ಅತ್ಯುನ್ನತಗಳಾದ ಗೃಹಗಳನ್ನೂ ಪಡೆಯುವರು ; ಕನ್ಯೆಯು ಈ ವ್ರತಾಚರಣೆಯಿಂದ ಸಮಸ್ತ ಲಕ್ಷಣಗಳುಳ್ಳ ಪತಿಯನ್ನು ಪಡೆಯುವಳು ; ವಿಧವೆಯಾದ ಸ್ತ್ರೀಯು ಈ ವ್ರತದಿಂದ ಪಾಪರಹಿತಳಾಗಿ ಉತ್ತಮಗತಿಯನ್ನೈದುವಳು ; ನಷ್ಟರಾದ ಪುತ್ರರುಳ್ಳ ಸ್ತ್ರೀಯು ಈ ವ್ರತದಿಂದ ದೀರ್ಘಾಯುಷ್ಮಂತರಾದ ಪುತ್ರರನ್ನು ಪಡೆಯುವಳು ; ಯಾವವಳು ಧನಕ್ಕೆ ಅಧ್ಯಕ್ಷಳಾದಾಗ್ಯೂ ಭಾಗ್ಯರಹಿತಳಾಗಿರುವಳೋ ಅವಳು ಸೌಭಾಗ್ಯವತಿಯಾಗುವಳು ; ಸೌಂದರ್ಯಹೀನಳಾದ ಸ್ತ್ರೀಯು ಉತ್ತಮವಾದ ಸೌಂದರ್ಯವನ್ನು ಪಡೆಯುವಳು ; ಯಾವ ಪುರುಷನು ರೋಗಯುಕ್ತನಾಗಿರುವನೋ ಅವನು ಈ ವ್ರತದಿಂದ ಮಹಾವ್ಯಾಧಿಯಿಂದ ಮುಕ್ತನಾಗಿ ಇಂದ್ರಿಯಗಳಿಂದ ದೃಢವಾದ ದೇಹವನ್ನು ಪಡೆಯುವನು ; ಯಾವ ಪುರುಷನು ಅಭ್ಯುದಯಕರ್ಮದಲ್ಲಿ ಈ ಉಪಾಖ್ಯಾನವನ್ನು ಪಠನಂಗೈಯುವನೋ ಅವನ ಪಿತೃಗಳಿಗೂ ದೇವತೆಗಳಿಗೂ ಅನಂತವಾದ ತೃಪ್ತಿಯುಂಟಾಗಿ ಸಂತುಷ್ಟರಾದ ಆ ಪಿತೃಗಳೂ ದೇವತೆಗಳೂ ಸಹಾ ಸಮಸ್ತ ಇಷ್ಟಾರ್ಥಗಳನ್ನೀವರು ; ಹೋಮಾನಂತರದಲ್ಲಿ ಈ ಉಪಾಖ್ಯಾನ ಪಠನದಿಂದ ಅಗ್ನಿಯೂ ಶ್ರೀಹರಿಯೂ ಸಂತುಷ್ಟರಾಗಿ ಇಷ್ಟಾರ್ಥಗಳನ್ನೀವರು ! ಎಲೈ ಪರೀಕ್ಷಿದ್ರಾಯನೇ, ಮರುತ್ತುಗಳ ಮಹತ್ತಾದ ಉತ್ಪತ್ತಿಕ್ರಮವು ದಿತೀದೇವಿಯ ಪುಣ್ಯಕರವಾದ ಮಹತ್ತಾದ ವ್ರತವಿಧಾನವು ನನ್ನಿಂದ ನಿನಗೋಸ್ಕರ ನಿರೂಪಿಸಲ್ಪಟ್ಟಿತು ” ಎಂದು ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು ನಿರೂಪಿಸಿದನು.

ಇಂತು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ
ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ
ಧರಣೀ ವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾಗಿ ಮಹಿಶೂರ ಶ್ರೀಚಾಮರಾಜ ಮಹೀ
ಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀಚಾಮುಂ
ಡಿಕಾಂಬಾ ವರಪ್ರಸಾದೋದ್ಭವರಾದ ಶ್ರೀ ಕೃಷ್ಣರಾಜ ಒಡೆಯರವರಿಂದ ಬುಧಜನ
ಸಮ್ಮತಿಯಿಂದ ರಚಿಸಲ್ಪಟ್ಟ ಕರ್ನಾಟಕ ಭಾಷಾರೂಪವಾದ ಶ್ರೀಕೃಷ್ಣರಾಜ
ವಾಣೀವಿಲಾಸವೆಂಬ ಶ್ರೀಮದ್ಭಾಗವತದ ಟೀಕಿನ

ಷಷ್ಠಸ್ಕಂಧ ಸಮಾಪ್ತಿ.

  

ಶ್ರೀಬಾದರಾಯಣ ಸಮಾಕಲಿತಂ ರಸಾರ್ದ್ರಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋಭಾವುಕಾಃ ಪಿಬತಭಾಗವತಂ ರಸಮಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಸಪ್ತಮಸ್ಕಂಧ.

೧ನೇ ಅಧ್ಯಾಯ.

ಸನಕಸನಂದನಾದಿಗಳು ಜಯವಿಜಯರಿಗೆ ಶಾಪವನ್ನಿತ್ತದ್ದು.

ಅನಂತರದಲ್ಲಿ ಪರೀಕ್ಷಿದ್ರಾಜನು ಶುಕಮುನಿಯನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನಾದ ಶುಕಮುನಿಯೆ, ಸರ್ವಸಮನಾದಕಾರಣ ವೈಷಮ್ಯರಹಿತನಾಗಿ ಸರ್ವರಿಗೂ ಪ್ರಿಯನಾದ್ದರಿಂದ ನೈರ್ಘೃಣ್ಯವಿಲ್ಲದ ನಿಖಿಲಪ್ರಾಣಿಗಳಿಗೂ ಸುಹೃತ್ತಾದ್ದರಿಂದ ಪಕ್ಷಪಾತವಿಲ್ಲದ ಅವ್ಯಾಹತೈಶ್ವರ್ಯಾದಿ ಗುಣಪೂರ್ಣನಾದ ಶ್ರೀಹರಿಯು ವೈಷಮ್ಯವುಳ್ಳವನಂತೆ ಇಂದ್ರನಿಗೋಸ್ಕರ ಎಂತು ದೈತ್ಯರನ್ನು ಸಂಹರಿಸಿದನು ? ಸರ್ವಕಾಲದಲ್ಲಿಯೂ ಸಾಕ್ಷಾತ್ಪರಮಾನಂದಸ್ವರೂಪನಾದ ಹರಿಗೆ ಅಸುರರ ದೆಶೆಯಿಂದ ಪ್ರಯೋಜನವೇನು ? ನಿರ್ಗುಣನಾದ ಹರಿಗೆ ಅಸುರರ ದೆಶೆಯಿಂದ ಭಯವಿಲ್ಲವಾದಕಾರಣ ದ್ವೇಷವೂ ಇಲ್ಲ ! ಎಲೈ ಪೂಜ್ಯನಾದ ಮುನಿಯೆ, ನಾರಾಯಣನ ನಿಗ್ರಹಾನುಗ್ರಹರೂಪವಾದ ಗುಣಗಳ ವಿಷಯವಾಗಿ ಈಪ್ರಕಾರವಾಗಿ ಸಂದೇಹವುಂಟಾಗಿದೆಯಾದಕಾರಣ ಇದನ್ನು ನೀನು ಪರಿಹರಿಸು" ಎಂದು ಪ್ರಶ್ನೆಗೈದನು.

ಆ ಬಳಿಕ ಶುಕಮುನಿಯು "ಎಲೈ ಪರೀಕ್ಷಿದ್ರಾಜನೆ, ಶ್ರೀಹರಿಯಲ್ಲಿ ಭಕ್ತಿಯನ್ನಧಿಕವಾಗಿ ಉಂಟುಮಾಡುವ ಪ್ರಹ್ಲಾದನ ಮಹಿಮೆಯೊಡಗೂಡಿದ ಶ್ರೀಹರಿಯ ಚರಿತ್ರೆಯನ್ನು ನೀನು ಚನ್ನಾಗಿ ಪ್ರಶ್ನೆಗೈದೆ ; ನಾರದನೇ ಮೊದಲಾದವರು ಸರ್ವೋತ್ತಮವಾದ ಪುಣ್ಯಾಕರವಾದ ಈ ಚರಿತ್ರೆಯನ್ನು ಯಾವಾಗಲೂ ಗಾನಂಗೈವರು ; ನಾನು ತಂದೆ

ಯಾದ ವ್ಯಾಸಮುನಿಗೆ ನಮಸ್ಕರಿಸಿ ಶ್ರೀಕೃಷ್ಣನ ಪರಮಪಾವನವಾದ ಚರಿತ್ರೆಯನ್ನು ನಿನಗೋಸ್ಕರ ಹೇಳುವೆನು ಕೇಳು: ಯಾವಕಾರಣದಿಂದ ಹರಿಯು ಮಾಯೆಗೂ ಅತಿರಿಕ್ತನಾದವನೋ ಆ ಕಾರಣದಿಂದ ನಿರ್ಗುಣನಾದಾಗ್ಯೂ ಜನನವಿಲ್ಲದವನಾದಾಗ್ಯೂ ರಾಗದ್ವೇಷಾದಿಗಳಿಗೆ ಕಾರಣವಾದ ದೇಹೇಂದ್ರಿಯಾದಿಗಳಿಂದ ರಹಿತನಾದಾಗ್ಯೂ ಮಾಯೆಯ ಸತ್ವಾದಿಗುಣಗಳನ್ನಾಶ್ರಯಿಸಿ ನಿಗ್ರಹಿಸತಕ್ಕ ಅಸುರರನ್ನು ನಿಗ್ರಹಿಸುವನು ; ಸತ್ವರಜಸ್ತಮಸ್ಸುಗಳೆಂಬ ಈ ಗುಣಗಳು ಪ್ರಕೃತಿಗೇಹೊರ್ತು ಆತ್ಮನಿಗಿಲ್ಲ ; ಈ ಗುಣಗಳಿಗೆ ಒಂದೇಕಾಲದಲ್ಲಿ ಹೆಚ್ಚುಕುಂದುಗಳಿಲ್ಲ ; ಒಂದು ಕಾಲದಲ್ಲಿ ಒಂದೊಂದು ಹೆಚ್ಚುವದು ; ಉಳಿದಕಾಲದಲ್ಲಿ ಒಂದೊಂದು ಕುಂದುವದು ; ಯಾವಾಗ ಸತ್ವಗುಣಕ್ಕೆ ಜಯಕಾಲವೋ ಆಗ ಆತ್ಮನು ದೇವತೆಗಳ ಋಷಿಗಳ ಶರೀರಗಳಲ್ಲಿ ಪ್ರವೇಶಿಸಿ ಅವರಿಗೆ ವೃದ್ಧಿಯನ್ನುಂಟುಮಾಡುವನು ; ಅದೇ ಮೇರಿಗೆ ರಜೋಗುಣವೃದ್ಧಿಕಾಲದಲ್ಲಿ ಅಸುರರು ಹೆಚ್ಚುವರು ; ತಮೋಗುಣ ಉದ್ರೇಕದಲ್ಲಿ ಯಕ್ಷರಾಕ್ಷಸರು ಹೆಚ್ಚುವರು ; ಜ್ಯೋತಿರ್ಜಲಾಕಾಶಗಳು ಕಾಷ್ಠಪಾತ್ರಘಟಗಳಲ್ಲಿ ಎಂತು ಉಪಾಧಿಭೇದದಿಂದ ನಾನಾರೂಪವಾಗಿ ತೋರುತಲಿವೆಯೋ ವಿಚಾರಿಸಿನೋಡಲು ಆ ನಾನಾಕಾರತ್ವವು ಸ್ವಾಭಾವಿಕವಲ್ಲ ; ಆ ತೆರದಿಂದ ಆತ್ಮನು ಆ ಗುಣವೃದ್ಧಿಕಾಲದಲ್ಲಿ ಸುರರೇ ಮೊದಲಾದವರ ದೇಹದದೆಶೆಯಿಂದ ಬೇರೆ ಕಾಣಲ್ಪಡುವದಿಲ್ಲ ; ಆದಾಗ್ಯೂ ನಿಪುಣರಾದ ಮುನಿಜರು ಎಂತು ಸೂರ್ಯಕಾಂತಾದಿಗಳಲ್ಲಿ ದಾಹಕತ್ವವನ್ನು ಕಂಡು ಜ್ಯೋತಿಸ್ಸನ್ನು ನಿಶ್ಚಯಿಸುವರೋ ಆ ತೆರದಿಂದ ವಿಚಾರಂಗೈದು ಸ್ವಭಾವಕರ್ಮಾದಿ ನಿಷೇಧದಿಂದ ತತ್ವಸ್ವರೂಪವನ್ನು ತಿಳಿಯುತಲಿರ್ಧಾರೆ ; ಪರಮೇಶ್ವರನು ಯಾವಾಗ ಜೀವನ ಭೋಗಕ್ಕೋಸ್ಕರ ಶರೀರಗಳನ್ನು ಸೃಷ್ಟಿಸಲಿಚ್ಛೈಸುವನೋ ಆಗ ಸಾಮಾನ್ಯದಿಂದಿರುವ ರಜಸ್ಸನ್ನು ಬೇರೆಗೈದು ಸೃಷ್ಟಿಸುವನು ; ಯಾವಾಗ ವಿಚಿತ್ರಗಳಾದ ಶರೀರಗಳಲ್ಲಿ ಕ್ರೀಡಿಸಲಿಚ್ಛೈಸುವನೋ ಆಗ ಸತ್ವವನ್ನಾಶ್ರಯಿಸುವನು ; ಯಾವಾಗ ವಿಲಯಂಗೈಯ್ಯಸಲಿಚ್ಛೈಸುವನೋ ಆಗ ತಮಸ್ಸನ್ನು ಗ್ರಹಿಸುವನು ! ಕೇಳೈ ನರೇಂದ್ರನೆ, ಕಾರಣಗಳಾದ ಪ್ರಧಾನಪುರುಷರಿಂದ ಅನುಮತವಾದ ಕೀರ್ತಿಯುಳ್ಳ ಸತ್ಕರ್ತೃವಾದ ಈಶ್ವರನು ಸರ್ವಾಶ್ರಯನಾಗಿ ಸಂಚರಿಸುವ ಕಾಲವನ್ನು ಸ್ವಚೇಷ್ಟಾರೂಪನಾದ ಕಾರಣ ತಾನೇ ಸೃಷ್ಟಿಗೈದು ಈ ಕಾಲವು ಯಾವಾಗ ಸತ್ವವನ್ನೇ ವೃದ್ಧಿಗೈವದೋ ಆಗ ಆ ಈಶ್ವರನೂ ಕೂಡ ಸತ್ವಪ್ರಧಾನವಾದ ದೇವಸಮೂಹವನ್ನು ಹೆಚ್ಚಿಸಿ ದೇವ ದ್ವೇಷಿಗಳಾದ ದೈತ್ಯರನ್ನು ಸಂಹರಿಸುವನು ; ಆದ್ದರಿಂದ ಕಾಲಶಕ್ತಿಯಿಂದುಂಟಾದ ಗುಣವೈಷಮ್ಯವು ತದಧಿಷ್ಠಾತೃವಾದ ಈಶ್ವರನಲ್ಲಿ ತೋರುವದೇ ಹೊರ್ತು ಈಶ್ವರನಲ್ಲಿ ವಾಸ್ತವವಾಗಿ ವೈಷಮ್ಯವಿಲ್ಲ ! ಕೇಳೈ ಅರಸೆ, ಈ ದೈತ್ಯಸಂಹಾರವಿಷಯದಲ್ಲಿ ಪೂರ್ವದಲ್ಲಿ ರಾಜಸೂಯವೆಂಬ ಮಹಾಯಜ್ಞದಲ್ಲಿ ಅಜಾತಶತ್ರುವಾದ ಧರ್ಮಪುತ್ರನು ಅವ್ಯಾಹತೈಶ್ವರ್ಯಯುಕ್ತನಾದ ವಾಸುದೇವನಲ್ಲಿ ಪರಮದ್ವೇಷಿಯಾದ ಶಿಶುಪಾಲನಿಗುಂಟಾದ ಲೋಕಕ್ಕೆ ಆಶ್ಚರ್ಯಕರವಾದ ಸಾಯುಜ್ಯವನ್ನು ನೋಡಿ ಆಶ್ಚರ್ಯಯುಕ್ತವಾದ ಮನಸ್ಸುಳ್ಳವನಾಗಿ ಸಮಸ್ತ ಋಷಿಗಳೂ ಕೇಳುತ್ತಿರಲು ನಾರದಮುನಿಯನ್ನು ಕುರಿತು 'ಎಲೈ ದೇವರ್ಷಿಯಾದ ನಾರದಮುನಿಯೆ, ಪರತತ್ವವಾದ ಶ್ರೀವಾಸುದೇವನಲ್ಲಿ ವಿಶೇಷವಾಗಿ ದ್ವೇಷಿಯಾದ ಶಿಶುಪಾಲನಿಗೆ ಏಕಾಂತಭಕ್ತರಿಗೂ ದುರ್ಲಭವಾದ ಸಾಯುಜ್ಯರೂಪವಾದ ಗತಿಯು ಆಯಿತೆಂಬದು ಅತ್ಯದ್ಭುತವು ; ವೇನನೆಂಬ ಅರಸು ಭಗವನ್ನಿಂದೆಯನ್ನು ಮಾಡಿ ಬ್ರಾಹ್ಮಣಶಾಪದಿಂದ ನರಕದಲ್ಲಿ ಬೀಳಿಸಲ್ಪಟ್ಟನು ; ಅವನಂತೆಯೇ ಇವನು ದುರ್ಗತಿಗೆ ಯೋಗ್ಯನಾದವನು ; ಹೀಗಿರುವಲ್ಲಿ ದಮಘೋಷನ ಪುತ್ರನಾದ ಪಾಪಿಷ್ಠನಾದ ಶಿಶುಪಾಲನೂ ದುರ್ಬುದ್ಧಿಯುಳ್ಳ ದಂತವಕ್ತ್ರನೂ ಬಾಲ್ಯ ಮೊದಲುಗೊಂಡು ಶರೀರ ಪತನದವರಿಗೂ ಗೋವಿಂದನಲ್ಲಿ ವೈರದಿಂದ ದುರುಕ್ತಿಯುಳ್ಳವರು ; ಜನ್ಮಾದಿರಹಿತನಾದ ಪರಬ್ರಹ್ಮನಾದ ವಿಷ್ಣುವನ್ನು ಬಾರಿಬಾರಿಗೂ ದೂಷಿಸುವ ಶಿಶುಪಾಲ ದಂತವಕ್ತ್ರರ ನಾಲಿಗೆಯಲ್ಲಿ ಕುಷ್ಠಮೆಂತಾಗಲಿಲ್ಲ ; ಅವರು ಅಂಧತಮಸ್ಸನ್ನು ಎಂತು ಹೊಂದಲಿಲ್ಲ ; ಐದಲಶಕ್ಯವಾದ ಸ್ವರೂಪವುಳ್ಳ ಆ ಶ್ರೀಕೃಷ್ಣನಲ್ಲಿ ಸರ್ವರೂ ನೋಡುತ್ತಿರಲು ಆ ದುರಾತ್ಮರಾದ ಶಿಶುಪಾಲ ದಂತವಕ್ತ್ರರೀರ್ವರೂ ಸಾಯುಜ್ಯವನ್ನೆಂತು ಪಡೆದರು ! ಕೇಳೈ ಪೂಜ್ಯನಾದ ನಾರದಮುನಿಯೆ, ಈ ಆಶ್ಚರ್ಯವನ್ನು ನೋಡಿ ಗಾಳಿಸೋಂಕಿದ ದೀಪದಂತೆ ನನ್ನ ಬುದ್ಧಿಯು ಚಲಿಸುತಲಿರ್ಧಮಾದಕಾರಣ ಈ ಅರ್ಥದಲ್ಲಿ ಕಾರಣವನ್ನು ಪೇಳಿ ನನ್ನ ಸಂಶಯವನ್ನು ಪರಿಹರಿಸು' ಎಂದು ಪ್ರಾರ್ಥಿಸಿದನು.

ಆ ವಾಕ್ಯವನ್ನು ಕೇಳಿ ನಾರದನು ಧರ್ಮರಾಯನನ್ನು ಕುರಿತು "ಕೇಳೈ ಧರ್ಮಪುತ್ರನೆ, ಪ್ರಕೃತಿಪುರುಷರ ವಿವೇಕವನ್ನು ಅರಿಯದಿರುವ ದೋಷದಿಂದ ನಿಂದನವು ಸ್ತುತಿಯು ಸತ್ಕಾರವು ಅವಮಾನವು ಇವುಗಳ ಜ್ಞಾನವೇ ಫಲವಾಗುಳ್ಳದ್ದಾಗಿ ಶರೀರವು ಕಲ್ಪಿಸಲ್ಪಟ್ಟಿಧೆ; ಆ ದೇಹಾಭಿಮಾನದಿಂದ ಪ್ರಾಣಿಗಳಿಗೆ ಎಂತು ನಾನು—ನನ್ನದೆಂಬ ವೈಷಮ್ಯವು ಅಜ್ಞಾನದಿಂದುಂಟಾಗುವದೋ ಆರೀತಿಯಿಂದ ಹಿಂಸಾದಂಡಗಳು ಈಶ್ವರನಿಗಿಲ್ಲವೆಂದು ತಿಳಿ; ಅಭಿಮಾನವು ಯಾವ ದೇಹವನ್ನು ನಿಮಿತ್ತೀಕರಿಸಿಕೊಂಡು ಉಂಟಾಯಿತೋ ಅಂಥಾ ದೇಹವಧೆಯು ಅಹಂಕಾರಮಮತೆಗಳಿಗೆ ಆಶ್ರಯನಾದ ಜೀವನಿಗೇಹೊರ್ತು ಸರ್ವಾತ್ಮನಾದ ಪರಮೇಶ್ವರನಿಗೆ ಹಿಂಸಾದಿಗಳು ಹ್ಯಾಗೆ ಘಟಸೀತು; ಅದ್ವಿತೀಯನಾಗಿ ಸರ್ವಾತ್ಮನಾಗಿರುವ ಪರಮಾತ್ಮನಿಗೆ ನಿಂದೆಯು ಸ್ತುತಿಯು ಮೊದಲಾದವು ಇಲ್ಲವೇ ಇಲ್ಲ; ಅಹಂಕಾರ ಮಮಕಾರಗಳಿಂದ ನಿಂದೆ ಹಿಂಸಾದಿಗಳನ್ನು ಮಾಡುವ ಪುರುಷನಲ್ಲಿ ಅನುಗ್ರಹಿಸಲೋಸುಗ ಸಂಹಾರಂಗೈವನು; ಆದಕಾರಣ ಶ್ರೀಹರಿಗೆ ನಿಂದೆಯಿಂದುಂಟಾದ ವೈಷಮ್ಯವಿಲ್ಲವಾದ್ದರಿಂದ ಯಾವಪ್ರಕಾರದಿಂದಲಾದರೂ ಶ್ರೀಹರಿಯ ಧ್ಯಾನಮಾತ್ರದಿಂದಲೇ ದುಷ್ಟದೈತ್ಯರಿಗೂ ಭಗವಂತನ ನಿಂದಾರೂಪವಾದ ದೋಷವು ಪರಿಹರಿಸಲ್ಪಟ್ಟು ಸಾಯುಜ್ಯವಾಗುವದು ಯುಕ್ತವೇ ಸರಿ; ಆದಕಾರಣ ಪರಮ ಕರುಣಾವಂತನಾದ ಶ್ರೀಹರಿಯಲ್ಲಿ ವೈರದಿಂದಾಗಲಿ ಭಯದಿಂದಾಗಲಿ ಸ್ನೇಹದಿಂದಾಗಲಿ ಕಾಮದಿಂದಾಗಲಿ ಮತ್ತೊಂದೆಣಿಸದೆ ಚಿತ್ತವನ್ನು ನಿಲ್ಲಿಸಬೇಕು; ಮನುಜನು ವೈರದಿಂದೆಂತು ಭಗವಂತನ ಸಾಯುಜ್ಯವನ್ನೈದುವನೋ ಹಾಗೆ ಭಕ್ತಿಯೋಗದಿಂದ ಸಾಯುಜ್ಯವನ್ನೈದಲಾರನೆಂಬದು ನಿಶ್ಚಯವು; ಅದು ಹ್ಯಾಗಂದರೆ: ಭ್ರಮರವು ತಲೆಯಲ್ಲಿ ಕುಕ್ಕಿ ತಂದು ತನ್ನ ಗೂಡಿನಲ್ಲಿ ತಡೆಯಲ್ಪಟ್ಟ ಬಂದಾನೊಂದು ಹುಳುವು ಆ ತುಂಬಿಯನ್ನೇ ಸ್ಮರಿಸಿಕೊಂಡು ವೈರಭಯಗಳಿಂದೆಂತು ಆ ಭ್ರಮರ ಸ್ವರೂಪವನ್ನೈದುವದೋ ಆಪ್ರಕಾರ ಮಾಯೆಯಿಂದ ಮನುಜ ಶರೀರವನ್ನು ಧರಿಸಿರುವ ಸರ್ವೇಶ್ವರನಾದ ಭಗವಂತನಾದ ಶ್ರೀ ಕೃಷ್ಣನಲ್ಲಿ ವೈರದಿಂದುಂಟಾದ ನಿರಂತರ ಸ್ಮರಣೆಯಿಂದ ಸಮಸ್ತ ಪಾಪಗಳಿಂದ ಬಿಡಿಸಲ್ಪಟ್ಟ ಶಿಶುಪಾಲಾದಿಗಳು ಆತ್ಮಸ್ವರೂಪವನ್ನೈದಿದರು; ಕಾಮದಿಂದಲಾದರೂ ಭಯದಿಂದಲಾದರೂ ದ್ವೇಷದಿಂದಲಾದರೂ ಸ್ನೇಹದಿಂದಲಾದರೂ ಈಶ್ವರನಲ್ಲಿ ಮನವಿಟ್ಟು ಆ ಕಾಮಾದಿಗಳಿಂದುಂಟಾದ ಪಾಪಗಳನ್ನು ಬಿಟ್ಟು ಭಕ್ತಿಯಿಂದ ಯಾವಗತಿಯುಂಟಾಗುವದೋ ಅಂಥಾ ಗತಿಯನ್ನು ಬಹಳ ಜನರೈದಿದರು; ಕಾಮದಿಂದ ಗೋಪಸ್ತ್ರೀಯರೂ ಭಯದಿಂದ ಕಂಸನೂ ದ್ವೇಷದಿಂದ ಶಿಶುಪಾಲಾದಿಗಳೂ ಸಂಬಂಧದಿಂದ ಯಾದವರೂ ಸ್ನೇಹದಿಂದ ನೀವೂ ಭಕ್ತಿಯಿಂದ ನಾವೂ ಶ್ರೀಕೃಷ್ಣ ಕೃಪೆಗೆ ಪಾತ್ರರು; ಕಾಮಾದಿಗಳಿಂದ ಹರಿಯನ್ನು ಭಜಿಸುವ ಐದುವಿಧರಾದವರಲ್ಲಿ ವೇನನೆಂಬ ಅರಸು ಯಾದವರಲ್ಲಿ ಸೇರಿದವನಲ್ಲವಾದಕಾರಣ ನರಕಪ್ರಾಪ್ತಿಯುಂಟಾಯಿತು; ಅದುಕಾರಣ ಯಾವದಾದರೂ ಒಂದು ಉಪಾಯದಿಂದ ಮನಸ್ಸನ್ನು ಶ್ರೀಕೃಷ್ಣನಲ್ಲಿಟ್ಟು ಕೃತಾರ್ಥನಾಗಬೇಕು! ಕೇಳೈ ಪಾಂಡುಪುತ್ರನೆ, ನಿನ್ನ ಮಾತೃಸಹೋದರೀ ಪುತ್ರನಾದ ಶಿಶುಪಾಲನೂ ದಂತವಕ್ತ್ರನೆಂಬವನೂ ಇವರೀರ್ವರೂ ವೈಕುಂಠದಲ್ಲಿ ವಿಷ್ಣುವಿನ ಸನ್ನಿಧಿಯಲ್ಲಿರುವವರಲ್ಲಿ ಶ್ರೇಷ್ಠರು; ಇವರಿಬ್ಬರೂ ಬ್ರಾಹ್ಮಣ ಶಾಪದಿಂದ ವೈಕುಂಠದಿಂದ ಭೂಮಿಯನ್ನೈದಿದರು" ಎಂದು ನುಡಿದನು.

ಧರ್ಮಪುತ್ರನು "ಎಲೈ ನಾರದಮುನಿಯೆ, ವೈಕುಂಠವಾಸಿಗಳಾದವರಿಗೆ ಶಾಪವೆಂತು ಬಂದುದು? ಹರಿದಾಸರನ್ನು ಶಾಪವೆಂತು ಮುಟ್ಟುವದು? ಶ್ರೀಹರಿಯ ಸಮೀಪದಲ್ಲಿರುವವರಿಗೆ ಭೂಮಿಯಲ್ಲಿ ಜನನ ಹ್ಯಾಗೆ ಉಂಟಾದೀತು? ಈ ಅರ್ಥದಲ್ಲಿ ನಂಬಿಕೆ ತೋರುವದಿಲ್ಲವಾಗಿ ಶ್ರೀಹರಿಯ ಮುಖ್ಯಭಕ್ತನಾದ ನೀನೇ ವಿಸ್ತರದಿಂದ ಪೇಳು; ಜನನಾದಿಗಳಿಗೆ ಕಾರಣಗಳಾದ ಪ್ರಾಕೃತಗಳಾದ ದೇಹೇಂದ್ರಿಯ ಪ್ರಾಣಗಳಿಂದ ರಹಿತರಾದ ಶುದ್ಧಸತ್ವಮಯವಾದ ತೇಜೋಮಯವಾದ ಶರೀರವುಳ್ಳ ವೈಕುಂಠವಾಸಿಗಳಿಗೆ ಪ್ರಕೃತಿಸಂಬಂಧವುಳ್ಳ ದೇಹಸಂಬಂಧವು ಎಂತು ಉಂಟಾಯಿತು? ಇದನ್ನು ವಿವರಿಸಿ ನಿರೂಪಿಸು" ಎಂದು ಪ್ರಶ್ನೆಗೈದನು.

ನಾರದಮುನಿಯು "ಕೇಳೈ ಯುಧಿಷ್ಠಿರನೆ, ಬಂದಾನೊಂದು ಕಾಲದಲ್ಲಿ ಬ್ರಹ್ಮಪುತ್ರರಾದ ಸನಂದನಾದಿಗಳು ಲೋಕತ್ರಯವನ್ನು ಸ್ವೇಚ್ಛೆಯಿಂದ ಸಂಚರಿಸುತ ವಿಷ್ಣುಲೋಕವನ್ನೈದಿದರು; ಇವರು ಪುರಾತನರಾದ ಮರೀಚಿ

ಮೊದಲಾದವರಿಗೂ ಪೂರ್ವದಲ್ಲಿ ಉದ್ಭವಿಸಿದವರಾದಾಗ್ಯೂ ಐದುವರ್ಷದ ಬಾಲಕರಂತೆ ದಿಗಂಬರರಾಗಿ ಬಂದ ಸನಕಾ
ದಿಗಳನ್ನು ನೋಡಿ ದ್ವಾರಪಾಲಕರು ಯಾರೋ ಬಾಲಕರು ಬಂದರೆಂದು ಅವರನ್ನು ತಡೆಯಲು ಆ ಋಷಿಗಳು ಕೋ
ಪವುಳ್ಳವರಾಗಿ ಆ ದ್ವಾರಪಾಲಕರನ್ನು ಕುರಿತು 'ಎಲೈ ದ್ವಾರಪಾಲಕರುಗಳಿರಾ, ರಜಸ್ತಮಸ್ಸುಗಳಿಂದ ರಹಿತವಾದ
ನಾರಾಯಣನ ಚರಣಸನ್ನಿಧಿಯಲ್ಲಿ ನೀವಿಬ್ಬರೂ ವಾಸಂಗೈಯ್ಯಲು ಯೋಗ್ಯರಲ್ಲ; ಅದುಕಾರಣ ಅವಿವೇಕಿಗಳಾದ
ನೀವು ಪಾಪಿಷ್ಠವಾದ ಅಸುರ ಸಂಬಂಧಿಯಾದ ಯೋನಿಯಲ್ಲಿ ಶೀಘ್ರದಲ್ಲಿ ಜನಿಸುವರಾಗಿ' ಎಂದು ಶಪಿಸಲು ತತ್ಕಾಲ
ದಲ್ಲಿ ವೈಕುಂಠಸ್ಥಾನದಿಂದ ಬೀಳುತಲಿರುವ ಆ ದ್ವಾರಪಾಲಕರನ್ನು ನೋಡಿ ಆ ಪರಮ ಕಾರುಣಿಕರಾದ ಸನಂದನಾದಿ
ಗಳೇ ಆ ದ್ವಾರಪಾಲಕರನ್ನು ಕುರಿತು 'ನೀವು ಅಜ್ಞಾನದಿಂದ ತಡವವರಾದಿರಾದಕಾರಣ ಅಸುರಯೋನಿಯಲ್ಲಿ ಮೂ
ರು ಜನ್ಮಗಳನ್ನು ಕಳೆದು ಅನಂತರದಲ್ಲಿ ವಿಷ್ಣುಪಾದಸನ್ನಿಧಿಯನ್ನೈದುತ್ತೀರಿ' ಎಂದು ನುಡಿದರು. ಆಗ ಅವರೀ
ರ್ವರೂ ದಿತೀದೇವಿಯ ಗರ್ಭದಲ್ಲಿ ಜನಿಸಿ ದೈತ್ಯರಿಂದಲೂ ದಾನವರಿಂದಲೂ ನಮಸ್ಕೃತರಾಗಿ ಸಹೋದರರಾಗಿ ಹಿರ
ಣ್ಯಾಕಶಿಪು ಹಿರಣ್ಯಾಕ್ಷನೆಂದು ನಾಮಗಳನ್ನು ತಾಳಿದರು; ಅವರೀರ್ವರಲ್ಲಿ ಹಿರಣ್ಯಾಕ್ಷನು ಭೂಮಿಯನ್ನುದ್ಧರಿಸಲು
ದ್ಯುಕ್ತನಾದ ಆದಿವರಾಹನಿಂದ ಸಂಹೃತನಾದನು; ಹಿರಣ್ಯಾಕಶಿಪುವೆಂಬ ಅಸುರನು ನರಸಿಂಹರೂಪಿಯಾದ ಭಗವಂತ
ನಿಂದ ಸಂಹೃತನಾದನು; ಇದಕ್ಕೆ ಕಾರಣವೇನಂದರೆ: ಹಿರಣ್ಯಾಕಶಿಪುವು ನಾರಾಯಣನಿಗೆ ಪ್ರಿಯ ಪರಮಭಾಗವತ
ನಾದ ಪ್ರಹ್ಲಾದನೆಂಬ ಪುತ್ರನನ್ನು ತನ್ನ ಮೃತ್ಯುವಿಗೋಸ್ಕರ ಕೊಲ್ಲಲಿಚ್ಛೈಸಿ ನಾನಾವಿಧಗಳಾದ ಯಾತನೆಗಳಿಂದ
ಆಯಾಸಪಡಿಸಿದನು; ಆದಾಗ್ಯೂ ಸರ್ವಭೂತಗಳಲ್ಲಿಯೂ ಸಮದರ್ಶನನಾಗಿ ಸಮಸ್ತಪ್ರಾಣಿಗಳಲ್ಲಿಯೂ ಆತ್ಮಜ್ಞಾ
ನವುಳ್ಳವನಾಗಿ ಪ್ರಶಾಂತನಾಗಿ ನಾರಾಯಣನ ತೇಜಸ್ಸಿನಿಂದ ರಕ್ಷಿಸಲ್ಪಟ್ಟವನಾದ ಪ್ರಹ್ಲಾದನನ್ನು ನಾನಾವಿಧ ಶಸ್ತ್ರಾ
ಸ್ತ್ರಪ್ರಹಾರವೇ ಮೊದಲಾದ್ದರಿಂದ ಕೊಲ್ಲಲು ಸಮರ್ಥನಾಗಲಿಲ್ಲ; ಅನಂತರದಲ್ಲಿ ಅವರೀರ್ವರೂ ವಿಶ್ರವಸ್ಸೆಂಬ
ಋಷಿಯ ದೆಶೆಯಿಂದ ಕೈಕಸಿಯಲ್ಲಿ ರಾವಣ ಕುಂಭಕರ್ಣರೆಂಬ ನಾಮಗಳಿಂದ ರಾಕ್ಷಸರಾಗಿ ಜನಿಸಿ ಸರ್ವಲೋಕವ
ನ್ನು ಸಂತಾಪಪಡಿಸಿದರು; ಆ ಜನ್ಮದಲ್ಲಿಯೂ ನಾರಾಯಣನು ಅವರ ಶಾಪ ಪರಿಹಾರಕ್ಕೋಸ್ಕರ ರಘುವಂಶದಲ್ಲಿ ಅವ
ತರಿಸಿ ಅವರನ್ನು ಸಂಹರಿಸಿದನು; ಈ ಶ್ರೀರಾಮನ ಪ್ರಭಾವವನ್ನು ಮಾರ್ಕಂಡೇಯನ ದೆಶೆಯಿಂದ ಕೇಳುತ್ತೀಯೆ:
ಪುನಶ್ಚ ಅವರೀರ್ವರೂ ಕ್ಷತ್ರಿಯರಾಗಿ ಜನಿಸಿ ಶಿಶುಪಾಲ ದಂತವಕ್ತ್ರರೆಂಬ ನಾಮದಿಂದ ಪ್ರಸಿದ್ಧರಾಗಿದ್ದು ಶ್ರೀಕೃಷ್ಣ
ಚರಿತ್ರದಿಂದ ಹತರಾದಕಾರಣ ಪಾಪದಿಂದ ಬಿಡಲ್ಪಟ್ಟವರಾಗಿ ಈಗ ಶಾಪದಿಂದ ಮುಕ್ತರಾದರು; ಈಪ್ರಕಾರವಾಗಿ
ಶ್ರೀಕೃಷ್ಣನಲ್ಲಿ ವೈರವನ್ನು ಮಾಡಿ ಅದರಿಂದುಂಟಾದ ನಿರಂತರಧ್ಯಾನದಿಂದ ಶ್ರೀಕೃಷ್ಣನ ಚಕ್ರದಿಂದ ಹತರಾದಕಾರಣ
ಪಾಪದಿಂದ ಮುಕ್ತರಾಗಿ ವಿಷ್ಣುಲೋಕವನ್ನೈದಿ ದ್ವಾರಪಾಲಕರಾದರು" ಎಂದು ನಿರೂಪಿಸಿದನು.

ಧರ್ಮಪುತ್ರನು "ಎಲೈ ಮಹಾತ್ಮನಾದ ನಾರದಮುನಿಯೇ, ಹಿರಣ್ಯಾಕಶಿಪುವಿಗೆ ಪ್ರಿಯನಾದ ಪುತ್ರನಲ್ಲಿ
ದ್ವೇಷವು ಯಾವತೆರದಿಂದುಂಟಾಯಿತು? ಪ್ರಹ್ಲಾದನಿಗೆ ನಾರಾಯಣನ ಚರಣದಲ್ಲಿ ಏಕನಿಷ್ಠತೆ ಎಂತು ಸಂಭವಿಸಿ
ತು? ಎಲೈ ಮಹಾಮುನಿಯೆ, ಇದನ್ನು ನನಗೋಸ್ಕರ ಕೃಪೆಯಿಂದ ನಿರೂಪಿಸು" ಎಂದು ನುಡಿದನು.

೨ನೇ ಅಧ್ಯಾಯ.

ಹಿರಣ್ಯಾಕಶಿಪುವು ತನ್ನ ತಾಯಿ ಮೊದಲಾದವರಿಗೆ ಪ್ರೇತಬಂಧು ಯಮಸಂವಾದವನ್ನು ಹೇಳಿದ್ದು.

"ಕೇಳೈ ಧರ್ಮಪುತ್ರನೆ, ಹಿರಣ್ಯಾಕಶಿಪುವೆಂಬ ದೈತ್ಯೇಂದ್ರನು ವರಾಹರೂಪಿಯಾದ ನಾರಾಯಣನಿಂದ ಒಡ
ಹುಟ್ಟಿದವನಾದ ಹಿರಣ್ಯಾಕ್ಷನು ಸಂಹೃತನಾದದ್ದನ್ನು ನೋಡಿ ಶೋಕ ರೋಷಗಳಿಂದ ಸಂತಾಪವನ್ನೈದಿ ಅತಿಶಯ
ವಾದ ಕೋಪವುಳ್ಳವನಾಗಿ ತನ್ನ ತುಟಿಯನ್ನು ತಾನೇ ಕಚ್ಚಿ ಕೋಪದಿಂದ ಜ್ವಲಿಸುವ ನೇತ್ರಗಳಿಂದ ಧೂಮ್ರವರ್ಣ
ವಾದ ಆಕಾಶವನ್ನು ನೋಡುತ ಭಯಂಕರಗಳಾದ ಕೋರೆದಾಡೆಗಳಿಂದ ಯುಕ್ತವಾದ ಕ್ರೂರದೃಷ್ಟಿಯಿಂದ ನೋಡ

ಲಕ್ಷ್ಯವಾದ ಹುಬ್ಬುಗಂಟಿನಿಂದೊಡಗೂಡಿದ ಮುಖವುಳ್ಳವನಾಗಿ ಸಭೆಯಲ್ಲಿ ತ್ರಿಶೂಲವನ್ನೆತ್ತಿ ದಾನವರನ್ನು ಕುರಿತು 'ಎಲೈ ದಾನವ ದೈತ್ಯರುಗಳಿರಾ, ಎಲೈ ದ್ವಿಮೂರ್ಧನೆ, ಎಲೈ ತ್ರ್ಯಕ್ಷನೆ, ಎಲೈ ಶಂಬರನೆ, ಎಲೈ ಶತಬಾಹುವೆ, ಎಲೈ ಹಯಗ್ರೀವನೆ, ಎಲೈ ನಮುಚಿಯೆ, ಎಲೈ ಪಾಕನೆ, ಎಲೈ ಇಲ್ವಲನೆ, ಎಲೈ ವಿಪ್ರಜಿತ್ತಿಯೆ, ಎಲೈ ಪುಲೋಮನೆ, ಎಲೈ ಶಕುನನೇ ನೀವೆಲ್ಲರೂ ನನ್ನ ಅಜ್ಞೆಯನ್ನು ಕೇಳಿ : ಕೇಳಿದಮೇಲೆ ವಿಳಂಬವನ್ನು ಮಾಡದೆ ಆ ಕೆಲಸವನ್ನು ಮಾಡಿ ; ಸರ್ವಸಮನಾದಾಗ್ಯೂ ತನ್ನನ್ನೇ ಭಜಿಸುವರಿಗೆ ವಶ್ಯನಾಗಿ ಅವರ ಕಾರ್ಯಗಳನ್ನೇ ನಿರ್ವಾಹವನ್ನು ಮಾಡುವ ಶ್ರೀಹರಿಯ ಸಹಾಯದಿಂದ ಸ್ವಲ್ಪ ವೀರ್ಯರಾದ ದೇವತೆಗಳು ಆ ವಿಷ್ಣುವಿನಿಂದಲೇ ನನಗೆ ಸಹೋದರನಾದ ಹಿರಣ್ಯಾಕ್ಷನನ್ನು ಸಂಹಾರಂಗೈಸಿದರು ; ವೈಷಮ್ಯವನ್ನೈದಿದವನಾಗಿ ದಯಾಶೂನ್ಯನಾಗಿ ಶುದ್ಧ ತೇಜೋಮಯನಾದಾಗ್ಯೂ ಮಾಯಾಮಯನಾದ ಶುದ್ಧ ವರಾಹರೂಪವುಳ್ಳವನಾಗಿ ತನ್ನನ್ನು ಭಜಿಸುವ ಭಕ್ತರನ್ನು ಭಜಿಸುವನಾದಕಾರಣ ಬಾಲಕನಂತೆ ಚಪಲಚಿತ್ತನಾದ ಆ ವಿಷ್ಣುವಿನ ಶಿರಸ್ಸನ್ನು ನನ್ನ ತ್ರಿಶೂಲದಿಂದ ಛೇದಿಸಿ ಅಧಿಕವಾದ ಆ ವಿಷ್ಣುವಿನ ರಕ್ತದಿಂದ ರಕ್ತಪ್ರಿಯನಾದ ನನ್ನ ಭ್ರಾತೃವನ್ನು ಸಂತೋಷಪಡಿಸಿ ಮನೋವ್ಯಥೆಯನ್ನು ಪರಿಹರಿಸಿಕೊಳ್ಳುವೆನು ; ಮಾಯಾವಿಯಾದ ಶತೃವಾದ ಆ ವಿಷ್ಣುವು ಸಂಹೃತನಾದಮೇಲೆ ವಿಷ್ಣುವೇ ಪ್ರಾಣವಾಗುಳ್ಳ ದೇವತೆಗಳು ವೃಕ್ಷದ ಮೂಲಛೇದವಾದಮೇಲೆ ಕೊಂಬೆಗಳು ನಾಶವನ್ನೈದುವಂತೆ ನಾಶವನ್ನೈದುವರು ; ಎಷ್ಟುಪರ್ಯಂತವು ನಾನು ವಿಷ್ಣುವನ್ನು ಸಂಹರಿಸುವೆನೋ ಅಷ್ಟುತನಕ ಬ್ರಹ್ಮ ಕ್ಷತ್ರಾದಿ ವರ್ಣಗಳಿಂದ ಪೂರ್ಣವಾದ ಭೂಮಿಯನ್ನೈದಿ ತಪಸ್ಸುಗಳನ್ನು ಯಜ್ಞಗಳನ್ನು ವೇದಾಧ್ಯಯನಗಳನ್ನು ವ್ರತಗಳನ್ನು ದಾನಗಳನ್ನು ಮಾಡುವವರನ್ನು ಸಂಹರಿಸಿ ; ಯಾವಕಾರಣದಿಂದ ನನ್ನನ್ನು ನಿರಾಕರಿಸಿ ಬ್ರಾಹ್ಮಣರ ತಪಸ್ಸೇ ಮೂಲವಾಗುಳ್ಳ ಯಜ್ಞಸ್ವರೂಪನಾದ ಧರ್ಮಮಯನಾದ ಪುರುಷನಾದ ದೇವತೆಗಳಿಗೂ ಋಷಿಗಳಿಗೂ ಪಿತೃದೇವತೆಗಳಿಗೂ ಪ್ರಾಣಿಮಾತ್ರಕ್ಕೂ ಪ್ರಾಪ್ಯಸ್ಥಾನನಾದ ಆ ವಿಷ್ಣುವನ್ನೇ ಭಜಿಸುತ್ತಾರೆಯೋ ಅವರನ್ನು ಸಂಹರಿಸಿ ; ಎಲ್ಲೆಲ್ಲಿ ಬ್ರಾಹ್ಮಣರು ಗೋವುಗಳು ದೇವತೆಗಳು ವರ್ಣಾಶ್ರಮಗಳು ಅದಕ್ಕೆ ಉಚಿತವಾದ ಧರ್ಮಗಳೂ ಇದೆಯೋ ಆಯಾ ದೇಶಗಳನ್ನೈದಿ ಛೇದಿಸಿ ದಹಿಸಿ' ಎಂದು ನುಡಿದನು. ಈರೀತಿ ಹಿರಣ್ಯಕಶಿಪುವಿನಿಂದ ಆಜ್ಞಪ್ತರಾದ ಯುದ್ಧಪ್ರಿಯರಾದ ದೈತ್ಯರು ತಮ್ಮ ಪ್ರಭುವಿನ ಅಪ್ಪಣೆಯನ್ನು ಶಿರಸಾವಹಿಸಿ ಪ್ರಜೆಗಳನ್ನು ಪೀಡಿಸಿದರು ; ದೊಡ್ಡಪೇಟೆಯುಳ್ಳ ಊರುಗಳನ್ನೂ ಪೇಟೆಯಿಲ್ಲದ ಗ್ರಾಮಗಳನ್ನೂ ಗೌಳಿಗರ ದೊಡ್ಡಿಗಳನ್ನೂ ಕ್ರಿತ್ರಿಮವನಗಳನ್ನೂ ಬೆಳೆಯಾಗುವ ಹೊಲಗದ್ದೆಗಳನ್ನೂ ಉಪವನಗಳನ್ನೂ ಋಷಿಗಳಿರುವ ಸ್ಥಾನಗಳನ್ನೂ ರತ್ನಗಳು ಪುಟ್ಟುವ ಗಣಿಗಳನ್ನೂ ಹಳ್ಳಿಗಳನ್ನೂ ಬೆಟ್ಟದ ಮಧ್ಯದಲ್ಲಿರುವ ಗ್ರಾಮಗಳನ್ನೂ ಗೊಲ್ಲರ ದೊಡ್ಡಿಗಳನ್ನೂ ಅರಸುಗಳಿರುವ ಊರುಗಳನ್ನೂ ದಹಿಸಿದರು ; ಕೆಲವರು ಗುದ್ದಲಿಗಳಿಂದ ಪ್ರಾಕಾರಗಳನ್ನೂ ಗೋಪುರಗಳನ್ನೂ ಕೆರೆಕಟ್ಟೆಗಳನ್ನೂ ಹೊಡದರು ; ಕೆಲವರು ಬಳ್ಳೀಮರಗಳನ್ನು ಕೊಡಲಿಗಳಿಂದ ಕಡಹಿದರು ; ಕೆಲವರು ಉರಿಯುವ ಕೊಳ್ಳಿಗಳಿಂದ ಮನೆಗಳನ್ನು ಸುಟ್ಟರು ; ಕೆಲವರು ದೇವತೆಗಳನ್ನು ಬಾಧಿಸಿದರು ; ದೈತ್ಯಾಧಿಪತಿಯ ಭೃತ್ಯರು ಈರೀತಿ ಲೋಕಗಳನ್ನು ಬಾಧಿಸಲು ದೇವತೆಗಳು ಸ್ವರ್ಗವನ್ನು ಬಿಟ್ಟು ಭೂಮಿಯಲ್ಲಿ ದೈತ್ಯರು ಕಾಣದಂತೆ ತಿರುಗುತಿದ್ದರು ; ಹಿರಣ್ಯಕಶಿಪುವು ಭಗವಂತನಿಂದ ಸಂಹೃತನಾದ ಹಿರಣ್ಯಾಕ್ಷನ ಪುತ್ರರಾದ ಶಕುನಿ ಶಂಬರ ಧೃಷ್ಟ ಭೂತಸಂತಾಪನ ವೃಕ ಕಾಲನಾಭ ಮಹಾನಾಭ ಹರಿಶ್ಮಶ್ರುವು ಉತ್ಕಟನು ಮೊದಲಾದವರನ್ನು ಇವರ ತಾಯಾದ ಋಷಡ್ಭಾನುವನ್ನೂ ತನ್ನ ತಾಯಾದ ದಿತಿಯನ್ನೂ ಸಮಾಧಾನಂಗೈದು ದೇಶಕಾಲಾನುಸಾರವಾಗಿ ಮೃದುವಾಕ್ಯದಿಂದ 'ಎಲೈ ತಾಯೆ, ಎಲೈ ನಾದನಿಯೆ, ಎಲೈ ಮಕ್ಕಳಿರಾ, ಶೂರರಾದವರಿಂದ ಅಪೇಕ್ಷಿಸತಕ್ಕ ಶತೃವಿನಮುಂದೆ ಯುದ್ಧವನ್ನು ಮಾಡಿ ಮರಣವನ್ನೈದುವದು ಶ್ಲಾಘ್ಯವಾದಕಾರಣ ನೀವು ಶೋಕವನ್ನು ತಾಳಲಾಗದು ; ಬಿಸಲು ಚಳಿ ನೀರಡಿಕೆಗಳಿಂದ ಅರವಟ್ಟಿಗೆಯಲ್ಲಿ ನಾನಾದಿಕ್ಕುಗಳಿಂದ ಬಂದು ಕೂಡಿ ತಮ್ಮ ತಮ್ಮ ವ್ಯಾಪಾರಗಳು ಆದಮೇಲೆ ತಮ್ಮ ತಮ್ಮ ಇಚ್ಛಾನುಸಾರವಾಗಿ ಹೊರಟು ಹೋಗುವಂತೆ ಪತ್ನೀ ಪುತ್ರಾದಿಗಳು ತಮ್ಮ ತಮ್ಮ ಕರ್ಮವಶದಿಂದ ಏಕತ್ರ ಉತ್ಪನ್ನರಾಗಿ ಪುನಃ ತಮ್ಮತಮ್ಮ ಕರ್ಮಾನುಭವಾನಂತರದಲ್ಲಿ ಹೊರಟುಹೋಗುವರು ; ಯಾವ ಕಾರಣದಿಂದ ಆತ್ಮನು ಮೃತ್ಯುರಹಿತನೋ ನಾಶರಹಿತನೋ ನಿರ್ಮಲನೋ ಸರ್ವ

ಗತನೋ ಸರ್ವಜ್ಞನೋ ಶರೀರೇಂದ್ರ್ಯಾದಿಗಳಿಗೆ ಹೊರಚ್ಚಾಗಿರುವನೋ ಆದಕಾರಣ ಮೃತನೆಂದೂ ಕೃಶನೆಂದೂ ಮಲಿನವುಳ್ಳವನೆಂದೂ ಬಿಟ್ಟುಹೋದವನೆಂದೂ ಅಜ್ಞಾನದಿಂದ ಶೋಕಂಗೈಯಲಾಗದು ; ಇಂಥಾವನು ಅನೇಕಪ್ರಕಾರಗಳಾದ ದೇಹಗಳನ್ನೂ ಸುಖದುಃಖಗಳನ್ನೂ ಮಾಯೆಯಿಂದುಂಟಾದ ಸತ್ವಾದಿಗಳನ್ನಂಗೀಕರಿಸಿ ಸಂಸಾರವನ್ನೈದುವನು ; ವಾಯುವೇಗದಿಂದ ಜಲವು ಚಲಿಸಲಾಗಿ ಆ ಜಲದಲ್ಲಿ ಪ್ರತಿಬಿಂಬಿತಗಳಾದ ವೃಕ್ಷಗಳು ಚಲಿಸುವಂತೆಯೂ ಪಿತ್ತಾದಿದೋಷದಿಂದ ಪುರುಷನಿಗೆ ದೃಷ್ಟಿಭ್ರಮಣವುಂಟಾದರೆ ಭೂಮಿಯು ತಿರುಗುವಂತೆ ಎಂತು ಕಾಣಲ್ಪಡುವದೋ ಹಾಗೆ ಎಲೈ ಮಂಗಳಕರಳಾದ ತಾಯೇ, ಸರ್ವತ್ರ ಸಂಪೂರ್ಣನಾದ ಆತ್ಮನು ಸಂಸಾರವಿಲ್ಲದವನಾದಾಗ್ಯೂ ಮಾಯಾಗುಣಗಳಿಂದ ಚಲಿಸುವ ಚಿತ್ತವುಳ್ಳವನಾಗಿ ಸಂಸಾರಿಯಂತೆ ತೋರುವನು ; ದೇಹಿಯಾದ ಆತ್ಮನಿಗೆ ದೇಹಾಭಿಮಾನವೆಂಬದ್ಯಾವದುಂಟೋ ಅದು ಆತ್ಮವಸ್ತುವಿಗಿಲ್ಲ ; ಪ್ರಿಯವಸ್ತುಗಳಿಂದ ವಿಯೋಗವೂ ಅಪ್ರಿಯವಸ್ತುಗಳಿಂದ ಸಂಬಂಧವೂ ಕರ್ಮದಿಂದಲೂ ನಾನಾಗರ್ಭದಿಂದಲೂ ಉತ್ಪತ್ತಿಯೂ ಇವೆಲ್ಲ ಸಂಸಾರಸ್ವರೂಪವು ; ಉತ್ಪತ್ತಿಯು ವಿನಾಶವು ನಾನಾಪ್ರಕಾರವಾದ ಶೋಕವು ಅವಿವೇಕವು ಚಿಂತೆಯು ವಿವೇಕದ ಅನುಸಂಧಾನಾಭಾವವು ಇವೆಲ್ಲವೂ ಸಂಸಾರಸ್ವಭಾವವೆಂದು ತಿಳಿ ; ಈ ವಿಷಯದಲ್ಲಿ ಮೃತನಾದ ಪುರುಷನ ಸಂಬಂಧಿಗಳಿಗೂ ಯಮನಿಗೂ ಸಂವಾದರೂಪವಾದ ಒಂದು ಇತಿಹಾಸವನ್ನು ಪೂರ್ವಿಕರು ಹೇಳುವರು ; ಅದನ್ನು ನೀನು ಕೇಳು : ಎಲೈ ತಾಯಾದ ದಿತಿದೇವಿಯೆ, ಉಸೀನರ ದೇಶಗಳಲ್ಲಿ ಸುಯಜ್ಞನೆಂದು ಪ್ರಸಿದ್ಧನಾದ ಒಬ್ಬ ಅರಸನಿದ್ದನು ; ಅವನು ಯುದ್ಧದಲ್ಲಿ ಶತ್ರುಗಳಿಂದ ಸಂಹೃತನಾಗಲು ಅವನನ್ನು ನೋಡಿ ಅವನ ಪತ್ನೀ ಬಂಧುಗಳೆಲ್ಲರೂ ಶೀಳ ಒಡೆದುಹೋದ ಕವಚವುಳ್ಳವನಾಗಿ ಜಾರಿಬಿದ್ದಿರುವ ಆಭರಣಗಳೂ ಪುಷ್ಪಮಾಲಿಕೆಗಳೂ ಉಳ್ಳವನಾಗಿ ಶಸ್ತ್ರಗಳಿಂದ ಭೇದಿಸಲ್ಪಟ್ಟ ಹೃದಯವುಳ್ಳವನಾಗಿ ರಕ್ತದಿಂದ ರೂಷಿತನಾಗಿ ಚದರಿದ ಕೇಶಗಳುಳ್ಳವನಾಗಿ ಕಚ್ಚಲ್ಪಟ್ಟ ತುಟಿಯುಳ್ಳವನಾಗಿ ಘಾಳಿಯಿಂದ ಕವಿಯಲ್ಪಟ್ಟ ಧೂಳಿಯುಳ್ಳ ಪದ್ಮದಂತಿರುವ ಮುಖವುಳ್ಳವನಾಗಿ ಯುದ್ಧದಲ್ಲಿ ಕತ್ತರಿಸಲ್ಪಟ್ಟ ಭುಜಗಳೂ ಆಯುಧಗಳೂ ಉಳ್ಳವನಾಗಿ ಯುದ್ಧಭೂಮಿಯಲ್ಲಿ ಮಲಗಿರುವ ದೈವದಿಂದ ಆತೆರನಾಗಿ ಮಾಡಲ್ಪಟ್ಟ ಉಶೀನರ ದೇಶಾಧಿಪತಿಯಾದ ಅರಸನನ್ನು ನೋಡಿ ಅವನ ಪತ್ನಿಯರು ದುಃಖದಿಂದ ರೋದನಂಗೈದು ಬಳಲಿ ಪ್ರಳಾಪಂಗೈದು ಹಾ ! ನಾಥನೇ, ಎಂಬದಾಗಿ ಕೈಗಳಿಂದ ಎದೆಯಂ ತಾಡನಂಗೈದು ಬಾರಿ ಬಾರಿಗೂ ಅವನ ಪಾದಗಳಲ್ಲಿ ಬಿದ್ದರು ; ಉಚ್ಚಸ್ವರದಿಂದ ರೋದನಂಗೈಯುತ ಕುಂಭಗಳಂತೆ ಹೊಳೆಯುವ ಕುಚಗಳಲ್ಲಿರುವ ಕುಂಕುಮದಿಂದ ಕೆಂಪಾದ ಕಣ್ಣೀರುಗಳಿಂದ ಪತಿಯ ಪಾದಪದ್ಮಗಳನ್ನು ನೆನೆಯಿಸಿ ಚದರಿಸಲ್ಪಟ್ಟ ಕೇಶಗಳೂ ಆಭರಣಗಳುಳ್ಳವರಾದಕಾರಣ ನೋಡುವ ಜನರಿಗೆ ಶೋಕವನ್ನುಂಟುಮಾಡುವರಾಗಿ ಆ ಸ್ತ್ರೀಯರು ಆಕ್ರಂದನದಿಂದ ಪ್ರಳಾಪಂಗೈದರು ; ನಮಗೆ ಪ್ರಭುವಾದ ನೀನು ಯಾವಕಾರಣದಿಂದ ನಿಷ್ಕರುಣವಾದ ದೈವದಿಂದ ನೇತ್ರಗಳಿಗೆ ಅಗೋಚರವಾದ ದೆಶೆಯನ್ನೈದಿಸಲ್ಪಟ್ಟೆಯೋ ಪೂರ್ವದಲ್ಲಿ ಉಶೀನರದೇಶದಲ್ಲಿರುವವರಿಗೆ ಜೀವಪ್ರದನಾದ ನೀನು ಈಗ ಅದೇ ದೈವದಿಂದಲೇ ಈ ಅವಸ್ಥೆಯನ್ನು ಪಡೆದು ನಮಗೆ ಶೋಕವನ್ನು ಕೊಟ್ಟವನಾದೆ ; ಕೃತಜ್ಞನಾದ ಅತ್ಯಂತವಲ್ಲಭನಾದ ನಿನ್ನಿಂದ ಬಿಡಲ್ಪಟ್ಟ ನಾವು ಎಂತು ಜೀವಿಸೇವು ! ಎಲೈ ವೀರನೇ, ನೀನು ಎಲ್ಲಿ ಹೋಗುತ್ತೀಯೋ ಅಲ್ಲಿಗೆ ನಮ್ಮನ್ನು ಕರಸಿಕೊಂಡು ಅಲ್ಲಿಯೂ ನಿನ್ನ ಸೇವೆ ಮಾಡಿಸಿಕೋ ; ಎಂದು ಹತನಾದ ಪತಿಯ ಶರೀರವನ್ನಾಲಿಂಗನಂಗೈದು ಸಂಸ್ಕಾರಾರ್ಥವಾಗಿ ಪತಿಯ ಶರೀರವನ್ನು ತೆಗೆದುಕೊಂಡು ಹೋಗಲಿಸದೆ ಈಪ್ರಕಾರವಾಗಿ ಪ್ರಳಾಪಂಗೈಯುತ್ತಿರಲು ಸೂರ್ಯನು ಅಸ್ತಾಚಲವನ್ನೈದಿದನು ; ಈರೀತಿಯಿಂದ ಪ್ರಳಾಪಂಗೈವ ಉಶೀನರಾಧಿಪತಿಯ ಪತ್ನೀ ಬಂಧುಗಳ ರೋದನಧ್ವನಿಯನ್ನು ಕೇಳಿ ಯಮನು ಬಾಲಕನಾಗಿ ತಾನೇಬಂದು ಅವರನ್ನು ಕುರಿತು 'ಸ್ವಕರ್ಮವಶದಿಂದ ಅವ್ಯಕ್ತವಾದ ಮೂಲಪ್ರಕೃತಿಯದೆಶೆಯಿಂದ ಜನ್ಮವನ್ನು ಪಡೆದು ಜೀವಿಸಿ ಪುನಃ ಕರ್ಮವಶದಿಂದ ಆ ಅವ್ಯಕ್ತದಲ್ಲೇ ಸೇರುವ ಮರಣಧರ್ಮವುಳ್ಳ ಮನುಷ್ಯನನ್ನು ನೋಡಿ ವಯೋವೃದ್ಧರಾದಾಗ್ಯೂ ಬಹುಪ್ರಕಾರಗಳಾದ ಈ ಜನನ ಮರಣಾವಸ್ಥೆಗಳನ್ನು ಕಂಡವರಾದಾಗ್ಯೂ ವ್ಯರ್ಥವಾಗಿ ಶೋಕದಿಂದ ಅಜ್ಞಾನವನ್ನೈದುತ್ತಾರೆಂಬದು ಆಶ್ಚರ್ಯವು ; ಯಾವಕಾರಣದಿಂದ ಶಿಶುತ್ವದಲ್ಲೇ ತಾಯಿತಂದೆಗಳಿಂದ ಬಿಡಲ್ಪಟ್ಟ ದುರ್ಲಭರಾದವರಾದಾಗ್ಯೂ ನರಿ ಮೊದಲಾದ

ಜಂತುಗಳಿಂದ ಭಕ್ಷಿಸಲ್ಪಡದಿರುವ ನಾವು ಶರೀರರಕ್ಷಣದಲ್ಲಿ ಚಿಂತಿಸುವದಿಲ್ಲವೋ ಆದಕಾರಣ ನಾವೇ ಕೃತಾರ್ಥರು ; ಯಾವಾತನು ಗರ್ಭದಲ್ಲಿಯೂ ರಕ್ಷಿಪನೋ ಅವನೇ ಯಾವಕಾಲದಲ್ಲಿಯೂ ರಕ್ಷಿಪನು ; ಈಶ್ವರನಿಗೆ ಪ್ರಪಂಚರಕ್ಷಣೆಯಿಂದೇನು ಪ್ರಯೋಜನವೆಂದರೆ: ಯಾವ ಈಶ್ವರನು ಇಚ್ಛಾಮಾತ್ರದಿಂದಲೇ ಈ ವಿಶ್ವವನ್ನು ಸೃಷ್ಟಿಸಿ ರಕ್ಷಿಸಿ ವಿಲಯಂಗೈವನೋ ಅವನಿಗೆ ಈ ಚರಾಚರದ ನಿಗ್ರಹಾನುಗ್ರಹವು ಲೀಲೆಯೆಂದು ತಿಳಿ ; ಮಾರ್ಗದಲ್ಲಿ ಜಗುಳಬಿದ್ದ ವಸ್ತುವು ದೈವದಿಂದ ರಕ್ಷಿತವಾಗಿ ಯಾರಿಗೂ ಗೋಚರವಾಗದೆ ಸ್ವತ್ವಕರ್ತನಿಗೇ ಶಿಕ್ಕುವದು ; ಮನೆಯಲ್ಲಿ ಬಚ್ಚಿಟ್ಟದ್ದಾಗ್ಯೂ ದೈವಪರಾಙ್ಮುಖವಾಗಲು ಹೋಗುವದು; ದಾರಿತಪ್ಪಿ ಅರಣ್ಯದಲ್ಲಿ ತೊಳಲುವ ಅನಾಥನಾದಾಗ್ಯೂ ಮನುಜನು ದೈವಕೃಪಾದೃಷ್ಟಿಯ್ಯಮಾತ್ರ ಇರಲು ಯಾವತೆರದಿಂದಲಾದರೂ ಜೀವವಂತನಾಗಿ ಬದುಕುವನು ; ದೈವದಿಂದ ಉಪೇಕ್ಷಿಸಲ್ಪಟ್ಟವನು ಮನೆಯಲ್ಲಿ ಸಾವಧಾನದಿಂದ ರಕ್ಷಿಸಲ್ಪಟ್ಟವನಾದರೂ ಬದುಕಲಾರನು ; ದೇಹಗಳಲ್ಲಿ ಕಾರಣಭೂತಗಳಾದ ಲಿಂಗಶರೀರದ ನಿಮಿತ್ತಗಳಾದ ಕರ್ಮಗಳಿಂದ ಪುಟ್ಟಿ ಅಪಾಯವನ್ನೈದುವವು; ದೇವಾದಿಶರೀರಗಳೂ ಉತ್ಪತ್ತಿ ನಾಶಂಗಳನ್ನೈದುವವು ; ಶರೀರದಲ್ಲಿರುವ ಆತ್ಮನಾದರೋ ಜನ್ಮಾದಿಗಳಿಂದ ಬದ್ಧನೂ ಅಲ್ಲ ; ಮುಕ್ತನೂ ಅಲ್ಲ ; ದೇಹಾದಿಗಳಿಂದ ವಿಲಕ್ಷಣನೆಂದು ತಿಳಿ ; ದೇಹದಲ್ಲಿ ಆತ್ಮತ್ವಾಭಿಮಾನವ್ಯಾವದೋ ಅದು ಅಜ್ಞಾನದಿಂದ ಕಲ್ಪಿತವು ; ವಾಸ್ತವದಿಂದ ಆತ್ಮನು ಶರೀರದದೆಶೆಯಿಂದ ಭಿನ್ನನು ; ಯಾವರೀತಿಯಿಂದ ಭೂತಜನ್ಯವಾದ ಗೃಹವು ಆತ್ಮನಿಗಿಂತಲೂ ಅನ್ಯವೋ ಹಾಗೆ ಭೂತಜನ್ಯವಾದ ಶರೀರವೂ ಆತ್ಮನಿಗಿಂತಲೂ ಅನ್ಯವು ; ಎಂತು ಜಲಪ್ರವಾಹದಿಂದುಂಟಾದ ಗುಳ್ಳೆಗಳೂ ಪೃಥ್ವಿಪರಮಾಣುಗಳಿಂದ ಕಾಣಲ್ಪಡುವ ಘಟಾದಿಗಳೂ ತೈಜಸಪರಮಾಣುಗಳಿಂದುಂಟಾದ ಕುಂಡಲಾದಿಗಳೂ ಅಭಿಘಾತಾದಿನಿಮಿತ್ತಗಳಿಂದ ನಷ್ಟಗಳಾಗಿ ಆಯಾ ಪರಮಾಣುಗಳಲ್ಲೇ ಶೇರುವವೋ ಆ ರೀತಿಯಿಂದ ಶರೀರವು ಪಂಚಭೂತಗಳ ಅಂಶಗಳಿಂದ ಜನಿಸಿ ಅವುಗಳಲ್ಲೇ ಲಯವನ್ನೈದುವದು ; ಆತ್ಮನಿಗಾದರೋ ಎಂದಿಗೂ ಲಯವಿಲ್ಲ ; ಎಂತು ಕಾಷ್ಠಾದಿಗಳಲ್ಲಿರುವ ಅಗ್ನಿಯು ದಾಹಕತ್ವದಿಂದ ಭಿನ್ನವಾಗಿ ತೋರುವನೋ ಎಂತು ದೇಹಗಳಲ್ಲಿರುವ ವಾಯುವು ಬೇರೆ ಇರುವನೋ ಎಂತು ಆಕಾಶವು ಸರ್ವತ್ರ ಇದ್ದಾಗ್ಯೂ ಎಲ್ಲಿಯೂ ತಗಲುವದಿಲ್ಲವೋ ಆತೆರದಿಂದ ಆತ್ಮನು ದೇಹೇಂದ್ರಿಯಾದಿಗಳೊಡನೆ ಕೂಡಿರುವನಂತೆ ತೋರಿದಾಗ್ಯೂ ಬೇರೆ ಇರುವನು ! ಎಲೈ ಮೂಢರೇ, ನೀವು ಯಾವವನನ್ನು ಕುರಿತು ಶೋಕಪಡುತ್ತೀರೊ ಅವನು ಇಲ್ಲಿ ಮಲಗಿಲ್ಲ ? ಈ ಶರೀರವನ್ನು ಕುರಿತು ರೋದನಂಗೈದದ್ದರಿಂದೇನು ? ಈ ದೇಹದಲ್ಲಿ ಯಾವವನು ಕೇಳುವನೋ ಯಾವಾತ ಪೇಳುವನೋ ಅವನು ಇಲ್ಲಿ ಕಾಣಲ್ಪಡುವದಿಲ್ಲ ; ಮುಖನಾಸಿಕಾದ್ವಾರಗಳಲ್ಲಿ ಸಂಚರೂಪವಾದ ಪ್ರಾಣವಾಯುವ್ಯಾವದುಂಟೋ ಅದೇ ಕೇಳುವದು ; ಅದೇ ಪೇಳುವದು ; ಅಂದರೆ: ಅಚೇತನಗಳಾದಕಾರಣ ದೇಹ ಪ್ರಾಣಗಳು ಆತ್ಮನಲ್ಲಿ ತೋರುವವು ; ಈ ದೇಹೇಂದ್ರಿಯ ಪ್ರಾಣಾದಿ ವಿಲಕ್ಷಣನೇ ಆತ್ಮನೆಂದು ತಿಳಿ ; ಪಂಚಮಹಾಭೂತಗಳಿಂದಲೂ ಇಂದ್ರಿಯಗಳಿಂದಲೂ ಮನಸ್ಸಿನಿಂದಲೂ ಕಾಣಲ್ಪಡುವ ಅನೇಕವಿಧಗಳಾದ ದೇಹಗಳನ್ನು ತನ್ನ ತೇಜಸ್ಸಿನಿಂದ ಯಾವ ಆತ್ಮನು ಗ್ರಹಿಸಿ ತ್ಯಜಿಸುವನೋ ಅವನೇ ಆತ್ಮನೆಂದು ತಿಳಿ ; ಎಷ್ಟುಪರ್ಯಂತವು ಆತ್ಮನು ಲಿಂಗಶರೀರದೊಡಗೂಡಿ ತದಭಿಮಾನಿಯಾಗುವನೋ ಅಷ್ಟುಪರ್ಯಂತವು ಅವನಿಗೆ ಕರ್ಮವು ಬಂಧಕಾರಣವಾಗುವದು ; ಅದರದೆಶೆಯಿಂದಲೇ ಜರಾಮರಣಕ್ಲೇಶಾದಿಗಳುಂಟಾಗುವವು ; ಲಿಂಗದೇಹಾಭಿಮಾನ ನಿವೃತ್ತಿಯಾದಲ್ಲಿ ದೇಹಧರ್ಮಾದಿಗಳು ಮಾಯಾಮಯವು; ಪರಮಾರ್ಥವಲ್ಲ ; ಗುಣಜನ್ಯಗಳಾದ ದೇಹಾದಿಗಳಲ್ಲಿಯೂ ತನ್ನಿಮಿತ್ತಗಳಾದ ಸುಖದುಃಖಾದಿಗಳಲ್ಲಿಯೂ ಅಭಿಮಾನ ವ್ಯರ್ಥವೇ ಸರಿ ; ಮನೋರಥಗಳು ಸ್ವಪ್ನಗಳು ಹ್ಯಾಗೆ ಮಿಥ್ಯಾಭೂತಗಳೋ ಹಾಗೆ ದೇಹೇಂದ್ರಿಯಾದಿಗಳೂ ಸುಖದುಃಖಾದಿಗಳೂ ಮಿಥ್ಯಾಭೂತಗಳೇ ಸರಿ ; ದೇಹವನಿತ್ಯವೆಂದು ತಿಳಿದವರೂಕೂಡ ಶೋಕ ಮೋಹಾದಿಗಳಿಂದಾಕ್ರಾಂತರಾಗುವರು ; ಆತ್ಮನು ದೇಹಾದಿಗಳಲ್ಲಿ ನಿತ್ಯಾನಿತ್ಯಜ್ಞಾನ ದೃಢವಾಗಲಿಲ್ಲವಾದ್ದರಿಂದ ಜ್ಞಾನದಾರ್ಢ್ಯವುಂಟಾಗಲು ಶೋಕಪಡುವದಿಲ್ಲ; ಈ ಅರ್ಥದಲ್ಲಿ ಒಂದು ಇತಿಹಾಸವನ್ನು ಪೇಳುವೆನು ಕೇಳಿ : ಈಶ್ವರನಿಂದ ಪಕ್ಷಿಗಳಿಗೆ ಅಂತಕನಾಗಿ ನಿರ್ಮಿಸಲ್ಪಟ್ಟ ಒಬ್ಬಾನೊಬ್ಬ ಕಿರಾತನು ಅರಣ್ಯದಲ್ಲಿ ಬಲೆಯನ್ನು ಬೀಸಿ ಅಲ್ಲಲ್ಲಿ ಪಕ್ಷಿಗಳನ್ನು ಮಾಂಸದಿಂದ ಪ್ರಲೋಭನಂಗೈಯುತ್ತಿರಲು ಆ ಅರಣ್ಯದಲ್ಲಿ ಸಂಚರಿಸುವ ಕುಳಿಂಗಪಕ್ಷಿಗಳ ಸ್ತ್ರೀಪುರುಷಭಾವದಿಂದಿರುವ ಮಿಥುನವನ್ನು ಕಂಡು

ಆ ಕಿರಾತನು ಸ್ತ್ರೀಯಾದ ಕುಳಿಂಗಿಯನ್ನು ಮೋಸದಿಂದ ಆಕರ್ಷಿಸಲು ಆ ಕುಳಿಂಗಿಯು ಮೋಸದ ಪೆಕ್ಷೆಯಿಂದ ಬಂದು ಬಲೆಯ ನೂಲಿನಿಂದ ಕಟ್ಟಲ್ಪಡಲು ವಿಪತ್ತಿಯನ್ನು ಹೊಂದಿದ ಆ ಪತ್ನಿಯನ್ನು ನೋಡಿ ಕುಳಿಂಗನೆಂಬ ಪಕ್ಷಿಯು ನಿರತಿಶಯವಾದ ದುಃಖದಿಂದ ಆತುರನಾಗಿ ಪತ್ನೀಸ್ನೇಹದಿಂದ ಬಿಡಲಶಕ್ತನಾದಕಾರಣ ಪ್ರಲಾಪಂಗೈದನು ; ಸಮರ್ಥನಾದ ನಿಷ್ಕರುಣನಾದ ವಿಧಿಯು ಸರ್ವಪ್ರಾಣಿಗಳಿಗೂ ದಯಾಪಾತ್ರನಾಗಿ ದೈನ್ಯದಿಂದ ನನ್ನನ್ನು ಕುರಿತು ಶೋಕಂಗೈವ ಸ್ತ್ರೀಯಿಂದ ಏನನ್ನು ಮಾಡ್ಯಾನು ; ಅದೇ ದೈವವು ಯಥೇಷ್ಟವಾಗಿ ನನ್ನನ್ನು ಕೊಂಡುಹೋಗಲಿ ; ಪತ್ನಿಯಿಂದ ರಹಿತನಾದ ನನಗೆ ಈ ದೇಹದಿಂದೇನು ? ಪತ್ನಿ ಇಲ್ಲದೆ ದೈನ್ಯದಿಂದ ದುಃಖವನ್ನೈದಿ ಬದುಕುವದರಿಂದೇನು ? ಗೂಡಿನಲ್ಲಿರುವ ಮಾತೃರಹಿತಗಳಾದ ರೆಕ್ಕೆಪ್ರಟ್ಟದ ಮರಿಗಳನ್ನು ನಾನು ಎಂತು ಪೋಷಿಸುವೆನು ? ನಿರ್ಭಾಗ್ಯರಾದ ನನ್ನ ಮರಿಗಳು ಗೂಡಿನಲ್ಲೀ ಇದ್ದು ಯಾವಾಗ ಆಹಾರವನ್ನು ತೆಗೆದುಕೊಂಡು ಬಂದಾರೆಂದು ಎದುರುನೋಡುತಲವೆ–ಎಂದು ಈರೀತಿ ಪ್ರಳಾಪಂಗೈವ ಆತುರನಾಗಿ ಬಾಷ್ಪಕಂಠದಿಂದ ರೋದನಂಗೈಯುತಿರುವ ಆ ಕುಳಿಂಗಪಕ್ಷಿಯನ್ನು ಕಂಡು ಹೊದರಿನಲ್ಲಿ ಅಡಗಿರುವ ಆ ಕಿರಾತನು ದೈವದಿಂದ ಪ್ರೇರಿತನಾಗಿ ಬಾಣದಿಂದ ಸಂಹರಿಸಿದನು ! ಕೇಳಿರೈ ಸ್ತ್ರೀಯರುಗಳಿರಾ, ಬುದ್ಧಿಯಿಲ್ಲದೆ ಈರೀತಿಯಿಂದ ನಿಮ್ಮ ನಾಶವನ್ಯಾವಾಗಲೊಯೆಂದರಿಯದೆ ಶೋಕಂಗೈವ ನೀವು ನೂರುವರ್ಷ ಪ್ರಳಾಪಂಗೈದಾಗ್ಯೂ ನಿಮ್ಮ ಪತಿಯನ್ನು ಹೊಂದಲಾರಿರಿ ' ಎಂದು ಬಾಲಕನು ಪೇಳಲು ಸಮಸ್ತರಾದ ಜ್ಞಾತಿಗಳೂ ಆಶ್ಚರ್ಯಪಟ್ಟು ಸರ್ವವೂ ಅನಿತ್ಯವು ; ಈ ಶೋಕವು ವ್ಯರ್ಥವೆಂದು ತಿಳಿದರು ; ಯಮನು ಈಪ್ರಕಾರವಾಗಿ ಹೇಳಿ ಅಲ್ಲೀ ಅಂತರ್ಧಾನವನ್ನೈದಿದನು ; ಆ ಬಳಿಕ ಬಂಧುಗಳು ಸುಯಜ್ಞನೆಂಬ ಅರಸಿಗೆ ಸಮಸ್ತ ಕ್ರಿಯೆಗಳನ್ನೂ ಮಾಡಿದರು ! ಎಲೈ ತಾಯಾದ ದಿತಿದೇವಿಯೆ, ಎಲೈ ನಾದನಿಯೆ, ಅದುಕಾರಣ ನೀವು ಪರರನ್ನು ಕುರಿತಾದರೂ ನಿಮ್ಮನ್ನು ಕುರಿತಾದರೂ ಶೋಕಂಗೈಯಲಾಗದು ; ತಾನ್ಯಾರು ? ಪರನ್ಯಾರು ? ತನ್ನವನ್ಯಾರು ? ಮತ್ತೊಬ್ಬನ್ಯಾರು ? ಕೇಳಿರೇ ತಾಯಿಗಳಿರಾ, ಈ ರೀತಿಯಿಂದಿರುವಲ್ಲಿ ಮನುಜರಿಗೆ ನಾನು–ನನ್ನದು ತನ್ನವ ಪರನವನೆಂಬದೇ ಅಜ್ಞಾನವೆಂದು ತಿಳಿಯಿರಿ ; ಇಂತು ಆತ್ಮತತ್ವವನ್ನು ವಿಸ್ತರಿಸಿದ ದೈತ್ಯೇಂದ್ರನಾದ ಹಿರಣ್ಯಕಶಿಪುವಿನ ವಾಕ್ಯವನ್ನು ಕೇಳಿ ಸೊಸೆಯರಿಂದೊಡಗೂಡಿರುವ ದಿತಿದೇವಿಯು ಆ ಕ್ಷಣಮಾತ್ರದಲ್ಲಿಯೇ ಪುತ್ರಶೋಕವನ್ನು ಬಿಟ್ಟು ಪರತತ್ವದಲ್ಲಿ ಚಿತ್ತವನ್ನಿಟ್ಟಳು " ಎಂದು ನುಡಿದನು.

೩ ನೇ ಅಧ್ಯಾಯ.

ಹಿರಣ್ಯಕಶಿಪುವು ಬ್ರಹ್ಮದೇವನನ್ನು ಕುರಿತು ತಪಸ್ಸಂಗೈದದ್ದು.

ಆ ಬಳಿಕ ನಾರದನು "ಕೇಳೈ ಧರ್ಮಪುತ್ರನೆ, ಅನಂತರದಲ್ಲಿ ಹಿರಣ್ಯಕಶಿಪುವೆಂಬ ದೈತ್ಯೇಂದ್ರನು ತಾನು ಜರಾಮರಣಗಳಿಲ್ಲದೆ ಯಾರಿಂದಲೂ ಅಪಜಯವನ್ನೈದದೇ ಯುದ್ಧದಲ್ಲಿ ಎದುರಾಗಿ ನಿಲ್ಲುವ ಭಟನಿಲ್ಲದವನಾಗಿ ಈ ಸಮಸ್ತ ಭುವನದಲ್ಲಿಯೂ ಏಕರಾಜ್ಯವನ್ನಾಳುವ ವರವನ್ನು ಪಡೆಯಲೋಸುಗ ತಪಸ್ಸನ್ನು ಮಾಡಬೇಕೆಂದು ನಿಶ್ಚೈಸಿ ಎರಡು ಬಾಹುಗಳನ್ನೂ ಮೇಲಕ್ಕೆತ್ತಿ ಆಕಾಶದಲ್ಲಿ ದೃಷ್ಟಿಯನ್ನಿಟ್ಟು ಕಾಲ ಹೆಬ್ಬೆರಳಿನಿಂದ ಭೂಮಿಯಲ್ಲಿ ನಿಂತು ಮಂದರಪರ್ವತದ ದೊಣೆಯಲ್ಲಿ ಬ್ರಹ್ಮದೇವನನ್ನು ಕುರಿತು ಅತ್ಯುಗ್ರವಾದ ತಪಸ್ಸನ್ನು ಮಾಡಿದನು ; ಜಟೆಗಳ ಕಾಂತಿಯಿಂದ ಪ್ರಳಯಕಾಲದ ಸೂರ್ಯನು ತನ್ನ ಕಿರಣಗಳಿಂದ ಪ್ರಕಾಶಿಸುವಂತೆ ಪ್ರಕಾಶಿಸುತಲಿರುವ ಹಿರಣ್ಯಕಶಿಪುವು ಉಗ್ರವಾದ ತಪಸ್ಸನ್ನು ಮಾಡುತಲಿರಲಾಗಿ ಪೂರ್ವದಲ್ಲಿ ಆ ಹಿರಣ್ಯಕಶಿಪುವಿನ ಭಯದಿಂದ ತಮ್ಮ ಸ್ಥಾನಗಳನ್ನು ಬಿಟ್ಟು ಭೂಲೋಕದಲ್ಲಿ ಅದೃಶ್ಯರಾಗಿ ಸಂಚರಿಸುತಲಿದ್ದ ದೇವತೆಗಳು ತಮ್ಮ ತಮ್ಮ ಸ್ಥಾನಗಳನ್ನೈದಿದರು ; ಈರೀತಿಯಲ್ಲಿ ತಪಸ್ಸನ್ನು ಮಾಡುತಲಿರುವ ಆ ಹಿರಣ್ಯಕಶಿಪುವಿನದೆಶೆಯಿಂದ ಮೇಲಕ್ಕೆ ಹೊರಟುಬಂದ ತಪೋಮಯವಾದ ಧೂಮವಿಶಿಷ್ಟವಾದ ಮಹತ್ತಾದ ಅಗ್ನಿಯು ಊರ್ಧ್ವಭಾಗದಲ್ಲಿಯೂ ಅಧೋಭಾಗದಲ್ಲಿಯೂ ಅಡ್ಡಅಡ್ಡಲಾಗಿಯೂ ಎಲ್ಲಾಕಡೆಗಳಲ್ಲಿಯೂ ವ್ಯಾಪಿಸಿ ಲೋಕಗಳನ್ನು ತಪಿಸಿತು ; ಆ ಸಮಯದಲ್ಲಿ ನದಿಗಳೂ ದ್ವೀಪಸಹಿತಗ

ಳಾದ ಸಮುದ್ರಗಳೂ ಕಲಕಿದವು; ಪರ್ವತಸಮೇತವಾದ ಭೂಮಿಯು ಚಲಿಸಿತು; ನವಗ್ರಹಗಳಿಂದ ಯುಕ್ತಗಳಾದ ನಕ್ಷತ್ರಗಳುದುರಿದವು; ಹತ್ತು ದಿಕ್ಕುಗಳು ಜ್ವಲಿಸಿದವು; ಅನಂತರದಲ್ಲಿ ಆ ತಪೋಗ್ನಿಯಿಂದ ತಪಿಸಲ್ಪಟ್ಟ ದೇವತೆಗಳು ಸ್ವರ್ಗಲೋಕವನ್ನು ಬಿಟ್ಟು ಬ್ರಹ್ಮಲೋಕವನ್ನೈದಿ ಬ್ರಹ್ಮದೇವನನ್ನು ಕುರಿತು 'ಎಲೈ ಜಗದೀಶ್ವರನಾದ ದೇವದೇವನಾದ ಪಿತಾಮಹನೆ, ದೈತ್ಯಾಧಿಪತಿಯ ತಪಸ್ಸಿನಿಂದ ತಪ್ತರಾದ ನಾವು ಸ್ವರ್ಗದಲ್ಲಿರಲು ಸಮರ್ಥರಾಗುವದಿಲ್ಲ! ಎಲೈ ಸರ್ವೇಶ್ವರನೆ, ನಿನ್ನ ಪೂಜೆಯುಳ್ಳವ ಈ ಲೋಕಗಳು ಈ ತಪೋಗ್ನಿಯಿಂದ ಎಷ್ಟರೊಳಗೆ ನಾಶವನ್ನೈದುವದಿಲ್ಲವೋ ಅಷ್ಟರೊಳಗೆ ಆ ತಪೋಗ್ನಿಯ ಉಷ್ಣತೆಗೆ ಶಮನವನ್ನುಂಟುಮಾಡು; ನೀನು ಸರ್ವಜ್ಞನಾದಕಾರಣ ಸಕಲವನ್ನೂ ತಿಳಿದಿದ್ದೀಯೇ; ಆದಾಗ್ಯೂ ಕ್ರೂರವಾದ ತಪಸ್ಸುಳ್ಳವ ಆ ಹಿರಣ್ಯಕಶಿಪುವಿನ ಸಂಕಲ್ಪವನ್ನು ವಿಜ್ಞಾಪಿಸುವೆವು ಕೇಳು: ಎಲೈ ಸ್ವಾಮಿಯೆ, ಯಾವ ಕಾರಣದಿಂದ ಬ್ರಹ್ಮನು ತಪೋಯೋಗ ಸಮಾಧಿಗಳಿಂದ ಸಮರ್ಥನಾಗಿ ಈ ಚರಾಚರಾತ್ಮಕವಾದ ಪ್ರಪಂಚವನ್ನು ಸೃಷ್ಟಿಸಿ ಸಮಸ್ತ ಲೋಕಗಳಿಗೂ ಉಪರಿಭಾಗದಲ್ಲಿರುವ ಸ್ವಲೋಕದಲ್ಲಿ ವಾಸಮಾಡುವನೋ ಅದುಕಾರಣ ನಾನೂ ಆದೇಶಪ್ರಕಾರ ತಪೋಯೋಗಗಳಲ್ಲಿ ನಿಷ್ಠನಾಗಿ ಕಾಲವೂ ಆತ್ಮನೂ ನಿತ್ಯವಾದಕಾರಣ ಅನೇಕ ಜನ್ಮಗಳಿಂದಲಾದಾಗ್ಯೂ ಇಷ್ಟಾರ್ಥವನ್ನು ಸಂಪಾದಿಸುವೆನು; ಹೀಗಲ್ಲದೇ ಹೋದರೆ ತಪೋಗ್ನಿಯಿಂದ ಈ ಜಗತ್ತನ್ನು ವ್ಯತ್ಯಾಸಮಾಡುವೆನು; ಪ್ರಳಯಕಾಲದಲ್ಲಿ ನಶ್ವರಗಳಾದ ಈ ಧ್ರುವಾದಿಸ್ಥಾನಪ್ರಾಪ್ತಿಯಿಂದೇನುಫಲವೆಂದು ಸಂಕಲ್ಪಿಸಿದ್ಧಾನೆ; ಅದುಕಾರಣ ನಿನ್ನ ಸ್ಥಾನವನ್ನಪಹರಿಸಬೇಕೆಂದು ತಪಸ್ಸಿನಿಂದ ಲೋಕಗಳನ್ನು ಬಾಧಿಸುವನೆಂದು ನಾವು ಕರ್ಣಾಕರ್ಣಿಕವಾರ್ತೆಯನ್ನು ಕೇಳುತಲಿದ್ಧೇವೆ; ಇದಕ್ಕೋಸ್ಕರಲೇ ಇಂಥಾ ತಪಸ್ಸನ್ನು ಮಾಡುತಲಿದ್ಧಾನೆ; ನೀನು ಲೋಕತ್ರಯಾಧಿಪತಿಯಾದ್ದರಿಂದ ಇನ್ನು ಮೇಲೆ ಇದಕ್ಕೆ ಪ್ರತೀಕಾರವನ್ನು ಹ್ಯಾಗೆ ಮಾಡಬೇಕೋ ಹಾಗೆ ಮಾಡತಕ್ಕದ್ದನ್ನು ನೀನೇ ಮಾಡು! ಎಲೈ ಜಗತ್ಪತಿಯಾದ ಬ್ರಹ್ಮನೆ, ಸತ್ಯಲೋಕಾಧಿಪತ್ಯವೆಂಬ ಅಧಿಕಾರವು ಗೋಬ್ರಾಹ್ಮಣರ ಉತ್ಪತ್ತಿಗೋಸ್ಕರಲೂ ಸುಖನಿಮಿತ್ತವಾಗಿಯೂ ಐಶ್ವರ್ಯಕ್ಕೂ ಲಬ್ಧವಾದ ವಸ್ತುವಿನ ರಕ್ಷಣೆಗೂ ಉತ್ಕೃಷ್ಟಗೋಸುಗವೂ ಇರುವದರಿಂದ ಈ ಲೋಕೋಪದ್ರವವನ್ನು ನೀನೇ ಪರಿಹರಿಸಬೇಕು' ಎಂದು ದೇವತೆಗಳಿಂದ ವಿಜ್ಞಾಪಿಸಲ್ಪಟ್ಟ ಬ್ರಹ್ಮದೇವನು ಭೃಗು ದಕ್ಷರೇ ಮೊದಲಾದ ಮಹರ್ಷಿಗಳಿಂದ ಪರಿವೃತನಾಗಿ ಹಿರಣ್ಯಕಶಿಪುವಿನ ಆಶ್ರಮವನ್ನೈದಿ ಅಲ್ಲಿ ಹುತ್ತಗಳಿಂದಲೂ ಬಿದುರುಗಳಿಂದಲೂ ಮುಚ್ಚಲ್ಪಟ್ಟ ಇರುವೆಗಳು ಮೊದಲಾದ ಜಂತುಗಳಿಂದ ಭಕ್ಷಿಸಲ್ಪಟ್ಟ ಚರ್ಮ ಮಾಂಸ ಕೊಬ್ಬುಗಳುಳ್ಳವನಾಗಿ ತಪಸ್ಸಿನಿಂದ ಲೋಕಗಳನ್ನು ತಪಿಸುತಿರುವದರಿಂದ ಮೇಘಾವೃತವಾದ ಸೂರ್ಯನಂತಿರುವ ಆ ದೈತ್ಯೇಂದ್ರನಾದ ಹಿರಣ್ಯಕಶಿಪುವನ್ನು ನೋಡಿ ಆಶ್ಚರ್ಯಪಟ್ಟು ಮುಗುಳುನಗೆಯಿಂದ ಶ್ಲಾಘಿಸಿ ನುಡಿದು 'ಎಲೈ ಕಶ್ಯಪನ ಪುತ್ರನಾದ ಹಿರಣ್ಯಕಶಿಪುವೇ, ಏಳು ಏಳು! ನಿನಗೆ ಮಂಗಳವಾಗಲಿ! ನೀನು ತಪಸ್ಸಿದ್ಧನಾದವನು; ಬೇಡಿದ ವರವನ್ನೀವ ನಾನೇ ಬಂದಿಧೇನೆ; ಬೇಕಾದ ವರವನ್ನು ಬೇಡು! ಎಲೈ ಹಿರಣ್ಯಕಶಿಪುವೆ, ಮಹತ್ತಾದ ನಿನ್ನ ಧೈರ್ಯವನ್ನು ನೋಡಿದೆನು; ಇರುವೆ ಮೊದಲಾದ ಕ್ರಿಮಿಗಳಿಂದ ಶರೀರವೆಲ್ಲವೂ ಭಕ್ಷಿಸಲ್ಪಟ್ಟಾಗ್ಯೂ ಪ್ರಾಣಿಗಳನ್ನು ಅಸ್ಥಿಗಳಲ್ಲಿರಿಸಿಕೊಂಡು ತಪಸ್ಸನ್ನು ಮಾಡುವನಾದಕಾರಣ ನೀನು ಮಹಾ ಧೈರ್ಯಶಾಲಿಯು; ಇಂಥಾ ತಪಸ್ಸನ್ನು ಪೂರ್ವದಲ್ಲಿ ಯಾರೂ ಮಾಡಿದವರಿಲ್ಲ; ಮುಂದೆ ಯಾರೂ ಮಾಡಲಾರರು; ಉದಕವನ್ನು ಸಹಾ ಪಾನಮಾಡದೆ ದೇವಮಾನದಲ್ಲಿ ಒಂದು ಸಾವಿರ ವರ್ಷಪರ್ಯಂತವು ತಪೋನಿಷ್ಠೆಯಿಂದ ಯಾವ ಪುರುಷನು ಪ್ರಾಣಗಳನ್ನು ಧರಿಶ್ಯಾನು! ಎಲೈ ದಿತೀ ಪುತ್ರನಾದ ಹಿರಣ್ಯಕಶಿಪುವೆ, ನಿನ್ನ ಈ ಮನೋ ನಿಶ್ಚಯದಿಂದಲೂ ಈ ತಪೋನಿಷ್ಠೆಯಿಂದಲೂ ಪ್ರಸನ್ನನಾದ ನಾನು ನಿನ್ನ ಸ್ವಾಧೀನನಾಗಿಧೇನೆ! ಎಲೈ ಅಸುರ ಶ್ರೇಷ್ಠನಾದ ಹಿರಣ್ಯಕಶಿಪುವೆ, ಅದುಕಾರಣ ನಿನ್ನ ಇಷ್ಟಾರ್ಥಗಳನ್ನೆಲ್ಲವನ್ನು ನಾನು ಕೊಡುತ್ತೇನೆ; ಮರಣರಹಿತನಾದ ನನ್ನ ದರ್ಶನವು ಮರಣಧರ್ಮವುಳ್ಳ ನಿನಗೆ ವ್ಯರ್ಥವಾಗುವದಿಲ್ಲ' ಎಂದು ನುಡಿದು ಪಿಪೀಲಕಾದಿಗಳಿಂದ ಭಕ್ಷಿತನಾದ ಆ ಹಿರಣ್ಯಕಶಿಪುವಿನನ್ನು ಮಹಾ ಸುಖಪ್ರದವಾದ ದಿವ್ಯವಾದ ತನ್ನ ಕಮಂಡಲೋದಕದಿಂದ ಪ್ರೋಕ್ಷಿಸಿದನು; ಆಗ ಹಿರಣ್ಯಕಶಿಪುವು ಬಿದುರ ಹಿಂದಿನಲ್ಲಿರುವ ಹುತ್ತದಬೆಸೆಯಿಂದ ಎದ್ದು ಈಚೆಗೆ ಬಂದು ತೇಜೋಬಲಗಳಿಂದ ಯುಕ್ತನಾಗಿ

ಸಮಸ್ತಾವಯವಗಳಿಂದ ಪರಿಪೂರ್ಣನಾಗಿ ವಜ್ರಮಯವಾದ ದೇಹವುಳ್ಳವನಾಗಿ ಯೌವ್ವನವನ್ನೈದಿದವನಾಗಿ ದಾರು ಸಂಬಂಧಿಯಾದ ಅಗ್ನಿಯಿಂದ ಕರಗಿದ ಸುವರ್ಣದಂತೆ ಪ್ರೊಳೆಯುತ ಅಂತರಿಕ್ಷದಲ್ಲಿರುವ ಹಂಸವಾಹನನಾದ ಪಿತಾಮಹನಾದ ಬ್ರಹ್ಮನನ್ನು ಕಂಡು ಮಹಾ ಸಂತೋಷಯುಕ್ತನಾಗಿ ಶಿರಸ್ಸಿನಿಂದ ನಮಸ್ಕರಿಸಿ ಎದ್ದು ನಿಂತು ನಮ್ರತೆಯಿಂದ ಅಂಜಲಿಬಂಧಗೈದು ಆ ಬ್ರಹ್ಮನನ್ನು ನೋಡುತ ಆನಂದಬಾಷ್ಪ ರೋಮಾಂಚಗಳಿಂದ ಸಹಿತನಾಗಿ ಗದ್ಗದ ಧ್ವನಿಯಿಂದ ಸ್ತೋತ್ರಗೈದನು! "ಕಲ್ಪಾಂತಕಾಲದಲ್ಲಿ ಕಾಲದಿಂದ ಪ್ರಕೃತಿಗುಣರೂಪವಾದ ತಮಸ್ಸಿನಿಂದ ಆವೃತವಾದ ಈ ಜಗತ್ತನ್ನು ಯಾವ ಆತ್ಮನು ತಾನೇ ಜ್ಯೋತಿಸ್ಸ್ವರೂಪನಾಗಿ ತನ್ನ ತೇಜಸ್ಸಿನಿಂದ ಪ್ರಕಟಗೈವನೋ ಯಾವಾತನು ಗುಣತ್ರಯಸ್ವರೂಪನಾಗಿ ತಾನೇ ಈ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳನ್ನೈದಿಸುವನೋ ಅಂಥಾ ಗುಣತ್ರಯಾಶ್ರಯನಾದ ಉತ್ಕೃಷ್ಟನಾದ ಪರಮೇಶ್ವರನಾದ ನಿನಗೋಸ್ಕರ ನಮಸ್ಕಾರವು! ಪುರಾಣಪುರುಷನಾದ ಜಗತ್ಕಾರಣನಾದ ಸ್ವರೂಪಜ್ಞಾನ ವಿಷಯಾಕಾರಜ್ಞಾನಗಳೇ ಶರೀರವಾಗುಳ್ಳ ಪ್ರಾಣೇಂದ್ರಿಯ ಮನೋಬುದ್ಧಿಗಳ ವಿಕೃತಿಗಳಿಂದ ಕಾರ್ಯಕಾರಣಭಾವವನ್ನೈದಿರುವ ನಿನಗೋಸ್ಕರ ನಮಸ್ಕಾರವು! ಎಲೈ ಬ್ರಹ್ಮನೆ, ಸ್ಥಾವರ ಜಂಗಮಗಳಿಗೆ ನೀನೇ ನಿಯಾಮಕನು; ಸೂತ್ರಾತ್ಮಕವಾದ ರೂಪಿನಿಂದ ನೀನೇ ಪ್ರಜೆಗಳಿಗೆ ಅಧಿಪತಿಯು; ಆ ಪ್ರಜೆಗಳ ಚಿತ್ತಕ್ಕೂ ತತ್ಪರಿಣಾಮರೂಪವಾದ ಚೈತನ್ಯಕ್ಕೂ ಮನಸ್ಸಿಗೂ ಮನಸ್ಸಿನಿಂದ ನಿಯಮಿಸಲ್ಪಡುವ ಇಂದ್ರಿಯಗಳಿಗೂ ಪತಿಯು; ಮಹಾ ಭೂತಗಳಿಗೂ ತದ್ಗುಣಗಳಾದ ಶಬ್ದಾದಿ ವಿಷಯಗಳಿಗೂ ಅದರ ವಾಸನೆಗಳಿಗೂ ಈಶ್ವರನು ನೀನೇ! ಎಲೈ ಬ್ರಹ್ಮನೆ, ಅಧ್ವರ್ಯು ಮೊದಲಾದ ಚತುರ್ಹೋತ್ರಕವಾದ ಕರ್ಮವಿಷಯವಾದ ವೇದತ್ರಯವೆಂಬ ಶರೀರದಿಂದ ನೀನೇ ಅಗ್ನಿಷ್ಟೋಮಾದಿ ಕರ್ಮಗಳನ್ನು ವಿಸ್ತಾರಗೈಯುವೆ; ನೀನು ಪ್ರಾಣಿಗಳಿಗೆ ಅಂತರ್ಯಾಮಿಯು; ಸರ್ವಜ್ಞನು; ಅಖಂಡನಾದವನು; ಅನಾದಿಯು; ಕಾಲದಿಂದಲೂ ದೇಶದಿಂದಲೂ ಪಾರವಿಲ್ಲದವನು; ನೀನೇ ಕಾಲಸ್ವರೂಪನಾಗಿ ಜನರ ಆಯುಷ್ಯವನ್ನು ಕಾಲಾವಯವಗಳಾದ ಕ್ಷಣಲವಾದಿಗಳಿಂದ ಕ್ಷಯಿಸುವಂತೆ ಮಾಡುತ್ತೀಯೆ; ನೀನೇ ಕೂಟಸ್ಥನು; ಜ್ಞಾನಸ್ವರೂಪನು; ಪರಮೇಶ್ವರನು; ಜನ್ಮಶೂನ್ಯನು; ಅಪರಿಚ್ಛಿನ್ನನು; ಜೀವಲೋಕದ ಜೀವನಸ್ವರೂಪನು; ನಿಯಾಮಕನು; ನಿನಗಿಂತ ಪರಾಪರಗಳು ನಿನ್ನಹೊರ್ತಾಗಿರುವದು ಸ್ವಲ್ಪವೂ ಇಲ್ಲ; ಸ್ಥಾವರಜಂಗಮಾತ್ಮಕವಾದ ಸಮಸ್ತ ಪ್ರಪಂಚವೂ ನೀನೇ ಸರಿ; ವೇದೋಪವೇದಗಳು ಮುಂತಾದ ಕಲೆಗಳೆಲ್ಲಾ ನಿನ್ನ ಶರೀರಗಳು; ಹಿರಣ್ಮಯರೂಪವಾದ ಬ್ರಹ್ಮಾಂಡವೇ ಗರ್ಭದಲ್ಲಿ ಉಳ್ಳವನು ನೀನು; ತ್ರಿಗುಣಾತ್ಮಕವಾದ ಮೂಲಪ್ರಕೃತಿಯ ದೆಶೆಯಿಂದಲೂ ಪರವಾದ ಬ್ರಹ್ಮಸ್ವರೂಪನು ನೀನೆ! ಎಲೈ ಸಮರ್ಥನಾದ ಬ್ರಹ್ಮನೆ, ಸ್ಥೂಲವಾದ ಕಾರ್ಯರೂಪವಾದ ಯಾವ ನಿನ್ನ ಶರೀರವುಂಟೋ ಅದರಿಂದಲೇ ಇಂದ್ರಿಯ ಪ್ರಾಣ ಮನಸ್ಸುಗಳ ವಿಷಯಗಳನ್ನು ಭೋಗಿಸುವೆ; ಪರಮೈಶ್ವರ್ಯವುಳ್ಳ ಸ್ವಸ್ವರೂಪಸ್ಥಾನದಲ್ಲಿರುವವನಾದಕಾರಣ ನೀನೇ ನಿರುಪಾಧಿಕನಾದ ಆತ್ಮನು; ಅವ್ಯಕ್ತನು; ಪುರಾಣಪುರುಷನು; ಪರಬ್ರಹ್ಮನು! ಎಲೈ ಅನಂತನೆ, ಮನೋವಾಗಗೋಚರನಾದಕಾರಣ ಅವ್ಯಕ್ತನಾದ ಯಾವ ನಿನ್ನಿಂದ ನಿಖಿಲವೂ ವ್ಯಾಪ್ತವೋ ಚಿಚ್ಛಕ್ತಿಯಾದ ವಿದ್ಯೆಯಿಂದಲೂ ಮಾಯೆಯಿಂದಲೂ ಯುಕ್ತನಾದ ನಿನಗೋಸ್ಕರ ನಮಸ್ಕಾರವು! ಎಲೈ ವರಪ್ರದನಾದ ಬ್ರಹ್ಮನೆ, ನೀನು ನನಗೋಸ್ಕರ ಪ್ರಸನ್ನನಾಗಿ ಬೇಕಾದ ವರಗಳನ್ನೀವವನಾದರೆ ನಿನ್ನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಗಳಿಂದ ನನಗೆ ಮೃತ್ಯುವಿಲ್ಲದಂತೆ ವರವನ್ನೀವುದು; ಒಳಗೂ ಹೊರಗೂ ನಿನ್ನಿಂದ ಸೃಷ್ಟವಾಗುವದಕ್ಕಿಂತ ಇತರರಾದವರಿಂದಲೂ ದಿವಸದಲ್ಲಿಯೂ ರಾತ್ರಿಯಲ್ಲಿಯೂ ಆಯುಧಗಳಿಂದಲೂ ಭೂಮಿಯಲ್ಲಿಯೂ ಆಕಾಶದಲ್ಲಿಯೂ ಮೃತ್ಯುವಿಲ್ಲದಂತೆ ವರವನ್ನೀವುದು; ಪ್ರಾಣವಿಲ್ಲದವರಿಂದಲೂ ಪ್ರಾಣವುಳ್ಳವರಿಂದಲೂ ಸುರರಿಂದಲೂ ಅಸುರರಿಂದಲೂ ನರರಿಂದಲೂ ಮೃಗಗಳಿಂದಲೂ ಸರ್ಪಗಳಿಂದಲೂ ಎಂತು ನನಗೆ ಮೃತ್ಯುವಿಲ್ಲವೋ ಆರೀತಿ ಅಪ್ರತಿದ್ವಂದ್ವತ್ವವನ್ನೂ ಏಕಾಧಿಪತ್ಯವನ್ನೂ ಈವುದು; ಸಮಸ್ತರಾದ ಲೋಕಪಾಲಕರ ಮಹಿಮೆಯನ್ನೂ ತಪ್ಪೋಯೋಗ ಪ್ರಭಾವವುಳ್ಳವರ ಅನಶ್ವರಗಳಾದ ಅಣಿಮಾದ್ಯಷ್ಟೈಶ್ವರ್ಯಗಳನ್ನೂ ನನಗೆ ಇತ್ತು ರಕ್ಷಿಸು" ಎಂದು ಹಿರಣ್ಯಕಶಿಪ್ರವು ಬ್ರಹ್ಮದೇವನನ್ನು ಕುರಿತು ವಿಜ್ಞಾಪಿಸಿದನು.

೪ನೇ ಅಧ್ಯಾಯ.

ಹಿರಣ್ಯಕಶಿಪುವು ಬ್ರಹ್ಮದೇವನ ದೆಸೆಯಿಂದ ವರಗಳನ್ನು ಪಡೆದು ಸಮಸ್ತ ಲೋಕಪಾಲಕರನ್ನೂ ಜಯಿಸಿದ್ದು.

“ಎಲೈ ಧರ್ಮರಾಯನೇ, ಅನಂತರದಲ್ಲಿ ಈರೀತಿಯಿಂದ ಪ್ರಾರ್ಥಿಸಲ್ಪಟ್ಟು ತಪಸ್ಸಿನಿಂದ ಸುಪ್ರೀತನಾದ ಬ್ರಹ್ಮನು ಹಿರಣ್ಯಕಶಿಪುವಿಗೆ ಯಾರಿಂದಲೂ ಅಶಕ್ಯಗಳಾದ ವರಗಳನ್ನು ಕೊಡುವ ಸಮಯದಲ್ಲಿ ಅವನನ್ನು ಕುರಿತು ‘ಎಲೈ ಹಿರಣ್ಯಕಶಿಪುವೇ, ನನ್ನನ್ನು ಕುರಿತು ಯಾವ ವರಗಳನ್ನು ಬೇಡುವೆಯೋ ಆ ವರಗಳು ಪುರುಷನಿಂದ ಪಡೆಯಲಶಕ್ಯಗಳು; ಆದಾಗ್ಯೂ ಈ ದುರ್ಲಭಗಳಾದ ವರಗಳನ್ನು ನಿನಗೆ ಈವೆನು’ ಎಂದು ಪೇಳಿ ಸಾರ್ಥಕವಾದ ಅನುಗ್ರಹವುಳ್ಳ ಭಗವಂತನಾದ ಬ್ರಹ್ಮದೇವನು ಅವನಿಗೆ ಸಂತೋಷವಾಗುವಂತೆ ಸಮಸ್ತ ವರಗಳನ್ನಿತ್ತು ದೈತ್ಯೇಂದ್ರನಿಂದ ಪೂಜಿಸಲ್ಪಟ್ಟು ಪ್ರಜೇಶ್ವರರಿಂದ ಸ್ತೋತ್ರಂಗೈಯಲ್ಪಡುತ ಸತ್ಯಲೋಕವನ್ನೈದಿದನು; ಈ ಪ್ರಕಾರವಾಗಿ ಪಡೆಯಲ್ಪಟ್ಟ ವರಗಳುಳ್ಳ ಹಿರಣ್ಯಕಶಿಪುವು ಸುವರ್ಣಮಯವಾದ ಶರೀರವನ್ನು ಧರಿಸಿ ತಮ್ಮನಾದ ಹಿರಣ್ಯಾಕ್ಷನ ಸಂಹಾರವನ್ನು ಸ್ಮರಿಸಿ ಅಪಾರಮಹಿಮನಾದ ವಿಷ್ಣುವಿನಲ್ಲಿ ದ್ವೇಷವನ್ನು ಮಾಡಿ ಸಮಸ್ತದಿಕ್ಕುಗಳನ್ನೂ ಲೋಕತ್ರಯವನ್ನೂ ದೇವತೆಗಳನ್ನೂ ಪಿತೃದೇವತೆಗಳನ್ನೂ ಯಕ್ಷೇಶ್ವರರನ್ನೂ ರಾಕ್ಷಸಶ್ರೇಷ್ಠರನ್ನೂ ಪಿಶಾಚಾಧಿಪತಿಗಳನ್ನೂ ಪ್ರೇತರನ್ನೂ ಪ್ರಮಥಗಣಗಳನ್ನೂ ಸಮಸ್ತ ಪ್ರಾಣಿಗಳಲ್ಲಿಯೂ ಆಯಾ ಜಾತಿಗಳಲ್ಲಿ ಮುಖ್ಯ ಮುಖ್ಯರಾದವರನ್ನೂ ಜಯಿಸಿ ತನ್ನ ಅಧೀನವನ್ನೈದಿಸಿ ಸರ್ವ ಲೋಕಪಾಲಕರ ಸ್ಥಾನಗಳನ್ನೂ ಅವರವರ ಸತ್ವವನ್ನೂ ಅಪಹರಿಸಿದನು; ಅನಂತರದಲ್ಲಿ ನಂದನವನದ ಲಕ್ಷ್ಮಿಯಿಂದ ಶೋಭಿಸುವ ಸ್ವರ್ಗವನ್ನಾಕ್ರಮಿಸಿ ಅಲ್ಲಿ ಸಾಕ್ಷಾದ್ವಿಶ್ವಕರ್ಮನಿಂದ ನಿರ್ಮಿತವಾದ ಇಂದ್ರನ ಗೃಹವನ್ನು ಆಕ್ರಮಿಸಿ ತ್ರೈಲೋಕ್ಯೈಶ್ವರ್ಯವುಳ್ಳ ಸಕಲಸಮೃದ್ಧಿಯುಕ್ತವಾದ ಆ ಇಂದ್ರನ ಗೃಹದಲ್ಲೇ ವಾಸಂಗೈದನು; ಆ ಇಂದ್ರಭವನವೆಂಥಾದ್ದೆಂದರೆ: ಹವಳಗಳ ಸೋಪಾನಗಳೂ ಉತ್ತಮಗಳಾದ ಪಚ್ಚೆಗಳ ಭೂಮಿಗಳೂ ಸ್ಫಟಿಕಮಯಗಳಾದ ಗೋಡೆಗಳೂ ವೈಡೂರ್ಯದ ಕಂಭದ ಸಾಲುಗಳೂ ವಿಚಿತ್ರಗಳಾದ ಮೇಲುಕಟ್ಟುಗಳೂ ಅಲ್ಲಲ್ಲಿ ಇಟ್ಟಿರುವ ಪದ್ಮರಾಗಮಣಿಗಳೂ ಹಾಲುನೊರೆಯಂತೆ ಶುಭ್ರಗಳಾದ ಹಾಸಿಗೆಗಳೂ ಅದರ ಮೇಲುಗಡೆಯಲ್ಲಿ ಕಟ್ಟಿರುವ ಮುತ್ತಿನ ಕುಚ್ಚುಗಳುಳ್ಳ ಮೇಲುಕಟ್ಟುಗಳಿಂದಲೂ ಪ್ರಕಾಶಿಸುತ್ತಿರುವದು; ಅಲ್ಲಿ ಸಂಚರಿಸುವ ದೇವಸ್ತ್ರೀಯರು ಧ್ವನಿಯನ್ನುಗೈಯುತ್ತಿರುವ ಕಾಲುಕಡಗಗಳಿಂದ ಸಂಚರಿಸುತ್ತಿರುವರು; ಮತ್ತೆ ಕೆಲವರು ಸುಂದರೀರು ರತ್ನಮಯಗಳಾದ ಗೋಡೆಗಳಲ್ಲಿ ಪ್ರತಿಫಲಿಸುತ್ತಿರುವ ತಮ್ಮ ಸುಂದರವಾದ ಮುಖವನ್ನು ನೋಡುತ್ತಿರುವರು; ಇಂಥಾ ಗೃಹದಲ್ಲಿ ಮಹಾಬಲನಾದ ಮಹಾಮನಸ್ವಿಯಾದ ಆ ಹಿರಣ್ಯಕಶಿಪುವು ಸಮಸ್ತಲೋಕಗಳನ್ನೂ ಜಯಿಸಿ ಏಕಾಧಿಪತಿಯಾಗಿ ಸಂತಾಪಪಡಿಸಲ್ಪಟ್ಟು ಶರಣಾಗತರಾದ ಸುರಾಸುರರಿಂದ ನಮಸ್ಕರಿಸಲು ಯೋಗ್ಯವಾದ ಚರಣವುಳ್ಳವನಾಗಿ ಅತಿತೀವ್ರವಾದ ಆಜ್ಞೆಯುಳ್ಳವನಾಗಿ ಕ್ರೀಡಿಸಿದನು! ಕೇಳೈ ಧರ್ಮಪುತ್ರನೇ, ತೀವ್ರವಾದ ಗಂಧವುಳ್ಳ ಸುರೆಯಿಂದ ಮತ್ತನಾಗಿ ತಿರುಗುತಲಿರುವ ಕೆಂಪಾದ ನೇತ್ರಗಳುಳ್ಳವನಾಗಿ ತಪೋಬಲಪರಾಕ್ರಮಗಳಿಗೆ ಆಶ್ರಯನಾದ ಆ ದೈತ್ಯೇಂದ್ರನನ್ನು ಬ್ರಹ್ಮ ವಿಷ್ಣು ಮಹೇಶ್ವರರು ಮೂವರು ಹೊರತಾಗಿ ಸಮಸ್ತ ಲೋಕಪಾಲಕರೂ ಕೈಕಾಣಿಕೆಗಳಿಂದ ಯುಕ್ತಗಳಾದ ಹಸ್ತಗಳಿಂದ ಸೇವಿಸುತಲಿರುವರು; ವಿಶ್ವಾವಸು ತುಂಬುರರು ನಾವೇ ಮೊದಲಾದವರು ಗಂಧರ್ವರು ಸಿದ್ಧರು ಋಷಿಗಳು ಮಹೇಂದ್ರಾಸನದಲ್ಲಿ ಕುಳಿತಿರುವ ದೈತ್ಯೇಂದ್ರನನ್ನು ಗಾನಂಗೈದರು; ವಿದ್ಯಾಧರರು ಅಪ್ಸರಸ್ಸುಗಳು ಸ್ತೋತ್ರಂಗೈದರು; ಆ ದೈತ್ಯನೇ ವರ್ಣಾಶ್ರಮಗಳಿಂದ ಮಾಡಲ್ಪಡುವ ಬಹಳ ದಕ್ಷಿಣೆಗಳುಳ್ಳ ಯಜ್ಞಗಳಿಂದ ಪೂಜಿಸಲ್ಪಡುವನಾಗಿ ತನ್ನ ಪ್ರಭಾವದಿಂದ ಹವಿರ್ಭಾಗಗಳನ್ನು ಗ್ರಹಿಸಿದನು; ಸಪ್ತದ್ವೀಪಗಳಿಂದೊಡಗೂಡಿರುವ ಸಮಗ್ರವಾದ ಭೂಮಿಯು ಆ ದೈತ್ಯನಿಗೆ ಉತ್ತುಬಿತ್ತದೆ ಇದ್ದಾಗ್ಯೂ ತಾನೇ ಫಲಿಸಿತು; ಆಕಾಶವು ಬೇಕಾದ ವಸ್ತುಗಳನ್ನು ಕೊಟ್ಟಿತು; ಸ್ವರ್ಗವು ನಾನಾವಿಧಗಳಾದ ಆಶ್ಚರ್ಯಗಳನ್ನು ಉಂಟುಮಾಡಿತು; ರತ್ನಾಕರಗಳಾದ ಲವಣೇಕ್ಷು ಸುರಾ ಸರ್ಪಿ ದಧಿ ಕ್ಷೀರ ಶುದ್ಧಜಲಗ-

ಳುಳ್ಳ ಏಳಾದ ಸಮುದ್ರಗಳು ಅವರ ಪತ್ನೀಯರಾದ ನದಿಗಳು ತೆರೆಗಳೆಂಬ ಕೈಗಳಿಂದ ರತ್ನ ಸಮೂಹಗಳನ್ನು ವಹಿಸಿದರು; ವೃಕ್ಷಗಳು ಷಡೃತುಗಳಲ್ಲಿಯೂ ಪುಷ್ಪಗಳನ್ನು ಧರಿಸಿದವು; ಹಿರಣ್ಯಕಶಿಪುವು ಇಂದ್ರಾದಿ ಲೋಕಪಾಲಕರ ವರ್ಷ ದಹನ ಶೋಷಣಾದಿ ಗುಣಗಳನ್ನು ತಾನೇ ವಹಿಸುತ ಪರ್ವತಗಳ ತಪ್ಪಲುಗಳಲ್ಲಿ ಸ್ವೇಚ್ಛೆಯಿಂದ ವಿಹರಿಸಿದನು; ಆ ದೈತ್ಯನು ಈಪ್ರಕಾರವಾಗಿ ಸಮಸ್ತ ದಿಕ್ಕುಗಳನ್ನೂ ಜಯಿಸಿ ಒಬ್ಬನೇ ಸರ್ವಾಧಿಪತಿಯಾಗಿ ಬೇಕಾದಂತೆ ಸಮಸ್ತ ಭೋಗಗಳನ್ನನುಭವಿಸುವವನಾದಾಗ್ಯೂ ಜಿತೇಂದ್ರಿಯನಲ್ಲದವನಾದಕಾರಣ ತೃಪ್ತಿಯನ್ನೈದಲಿಲ್ಲ; ಈಪ್ರಕಾರದಿಂದ ಐಶ್ವರ್ಯಮತ್ತನಾಗಿ ದುಷ್ಟನಾಗಿ ಶಾಸ್ತ್ರಮಾರ್ಗವನ್ನತಿಕ್ರಮಿಸಿ ನಡದವನಾದಕಾರಣ ಬ್ರಾಹ್ಮಣಶಾಪವನ್ನೈದಿದ ದೈತ್ಯನಿಗೆ ಬಹಳಕಾಲವು ಕಳೆಯಿತು; ಆ ದೈತ್ಯನ ಉಗ್ರವಾದ ನಿಗ್ರಹವನ್ನು ತಾಳಲಾರದ ಲೋಕಪಾಲಸಹಿತಗಳಾದ ಲೋಕಗಳು ಅವನನ್ನು ಹೊರ್ತು ಮತ್ತೊಬ್ಬರನ್ನು ರಕ್ಷಕರನ್ನಾಗಿ ಕಾಣದೆ ಶ್ರೀ ನಾರಾಯಣನನ್ನು ಶರಣುಹೊಂದಿದವು; ಶಾಂತರಾದ ಕಾಮ್ಯಕರ್ಮಫಲವನ್ನು ತ್ಯಜಿಸಿರುವ ನಿರ್ಮಲಾಂತಃಕರಣವುಳ್ಳ ಮಹಾ ಯೋಗಿಗಳು ಯಾವ ಭಗವಂತನನ್ನೈದಿ ಪುನರಾವೃತ್ತಿರಹಿತರಾಗುವರೋ ಸರ್ವಾತ್ಮಕನಾದ ಸರ್ವೇಶ್ವರನಾದ ಆ ಶ್ರೀಹರಿಯು ಎಲ್ಲಿ ಸ್ಥಿರವಾಗಿ ನೆಲಸಿಹನೋ ಆ ದಿಕ್ಕಿಗೋಸ್ಕರ ನಮಸ್ಕಾರವು! ಎಂದು ಈಪ್ರಕಾರವಾಗಿ ಭಗವಂತನನ್ನು ಕುರಿತು ನಮಸ್ಕರಿಸಿ ಆರ್ತರಾದ ಪ್ರಜೆಗಳು ಮನೋನಿಗ್ರಹಂಗೈದು ಸ್ಥಿರಬುದ್ಧಿಯುಳ್ಳವರಾಗಿ ಪರಿಶುದ್ಧರಾಗಿ ವಾಯ್ವಾಹಾರಿಗಳಾಗಿ ನಿದ್ರಾರಹಿತರಾಗಿ ಹೃಷೀಕೇಶನಾದ ಶ್ರೀಹರಿಯನ್ನು ಸ್ತೋತ್ರಂಗೈದರು; ಶ್ರೀಮೂರ್ತಿಸ್ವರೂಪನಾಗಿ ಸಮಸ್ತ ಲೋಕಗಳಿಗೂ ಅಧಿಷ್ಠಾನರೂಪನಾಗಿ ಮಹಾತ್ಮನಾಗಿ ಪರಿಶುದ್ಧವಾದ ಸ್ವಸ್ವರೂಪಾನಂದರೂಪನಾದ ಭಗವಂತನಾದ ಶ್ರೀ ನಾರಾಯಣನಿಗೋಸ್ಕರ ನಮಸ್ಕಾರವು! ಈಪ್ರಕಾರವಾಗಿ ಸಮಸ್ತ ಪ್ರಜೆಗಳೂ ಶ್ರೀಹರಿಯನ್ನು ಬಹುಕಾಲ ಸ್ತುತಿಗೈಯಲು ಮೇಘಧ್ವನಿಯಂತೆ ಗಂಭೀರವಾಗಿ ದಿಕ್ಕುಗಳನ್ನು ಧ್ವನಿಗೈಸುವದಾಗಿ ಬಂದಾನೊಂದು ಸಮಯದಲ್ಲಿ ಅಶರೀರವಾಕ್ಯ ಸಜ್ಜನರಿಗೆ ಅಭಯಪ್ರದವಾಗಿ ಆವಿರ್ಭವಿಸಿ 'ಎಲೈ ದೇವಶ್ರೇಷ್ಠರಿರಾ, ಅಂಜಬೇಡಿ; ನಿಮಗೆಲ್ಲರಿಗೂ ಕ್ಷೇಮವುಂಟಾದೀತು; ಪ್ರಾಣಿಗಳಿಗೆ ನನ್ನ ದರ್ಶನವು ಸಮಸ್ತವಾದ ಶ್ರೇಯಸ್ಸನ್ನುಂಟುಮಾಡುವದು; ದಿತಿಯ ಪುತ್ರರಲ್ಲಿ ನೀಚನಾದ ಹಿರಣ್ಯಕಶಿಪುವಿನ ದುಷ್ಟತೆಯು ನನಗೆ ವಿದಿತವಾಯಿತು; ಅದರ ಶಾಂತಿಯನ್ನು ನಾನು ಮಾಡುತ್ತೇನೆ; ಅಷ್ಟುಪರ್ಯಂತವೂ ನೀವು ಕಾಲವನ್ನು ನಿರೀಕ್ಷಿಸಿಕೊಂಡಿರಿ; ಯಾವಾಗ ದೇವತೆಗಳಲ್ಲಿ ವೇದಗಳಲ್ಲಿ ಗೋವುಗಳಲ್ಲಿ ಬ್ರಾಹ್ಮಣರಲ್ಲಿ ಸಾಧುಗಳಲ್ಲಿ ಧರ್ಮದಲ್ಲಿ ನನ್ನಲ್ಲಿಯೂ ದ್ವೇಷ ಯಾವವನಿಗುಂಟಾಗುವದೋ ಆಗಲವನು ನಿಶ್ಚಯವಾಗಿ ನಾಶವನ್ನೈದುವನು; ಯಾರಲ್ಲಿಯೂ ವೈರವಿಲ್ಲದ ಬಹಳ ಶಾಂತನಾದ ನನ್ನ ಭಕ್ತನಾದ ಮಹಾತ್ಮನಾದ ಪ್ರಹ್ಲಾದನಿಗೋಸ್ಕರ ಯಾವಾಗ ದ್ರೋಹವನ್ನಾಚರಿಸುವನೋ ಆಗ ಆ ದೈತ್ಯನು ಬ್ರಹ್ಮನ ವರಗಳಿಂದ ಅನೇಕ ಬಲವುಳ್ಳವನಾದಾಗ್ಯೂ ಅವನನ್ನು ಸಂಹರಿಪೆನು' ಎಂದು ಲೋಕಗುರುವಾದ ಶ್ರೀಹರಿಯಿಂದ ಪೇಳಲ್ಪಟ್ಟ ವಾಕ್ಯವನ್ನು ಕೇಳಿ ದೇವತೆಗಳು ಶ್ರೀಹರಿಯನ್ನು ಕುರಿತು ನಮಸ್ಕರಿಸಿ ಆ ಅಸುರನ ಭಯವನ್ನು ಬಿಟ್ಟು ಆ ಅಸುರನು ಹತನಾದನೆಂದು ತಿಳಿದು ಹಿಂತಿರುಗಿ ಬಂದರು!

"ಎಲೈ ಧರ್ಮರಾಯನೇ, ಹೀಗಿರುತಿರಲಾಗಿ ಆ ದೈತ್ಯೇಂದ್ರನಿಗೆ ಪರಮಾಶ್ಚರ್ಯಕರರಾದ ನಾಲ್ವರು ಪುತ್ರರು ಪುಟ್ಟಿದರು; ಅವರ ಮಧ್ಯದಲ್ಲಿ ಪ್ರಹ್ಲಾದನೆಂಬ ಪುತ್ರನು ಗುಣಗಳಿಂದ ಮಹಾತ್ಮನು; ಶ್ರೀಭಗವಂತನನ್ನುಉಪಾಸನಂಗೈಯುವದರಲ್ಲಿ ಶ್ರೇಷ್ಠನು; ಬ್ರಾಹ್ಮಣರ ರಕ್ಷಕನು; ಶೀಲದಿಂದ ಸಂಪನ್ನನಾದವನು; ಸತ್ಯದಲ್ಲಿ ವಿಶ್ವಾಸವುಳ್ಳವನು; ಇಂದ್ರಿಯಗಳನ್ನು ಜಯಿಸಿದವನು; ತನ್ನಂತೆ ಸರ್ವರನ್ನು ನೋಡುವನಾಗಿ ಸರ್ವಸುಹೃತ್ತಾದವನು; ಆ ಪ್ರಹ್ಲಾದನು ವೃದ್ಧರಾದ ಮಹಾತ್ಮರಲ್ಲಿ ಭೃತ್ಯನಂತೆ ನಮ್ರನಾಗಿ ದೀನಜನರಲ್ಲಿ ಪಿತೃವಿನಂತೆ ವಾತ್ಸಲ್ಯಯುಕ್ತನಾಗಿ ತನಗೆ ಸಮಾನರಲ್ಲಿ ಭ್ರಾತೃವಿನಂತೆ ಸ್ನೇಹಯುಕ್ತನಾಗಿ ಗುರುಗಳಲ್ಲಿ ಈಶ್ವರಭಾವನೆಯುಳ್ಳವನಾಗಿರುವನು; ವಿದ್ಯೆಗಳಿಂದಲೂ ದ್ರವ್ಯಗಳಿಂದಲೂ ರೂಪದಿಂದಲೂ ಜನ್ಮವೇ ಮೊದಲಾದ್ದರಿಂದುಂಟಾಗುವ ಅಹಂಕಾರ ದಂಭಗಳಿಂದಲೂ ರಹಿತನಾಗಿ ವ್ಯಸನಗಳಲ್ಲಿ ಬೆದರದಿರುವ ಚಿತ್ತವುಳ್ಳವನಾಗಿ ವಿಷಯಭೋಗಗಳಲ್ಲಿ ನಿಸ್ಪೃಹನಾಗಿ ಕಾಣಲ್ಪಟ್ಟ ಕೇಳಲ್ಪಟ್ಟ ವಸ್ತುಗಳಲ್ಲಿ ಆತ್ಮದೃಷ್ಟಿಯುಳ್ಳವನಾಗಿ ನಿಗ್ರಹಿಸಲ್ಪಟ್ಟ ಇಂದ್ರಿಯ ಶರೀರಬುದ್ಧಿಗಳುಳ್ಳವನಾಗಿ ಪ್ರಶಾಂತ

ವಾದ ಕಾಮವುಳ್ಳವನಾಗಿ ತಾನು ಅಸುರನಾದಾಗ್ಯೂ ಆ ಅಸುರಭಾವವನ್ನು ಬಿಟ್ಟವನಾಗಿರುವನು! ಎಲೈ ಅರಸೇ, ಯಾವ ಪ್ರಹ್ಲಾದನಲ್ಲಿ ಜ್ಞಾನಿಗಳಿಂದ ಮಹಾಗುಣಗಳು ಗ್ರಹಿಸಲ್ಪಡುತಲಿವೆಯೋ ಆ ಗುಣಗಳು ಈಶ್ವರನ ಗುಣಗಳಂತೆ ಈಗಲೂ ಪ್ರಕಟಗಳಾಗಿರುವವು; ಸಭೆಯಲ್ಲಿ ಸಾಧುಗಳ ಪ್ರಸಂಗಬಂದಲ್ಲಿ ಶತ್ರುಗಳಾದ ದೇವತೆಗಳೂಕೂಡ ಪ್ರಹ್ಲಾದನ ದೃಷ್ಟಾಂತವನ್ನು ಹೇಳುವರು! ಹಾಗಿರುವಲ್ಲಿ ನಿನ್ನಂಥಾ ಮಹಾತ್ಮರು ಅವನ ಗುಣಗಳನ್ನು ಕೊಂಡಾಡುವದೇನು ಆಶ್ಚರ್ಯವು! ಪ್ರಹ್ಲಾದನ ಅಸಂಖ್ಯಾತಗಳಾದ ಉತ್ತಮಗುಣಗಳು ಹಾಗಿರಲಿ: ಭಗವಂತನಾದ ಶ್ರೀವಾಸುದೇವನಲ್ಲಿ ಅವನಿಗಿರುವ ಯಾವ ಭಕ್ತಿ ನಿಷ್ಠೆಯುಂಟೋ ಅದು ಸರ್ವೋತ್ತಮವಾದ ಮಾಹಾತ್ಮ್ಯ ಸೂಚನೆವನ್ನು ಮಾಡುತ್ತೆ; ಬಾಲಕ್ರೀಡಾಸಾಧನಗಳಾದ ವಸ್ತುಗಳನ್ನು ಬಿಟ್ಟು ಬಾಲಕನಾದ ಪ್ರಹ್ಲಾದನು ಶ್ರೀಹರಿಯಲ್ಲೇ ಆಸಕ್ತವಾದ ಮನಸ್ಸುಳ್ಳವನಾದ್ದರಿಂದ ಜಡನಂತೆ ಶ್ರೀಕೃಷ್ಣನೆಂಬ ಗ್ರಹದಿಂದ ಆವಿಷ್ಟವಾದ ಮನಸ್ಸುಳ್ಳವನಾಗಿ ಈ ಜಗತ್ತನ್ನು ತಿಳಿಯಲಿಲ್ಲ; ಪ್ರಹ್ಲಾದನು ಕುಳಿತಿರುವಾಗಲೂ ಸಂಚರಿಸುವಾಗಲೂ ಭೋಜನಂಗೈಯ್ಯುವಾಗಲೂ ಶಯನಂಗೈಯ್ಯುವಾಗಲೂ ಜಲಪಾನಂಗೈಯ್ಯುವಾಗಲೂ ಮಾತಾಡುವಾಗಲೂ ಸರ್ವಕಾಲದಲ್ಲಿಯೂ ಆ ಗೋವಿಂದನಲ್ಲಿ ಏಕಭಾವವನ್ನು ಪಡೆದ ಅಂತರಾತ್ಮವುಳ್ಳವನಾಗಿ ಭೋಜನಾದಿ ಸಮಸ್ತ ವ್ಯಾಪಾರಗಳನ್ನು ಮನಸ್ಸಿನಲ್ಲಿ ಅನುಸಂಧಾನಂಗೈಯ್ಯುವದಿಲ್ಲ; ಒಂದುಕಡೆಯಲ್ಲಿ ಗೋವಿಂದ ಚಿಂತಾಸಕ್ತಚೇತನನಾಗಿ ರೋದನಂಗೈವನು; ಮತ್ತೊಂದುಕಡೆಯಲ್ಲಿ ಶ್ರೀಹರಿಯನ್ನು ಬಣ್ಣಿಸಿ ನಗುವನು; ಮತ್ತೊಂದುಕಡೆಯಲ್ಲಿ ಆ ಭಗವಂತನ ಧ್ಯಾನದಿಂದುಂಟಾದ ಪಾರವಶ್ಯದಿಂದ ಗಾನಂಗೈವನು; ಮತ್ತೊಂದುಕಡೆಯಲ್ಲಿ ಉಚ್ಚಸ್ವರದಿಂದ ಭಗವನ್ನಾಮಗಳನ್ನು ಕೂಗುವನು; ಮತ್ತೊಂದುಕಡೆಯಲ್ಲಿ ಲಜ್ಜಾರಹಿತನಾಗಿ ನರ್ತನಂಗೈವನು; ಮತ್ತೊಂದುಕಡೆಯಲ್ಲಿ ಭಗವಂತನ ಭಾವನೆಯಿಂದ ಆ ಭಗವಂತನ ತಾದಾತ್ಮ್ಯವನ್ನುಪಡೆದು ಆತನ ಲೀಲೆಗಳನ್ನು ತಾನೇಮಾಡುವನು; ಒಂದುಬಳಿಯಲ್ಲಿ ರೋಮಾಂಚವುಳ್ಳವನಾಗಿ ಮೌನದಿಂದ ಕುಳಿತಿರುವನು; ಮತ್ತೊಂದುಕಡೆಯಲ್ಲಿ ಶ್ರೀ ನಾರಾಯಣಮೂರ್ತಿಯಲ್ಲಿ ಐಕ್ಯವನ್ನು ಭಾವಿಸಿ ಆ ಸುಖದಿಂದ ಪರವಶನಾಗಿ ಸ್ಥಿರವಾದ ಭಕ್ತಿರಸದಿಂದುಂಟಾದ ಆನಂದಬಾಷ್ಪದಿಂದ ವ್ಯಾಪ್ತವಾದ ಮುಚ್ಚಲ್ಪಟ್ಟ ನೇತ್ರವುಳ್ಳವನಾಗಿ ಭಾಗವತರ ಸೇವೆಯಿಂದ ಲಬ್ಧವಾದ ಉತ್ತಮಶ್ಲೋಕನಾದ ಭಗವಂತನಾದ ಶ್ರೀಹರಿಯ ಪಾದಪದ್ಮಗಳ ಸೇವೆಯಿಂದ ತನಿಗೆ ಉತ್ಕೃಷ್ಟವಾದ ಸುಖವನ್ನುಂಟುಮಾಡಿಕೊಂಡವನಾಗಿ ದುಸ್ಸಂಗದಿಂದ ದೀನನಾದ ಅನ್ಯನಿಗೂ ಕೂಡ ಅಧಿಕವಾದ ಸುಖವನ್ನುಂಟುಮಾಡುವನು; ಇಂಥಾ ಪೂಜ್ಯನಾದ ಮಹಾನುಭಾವನಾದ ಮಹಾ ಭಾಗವತರಲ್ಲಿ ಶ್ರೇಷ್ಠನಾದ ತನ್ನ ಪುತ್ರನಾದಪ್ರಹ್ಲಾದನಲ್ಲಿ ಹಿರಣ್ಯಕಶಿಪುವು ದ್ರೋಹಂಗೈದನು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಧರ್ಮಪುತ್ರನು "ಎಲೈ ದೇವರ್ಷಿಯಾದ ನಾರದನೆ, ಈಪ್ರಕಾರ ಪರಿಶುದ್ಧನಾಗಿ ಸಾಧುವಾಗಿರುವ ತನ್ನ ಪುತ್ರನಾದ ಪ್ರಹ್ಲಾದನಲ್ಲಿ ತಂದೆಯಾದ ಹಿರಣ್ಯಕಶಿಪುವು ದ್ರೋಹವನ್ನಾಚರಿಸಿದನೆಂಬ ಅರ್ಥವನ್ನು ನಿನ್ನ ದೆಶೆಯಿಂದ ಕೇಳಲಿಚ್ಛೈಸುವೆನು; ಪುತ್ರವಾತ್ಸಲ್ಯವುಳ್ಳ ತಂದೆಗಳು ಪ್ರತಿಕೂಲರಾದ ಪುತ್ರರನ್ನು ನಿಂದಿಸಿ ರಕ್ಷಿಸುವರೇ ಹೊರ್ತು ಶತ್ರುಗಳಂತೆ ಕ್ರೋಧಂಗೈಯ್ಯರು; ಪಿತೃವಾಕ್ಯಾನುಸಾರಿಗಳಾಗಿ ಗುರುದೇವತಾಭಕ್ತಿಯುಳ್ಳ ಸತ್ಪುತ್ರರನ್ನು ಕುರಿತು ದ್ವೇಷವನ್ನು ಮಾಡುವದು ಆಶ್ಚರ್ಯವಾಗಿದೆ! ಎಲೈ ಬ್ರಾಹ್ಮಣೋತ್ತಮನಾದ ನಾರದಋಷಿಯೆ, ತಂದೆಯಾದವನಿಗೆ ಪುತ್ರರ ವಿಷಯದಲ್ಲಿ ಮರಣಸಾಧಕವಾದ ದ್ವೇಷವುಂಟಾಯಿತೆಂಬ ಈ ಆಶ್ಚರ್ಯವನ್ನು ಪರಿಹರಿಸಿ ನನ್ನ ಮನಸ್ಸನ್ನು ನಿರ್ಮಲವನ್ನು ಮಾಡು" ಎಂದು ಪ್ರಾರ್ಥಿಸಿದನು.

೫ನೇ ಅಧ್ಯಾಯ.

ಪ್ರಹ್ಲಾದ ಚರಿತ್ರೆ.

ಆ ಬಳಿಕ ನಾರದಮುನಿಯು "ಎಲೈ ಧರ್ಮರಾಯನೆ, ಪೂಜ್ಯನಾದ ಶುಕ್ರಾಚಾರ್ಯನು ಅಸುರರೆಲ್ಲರಿಗೂ ಪುರೋಹಿತನೆಂಬ ಅರ್ಥವು ಪ್ರಸಿದ್ಧವಷ್ಟೆ; ಆ ಶುಕ್ರಾಚಾರ್ಯನಿಗೆ ಪುತ್ರರಾದ ಚಂಡಾಮರ್ಕರೆಂಬವರೀರ್ವರು ಆ ದೈತ್ಯೇಂದ್ರನ ಗೃಹದ ಸಮೀಪದಲ್ಲಿ ವಾಸಂಗೈಯುತ್ತಿರಲು ದೈತ್ಯೇಶ್ವರನು ಅವರೀರ್ವರನ್ನು ಕರೆದು ಪ್ರಹ್ಲಾದ ಮೊದಲಾದ ಬಾಲಕರಿಗೆ ವಿದ್ಯಾಭ್ಯಾಸವನ್ನು ಮಾಡುವಂತೆ ಆಜ್ಞಾಪಿಸಲು ವಿನಯಯುಕ್ತನಾದ ಪ್ರಹ್ಲಾದನಿಗೂ ಇತರರಾದ ದೈತ್ಯಬಾಲಕರಿಗೂ ದಂಡನೀತಿ ಮೊದಲಾದ ಶಾಸ್ತ್ರಗಳನ್ನು ಅಭ್ಯಾಸಂಗೈಸಿದರು; ಆಗ ಪ್ರಹ್ಲಾದನು ಗುರುವಿನಿಂದ ಹೇಳಲ್ಪಟ್ಟ ವಿದ್ಯೆಗಳನ್ನು ಕೇಳಿ ಅನುಕರಿಸಿ ಪಾಠಂಗೈಯುವನಾದಾಗ್ಯೂ ತಾನು ಪರನು ಎಂಬ ಮಿಥ್ಯಾಭಿಮಾನಕ್ಕೆ ಆಶ್ರಯವಾದಕಾರಣ ಅದನ್ನು ಯುಕ್ತವೆಂದು ತಿಳಿಯಲಿಲ್ಲ; ಹೀಗಿರುವಲ್ಲಿ ಒಂದಾನೊಂದು ದಿವಸದಲ್ಲಿ ದೈತ್ಯೇಂದ್ರನು ತನ್ನ ಪುತ್ರನಾದ ಪ್ರಹ್ಲಾದನನ್ನು ತೊಡೆಯಲ್ಲಿ ಕುಳ್ಳಿರಿಸಿಕೊಂಡು 'ಎಲೈ ಮಗನೆ, ನೀನು ಅಭ್ಯಾಸಂಗೈದುದರಲ್ಲಿ ಯಾವದು ಉತ್ತಮವೋ ಅದನ್ನು ಹೇಳು' ಎಂದು ಕೇಳಲು ಪ್ರಹ್ಲಾದನು 'ಕೇಳೈ ಅಸುರೇಂದ್ರನೆ, ನಾನು—ನನ್ನದು ಎಂಬ ಮಿಥ್ಯಾಭಿನಿವೇಶದಿಂದ ಮಹಾ ದುಃಖಪ್ರದವಾದ ಸಂಸಾರದದೆಶೆಯಿಂದ ಭೀತವಾದ ಬುದ್ಧಿಯುಳ್ಳ ಪ್ರಾಣಿಗಳಿಗೆ ಅಧೋಗತಿಗೆ ನಿಮಿತ್ತವಾದ ಅಂಧಕೂಪದಂತೆ ಮೋಹವನ್ನುಂಟುಮಾಡುವ ಗೃಹವನ್ನು ಬಿಟ್ಟು ವನವನ್ನೈದಿ ಶ್ರೀಹರಿಯನ್ನಾಶ್ರಯಿಸುವದ್ಯಾವದೋ ಅದನ್ನೇ ಉತ್ತಮವೆಂದು ತಿಳಿಯುವೆನು' ಎಂದು ಈಪ್ರಕಾರವಾಗಿ ಹೇಳುತಿರುವ ಪ್ರಹ್ಲಾದನ ವಿಷ್ಣುಪಕ್ಷಾಶ್ರಿತಗಳಾದ ವಚನವನ್ನು ಕೇಳಿ ಆ ಹಿರಣ್ಯಕಶಿಪುವು ಪರರ ಬೋಧನೆಗಳಿಂದ ಬಾಲಕರ ಬುದ್ಧಿಯು ಬೇರೊಂದು ತೆರವಾಗುವದು ಆಶ್ಚರ್ಯವೆಂದು ನಕ್ಕು ವಿಷ್ಣುಭಕ್ತರಾದ ವಂಚಕರಿಂದ ಬಾಲಕನ ಬುದ್ಧಿಯು ಎಂತು ಭೇದವನ್ನು ಪಡೆಯದಿರುವದೋ ಆಮೇರಿಗೆ—'ಎಲೈ ಗುರುಗಳಿರಾ, ಚನ್ನಾಗಿ ಈ ಬಾಲಕನನ್ನು ಶಿಕ್ಷಿಸಿ ವಿದ್ಯಾಭ್ಯಾಸವನ್ನುಮಾಡಿಸಿ'—ಎಂಬ ಅಸುರೇಂದ್ರನ ಆಜ್ಞೆಯಿಂದ ಪುರೋಹಿತರೇ ಮೊದಲಾದವರು ಒಳ್ಳೇ ಮಾತಿನಿಂದ ಮನೆಯನ್ನೈದಿಸಿ ಕರೆದು ಪ್ರಹ್ಲಾದನನ್ನು ಕುರಿತು ಸವಿನುಡಿಗಳಿಂದ 'ಎಲೈ ಚಿಕ್ಕವನಾದ ಪ್ರಹ್ಲಾದನೆ, ನಿನಗೆ ಮಂಗಳವಾಗಲಿ; ನಿಜವಾಗಿ ಪೇಳು; ಸುಳ್ಳಾಡಬೇಡ; ಸಮಸ್ತ ಬಾಲಕರನ್ನತಿಕ್ರಮಿಸಿ ಈ ವಿಪರೀತಬುದ್ಧಿಯು ನಿನಗೆ ಎಲ್ಲಿಂದ ಬಂತು? ಎಲೈ ವಂಶಕ್ಕೆ ಸಂತೋಷಕರನಾದ ಪ್ರಹ್ಲಾದನೆ, ಯಾವ ನಿನಗೆ ಬುದ್ಧಿವಿಪರ್ಯಯವು ಅನ್ಯರ ಬೋಧನೆಯಿಂದ ಬಂತೋ ಅಲ್ಲದೆ ಸ್ವತಃ ಹುಟ್ಟಿತೋ ಈ ಅರ್ಥವನ್ನು ಕೇಳಲಿಚ್ಛೆಯುಳ್ಳ ನಮಿಗೆ ಪೇಳು' ಎಂದು ಕೇಳಲ್ಪಟ್ಟ ಪ್ರಹ್ಲಾದನು 'ಎಲೈ ಗುರುಗಳಿರಾ, ತಾನು ಪರನು ಎಂಬ ಮಿಥ್ಯಾಜ್ಞಾನಾಭಿನಿವೇಶವು ಯಾವ ಭಗವಂತನ ಮಾಯೆಯಿಂದ ಮಾಡಲ್ಪಟ್ಟಿತೋ ಅಂಥಾ ಮಾಯಾಮೋಹಿತರು ನೀವಾದಕಾರಣ ಈ ದುರಭಿಮಾನವು ನಿಮಗೆಹೊರ್ತು ನನಗಿಲ್ಲ; ಅದುಕಾರಣ ಆ ಭಗವಂತನಿಗೋಸ್ಕರ ನಮಸ್ಕಾರವು! ಆ ವಿಷ್ಣುವು ಯಾವಾಗ ಅನುಕೂಲನಾಗುತ್ತಾನೆಯೋ ಆಗ ಇವಬೇರೆ ನಾನು ಬೇರೆ ಎಂಬ ಅಸದಾಗ್ರಹವುಳ್ಳ ಪಶುಗಳಿಗೆ ಸಾಧಾರಣವಾದ ಆ ಬುದ್ಧಿಯು ನಷ್ಟವಹುದು; ತಿಳಿಯಲಶಕ್ಯವಾದ ವ್ಯಾಪಾರವುಳ್ಳ ಆ ಪರಮಾತ್ಮನೇ ಮೂಢಬುದ್ಧಿಯುಳ್ಳ ಅವಿವೇಕಿಗಳಿಂದ ತಾನು ಎಂತಲೂ ಅನ್ಯನು ಎಂತಲೂ ಹೇಳಿಸಿಕೊಳ್ಳುತ್ತಾನೆ; ವೇದವಾದಿಗಳಾದ ಬ್ರಹ್ಮವಾದಿಗಳು ಯಾವ ಭಗವಂತನ ಸ್ವರೂಪ ಪರಿಜ್ಞಾನದಲ್ಲಿ ಮೂಢರಾಗುವರೋ ಅಂಥಾ ಪರಮಾತ್ಮನು ನನ್ನ ಮೂಢಬುದ್ಧಿಯನ್ನು ಭೇದಿಸುತ್ತಾನೆ! ಎಲೈ ಬ್ರಾಹ್ಮಣನೆ, ಎಂತು ಸೂಜಿಕಲ್ಲಿನ ಸಮೀಪದಲ್ಲಿ ಕಬ್ಬಿಣ ತಿರುಗುವದೋ ಆಮೇರಿಗೆ ನನ್ನ ಮನಸ್ಸು ಶ್ರೀಕೃಷ್ಣನ ಸನ್ನಿಧಿಯಲ್ಲಿ ಭೇದವನ್ನುಪಡೆಯುವದು ಯಾವ ತಪೋ ದಾನಾದಿಗಳ ಫಲವೋ ನಾನು ತಿಳಿಯೆನು' ಎಂದು ಇಷ್ಟುಮಾತ್ರವನ್ನುಪೇಳಿ ಮಹಾ ಬುದ್ಧಿಶಾಲಿಯಾದ ಪ್ರಹ್ಲಾದನು ಸುಮ್ಮನಾಗಲು ಬ್ರಾಹ್ಮಣನು ಆ ಬಾಲಕನನ್ನು ಧಿಕ್ಕರಿಸಿ ಕ್ರೌರ್ಯವನ್ನು ಪಡದು 'ಎಲೈ ಭೃತ್ಯನೆ, ಬೆತ್ತವನ್ನು ತೆಗದುಕೊಂಡು ಬಾ; ನಮಗೆ ಅಪಯಶಸ್ಸನ್ನುಂಟುಮಾಡಿದ ಕುಲನಾಶಕನಾದ ದುಷ್ಟಬುದ್ಧಿ

ಯುಳ್ಳ ಇವನಿಗೆ ಶಾಸ್ತ್ರದಲ್ಲಿ ದಂಡೋಪಾಯವೇ ಹೇಳಲ್ಪಡುತ್ತಲಿದೆ ; ಅಸುರರ ಕುಲವೆಂಬ ಈ ಚಂದನವೃಕ್ಷಗಳ
ವನದಲ್ಲಿ ಮುಳ್ಳಿನ ಮರದಂತೆ ಈ ಬಾಲಕನು ಹುಟ್ಟಿದನು ; ಕಟಕಟಾ ದೈತ್ಯರೆಂಬ ವೃಕ್ಷಗಳ ಮೂಲಚ್ಛೇದನದಲ್ಲಿ
ಸಮರ್ಥನಾದ ಶ್ರೀವಿಷ್ಣುವೆಂಬ ಕುಠಾರಕ್ಕೆ ತಾವಾದ ಈ ಬಾಲಕನು ನಿಗ್ರಹಕ್ಕೆ ಯೋಗ್ಯನು ; ಬೆದರಿಸೋಣವೇ
ಮೊದಲಾದ ನಾನಾಪ್ರಕಾರಗಳಾದ ಉಪಾಯಗಳಿಂದ ಆ ಬಾಲಕನನ್ನು ಭಯಪಡಿಸಿ ಧರ್ಮಾರ್ಥ ಕಾಮ ಪ್ರತಿಪಾ
ದಕಗಳಾದ ಶಾಸ್ತ್ರಗಳನ್ನು ಅಭ್ಯಾಸಂಗೈಸಿದರು ; ಅನಂತರದಲ್ಲಿ ವಿದ್ಯಾಗುರುಗಳಾದ ಬ್ರಾಹ್ಮಣರು ಬಾಲಕನನ್ನು
ತಿಳಿಯಲ್ಪಟ್ಟ ಸಾಮಾದ್ಯುಪಾಯ ಚತುಷ್ಟಯವುಳ್ಳವನನ್ನಾಗಿ ತಿಳಿದು ಮಾತೃ ಸಮೀಪಕ್ಕೆ ಕರಕೊಂಡು ಹೋಗಿ
ಅಲ್ಲಿ ಅಭ್ಯಂಜನಾದಿಗಳಿಂದ ತಾಯಿಂದ ಸ್ನಾನಂಗೈಸಿ ಅಲಂಕರಿಸಲ್ಪಟ್ಟ ಈ ಬಾಲಕನನ್ನು ದೈತ್ಯೇಂದ್ರನಿಗೆ ತೋರಿ
ಸಿದರು ; ಆಗ ಭಕ್ತಿಯಿಂದ ಸಮೀಪವನ್ನೈದಿ ಪಾದಗಳಲ್ಲಿ ನಮಸ್ಕರಿಸಿದ ಬಾಲಕನನ್ನು ಶ್ಲಾಘಿಸಿ ಆ ದೈತ್ಯನು
ಆಶೀರ್ವಚನಂಗೈದು ಬಾಹುಗಳಿಂದ ಆಲಿಂಗನವನ್ನು ಮಾಡಿ ಅಧಿಕವಾದ ಸುಖವನ್ನೈದಿ ತೊಡೆಯೊಳು ಕುಳ್ಳಿರಿಸಿ
ಶಿರಸ್ಸಿನಲ್ಲಿ ಆಘ್ರಾಣಂಗೈದು ಆನಂದಬಾಷ್ಪೋದಕಗಳಿಂದ ನೆನೆಯಿಸಿ ಸಂತೋಷದಿಂದ ಅರಳಿದ ವದನವುಳ್ಳವನಾಗಿ
'ಎಲೈ ಆಯುಷ್ಮಂತನಾದ ಚಿಕ್ಕವನಾದ ಪ್ರಹ್ಲಾದನೆ, ಇಷ್ಟುಪರ್ಯಂತವು ಗುರುಗಳ ದೆಸೆಯಿಂದ ಉತ್ತಮವಾದ
ಯಾವ ವಿದ್ಯೆಯನ್ನು ಚನ್ನಾಗಿ ಅಭ್ಯಾಸಂಗೈದೆಯೋ ಅದರಲ್ಲಿ ಸ್ವಲ್ಪವನ್ನು ಹೇಳು' ಎಂದು ತಂದೆಯಾದ ಹಿರಣ್ಯ
ಕಶಿಪುವಿನಿಂದ ಹೇಳಲ್ಪಟ್ಟ ಪ್ರಹ್ಲಾದನು 'ವಿಷ್ಣುವಿನ ಚರಿತೆ, ಶ್ರವಣವು ನಾಮಸಂಕೀರ್ತನವು ಸ್ಮರಣವು ಪಾದಸೇ
ವೆಯು ಪೂಜೆಯು ನಮಸ್ಕಾರವು ಕರ್ಮಾರ್ಪಣವು ಆತನಲ್ಲಿ ವಿಶ್ವಾಸವೆ ಮೊದಲಾದದ್ದು ದೇಹಸಮರ್ಪಣವು ಈ
ರೀತಿಯಿಂದೊಂಭತ್ತು ಪ್ರಕಾರವಾದ ಭಕ್ತಿಯು ಅವ್ಯಾಹತ ಷಡ್ಗುಣೈಶ್ವರ್ಯ ಸಂಪನ್ನನಾದ ಶ್ರೀಹರಿಯಲ್ಲಿ ಸಮರ್ಪ
ಣಂಗೈಯಲ್ಪಡುವದ್ಯಾವದುಂಟೋ ಅದೇ ಸರ್ವೋತ್ತಮವಾದ ವಿದ್ಯೆಯು' ಎಂದು ನುಡಿದ ಪುತ್ರನ ವಾಕ್ಯವನ್ನು
ಕೇಳಿ ಹಿರಣ್ಯಕಶಿಪುವು ರೋಷದಿಂದದುರುತಿರುವ ತುಟಿಯುಳ್ಳವನಾಗಿ ಗುರುಪುತ್ರರನ್ನು ಕುರಿತು 'ಎಲೈ ದುರ್ಬು
ದ್ಧಿಯುಳ್ಳ ಬ್ರಾಹ್ಮಣಾಧಮರೆ, ಶತ್ರುಪಕ್ಷವನ್ನಾಶ್ರಯಿಸುವ ನಿಮ್ಮಿಂದ ನನ್ನನ್ನು ಅನಾದರಂಗೈದು ಈ ಬಾಲಕನಿಗೆ
ಅಸಾರವಾದ ದುಷ್ಟವಿದ್ಯೆಯು ಅಭ್ಯಾಸಂಗೈಸಲ್ಪಟ್ಟಿತು ; ದುಷ್ಟವಾದ ಮಿತ್ರತೆಯುಳ್ಳ ಕಪಟವೇಷವನ್ನು ಧರಿಸಿ
ರುವ ನಿಮ್ಮಂಥಾ ದುಷ್ಟರಿಗೆ ಮಹಾಪಾಪವನ್ನು ಮಾಡಿದವರಿಗೆ ಎಂತು ರೋಗಾದಿಗಳು ಪುಟ್ಟುವವೋ ಆರೀತಿಯಿಂದ
ಪರಿಣಾಮಕಾಲದಲ್ಲಿ ದ್ವೇಷಾದಿಗಳುಂಟಾಗುವವು' ಎಂದು ಈರೀತಿಯಿಂದ ದೈತ್ಯೇಂದ್ರನಾದ ಹಿರಣ್ಯಕಶಿಪುವು ಕೋ
ಪದಿಂದ ಗುರುಪುತ್ರರನ್ನು ಕುರಿತು ಹೇಳುತ್ತಿರಲು ಗುರುಪುತ್ರರು 'ಎಲೈ ಇಂದ್ರಶತ್ರುವಾದ ಹಿರಣ್ಯಕಶಿಪುವೆ, ನಿನ್ನ
ಮಗನಾದ ಪ್ರಹ್ಲಾದನು ಯಾವ ಪದಾರ್ಥವನ್ನು ಹೇಳಿದನೋ ಆ ಅರ್ಥವು ನಮ್ಮಿಂದ ಅಭ್ಯಾಸಂಗೈಸಲ್ಪಟ್ಟದ್ದಲ್ಲ ;
ಮತ್ತೊಬ್ಬರಿಂದಲೂ ಅಭ್ಯಾಸಂಗೈಸಲ್ಪಟ್ಟದ್ದಲ್ಲ ; ಅವನ ಸ್ವಭಾವಿಕವಾದ ಬುದ್ಧಿಯಿಂದುಂಟಾದದ್ದೇ ಹೊರ್ತು ಮ
ತ್ತೊಂದಲ್ಲ ; ನೀನು ನಮ್ಮಲ್ಲಿ ದೋಷಾರೋಪಣವನ್ನು ಮಾಡಿ ಕೋಪವನ್ನು ಮಾಡಬೇಡ' ಎಂದು ಈಪ್ರಕಾರ
ವಾಗಿ ಗುರುಪುತ್ರರಿಂದ ಹೇಳಲ್ಪಟ್ಟ ವಾಕ್ಯವನ್ನು ಕೇಳಿ ಅರಸು ಪುತ್ರನನ್ನು ಕುರಿತು 'ಎಲೈ ಮಂಗಳಕರನೆ, ನಿನಗೆ
ದುಷ್ಟವಾದ ಈ ಬುದ್ಧಿಯು ಗುರುಮುಖದಿಂದ ಬಂದದಲ್ಲದೇ ಹೋದರೆ ಮತ್ತ್ಯಾರಿಂದುಂಟಾಯಿತು' ಎಂದು ಕೇಳಿದ
ನು! ಪ್ರಹ್ಲಾದನು 'ಎಲೈ ತಂದೆಯೆ, ಗೃಹಕ್ಷೇತ್ರಾದಿಗಳಲ್ಲಿ ಆಸಕ್ತರಾಗಿ ಮನೋರಥ ಶತಂಗಳನ್ನಾಲೋಚಿಸು
ವರಾಗಿ ಉಪಶಾಂತಿಯನ್ನೈದದಿರುವ ಇಂದ್ರಿಯಗಳಿಂದ ಸಂಸಾರವೆಂಬ ಅಂಧತಾಮಿಸ್ರದಲ್ಲಿ ಪ್ರವೇಶಿಸಿ ಅನುಭೂತ
ಗಳಾದ ವಿಷಯಗಳನ್ನೆ ಪುನಃಪುನಃ ಅನುಭವಿಸಲಿಚ್ಛೆಯುಳ್ಳವರಾಗಿರುವ ಪಾಮರರಿಗೆ ಗುರುವಿನಿಂದಲಾದರೂ ತನ್ನಿಂದ
ಲಾದರೂ ಪರಸ್ಪರವಾಗಿಯಾದರೂ ಶ್ರೀಕೃಷ್ಣನಲ್ಲಿ ಭಕ್ತಿಯುಂಟಾಗಲಾರದು ; ವಿಷಯವಾಸನೆಗಳಿಂದ ಕಲುಷವಾದ
ಅಂತಃಕರಣವುಳ್ಳವರಾಗಿ ಬಾಹ್ಯಾರ್ಥದಲ್ಲಿ ಅಭಿನಿವೇಶವುಳ್ಳ ಡಾಂಭಿಕರಾದ ಮೂಢರಲ್ಲಿ ಗುರುಬುದ್ಧಿಯನ್ನು ಮಾ
ಡುತಿರುವ ಯಾವ ಪಾಮರರುಂಟೋ ಅವರು ಈಶ್ವರ ವಾಗ್ರೂಪವಾದ ವೇದವೆಂಬ ಮಹಾರಜ್ಜುವಿನಿಂದ ಕರ್ಮ
ಮಾರ್ಗದಲ್ಲಿ ಬದ್ಧರಾಗಿ ಜಾತ್ಯಾಂಧ್ಯವನ್ನನುಸರಿಸಿಕೊಂಡು ಹೋಗುತಿರುವ ಅಂಧರು ಮಾರ್ಗವನ್ನು ಕಾಣದೆ ಹ್ಯಾ
ಗೆ ಹಳ್ಳಗಳಲ್ಲಿ ಬೀಳುವರೋ ಹಾಗೆ ಶರಣಾಗತ ರಕ್ಷಕನಾದ ಶ್ರೀಕೃಷ್ಣನನ್ನು ತಿಳಿಯದೆ ಸಂಸಾರಕೂಪದಲ್ಲಿ ಬೀಳು

ವರು ; ಬಿಡಲ್ಪಟ್ಟ ವಿಷಯಾಭಿಮಾನವುಳ್ಳ ಮಹಾತ್ಮರ ಪಾದರಜಸ್ಸಿನಿಂದ ಅಭಿಷೇಕವನ್ನು ಮನುಜರ ಬುದ್ಧಿಯು ಎಷ್ಟುಪರ್ಯಂತವು ಅಪೇಕ್ಷಿಸುವದಿಲ್ಲವೋ ಅಷ್ಟುಪರ್ಯಂತವು ಸಂಸಾರಾನರ್ಥ ಪರಿಹಾರಕನಾದ ಭಗವಂತನ ಪಾದಪದ್ಮ ಸ್ಪರ್ಶವನ್ನು ಆ ಬುದ್ಧಿಯು ಐದುವದಿಲ್ಲ ' ಎಂದು ಈಪ್ರಕಾರವಾಗಿ ಹೇಳಿ ಸುಮ್ಮನಿರುತಿರುವ ಪುತ್ರನಾದ ಪ್ರಹ್ಲಾದನನ್ನು ನೋಡಿ ದೈತ್ಯೇಂದ್ರನು ರೋಷದಿಂದ ವಿವೇಕವಿಲ್ಲದ ಮನಸ್ಸುಳ್ಳವನಾಗಿ ತನ್ನ ತೊಡೆಯಿಂದ ಅವನನ್ನು ಭೂಮಿಯಲ್ಲಿ ತಳ್ಳಿ ಸಹಿಸಲಾರದೆ ರೋಷದಿಂದಾಕ್ರಾಂತನಾಗಿ ಕೆಂಪೇರಿದ ಕಣ್ಣುಗಳುಳ್ಳವನಾಗಿ 'ಎಲೈ ಅಸುರರಿರಾ, ಇವನು ವಧಿಸಲು ಯೋಗ್ಯನಾದವನು ; ಇವನನ್ನು ಶೀಘ್ರದಿಂದ ಸಂಹರಿಸಿ ; ಇಲ್ಲಿಂದ ಹೊರಡಿಸಿ—ಎಂದು ಆಜ್ಞಾಪಿಸಿ ಅಧಮನಾದ ಇವನು ಸ್ವಜನವನ್ನೂ ಸುಹೃತ್ತುಗಳನ್ನೂ ಬಿಟ್ಟು ತನಿಗೆ ಚಿಕ್ಕಪ್ಪನಾದ ಹಿರಣ್ಯಾಕ್ಷನನ್ನು ಕೊಂದ ವಿಷ್ಣುವಿನ ಪಾದಗಳನ್ನು ದಾಸನಂತೆ ಅರ್ಚಿಸುತಿರುವನಾದಕಾರಣ ಇವನೇ ನನ್ನ ತಮ್ಮನನ್ನು ಕೊಂದವನು ; ಈ ದುಷ್ಟನು ಐದುವರ್ಷಗಳ ಬಾಲಕನಾಗಿರುವಾಗಲೇ ತಾಯಿತಂದೆಗಳಲ್ಲಿ ಪ್ರೀತಿಯನ್ನು ಬಿಟ್ಟು ವಿಷ್ಣುವಿನನ್ನು ಶೇರಿದಾಗ್ಯೂ ಆ ವಿಷ್ಣುವಿಗೆ ತಾನೆ ಏನು ಉಪಕಾರವಾದೀತು ? ಅನ್ಯನಾದರೂ ಔಷಧದಂತೆ ಹಿತಕಾರಿಯಾದರೆ ಮಗನೇ ಸರಿ ; ತನ್ನ ಶರೀರದಲ್ಲಿ ಹುಟ್ಟಿದವನಾದರೂ ಅಹಿತವನ್ನು ಮಾಡಿದರೆ ಅವನು ಶತೃವು ; ಸರ್ಪದಷ್ಟವಾದ ಬೆರಳನ್ನಾದರೂ ಛೇದಿಸಿಬಿಡಲು ಉಳಿದ ಅಂಗಗಳಿಂದ ಮನುಜನು ಆ ಬೆರಳಿಲ್ಲದಿದ್ದರೂ ಸುಖಿಯಾಗಿರುವನು ; ಮನನಶೀಲನಾದ ಋಷಿಯು ದುಷ್ಟವಾದ ಇಂದ್ರಿಯವನ್ನೆಂತು ಸರ್ವಪ್ರಕಾರದಿಂದಲೂ ನಿಗ್ರಹಿಸುವನೋ ಆರೀತಿಯಿಂದ ಇವನು ವಿಷಾನ್ನ ಭೋಜನ ವಿಷಮಯವಾದ ಶಯನ ವಿಷಮಯವಾದ ಪೀಠವೇ ಮುಂತಾದ ಸರ್ವೋಪಾಯಗಳಿಂದಲೂ ಕಪಟಪುತ್ರನಾಗಿ ನಮಗೆ ಶತೃವಾದ ಈ ಬಾಲಕನು ಸಂಹರಿಸತಕ್ಕವನೇ ಸರಿ ' ಎಂಬದಾಗಿ ದೈತ್ಯಶ್ರೇಷ್ಠನಾದ ಹಿರಣ್ಯಕಶಿಪುವಿನಿಂದ ಆಜ್ಞಾಪಿಸಲ್ಪಟ್ಟ ರಾಕ್ಷಸರು ಶೂಲಗಳನ್ನು ಪಿಡಿದು ತೀಕ್ಷ್ಣವಾದ ಕೋರೆದಾಡೆಯುಳ್ಳ ಕ್ರೂರವಾದ ಮುಖವನ್ನೂ ಕೆಂಚಾದ ಗಡ್ಡಮೀಸೆಗಳನ್ನೂ ತಲೆಯ ಕೂದಲುಗಳನ್ನೂ ಧರಿಸಿದವರಾಗಿ ಛೇದಿಸು ! ಛೇದಿಸು ! ಎಂದು ಕ್ರೂರವಾದ ಧ್ವನಿಯನ್ನು ಮಾಡುತ ಬಂದು ಕುಳಿತಿರುವ ಪ್ರಹ್ಲಾದನನ್ನು ಶೂಲಗಳಿಂದ ಸಮಸ್ತ ಮರ್ಮಸ್ಥಾನಗಳಲ್ಲಿಯೂ ಹೊಡದರು ; ನಿರತಿಶಯೈಶ್ವರ್ಯಸಂಪನ್ನನಾದ ಅಖಿಲಾತ್ಮಕನಾದ ಬುದ್ಧಿಗೆ ಗೋಚರನಲ್ಲದ ನಿರ್ವಿಕಾರನಾದ ಪರಮಾತ್ಮನಲ್ಲಿ ನಿಲ್ಲಿಸಲ್ಪಟ್ಟ ಮನಸ್ಸುಳ್ಳ ಬಾಲಕನಾದ ಪ್ರಹ್ಲಾದನಲ್ಲಿ ಅಭಾಗ್ಯನಲ್ಲಿ ಮಹಾಪ್ರಯತ್ನಗಳೆಂತು ಫಲಿಸವೋ ಆಪ್ರಕಾರ ಶೂಲಾದಿಗಳ ಪ್ರಹಾರಗಳು ನಿಷ್ಫಲಗಳಾದವು ! ಕೇಳೈ ಯುಧಿಷ್ಠಿರನೆ, ಈ ಪ್ರಕಾರವಾಗಿ ಮಾಡಲ್ಪಟ್ಟ ರಾಕ್ಷಸರಪ್ರಯಾಸವು ವ್ಯರ್ಥವಾಗುತಿರಲಾಗಿ ದೈತ್ಯಾಧಿಪತಿಯು ಶಂಕೆಯನಿರ್ಬಂಧದಿಂದ ಬಾಲಕನ ವಧೆಗೋಸ್ಕರ ಉಪಾಯವನ್ನಾಲೋಚಿಸಿ ದಿಗ್ಗಜಗಳಿಂದಲೂ ಸರ್ಪಶ್ರೇಷ್ಠಗಳಿಂದಲೂ ಅಭಿಚಾರಕೃತ್ಯಗಳಿಂದಲೂ ಮಹಾ ಪರ್ವತಾಗ್ರದ ದೆಶೆಯಿಂದ ಕೆಡಹೋಣದರಿಂದಲೂ ನಾನಾಪ್ರಕಾರವಾದ ಮಾಯೆಗಳಿಂದಲೂ ಹಳ್ಳದಲ್ಲಿಟ್ಟು ಮುಚ್ಚುವದರಿಂದಲೂ ವಿಷಪ್ರಾಶನೆಗಳಿಂದಲೂ ಅಭೋಜನಗಳಿಂದಲೂ ಪರ್ವತಗಳಮೇಲೆ ಹಾಕುವದರಿಂದಲೂ ಹಿಮದಲ್ಲಿ ಮುಳಗಿಸುವದರಿಂದಲೂ ಘಾಳಿಯಿಂದಲೂ ಬೆಂಕಿಯ ಉರಿಯಿಂದಲೂ ಸಮುದ್ರದಲ್ಲಿ ಕೈಕಾಲುಗಳು ಕಟ್ಟಿ ಕೆಡಹುವದರಿಂದಲೂ ಅಸುರನು ಪಾಪರಹಿತನಾದ ಬಾಲಕನನ್ನು ಸಂಹರಿಸಲೋಸುಗ ಸಮರ್ಥನಾಗದೆ ಬಹಳವಾದ ಚಿಂತೆಯನ್ನೈದಿ ಈ ಬಾಲಕನು ನನ್ನಿಂದ ಅಧಿಕವಾದ ನಿಷ್ಠುರೋಕ್ತಿಗಳಿಂದ ಧಿಕ್ಕರಿಸಲ್ಪಟ್ಟನು ; ವಧೆಗೋಸ್ಕರ ನಾನಾವಿಧಗಳಾದ ಉಪಾಯಗಳನ್ನು ಮಾಡಿದೆನು ; ನಾನಾವಿಧಗಳಾದ ಅಧರ್ಮಗಳಿಂದಲೂ ಅಧಿಕವಾದ ದ್ರೋಹಗಳಿಂದಲೂ ಸಂಹರಿಸಲು ಯತ್ನಂಗೈದಾಗ್ಯೂ ತನ್ನ ತೇಜಸ್ಸಿನಿಂದ ಇಂಥಾ ವಿಪತ್ತುಗಳಿಂದ ಬಿಡಲ್ಪಟ್ಟು ಬದುಕಿಧಾನೆ ; ಈ ಬಾಲಕನು ಸಮೀಪದಲ್ಲಿರುವನಾಗಿ ನಿರ್ಭಯಚಿತ್ತನಾಗಿ ನನ್ನಿಂದ ಮಾಡಲ್ಪಟ್ಟ ಅಕಾರ್ಯವನ್ನು ಶುನಶ್ಶೇಫನು ಮಾತಾಪಿತೃಗಳಿಂದ ಮಾಡಲ್ಪಟ್ಟ ಅಕಾರ್ಯಗಳನ್ನು ಹ್ಯಾಗೆ ಮರೆಯಲಿಲ್ಲವೋ ಹಾಗೆ ಇವನು ಮರೆಯುವದಿಲ್ಲ ; ಇವನು ಅಚಿಂತ್ಯವಾದ ಮಹಿಮೆಯುಳ್ಳವನು ; ಆದರಿಂದ ಯಾವದೆಶೆಯಿಂದಲೂ ಭಯವಿಲ್ಲದಿರುವನು ; ಇವನ ಸಂಗಡ ವಿರೋಧವನ್ನು ಮಾಡಲು ತನಿಗೆ ಮೃತ್ಯುವಾದೀತೋ ಅಥವಾ ತಪ್ಪೀತೋ ಎಂಬ ಚಿಂತೆಯಿಂದ ಬಾಡಿದ ಮುಖಕಾಂತಿಯುಳ್ಳವನಾಗಿ ತಲೆಯನ್ನು ಬಗ್ಗಿಸಿರುವ ಹಿರಣ್ಯಕಶಿಪುವನ್ನು ಕುರಿತು ಶುಕ್ರಪುತ್ರರಾದ ಚಂಡಾಮರ್ಕರು

ರಹಸ್ಯದಲ್ಲಿ 'ಎಲೈ ಅಸುರೇಂದ್ರನೇ, ಯಾವ ನಿನ್ನಿಂದ ಪುಬ್ಬುಗಳ ಚಲನಮಾತ್ರದಿಂದ ಭಯಪಡುವ ಸಮಸ್ತ ಲೋಕಪಾಲಕರುಳ್ಳ ಈ ಲೋಕತ್ರಯವು ಜೈಸಲ್ಪಟ್ಟಿತೋ ಅಂಥಾ ಸ್ವಾಮಿಯಾದ ನಿನಿಗೆ ಚಿಂತೆಯೆಂಬದು ನಮಗೆ ತೋರುವದಿಲ್ಲ; ಬಾಲಕರ ನಡತೆಯು ಗುಣದೋಷಗಳಿಗೆ ವಿಷಯವಲ್ಲ; ಎಷ್ಟುಪರ್ಯಂತವು ಗುರುವಾದ ಭಾರ್ಗವನು ಬರುವನೋ ಅಷ್ಟುಪರ್ಯಂತವೂ ಈ ಬಾಲಕನನ್ನು ವರುಣಪಾಶಗಳಿಂದ ಕಟ್ಟಿ ಭಯದಿಂದ ಓಡಿಹೋಗದಂತೆ ಬಂಧನ ಗೃಹದಲ್ಲಿರಿಸು; ಪುರುಷನ ಬುದ್ಧಿಯು ವಯಸ್ಸಿನಿಂದಲೂ ಸೇವೆಯಿಂದಲೂ ವಿವೇಕವನ್ನೈದುವದು' ಎಂದು ಗುರುಪುತ್ರರಿಂದ ಹೇಳಲ್ಪಟ್ಟ ವಾಕ್ಯವನ್ನು ಕೇಳಿ ಹಿರಣ್ಯಕಶಿಪುವು 'ಹಾಗೇ ಆಗಲಿ' ಎಂದು ಗೃಹಸ್ಥರಾದ ಅರಸುಗಳ ಧರ್ಮಗಳನ್ನು ಇವನಿಗೆ ಉಪದೇಶಂಗೈಯಿರೆಂದು ನುಡಿದನು! ಈರೀತಿಯಿಂದ ಅಸುರೇಂದ್ರನು ನುಡಿಯಲು ಚಂಡಾಮರ್ಕರು ಧರ್ಮಾರ್ಥ ಕಾಮಗಳನ್ನು ಕ್ರಮವಾಗಿ ವಿಶದವಾಗಿ ವಿನಯ ಸಂಪನ್ನನಾದ ಪ್ರಹ್ಲಾದನಿಗೆ ಉಪದೇಶಂಗೈದರು; ಅದೇಪ್ರಕಾರವಾಗಿ ಗುರುಗಳಿಂದ ತನಿಗೋಸ್ಕರ ಉಪದಿಷ್ಟವಾದ ಧರ್ಮಾರ್ಥಕಾಮಶಾಸ್ತ್ರವನ್ನೂ ರಾಗದ್ವೇಷಾಶ್ರಯವಾದ ಅವರ ಶಿಕ್ಷೆಯನ್ನೂ ಪ್ರಹ್ಲಾದನು ಅಸಾಧುವನ್ನಾಗಿ ತಿಳಿದನು; ಅನಂತರದಲ್ಲಿ ಆಚಾರ್ಯರು ಗೃಹಕೃತ್ಯಾದಿ ವ್ಯಾಪಾರಕ್ಕೋಸ್ಕರ ಹೊರಟು ಹೋಗಲು ಆ ಸಮಯದಲ್ಲಿ ಆಡಲು ಕುತೂಹಲವುಳ್ಳ ಸಮವಯಸ್ಕರಾದ ಬಾಲಕರಿಂದ ಬಾಲಕ್ರೀಡೆಗೋಸ್ಕರ ಕರೆಯಲ್ಪಟ್ಟವನಾಗಿ ಮಹಾ ಜ್ಞಾನಿಯಾದ ಪ್ರಹ್ಲಾದನು ಆ ಬಾಲಕರನ್ನು ಸವಿನುಡಿಗಳಿಂದ ಕರದು ಮುಗುಳುನಗೆಯಿಂದ ಅವರಿಗೆ ತತ್ವವನ್ನಿರೂಪಣಂಗೈದನು; ಆಗ ಆ ಬಾಲಕರು ಚಂಡು ಬುಗರಿ ಮೊದಲಾದ ಕ್ರೀಡಾಪರಿಕರಗಳನ್ನು ತ್ಯಜಿಸಿದವರಾಗಿ ಪ್ರಹ್ಲಾದನಲ್ಲಿ ಗೌರವದಿಂದ ಕೇಳುತಿರಲು ಶ್ಲಾಘ್ಯವಾದ ಬುದ್ಧಿಯುಳ್ಳ ಬಾಲಕರಿಗೋಸ್ಕರ ಅವರಿಗೆ ಯಾವ ಅರ್ಥವನ್ನು ಯಾವರೀತಿಯಿಂದ ಬೋಧಿಸತಕ್ಕದ್ದೋ ಅದನ್ನು ಹೇಳಿದನು; ಆ ಅಸುರಬಾಲಕರು ಪ್ರಹ್ಲಾದನಲ್ಲೇ ಇಡಲ್ಪಟ್ಟ ಚಿತ್ತವೂ ಕಣ್ಣುಗಳೂ ಉಳ್ಳವರಾಗಿ ಉಪಾಸನಂಗೈಯ್ಯಲು ಕೃಪಾವಂತನಾದ ಸರ್ವಜನಮಿತ್ರನಾದ ಮಹಾ ಭಾಗವತೋತ್ತಮನಾದ ಪ್ರಹ್ಲಾದನು ಅವರಿಗೆ ಆತ್ಮವಿಚಾರವನ್ನುಪದೇಶಂಗೈಯುತಿದ್ದನು."

೬ನೇ ಅಧ್ಯಾಯ.

ಪ್ರಹ್ಲಾದನು ದೈತ್ಯಬಾಲಕರಿಗೆ ನಾರದೋಪದಿಷ್ಟವಾದ ತತ್ವವನ್ನು ಉಪದೇಶಂಗೈದದ್ದು.

"ಎಲೈ ಬಾಲಕರುಗಳಿರಾ, ಈ ಮನುಷ್ಯಜನ್ಮದಲ್ಲಿಯೇ ಪ್ರಾಜ್ಞನಾದವನು ಭಾಗವತಧರ್ಮಗಳನ್ನಾಚರಿಸಬೇಕು; ಪುರುಷಾರ್ಥಸಾಧನವಾದ ಈ ಮನುಷ್ಯಜನ್ಮ ಬರುವದು ದುರ್ಲಭವು; ಅಥವಾ ಬಂದಾಗ್ಯೂ ಅನಿತ್ಯವಾದದ್ದು; ಅದುಕಾರಣ ಆ ಅನಿತ್ಯಗಳಾದ ವಿಷಯಸುಖಗಳನ್ನಪೇಕ್ಷಿಸಿ ವೃಥಾ ಶ್ರಮವನ್ನೈದಬಾರದು; ಅರ್ಥಪ್ರದಗಳಾದ ಭಗವತ್ಸಂಬಂಧಿಗಳಾದ ಕರ್ಮಗಳನ್ನೇ ಆಚರಿಸಬೇಕು; ಯಾವಕಾರಣ ವಿಷ್ಣುವು ಸಮಸ್ತ ಪ್ರಾಣಿಗಳಿಗೂ ಪ್ರಿಯನೂ ಆತ್ಮನೂ ಈಶ್ವರನೂ ಸುಹೃತ್ತೂ ಆಗಿರುವನೋ ಅದುಕಾರಣ ಪುರುಷನಿಗೆ ಈ ಜನ್ಮದಲ್ಲಿ ಭಗವತ್ಪಾದಸೇವೆಯನ್ನುಗೈಯುವದೇ ಯೋಗ್ಯವು! ಎಲೈ ದೈತ್ಯಬಾಲಕರಿರಾ, ಪ್ರಾಣಿಗಳಿಗೆ ಶರೀರಸಂಬಂಧದಿಂದುಂಟಾದ ಇಂದ್ರಿಯಸಂಬಂಧಿಯಾದ ವಿಷಯಸುಖವು ಪಶ್ವಾದಿಗಳಲ್ಲಿಯೂ ಅದೃಷ್ಟದಿಂದಲೇ ಎಂತು ಅಯತ್ನದಿಂದುಂಟಾಗುವದೋ ಆರೀತಿ ದುಃಖವೂ ಪ್ರಾಪ್ತವಾಗುವದು; ಯಾವ ಪ್ರಯಾಸದಿಂದ ವ್ಯರ್ಥವಾಗಿ ಆಯುಸ್ಸು ಕ್ಷಯಿಸಿ ಸುಖಲೇಶವೂ ಇಲ್ಲದೆ ಹೋಗುವದೋ ಅಂಥಾ ಪ್ರಯಾಸದಿಂದೇನು? ಮುಕುಂದನ ಪಾದಸೇವೆಯಿಂದ ಎಂತು ನಿತ್ಯಸುಖವುಂಟಾಗುವದೋ ಅಂಥಾ ಪ್ರಯತ್ನವನ್ನು ಮಾಡಬೇಕು; ಇದುಹೊರ್ತು ಅನ್ಯವಾದ ಪ್ರಯತ್ನದಿಂದ ಅಂಥಾ ಸುಖವುಂಟಾಗಲಾರದು; ಅದುಕಾರಣ ಸಂಸಾರವನ್ನೈದಿರುವ ಪುರುಷನು ಪುರುಷಸಂಬಂಧಿಯಾದ ಶರೀರವು ಎಷ್ಟುಪರ್ಯಂತ ವಿಪತ್ತನ್ನೈದುವದಿಲ್ಲವೋ ಅಷ್ಟರೊಳಗೆ ಕುಶಲನಾದವನು ಶೀಘ್ರವಾಗಿ ಪೂರ್ಣವಾದ

ಸಾಧಕ್ಕೋಸ್ಕರ ಯತ್ನಂಗೈಯಬೇಕು , ಪುರುಷನಿಗೆ ಆಯುಷ್ಯವು ನೂರುವರ್ಷವು ; ಯಾವಕಾರಣ ರಾತ್ರಿಯಲ್ಲಿ ಪುರುಷನು ಅಂಧತಮಸ್ಸನ್ನೈದಿಸಲ್ಪಟ್ಟವನಾಗಿ ನಿಷ್ಪ್ರಯೋಜನವಾಗಿ ಮಲಗುವನೋ ಅದರಿಂದ ಜಿತೇಂದ್ರಿಯನಲ್ಲದವನ ಆಯುಷ್ಯದ ಅರ್ಧವು ವ್ಯರ್ಥವಾಗಿ ಪೋಗುವದು ; ಬಾಲ್ಯಾವಸ್ಥೆಯಲ್ಲಿ ಬಾಲಕ್ರೀಡಾಸಕ್ತಿಯಿಂದ ಇಪ್ಪತ್ತುವರ್ಷ ಹೋಗುವದು ; ಜರೆಯಿಂದಾಕ್ರಾಂತವಾದ ಶರೀರವುಳ್ಳವನಾದಕಾರಣ ಸರ್ವವಿಷಯದಲ್ಲೂ ಅಶಕ್ತನಾದ್ದರಿಂದ ಇಪ್ಪತ್ತುವರ್ಷ ಹೋಯಿತು ; ದುಃಖಗಳಿಂದ ಎಲ್ಲಾಕಡೆಯಲ್ಲೂ ಪೂರ್ಣವಾಗುತಿರುವ ಕಾಮದಿಂದಲೂ ಯಾರಿಂದಲೂ ಅತಿಕ್ರಮಿಸಲಶಕ್ಯವಾದ ಮೋಹದಿಂದಲೂ ಗೃಹಾರಾಮ ಕ್ಷೇತ್ರ ವನಿತಾ ವಿತ್ತಗಳಲ್ಲಿ ಆಸಕ್ತನಾಗಿ ಪ್ರಮತ್ತನಾಗುವದರಿಂದ ಉಳಿದ ಆಯುಷ್ಯವು ವ್ಯರ್ಥವಾಗಿ ಹೋಗುವದು ! ಎಲೈ ಬಾಲಕರಿರಾ, ಶ್ರೇಯಸ್ಸುಗಳಿಗೆ ವಿಘ್ನಕರವಾದ ವ್ಯರ್ಥಪ್ರಯಾಸದಿಂದ ಸಂಸಾರದಲ್ಲಿ ನಾನಾವ್ಯಾಪಾರಗಳನ್ನು ಮಾಡುತಲಿರುವ ಕುಟುಂಬಿಗಳಾದ ನಮ್ಮ ಜ್ಞಾತಿಗಳಾದ ಈ ಅಸುರರ ಬುದ್ಧಿವೈಷಮ್ಯವನ್ನು ನೀವೇ ನೋಡಿರಿ ; ನಾನಾಯೋನಿಗಳಲ್ಲಿಯೂ ನಾನಾ ಗರ್ಭಗಳಲ್ಲಿಯೂ ಮಹಾ ಕಷ್ಟಗಳನ್ನು ಪಡದು ಸರ್ವಾಪತ್ತಿಗಳಿಗೂ ಆಶ್ರಯವಾದ ಈ ದೇಹದಲ್ಲಿ ಅಭಿಮಾನಂಗೈದು ಸ್ವರ್ಗಾಧಿಪತ್ಯವನ್ನೈದಿದವನಾದಾಗ್ಯೂ ಮತ್ತೂ ವಿಷಯಭೋಗಗಳನ್ನಿಚ್ಛೈಸುವನು ; ಪತ್ನೀ ಪುತ್ರ ಪಿತ್ರಾದಿಗಳಲ್ಲಿ ಆಸಕ್ತನಾಗಿ ಇಂದ್ರಿಯಗಳಿಂದ ವಿಷಯಗಳಲ್ಲಿ ಶೆಳೆಯಲ್ಪಟ್ಟವನಾಗಿ ಈ ವಿಷಯಗಳಲ್ಲಿ ಸ್ನೇಹವೆಂಬ ಹಗ್ಗದಿಂದ ದೃಢವಾಗಿ ಕಟ್ಟಲ್ಪಟ್ಟ ಆತ್ಮನನ್ನು ಬಿಡಿಸಲು ಯಾವವನು ಸಮರ್ಥನಾದಾನು ? ಲೋಕದಲ್ಲಿ ಯಾವ ಅರ್ಥನಿಮಿತ್ತವಾಗಿ ತಸ್ಕರನೂ ರಾಜಸೇವಕನೂ ವರ್ತಕಧರ್ಮವನ್ನು ಮಾಡುವವನೂ ಸಹ ಅತ್ಯಂತ ಪ್ರೀತಿಪಾತ್ರಗಳಾದ ಪ್ರಾಣಗಳಲ್ಲಿ ನಿರಾಶೆಯನ್ನು ಮಾಡಿ ಪ್ರಯಾಸಪಡುವರೋ ಪ್ರಾಣಗಳಿಗಿಂತಲೂ ಪ್ರಿಯವಾದ ಅಂಥಾ ಅರ್ಥದಲ್ಲಿ ಆಶೆಯನ್ನು ಯಾವವನು ಬಿಟ್ಟಾನು ? ಇದೇರೀತಿಯಲ್ಲಿ ಪ್ರೇಮಪಾತ್ರಳಾದ ಸ್ತ್ರೀಯ ಸಂಭೋಗವನ್ನೂ ಇಷ್ಟಾಲಾಭಗಳನ್ನೂ ಸ್ಮರಿಸುವನಾಗಿ ಪುತ್ರರಲ್ಲಿ ಸ್ನೆಹಬದ್ಧನಾಗಿ ಅವ್ಯಕ್ತಮಧುರಗಳಾದ ಅಕ್ಷರಗಳುಳ್ಳ ಬಾಲಕರ ಮುದ್ದುಮಾತುಗಳಲ್ಲಿ ಅನುರಕ್ತನಾಗಿ ಪುತ್ರರನ್ನೂ ಹೃದಯಪ್ರಿಯರಾದ ಹೆಣ್ಣುಮಕ್ಕಳನ್ನೂ ಅಣ್ಣ ತಮ್ಮಂದಿರನ್ನೂ ಅಕ್ಕ ತಂಗಿಯರನ್ನೂ ದೀನರಾದ ಮಾತಾ ಪಿತೃಗಳನ್ನೂ ಮನೋಹರಗಳಾದ ಅಧಿಕಗಳಾದ ಪರಿಕರಗಳುಳ್ಳ ಗೃಹಗಳನ್ನು ನಾನಾವಿಧಗಳಾದ ಕುಲ ಪರಂಪರಾ ಪ್ರಾಪ್ತಗಳಾದ ವೃತ್ತಿಗಳನ್ನೂ ಭೃತ್ಯರನ್ನೂ ಪಶುಗಳನ್ನೂ ಸ್ಮರಿಸುವನಾಗಿ ಕೋಶಸ್ಕಾರಿಯೆಂಬ ಗೂಡುಮಾಡುವ ಹುಳುವು ತಾನು ಹೊರಗೆ ಹೊರಡುವದಕ್ಕೆ ಮಾರ್ಗವನ್ನು ಮಾಡಿ ಆ ಮಾರ್ಗಕ್ಕೆ ಬಾಗಿಲುಮಾಡಿ ಎಂತು ವ್ಯಾಮೋಹಪಡುವದೋ ಆರೀತಿ ಕಾಮಗಳಿಂದ ತೃಪ್ತಿಪಡೆಯದೆ ಶಿಶ್ನಜಿಹ್ವಾದಿಗಳಿಂದುಂಟಾದ ಸುಖವನ್ನೇ ಉತ್ತಮವನ್ನಾಗಿ ತಿಳಿದು ಅಪಾರವಾದ ಮೋಹವುಳ್ಳವನು ಎಂತು ವಿರಕ್ತನಾದಾನು ? ಕಟುಂಬ ಪೋಷಣೆಗೋಸ್ಕರ ಕ್ಷಯಿಸುವ ತನ್ನ ಆಯುಷ್ಯವನ್ನೂ ನಷ್ಟವಾದ ಪುರುಷಾರ್ಥವನ್ನೂ ತಿಳಿಯದೆ ತಾಪತ್ರಯದಿಂದ ದುಃಖಿತವಾದ ಚಿತ್ತವುಳ್ಳವನಾದಾಗ್ಯೂ ದುಃಖವೆಂದು ತಿಳಿಯದೆ ಕುಟುಂಬದಲ್ಲಿ ಆಸಕ್ತನಾಗಿ ಯಾವಾಗಲೂ ವಿರಕ್ತನಾಗುವದಿಲ್ಲ ; ಧನಮುಂತಾದ ವಸ್ತುಗಳಲ್ಲಿ ಸರ್ವಕಾಲದಲ್ಲಿಯೂ ಆಸಕ್ತವಾದ ಮನಸ್ಸುಳ್ಳ ಸಂಸಾರಿಯು ಪರರ ದ್ರವ್ಯವನ್ನಪಹರಿಸುವವನಿಗೆ ಪರದಲ್ಲಿ ನರಕವನ್ನೂ ಈ ಲೋಕದಲ್ಲಿ ರಾಜಶಿಕ್ಷಾರೂಪವಾದ ವಿಪತ್ತನ್ನೂ ತಿಳಿದವನಾದಾಗ್ಯೂ ಶಾಂತವಲ್ಲದಿರುವ ಅಭಿಲಾಷೆಯುಳ್ಳವನಾಗಿ ಪರರ ವಿತ್ತವನ್ನಪಹರಿಸುವನು ! ಕೇಳಿರೈ ಬಾಲಕರಿರಾ, ಈಪ್ರಕಾರವಾಗಿ ತಿಳಿದವನಾದಾಗ್ಯೂ ಸ್ವರೂಪವಿಚಾರರಹಿತನಾಗಿ ಮೂಢನಂತೆ ಕುಟುಂಬಭರಣಕ್ಕೋಸ್ಕರ ಪಾಪವನ್ನುಮಾಡಿ ತನ್ನ ಗತಿಯನ್ನು ಸಂಪಾದಿಸಲಾರದೆ ಇದು ತನ್ನದು—ಇದು ಪರರದು ಎಂದು ಭಾವಿಸದೆ ನರಕವನ್ನೈದುವನು ; ಗೃಹಾಸಕ್ತನಾದ ಪುರುಷನು ಸ್ತ್ರೀಯರುಗಳಿಂದ ಸಂಭೋಗಾರ್ಥವಾಗಿ ಕ್ರೀಡಾಮೃಗದಂತೆ ವಶೀಕೃತನಾಗಿ ಪುತ್ರಾದಿ ವ್ಯಾಮೋಹವೆಂಬ ಸಂಕೋಲೆಯಿಂದ ಬದ್ಧನಾಗಿ ವಿಷಯಾಸಕ್ತನಾಗಿ ದೀನನಾದ ತನ್ನನ್ನು ಈ ಸಂಸಾರ ಬಂಧದಿಂದ ಬಿಡಿಸಿಕೊಳ್ಳಲಾರದೆ ಶ್ರಮಪಡುವನು ! ಎಲೈ ದೈತ್ಯ ಕುಮಾರರುಗಳಿರಾ, ಅದುಕಾರಣ ಅತಿಶಯವಾಗಿ ವಿಷಯಗಳಲ್ಲಿ ಆಸಕ್ತರಾದ ದೈತ್ಯರ ಸಂಗವನ್ನು ಬಿಟ್ಟು ಮುಕ್ತಸಂಗರಾಗಿ ಪುರಾಣಪುರುಷನಾದ ನಾರಾಯಣನನ್ನೇ ಮರೆಹೊಕ್ಕು ಕೃತಾರ್ಥರಾಗಿ ಇವರಿಂದಲೇ ಮೋಕ್ಷವು ಹಸ್ತಗತವೆಂದು ತಿಳಿಯಿರಿ ;

ನಿಮಿಗೆ ಆ ಭಗವಂತನ ಭಜನೆಯು ಅಶಕ್ಯವಾದದ್ದರಿಂದ ಅದು ನಿಮಗೆ ಹ್ಯಾಗೆ ಲಭ್ಯವಾದೀತೆಂದಲ್ಲಿ : ಎಲೈ ದೈತ್ಯಕುಮಾರಕರಿರಾ, ನಾರಾಯಣನು ಸಮಸ್ತ ಪ್ರಾಣಿಗಳಿಗೂ ಆತ್ಮನಾದಕಾರಣ ಸರ್ವತ್ರ ಸಿದ್ಧನಾಗಿರುವದ್ದರಿಂದ ಈ ಶ್ರೀಹರಿಯ ಭಜನವು ಬಹಳ ಆಯಾಸ ಸಾಧ್ಯವಲ್ಲ ; ಉಚ್ಚನೀಚಗಳಾದ ಸ್ತಂಬವೇ ಮೊದಲಾದ ಬ್ರಹ್ಮನೇ ಅಂತವಾದ ಪ್ರಾಣಿಗಳಲ್ಲಿಯೂ ಆಕಾಶಾದಿ ಮಹಾಭೂತಗಳಲ್ಲಿಯೂ ಗುಣಗಳಲ್ಲಿಯೂ ಮೂಲಪ್ರಕೃತಿಯಲ್ಲಿಯೂ ಮಹತ್ತತ್ವಾದಿಗಳಲ್ಲಿಯೂ ನಿರತಿಶಯೈಶ್ವರ್ಯವುಳ್ಳ ಅಚ್ಯುತನಾದ ಸರ್ವೇಶ್ವರನಾದ ಶ್ರೀ ಪರಮಾತ್ಮನೊಬ್ಬನೇ ಇರುವನು ; ದ್ರಷ್ಟೃವಾಗಿ ಪ್ರತ್ಯಗಾತ್ಮರೂಪದಿಂದಲೂ ದೃಶ್ಯವಾದ ಜಗತ್ಸ್ವರೂಪದಿಂದಲೂ ವ್ಯಾಪ್ಯ ವ್ಯಾಪಕ ಭಾವದಿಂದ ನಿರ್ದೇಶಿಸಲಶಕ್ಯನಾಗಿಯೂ ಶ್ರೀಪರಮಾತ್ಮನಿರುವನು ; ಈಶ್ವರನು ಶುದ್ಧವಾದ ಅನುಭವಾತ್ಮಕವಾದ ಆನಂದಸ್ವರೂಪವುಳ್ಳವನಾದಾಗ್ಯೂ ಗುಣಾತ್ಮಸರ್ಗವುಳ್ಳ ಮಾಯೆಯಿಂದ ತಿರೋಹಿತವಾದ ಐಶ್ವರ್ಯವುಳ್ಳವನಾಗಿರುವನು ; ಆದಕಾರಣ ನೀವು ಅಸುರಭಾವವನ್ನು ಬಿಟ್ಟು ಸಮಸ್ತ ಪ್ರಾಣಿಗಳಲ್ಲಿಯೂ ದಯಾಸೌಹಾರ್ದಗಳನ್ನು ಮಾಡಿರಿ ; ಈಪ್ರಕಾರ ಮಾಡಲ್ಪಟ್ಟರೆ ದಯೆಯಿಂದ ಶ್ರೀಹರಿಯು ಸಂತುಷ್ಟನಾಗುವನು ; ಅನಂತನಾದ ಆದ್ಯನಾದ ಆ ಶ್ರೀಹರಿಯು ಸಂತುಷ್ಟನಾಗಲು ಯಾವದು ತಾನೇ ಅಲಭ್ಯವಾದೀತು ? ಅಯತ್ನದಿಂದ ಸಿದ್ಧಗಳಾದ ಧರ್ಮಾದಿಗಳಿಂದೇನು ? ಶ್ರೀಹರಿಯ ಪಾದಪದ್ಮಗಳ ಅಮೃತವನ್ನು ಸೇವಿಸುವ ನಮಿಗೆ ಮೋಕ್ಷದಿಂದ ತಾನೇ ಏನು ? ಧರ್ಮಾರ್ಥಕಾಮಗಳೆಂಬ ಈ ಮೂರೂ ತ್ರಿವರ್ಗವೆನಿಸಿಕೊಂಬದು ; ಇದಕ್ಕೋಸ್ಕರ ಆತ್ಮವಿದ್ಯೆಯು ಕರ್ಮವಿದ್ಯೆಯು ದಂಡನೀತಿಗಳು ನಾನಾಪ್ರಕಾರವಾದ ಜೀವನೋಪಾಯ ಸಾಧನವಾದ ಶಾಸ್ತ್ರವು ಈ ಸಮಸ್ತವೂ ಸ್ವಾಂತರ್ಯಾಮಿಯಾದ ಪರಮಪುರುಷಸ್ವರೂಪ ಪರಿಜ್ಞಾನದಲ್ಲಿ ಸಾಧನವಾದರೆ ಇವು ಸತ್ಯಗಳೇ ಸರಿ ; ಇಲ್ಲದಿದ್ದರೆ ಅಸತ್ಯಗಳೇ ಸರಿ ! ಎಲೈ ಬಾಲಕರಿರಾ, ಪಾಮರರಿಗೆ ತಿಳಿಯಲಶಕ್ಯವಾದ ಜ್ಞಾನವನ್ನು ನರಸಖನಾದ ನಾರಾಯಣನು ನಾರದನಿಗೋಸ್ಕರ ಉಪದೇಶಿಸಿದನು ; ಯಾವಜ್ಞಾನೋಪದೇಶದಲ್ಲಿ ನಾರದಮುನಿಯು ಶ್ರೋತೃವಾದನೋ ಈ ವಿಷಯದಲ್ಲಿ ನಮ್ಮಂಥಾವರಿಗೆ ಅಧಿಕಾರವೆಲ್ಲಿಯದೆಂದರೆ : ಶ್ರೀಪದ್ಮನಾಭನ ಏಕಾಂತಭಕ್ತರ ಪಾದಧೂಳಿಯಿಂದ ಪವಿತ್ರರಾದ ನಮ್ಮಂಥಾವರಿಗೂ ಅಧಿಕಾರವುಂಟು ; ಉತ್ತಮರಿಗೆಮಾತ್ರವೇ ಅಲ್ಲವಾದಕಾರಣ ಪೂರ್ವದಲ್ಲಿ ಜ್ಞಾನ ವಿಜ್ಞಾನ ಸಹಿತವಾದ ಈ ಭಾಗವತಧರ್ಮವು ನನ್ನಿಂದ ವೇದದರ್ಶಿಯಾದ ನಾರದಮುನಿಯ ದೆಸೆಯಿಂದ ಕೇಳಲ್ಪಟ್ಟಿತು ” ಎಂದು ನುಡಿದನು.

ದೈತ್ಯಪುತ್ರರು “ಎಲೈ ಪ್ರಹ್ಲಾದನೆ, ನೀನು ಗುರುಪುತ್ರರಾದ ಚಂಡಾಮರ್ಕರನ್ನು ಹೊರ್ತು ಇತರನಾದ ಗುರುವನ್ನು ತಿಳಿದವನಲ್ಲ ; ನಿನಗೆ ನಾರದೋಪದೇಶವೆಂತಾಯಿತ್ತು ? ಅಂತಃಪುರಸ್ಥನಾದ ಬಾಲಕನಾದ ನಿನಗೆ ಮಹಾತ್ಮನಾದ ನಾರದನ ಸಂಗವು ಹ್ಯಾಗುಂಟಾಯಿತು ? ನಿನಗೆ ನಮ್ಮಲ್ಲಿ ವಿಶ್ವಾಸವಿದ್ದರೆ ಈ ನಮ್ಮ ಸಂಶಯವನ್ನು ಪರಿಹರಿಸು ” ಎಂದು ಪ್ರಶ್ನೆಗೈದರು.

೭ನೇ ಅಧ್ಯಾಯ.

ಪ್ರಹ್ಲಾದನು ತಾನು ಮಾತೃಗರ್ಭದಲ್ಲಿರುವಾಗ ನಾರದನಿಂದುಪದಿಷ್ಟವಾದ ತತ್ವವಿದ್ಯೆಯನ್ನು ಅಸುರಬಾಲಕರಿಗೆ ವರ್ಣಿಸಿ ಹೇಳಿದ್ದು.

“ಎಲೈ ಧರ್ಮರಾಯನೇ, ಈರೀತಿ ದೈತ್ಯಬಾಲಕರಿಂದ ಪ್ರಶ್ನೆಗೈಯಲ್ಪಟ್ಟ ಮಹಾಭಾಗವತನಾದ ದೈತ್ಯೇಂದ್ರಕುಮಾರನಾದ ಪ್ರಹ್ಲಾದನು ಮುಗುಳುನಗುವಿನಿಂದಯುಕ್ತನಾಗಿ ನನ್ನ ವಾಕ್ಯವನ್ನು ಸ್ಮರಿಸಿ ಆ ಬಾಲಕರನ್ನು ಕುರಿತು ‘ ನಮ್ಮ ತಂದೆಯು ತಪಸ್ಸಿಗೋಸ್ಕರ ಮಂದರಾದ್ರಿಯನ್ನೈದಲು ಆ ಸಮಯದಲ್ಲಿ ಸುರರು ದಾನವರಮೇಲೆ ಅಧಿಕವಾದ ಯುದ್ಧಪ್ರಯತ್ನವನ್ನು ಮಾಡಿದರು ; ಇರುವೆ ಸಮೂಹದಿಂದ ಕಚ್ಚಲ್ಪಟ್ಟ ಸರ್ಪವು ಹ್ಯಾಗೆ ಮೃತವಾಗುವದೋ ಹಾಗೆ ಲೋಕೋಪದ್ರವಕಾರಿಯಾದ ಪಾಪಿಷ್ಠನಾದ ಈ ಹಿರಣ್ಯಕಶಿಪುವು ಸ್ವಕೃತವಾದ ಪಾಪದಿಂದ

ಲೇ ಭಕ್ಷಿಸಲ್ಪಟ್ಟು ಹೋದನು ; ಇದು ಕ್ಷೇಮವಾಯಿತೆಂದು ಇಂದ್ರಾದಿಗಳು ಮಾತನಾಡಿಕೊಂಡು ಯುದ್ಧಪ್ರಯತ್ನವನ್ನು ಮಾಡಿದರು ; ದೇವತೆಗಳ ಅತಿಶಯವಾದ ಬಲದ ಉದ್ಯೋಗವನ್ನು ಕೇಳಿ ಅಸುರಯೂಥಪತಿಗಳು ಸುರರಿಂದ ವಧಿಸಲ್ಪಟ್ಟವರಾಗಿ ಪತ್ನಿಗಳನ್ನೂ ಪುತ್ರರನ್ನೂ ದ್ರವ್ಯವನ್ನೂ ಆಪ್ತರನ್ನೂ ಮನೆಗಳನ್ನೂ ಪಶುಗಳನ್ನೂ ಆಯುಧಗಳನ್ನೂ ಅಲ್ಲೇ ಬಿಟ್ಟು ತ್ವರೆಯಿಂದ ಪ್ರಾಣರಕ್ಷಣೆಯಲ್ಲೇ ಇಚ್ಛೆಯುಳ್ಳವರಾಗಿ ಭಯದಿಂದ ದಿಕ್ಕುದಿಕ್ಕಿಗೂ ಪಲಾಯನಂಗೈದರು ; ಜಯಾಪೇಕ್ಷಿಗಳಾದ ದೇವತೆಗಳು ರಾಜಮಂದಿರವನ್ನು ಸೂರೆಗೈದು ಚೂರ್ಣಂಗೈದರು ; ಇಂದ್ರನಾದರೋ ನಮ್ಮ ತಾಯಾದ ರಾಜಮಹಿಷಿಯನ್ನು ಕೈಸೆರೆಪಿಡಿದನು ; ಅನಂತರದಲ್ಲಿ ಭಯದಿಂದ ಪೀಡಿತಳಾಗಿ ಕುರರೀಪಕ್ಷಿಯಂತೆ ಕೂಗುತಲಿರುವ ನಮ್ಮ ತಾಯಿಯನ್ನು ಕರದುಕೊಂಡುಹೋಗುತಲಿರುವ ದೇವೇಂದ್ರನನ್ನು ಮಾರ್ಗಮಧ್ಯದಲ್ಲಿ ಕಂಡು ನಾರದಋಷಿಯು ಇಂದ್ರನನ್ನು ಕುರಿತು 'ಎಲೈ ಸುರೇಶ್ವರನೆ, ನಿರಪರಾಧಿಯಾದ ಪ್ರಾಜ್ಞಳಾದ ಪತಿವ್ರತೆಯಾದ ಈಕೆಯನ್ನು ಕರದುಕೊಂಡು ಹೋಗಬೇಡ ; ಬಿಡುಬಿಡು' ಎಂದು ಪೇಳುತಿರುವ ನಾರದಮುನಿಯನ್ನು ಕುರಿತು ಸುರಪತಿಯು 'ಕೇಳೈ ಮುನಿಯೆ, ಇವಳ ಜಠರದಲ್ಲಿ ಸಹಿಸಲಶಕ್ಯವಾದ ದೈತ್ಯನಾದ ಹಿರಣ್ಯಕಶಿಪುವಿನ ವೀರ್ಯವಿದೆಯಾದಕಾರಣ ಪ್ರಸುವಾಗುವ ಪರ್ಯಂತವು ನಮ್ಮ ಮನೆಯಲ್ಲಿರಿಸಿಕೊಂಡಿದ್ದು ಅನಂತರದಲ್ಲಿ ಆ ಶಿಶುವನ್ನು ಸಂಹರಿಸಿ ಈಕೆಯನ್ನು ಬಿಡುತ್ತೇನೆ' ಎಂಬ ಇಂದ್ರನ ವಾಕ್ಯವನ್ನು ಕೇಳಿ ನಾರದಮುನಿಯು 'ಕೇಳೈ ಇಂದ್ರನೆ, ಈ ಸ್ತ್ರೀಯ ಗರ್ಭದಲ್ಲಿರುವವನು ಪಾಪರಹಿತನು ; ಸಾಕ್ಷಾದ್ಭಗವಂತನ ಭಕ್ತನು ; ಮಹಾತ್ಮನಾದವನು ; ಮಹಾ ಭಾಗವತನು ; ಆದುಕಾರಣ ಅನಂತನಾದ ಶ್ರೀ ನಾರಾಯಣನಿಗೆ ದಾಸನಾದಕಾರಣ ಬಲಿಷ್ಠನಾದ ಈ ಅಸುರನು ನಿನ್ನಿಂದ ಮೃತ್ಯುವನ್ನು ಹೊಂದುವದಿಲ್ಲ' ಎಂದು ನುಡಿಯಲು ಇಂದ್ರನು ದೇವರ್ಷಿಯ ವಾಕ್ಯವನ್ನು ಬಹುಮಾನಂಗೈದು ಅನಂತನಾದ ಭಗವಂತನಿಗೆ ಪ್ರಿಯಭಕ್ತನಾದ ನನ್ನಲ್ಲಿ ಭಕ್ತಿಯಿಂದ ನಮ್ಮ ತಾಯಿಗೆ ಪ್ರದಕ್ಷಿಣವನ್ನು ಮಾಡಿ ಅಲ್ಲೇ ಬಿಟ್ಟು ಸ್ವರ್ಗಲೋಕಕ್ಕೆ ಹೊರಟುಹೋದನು ; ಅನಂತರದಲ್ಲಿ ದೇವಋಷಿಯು ನನ್ನ ತಾಯನ್ನು ತನ್ನ ಆಶ್ರಮಕ್ಕೆ ಕರದುಕೊಂಡು ಹೋಗಿ ಆಕೆಗೆ ಸಮಾಧಾನವನ್ನು ಮಾಡಿ 'ಎಲೈ ಮಗಳೆ, ನಿನ್ನ ಗಂಡನು ಬರುವವರಿಗೂ ಇಲ್ಲೇ ವಾಸವನ್ನು ಮಾಡು' ಎಂದು ನುಡಿದನು. ನಮ್ಮ ತಾಯಿಯು ಹಾಗೇ ಆಗಲೆಂದು ನಾರದಾಶ್ರಮದಲ್ಲಿ ನಿರ್ಭಯಳಾಗಿ ಘೋರತರವಾದ ತಪಸ್ಸಿದ್ಧಿಯನ್ನು ಮಾಡಿಕೊಂಡು ತನ್ನ ಪತಿ ಬರುವವರಿಗೂ ಅಲ್ಲೇ ವಾಸಂಗೈದಳು ; ಆ ಆಶ್ರಮದಲ್ಲಿ ಪತಿವ್ರತೆಯಾದ ಗರ್ಭಿಣಿಯಾದ ನನ್ನ ಮಾತೃವು ತನ್ನ ಗರ್ಭಕ್ಕೆ ಕ್ಷೇಮಕೋಸ್ಕರಲೂ ಭರ್ತೃವಿನ ಆಗಮನಾಂತರದಲ್ಲಿ ಪ್ರಸುವಾಗುವದಕ್ಕೋಸ್ಕರಲೂ ಆ ನಾರದಋಷಿಯ ಶುಶ್ರೂಷೆಯಲ್ಲಿ ನಿರತಳಾಗಿ ಸೇವಿಸಿದಳು ; ಕೃಪಾವಂತನಾದ ಸಮರ್ಥನಾದ ನಾರದಋಷಿಯು ಗರ್ಭದಲ್ಲಿರುವ ನನ್ನನ್ನು ಉದ್ದೇಶಿಸಿ ನಮ್ಮ ತಾಯಿಗೋಸ್ಕರ ನಿರ್ಮಲವಾದ ಭಕ್ತಿರೂಪವಾದ ಧರ್ಮತತ್ವವನ್ನೂ ಆತ್ಮಾನಾತ್ಮವಿವೇಕರೂಪ ಜ್ಞಾನವನ್ನೂ ಈ ಎರಡನ್ನೂ ಉಪದೇಶಂಗೈದನು ; ಉಪದೇಶಂಗೈದು ಬಹುಕಾಲವಾದ್ದರಿಂದಲೂ ಸ್ತ್ರೀಯಾದಕಾರಣವೂ ನಮ್ಮ ತಾಯಿಗೆ ಆ ಅರ್ಥವು ಮರೆಯಾಯಿತು ; ಋಷಿಯಿಂದನುಗ್ರಹಿಸಲ್ಪಟ್ಟ ನಾನು ಮರೆಯಲಿಲ್ಲ ; ಈ ವಿಷಯದಲ್ಲಿ ಭಕ್ತಿಯುಂಟಾದರೆ ಸ್ತ್ರೀಬಾಲಕರಾದಾಗ್ಯೂ ನಿಮಗೂ ಕೂಡ ಶರೀರಾದ್ಯಹಂಕಾರವನ್ನು ಪರಿಹರಿಸುವಲ್ಲಿ ಸಮರ್ಥವಾದ ಬುದ್ಧಿಯೂ ಆತ್ಮಾನಾತ್ಮವಿವೇಕರೂಪಜ್ಞಾನವೂ ಉಂಟಾದೀತು ; ಜನನವು ಇರೋಣವು ಬೆಳೆಯೋಣವು ವಿಕಾರವನ್ನೈದೋಣವು ಕ್ಷಯಿಸೋಣವು ನಾಶವನ್ನೈದೋಣವು ಎಂಬ ಈ ಷಡ್ಭಾವವಿಕಾರಂಗಳು ವೃಕ್ಷವಿರುತಿರಲಾಗಿ ಫಲಗಳಿಗೆ ಎಂತು ಕಾಣಲ್ಪಡುತಲಿವೆಯೋ ಆರೀತಿಯಲ್ಲಿ ಆತ್ಮನಿರುತಿರಲಾಗಿ ದೇಹಕ್ಕೆ ಕಾಣಲ್ಪಡುವವು ; ಈ ಆರು ವಿಕಾರಗಳು ಈಶ್ವರಸ್ವರೂಪವಾದ ಕಾಲಶಕ್ತಿಯಿಂದುಂಟಾಗುವದು ; ಆತ್ಮನು ನಾಶವಿಲ್ಲದವನು ; ಅಪಕ್ಷಯವಿಲ್ಲದವನು ; ನಿರ್ದೋಷನು ; ಅದ್ವಿತೀಯನು ; ಕ್ಷೇತ್ರಜ್ಞನು ; ಸರ್ವಾಶ್ರಯನು ; ನಿಷ್ಕಳಂಕನು ; ಸ್ವಪ್ರಕಾಶನು ; ಜಗತ್ಕಾರಣನಾದವನು ; ಸರ್ವವ್ಯಾಪಕನು ; ಆದಾಗ್ಯೂ ನಿರ್ಲಿಪ್ತನಾದವನು ; ಆವರಣರಹಿತನು ; ವಿವೇಕದಲ್ಲಿ ಸಮರ್ಥಗಳಾದ ಹನ್ನೆರಡುಪ್ರಕಾರಗಳಾದ ಈ ಆತ್ಮಲಕ್ಷಣಗಳಿಂದ ದೇಹಾದಿಗಳ ಭೇದವನ್ನು ತಿಳಿದ ಮನುಜನು ದೇಹಾದಿಗಳಲ್ಲಿ ತಾನೂ ತನ್ನದೂ ಎಂಬ ಮಿಥ್ಯಾಬುದ್ಧಿಯನ್ನು ಬಿಡಬೇಕು ! ಎಲೈ

ಬಾಲಕರುಗಳಿರಾ, ಚಿನ್ನವನ್ನು ಮಾಡುವವನು ಪ್ರಕಾಶಿಸುವ ಸುವರ್ಣಬಿಂದುಗಳುಳ್ಳ ಕಲ್ಲುಗಳನ್ನು ಪುಡಿಮಾಡಿ ಶೋಧಿಸಿ ಕರಿಗಿಸುವದೇ ಮುಂತಾದ ಉಪಾಯಗಳಿಂದ ಎಂತು ಸುವರ್ಣವನ್ನು ಪಡೆಯುವನೋ ಆರೀತಿಯಿಂದ ಆತ್ಮಪ್ರಾಪ್ತ್ಯುಪಾಯಗಳಿಂದ ದೇಹಗಳಲ್ಲಿ ಆತ್ಮಾಧಿಕೃತವಾದ ಕಾರ್ಯಕಾರಣ ಸಂಘಾತವನ್ನು ತಿಳಿದ ಆತ್ಮಜ್ಞನು ಬ್ರಹ್ಮಭಾವವನ್ನು ಪಡೆಯುವನು; ಅಧ್ಯಾತ್ಮಪೂರ್ವಕವಾಗಿ ಆತ್ಮಪ್ರಾಪ್ತ್ಯುಪಾಯವನ್ನು ಪೇಳುವೆನು ಕೇಳಿ: ಮೂಲಪ್ರಕೃತಿಯು ಮಹದಹಂಕಾರಗಳು ಪಂಚತನ್ಮಾತ್ರೆಗಳು ಎಂಬ ಇವು ಎಂಟು ಪ್ರಕೃತ್ಯಷ್ಟಕವೆನಿಸಿಕೊಂಬುವವು; ಆ ಪ್ರಕೃತಿಸಂಬಂಧಗಳಾದ ಸತ್ವಾದಿಗಳಾದ ಗುಣಗಳು ಮೂರು ಏಕಾದಶೇಂದ್ರಿಯಗಳು ಪಂಚಮಹಾಭೂತಗಳು ಇವು ಷೋಡಶ ವಿಕಾರಗಳು; ಆತ್ಮನೊಬ್ಬನೇ ಇಪ್ಪತ್ತೇಳು ತತ್ವಗಳಲ್ಲಿಯೂ ಸಾಕ್ಷಿಭಾವದಿಂದ ಅನ್ವಯಿಸಿರುವನೆಂದು ಕಪಿಲ ದೇವಲ ಮೊದಲಾದ ಆಚಾರ್ಯರು ಪೇಳುವರು; ಈರೀತಿ ಸರ್ವಸಂಘಾತ್ಮಕನಾದ ದೇಹವು ಸ್ಥಾವರವೆಂದೂ ಜಂಗಮವೆಂದೂ ಎರಡುಪ್ರಕಾರವಾಗಿದೆ; ಇಂಥಾ ದೇಹದಲ್ಲಿ ಆತ್ಮನು ಅರಸತಕ್ಕವನು; ಅದು ಹ್ಯಾಗೆಂದರೆ: ಈ ಇಪ್ಪತ್ತೇಳು ತತ್ವಗಳಲ್ಲಿಯೂ ಒಂದೊಂದಾಗಿ ವಿಂಗಡಿಸುತಬಂದಲ್ಲಿ ದೃಶ್ಯಗಳಾಗಿಯೂ ಜಡಗಳಾಗಿಯೂ ಇದ್ದಕಾರಣ ಇದು ಆತ್ಮನಲ್ಲ ಅದು ಆತ್ಮನಲ್ಲವೆಂದು ಈ ಇಪ್ಪತ್ತೇಳು ತತ್ವಗಳನ್ನು ಅನಾತ್ಮಸಮುದಾಯವನ್ನಾಗಿ ತಿಳಿದು ಬಿಡಲಾಗಿ ನಿಂತದ್ದೇ ಆತ್ಮನೆಂದು ತಿಳಿವದು; ಮಣಿಗಣದಲ್ಲಿ ಸೂತ್ರದಂತೆ ಸರ್ವಕಾಲದಲ್ಲಿಯೂ ಅಗಲದಂತೆ ಇರುವದರಿಂದ ಅನ್ವಯವು; ಆದ್ದರಿಂದ ಮಣಿಗಳದೆಸೆಯಿಂದ ಸೂತ್ರ ಬೇರೆ ಇರುವದರಿಂದ ವ್ಯತಿರೇಕವು; ಈ ಅನ್ವಯವ್ಯತಿರೇಕಗಳಿಂದ ಶುದ್ಧವಾದ ಮನಸ್ಸಿನಿಂದ ಸೃಷ್ಟಿಸ್ಥಿತಿ ಸಂಹಾರಗಳ ಅನುಸಂಧಾನದಿಂದ ಏಕಾಗ್ರಚಿತ್ತರಾದ ಮಹಾಯೋಗಿಗಳಿಂದ ಆ ಪರಮಾತ್ಮನು ಅರಸತಕ್ಕವನು; ಜಾಗರಣೆಯೂ ಸ್ವಪ್ನವೂ ಸುಷುಪ್ತಿಯು ಎಂಬ ಈ ಮೂರು ಬುದ್ಧಿ ವೃತ್ತಿಗಳು; ಈ ವೃತ್ತಿಗಳು ಯಾವಾತನಿಂದ ಉದ್ಭವಿಸಲ್ಪಡುವವೋ ಅವನೇ ಸಾಕ್ಷಿಯಾದ ಪರಮಾತ್ಮನು; ಕುಸುಮಧರ್ಮಗಳಾದ ಗಂಧಗಳಿಂದ ಆ ಗಂಧಾಶ್ರಯನಾದ ವಾಯುವನ್ನೆಂತು ತಿಳಿಯುವರೋ ಅದೇಪ್ರಕಾರ ಅನಾತ್ಮಭಾವದಿಂದ ತಿರಸ್ಕರಿಸಲ್ಪಟ್ಟ ತ್ರಿಗುಣಾತ್ಮಕಗಳಾದ ಕರ್ಮಜನ್ಯಗಳಾದ ಬುದ್ಧಿಪರಿಣಾಮಗಳಾದ ಈ ಜಾಗ್ರತ್ಸ್ವಪ್ನ ಸುಷುಪ್ತಿಗಳೆಂಬ ಬುದ್ಧಿ ಧರ್ಮಗಳನ್ನು ಬುದ್ಧಿಯಲ್ಲಿ ಅನ್ವಯವುಳ್ಳ ಆತ್ಮನಲ್ಲಿ ಅಜ್ಞಾನದಿಂದ ಆರೋಪಿಸುವದೇಹೊರ್ತು ವಾಸ್ತವವಾಗಿ ಆ ಧರ್ಮಗಳಿಲ್ಲವೆಂದು ತಿಳಿವದು; ಬುದ್ಧಿನಿಷ್ಠಗಳಾದ ಗುಣಗಳಿಗೂ ಕರ್ಮಗಳಿಗೂ ಆತ್ಮನಲ್ಲಿ ಅಜ್ಞಾನಮೂಲಕವಾದ ಅಧ್ಯಾಸದಿಂದ ಪುರುಷನಿಗೆ ಮಿಥ್ಯಾರೂಪವಾದ ಸಂಸಾರವು ಸ್ವಪ್ನದಂತೆ ಈ ಬುದ್ಧಿ ಮೂಲಕವಾಗಿ ಉಂಟಾಗುವದು; ಆದಕಾರಣ ನೀವು ತ್ರಿಗುಣಾತ್ಮಕಗಳಾದ ಕರ್ಮಗಳಿಗೆ ಬೀಜರೂಪವಾದ ಅಜ್ಞಾನವನ್ನು ದಹಿಸುವಂಥಾದ್ದಾಗಿ ಬುದ್ಧಿಪ್ರವಾಹಗಳಿಗೆ ಶಮನಂಗೈಯ್ಯುವದಾಗಿರುವ ಯೋಗವನ್ನು ಮಾಡಿ ಸಂಸಾರವಿಲ್ಲದಂತೆ ಯತ್ನವನ್ನು ಮಾಡಿರಿ; ಯಾವ ಭಾಗವತ ಧರ್ಮಗಳಿಂದ ಭಗವಂತನಿಗೆ ಭಕ್ತರಲ್ಲಿ ಶೀಘ್ರವಾಗಿ ಅನುಗ್ರಹವುಂಟಾಗುವದೋ ಅಂಥಾ ಭಾಗವತ ಧರ್ಮಾಚರಣವು ಉಪಾಯ ಸಹಸ್ರಗಳ ಮಧ್ಯದಲ್ಲಿ ಮುಖ್ಯವಾದದ್ದು' ಎಂದು ನಾರದಋಷಿಯಿಂದ ಉಪದಿಷ್ಟವಾಯಿತು; ಗುರುಶುಶ್ರೂಷೆಯಿಂದಲೂ ಭಕ್ತಿಯಿಂದಲೂ ದೊರಕಿದ ಸಮಸ್ತ ವಸ್ತುಗಳನ್ನೂ ಸಮರ್ಪಣೆಗೈವುದರಿಂದಲೂ ಉತ್ತಮವಾದ ಭಗವದ್ಭಕ್ತರ ಸಂಗದಿಂದಲೂ ಮುಕುಂದನ ಆರಾಧನೆಯಿಂದಲೂ ಶ್ರೀಹರಿ ಚರಿತ್ರೆಗಳ ಕಥನದಲ್ಲಿ ಶ್ರದ್ಧೆಯಿಂದಲೂ ಶ್ರೀನಾರಾಯಣನ ಗುಣಗಳ ಲೀಲೆಗಳ ಕೀರ್ತನೆಗಳಿಂದಲೂ ಶ್ರೀಗೋವಿಂದನ ಪಾದಪದ್ಮಗಳ ಧ್ಯಾನದಿಂದಲೂ ಶ್ರೀಮಧುಸೂದನನ ಮೂರ್ತಿಗಳ ಅವಲೋಕನ ಪೂಜನ ನಮಸ್ಕಾರಗಳಿಂದಲೂ ಸರ್ವ ಪ್ರಾಣಿಗಳಲ್ಲಿಯೂ ನಿರತಿಶಯೈಶ್ವರ್ಯವುಳ್ಳ ಸರ್ವೇಶ್ವರನಾದ ಶ್ರೀವಾಸುದೇವನೆ ವಾಸಂಗೈವನೆಂದು ಭಾವಿಸುತ ಆ ಪ್ರಾಣಿಗಳನ್ನು ಅವರ ಇಚ್ಛಾನುಸಾರವಾಗಿ ಶಾಸ್ತ್ರವಿಹಿತವಾಗಿ ಪೂಜಿಸುವದು; ಜಯಿಸಲ್ಪಟ್ಟ ಷಡ್ವರ್ಗಗಳುಳ್ಳ ಪೂರ್ವೋಕ್ತಗಳಾದ ಶುಶ್ರೂಷಾಭಕ್ತ್ಯಾದಿಗಳಿಂದ ನಿರತಿಶಯಸುಖವನ್ನುಂಟುಮಾಡುವ ಭಕ್ತಿಯನ್ನು ಶ್ರೀಕೃಷ್ಣನಲ್ಲಿ ಮಾಡಿ ಆ ಭಕ್ತಿಯಿಂದ ಪುರುಷನು ಉತ್ತಮವಾದ ಬುದ್ಧಿಯನ್ನು ಪಡೆಯುವನು! ಎಲೈ ಬಾಲಕರುಗಳಿರಾ, ಭಗವದ್ಭಕ್ತನಾದ ಪುರುಷನು ಯಾವಾಗ ಲೀಲಾಶರೀರಗಳಾದ ಶ್ರೀರಾಮಕೃಷ್ಣಾದ್ಯವತಾರಗಳಿಂದ ಮಾಡಲ್ಪಟ್ಟ ಭಗವಂತನ ವ್ಯಾ

ಪೌರಗಳನ್ನೂ ಅಸದೃಶಗಳಾದ ವಾತ್ಸಲ್ಯಾದಿಗುಣಗಳನ್ನೂ ಪರಾಕ್ರಮಗಳನ್ನೂ ಕೇಳಿ ಅತ್ಯಂತ ಸಂತೋಷದಿಂದುಂಟಾದ ರೋಮಾಂಚನದಿಂದ ಆನಂದಬಾಷ್ಪ ಗದ್ಗದಧ್ವನಿಗಳಿಂದ ಅತ್ಯಂತ ಪರವಶನಾಗಿ ನಾಮಸಂಕೀರ್ತನಗೈವನು ; ಗಾನಮಾಡುವನು ; ನರ್ತಿಸುವನು ; ಮತ್ತೂ ಯಾವಾಗಲೂ ಗೃಹಸ್ತನಂತೆ ಒಂದುವೇಳೆ ನಗುವನು ; ಒಂದುವೇಳೆ ಕೂಗುವನು ; ಒಂದುವೇಳೆ ಧ್ಯಾನಂಗೈವನು ; ಒಂದುವೇಳೆ ಜನವನ್ನು ವಂದಿಸುವನು ; ಬಾರಿಬಾರಿಗೂ ನಿಟ್ಟುಸುರನ್ನು ಬಿಟ್ಟು ಶ್ರೀಹರಿಯೆ ! ಜಗತ್ಪತಿಯೆ ! ನಾರಾಯಣನೆ ! ಎಂದು ಲಜ್ಜೆಯನ್ನು ಬಿಟ್ಟು ಆತ್ಮಾರಾಮನಾಗಿ ಹೇಳುವನೋ ಆಗ ಪುರುಷನು ಬಿಡಲ್ಪಟ್ಟ ಸಮಸ್ತ ಬಂಧವುಳ್ಳವನಾಗಿ ಶ್ರೀಹರಿಯ ಚರಿತ್ರೆಗಳ ಭಾವನೆಯಿಂದ ಅನುಸರಿಸಲ್ಪಟ್ಟ ಮನಃಶರೀರವುಳ್ಳವನಾಗಿ ಅತಿಶಯವಾಗಿ ನಷ್ಟವಾದ ಅಜ್ಞಾನವೂ ಕರ್ಮವಾಸನೆಯೂ ಉಳ್ಳವನಾಗಿ ಅಧಿಕವಾಗಿ ಭಕ್ತಿಯಂಗೈವದರಿಂದ ನಾರಾಯಣನನ್ನೈದುವನು ; ಈ ಜನ್ಮದಲ್ಲಿ ಅಧೋಕ್ಷಜನ ಅಪ್ರಾಕೃತವಾದ ದಿವ್ಯಮೂರ್ತಿಯ ಧ್ಯಾನವು ರಾಗದ್ವೇಷಾದಿ ಯುಕ್ತವಾದ ಮನಸ್ಸುಳ್ಳ ಪುರುಷನಿಗೆ ಸಂಸಾರವನ್ನು ಪರಿಹರಿಸುವದು ; ಆವಕಾರಣ ಅದನ್ನೇ ಜ್ಞಾನಿಗಳು ಬ್ರಹ್ಮದಲ್ಲಿ ಲಯಿಸುವ ಮೋಕ್ಷಸುಖವೆಂದು ಹೇಳುವರು ; ಅದರಿಂದ ಹೃದಯದಲ್ಲಿ ಅಂತರ್ಯಾಮಿಯಾದ ಶ್ರೀನಾರಾಯಣನನ್ನು ನೀವು ಭಜಿಸಿ ! ಎಲೈ ಅಸುರಬಾಲಕರಿರಾ, ತನ್ನ ಹೃದಯದಲ್ಲಿ ಶ್ರೀಹರಿಯನ್ನು ಧ್ಯಾನಂಗೈಯುವದು ಅತಿಪ್ರಯಾಸವೋ ಏನು ? ಶ್ವಾನ ಸೂಕರಾದಿ ಸಾಧಾರಣಗಳಾದ ವಿಷಯಾರ್ಜನೆಗಳನ್ನು ಬಿಟ್ಟು ದಯಾಶಾಲಿಯಾದ ಸತ್ಯಾತ್ಮನಾದ ಅಶೇಷಪ್ರಾಣಿಗಳಿಗೂ ಮಿತ್ರನಾದ ಶ್ರೀಹರಿಯ ನಾಮಗಳನ್ನು ಕೀರ್ತಿಸುತ ಧ್ಯಾನಂಗೈಯುವದು ; ಧನಗಳು ಪತ್ನಿಗಳು ಪಶುಗಳು ಮಿತ್ರರೇ ಮೊದಲಾದವರು ಈ ಭೂಮಿಯು ಗೃಹಗಳು ಆನೆಗಳು ಬೊಕ್ಕಸವು ಐಶ್ವರ್ಯಗಳು ಸಮಸ್ತಗಳಾದ ಅರ್ಥಗಳು ಕಾಮಗಳು ಚಂಚಲಗಳಾದ ಇವೆಲ್ಲವೂ ಕ್ಷಣಭಂಗುರವಾದ ಆಯುಷ್ಯವುಳ್ಳ ಪುರುಷನಿಗೆ ಎಷ್ಟುತಾನೆ ಪ್ರಿಯವನ್ನುಂಟುಮಾಡ್ಯಾವು ? ಇದೇಪ್ರಕಾರವಾಗಿ ಯಜ್ಞಾದಿ ಸತ್ಕರ್ಮಗಳಿಂದುಂಟಾದ ನ್ಯೂನಾಧಿಕಗಳಾದ ಅನಿರ್ಮಲಗಳಾದ ಈ ಸ್ವರ್ಗಾದಿ ಲೋಕಗಳು ನಶ್ವರಗಳಾದ ಕಾರಣ ಇಂಥಾ ಲೋಕಗಳನ್ನಪೇಕ್ಷಿಸದೆ ಯಾವನಲ್ಲಿ ದೋಷವು ಯಾರಿಂದಲೂ ಕಾಣಲ್ಪಡುವದಿಲ್ಲವೋ ಅಂಥಾ ನಿರ್ದೋಷನಾದ ಅಖಿಲಜಗತ್ಸ್ವಾಮಿಯನ್ನು ಅಚಂಚಲವಾದ ಭಕ್ತಿಯಿಂದ ಆತ್ಮಪ್ರಾಪ್ತಿಗೋಸ್ಕರ ಭಜಿಸಿರಿ ; ಯಾವ ಸಂಕಲ್ಪವುಳ್ಳ ಪುರುಷನು ಕರ್ಮಗಳನ್ನು ಮಾಡಿದಾಗ್ಯೂ ಆ ಸಂಕಲ್ಪಾನುಸಾರವಾದ ಕರ್ಮಫಲವನ್ನಾದರೂ ಪಡೆಯದೆ ವಿಪರೀತಫಲವನ್ನೈದುವನು ; ಈ ಸಂಸಾರದಲ್ಲಿ ಸುಖಕ್ಕೋಸ್ಕರಲೂ ದುಃಖಪರಿಹಾರಕ್ಕೋಸ್ಕರಲೂ ಕರ್ಮದ ಸಂಕಲ್ಪವನ್ನು ಮಾಡುವನು ; ಆ ಪುರುಷನು ಇಚ್ಛೆಯಿಂದ ಕಾಮ್ಯಕರ್ಮಗಳನ್ನು ಮಾಡಲು ಅದರಿಂದ ದುಃಖವನ್ನೈದುವನು ; ನಿಷ್ಕಾಮನಾಗಿ ಕರ್ಮವನ್ನು ಮಾಡಲು ಸುಖವನ್ನೈದುವನು ; ಜೀವನು ಯಾವ ಶರೀರಕ್ಕೋಸ್ಕರ ಕಾಮ್ಯಕರ್ಮಗಳಿಂದ ಭೋಜನವನ್ನಪೇಕ್ಷಿಸುವನೋ ನಶ್ವರವಾದ ಪರಕೀಯವಾದ ಆ ದೇಹ ಹೋಗಿ ಬರುವದೇಹೊರ್ತು ನಿತ್ಯವಲ್ಲ ; ಈ ದೇಹವನಿತ್ಯವಾದರೆ ಈ ದೇಹಕ್ಕಿಂತಲೂ ವ್ಯವಹಿತಗಳಾದ ಪುತ್ರರು ಪತ್ನಿಗಳು ಮನೆಯು ಧನವೇ ಮೊದಲಾದವು ರಾಷ್ಟ್ರವು ಬೊಕ್ಕಸವು ಬಲವು ಮಂತ್ರಿಗಳು ಭೃತ್ಯರು ಆಪ್ತರೇ ಮೊದಲಾದ ಮಮತಾಸ್ಪದಗಳಾದ ವಸ್ತುವು ಅನಿತ್ಯಗಳೆಂದು ಹೇಳತಕ್ಕದ್ದೇನು ? ತುಚ್ಛಗಳಾದ ದೇಹಾದಿಗಳೊಡನೆ ಕೂಡಿ ನಶ್ವರಗಳಾದ ಅರ್ಥಗಳಂತೆ ತೋರಿದಾಗ್ಯೂ ಅನರ್ಥಪ್ರದಗಳಾದ ಈ ಪೂರ್ವೋಕ್ತಭಾವಗಳಿಂದ ನಿತ್ಯಾನಂದ ಸುಧಾರಸ ಮಹೋದಧಿಯಾದ ಆತ್ಮನಿಗೇನು ? ಗರ್ಭಪ್ರವೇಶವೇ ಮೊದಲಾದ ಅವಸ್ಥೆಗಳಲ್ಲಿ ಕ್ಲೇಶಪಡುವ ಮನುಜನಿಗೆ ಈ ನಶ್ವರಗಳಾದ ದೇಹೇಂದ್ರಿಯ ಸಂಬಂಧಿಗಳಾದ ಭಾವಗಳಿಂದೇನುಫಲವು ? ದೇಹಿಯಾದವನು ಆತ್ಮಾನುವರ್ತಿಯಾದ ದೇಹದಿಂದ ಕರ್ಮಗಳನ್ನಾಚರಿಸುವನು ; ಕರ್ಮಗಳಿಂದ ದೇಹಗಳನ್ನು ಪಡೆಯುವನು ; ಈ ಎರಡೂ ಅವಿವೇಕದ ದೆಸೆಯಿಂದುಂಟಾಗುವದು ; ಆವಕಾರಣ ಅರ್ಥಗಳು ಕಾಮಗಳು ಧರ್ಮಗಳು ಯಾರನ್ನಾಶ್ರಯಿಸಿರುವವೋ ಅಂಥಾ ಪರಿಪೂರ್ಣನಾದ ಸರ್ವೇಶ್ವರನಾದ ಶ್ರೀಹರಿಯನ್ನು ಭಜಿಸಿ ; ತನ್ನಿಂದ ಕಲ್ಪಿತಗಳಾದ ಮಹಾಭೂತಗಳಿಂದ ನಿರ್ಮಿತಗಳಾದ ಸಮಸ್ತ ಪ್ರಾಣಿಗಳಿಗೂ ಶ್ರೀಹರಿಯೇ ಈಶ್ವರನೂ ಪ್ರಿಯನೂ ಅಂತರ್ಯಾಮಿಯೂ ಎಂದು ತಿಳಿಯಿರಿ ; ಸುರನಾದರೂ ಅಸುರನಾದರೂ ಮನುಷ್ಯನಾದರೂ ಯಕ್ಷನಾದರೂ ಗಂಧರ್ವನಾದರೂ

ಇನ್ನೂ ಯಾರಾದರೂ ನಮ್ಮಂತೆ ಶ್ರೀಮುಕುಂದನ ಚರಣಗಳನ್ನು ಭಜಿಸುವರು ಭಕ್ತಿಯುಳ್ಳವರಾಗುವರು; ಬ್ರಾಹ್ಮಣತ್ವವು ದೇವತ್ವವು ಋಷಿತ್ವವು ಆಚಾರವು ಶಾಸ್ತ್ರಜ್ಞತ್ವವು ದಾನವು ತಪಸ್ಸು ಯಜ್ಞಾದಿಗಳು ಪ್ರಾಜೆಯು ಶುಚಿತ್ವವು ವ್ರತಗಳು ಇವೇ ಮೊದಲಾದ ಸಮಸ್ತನಾದವೂ ಶ್ರೀಹರಿಯನ್ನು ಸಂತೋಷಪಡಿಸಲಾರವು; ಭಕ್ತಿಯೊಂದರಿಂದಲೇ ಶ್ರೀಹರಿಯು ಸುಪ್ರೀತನಾಗುವನು! ಕೇಳಿರೈ ದಾನವಪುತ್ರರಿರಾ, ಆದಕಾರಣ ನೀವೆಲ್ಲರೂ ಅವ್ಯಾಹತೈಶ್ವರ್ಯ ವಿರಾಜಿತನಾದ ಶ್ರೀಹರಿಯಲ್ಲಿ ಸರ್ವಭೂತಾತ್ಮ ಭಾವನೆಯಿಂದ ಭಕ್ತಿಯನ್ನು ಮಾಡಿರಿ; ಯಕ್ಷರು ರಾಕ್ಷಸರು ಸ್ತ್ರೀಯರು ಶೂದ್ರರು ಗೋಪಾಲಕರು ಪಕ್ಷಿಗಳು ಮೃಗಗಳು ಇದಲ್ಲದೆ ಪಾಪಿಷ್ಠನಾದ ಜನ್ಮವುಳ್ಳವರಾದರೂ ಇವರೆಲ್ಲರೂ ಭಗವದ್ಭಕ್ತಿಯಿಂದ ಅಚ್ಯುತಭಾವವನ್ನೇ ಪಡೆಯುತಲಿರ್ಧಾರೆ; ಮುಖ್ಯವಾದ ಸಾರಭೂತವಾದ ಅರ್ಥವನ್ನು ಪೇಳ್ವೆನು ಕೇಳಿ: ಶ್ರೀಗೋವಿಂದನಲ್ಲಿ ಅಚಂಚಲವಾದ ದೃಢಭಕ್ತಿಯು ಅಣುರೇಣು ತೃಣಕಾಷ್ಠ ಮೊದಲಾದ ಸಮಸ್ತ ವಸ್ತುವಿನಲ್ಲಿಯೂ ಆ ಗೋವಿಂದನನ್ನೇ ಭಾವಿಸಿ ನೋಡುವದ್ಯಾವದುಂಟೋ ಅಷ್ಟುಮಾತ್ರವೇ ಪುರುಷನಿಗೆ ಸ್ವಾರ್ಥವೆಂದು ತಿಳಿದು ಧನ್ಯರಾಗುವದು" ಎಂದು ನುಡಿದನು.

೮ನೇ ಅಧ್ಯಾಯ.

ಶ್ರೀಹರಿಯು ನೃಸಿಂಹರೂಪವನ್ನು ಧರಿಸಿ ಹಿರಣ್ಯಕಶಿಪುವನ್ನು ಸಂಹರಿಸಿದ್ದು–ಬ್ರಹ್ಮಾದಿ ದೇವತೆಗಳು ಬೇರೆಬೇರೆಯಾಗಿ ಭಗವಂತನನ್ನು ಸ್ತುತಿಸಿದ್ದು.

"ಅನಂತರದಲ್ಲಿ ಸಮಸ್ತರಾದ ದೈತ್ಯಪುತ್ರರು ಪ್ರಹ್ಲಾದನಿಂದ ಪೇಳಲ್ಪಟ್ಟ ಅರ್ಥವನ್ನು ನಿರ್ದುಷ್ಟವಾದಕಾರಣ ಕೇಳಿ ಒಡಂಬಟ್ಟು ಪರಿಗ್ರಹಿಸಿ ತಮಗೆ ವಿದ್ಯೆಯನ್ನು ಹೇಳುವ ಗುರುವಿನಿಂದ ಈ ಅರ್ಥವು ಹೇಳಲ್ಪಡಲಿಲ್ಲವೆಂದು ಶ್ಲಾಘಿಸಿದರು; ಆ ಬಳಿಕ ಆ ದೈತ್ಯರ ಆಚಾರ್ಯನಾದ ಶುಕ್ರಾಚಾರ್ಯನ ಪುತ್ರರು ಪ್ರಹ್ಲಾದಸಹಿತರಾದ ದೈತ್ಯಬಾಲಕರಿಗೆ ಶ್ರೀಹರಿಯಲ್ಲಿ ನೆಲೆಗೊಂಡಿರುವ ಏಕಾಂತಭಕ್ತಿಯನ್ನು ನೋಡಿ ಭಯದಿಂದ ತ್ವರಾಯುಕ್ತರಾಗಿ ದೈತ್ಯೇಂದ್ರನ ಬಳಿಗೆ ಹೋಗಿ ಯಥಾವತ್ತಾಗಿ ವಿಜ್ಞಾಪಿಸಿದರು; ದೈತ್ಯೇಂದ್ರನು ಗುರುವಿನಿಂದ ಪೇಳಲ್ಪಟ್ಟ ಪ್ರಿಯವಲ್ಲದ ಪುತ್ರನ ದುರ್ನೀತಿಯನ್ನು ಕೇಳಿ ಕೋಪಾಟೋಪದಿಂದ ಚಲಿಸುವ ಶರೀರವುಳ್ಳವನಾಗಿ ಮಗನನ್ನು ಸಂಹರಿಸಲೋಸುಗ ಮನಸ್ಸನ್ನು ಮಾಡಿ ಕಠಿನವಚನಕ್ಕೆ ಯೋಗ್ಯನಲ್ಲದ ಪ್ರಹ್ಲಾದನನ್ನು ಕ್ರೂರವಚನಗಳಿಂದ ಧಿಕ್ಕರಿಸಿ ಪಾಪಿಷ್ಠನಾಗಿ ವಕ್ರದೃಷ್ಟಿಯಿಂದ ನೋಡುತ ಭಕ್ತಿಯಿಂದ ನಮ್ರನಾಗಿ ಜಿತೇಂದ್ರಿಯನಾಗಿ ಅಂಜಲಿಬಂಧವುಳ್ಳವನಾಗಿ ಸಮೀಪವರ್ತಿಯಾದ ಪ್ರಹ್ಲಾದನನ್ನು ನೋಡಿ ಕಾಲಿನಿಂದ ಪದೆಯಲ್ಪಟ್ಟ ಮಹಾಸರ್ಪದಂತೆ ನಿಟ್ಟುಸುರನ್ನು ಬಿಡುತ ಸ್ವಭಾವದಿಂದ ದಾರುಣವಾದ ಚಿತ್ತವುಳ್ಳವನಾಗಿ 'ಎಲೈ ದುರಾತ್ಮನೆ, ಮಂದಸ್ವಭಾವವುಳ್ಳವನೆ, ಕುಲನಾಶಕನಾದವನೆ, ನೀಚನೆ, ಗರ್ವಿಷ್ಠನಾಗಿ ನನ್ನ ಆಜ್ಞೆಯನ್ನು ಮೀರಿದ ನಿನ್ನನ್ನು ಯಮಲೋಕವನ್ನೈದಿಸುವೆನು; ಯಾವ ನಾನು ಕೋಪವನ್ನು ತಾಳಲು ಲೋಕಪಾಲಕರಿಂದ ಸಹಿತಗಳಾದ ಮೂರು ಲೋಕಗಳೂ ನಡುಗುವವೋ ಅಂಥಾ ನನ್ನ ಆಜ್ಞೆಯನ್ನು ಭಯವಿಲ್ಲದೆ ಯಾರಬಲದಿಂದ ನೀನು ಅತಿಕ್ರಮಿಸಿ ನಡದವನಾದೆ' ಎಂಬ ತಂದೆಯಾದ ಹಿರಣ್ಯಕಶಿಪುವಿನ ವಾಕ್ಯವನ್ನು ಕೇಳಿ ಪ್ರಹ್ಲಾದನು 'ಎಲೈ ಅರಸೆ, ಶ್ರೀಹರಿಯು ನನಗೆ ಮಾತ್ರವೇ ಬಲವಲ್ಲ; ನಿನಗೂ ಆತನೇ ಬಲವು; ಇನ್ನು ಇತರರಾದ ಬಲಿಷ್ಠರ್ಯಾರುಂಟೋ ಅವರಿಗೂ ಆತನೇ ಬಲವು; ನೀಚೋಚ್ಚರಾದ ಸ್ಥಾವರ ಜಂಗಮಗಳೂ ಬ್ರಹ್ಮಾದಿಗಳೂ ಆ ಶ್ರೀಹರಿಯಿಂದಲೇ ಸ್ವವಶವರ್ತಿಗಳಾಗಿ ಮಾಡಲ್ಪಟ್ಟಿರ್ಧಾರೆ; ಅವನೇ ಈಶ್ವರನು; ಕಾಲಸ್ವರೂಪಿಯು; ಅಸಾಧಾರಣವಾದ ಪರಾಕ್ರಮವುಳ್ಳವನು; ಓಜಸ್ಸು ತೇಜಸ್ಸು ಕ್ಷಮೆಯು ಧೈರ್ಯವು ಇಂದ್ರಿಯಗಳೂ ಇವುಗಳ ಸ್ವರೂಪನಾದ ಶ್ರೀನಾರಾಯಣನೇ ತನ್ನ ಭಕ್ತಿಯಿಂದ ಅಧಿಕವಾದ ಈ ವಿಶ್ವವನ್ನು ಗುಣತ್ರಯದಿಂದ ಸೃಷ್ಟಿಸೈದು ರಕ್ಷಿಸಿ ಅವನೇ ವಿಲಯವನ್ನೈದಿಸುವನು! ಕೇಳೈ ತಂದೆಯೆ, ನೀನು ಈ ಅಸುರ

ಭಾವವನ್ನು ಬಿಟ್ಟು ಸರ್ವತ್ರ ಸಮವಾದ ಮನಸ್ಸನ್ನು ಧರಿಸು ; ಜಯಿಸಲ್ಪಡದ ಮನಸ್ಸೇ ನಿನಗೆ ಶತ್ರುವು ; ಇದು ಹೊರ್ತಾಗಿ ಮತ್ಯಾರೂ ನಿನಗೆ ಶತ್ರುಗಳಲ್ಲ ; ಸರ್ವತ್ರ ಸಮವಾದ ಮನಸ್ಸನ್ನು ಧರಿಸುವದೇ ಶ್ರೀಹರಿಯ ಪೂಜೆಯು ; ಆದಿಯಲ್ಲಿ ನಿನ್ನಂಥಾ ಮಂದಬುದ್ಧಿಯುಳ್ಳವರು ತಮ್ಮನ್ನು ಸಂಹರಿಸುವ ಷಡಿಂದ್ರಿಯಗಳೆಂಬ ಶತ್ರುಗಳನ್ನು ಜಯಿಸದೆ ದಶದಿಕ್ಕುಗಳೂ ನಮ್ಮಿಂದ ಜಯಿಸಲ್ಪಟ್ಟವೆಂದು ತಿಳಿದು ನಾಶವನ್ನು ಹೊಂದಿದರು ; ಜಿತಮನಸ್ಕನಾದ ಸರ್ವಸಮನಾದ ಜ್ಞಾನಿಯಾದ ಸಾಧುವಿಗೆ ತನ್ನ ಅಜ್ಞಾನದಿಂದ ಕಲ್ಪಿತವಾದ ಶತ್ರುಗಳೆಲ್ಲಿಹರು ' ಎಂದು ನುಡಿದನು.

" ಆ ವಾಕ್ಯವನ್ನು ಕೇಳಿ ಹಿರಣ್ಯಕಶಿಪುವು 'ಎಲೈ ಮಂದಬುದ್ಧಿಯುಳ್ಳವನೆ, ಯಾವ ನೀನು ಬಹಳವಾಗಿ ಮಾತುಗಳನ್ನಾಡುತ್ತೀಯೋ ಅಂಥಾ ನಿನಗೆ ಮರಣವು ನಿಶ್ಚಯವು ; ಇದು ವ್ಯಕ್ತವಾಯಿತು ; ಸನ್ನಿಹಿತವಾದ ಮರಣಧರ್ಮವುಳ್ಳವರ ವಾಕ್ಯಗಳು ವ್ಯತ್ಯಸ್ತಗಳಾಗುವವು ! ಎಲೈ ಮಂದಭಾಗ್ಯನೆ, ನನಗಿಂತಲೂ ಮತ್ತೊಬ್ಬನಾವ ಜಗದೀಶ್ವರನಿಧಾನೆಂದು ನಿನ್ನಿಂದ ಹೇಳಲ್ಪಟ್ಟಿತಲ್ಲ ; ಹಾಗಾದರೆ ಅವನೆಲ್ಲಿಧಾನೆ ' ಎಂದು ಕೇಳಲು ಪ್ರಹ್ಲಾದನು ' ಆ ಹರಿಯು ಎಲ್ಲಾಕಡೆಯಲ್ಲಿಯೂ ಇಧಾನೆ ' ಎಂದು ನುಡಿದನು.

''ಹಿರಣ್ಯಕಶಿಪುವು 'ಎಲೈ ಪ್ರಹ್ಲಾದನೆ, ಹಾಗಾದರೆ ಈ ಸ್ತಂಭದಲ್ಲಿ ಆ ಹರಿಯು ಯಾಕೆ ಕಾಣಲ್ಪಡುವದಿಲ್ಲ' ಎಂದು ನುಡಿದನು.

" ಪ್ರಹ್ಲಾದನು ಆ ಸ್ತಂಭವನ್ನು ನೋಡುತ ನಮಸ್ಕರಿಸಿ ನರ್ತನಂಗೈಯುತ 'ಎಲೈ ತಂದೆಯೆ, ಸರ್ವಾಂತರ್ಯಾಮಿಯಾದ ಭಗವಂತನು ಇಲ್ಲಿಯೂ ಕಾಣಲ್ಪಡುತ್ತಾನೆ ; ನಿನಗೆ ಯಾಕೆ ಸಂಶಯವು ' ಎಂದು ನುಡಿದನು.

" ಹಿರಣ್ಯಕಶಿಪುವು ಆ ಸ್ತಂಭದಲ್ಲಿ ಶ್ರೀ ಭಗವಂತನನ್ನು ಕಾಣದೆ ಕೋಪದಿಂದ 'ಎಲೈ ಮೂಢನೆ, ಈಪ್ರಕಾರವಾಗಿ ಬಹಳ ಮಾತುಗಳನ್ನು ನುಡಿಯುವ ನಿನ್ನ ಶಿರಸ್ಸನ್ನು ಛೇದಿಸುತ್ತೇನೆ ; ನೀನು ಯಾವ ಹರಿಯನ್ನು ರಕ್ಷಕನನ್ನಾಗಿ ನಂಬಿದ್ದೀಯೋ ಅವನೇ ಬಂದು ಈಗ ನಿನ್ನನ್ನು ರಕ್ಷಿಸಲಿ ; ಎಂದು ಈಪ್ರಕಾರವಾಗಿ ಭಾಗವತೋತ್ತಮನಾದ ಪುತ್ರನನ್ನು ದುಷ್ಟವಚನಗಳಿಂದ ಬಾರಿಬಾರಿಗೂ ಬೆದರಿಸುತ ಮಹಾ ರೋಷದಿಂದ ಕೆಂಪೇರಿದ ಕಣ್ಣುಗಳುಳ್ಳವನಾಗಿ ಮಹಾ ಬಲಶಾಲಿಯಾದ ಹಿರಣ್ಯಕಶಿಪುವು ಖಡ್ಗವನ್ನು ತೆಗದುಕೊಂಡು ಸಿಂಹಾಸನದಿಂದೆದ್ದು ನಿನಗೆ ರಕ್ಷಕನಾದ ಭಗವಂತನನ್ನು ಇದರಲ್ಲಿ ತೋರಿಸು ' ಎಂದು ತನ್ನ ಮುಷ್ಟಿಯಿಂದ ಸ್ತಂಭವನ್ನು ಹೊಡದನು.

"ಎಲೈ ಧರ್ಮನಂದನನೇ, ಈರೀತಿಯಲ್ಲಿ ಹಿರಣ್ಯಕಶಿಪುವು ಸ್ತಂಭವನ್ನು ಪ್ರಹರಿಸಲು ಆಕ್ಷಣದಲ್ಲೇ ಮಹಾ ಭಯಂಕರವಾದ ಮಹಾಧ್ವನಿಯು ಬ್ರಹ್ಮಾಂಡಕಟಾಹವನ್ನು ಭೇದಿಸುವದಾಗಿ ಆ ಸ್ತಂಭದಲ್ಲಿ ಆವಿರ್ಭೂತವಾಯಿತು ; ಆಗ ಬ್ರಹ್ಮಾದಿಗಳು ತಮ್ಮ ತಮ್ಮ ಲೋಕಗಳಪರ್ಯಂತವು ವ್ಯಾಪಿಸಿದ ಆ ಧ್ವನಿಯನ್ನು ಕೇಳಿ ತಮ್ಮ ಲೋಕಗಳಿಗೆ ನಾಶವುಂಟಾದೀತೆಂದು ತಿಳಿದರು ; ಆ ಸಮಯದಲ್ಲಿ ಸ್ವಶಕ್ತಿಯಿಂದ ಪುತ್ರನನ್ನು ಸಂಹರಿಸಲಿಚ್ಛೆಯಿಂದ ಎದುರಟ್ಟಿಬರುವ ಆ ಹಿರಣ್ಯಕಶಿಪುವು ಅತ್ಯಾಶ್ಚರ್ಯಕರವಾಗಿ ಪೂರ್ವದಲ್ಲಿ ಯಾವಾಗಲೂ ಕೇಳಲ್ಪಡದಿರುವ ಮಹಾ ಶಬ್ದವನ್ನು ಕೇಳಿ ಸಭಾಮಧ್ಯದಲ್ಲಿ ಆ ಮಹಾಶಬ್ದವು ಹುಟ್ಟಿದ್ದಕ್ಕೆ ಮೂಲವನ್ನು ತಿಳಿಯದೆ ಸ್ತಬ್ಧನಾದನು ; ಆ ಮಹಾಶಬ್ದವನ್ನು ಕೇಳಿ ದೈತ್ಯ ದಾನವರೆಲ್ಲರೂ ಭಯಪಟ್ಟರು ; ಆ ಸಮಯದಲ್ಲಿ ಭಕ್ತವತ್ಸಲನಾದ ಶ್ರೀಹರಿಯು ಮೃಗವೂ ಅಲ್ಲದೆ ಮನುಜನೂ ಅಲ್ಲದೆ ಅಪೂರ್ವವಾದ ರೂಪವನ್ನು ತಾಳ್ದವನಾಗಿ ಸಭಾಮಧ್ಯವರ್ತಿಯಾದ ಸ್ತಂಭದಲ್ಲಿ ಕಾಣಲ್ಪಟ್ಟನು , ಯಾತಕ್ಕೋಸ್ಕರವೆಂದರೆ : (ಸಮಸ್ತವಾದ ಸ್ಥಾವರಜಂಗಮಗಳಲ್ಲಿ ತನ್ನ ವ್ಯಾಪ್ತಿಯನ್ನು ಸತ್ಯಂಗೈಯ್ಯಲೋಸುಗ ಸ್ತಂಭದಲ್ಲಿಯೂ ಕಾಣಲ್ಪಡುವನೆಂಬ ಸ್ವಭೃತ್ಯನಾದ ಪ್ರಹ್ಲಾದನ ವಾಕ್ಯವನ್ನು ಸತ್ಯವೆಂದು ಜನರಿಗೆ ತಿಳಿಯಪಡಿಸಲೋಸುಗ ಆವಿರ್ಭವಿಸಿದನು.) ಅನಂತರದಲ್ಲಿ ಆ ಹಿರಣ್ಯಕಶಿಪುವು ಎಲ್ಲಾಕಡೆಯಲ್ಲಿಯೂ ನೋಡುತ ಸ್ತಂಭಮಧ್ಯದೆಸೆಯಿಂದ ಆವಿರ್ಭವಿಸಿ ಬರುತಲಿರುವ ಆ ಮಹಾ ಭೂತವನ್ನು ನೋಡಿ ಆಶ್ಚರ್ಯಪಟ್ಟು ಇದು ಮೃಗವೂ ಅಲ್ಲ; ಮನುಷ್ಯನೂ ಅಲ್ಲ ; ಇದು ಏನೋ ವಿಚಿತ್ರವಾದ ಮನುಷ್ಯ ಸಿಹ್ಮ ಮಿಶ್ರವಾದ ಆಕಾರ

ವುಳ್ಳದ್ದಾಗಿದೆಯೆಂದು ಮಹಾ ಭಯಂಕರವಾದ ಆ ರೂಪವನ್ನೇ ವಿಚಾರಿಸುವ ದೈತ್ಯನಮುಂದೆ ನೃಸಿಹ್ಮರೂಪಿಯಾದ
ಶ್ರೀಹರಿಯು ಕಾಣಲ್ಪಟ್ಟನು ; ಆ ರೂಪವೆಂಥಾದ್ದೆಂದರೆ : ಕರಗಿದ ಚಿನ್ನದಂತೆ ಥಳಥಳಿಪ ಕೋಪವನ್ನು ಸೂಚಿಸುವ
ಕಣ್ಣುಗಳುಳ್ಳದ್ದಾಗಿ ಪ್ರಕಾಶಿಸುವ ಹೆಗಲು ರೋಮಗಳಿಂದ ಯುಕ್ತವಾಗಿ ಕರಾಳವಾದ ರೂಪವುಳ್ಳ ಖಡ್ಗದಂತೆ
ಚಂಚಲವಾದ ನಾಲಿಗೆಯುಳ್ಳದ್ದಾಗಿ ಗಂಟಿಕ್ಕಿದ ಹುಬ್ಬುಗಳುಳ್ಳ ಮುಖದಿಂದ ಭಯಂಕರವಾಗಿರುವದು ; ಅತಿಶಯ
ವಾದ ಅಚಂಚಲವಾದ ನಿಡುಗಿವಿಗಳುಳ್ಳದ್ದಾಗಿ ಗಿರಿಯ ಗವಿಯಂತೆ ಅದ್ಭುತವಾಗಿ ತೆರೆಯಲ್ಪಟ್ಟ ವಿಸ್ತಾರವಾದ ಮುಖ
ನಾಸಾಪುಟಗಳುಳ್ಳದ್ದಾಗಿ ದವಡೆಗಳನ್ನು ತೆರೆಯುವದರಿಂದ ಭಯಂಕರವಾಗಿ ಗಗನವನ್ನು ತುಡುಕುವ ಶರೀರವುಳ್ಳ
ದ್ದಾಗಿ ಅತಿ ದೀರ್ಘವಾಗಿಯೂ ದಪ್ಪವಾಗಿಯೂ ಇರುವ ಕೋರದಾಡೆಗಳುಳ್ಳದ್ದಾಗಿ ವಿಸ್ತಾರವಾದ ಎದೆಯುಳ್ಳದ್ದಾಗಿ
ಸೂಕ್ಷ್ಮವಾದ ಮಧ್ಯದಿಂದ ಪ್ರಕಾಶಮಾನವಾಗಿ ಚಂದ್ರನ ಕಿರಣಗಳಂತೆ ಬಿಳುಪಾದ ಕೇಸರಂಗಳಿಂದ ವ್ಯಾಪ್ತವಾದ
ಸರ್ವತ್ರ ನೀಡಲ್ಪಟ್ಟ ಅನಂತಭುಜಗಳುಳ್ಳದ್ದಾಗಿ ನಖಗಳೆಂಬ ಆಯುಧಗಳುಳ್ಳದ್ದಾಗಿ ಯಾರಿಂದಲೂ ಬಿಡಲಶಕ್ಯ
ವಾಗಿ ಸ್ವಕೀಯ್ಯವಾದ ಚಕ್ರವೇ ಮೊದಲಾದ ಆಯುಧಗಳಿಂದ ಸಂಹರಿಸಲ್ಪಡುವ ಸಮಸ್ತದೈತ್ಯದಾನವರುಳ್ಳದ್ದಾಗಿ
ರುವ ರೂಪವನ್ನು ನೋಡಿ ವಿಚಾರಂಗೈವ ಹಿರಣ್ಯಕಶಿಪುವಿನ ಮುಂಭಾಗದಲ್ಲಿ ನೃಸಿಂಹನು ಎದ್ದನು ; ಆ ಸಮಯ
ದಲ್ಲಿ ದೈತ್ಯೇಂದ್ರನಾದ ಹಿರಣ್ಯಕಶಿಪುವು ಇವನು ಮಹಾ ಮಾಯಾವಿಯು ; ಆದಕಾರಣ ಈ ಹರಿಯಿಂದ ಬಹುತರ
ವಾಗಿ ನನ್ನ ಸಂಹಾರವಾದೀತೆಂದು ತೋರುತಲಿದೆ ; ಆದಾಗ್ಯೂ ಇವನಿಂದ ಆಗತಕ್ಕದ್ದೇನೆಂದು ಗದೆಯನ್ನು ಪಿಡಿದು
ಯುದ್ಧಂಗೈಯಲೆದ್ದು ಅಟ್ಟಿದನು ; ಆಗ ದೈತ್ಯನು ಬೆಂಕಿಯಲ್ಲಿಬಿದ್ದ ಪತಂಗದ ಹುಳುವಿನಂತೆ ನೃಸಿಂಹನ ತೇಜಸ್ಸಿ
ನಲ್ಲಿ ಬಿದ್ದವನಾಗಿ ಕಾಣಲ್ಪಡಲಿಲ್ಲ ; ಸತ್ವಪ್ರಕಾಶಕನಾದ ನೃಕೇಸರಿಯಲ್ಲಿಬಿದ್ದ ತಮೋಮಯನಾದ ದೈತ್ಯನ ಅದರ್ಶ
ನವು ಚಿತ್ರವಲ್ಲವು ; ಯಾವ ಹರಿಯು ಸೃಷ್ಟ್ಯಾದಿಯಲ್ಲಿ ಪ್ರಳಯಕಾಲ ಸಂಬಂಧಿಯಾದ ತಮಸ್ಸನ್ನು ಪಾನಂಗೈವ
ನೋ ಅಂಥಾ ಶ್ರೀಹರಿಯಲ್ಲಿ ತಮೋರೂಪನಾದ ಈ ದೈತ್ಯನು ಹ್ಯಾಗೆ ಪ್ರಕಾಶಿಸ್ಯಾನು ; ಅನಂತರದಲ್ಲಿ ಮಹಾದೈತ್ಯ
ನು ರೋಷದಿಂದ ಎದುರಾಗಿಬಂದು ಅತಿಶಯವೇಗವುಳ್ಳ ಗದೆಯಿಂದ ನೃಕೇಸರಿಯನ್ನು ಹೊಡೆದನು ; ಆಗ ಪರಾಕ್ರ
ಮಂಗೈವ ಗದಾಧಾರಿಯಾದ ಅಸುರನನ್ನು ನೃಸಿಂಹನು ಗರುತ್ಮಂತನು ಮಹೋರಗವನ್ನು ಪಿಡಿಯುವಂತೆ ಪಿಡಿದನು ;
ಕ್ರೀಡಿಸುವ ಗರುಡನ ಹಸ್ತದಿಂದ ತಪ್ಪಿಸಿಕೊಂಡ ಸರ್ಪದಂತೆ ನೃಸಿಹ್ಮನ ಹಸ್ತದಿಂದ ತಪ್ಪಿಸಿಕೊಂಡ ದೈತ್ಯನನ್ನು
ನೋಡಿ ದೇವತೆಗಳು ಅವನಿಂದ ಅಪಹರಿಸಲ್ಪಟ್ಟ ಸ್ಥಾನಗಳುಳ್ಳವರಾದಕಾರಣ ಭಯದಿಂದ ಮೇಘಾವೃತರಾಗಿ ನೋ
ಡುತ ಪ್ರಮಾದವೆಂದು ತಿಳಿದರು ; ಆಗ ದೈತ್ಯನು ಯಾವ ನೃಸಿಂಹನ ಹಸ್ತದಿಂದ ಬಿಡಿಸಿಕೊಂಡನೋ ಆ ಶ್ರೀಹರಿ
ಯನ್ನು ತನ್ನ ಪರಾಕ್ರಮದಿಂದ ಶಂಕೆಯುಳ್ಳವನನ್ನಾಗಿ ತಿಳಿದು ತಾನು ಯುದ್ಧದಲ್ಲಿ ಶ್ರಮವಿಲ್ಲದವನಾದಕಾರಣ
ಪುನಶ್ಚ ಕತ್ತಿ ಖೇಡ್ಯಗಳನ್ನು ಪಿಡಿದು ಯುದ್ಧಂಗೈಯ್ಯಲು ಬಂದನು ; ಗಿಡುಗನಂತೆ ಅತಿ ವೇಗವುಳ್ಳವನಾಗಿ ಖಡ್ಗ
ಖೇಡ್ಯಗಳ ಮಾರ್ಗಗಳಿಂದ ಅವಕಾಶವನ್ನು ಕೊಡದೆ ಮೇಲಕ್ಕೂ ಕೆಳಕ್ಕೂ ಸಂಚರಿಸುವನಾಗಿ ಕೈಗೆ ಶಿಕ್ಕದಿರುವ
ಆ ಹಿರಣ್ಯಕಶಿಪುವನ್ನು ನೋಡಿ ನೃಸಿಂಹನು ಅಟ್ಟಹಾಸವನ್ನು ಮಾಡಿ ಆ ಶಬ್ದದಿಂದ ಅವನನ್ನು ಮೂರ್ಛೆಯಂಗೈಸಿ
ಕಣ್ಣುಗಳನ್ನು ಮುಚ್ಚಿಕೊಂಡಿರುವ ಆ ಹಿರಣ್ಯಕಶಿಪುವನ್ನು ಮಹಾವೇಗದಿಂದ ಹಿಡಿದನು ; ಆಗ ನೃಸಿಂಹನ ಹಸ್ತ
ಗಳಿಗೆ ಸಿಕ್ಕಿ ಬಿಡಿಸಿಕೊಳ್ಳಲಾರದೆ ಶ್ರಮಪಡುತಲಿರುವನಾಗಿ ಇಂದ್ರನ ವಜ್ರಾಯುಧಕ್ಕೂ ಅಸಾಧ್ಯವಾದ ಚರ್ಮವು
ಳ್ಳ ಆ ಹಿರಣ್ಯಕಶಿಪುವನ್ನು ಭಗವಂತನು ಸರ್ಪವು ಮೂಷಕವನ್ನು ಗ್ರಹಿಸಿದಂತೆ ಗ್ರಹಿಸಿ ಆ ಸಭಾದ್ವಾರದಲ್ಲಿ ತನ್ನ
ತೊಡೆಯಮೇಲೆ ಹಾಕಿಕೊಂಡು ಮಹಾವಿಷವುಳ್ಳ ಸರ್ಪವನ್ನು ಗರುಡನಂತೆ ತನ್ನ ನಖಗಳಿಂದ ಲೀಲೆಯಿಂದಲೇ ಶೀಳಿ
ದನು ; ಆ ಬಳಿಕ ಶತೃಸಂಹಾರಾಟೋಪದಿಂದ ನೋಡಲಶಕ್ಯವಾದ ಕರಾಳವಾದ ಕಂಗಳುಳ್ಳವನಾಗಿ ರಕ್ತಬಿಂದುಗಳಿಂ
ದ ಸಿಕ್ತವಾದಕಾರಣ ಕೆಂಪಾದ ಕೇಸರಗಳುಳ್ಳ ಮುಖವುಳ್ಳವನಾಗಿ ತೆರೆಯಲ್ಪಟ್ಟ ಬಾಯಲ್ಲಿ ಹೊಳೆವ ನಾಲಿಗೆಯ
ನ್ನು ನೀಡುತಲಿರುವ ನೃಸಿಂಹನು ಮಹಾಗಜವನ್ನು ಸಂಹರಿಸಿದ ಮಹಾಸಿಂಹದಂತೆ ಕರುಳುಗಳ ಮಾಲಿಕೆಗಳನ್ನು ಧರಿಸಿ
ನಖಗಳ ತುದಿಗಳಿಂದ ಶೀಳಲ್ಪಟ್ಟ ಹೃತ್ಕಮಲವುಳ್ಳ ಶತೃವನ್ನು ಬಿಟ್ಟು ದಂಡಸದೃಶಗಳಾದ ಬಾಹುಗಳ ಸಮೂಹವು
ಳ್ಳವನಾಗಿ ಉತ್ತಮಾಯುಧಧಾರಿಗಳಾದ ದೈತ್ಯೇಂದ್ರನ ಭೃತ್ಯರನ್ನು ನಖಗಳೆಂಬ ಶಸ್ತ್ರಗಳುಳ್ಳ ಹಸ್ತಗಳಿಂದ ಸಂಹ

ರಿಸಿದನು. ಆ ನೃಸಿಂಹನ ಹೆಕ್ಕತ್ತಿನ ಮೇಲಣ ಕೇಸರಂಗಳಿಂದ ಕೊಡಹಲ್ಪಟ್ಟವಾಗಿ ಮೇಘಗಳು ಬಿದ್ದವು ; ಆ ನರಹರಿಯ ದೃಷ್ಟಿಯಿಂದ ಮಲಿನವಾದ ಕಾಂತಿಯುಳ್ಳವಾಗಿ ಗ್ರಹಗಳು ಪ್ರಕಾಶಿಸಲಿಲ್ಲ ; ಆ ಭಗವಂತನ ನಿಟ್ಟುಸುರುಗಳಿಂದ ಪ್ರಹರಿಸಲ್ಪಟ್ಟವಾಗಿ ಸಮುದ್ರಗಳು ಕದಡಿದವು; ಆ ಸ್ವಾಮಿಯ ಅಟ್ಟಹಾಸದಿಂದ ಭಯಪಟ್ಟು ದಿಗ್ಗಜಗಳು ಕೂಗಿದವು ; ಸ್ವರ್ಗವು ಆ ನೃಸಿಂಹನ ಕೇಸರಂಗಳಿಂದ ತಳ್ಳಲ್ಪಟ್ಟ ವಿಮಾನವುಳ್ಳದ್ದಾಯಿತು ; ಆ ಭಗವಂತನ ಪಾದಪ್ರಹಾರಗಳಿಂದ ಪೀಡಿತವಾದ ಭೂಮಿಯು ಚಲಿಸಿತು ; ಆ ಭಗವಂತನ ವೇಗದಿಂದ ಪರ್ವತಗಳು ಹಾರಿದವು ; ಆ ನೃಸಿಂಹನ ತೇಜಸ್ಸಿನಿಂದ ಆಕಾಶವೂ ದಿಕ್ಕುಗಳೂ ಪ್ರಕಾಶಿಸಲಿಲ್ಲ ; ಅನಂತರದಲ್ಲಿ ತನ್ನ ಭೃತ್ಯನ ಐಶ್ವರ್ಯವನ್ನೂ ಆಶ್ಚರ್ಯವನ್ನೂ ನೋಡಿ ಸಂತೋಷದಿಂದ ಸಭಾಮಧ್ಯದಲ್ಲಿ ಶೋಭಿಸುವ ಉತ್ತಮವಾದ ರಾಜಾಸನದಲ್ಲಿ ಕುಳಿತಿರುವನಾಗಿ ಪೂರ್ಣವಾದ ತೇಜಸ್ಸಿನಿಂದ ಪ್ರಕಾಶಿಸುವನಾಗಿ ಸರ್ವಲೋಕೇಶ್ವರನಾದ ಅಪ್ರತಿಭಟನಾದ ಅತ್ಯಂತ ಕೋಪವುಳ್ಳವನಾಗಿ ಪ್ರಚಂಡಮುಖವುಳ್ಳ ನರಕಂಠೀರವನನ್ನು ನೋಡಿ ಒಬ್ಬನೂ ಸಮೀಪವನ್ನೈದಲು ಸಮರ್ಥನಾಗಲಿಲ್ಲ ; ತ್ರೈಲೋಕ್ಯದಲ್ಲಿಯೂ ಜನರಿಗೆ ಶಿರೋವೇದನೆಯಂತೆ ಸಹಿಸಲಶಕ್ಯನಾದ ಆದಿದೈತ್ಯನಾದ ಹಿರಣ್ಯಕಶಿಪುವು ಮಹಾಯುದ್ಧದಲ್ಲಿ ನರಮೃಗೇಂದ್ರನಿಂದ ಸಂಹೃತನಾಗಲು ಅತಿಶಯವಾದ ಸಂತೋಷದಿಂದರಳಿದ ಮುಖಪದ್ಮವುಳ್ಳ ಸುರವನಿತೆಯರು ನರಸಿಂಹನಮೇಲೆ ಪೂಮಳೆಗರೆದರು ; ಆ ಸಮಯದಲ್ಲಿ ನೋಡಲಿಚ್ಛೆಯುಳ್ಳ ದೇವತೆಗಳ ವಿಮಾನಪಙ್ಕ್ತಿಗಳಿಂದ ಆಕಾಶವು ನಿಬಿಡವಾಯಿತು ; ದೇವದುಂದುಭಿಗಳು ತಮ್ಮಟೆಗಳು ಧ್ವನಿಗೈದವು ; ಗಂಧರ್ವರು ಗಾನಂಗೈಯಲು ಅಪ್ಸರಸ್ತ್ರೀಯರು ನರ್ತನಂಗೈದರು ; ಆಗ ಬ್ರಹ್ಮನು ಇಂದ್ರನು ಧೂರ್ಜಟಿಯೇ ಮೊದಲಾದ ದೇವತೆಗಳು ಋಷಿಗಳು ಪಿತೃದೇವತೆಗಳು ಸಿದ್ಧರು ವಿದ್ಯಾಧರರು ಮಹೋರಗರು ಮನುಗಳು ಪ್ರಜೇಶ್ವರರು ಗಂಧರ್ವರು ಅಪ್ಸರಸ್ಸುಗಳು ಚಾರಣರು ಯಕ್ಷರು ಕಿಂಪುರುಷರು ವೈತಾಳಿಕರು ಕಿನ್ನರರು ಶ್ರೀವಿಷ್ಣುವಿನ ಸನ್ನಿಧಿಯಲ್ಲಿರುವ ಸುನಂದಕುಮುದರೇ ಮೊದಲಾದವರು ಶಿರಸ್ಸಿನಲ್ಲಿ ಬದ್ಧವಾದ ಅಂಜಲಿಪುಟವುಳ್ಳವರಾಗಿ ಸ್ವಲ್ಪದೂರದಲ್ಲೇ ಸಂಚರಿಸುತ ಕ್ರೂರವಾದ ತೇಜಸ್ಸುಳ್ಳ ರಾಜಾಸನದಲ್ಲಿ ಕುಳಿತಿರುವ ಪುರುಷೋತ್ತಮನನ್ನು ಬೇರೆಬೇರೆ ಸ್ತುತಿಗೈದರು !

“ ಬ್ರಹ್ಮನು ‘ಚ್ಯುತಿಯಿಲ್ಲದಿರುವ ಸ್ವರೂಪವುಳ್ಳವನಾಗಿ ಲೀಲೆಯಿಂದ ಗುಣತ್ರಯವನ್ನು ಸ್ವೀಕರಿಸಿದವನಾಗಿ ಪ್ರಪಂಚದ ಸೃಷ್ಟಿ ಸ್ಥಿತಿ ವಿಲಯಗಳನ್ನು ಕಲ್ಪಿಸುವನಾಗಿ ವಿಚಿತ್ರವೀರ್ಯನಾಗಿ ಜಗತ್ಪಾವನನಾದ ಚರಿತ್ರವೂ ಅದ್ಭುತಪ್ರಭಾವವೂ ಕೊನೆಮೊದಲಿಲ್ಲದ ದಿವ್ಯಶಕ್ತಿಯೂ ಅನಂತವಾದ ರೂಪವೂ ಉಳ್ಳವನಾಗಿರುವ ಶ್ರೀಹರಿಯನ್ನು ಪ್ರಸನ್ನನಂ ಮಾಡಲೋಸುಗ ನಮಿಸುವೆನು ’ ಎಂದು ಸ್ತುತಿಸಿದನು.

“ ಶ್ರೀ ರುದ್ರನು ‘ಎಲೈ ಭಗವಂತನೆ, ಸಹಸ್ರಯುಗಗಳ ಅಂತದಲ್ಲಿ ನಿನಗೆ ಕೋಪಕ್ಕೆ ಕಾರಣನಾದ ಈ ಅಲ್ಪನಾದ ದೈತ್ಯನು ಹತನಾದನು ! ಎಲೈ ಭಕ್ತವತ್ಸಲನೆ, ಹಿರಣ್ಯಕಶಿಪುವಿಗೆ ಪುತ್ರನಾದ ನಿನ್ನ ಭಕ್ತನಾದ ಪ್ರಹ್ಲಾದನನ್ನು ರಕ್ಷಿಸು ’ ಎಂದು ಸ್ತುತಿಸಿದನು.

“ ಇಂದ್ರನು ‘ ಕೇಳೈ ಸರ್ವೋತ್ತಮನೆ, ನಮ್ಮನ್ನು ರಕ್ಷಿಸುವ ನಿನ್ನಿಂದ ನಮ್ಮ ಸಂಬಂಧಿಗಳಾದ ಯಜ್ಞಭಾಗಗಳು ಸಾಧಿಸಲ್ಪಟ್ಟವು ; ಅಂತರ್ಯಾಮಿಯಾದ ಯಜ್ಞಭೋಕ್ತೃವು ನೀನೇಯಾದಕಾರಣ ಸ್ವಕೀಯಗಳಾದ ಭಾಗಗಳೇ ಸಾಧಿಸಲ್ಪಟ್ಟವು ; ನಿನಗೆ ಗೃಹವಾದ ನಮ್ಮ ಹೃತ್ಕಮಲವು ದೈತ್ಯನಿಂದಲೇ ಆಕ್ರಾಂತವಾಗಿದ್ದಕಾರಣ ಆ ಭಯವು ಪರಿಹರಿಸಲ್ಪಟ್ಟದ್ದರಿಂದ ವಿಕಾಸವನ್ನೈದಿತು ; ತ್ರೈಲೋಕ್ಯೈಶ್ವರ್ಯಸಾಧನಾರ್ಥವಾಗಿ ಈ ಪ್ರಯತ್ನವೆಂದರೆ : ನಶ್ವರವಾದ ಈ ಐಶ್ವರ್ಯವು ಎಷ್ಟುಮಾತ್ರವು ! ಎಲೈ ಸ್ವಾಮಿಯೆ, ನಿನ್ನ ಸೇವೆಯನ್ನು ಮಾಡುವವರಿಗೆ ಮುಕ್ತಿಯು ಅಪೇಕ್ಷಿತವಲ್ಲ ; ಮಿಗುಲಾದೈಶ್ವರ್ಯಾದಿಗಳಿಂದೇನು ?’ ಎಂದು ಸ್ತುತಿಸಿದನು.

“ ಋಷಿಗಳು ‘ಎಲೈ ಪುರಾಣಪುರುಷನಾದ ಮರೆಹೊಕ್ಕವರನ್ನು ರಕ್ಷಿಸುವ ಶ್ರೀಹರಿಯೆ, ಯಾವ ನೀನು ನಿನ್ನ ಪ್ರಭಾವರೂಪವಾದ ತಪಸ್ಸನ್ನು ಪೇಳಿದವನಾದಯೋ ಯಾವ ತಪಸ್ಸಿನಿಂದ ನಿನ್ನ ಲೀನವಾದ ಪ್ರಪಂಚವನ್ನು

ಸೃಷ್ಟಿಸುವನಾದೆಯೋ ಆ ತಪಸ್ಸು ಈ ಮಹಾದೈತ್ಯನಿಂದ ಲೋಪವನ್ನು ಮಾಡಲ್ಪಟ್ಟಿತು ; ತದ್ರಕ್ಷಣೆಗೋಸ್ಕರ ಗ್ರಹಿಸಲ್ಪಟ್ಟ ಈ ನರಸಿಂಹಶರೀರದಿಂದ ನಮಗೆ ಪುನಃಪುನಃ ತಪವನ್ನಾಚರಿಸೀ ಎಂದು ಆಜ್ಞಾಪನಂಗೈದೆಯೋ ಅಂಥಾ ನಿನಗೋಸ್ಕರ ನಮಸ್ಕಾರವು ’ ಎಂದು ಸ್ತುತಿಸಿದರು.

“ ಪಿತೃದೇವತೆಗಳು ‘ಯಾವ ದೈತ್ಯನು ಶ್ರಾದ್ಧಗಳಲ್ಲಿ ಪುತ್ರರಿಂದ ನಮಗೋಸ್ಕರ ಕೊಡಲ್ಪಟ್ಟ ಕಬಳವನ್ನು ಬಲಾತ್ಕಾರದಿಂದ ಅಪಹರಿಸಿ ಭೋಜನಂಗೈದು ಸ್ನಾನಸಮಯದಲ್ಲಿ ದತ್ತವಾದ ತಿಲೋದಕಗಳನ್ನು ಪಾನಂಗೈದನೋ ನಖಗಳಿಂದ ಶೀಳಲ್ಪಟ್ಟ ವಪೆಯುಳ್ಳವನಾದ ದೈತ್ಯನ ಉದರದ ದೆಶೆಯಿಂದ ಯಾವ ನೀನು ತಂದಿತ್ತವನಾದೆಯೋ ಸಕಲ ಧರ್ಮಪಾಲಕನಾದ ಅಂಥಾ ನರಸಿಂಹನಾದ ನಿನಗೋಸ್ಕರ ನಮಸ್ಕಾರವು ’ ಎಂದು ಸ್ತುತಿಸಿದರು.

“ ಸಿದ್ಧರು ‘ದುಷ್ಟನಾದ ಯಾವ ದೈತ್ಯನು ಯೋಗತಪೋಬಲದಿಂದ ಯೋಗಾಭ್ಯಾಸದಿಂದ ಸಿದ್ಧವಾದ ಅಣಿಮಾದಿಗಳನ್ನಪಹರಿಸಿದ ಅನೇಕಪ್ರಕಾರವಾದ ಗರ್ವವುಳ್ಳ ಆ ಶತ್ರುವನ್ನು ನಖಗಳಿಂದ ಶೀಳದೆಯೋ ಅಂಥಾ ಶ್ರೀನರಸಿಂಹನೇ ನಿನಗೋಸ್ಕರ ನಮಸ್ಕಾರವು ’ ಎಂದು ಸ್ತುತಿಸಿದರು.

“ ವಿದ್ಯಾಧರರು ‘ ಪೃಥಗ್ಧಾರಣೆಯಿಂದ ಪ್ರಾಪ್ತವಾದ ಅಂತರ್ಧಾರಣರೂಪವಾದ ನಮ್ಮ ವಿದ್ಯೆಯನ್ನು ಬಲವೀರ್ಯಗಳಿಂದ ಗರ್ವಿತನಾದ ಮೂರ್ಖನಾದ ಯಾವ ದೈತ್ಯನು ಅಪಹಾರಂಗೈದನೋ ಅಂಥಾ ದೈತ್ಯನು ಪಶುವೋಪಾದಿಯಲ್ಲಿ ನಿನ್ನಿಂದ ಯುದ್ಧದಲ್ಲಿ ಸಂಹರಿಸಲ್ಪಟ್ಟನು ; ಅಂಥಾ ಕಪಟ ನರಮೃಗೇಂದ್ರನನ್ನು ಕುರಿತು ನಿರಂತರವಾಗಿ ನಮಸ್ಕರಿಸುತಲಿದ್ಧೇವೆ ’ ಎಂದು ಸ್ತುತಿಸಿದರು.

“ ನಾಗರು ‘ಯಾವ ಪಾಪಿಷ್ಠನಾದ ದೈತ್ಯನಿಂದ ನಮ್ಮ ಫಣಾರತ್ನಗಳೂ ಸ್ತ್ರೀರತ್ನಗಳೂ ಅಪಹರಿಸಲ್ಪಟ್ಟವೋ ಅವನ ಎದೆಯನ್ನು ಶೀಳೋಣದರಿಂದ ಆ ಸ್ತ್ರೀಯರುಗಳಿಗೆ ಕೊಡಲ್ಪಟ್ಟ ಆನಂದವುಳ್ಳ ನೃಸಿಂಹನೇ ನಿನಗೋಸ್ಕರ ನಮಸ್ಕಾರವು ’ ಎಂದು ಸ್ತುತಿಸಿದರು.

“ ಮನುಗಳು ‘ಎಲೈ ಕ್ರೀಡಾಗುಣ ವಿಶಿಷ್ಟನಾದ ನೃಸಿಂಹನೆ, ನಿನ್ನ ಆಜ್ಞಾಧಾರಕರಾದ ನಾವು ನಮ್ಮಿಂದ ಮಾಡಲ್ಪಟ್ಟ ಧರ್ಮಾಧರ್ಮ ವ್ಯವಸ್ಥೆಗಳನ್ನು ಧಿಕ್ಕರಿಸಿದ ಆ ದೈತ್ಯೇಂದ್ರನಿಂದ ಬಾಧಿತರಾಗಿ ಶ್ರಮೆಪಟ್ಟೆವು ! ಎಲೈ ಸಮರ್ಥನಾದ ಶ್ರೀಹರಿಯೆ, ಆ ದೈತ್ಯನು ನಿನ್ನಿಂದ ಸಂಹೃತನಾದನು ; ಕಿಂಕರರಾದ ನಮಗೆ ಮಾಡತಕ್ಕ ವ್ಯಾಪಾರಗಳನ್ನು ಆಜ್ಞಾಪಿಸು ’ ಎಂದು ನಮಸ್ಕರಿಸಿ ಸ್ತುತಿಸಿದರು.

“ ಪ್ರಜೇಶರು ‘ಎಲೈ ಸರ್ವೋತ್ಕೃಷ್ಟನಾದ ಸ್ವಾಮಿಯೆ, ನಿನ್ನಿಂದ ಸೃಷ್ಟಿಸಲ್ಪಟ್ಟ ಪ್ರಜೇಶರಾದ ನಾವು ಯಾವ ದೈತ್ಯನಿಂದ ತಡೆಯಲ್ಪಟ್ಟವರಾಗಿ ಪ್ರಜೆಗಳನ್ನು ಸೃಷ್ಟಿಸದೆ ಇದ್ದೆವೋ ಅಂಥಾ ದುಷ್ಟದೈತ್ಯನು ನಿನ್ನಿಂದ ಶೀಳಲ್ಪಟ್ಟ ವಕ್ಷಸ್ಥಳವುಳ್ಳವನಾಗಿ ಬಿದ್ದಿಧಾನೆ ; ಅಂಥಾ ಸತ್ವರೂಪನಾದ ನಿನ್ನ ಆವಿರ್ಭಾವವು ಜಗತ್ಕಲ್ಯಾಣಕರವು’ ಎಂದು ನಮಸ್ಕರಿಸಿ ಸ್ತುತಿಸಿದರು.

“ ಗಂಧರ್ವರು ‘ಎಲೈ ಸಮರ್ಥನಾದ ಸ್ವಾಮಿಯೆ, ನಿನಗೆ ಪ್ರೀತಿಕರವಾದ ನರ್ತನದಲ್ಲಿ ಗಾನದಲ್ಲಿ ಸಹಾ ಉದ್ಯುಕ್ತರಾಗಿರುವಂಥಾ ನಾವು ಶೌರ್ಯ ಶಕ್ತಿ ಪ್ರಭಾವಗಳಿಂದ ಯುಕ್ತನಾದ ಯಾವ ಅಸುರನಾದ ದೈತ್ಯನಿಂದ ಸ್ವವಶರಾಗಿ ಮಾಡಲ್ಪಟ್ಟೆವೋ ಅವನು ನಿನ್ನಿಂದ ಇಂಥಾ ದೆಶೆಯನ್ನೈದಿಸಲ್ಪಟ್ಟನು ; ಸನ್ಮಾರ್ಗವನ್ನತಿಕ್ರಮಿಸಿ ದುರ್ಮಾರ್ಗದಲ್ಲಿ ಪ್ರವರ್ತಿಸುವ ದುಷ್ಟನು ಯಾವವನು ಕ್ಷೇಮಿಯಾದಾನು ? ’ ಎಂದು ಸ್ತುತಿಸಿದರು.

“ ಚಾರಣರು ‘ಎಲೈ ಶ್ರೀಹರಿಯೆ, ನಾವು ಸಂಸಾರತಾರಕವಾದ ನಿನ್ನ ಪಾದಪದ್ಮವನ್ನಾಶ್ರಯಿಸಿದವರು ; ಸಾಧುಗಳ ಹೃದಯದಲ್ಲಿ ಭಯವನ್ನುಂಟುಮಾಡುವ ಈ ಅಸುರನು ನಿನ್ನಿಂದ ಸಂಹೃತನಾದನು ’ ಎಂದು ನಮಸ್ಕರಿಸಿ ಸ್ತುತಿಸಿದರು.

"ಯಕ್ಷರು 'ಎಲೈ ಚತುರ್ವಿಂಶತ್ತತ್ವ ನಿಯಾಮಕನಾದ ನರಹರಿಯೆ, ಮನೋಹರಗಳಾದ ಲೀಲೆಗಳಿಂದ ನಿನ್ನ ಸೇವಕರಲ್ಲಿ ಮುಖ್ಯರಾದ ನಾವು ಯಾವ ದೈತ್ಯನಿಂದ ಭಾರವಾಹಕರಾಗಿ ಮಾಡಲ್ಪಟ್ಟೆವೋ ಅವನಿಂದ ಮಾಡಲ್ಪಟ್ಟ ಜನರ ಸಂತಾಪವನ್ನು ತಿಳಿವ ನಿನ್ನಿಂದ ಆ ಅಸುರನು ಸಂಹೃತನಾದನು' ಎಂದು ನಮಸ್ಕರಿಸಿ ಸ್ತುತಿಸಿದರು.

"ಕಿಂಪುರುಷರು 'ಎಲೈ ಸ್ವಾಮಿಯೇ, ನಾವು ತುಚ್ಛಪ್ರಾಣಿಗಳು; ನೀನು ಮಹಾಪುರುಷನಾದ ಸರ್ವೇಶ್ವರನು; ಈ ದುಷ್ಟನಾದ ದೈತ್ಯನು ಸಾಧುಗಳಿಂದ ಎಂತು ತಿರಸ್ಕೃತನಾದನೋ ಅದೇಪ್ರಕಾರ ನಿನ್ನಿಂದ ಹತನಾದನು' ಎಂದು ನಮಸ್ಕರಿಸಿ ಸ್ತುತಿಸಿದರು.

"ವೈತಾಳಿಕರು 'ಸಭೆಯಲ್ಲಿ ಯಜ್ಞಗಳಲ್ಲಿ ನಿನ್ನ ಕೀರ್ತಿಯನ್ನು ಪೊಗಳಿ ಉತ್ತಮವಾದ ಪೂಜೆಯನ್ನು ಪಡೆವ ನಮ್ಮನ್ನು ಈ ದುಷ್ಟನಾದ ಯಾವ ದೈತ್ಯನು ತನ್ನ ವಶವನ್ನು ಮಾಡಿಕೊಂಡು ಉಪದ್ರವಪಡಿಸುತಲಿದ್ದನೋ ಅಂಥಾ ಅಸುರನು ನಿನ್ನಿಂದ ಹತನಾದನು; ಅದು ಲೋಕಕ್ಷೇಮಕರವು' ಎಂದು ನಮಸ್ಕರಿಸಿ ಸ್ತುತಿಸಿದರು.

"ಕಿನ್ನರರು 'ಎಲೈ ಸ್ವಾಮಿಯಾದ ನೃಸಿಂಹನೆ, ನಿನ್ನ ದಾಸರಾದ ಕಿನ್ನರರಾದ ನಾವು ಈ ದುಷ್ಟದೈತ್ಯನಿಂದ ನಿರರ್ಥಕವಾಗಿ ಬಿಟ್ಟಿಯನ್ನು ಮಾಡಿಸಲ್ಪಟ್ಟವರಾದೆವು; ನೀನು ಅಂಥಾ ಪಾಪಿಷ್ಠನನ್ನು ಸಂಹರಿಸಿದೆಯಾಗಿ ನಮಗೆ ಕುಶಲವನ್ನಿತ್ತು ರಕ್ಷಿಸು' ಎಂದು ನಮಸ್ಕರಿಸಿ ಸ್ತುತಿಸಿದರು.

"ವಿಷ್ಣುವಿನ ಪಾರಿಷದರು 'ಎಲೈ ರಕ್ಷಕನಾದ ಸರ್ವಾತ್ಮಕನಾದ ಸರ್ವಸುಖಕಾರಿಯಾದ ಸ್ವಾಮಿಯೆ, ಈ ಅದ್ಭುತಕರವಾದ ನರಸಿಂಹರೂಪವು ನಮ್ಮಿಂದ ಈಗ ನೋಡಲ್ಪಟ್ಟಿತು; ಸನಕಾದಿಗಳಿಂದ ಶಪಿಸಲ್ಪಟ್ಟ ಆ ಹಿರಣ್ಯಕಶಿಪುವು ನಿನ್ನ ಕಿಂಕರನಾದ್ದರಿಂದ ಈ ಅಸುರ ಶರೀರವನ್ನು ಪರಿಹರಿಸಿದ್ದು ಅವನಿಗೆ ಪರಮಾನುಗ್ರಹರೂಪವೆಂದು ತಿಳಿಯುತಲಿದ್ದೇವೆ' ಎಂದು ನಮಸ್ಕರಿಸಿ ಸ್ತುತಿಸಿದರು."

೯ನೇ ಅಧ್ಯಾಯ.

ಬ್ರಹ್ಮದೇವನಿಂದ ಪ್ರೇರಿತನಾದ ಪ್ರಹ್ಲಾದನು ನರಸಿಂಹಸ್ವಾಮಿಯನ್ನು ಸ್ತುತಿಸಿದ್ದು.

"ಈಪ್ರಕಾರವಾಗಿ ಬ್ರಹ್ಮರುದ್ರರೇ ಮೊದಲಾದ ಸಮಸ್ತದೇವತೆಗಳೂ ಕೋಪಾವೇಶವುಳ್ಳ ಐದಲಶಕ್ಯನಾದ ನೃಸಿಂಹನ ಸಮೀಪವನ್ನೈದಲು ಅಸಮರ್ಥರಾದರು; ಆಗ ದೇವತೆಗಳಿಂದ ಪ್ರಾರ್ಥಿತಳಾದ ಸಾಕ್ಷಾಲ್ಲಕ್ಷ್ಮಿಯು ಎಂದಿಗೂ ಕಂಡುಕೇಳಲ್ಪಡದ ಅತ್ಯದ್ಭುತವಾದ ರೂಪವನ್ನು ಕಂಡು ಶಂಕೆಯುಳ್ಳವಳಾಗಿ ಸಮೀಪವನ್ನೈದದಿದ್ದಳು; ಆ ಸಮಯದಲ್ಲಿ ಬ್ರಹ್ಮನು ತನ್ನ ಸಮೀಪದಲ್ಲಿ ನಿಂತಿರುವ ಪ್ರಹ್ಲಾದನನ್ನು ನೋಡಿ 'ಎಲೈ ಚಿಕ್ಕವನೆ, ನಿನ್ನ ತಂದೆಗೋಸ್ಕರ ಕುಪಿತನಾದ ಸ್ವಾಮಿಯ ಕೋಪವನ್ನು ಶಮನಗೈಯಲೋಸುಗ ಸಮೀಪವನ್ನೈದು' ಎಂದು ಬಾಲಕನನ್ನು ಕಳುಹಲು ಬ್ರಹ್ಮನಿಂದ ಪ್ರೇರಿತನಾದ ಮಹಾ ಭಾಗವತನಾದ ಬಾಲಕನು 'ಹಾಗೇ ಆಗಲಿ' ಎಂದು ಅಂಜಲಿಬಂಧವುಳ್ಳವನಾಗಿ ಮೆಲ್ಲಮೆಲ್ಲನೆ ಸಮೀಪವನ್ನೈದಿ ನರಹರಿಯ ಪಾದಗಳಲ್ಲಿ ದಂಡವಂತೆ ಪ್ರಣಾಮಗೈದನು; ನರಸಿಹ್ಮನು ತನ್ನ ಪಾದಗಳ ಸಮೀಪದಲ್ಲಿ ತನುವನ್ನು ಕೆಡಹಿರುವ ಬಾಲಕನನ್ನು ನೋಡಿ ಅತಿಶಯವಾದ ಕೃಪೆಯಿಂದ ಏಳೇಳು ಮಗನೇ! ಎಂದು ಎಬ್ಬಿಸಿ ಮೃತ್ಯುವೆಂಬ ಮಹಾ ಸರ್ಪದಿಂದ ಭೀತರಾದವರಿಗೆ ಅಭಯಪ್ರದವಾದ ತನ್ನ ಹಸ್ತಕಮಲವನ್ನು ಪ್ರಹ್ಲಾದನ ಶಿರಸ್ಸಿನಮೇಲಿರಿಸಿದನು; ಆ ಬಳಿಕ ಪ್ರಹ್ಲಾದನು ಆ ನೃಸಿಂಹನ ಕರಸ್ಪರ್ಶದಿಂದ ದೂರೀಕೃತವಾದ ಸಮಸ್ತ ಪಾಪವುಳ್ಳವನಾಗಿ ಅಪರೋಕ್ಷವಾದ ಬ್ರಹ್ಮಜ್ಞಾನವೂ ರೋಮಾಂಚವೂ ಪ್ರೇಮಾರ್ದ್ರ ಹೃದಯವೂ ಆನಂದಬಾಷ್ಪವೂ ನಿರತಿಶಯ ಸುಖವೂ ಉಳ್ಳವನಾಗಿ ನರಕಂಠೀರವನ ಪಾದಪದ್ಮವನ್ನು ಧ್ಯಾನಿಸುತ ತದೇಕಯುಕ್ತವಾದ ಮನಸ್ಸಿನಿಂದ ಅತಿ ಜಾಗರೂಕನಾಗಿ ಆ ದೇವನಲ್ಲಿರಿಸಲ್ಪಟ್ಟ ಮನಸ್ಸೂ

ಲೋಚನಗಳೂ ಉಳ್ಳವನಾಗಿ ಪ್ರೇಮದಿಂದುಂಟಾದ ಗದ್ಗದಧ್ವನಿಯುಳ್ಳ ವಾಕ್ಯದಿಂದ ಶ್ರೀಹರಿಯನ್ನು ಸ್ತೋತ್ರಂಗೈದನು! 'ಬ್ರಹ್ಮದೇವನೇ ಮೊದಲಾದ ಸಮಸ್ತ ಸುರರೂ ಮನನಶೀಲರಾದ ಸಮಸ್ತ ಋಷಿಗಳೂ ಜ್ಞಾನಿಗಳೂ ಸತ್ವಗುಣದಲ್ಲಿಯೇ ಬುದ್ಧಿಯುಳ್ಳವರು; ಇವರೆಲ್ಲರೂ ಬಹಳವಾದ ಗುಣಗಳಿಂದಲೂ ವಾಕ್ಪ್ರವಾಹಗಳಿಂದಲೂ ಈಗಲೂ ಯಾರನ್ನು ಪೂಜಿಸಲು ಸಮರ್ಥರಲ್ಲವೋ ಅಂಥಾ ಶ್ರೀಹರಿಯನ್ನು ಅಸುರಜಾತಿಯಲ್ಲಿ ಉತ್ಪನ್ನನಾದ ನಾನೆಂತು ಸ್ತುತಿಸುವೆನು; ಧನವು ಸತ್ಕುಲೋತ್ಪತ್ತಿಯು ಸೌಂದರ್ಯವು ತಪಸ್ಸು ಪಾಂಡಿತ್ಯವು ಇಂದ್ರಿಯಗಳ ನಿಪುಣತೆಯು ಕಾಂತಿಯು ಪ್ರಭಾವವು ಬಲವು ಪೌರುಷವು ಪ್ರಜ್ಞೆಯು ಅಷ್ಟಾಂಗ ಯೋಗವು ಎಂಬ ಈ ಹನ್ನೆರಡು ಗುಣಗಳೂ ಪರಮಪುರುಷನ ಆರಾಧನೆಗೋಸುಗ ಸಮರ್ಥಗಳಾಗುವದಿಲ್ಲವೆಂದು ತಿಳಿವೆನು; ಯಾವಕಾರಣ ಕೇವಲ ಭಕ್ತಿಯಿಂದಲೇ ಗಜರಾಜನಲ್ಲಿ ಶ್ರೀಹರಿಯು ಸಂತುಷ್ಟನಾದನೋ ಅದುಕಾರಣ ಈ ಪೂರ್ವೋಕ್ತ ಸಾಧನಗಳು ಶ್ರೀಹರಿ ಸಂತೋಷಸಾಧನಗಳಾಗಲಾರವು; ಈ ಪೂರ್ವೋಕ್ತಗಳಾದ ದ್ವಾದಶಗುಣಗಳುಳ್ಳವನಾದಾಗ್ಯೂ ಪದ್ಮನಾಭನ ಪಾದಾರವಿಂದದಲ್ಲಿ ಭಕ್ತಿಯಿಲ್ಲದಿದ್ದರೆ ಅವನಿಗಿಂತಲೂ ಆ ವಾಸುದೇವನಲ್ಲಿ ಸಮರ್ಪಿಸಲ್ಪಟ್ಟ ವಾಕ್ಕೂ ಮನಸ್ಸೂ ಧನವೂ ಇಷ್ಟವಾದ ವಸ್ತುಗಳೂ ಉಳ್ಳ ಶ್ವಪಚನೇ ಶ್ರೇಷ್ಠನೆಂದು ತಿಳಿವೆನು; ಅಂಥಾ ಶ್ವಪಚನು ಸರ್ವರನ್ನು ಪಾವನಂಗೈವನು; ಹರಿಭಕ್ತಿಹೀನನಾದ ಅಧಿಕವಾದ ಮಾನವುಳ್ಳ ಪುರುಷನಾದರೂ ತನ್ನನ್ನು ಪಾವನಂಗೈಯಲಾರನು; ಇವನಿಗೆ ಪೂರ್ವೋಕ್ತ ಗುಣಗಳು ಗರ್ವಕ್ಕೆ ಕಾರಣಗಳಾಗುವವು; ಸ್ವತಂತ್ರನಾದ ಸ್ವಾತ್ಮಾರಾಮನಾದ ವಾಸುದೇವನು ಸ್ವಾರ್ಥವಾಗಿ ಜನರಿಂದ ಪೂಜೆಯನ್ನಪೇಕ್ಷಿಸುವದಿಲ್ಲ; ಪರಮ ಕೃಪಾವಂತನಾದಕಾರಣ ಈತೆರದಿಂದಲೂ ಕೃತಾರ್ಥರಾಗಲೆಂದು ಭಕ್ತರಿಂದ ಮಾಡಲ್ಪಟ್ಟ ಪೂಜೆಯನ್ನು ಅಂಗೀಕರಿಸುವನು; ಎಂತು ಮುಖದಲ್ಲಿ ರಚಿಸಲ್ಪಟ್ಟ ತಿಲಕ ಮೊದಲಾದ ಅಲಂಕಾರ ಕಾಂತಿಯು ಕನ್ನಡಿಯಲ್ಲಿ ಕಾಣಲ್ಪಡುವ ಪ್ರತಿಬಿಂಬಕ್ಕೆ ಮಾಡಲಶಕ್ಯವೋ ಆರೀತಿ ಶ್ರೀಹರಿಯಲ್ಲಿ ಮಾಡಲ್ಪಟ್ಟ ಪೂಜೆಯು ತಮಗೆ ಪೂಜ್ಯತ್ವಕ್ಕೆ ಸಾಧನವಾಗುವದು; ಯಾವಕಾರಣದಿಂದ ಭಗವಂತನು ಭಕ್ತಿಯಿಂದಲೇ ಸಂತುಷ್ಟನಾಗುವನೋ ಆದಕಾರಣ ನಾನು ನೀಚನಾದಾಗ್ಯೂ ಶಂಕೆಯಿಲ್ಲದೆ ಹರಿಯ ಮಹಿಮೆಯನ್ನು ಸರ್ವಪ್ರಯತ್ನದಿಂದಲೂ ಸ್ವಬುದ್ಧ್ಯಾನುಸಾರವಾಗಿ ವರ್ಣಿಸುವೆನು; ಯಾವ ಮಹಾಪುರುಷನ ಮಹಿಮೆಯನ್ನು ವರ್ಣಿಸುವದರಿಂದ ಮಾಯೆಯಿಂದ ಸಂಸಾರಾಸಕ್ತನಾದಾಗ್ಯೂ ಶುದ್ಧನಾಗುವನೋ ಅಂಥಾ ಮಹಿಮೆಯನ್ನು ನಾನು ವರ್ಣಿಸುತ್ತೇನೆ' ಎಂದು ನಿಶ್ಚಯಿಸಿ ಪ್ರಹ್ಲಾದನು ಆ ಭಗವಂತನ ಕೋಪಶಾಂತಿಯನ್ನು ಪ್ರಾರ್ಥಿಸುವನು! ಎಲೈ ಸರ್ವೇಶ್ವರನಾದ ಶ್ರೀಹರಿಯೆ, ನಿನ್ನ ಕೋಪದಿಂದುದ್ವಿಗ್ನರಾದ ಬ್ರಹ್ಮನೇ ಮೊದಲಾದ ನಾವು ಸತ್ವಮೂರ್ತಿಯಾದ ನಿನ್ನ ಆಜ್ಞೆಯನ್ನು ಶಿರಸಾವಹಿಸಿ ಭಕ್ತಿಯಿಂದಲೇ ನಡೆಯುವೆವು; ನಾವು ಅಸುರರಂತೆ ವೈರಭಾವದಿಂದ ಭಕ್ತರಲ್ಲ; ನಿನ್ನ ಮನೋಹರಗಳಾದ ಅವತಾರಗಳಿಂದುಂಟಾದ ಲೀಲೆಗಳು ಈ ಜಗತ್ತಿನ ಕ್ಷೇಮಕ್ಕೋಸ್ಕರಲೇ ಹೊರ್ತು ಭಯೋತ್ಪಾದನಾರ್ಥವಾಗಲ್ಲ; ಆದಕಾರಣ ಈ ಬ್ರಹ್ಮಾದಿಗಳ ಭಯಪರಿಹಾರಕ್ಕೋಸ್ಕರ ಕೋಪವನ್ನು ನಿಗ್ರಹಿಸು; ಯಾವವನದೆಶೆಯಿಂದ ಈ ಕೋಪವುಂಟಾಯಿತೋ ಆ ಅಸುರನು ನಿನ್ನಿಂದ ಸಂಹೃತನಾದನು; ಲೋಕದಲ್ಲಿ ಜನೋಪದ್ರವಕಾರಿಗಳಾದ ಸರ್ಪ ವೃಶ್ಚಿಕಾದಿಗಳು ಸಂಹರಿಸಲ್ಪಟ್ಟಾಗ್ಯೂ ಸಾಧುಜನರು ಸಂತೋಷಪಡುವರಾದಕಾರಣ ಸರ್ವಲೋಕೋಪದ್ರವಕಾರಿಯಾದ ಈ ಹಿರಣ್ಯಕಶಿಪುವು ನಿನ್ನಿಂದ ಸಂಹೃತನಾದ್ದರಿಂದ ಸರ್ವಲೋಕವೂ ಸುಖವನ್ನೈದಿಸಲ್ಪಟ್ಟಿತು; ಇನ್ನುಮೇಲೆ ಕೋಪದಿಂದೇನು ಆಗತಕ್ಕದ್ದಿಲ್ಲ; ಸರ್ವರೂ ನಿನ್ನ ಕೋಪಶಾಂತಿಯನ್ನು ಪ್ರಾರ್ಥಿಸುತಲಿಧಾರೆ; ಸಮಸ್ತ ಭಯ ಪರಿಹಾರಕ್ಕೋಸ್ಕರ ನಿನ್ನ ಈ ನರಸಿಂಹರೂಪವನ್ನು ಜನರು ಸ್ಮರಿಸುತಲಿಧಾರೆ! ಎಲೈ ಯಾರಿಂದಲೂ ಜಯಿಸಲಶಕ್ಯನಾದ ಸ್ವಾಮಿಯೆ, ಅತ್ಯಂತ ಭಯಂಕರಗಳಾದ ಮುಖವೂ ನಾಲಿಗೆಯೂ ಸೂರ್ಯನಂತೆ ದೇದೀಪ್ಯಮಾನಗಳಾದ ನೇತ್ರಗಳೂ ಹುಬ್ಬುಗಳ ಗಂಟುಗಳೂ ಆಟೋಪವೂ ರೌದ್ರಗಳಾದ ಕೋರೆದಾಡೆಗಳೂ ಕರುಳುಗಳ ಮಾಲೆಗಳೂ ರಕ್ತದಿಂದ ಕೆಂಪಾದ ಹೆಗಲುಮೇಲಣ ಕೂದಲುಗಳೂ ನಿಡುಗಿವಿಗಳೂ ಧ್ವನಿಯಿಂದ ಬೆದರಿದ ದಿಗ್ಗಜಗಳೂ ದೈತ್ಯನ ಶೀಳಿದ ನಖಾಗ್ರಗಳೂ ಉಳ್ಳದ್ದಾಗಿರುವ ನಿನ್ನ ರೂಪದ ದೆಶೆಯಿಂದ ನಾನು ಭಯಪಡುವನಲ್ಲ! ಕೇಳೈ ದೀನದಯಾಳುವಾದ ಅತ್ಯಂತ ಮನೋಹರನಾದ ಶ್ರೀ ನರಹರಿಯೆ, ಹಿಂಸೆಯಲ್ಲಿಯೇ

ಆಸಕ್ತರಾದ ಕ್ರೂರರಾದ ಅಸುರರಲ್ಲಿ ಸ್ವಕರ್ಮವೆಂಬ ಪಾಶದಿಂದ ಕಟ್ಟಲ್ಪಟ್ಟು ಕೆಡಹಲ್ಪಟ್ಟ ನಾನು ಸಹಿಸಲಶಕ್ಯವಾದ ಉಗ್ರವಾದ ಸಂಸಾರಚಕ್ರದ ದುಃಖದದಶೆಯಿಂದ ಭಯ ಪಡುವೆನು ; ಆದ್ದರಿಂದ ನೀನು ಪ್ರಸನ್ನನಾಗಿ ಯಾವಾಗ ಮೋಕ್ಷರೂಪವಾದ ರಕ್ಷಕಗಳಾದ ನಿನ್ನ ಪಾದಪದ್ಮಗಳ ಸನ್ನಿಧಿಯನ್ನು ಕುರಿತೈದಿಸುವೆಯೋ ಎಂದು ಪರೀಕ್ಷಿಸುತ್ತೇನೆ ; ಪ್ರಿಯವಾದ ವಸ್ತುವಿನ ವಿಯೋಗದಿಂದಲೂ ಅಪ್ರಿಯವಸ್ತು ಪ್ರಾಪ್ತಿಯಿಂದಲೂ ಉತ್ಪನ್ನವಾದ ಶೋಕವೆಂಬ ಅಗ್ನಿಯಿಂದ ಸಮಸ್ತ ಯೋನಿಗಳಲ್ಲಿಯೂ ದಹಿಸಲ್ಪಡುತ ಈ ದುಃಖಪರಿಹಾರೋಪಾಯವು ದುಃಖಕರವಾದ ಕಾರಣ ದೇಹಾದ್ಯಭಿಮಾನದಿಂದ ನಾನು ಮೋಹವನ್ನು ಪಡೆಯುವೆನು ! ಆದಕಾರಣ ಕೇಳೈ ಸ್ವಾಮಿಯೆ, ಇಂಥಾ ನನಿಗೆ ಸಂಸಾರೋತ್ತಾರಣರೂಪವಾದ ನಿನ್ನ ದಾಸ್ಯವನ್ನು ಪಾಲಿಸು ! ಎಲೈ ಸ್ವಾಮಿಯಾದ ನೃಸಿಂಹನೆ, ಪ್ರಿಯನಾದ ಸುಹೃತ್ತಾದ ಪರದೇವತೆಯಾದ ನಿನ್ನ ಸಂಬಂಧಿಗಳಾದ ಬ್ರಹ್ಮನಿಂದ ಸ್ತುತಿಸಲ್ಪಟ್ಟ ಲೀಲಾಕಥೆಗಳನ್ನು ಕೀರ್ತನಂಗೈವವನಾಗಿ ನಾನು ರಾಗಾದಿ ಗುಣಗಳಿಂದ ಬಿಡಲ್ಪಟ್ಟು ನಿನ್ನ ಚರಣಭಕ್ತರಾದ ಪರಮಯೋಗಿಗಳ ಸಹವಾಸವುಳ್ಳವನಾಗಿ ಶೀಘ್ರವಾಗಿ ದುಃಖರೂಪಗಳಾದ ವಿಘ್ನಗಳನ್ನು ದಾಟುವೆನು ! ಎಲೈ ಶ್ರೀ ನೃಸಿಂಹನೆ, ನಿನ್ನಿಂದ ಉಪೇಕ್ಷಿತರಾದ ಅಪುಣ್ಯವಂತರಿಗೆ ಯಾರೂ ರಕ್ಷಕರಾಗುವದಿಲ್ಲ ; ಅದು ಹ್ಯಾಗಂದರೆ : ಬಾಲಕರಿಗೆ ಮಾತಾಪಿತೃಗಳು ರಕ್ಷಕರಾಗುವದಿಲ್ಲ ; ಋಚಿಕಪುತ್ರನಾದ ಶುನಶ್ಶೇಫನು ಮಾತಾಪಿತೃಗಳಿಂದಲೇ ವಿಕ್ರೀತನಾದನೇ ಹೊರ್ತು ಆ ಮಾತಾಪಿತೃಗಳಿಂದ ಪೋಷಿತನಾಗಲಿಲ್ಲ ; ರೋಗಾರ್ತನಾದ ಪುರುಷನಿಗೆ ಔಷಧವು ಉಪಯೋಗಿಸುವದಿಲ್ಲ ; ಸಮುದ್ರದಲ್ಲಿ ಮುಳುಗಿಹೋಗುವ ಪುರುಷನನ್ನು ಓಡೆ ಹಡಗುಗಳು ರಕ್ಷಿಸುವದಿಲ್ಲ ; ಆದಕಾರಣ ಸರ್ವಪ್ರಾಣಿಗಳಿಗೂ ನೀನೇ ರಕ್ಷಕನು ! ಎಲೈ ಸ್ವಾಮಿಯೆ, ಅಪಕೃಷ್ಟನಾದ ಪಿತ್ರಾದಿ ಪುರುಷನಲ್ಲಿ ಉತ್ಕೃಷ್ಟನಾದ ಬ್ರಹ್ಮಾದಿಪುರುಷನಾಗಲಿ ನಾನು ಕರ್ತೃವೆನಿಸಿಕೊಂಡು ಯಾವ ಪ್ರದೇಶದಲ್ಲಿ ಯಾವನಿಮಿತ್ತದ ದೆಶೆಯಿಂದ ಯಾವಕಾಲದಲ್ಲಿ ಯಾವ ಹೇತುವಿನಿಂದ ಯಾವವನ ಸಂಬಂಧಿಯಾಗಿ ಯಾವವನ ದೆಶೆಯಿಂದ ಯಾವವನಿಗೋಸ್ಕರ ಯಾವ ಕಾರ್ಯವನ್ನು ಮಾಡುತಲಿಹಾನೋ ಅದೆಲ್ಲವೂ ನಿನ್ನ ಸ್ವರೂಪವೇ ಹೊರ್ತು ಮತ್ತೆ ಬೇರೆ ಅಲ್ಲ ! ಎಲೈ ಸ್ವಾಮಿಯೆ, ನಿನ್ನ ಅಂಶನಾದ ಪುರುಷನ ದೃಷ್ಟಿ ಪ್ರಸಾರರೂಪವಾದ ಅನುಗ್ರಹದಿಂದ ಕಾಲದಿಂದ ಕ್ಷೋಭಿಸಲ್ಪಟ್ಟ ಮಾಯೆಯು ಕರ್ಮಪ್ರಚುರ್ಯವುಳ್ಳ ಜಯಿಸಲಶಕ್ಯವಾದ ವೇದೋಕ್ತಕರ್ಮವೇ ಪ್ರಧಾನವಾಗುಳ್ಳ ಅವಿದ್ಯೆಯಿಂದ ಕಲ್ಪಿತವಾದ ಷೋಡಶ ವಿಕಾರಗಳೆಂಬ ಹರತಗಳುಳ್ಳ ಸಂಸಾರ ಚಕ್ರಾತ್ಮಕವಾದ ಮನಸ್ಸನ್ನು ಯಾವವನತಿಕ್ರಮಿಸಿ ನಡದಾನು ? ಎಲೈ ಸಮರ್ಥನಾದ ಸ್ವಾಮಿಯೆ, ಚಿಚ್ಛಕ್ತಿಯಿಂದ ನಿರಂತರವೂ ಜಯಿಸಲ್ಪಟ್ಟ ಬುದ್ಧಿ ಗುಣಗಳುಳ್ಳ ಕಾಲಸ್ವರೂಪನಾದ ಕಾರಣ ಸ್ವವಶನಾಗಿ ಮಾಡಲ್ಪಟ್ಟ ಕಾರ್ಯಕಾರಣಗಳುಳ್ಳ ನೀನು ಮಾಯೆಯಿಂದ ಷೋಡಶಾರಂಗಗಳುಳ್ಳ ಸಂಸಾರ ಚಕ್ರದಲ್ಲಿ ಇಕ್ಷುದಂಡದಂತೆ ಪೀಡಿಸಲ್ಪಡುವ ನನ್ನನ್ನು ನಿನ್ನ ಚರಣ ಸಮೀಪವನ್ನೈದಿಸು ! ಎಲೈ ಸ್ವಾಮಿಯೆ, ಸ್ವರ್ಗದಲ್ಲಿರುವ ಸಮಸ್ತ ಲೋಕಪಾಲಕರ ಆಯುಷ್ಯವು ಐಶ್ವರ್ಯ ಸಂಪತ್ತುಗಳು ನನ್ನಿಂದ ತುಚ್ಛಗಳಾಗಿ ತಿಳಿಯಲ್ಪಟ್ಟವೆ ; ಅಜ್ಞರು ವ್ಯರ್ಥವಾಗಿ ಐಶ್ವರ್ಯಾದಿಗಳನ್ನಪೇಕ್ಷಿಸುವರು ; ಯಾವ ಐಶ್ವರ್ಯಗಳು ನಮ್ಮ ತಂದೆಯ ಕೋಪದಿಂದ ಉಂಟಾದ ಅಟ್ಟಹಾಸದಿಂದ ವಿಜೃಂಭಿತವಾದ ಭ್ರುಭ್ರುಗಂಟು ಮಾತ್ರದಿಂದಲೇ ನಷ್ಟಗಳಾದವೋ ಇಂಥಾ ದೇವತೆಗಳ ಆ ಸಮೃದ್ಧಿಗಳಿಂದೇನು ? ಇಂಥಾ ದೇವಕಂಟಕನಾದವನೂ ಕೂಡ ನಿನ್ನಿಂದ ಸಂಹೃತನಾದನು ; ಆದಕಾರಣ ಪ್ರಾಣಿಗಳ ಭೋಗವನ್ನು ತುಚ್ಛವನ್ನಾಗಿ ತಿಳಿದಿರುವ ನಾನು ಇಂದ್ರಿಯಗಳಿಂದ ಭೋಗಿಸಲು ಯೋಗ್ಯಗಳಾದ ಬ್ರಹ್ಮೈಶ್ವರ್ಯಪರ್ಯಂತಗಳಾದ ಅಣಿಮಾದಿಗಳನ್ನು ಇಚ್ಛೈಸುವದಿಲ್ಲ ; ಅವೆಲ್ಲವೂ ಕಾಲಾತ್ಮಕನಾದ ನಿನ್ನ ಪ್ರಭಾವದಿಂದುಂಟಾಗುವವು ; ಆದ್ದರಿಂದ ನನ್ನನ್ನು ನಿನ್ನ ದಾಸರ ಸಮೀಪವನ್ನೈದಿಸು ! ಎಲೈ ಸ್ವಾಮಿಯೆ, ಬಿಸಲು ಹೊಳವಿನಂತೆ ತೋರುತಲಿರುವದಾಗಿ ಕೇಳುವದಕ್ಕೆಮಾತ್ರವೇ ಸುಖಕರಗಳಾಗಿ ಮಿಥ್ಯಾರೂಪಗಳಾದ ಈ ಭೋಗಗಳೆಲ್ಲಿ ? ನಿಖಿಲ ರೋಗಗಳಿಗೆ ಉತ್ಪತ್ತಿಸ್ಥಾನವಾದ ಈ ಕಳೇಬರವೆಲ್ಲಿ ? ತಿಳಿಯದೆ ಈ ಭೋಗಗಳಲ್ಲಿ ಮೂಢರು ಪ್ರವರ್ತಿಸುವರು ; ಇದು ನಶ್ವರವು ; ತುಚ್ಛವೆಂದು ತಿಳಿದವನಾದರೂ ಕಾಮವೆಂಬ ಅಗ್ನಿಯನ್ನು ಜೇನಿನಂತೆ ದುಸ್ಸಾಧ್ಯಗಳಾದ ಸುಖಲೇಶಗಳಿಂದ ಶಮನಂಗೈವ ಭ್ರಾಂತಿಯುಳ್ಳವನಿಗೆ ವಿರಕ್ತಿಯೆಲ್ಲಿಯದು ?

ಆದ್ದರಿಂದ ನಿನ್ನ ಮಾಯಾವಿಲಾಸವು ಅಗೋಚರವಾದದ್ದು! ಎಲೈ ಸ್ವಾಮಿಯೆ, ಅಧಿಕವಾದ ತಮಸ್ಸೇ ಮುಖ್ಯವಾಗುಳ್ಳ ಅಸುರಕುಲದಲ್ಲಿ ರಜೋಗುಣದಿಂದುತ್ಪನ್ನನಾದ ನಾನೆಲ್ಲಿ? ನಿನ್ನ ಕೃಪೆಯೆಲ್ಲಿ? ರಮಾ ಬ್ರಹ್ಮ ರುದ್ರರಿಗೂ ಅಲಭ್ಯವಾದ ಪದ್ಮಸದೃಶವಾದ ನಿನ್ನ ಹಸ್ತವು ನನ್ನ ಶಿರಸ್ಸಿನಲ್ಲಿಡಲ್ಪಟ್ಟಿತಾದಕಾರಣ ನನ್ನಂತೆ ಧನ್ಯನ್ಯಾರು! ಎಲೈ ಸ್ವಾಮಿಯೆ, ಈ ಬ್ರಹ್ಮಾದಿಗಳು ಉತ್ತಮರು ಈ ಅಸುರರು ನೀಚರೆಂಬ ನೀಚೋಚ್ಚಬುದ್ಧಿ ಪ್ರಾಕೃತಜನಕ್ಕೆ ಎಂತೋ ಆರೀತಿ ಜಗದಾತ್ಮಕನಾದ ಸರ್ವಸುಹೃತ್ತಾದ ನಿನಗಿಲ್ಲ; ಆದಾಗ್ಯೂ ಸುರತರುವಿನಂತೆ ಯಾರೆಂತು ನಿನ್ನ ಸೇವೆಯನ್ನು ಮಾಡುವರೋ ಸೇವಾನುರೂಪವಾಗಿ ಅವರವರಿಗೆ ನಿನ್ನ ಪ್ರಸಾದವುಂಟಾಗುವದು! ಎಲೈ ಸ್ವಾಮಿಯೆ, ಸಂಸಾರವೆಂಬ ಸರ್ಪಗಳುಳ್ಳ ಕೂಪದಲ್ಲಿ ಬಿದ್ದು ನಾನಾವಿಧ ಕಾಮಗಳನ್ನು ಕಾಮಿಸುವವರನ್ನನುಸರಿಸಿ ಬೀಳುವ ನಿನ್ನ ದಾಸನಾದ ನಾರದಮುನಿಯಿಂದ ಅನುಗ್ರಹಿಸಲ್ಪಟ್ಟ ನಾನು ನಿನ್ನ ಭೃತ್ಯರ ಸೇವೆಯನ್ನು ಹ್ಯಾಗೆ ಮಾಡದೆ ಬಿಟ್ಟೇನು! ಎಲೈ ಸ್ವಾಮಿಯೆ, ನನ್ನ ಪ್ರಾಣರಕ್ಷಣೆಯೂ ನನ್ನ ತಂದೆಯ ವಧೆಯೂ ಈ ಎರಡೂ ನಿನ್ನದಾಸನಾದ ನಾರದಮುನಿಯ ವಾಕ್ಯವನ್ನು ಸತ್ಯವನ್ನು ಮಾಡಲೋಸುಗವೆಂದು ತಿಳಿವೆನು; ಯಾವ ಕಾರಣದಿಂದ ಅಕಾರ್ಯವನ್ನು ಮಾಡಲಿಚ್ಛಿಸಿದ ನನ್ನ ತಂದೆಯೂ ಖಡ್ಗವನ್ನು ಪಿಡಿದೆತ್ತಿ 'ಎಲೋ ದುಷ್ಟನೆ, ನನಿಗಿಂತಲೂ ಬೇರೆ ಈಶ್ವರನುಂಟಾದರೆ ನಿನ್ನನ್ನು ರಕ್ಷಿಸಲಿ; ಇಲ್ಲವಾದರೆ ನಿನ್ನ ಶಿರಸ್ಸನ್ನಪಹರಿಸುವೆನು' ಎಂದು ನುಡಿದನೋ ಅದನ್ನು ಸತ್ಯವಂ ಮಾಡಲೋಸುಗ ಈಗ ನೀನು ಆವಿರ್ಭವಿಸಿದೆಯೆಂದು ತಿಳಿವೆನು! ಎಲೈ ಸ್ವಾಮಿಯೆ, ಈ ಜಗತ್ಸ್ವರೂಪನಾಗಿರುವ ನೀನೊಬ್ಬನೇ ಯಾವ ಕಾರಣದಿಂದ ಈ ಜಗತ್ತಿನ ಆದ್ಯಂತ ಮಧ್ಯಗಳಲ್ಲಿ ಈ ಜಗದ್ವ್ಯತಿರಿಕ್ತನಾಗಿ ಕಾರಣಭಾವದಿಂದಿರುವ ನಿನ್ನ ಮಾಯೆಯಿಂದ ಗುಣತ್ರಯ ಸಂಬಂಧವುಳ್ಳ ಈ ಜಗತ್ತನ್ನು ಸೃಷ್ಟಿಸಿ ನಾನಾವಿಧರೂಪನಾಗಿ ಈ ಜಗದಂತಃಪ್ರವಿಷ್ಟನಾದಾಗ್ಯೂ ನಿರ್ಲಿಪ್ತನಾಗಿರುತ್ತೀಯೆ! ಎಲೈ ಸ್ವಾಮಿಯೆ, ಕಾರ್ಯಕಾರಣಾತ್ಮಕನಾದ ನೀನೊಬ್ಬನೇ ಈ ಜಗತ್ತಿನ ಆದ್ಯಂತಗಳಲ್ಲಿ ಬೇರೆ ಇರುವದರಿಂದ ಈ ಜಗತ್ತಿಗಿಂತಲೂ ಭಿನ್ನನು; ಅದುಕಾರಣ ಇವನು ನನ್ನವನು—ಅವನು ಪರಕೀಯನು ಎಂಬ ಬುದ್ಧಿಯು ಮಿಥ್ಯಾರೂಪವಾದ ಮಾಯೆಯೇ ಸರಿ; ಈ ಪ್ರಪಂಚದ ಜನ್ಮ ವಿಲಯ ಸ್ಥಿತಿ ವೀಕ್ಷಣಂಗಳು ಅದೇಪ್ರಕಾರ ಬೀಜವೃಕ್ಷನ್ಯಾಯದಿಂದ ಕಾರ್ಯಕಾರಣಭಾವದಿಂದಿರುವದು; ಇದಕ್ಕೆಲ್ಲಾ ಅನ್ಯನಾಗಿ ಪರಮಕಾರಣಭಾವದಿಂದಿರುವ ನೀನೊಬ್ಬನೇ ಸರಿ! ಎಲೈ ಸ್ವಾಮಿಯೆ, ಈ ಜಗತ್ತನ್ನು ನಿನ್ನಲ್ಲೇ ಲೀನಮಾಡಿಕೊಂಡು ನಿಜಸುಖಾನುಭವವನ್ನು ಮಾಡು; ನಿಷ್ಕ್ರಿಯನಾಗಿ ಪ್ರಳಯೋದಕಮಧ್ಯದಲ್ಲಿ ಶೇಷಶಯನದಲ್ಲಿ ತಪೋವೃತ್ತಿರೂಪವಾದ ಜೀವಸಂಬಂಧಿಯಾದ ನಿದ್ರೆಗಿಂತಲೂ ಅನ್ಯವಾದ ಯೋಗನಿದ್ರೆಯನ್ನನುಭವಿಸುತ ಮುಚ್ಚಲ್ಪಟ್ಟ ನೇತ್ರಗಳುಳ್ಳವನಾಗಿ ಸ್ವರೂಪಪ್ರಕಾಶದಿಂದ ಹೋಗಲಾಡಿಸಲ್ಪಟ್ಟ ನಿದ್ರೆಯುಳ್ಳವನಾದಕಾರಣ ಅವಸ್ಥಾತ್ರಯಾತಿರಿಕ್ತ ಸ್ವಸ್ವರೂಪದಲ್ಲಿ ನೀನು ಜಾಗ್ರತ್ಸ್ವಪ್ನಗಳೇ ಮೊದಲಾದ ಗುಣತ್ರಯವನ್ನೂ ವಿಷಯಗಳನ್ನೂ ನೋಡುವನಲ್ಲ! ಎಲೈ ಸ್ವಾಮಿಯೆ, ಸ್ವಕೀಯವಾದ ಕಾಲಶಕ್ತಿಯಿಂದ ಪ್ರೇರಿಸಲ್ಪಟ್ಟ ಪ್ರಕೃತಿಯ ಸತ್ವಾದಿಗುಣಗಳುಳ್ಳವನಾಗಿ ಶಾಂತವಾದ ಸಮಾಧಿಯುಳ್ಳವನಾದಕಾರಣ ಶೇಷಪರ್ಯಂಕದ ದೆಸೆಯಿಂದ ಎಚ್ಚತ್ತ ನಿನ್ನ ನಾಭಿಯ ದೆಸೆಯಿಂದ ಏಕಾರ್ಣವೋದಕದಲ್ಲಿ ನಿನ್ನಲ್ಲಿ ಒಬ್ಬರೂ ಕಾಣದಂತೆ ವಾಸಂಗೈವರೀತಿ ಸೂಕ್ಷ್ಮವಾದ ಲೋಕವೆಂಬ ಪದ್ಮವು ಸೂಕ್ಷ್ಮವಾದ ವಟಬೀಜದಿಂದ ಮಹಾವಟವೃಕ್ಷದಂತೆ ಆವಿರ್ಭವಿಸಿತು; ಆದ್ದರಿಂದ ಈ ಜಗತ್ತು ಅಂಥಾ ನಿನ್ನ ಸ್ವರೂಪವೇ ಸರಿ; ಅದರ ಮಧ್ಯದಲ್ಲಿರುವವನೂ ನೀನೇ ಸರಿ! ಎಲೈ ಸ್ವಾಮಿಯೆ, ಆ ಪದ್ಮದಲ್ಲಿ ಉದ್ಭವಿಸಿದ ಬ್ರಹ್ಮನು ಆ ಪದ್ಮಕ್ಕಿಂತಲೂ ಅನ್ಯವನ್ನು ಕಾಣದೆ ಉಪಾದಾನಕಾರಣನಾದ ತನ್ನಲ್ಲೇ ವ್ಯಾಪ್ತನಾಗಿರುವ ನಿನ್ನನ್ನು ಕಾಣದೆ ಅನೇಕ ವರ್ಷಗಳಲ್ಲಿ ಜಲದಲ್ಲಿ ಮುಳುಗಿ ಅರಸುವನಾದರೂ ಎಲ್ಲಿಯೂ ನಿನ್ನನ್ನು ಕಾಣದೆ ಹೋದನು; (ಮನುಜನು ಬೀಜದ ದೆಸೆಯಿಂದ ಮೊಳೆ ಬೆಳೆದ ಮೇಲೆ ಬೀಜವನ್ನೆಂತು ಕಾಣುವದಿಲ್ಲವೋ ಹಾಗೆ ನಿನ್ನನ್ನು ಕಾಣಲಿಲ್ಲವು!) ಎಲೈ ಸ್ವಾಮಿಯೆ, ಆ ಬಳಿಕ ಹಿಂದಿರುಗಿಬಂದ ಬ್ರಹ್ಮದೇವನು ಆಶ್ಚರ್ಯಪಟ್ಟು ಪುನಃ ನಿನ್ನ ನಾಭೀಕಮಲವನ್ನಾಶ್ರಯಿಸಿ ಬಹುಕಾಲ ತೀವ್ರವಾದ ತಪಸ್ಸಂಗೈದು ಪರಿಶುದ್ಧಮನಸ್ಕನಾಗಿ ಭೂತೇಂದ್ರಿಯ ಮನೋಮಯನಾದ ತನ್ನಲ್ಲಿ ನಿನ್ನನ್ನು ಭೂಮಿಯಲ್ಲಿ ಸೂಕ್ಷ್ಮವಾದ ಗಂಧದೋಪಾದಿಯಲ್ಲಿ ವ್ಯಾಪ್ತನಾದವನನ್ನಾಗಿ ನೋಡಿ

ದನು; ಅಪರಿಮಿತಗಳಾದ ಮುಖಗಳೂ ಪಾದಗಳೂ ಶಿರಸ್ಸುಗಳೂ ಹಸ್ತಗಳೂ ತೊಡೆಗಳೂ ನಾಸಿಕಗಳೂ ಬಾಯಿಗಳೂ ಕಿವಿಗಳೂ ನೇತ್ರಗಳೂ ಆಭರಣಾಯುಧಾದಿಗಳೂ ಉಳ್ಳವನಾಗಿ ಮಾಯಾಮಯನಾದ ಚತುರ್ದಶ ಲೋಕಗಳಿಂದ ಕಲ್ಪಿತಗಳಾದ ಪಾದಾದಿ ಅವಯವಗಳುಳ್ಳ ಮಹಾಪುರುಷನಾದ ನಿನ್ನನ್ನು ನೋಡಿ ಬ್ರಹ್ಮನು ಸಂತೋಷವನ್ನೈದಿದನು! ಎಲೈ ಸ್ವಾಮಿಯೆ, ನೀನು ಕಮಲಸಂಭವನಿಗೆ ದ್ರೋಹವನ್ನು ಮಾಡಲಿಚ್ಛೈಸಿದ ರಜಸ್ತಮಃಪ್ರಕೃತಿಗಳಾದ ಮಧುಕೈಟಭರನ್ನು ಸಂಹರಿಸಿ ಹಯಗ್ರೀವಾವತಾರವನ್ನು ತಾಳ್ದು ಬ್ರಹ್ಮನಿಗೋಸ್ಕರ ವೇದಸಮೂಹಗಳನ್ನು ಉಪದೇಶಂಗೈದಕಾರಣ ನಿನ್ನನ್ನು ಸತ್ವಮೂರ್ತಿಯೆಂದು ತಿಳಿಯುತಲಿರ್ಪರು! ಎಲೈ ಸ್ವಾಮಿಯೆ, ಈಪ್ರಕಾರವಾಗಿ ಮನುಷ್ಯರೂಪನಾಗಿಯೂ ತಿರ್ಯಗ್ರೂಪನಾಗಿಯೂ ದೇವರೂಪನಾಗಿಯೂ ಮತ್ಸ್ಯರೂಪನಾಗಿಯೂ ಅವತಾರಂಗೈದು ಲೋಕಗಳನ್ನು ಪಾಲನಂಗೈಯುತ್ತೀಯೆ; ಜಗದುಪದ್ರವಕಾರಿಗಳಾದವರನ್ನು ಸಂಹರಿಸುತ್ತೀಯೆ! ಎಲೈ ಮಹಾಪುರುಷನೆ, ಯುಗಾನುಸಾರವಾದ ಧರ್ಮವನ್ನು ಪಾಲಿಸುತ್ತೀಯೆ; ಕಲಿಯುಗದಲ್ಲಿ ಮರೆಯಾಗಿರುವೆಯಾದಕಾರಣ ನೀನು ತ್ರಿಯುಗನೆನಿಸಿಕೊಂಬೆಯು! ಎಲೈ ಸ್ವಾಮಿಯೆ, ವೈಕುಂಠಾಧಿಪತಿಯೆ, ಬಹಿರ್ಮುಖವಾದ ತಡೆಯಲಶಕ್ಯವಾದ ಹರ್ಷ ಶೋಕ ಭಯಗಳಿಂದಲೂ ಈಷಣತ್ರಯದಿಂದಲೂ ಖಿನ್ನವಾದ ದುಷ್ಟಸ್ವಭಾವವುಳ್ಳ ಪಾಪಿಷ್ಠವಾದ ಅತಿ ತೀವ್ರವಾದ ಕಾಮಾತುರವಾದ ಮನಸ್ಸು ನಿನ್ನ ಕಥೆಗಳಲ್ಲಿ ಸಂತೋಷವನ್ನೈದುವದಿಲ್ಲ; ಮನಸ್ಸು ಈಪ್ರಕಾರವಾಗುತಿರಲು ದೀನನಾದ ನಾನು ನಿನ್ನ ತತ್ವವನ್ನೆಂತು ವಿಚಾರಂಗೈವೆನು! ಎಲೈ ಸ್ವಾಮಿಯಾದ ಅಚ್ಯುತನೆ, ನಾಲಿಗೆಯು ಮಧುರಾದಿ ರಸಗಳನ್ನು ಬಾರಿಬಾರಿಗೂ ಸೇವಿಸಿದಾಗ್ಯೂ ತೃಪ್ತಿಯಿಲ್ಲದೆ ರಸಗಳಲ್ಲಿಯೋ ಆಕಡೆಗೆ ಶೆಳೆಯುತಲಿರ್ಪೆ; ಉದರವು ಹಸಿವಿನಿಂದ ಆತುರವಾಗಿ ಮತ್ತೊಂದುಕಡೆಗೆ ಶೆಳೆಯುತಲಿರ್ಪೆ; ಮೇಢ್ರವು ಬೇರೊಂದು ಕಡೆಗೆ ಶೆಳೆಯುತಲಿರ್ಪೆ; ಶ್ರೋತ್ರಗಳು ಮತ್ತೊಂದುಕಡೆಗೆ ಹೋಗುವವು; ನಾಶಿಕವು ಗಂಧವನ್ನು ಕುರಿತು ಓಡುತಲಿರ್ಪೆ; ಚಪಲಗಳಾದ ನೇತ್ರಗಳು ರೂಪವನ್ನಾಶ್ರಯಿಸಿ ಧಾವನಂಗೈವವು; ಈತೆರದಿಂದ ಕರ್ಮೇಂದ್ರಿಯಗಳು ಒಬ್ಬನಾದ ಪತಿಯನ್ನು ಅನೇಕ ಸ್ತ್ರೀಯರುಗಳು ಹ್ಯಾಗೆ ನಾನಾಕಡೆಗೆ ಶೆಳೆಯುವರೊ ಹಾಗೆ ಶೆಳೆಯುವವು! ಎಲೈ ಮಾಯಾತೀತನಾದ ಸ್ವಾಮಿಯೆ, ಈ ಸಂಸಾರವೆಂಬ ವೈತರಣೀನದಿಯಲ್ಲಿ ತಮ್ಮ ಕರ್ಮದಿಂದ ಬಿದ್ದು ತೊಳಲುವ ನಾನಾವಿಧ ಜನ್ಮವಿಲಯಾದಿಗಳಿಂದ ಅತಿ ಭೀತರಾಗಿ ಸ್ವಪರದೇಹಗಳಲ್ಲಿ ಮಿತ್ರ, ಶತೃಭಾವವುಳ್ಳ ವಿವೇಕಶೂನ್ಯರಾದ ಜನರನ್ನು ನೀನೇ ರಕ್ಷಿಸು! ಎಲೈ ಸ್ವಾಮಿಯೆ, ಸರ್ವೋತ್ತಮನೆ, ಪ್ರಪಂಚದ ಸೃಷ್ಟಿ ಸ್ಥಿತಿ ವಿಲಯಗಳನ್ನು ಲೀಲಾಮಾತ್ರದಿಂದ ಮಾಡುವ ನಿನಗೆ ಈ ಸರ್ವಜನದ ಉದ್ಧಾರವು ಪ್ರಯಾಸವೆ! ಎಲೈ ಆರ್ತಬಂಧುವಾದ ಸ್ವಾಮಿಯೆ, ಮೂಢರಲ್ಲಿ ಅನುಗ್ರಹವನ್ನು ಮಾಡುವದೇ ಮಹಾತ್ಮರ ಲಕ್ಷಣವು; ನಿರಂತರವೂ ಸೇವಕರಾದ ನಮ್ಮನ್ನು ಪಾಲಿಸುವದರಿಂದೇನು! ಎಲೈ ಸ್ವಾಮಿಯೆ, ಸರ್ವೋತ್ತಮನಾದ ಪರಮಪುರುಷನೆ, ನಿನ್ನ ಮಾಹಾತ್ಮ್ಯವರ್ಣನವೆಂಬ ಮಹಾಮೃತದಲ್ಲಿ ಮುಳುಗಿದ ಮನಸ್ಸುಳ್ಳ ನಾನು ಸಂಸಾರವೆಂಬ ವೈತರಣೀದೆಶೆಯಿಂದ ಭಯಪಡುವದಿಲ್ಲ; ಈ ಅಮೃತದದೆಶೆಯಿಂದ ವಿಮುಖವಾದ ಮನಸ್ಸುಳ್ಳವರಾಗಿ ಇಂದ್ರಿಯಗಳ ನಿಮಿತ್ತವಾಗಿ ಮಾಯಾಸುಖಕ್ಕೋಸ್ಕರ ಕುಟುಂಬಭಾರವನ್ನು ವಹಿಸಿರುವ ಮೂಢರನ್ನು ಕುರಿತು ಚಿಂತೆಪಡುತಲಿರ್ಪೆನೆ! ಎಲೈ ಸ್ವಾಮಿಯೆ, ಬಹುತರವಾಗಿ ಮುನಿಗಳು ತಮ್ಮ ಮುಕ್ತಿಯನ್ನಪೇಕ್ಷಿಸುತ ನಿರ್ಜನವಾದ ವನದಲ್ಲಿ ಸಂಚರಿಸುವರೇ ಹೊರ್ತು ಪರರನ್ನು ಅನುಗ್ರಹಿಸಲೋಸುಗ ಸಂಚರಿಸುವರಲ್ಲ; ಆದಕಾರಣ ಇವರನ್ನು ಬಿಟ್ಟು ನಾನು ನಿನ್ನೊಬ್ಬನನ್ನೇ ಶರಣುಹೊಂದಿರ್ಪೆನೆಯಾದಕಾರಣ ನಿನ್ನನ್ನು ಬಿಡಲಿಚ್ಛೈಸುವದಿಲ್ಲ; ಈ ಸಮಸ್ತ ಜನರಿಗೂ ನಿನ್ನನ್ನುಹೊರ್ತಾಗಿ ಮತ್ತೊಬ್ಬ ರಕ್ಷಕನನ್ನು ಕಾಣೆನು! ಎಲೈ ಸ್ವಾಮಿಯೆ, ಈ ತುಚ್ಛರಾದ ಸಂಸಾರಿಗಳ ಮಿಥುನೀಭಾವವೇ ಮೊದಲಾದ ಸುಖವು ತುರಿಹತ್ತಿದ ಕೈ ಮೊದಲಾದ ಅವಯವಗಳನ್ನು ತುರಿಸುವದರಿಂದ ತತ್ಕಾಲದಲ್ಲಿ ಸುಖಭ್ರಾಂತಿಯಿದ್ದರೂ ಪರಿಣಾಮದಲ್ಲಿ ಎಂತು ಅತ್ಯಂತ ದುಃಖವೋ ಆತೆರದಿಂದ ದುಃಖಕರವು; ಈಮೇರೆ ದುಃಖವಿದ್ದಾಗ್ಯೂ ಬುದ್ಧಿಯಿಲ್ಲದೆ ಬಾರಿಬಾರಿಗೂ ದುಃಖಪಡುವರಾದಾಗ್ಯೂ ಕಾಮಾಸಕ್ತರಾದಕಾರಣ ಸಾಕೆಂದು ಬಿಡುವದಿಲ್ಲ; ಕೆಲವರು ನವೆಯನ್ನು ಸಹಿಸುವಂತೆ ನಿನ್ನ ಕೃಪೆಯಿಂದ ಕಾಮವನ್ನು ಸಹಿಸುವರು! ಎಲೈ ಪರಮಪುರುಷನಾದ ಸ್ವಾಮಿಯೆ, ಮೌನವು ವ್ರತವು ತಪಸ್ಸು ವೇದಶಾಸ್ತ್ರಗಳು

ಅಧ್ಯಯನವು ಸ್ವಧರ್ಮವು ವ್ಯಾಖ್ಯಾನವು ಏಕಾಂತಸ್ಥಿತಿಯು ಜಪವು ಸಮಾಧಿಯು ಈ ಹತ್ತೂ ಮೋಕ್ಷಕ್ಕೆ ಕಾರಣಗಳೆಂದು ಪ್ರಸಿದ್ಧವು; ಇಂದ್ರಿಯಗಳ ಭೋಗಾರ್ಥವಾಗಿ ಕ್ರೀಡಿಸುವ ಡಾಂಭಿಕರಿಗೆ ಇವೇ ಜೀವನೋಪಾಯಗಳಾಗುವವು; ಬೀಜಾಂಕುರಗಳಂತೆ ಪ್ರವಾಹರೂಪಗಳಾದ ಈ ಕಾರ್ಯಕಾರಣಗಳು ಯಾವವೋ ಅವೇ ಅಪ್ರಾಕೃತರೂಪನಾದ ನಿನ್ನ ರೂಪಗಳು; ಎರಡುಕಡೆಯಲ್ಲಿಯೂ ಯುಕ್ತರಾದವರು ಮಥನದ ಬೆಸೆಯಿಂದ ದಾರುವಿನಲ್ಲಿ ವಹ್ನಿಯಂತೆ ಕಾರ್ಯಕಾರಣಗಳಲ್ಲಿ ಅನುಗತನಾದ ನಿನ್ನನ್ನು ಭಕ್ತಿಯೋಗದಿಂದ ನೋಡುವರು! ಎಲೈ ಸ್ವಾಮಿಯೆ, ನೀನೇ ವಾಯುವು ಅಗ್ನಿಯು ಭೂಮಿಯು ಆಕಾಶವು ಜಲವು ಮಾತ್ರೆಗಳು ಪ್ರಾಣಗಳು ಇಂದ್ರಿಯಗಳು ಮನಸ್ಸು ಚಿತ್ತವು ಅಹಂಕಾರವು ಸ್ಥೂಲವು ಸೂಕ್ಷ್ಮವು; ಮನಸ್ಸಿನಿಂದಲೂ ವಚನಂಗಳಿಂದಲೂ ಪ್ರಕಾಶಿಸಲ್ಪಟ್ಟದ್ದು ಯಾವದುಂಟೋ ಅದೆಲ್ಲವೂ ನೀನೇ; ನಿನಗಿಂತಲೂ ಅನ್ಯವಾದದ್ದೊಂದೂ ಇಲ್ಲ; ಸಮಸ್ತಗಳಾದ ಗುಣಗಳೂ ಗುಣಾದ್ಯಭಿಮಾನಿದೇವತೆಗಳೂ ಮಹದಾದಿಗಳೂ ಮನಸ್ಸೇ ಮೊದಲಾದವೂ ದೇವತೆಗಳೂ ಮರ್ತ್ಯರೂ ಜಡೋಪಾಧಿವುಳ್ಳವರಾದಕಾರಣ ಆದ್ಯಂತವುಳ್ಳವರು! ಎಲೈ ಅತಿಶಯವಾದ ಕೀರ್ತಿಯುಳ್ಳ ಸ್ವಾಮಿಯೆ, ಸರ್ವವೂ ನಿರುಪಾಧಿಕನಾದ ನಿನ್ನನ್ನರಿಯಲಾರದು; ಆದಕಾರಣ ವಿದ್ವಾಂಸರು ವಿಚಾರಿಸಿ ಅಧ್ಯಯನಾದಿ ವ್ಯಾಪಾರವನ್ನು ಬಿಟ್ಟು ಸಮಾಧಿಯಿಂದ ನಿನ್ನನ್ನೇ ಉಪಾಸನಂಗೈಯುತಲಿರ್ಧಾರೆ! ಎಲೈ ಪೂಜ್ಯನಾದ ಸ್ವಾಮಿಯೆ, ನಮಸ್ಕಾರ ಸ್ತೋತ್ರ ಕರ್ಮಸಮರ್ಪಣಗಳು ಶೇವೆಯು ನಿನ್ನ ಚರಣಸ್ಮರಣೆಯು ಕಥಾಶ್ರವಣವು ಈಪ್ರಕಾರವಾದ ಷಡಂಗಶೇವೆಯಿಂದ ಹೊರ್ತಾಗಿ ಪರಮಹಂಸನಾದ ಪ್ರಾಪ್ಯನಾದ ನಿನ್ನಲ್ಲಿ ಜನರು ಭಕ್ತಿಯನ್ನೆಂತು ಪಡದಾರು; ಆದಕಾರಣ ಭಕ್ತಿಯಿಲ್ಲದೆ ಮೋಕ್ಷದೊರೆಯದು; ಆ ಭಕ್ತಿಯು ಶೇವೆಹೊರ್ತಾಗಿ ಉಂಟಾಗದು; ಆದಕಾರಣ ಮುಂಚಿತವಾಗಿ ನಿನ್ನ ದಾಸ್ಯಯೋಗವನ್ನೇ ಕೊಡು' ಎಂದು ವಿಜ್ಞಾಪಿಸಿದನು!

"ಭಕ್ತನಾದ ಪ್ರಹ್ಲಾದನಿಂದ ಈಪರ್ಯಂತವಾಗಿ ಭಕ್ತಿಯಿಂದ ವರ್ಣಿಸಲ್ಪಟ್ಟ ಗುಣಗಳುಳ್ಳ ನಿರ್ಗುಣನಾದ ಶ್ರೀನೃಸಿಂಹನು ನಮಸ್ಕರಿಸಿ ಪ್ರಾರ್ಥಿಸುವ ಪ್ರಹ್ಲಾದನಲ್ಲಿ ಸುಪ್ರೀತನಾಗಿ ಕೋಪವನ್ನು ಬಿಟ್ಟು 'ಎಲೈ ಅಸುರರಲ್ಲಿ ಉತ್ತಮನಾದ ಮಂಗಳಕರನಾದ ಪ್ರಹ್ಲಾದನೆ, ನಿನಗೆ ಮಂಗಳವಾಗಲಿ; ನಿನ್ನಲ್ಲಿ ಪ್ರಿಯವುಳ್ಳವನಾದೆನು; ನಾನು ಸರ್ವಜನರಿಗೂ ಅಭೀಷ್ಟವನ್ನು ಪೂರಣಂಗೈಯುವನಾದಕಾರಣ ಬೇಕಾದ ವರವನ್ನು ವರಿಸು! ಎಲೈ ಆಯುಷ್ಮಂತನಾದ ಪ್ರಹ್ಲಾದನೆ, ನನ್ನನ್ನು ಕುರಿತು ಭಕ್ತಿಯನ್ನು ಮಾಡದವನಿಗೆ ನನ್ನ ದರ್ಶನವು ದುರ್ಲಭವು; ಯಾವ ಪ್ರಾಣಿಯಾದರೂ ನನ್ನ ದರ್ಶನಂಗೈದವನು ಪೂರ್ಣಕಾಮನಾಗಿ ಶೋಭಿಸುವನು; ಬುದ್ಧಿಶಾಲಿಗಳಾದ ಸಾಧುಗಳು ಸರ್ವಭಾವದಿಂದ ನನ್ನನ್ನು ಸಂತೋಷಪಡಿಸುವರು; ಶ್ರೇಯಸ್ಕಾಮರಾದ ಮಹಾಭಾಗ್ಯವಂತರು ಸಮಸ್ತೇಷ್ಟಾರ್ಥಗಳನ್ನು ಈವ ನನ್ನನ್ನು ಭಜಿಸುವರು' ಎಂದು ಈಪ್ರಕಾರವಾಗಿ ಸರ್ವೋತ್ತಮನಿಂದ ಲೋಕೋತ್ತರಗಳಾದ ವರಗಳಿಂದ ಪ್ರಲೋಭನಂಗೈಯಲ್ಪಟ್ಟವನಾದಾಗ್ಯೂ ಭಗವಂತನಲ್ಲಿ ನಿರುಪಾಧಿಕ ಭಕ್ತಿಯುಳ್ಳವನಾದಕಾರಣ ಅಸುರೋತ್ತಮನು ಆ ವರಗಳನ್ನು ಅಪೇಕ್ಷಿಸಲಿಲ್ಲ" ಎಂದು ನುಡಿದನು.

೧೦ನೇ ಅಧ್ಯಾಯ.

ಶ್ರೀನೃಸಿಂಹನು ಭಕ್ತನಾದ ಪ್ರಹ್ಲಾದನನ್ನು ಅನುಗ್ರಹಿಸಿದ್ದು.

"ಎಲೈ ಅರಸೆ, ಬಾಲಕನಾದ ಪ್ರಹ್ಲಾದನು ವರಗಳನ್ನು ಬೇಡಿಕೊಂಬುವದು ಭಕ್ತಿಯೋಗಕ್ಕೆ ವಿಘ್ನವೆಂದು ತಿಳದು ಸಂತೋಷದಿಂದ ಹರಿಯನ್ನು ಕುರಿತು 'ಎಲೈ ಸ್ವಾಮಿಯೆ, ಸ್ವಭಾವದಿಂದಲೇ ಕಾಮಗಳಲ್ಲಿ ಆಸಕ್ತನಾದ ನನಿಗೆ ವರಗಳನ್ನು ಕೊಟ್ಟು ನೀನು ಪುನಃ ಸಂಸಾರಬಂಧವನ್ನುಂಟುಮಾಡಬೇಡ; ಆ ಕಾಮಗಳ ಸಂಗತಿಯ ದೆಶೆಯಿಂದ ಭೀತನಾಗಿ ದೀನನಾದ ನಾನು ಮೋಕ್ಷೇಚ್ಛೆಯುಳ್ಳವನಾಗಿ ನಿನ್ನನ್ನೇ ಆಶ್ರಯಿಸಿರ್ಧೇನೆ! ಎಲೈ ಸ್ವಾಮಿಯೆ,

ನೀನು ದಾಸನಾದ ನನ್ನ ಲಕ್ಷಣವನ್ನು ತಿಳಿಯಲಿಚ್ಛೆಯುಳ್ಳವನಾಗಿ ಹೃದಯಗ್ರಂಥಿರೂಪಗಳಾದ ಸಂಸಾರವೆಂಬವೃಕ್ಷಕ್ಕೆ ಬೀಜಗಳಾದ ಕಾಮಗಳಲ್ಲಿ ಪ್ರೇರಿಸುವನಾದೆ! ಎಲೈ ಸರ್ವಲೋಕೇಶ್ವರನಾದ ಭಗವಂತನೆ, ಹೀಗಲ್ಲದಿದ್ದರೆ ಕರುಣಾಕರನಾದ ನಿನಗೆ ಭಕ್ತನಾದ ನನ್ನನ್ನು ಕುರಿತು ಅನರ್ಥಕ್ಕೆ ಸಾಧನಗಳಾದ ಈ ಕಾಮಗಳಲ್ಲಿ ವರಗಳನ್ನು ಬೇಡಿಕೋ ಎಂಬ ಈ ಪ್ರೇರಣೆಯು ಭೃತ್ಯರಾದ ನಮ್ಮ ಬುದ್ಧಿಪರೀಕ್ಷಾರ್ಥವಾಗಿಯೇ ಹೊರ್ತು ವರಪ್ರದಾನಾದಿಗಳಿಂದ ನಮ್ಮನ್ನು ವಂಚಿಸಿ ಪುನಃ ಸಂಸಾರಬದ್ಧರನ್ನಾಗಿ ಮಾಡುವದಕ್ಕೋಸ್ಕರವಲ್ಲ; ಅಧಿಕವಾದ ಕತ್ತಲೆಯಲ್ಲಿ ನಷ್ಟವಾದ ದೃಷ್ಟಿಯುಳ್ಳವನಂತೆ ಸಂಸಾರ ಸಮುದ್ರದಲ್ಲಿ ತೊಳಲುವ ಜನರನ್ನು ತಡಿಯನ್ನು ಸೇರಿಸುವನೇ ನೀನು; ಯಾವ ಭೃತ್ಯನು ಸ್ವಾಮಿಯುದೆಸೆಯಿಂದ ಕಾಮಗಳನ್ನಪೇಕ್ಷಿಸುವನೋ ಅವನು ಭೃತ್ಯನಲ್ಲ; ಅವನು ವೈಶ್ಯನಂತೆ ಸ್ವಕಾರ್ಯವೇ ಮುಖ್ಯವಾಗುಳ್ಳವನು; ಕಾಮಾಭಿಲಾಷೆಯಿಲ್ಲದೆ ಗುಣಗಳಲ್ಲಿ ಆಸಕ್ತನ್ಯಾರೋ ಅವನೇ ಭೃತ್ಯನು; ಆ ಭೃತ್ಯನ ಗುಣಗಳಲ್ಲೇ ಪಕ್ಷಪಾತವುಳ್ಳವನೇ ಸ್ವಾಮಿ; ಹೀಗಲ್ಲದಿದ್ದರೆ ಸೋಪಾಧಿಕ ಸೇವ್ಯ ಸೇವಕಭಾವವೇ ಹೊರ್ತು ಪ್ರಾಮಾಣಿಕಗಳಲ್ಲ; ನಿನ್ನ ಭಕ್ತನಾದ ನಾನು ಕಾಮಾಪೇಕ್ಷೆವುಳ್ಳವನಲ್ಲ; ನೀನು ಸೇವೆಯನ್ನೇ ಅಪೇಕ್ಷಿಸಿ ರಕ್ಷಿಸುವ ಸ್ವಾಮಿಯಲ್ಲ; ಆದ್ದರಿಂದ ಲೋಕದಲ್ಲಿ ರಾಜಸೇವಕರಂತೆ ನಮ್ಮ ಸ್ವಾಮಿ ಭೃತ್ಯಭಾವವು ಸೋಪಾಧಿಕವಲ್ಲ; ಸಾತ್ವಿಕವೆಂದು ತಿಳಿವೆನು! ಎಲೈ ವರಗಳನ್ನು ಕೊಡುವದರಲ್ಲಿ ಶ್ರೇಷ್ಠನಾದ ಸ್ವಾಮಿಯೆ, ನೀನು ನನಿಗೆ ಇಷ್ಟಾರ್ಥಗಳನ್ನು ಕೊಡುವನಾದರೆ ನನ್ನ ಹೃದಯದಲ್ಲಿ ಕಾಮಗಳು ಹುಟ್ಟದಂತೆ ನಿನ್ನದೆಸೆಯಿಂದ ವರವನ್ನು ಬೇಡುವೆನು; ಯಾವ ಕಾಮದ ಉತ್ಪತ್ತಿಯಲ್ಲಿ ಇಂದ್ರಿಯಗಳೂ ಮನಸ್ಸೂ ಪ್ರಾಣಗಳೂ ದೇಹವೂ ಧರ್ಮವೂ ಧೈರ್ಯವೂ ಮತಿಯೂ ಲಜ್ಜೆಯೂ ಲಕ್ಷ್ಮಿಯೂ ತೇಜಸ್ಸೂ ಸ್ಮೃತಿಯೂ ಸತ್ಯವೂ ಇವೆಲ್ಲವೂ ನಾಶವನ್ನೈದುವವೋ ಅಂಥಾ ಕಾಮಗಳನ್ನುನನಿಗೆ ಹುಟ್ಟದಂತೆ ಮಾಡು! ಕೇಳೈ ಪುಂಡರೀಕಾಕ್ಷನೆ, ಯಾವಾಗ ಮನುಷ್ಯನು ಮನಸ್ಸಿನಲ್ಲಿರುವ ಕಾಮಗಳನ್ನು ಬಿಡುವನೋ ಆಗ ಭಗವಂತನಿಗೆ ಸಮಾನವಾದ ಐಶ್ವರ್ಯವುಳ್ಳವನಾಗುವನು! ಎಲೈ ಅವ್ಯಾಹತ ಷಡ್ಗುಣೈಶ್ವರ್ಯಸಂಪನ್ನನಾದ ಪರಮಪುರುಷನಾದ ಮಹಾತ್ಮನಾದ ಪರಮಾದ್ಭುತಸಿಂಹನಾದ ಪರಬ್ರಹ್ಮನಾದ ಪರಮಾತ್ಮನಾದ ಶ್ರೀಹರಿಯೆ, ನಿನಗೋಸ್ಕರ ನಮಸ್ಕಾರವು' ಎಂದು ವಿಜ್ಞಾಪನಂಗೈದು ನಮಸ್ಕರಿಸಿದನು.

“ಆ ಬಳಿಕ ಶ್ರೀ ನೃಸಿಂಹಸ್ವಾಮಿಯು ಪ್ರಹ್ಲಾದನನ್ನು ಕುರಿತು ‘ಎಲೈ ಪ್ರಹ್ಲಾದನೆ, ಏಕಾಂತಭಕ್ತರಾದ ನಿನ್ನಂಥಾವರು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಕಾಮಭೋಗಗಳನ್ನಿಚ್ಛೈಸುವದಿಲ್ಲ; ಆದಾಗ್ಯೂ ಈ ಮನ್ವಂತರದಲ್ಲಿಮಾತ್ರ ದೈತ್ಯೇಂದ್ರರ ರಾಜ್ಯವನ್ನಾಳುತ ನಾನಾವಿಧಗಳಾದ ಭೋಗಗಳನ್ನನುಭವಿಸು; ಸಮಸ್ತಪ್ರಾಣಿಗಳಲ್ಲೂ ವಾಸಂಗೈವ ಸರ್ವೇಶ್ವರನಾದ ನನ್ನನ್ನು ಮನಸ್ಸಿನಲ್ಲಿ ಧ್ಯಾನಂಗೈಯ್ಯುತ ಯಜ್ಞಗಳನ್ನು ಮಾಡಿ ಆ ಯಜ್ಞಾದಿ ಕರ್ಮಗಳ ಫಲವನ್ನು ನನ್ನಲ್ಲಿ ಅರ್ಪಣಂಗೈದು ನನ್ನ ಲೀಲೆಗಳನ್ನು ಕೇಳುತ ಪೂಜಿಸು; ಸುಖಾನುಭವದಿಂದ ಪ್ರಾರಬ್ಧವಾದ ಪುಣ್ಯವನ್ನು ಬಿಟ್ಟು ಉತ್ತಮವಾದ ಪುಣ್ಯಾಚರಣೆಯಿಂದ ಪಾಪವನ್ನುತ್ಯಜಿಸಿ ಸುರಲೋಕದಲ್ಲಿ ಗಾನಂಗೈಯ್ಯಲ್ಪಟ್ಟ ಕೀರ್ತಿಯನ್ನು ವಿಸ್ತಾರಂಗೈಯ್ಯುತ ಅನಂತರದಲ್ಲಿ ಅನಾಯಾಸದಿಂದ ಶರೀರವನ್ನು ಬಿಟ್ಟು ಬಿಡಲ್ಪಟ್ಟ ಬಂಧವುಳ್ಳವನಾಗಿ ನನ್ನನ್ನೈದುತ್ತೀಯೆ! ಕೇಳು ಬಾಲಕನಾದ ಪ್ರಹ್ಲಾದನೆ, ನಿನ್ನನ್ನೂ ನನ್ನನ್ನೂ ಸಹಾ ಸ್ಮರಿಸುವನಾಗಿ ಯಾವ ಪುರುಷನು ನಿನ್ನಿಂದ ರಚಿತವಾದ ನನ್ನ ಸ್ತೋತ್ರವನ್ನು ಪಠನಂಗೈವನೋ ಆ ಪುರುಷನು ಕರ್ಮಬಂಧದಿಂದ ಮುಕ್ತನಾಗುವನು' ಎಂದು ಆಜ್ಞಾಪಿಸಿದನು.

“ಪ್ರಹ್ಲಾದನು ‘ಎಲೈ ಮಹೇಶ್ವರನೆ, ನನ್ನ ತಂದೆಯು ಈಶ್ವರನಾದ ನಿನ್ನ ಸಂಬಂಧಿಯಾದ ತೇಜಃಪ್ರಭಾವವುಳ್ಳವನಾಗಿ ನಿನ್ನನ್ನು ನಿಂದಿಸಿದನು; ಇಷ್ಟುಮಾತ್ರವೇ ಅಲ್ಲ; ಸರ್ವಲೋಕಗುರುವಾದ ಸಾಕ್ಷಾದ್ಭಗವಂತನಾದ ನಿನ್ನನ್ನು ತನ್ನ ಭ್ರಾತೃವಾದ ಹಿರಣ್ಯಾಕ್ಷನನ್ನು ಸಂಹರಿಸಿದವನನ್ನಾಗಿ ತಿಳಿದು ಅತಿ ಕೋಪದಿಂದ ವ್ಯಾಪ್ತವಾದ ಹೃದಯವೂ ಮಿಥ್ಯಾದೃಷ್ಟಿಯೂ ಉಳ್ಳವನಾಗಿ ನಿನ್ನ ಭಕ್ತನಾದ ನನ್ನಲ್ಲಿಯೂ ದ್ರೋಹವನ್ನು ಮಾಡಿದನು!

ಎಲೈ ದೀನವತ್ಸಲನಾದ ಸ್ವಾಮಿಯೆ, ಇಂಥಾ ನನ್ನ ತಂದೆಯು ನಿನ್ನ ಕಟಾಕ್ಷ ವೀಕ್ಷಣದಿಂದ ಪರಿಶುದ್ಧನಾಗಿಧಾನೆ; ಆದಾಗ್ಯೂ ನಿನ್ನಲ್ಲಿ ಮಾಡಲ್ಪಟ್ಟ ದ್ರೋಹದಿಂದುಂಟಾದ ಮಹಾ ಪಾಪದದೆಶೆಯಿಂದ ನನ್ನ ತಂದೆಯನ್ನು ಉತ್ತಾರಣಂಗೈಯುವನಾಗು! ಎಲೈ ವರಪ್ರದರಲ್ಲಿ ಶ್ರೇಷ್ಠನಾದ ಸ್ವಾಮಿಯೆ, ನೀನು ನನಗೆ ವರಗಳನ್ನು ಕೊಡುವನಾದರೆ ಈ ವರವೇ ನನಗೆ ಸಾಕು' ಎಂದು ಪ್ರಾರ್ಥಿಸಿದನು.

"ಆಗ ನರಹರಿಯು 'ಎಲೈ ಸಾಧುವಾದ ಪ್ರಹ್ಲಾದನೆ, ಯಾವಕಾರಣದಿಂದ ಲೋಕಪಾವನನಾದ ನೀನು ಈ ಹಿರಣ್ಯಕಶಿಪುವಿನ ಮನೆಯಲ್ಲುದ್ಭವಿಸಿದೆಯೋ ಅದುಕಾರಣ ನಿನ್ನ ತಂದೆಯು ಸಾಂಪ್ರತ ಕಾಣಲ್ಪಡುವ ಕಶ್ಯಪ ಮರೀಚಿ ಬ್ರಹ್ಮರೆಂಬ ಪಿತೃತ್ರಯವಲ್ಲದೆ ಪ್ರಾಕಲ್ಪದ ಪಿತೃಗಳು ಸಹಾ ಇಪ್ಪತ್ತೊಂದು ಮಂದಿ ಪಿತೃಗಳೊಡನೆ ಪವಿತ್ರನಾದನು; ಎಲ್ಲೆಲ್ಲಿ ಪ್ರಶಾಂತರಾದ ಸಮದರ್ಶಿಗಳಾದ ಸಾಧುಗಳಾದ ಉತ್ತಮಾಚಾರವುಳ್ಳ ನನ್ನ ಭಕ್ತರಿರುವರೋ ಅವರು ಕೀಕಟದೇಶಗಳನ್ನೂ ಪಾವನಂಗೈವರು! ಎಲೈ ದೈತ್ಯೇಂದ್ರನೆ, ನನ್ನಲ್ಲಿ ಭಕ್ತಿಯಿಂದ ನಿಸ್ಪೃಹರಾದ ಭಕ್ತರು ಅನೇಕರೂಪಿಗಳಾದ ಪ್ರಾಣಿಗಳಲ್ಲಿ ಸ್ವಲ್ಪವನ್ನಾದರೂ ಸರ್ವಪ್ರಕಾರದಿಂದಲೂ ಹಿಂಸೆಯನ್ನು ಮಾಡರು; ನಿನ್ನನ್ನನುಸರಿಸಿದ ಇನ್ನು ಕೆಲವರು ನಿನ್ನಂಥಾ ಲಕ್ಷಣವುಳ್ಳ ಭಕ್ತರ್ಯಾರುಂಟೋ ಅವರೆಲ್ಲರಿಗೂ ನೀನು ಉಪಮಾನಕ್ಕೆ ಆಶ್ರಯನು; ನನ್ನ ಅಂಗಸ್ಪರ್ಶದಿಂದ ಸರ್ವತಃ ಪಾವನನಾದ ನಿನ್ನ ತಂದೆಗೆ ಪಾಪವೆಲ್ಲಿಯದು; ಆದಾಗ್ಯೂ ಸತ್ಪುತ್ರನಾದ ನೀನು ಪ್ರೇತನಾದ ತಂದೆಗೆ ಮಾಡತಕ್ಕ ಪ್ರೇತಕೃತ್ಯಗಳನ್ನು ಮಾಡು; ಬ್ರಹ್ಮವೇತ್ತೃಗಳಿಂದ ಎಂತು ಪೇಳಲ್ಪಟ್ಟದೆಯೋ ಆಪ್ರಕಾರವಾಗಿ ತಂದೆಯ ಸಿಂಹಾಸನವನ್ನು ನನ್ನನ್ನು ಮನಸ್ಸಿನಲ್ಲಿಟ್ಟು ಈ ಸರ್ವವನ್ನೂ ನನಗೆ ಸಮರ್ಪಣಂಗೈದು ಸಮಸ್ತವಾದ ಕಾರ್ಯವನ್ನೂ ಮಾಡು' ಎಂದು ಭಗವಂತನಿಂದ ಆಜ್ಞಾಪಿಸಲ್ಪಟ್ಟ ಪ್ರಹ್ಲಾದನು ಅದೇಪ್ರಕಾರವಾಗಿ ತನ್ನ ತಂದೆಗೆ ಔರ್ಧ್ವದೈಹಿಕವ್ಯಾಪಾರವನ್ನು ಮಾಡಿ ಅನಂತರದಲ್ಲಿ ಬ್ರಾಹ್ಮಣೋತ್ತಮರಿಂದ ಯಥಾಶಾಸ್ತ್ರವಾಗಿ ಪಟ್ಟಾಭಿಷಿಕ್ತನಾಗಿ ನಿಷ್ಕಂಟಕವಾದ ರಾಜ್ಯವನ್ನು ಸುಖದಿಂದ ಆಳುತಿದ್ದನು.

"ಆ ಬಳಿಕ ಬ್ರಹ್ಮನು ಪ್ರಸನ್ನತೆಯಿಂದ ಸುಮುಖನಾದ ನರಹರಿಯಾದ ಶ್ರೀಹರಿಯನ್ನು ನೋಡಿ ಸಮಸ್ತ ದೇವತೆಗಳೊಡಗೂಡಿ ಪಾವನಗಳಾದ ವಾಕ್ಯಗಳಿಂದ 'ಎಲೈ ಪರಬ್ರಹ್ಮನಾದ ಕ್ರೀಡಾದಿಗುಣವಿಶಿಷ್ಟನಾದ ಸರ್ವೇಶ್ವರನಾದ ಅಂತರ್ಯಾಮಿಯಾದ ಪುರಾಣಪುರುಷನೆ, ಸಮಸ್ತ ಲೋಕವನ್ನು ಸಂತಾಪಪಡಿಸುವ ಈ ಮಹಾ ಅಸುರನು ಅಖಿಲಲೋಕವನ್ನು ರಕ್ಷಿಸಲೋಸುಗ ನಿನ್ನಿಂದ ಸಂಹೃತನಾದನು; ಈ ಅಸುರನು ನನ್ನಿಂದ ಲಬ್ಧವಾದ ವರವುಳ್ಳವನಾದಕಾರಣ ನನ್ನಿಂದ ಸೃಷ್ಟಿಸಲ್ಪಟ್ಟ ಪ್ರಾಣಿಗಳಿಂದ ಅವಧ್ಯನಾಗಿ ತಪೋ ಯೋಗ ಬಲಗಳಿಂದ ಕೊಬ್ಬಿದವನಾಗಿ ಸಮಸ್ತ ಧರ್ಮಗಳನ್ನೂ ನಡೆಯದಂತೆ ಮಾಡಿದನು; ಅಂಥಾ ಹಿರಣ್ಯಕಶಿಪುವು ನಿನ್ನಿಂದ ಸಂಹೃತನಾದದ್ದು ಮಹಾ ಸಂತೋಷವಾಯಿತು! ಎಲೈ ಸ್ವಾಮಿಯೆ, ಆ ಹಿರಣ್ಯಕಶಿಪುವಿನ ಪುತ್ರನಾದ ಸಾಧುವಾದ ಮಹಾ ಭಾಗವತನಾದ ಈ ಬಾಲಕನು ಮೃತ್ಯುಸ್ವರೂಪನಾಗಿ ಮಹಾ ಭಯಂಕರನಾದ ತಂದೆಯದೆಶೆಯಿಂದುಂಟಾದ ಭಯದ ದೆಶೆಯಿಂದ ಬಿಡಿಸಲ್ಪಟ್ಟದ್ದು ಅತ್ಯಂತ ಶುಭವು; ಈ ನಿನ್ನ ಶರೀರವನ್ನು ಧ್ಯಾನಂಗೈವ ಪರಿಶುದ್ಧವಾದ ಚಿತ್ತವುಳ್ಳ ಭಕ್ತನನ್ನು ಸಂಹರಿಸಲಿಚ್ಛೆಯಿಂದ ಬಂದ ಮೃತ್ಯುವಿನ ದೆಶೆಯಿಂದುಂಟಾದ ಭಯದ ದೆಶೆಯಿಂದ ರಕ್ಷಿಸಿದೆ' ಎಂದು ಸ್ತುತಿಸಿದನು.

"ಕೇಳೈ ಧರ್ಮರಾಯನೆ, ಈರೀತಿಯಿಂದ ಬ್ರಹ್ಮನು ವಿಜ್ಞಾಪನಂಗೈಯಲು ಶ್ರೀ ನೃಸಿಂಹನು 'ಎಲೈ ಪದ್ಮಸಂಭವನೆ, ಹಾವಿಗೆ ಹಾಲೆರದಂತೆ ಸ್ವಭಾವದಿಂದ ಕ್ರೂರರಾದ ಅಸುರರಿಗೆ ಈಮೇರಿಗೆ ಇಂಥಾ ವರವನ್ನು ಕೊಡಬಾರದು' ಎಂದು ಹೇಳಿ ಆ ಬ್ರಹ್ಮದೇವನಿಂದ ಪೂಜಿತನಾಗಿ ಅಲ್ಲೇ ಅಂತರ್ಧಾನವನ್ನೈದಿದನು. ಅನಂತರದಲ್ಲಿ ಪ್ರಹ್ಲಾದನು ಭಗವಂತನ ಅಂಶರೂಪರಾದ ಬ್ರಹ್ಮದೇವ ಪರಮೇಶ್ವರರನ್ನೂ ನವಪ್ರಜೇಶ್ವರರನ್ನೂ ಪೂಜೆಗೈದು ಶಿರಸ್ಸಿನಿಂದ ಪ್ರಣಾಮಂಗೈದನು; ಕಮಲಸಂಭವನು ಶುಕ್ರಾಚಾರ್ಯರೇ ಮೊದಲಾದ ಮುನಿಗಳೊಡನೆ ಸರ್ವರಾದ ದೈತ್ಯ

ದಾನವರಿಗೂ ಪ್ರಹ್ಲಾದನನ್ನು ಪತಿಯನ್ನಾಗಿ ಮಾಡಿ ಬ್ರಹ್ಮಾದಿಗಳಾದ ದೇವತೆಗಳು ಉತ್ಕೃಷ್ಟಗಳಾದ ಆಶೀರ್ವಾದಗಳನ್ನು ಮಾಡಿ ಅವನಿಂದ ಪೂಜಿಸಲ್ಪಟ್ಟು ತಮ್ಮ ತಮ್ಮ ಸ್ಥಾನಗಳನ್ನು ಹೊಂದಿದರು ; ಈಪ್ರಕಾರವಾಗಿ ನಾರಾಯಣನ ಪಾರಿಷದರಾದ ಆ ಜಯವಿಜಯರು ದಿತಿದೇವಿಗೆ ಪುತ್ರರಾಗಿ ವೈರಭಾವವನ್ನು ಮಾಡಿ ಆ ಹರಿಯಿಂದಲೇ ಸಂಹೃತರಾಗಿ ಪುನಃ ಬ್ರಾಹ್ಮಣಶಾಪದಿಂದ ರಾಕ್ಷಸರಾಗಿ ಹುಟ್ಟಿ ರಾವಣನೆಂದೂ ಕುಂಭಕರ್ಣನೆಂದೂ ಪ್ರಸಿದ್ಧರಾಗಿ ಶ್ರೀರಾಮನ ಪರಾಕ್ರಮದಿಂದ ಹತರಾದರು ; ಯುದ್ಧದಲ್ಲಿ ಶ್ರೀರಾಮಬಾಣಗಳಿಂದ ಹೃದಯದಲ್ಲಿ ಭೇದಿಸಲ್ಪಟ್ಟು ಮಲಗಿದವರಾಗಿ ಪೂರ್ವಜನ್ಮದಲ್ಲಿ ಹ್ಯಾಗೋ ಹಾಗೆ ಹರಿಚಿಂತೆಯಲ್ಲೇ ದೇಹವನ್ನು ಬಿಟ್ಟರು ; ಪುನಃ ಅವರೇ ಶಿಶುಪಾಲ ದಂತವಕ್ತ್ರರಾಗಿ ಜನಿಸಿ ವೈರಾನುಬಂಧದಿಂದ ಹತರಾಗಿ ನೀನು ನೋಡುತಿರುವಾಗಲೇ ಸಾಯುಜ್ಯವನ್ನು ಪಡದರು ; ಭ್ರಮರದ ಭಯದಿಂದೆಂತು ಕೀಟಕವು ಅದನ್ನೇ ಧ್ಯಾನಿಸುತ ತಾನು ಭ್ರಮರವಾಗುವದೋ ಆಮೋರಿಗೆ ಕೃಷ್ಣವೈರಿಗಳಾದ ಅಸುರರು ಪೂರ್ವಜನ್ಮಗಳಲ್ಲಿ ಮಾಡಲ್ಪಟ್ಟ ಪಾಪವನ್ನು ಬಿಟ್ಟು ಸಾರೂಪ್ಯವನ್ನು ಪಡೆದರು ; ಭಗವದ್ಭಕ್ತರಾದ ಯೋಗಿಗಳು ಭೇದರಹಿತವಾದ ಭಕ್ತಿಯಿಂದ ಹ್ಯಾಗೆ ಮೋಕ್ಷವನ್ನು ಪಡೆಯುವರೋ ಹಾಗೆ ಈ ಶಿಶುಪಾಲನು ಮೊದಲಾದ ನೃಪರು ಶ್ರೀಹರಿಯಲ್ಲಿ ಭೇದದರ್ಶನವಿಲ್ಲದ ಕೃಷ್ಣಚಿಂತೆಯಿಂದ ತತ್ಸಾರೂಪ್ಯವನ್ನೈದಿದರು ! ಎಲೈ ಧರ್ಮರಾಯನೆ, ದಮಘೋಷಪುತ್ರನಾದ ಶಿಶುಪಾಲನೇ ಮೊದಲಾದ ಶತೃಗಳಿಗೆ ಹರಿಯ ಸಾರೂಪ್ಯವೆಂತು ಉಂಟಾಯಿತೆಂದು ಯಾವದನ್ನು ಪ್ರಶ್ನೆಗೈದೆಯೋ ಅವೆಲ್ಲವೂ ನನ್ನಿಂದ ಪೇಳಲ್ಪಟ್ಟಿತು ; ಬ್ರಹ್ಮಣ್ಯದೇವನಾದ ಮಹಾತ್ಮನಾದ ಶ್ರೀಕೃಷ್ಣನ ಅವತಾರರೂಪನಾದ ಶ್ರೀ ನೃಸಿಂಹನಿಂದ ಮಾಡಲ್ಪಟ್ಟ ಆದಿದೈತ್ಯನ ಸಂಹಾರರೂಪವಾದ ಈ ಕಥೆಯು ಅತ್ಯಂತ ಪುಣ್ಯಕರವಾದದ್ದು ; ಮಹಾ ಭಾಗವತನಾದ ಈ ಪ್ರಹ್ಲಾದನ ಚರಿತ್ರೆಯು ಭಕ್ತಿ ಜ್ಞಾನ ವೈರಾಗ್ಯಸ್ವರೂಪಗಳು ಸೃಷ್ಟಿ ಸ್ಥಿತಿ ವಿಲಯಗಳಿಗೆ ಸ್ವಾಮಿಯಾದ ಶ್ರೀಹರಿಯ ತತ್ವವು ಕೃಷ್ಣನ ಗುಣಚರಿತ್ರೆಗಳ ವರ್ಣನೆಯು ದೇವದಾನವರ ಸ್ಥಾನಂಗಳ ಅಸ್ಥಾನಗಳ ವಿಪರ್ಯಾಸಂಗಳೂ ಯಾವದರಿಂದ ವಾಸುದೇವನನ್ನೈದಲ್ಪಡುವನೋ ಅಂಥಾ ಭಾಗವತ ಧರ್ಮಗಳೂ ಆತ್ಮಾನಾತ್ಮವಿವೇಕವೂ ಈ ಆಖ್ಯಾನಗಳಲ್ಲಿ ಸಮಗ್ರವಾಗಿ ಹೇಳಲ್ಪಟ್ಟಿತು ; ಶ್ರೀ ವಿಷ್ಣುವಿನ ಪರಾಕ್ರಮದ ವಿಸ್ತಾರವುಳ್ಳ ಪುಣ್ಯಕರವಾದ ಈ ಆಖ್ಯಾನವನ್ನು ಯಾವ ಪುರುಷನು ಭಕ್ತಿಯಿಂದ ಪಠಿಸುವನೋ ಅದೇರೀತಿ ಶ್ರವಣಂಗೈಯ್ಯುವನೋ ಅವನು ಸಮಸ್ತ ಕರ್ಮಪಾಶಗಳಿಂದ ಬಿಡಲ್ಪಡುವನು ; ಯಾವ ಪುರುಷನು ಪರಿಶುದ್ಧನಾಗಿ ಆದಿಪುರುಷನಾದ ಶ್ರೀ ಭಗವಂತನ ಅವತಾರರೂಪನಾದ ಶ್ರೀ ನೃಸಿಂಹನಿಂದ ಮಾಡಲ್ಪಟ್ಟ ದೈತ್ಯೇಂದ್ರನ ಸಂಹಾರರೂಪವಾದ ಲೀಲೆಯನ್ನು ಸಾಧುಗಳೊಳಗೆ ಶ್ರೇಷ್ಠನಾದ ಪ್ರಹ್ಲಾದನ ಪುಣ್ಯಕರವಾದ ಪ್ರಭಾವವನ್ನು ಕೇಳುವನೋ ಆ ಮನುಜನು ನಿರ್ಭಯವಾದ ವೈಕುಂಠಲೋಕವನ್ನೈದುವನು ! ಎಲೈ ಧರ್ಮಪುತ್ರನೆ, ಕಪಟಮಾನುಷನಾದ ಸಾಕ್ಷಾದ್ವಾಸುದೇವನು ವಾಸಂಗೈವದರಿಂದ ಸಮಸ್ತ ಲೋಕಗಳನ್ನು ಪಾವನಂಗೈವ ಮಹಾಮುನಿಗಳೂಕೂಡ ನಿಮ್ಮ ಗೃಹಗಳನ್ನು ಕುರಿತು ಬರುವರು ; ಅದರಿಂದ ನೀವೇ ಲೋಕದಲ್ಲಿ ಅಧಿಕ ಭಾಗ್ಯವುಳ್ಳವರು ! ಎಲೈ ಧರ್ಮರಾಯನೆ, ಮಹಾತ್ಮರಾದ ಬ್ರಹ್ಮಾದಿಗಳಿಂದ ಅರಸತಕ್ಕ ನಿರುಪಾಧಿಯಾದ ಪರಮಾನಂದಾನುರೂಪನಾದ ಯಾವ ಪರಬ್ರಹ್ಮನುಂಟೋ ಆ ಪರಬ್ರಹ್ಮನೇ ನಿಮಗೆ ಪ್ರಿಯನಾಗಿಯೂ ಸುಹೃತ್ತಾಗಿಯೂ ಭಾವಮೈದುನನಾಗಿಯೂ ಅಂತರ್ಯಾಮಿಯಾಗಿಯೂ ಪೂಜ್ಯನಾಗಿಯೂ ಹಿತಾಹಿತೋಪದೇಶಕರ್ತೃವಾಗಿಯೂ ಗುರುವಾಗಿಯೂ ಆಜ್ಞಾಧಾರಕನಾಗಿಯೂ ಶ್ರೀಕೃಷ್ಣರೂಪದಿಂದ ನಿಮ್ಮ ಮನೆಯಲ್ಲಿರುವನು ; ಯಾವಾತನ ತತ್ವವನ್ನು ಸಾಕ್ಷಾತ್ಪರಮೇಶ್ವರನು ಬ್ರಹ್ಮದೇವನು ಇವರೇ ಮೊದಲಾದ ಮಹಾ ಯೋಗಿಗಳಿಂದಲೂ ವಾಸ್ತವವಾಗಿ ಸ್ವಬುದ್ಧಿಯಿಂದಲೂ ಇದು ಹೀಗೇ ಸರಿಯೆಂದು ವರ್ಣಿಸಲ್ಪಡಲಶಕ್ಯವೋ ಆ ವಾಸುದೇವನು ನಿಮಗೆ ತಾನೇ ಪ್ರಸನ್ನನಾಗಿ ಧಾನೆ ; ನಮಗಾದರೋ ಮೌನದಿಂದಲೂ ಭಕ್ತಿಯಿಂದಲೂ ಉಪಶಾಂತಿಯಿಂದಲೂ ಅವನ ಪ್ರಸಾದವು ಪ್ರಾರ್ಥಿಸತಕ್ಕದ್ದು ; ಅಂಥಾ ಶ್ರೀಹರಿಯು ನಮಗೆ ಪ್ರಸನ್ನನಾಗಲಿ ; ಆದಕಾರಣ ನೀವೇ ನಮಗಿಂತಲೂ ಅಧಿಕವಾದ ಭಾಗ್ಯವುಳ್ಳವರು ! ಕೇಳೈ ಅರಸೆ, ಈ ವಾಸುದೇವನು ದೇವೋತ್ತಮನಾದ ಶ್ರೀ ರುದ್ರನಿಗೆ ಅಮಿತಮಾಯೆಯುಳ್ಳ ಮಯನಿಂದ ಉಂಟುಮಾಡಲ್ಪಟ್ಟ ಅಪಯಶಸ್ಸನ್ನು ಪರಿಹರಿಸಿ ಯಶಸ್ಸನ್ನುಂಟುಮಾಡಿದನು ' ಎಂದು ನುಡಿದನು.

“ಯುಧಿಷ್ಠಿರನು ‘ಎಲೈ ನಾರದಮುನಿಯೆ, ಮಯನು ಯಾವ ವ್ಯಾಪಾರದಲ್ಲಿ ಜಗದೀಶ್ವರನಾದ ಮಹಾದೇವನಿಗೆ ಅಪಯಶಸ್ಸನ್ನುಂಟುಮಾಡಿದನು? ಈ ಕೃಷ್ಣನಿಂದೆಂತು ಯಶಸ್ಸನ್ನುಂಟುಮಾಡಲ್ಪಟ್ಟಿತು? ಇದನ್ನು ನಿರೂಪಿಸು’ ಎಂದು ಪ್ರಶ್ನೆಗೈದನು.

“ನಾರದಋಷಿಯು ‘ಕೇಳೈ ಧರ್ಮಪುತ್ರನೆ, ಈರೀತಿಯಲ್ಲಿ ಶ್ರೀಕೃಷ್ಣನಿಂದ ವರ್ಧಿತರಾದ ದೇವತೆಗಳಿಂದ ಪರಾಜಿತರಾದ ಅಸುರರು ಮಾಯೆಯುಳ್ಳವರಲ್ಲಿ ಶ್ರೇಷ್ಠನಾದ ಮಯನನ್ನು ಮರೆಗೊಂಡರು; ಆಗ ಮಯನು ಕಾಣಲಶಕ್ಯವಾದ ಪ್ರವೇಶ ನಿರ್ಗಮಗಳುಳ್ಳ ಊಹಿಸಲಶಕ್ಯಗಳಾದ ಪರಿಕರಗಳುಳ್ಳ ಸೌವರ್ಣ ರಜತಾಯೋಮಗಳಾದ ಮೂರು ಪುರಗಳನ್ನು ನಿರ್ಮಿಸಿದನು; ಆ ಪುರಗಳಲ್ಲಿ ವಾಸಂಗೈವ ಬಲದಿಂದ ಅಸುರ ಸೇನಾಪತಿಗಳು ಪೂರ್ವವೈರವನ್ನು ಸ್ಮರಿಸಿ ರೂಪವನ್ನು ಮರೆಗೊಂಡು ಲೋಕಪಾಲಕರೊಡಗೂಡಿದ ಲೋಕಂಗಳನ್ನು ಹಿಂಸೆಗೈದರು; ಅನಂತರದಲ್ಲಿ ಅಸುರರಿಂದ ನಿರ್ಜಿತರಾದ ಅಸಮರ್ಥರಾದ ಲೋಕಪಾಲಕರು ಕೈಲಾಸವಾಸಿಯಾದ ಪರಮೇಶ್ವರನನ್ನು ಕುರಿತು ‘ಎಲೈ ಮಹಾದೇವನೆ, ತ್ರಿಪುರವಾಸಿಗಳಾದ ಅಸುರರಿಂದ ಬಾಧಿಸಲ್ಪಟ್ಟ ನಮ್ಮನ್ನು ರಕ್ಷಿಸು’ ಎಂದು ಪ್ರಾರ್ಥಿಸಿದರು; ಆ ವೇಳೆಯಲ್ಲಿ ಸಮರ್ಥನಾದ ಪೂಜ್ಯನಾದ ಈಶ್ವರನು ದೇವತೆಗಳನ್ನು ಭಯಪಡಬೇಡವೆಂದು ಅನುಗ್ರಹಿಸಿ ಅಭಿಮಂತ್ರಿತವಾದ ಶರವನ್ನು ಧನುಸ್ಸಿನಲ್ಲಿ ಸಂಧಾನಂಗೈದು ತ್ರಿಪುರಗಳನ್ನು ಕುರಿತು ಕಳುಹಿಸಿದನು; ಅನಂತರದಲ್ಲಿ ಸೂರ್ಯಮಂಡಲದದೆಶೆಯಿಂದ ಹೊರಡುವ ಕಿರಣಗಳ ಸಮೂಹಗಳಂತೆ ಆ ಬಾಣಗಳದೆಶೆಯಿಂದ ಆ ತ್ರಿಪುರಗಳು ಕಾಣಲ್ಪಡಲಿಲ್ಲ; ಆ ಬಾಣಗಳಿಂದ ತ್ರಿಪುರವಾಸಿಗಳೆಲ್ಲರೂ ನಿಷ್ಪ್ರಾಣರಾಗಿ ಬೀಳಲು ಮಹಾ ಯೋಗಿಯಾದ ಮಯನು ಅವರನ್ನು ತಂದು ಕೂಪರಸದಲ್ಲಿ ಬೀಳಿಸಲು ಆ ಕೂಪಾಮೃತ ಸ್ಪರ್ಶಮಾತ್ರದಿಂದ ವಜ್ರದಂತೆ ದೃಢರಾಗಿ ಮಹಾ ತೇಜಸ್ವಿಗಳಾಗಿ ಘನಗಳಾದ ಮೇಘಗಳ ಸಂಮರ್ದದಿಂದ ಹೊರಡುವ ಶಿಡಿಲುಗಳಂತೆ ಎದ್ದರು; ಆ ಸಮಯದಲ್ಲಿ ಭಗ್ನಸಂಕಲ್ಪನಾಗಿ ವಿಮನಸ್ಕನಾದ ಪರಮೇಶ್ವರನನ್ನು ನೋಡಿ ವಿಷ್ಣುವು ಬಂದು ಉಪಾಯವನ್ನು ಕಲ್ಪಿಸಿದನು; ಬ್ರಹ್ಮನು ಕರುವಾಗಲು ವಿಷ್ಣುವು ಗೋರೂಪವನ್ನು ಧರಿಸಿ ಇಬ್ಬರೂ ತ್ರಿಪುರವನ್ನು ಪೊಕ್ಕು ಕೂಪಾಮೃತವನ್ನು ಪಾನಂಗೈದರು; ಆ ಅಸುರರು ನೋಡುತಲಿರುವವರಾದಾಗ್ಯೂ ವಿಷ್ಣುಮಾಯೆಯಿಂದ ಮೋಹಿತರಾಗಿ ತಡೆಯಲಿಲ್ಲ; ಯೋಗಿಯಾದ ಆ ಮಯನು ಆ ರಸಪಾಲಕರನ್ನು ಕುರಿತು ಆಶ್ಚರ್ಯಪಟ್ಟು ಶೋಕವಿಲ್ಲದವನಾಗಿ ಶೋಕದಿಂದ ಆರ್ತರಾದ ಪಾಲಕರನ್ನು ನೋಡಿ ದೈವಗತಿಯನ್ನು ಸ್ಮರಿಸಿ ದೇವತೆಯಾದರೂ ಅಸುರನಾದರೂ ನರನಾದರೂ ಅನ್ಯನಾದರೂ ಸರಿಯೆ; ಈಶ್ವರಸಂಕಲ್ಪವನ್ನು ತಪ್ಪಿಸುವದಕ್ಕೆ ಒಬ್ಬನೂ ಸಮರ್ಥನಲ್ಲ; ಇದು ತನ್ನ ದುರಾದೃಷ್ಟವೋ ಇಲ್ಲವೇ ಇತರ ಜನದ್ದೋ ಎರಡುಕಡೆಯ ದೆಶೆಯಿಂದಲೂ ಉಂಟಾದದ್ದೋ ದೈವದಿಂದ ಕಲ್ಪಿತವಾದ ಇದನ್ನು ಪರಿಹರಿಸಲು ಯಾವಾತ ಸಮರ್ಥನಾದಾನೆಂದು ಚಿಂತಿಸಿದನು. ಅನಂತರದಲ್ಲಿ ಆ ಕೃಷ್ಣನು ತಪೋ ವಿದ್ಯಾ ಕ್ರಿಯೆಗಳೇ ಮೊದಲಾಗುಳ್ಳ ತನ್ನ ಶಕ್ತಿಗಳಿಂದ ಆ ಪರಮೇಶ್ವರನಿಗೆ ಯುದ್ಧಸಾಧನಗಳನ್ನು ಕಲ್ಪಿಸಿದನು; ಲೋಕವಿಲಕ್ಷಣಗಳಾದ ರಥ ಸಾರಥಿ ಧ್ವಜ ವಾಜಿ ಚಾಪ ಕವಚ ಬಾಣ ಮೊದಲಾದವನ್ನು ವಿರಚಿಸಲು ಅಭಿಜಿನ್ಮುಹೂರ್ತದಲ್ಲಿ ಮಹಾದೇವನು ರಥಾರೋಹಣಂಗೈದು ಶೀಘ್ರವಾಗಿ ಧನುಸ್ಸನ್ನು ಗ್ರಹಿಸಿದನು; ಧನುಸ್ಸಿನಲ್ಲಿ ಬಾಣವನ್ನು ಸಂಧಾನಂಗೈದು ಭಗವಂತನ ತೇಜಸ್ಸಿನಿಂದ ರಕ್ಷಿತನಾಗಿ ಇತರರಿಂದ ಐದಲಶಕ್ಯಗಳಾದ ಅಭೇದ್ಯಗಳಾದ ತ್ರಿಪುರಗಳನ್ನು ದಹಿಸಿದನು! ಕೇಳೈ ಅರಸೆ, ಆ ಸಮಯದಲ್ಲಿ ದೇವದುಂದುಭಿಗಳು ಮೊಳಗಿದವು; ಅನೇಕ ವಿಮಾನಗಳೊಡಗೂಡಿ ದೇವತೆಗಳು ಋಷಿಗಳು ಪಿತೃದೇವತೆಗಳು ಸಿದ್ಧೇಶ್ವರರು ಜಯಶಬ್ದವನ್ನು ಘೋಷಿಸಿ ಪೂಮಳೆಗರೆದರು; ಸಂತೋಷದಿಂದ ಸ್ತೋತ್ರಂಗೈದರು; ಅಪ್ಸರಸ್ಸುಗಳು ನರ್ತನಂಗೈದರು; ತ್ರಿಪುರಾರಿಯಾದ ಶ್ರೀ ಹರನು ಈರೀತಿಯಿಂದ ತ್ರಿಪುರಗಳನ್ನು ದಹಿಸಿ ಬ್ರಹ್ಮಾದಿಗಳಿಂದ ಸಂಸ್ತುತನಾಗಿ ತನ್ನ ಸ್ಥಾನವನ್ನೈದಿದನು; ಮಾಯೆಯಿಂದ ಲೋಕರಕ್ಷಣವನ್ನು ಮಾಡುತಿರುವ ಪರಮಾತ್ಮನಾದ ಶ್ರೀಹರಿಯು ಪರಾಕ್ರಮಗಳು ಮಹರ್ಷಿಗಳಿಂದ ಗಾನಂಗೈಯಲ್ಪಡುವವಾಗಿ ಲೋಕಗಳನ್ನು ಪಾವನಂಗೈಯುತಲಿವೆ” ಎಂದು ನಿರೂಪಿಸಿದನು.

೧೧ ನೇ ಅಧ್ಯಾಯ.

ಮನುಷ್ಯರ ಸಾಧಾರಣ ಧರ್ಮಗಳು—ಬ್ರಾಹ್ಮಣಾದಿ ವರ್ಣಗಳು ಮಾಡತಕ್ಕ ವಿಶೇಷಧರ್ಮಗಳು.

"ಎಲೈ ಪರೀಕ್ಷಿದ್ರಾಯನೆ, ಈರೀತಿಯಲ್ಲಿ ತ್ರಿವಿಕ್ರಮನಲ್ಲಿಡಲ್ಪಟ್ಟ ಮನಸ್ಸುಳ್ಳವನಾದ ಪರಮ ಭಾಗವತಾಗ್ರೇಸರನಾದ ದೈತ್ಯೇಂದ್ರನಾದ ಪ್ರಹ್ಲಾದನಲ್ಲಿ ಸಾಧುಗಳ ಸಭೆಯಲ್ಲಿ ಪೂಜಿತವಾದ ಚರಿತ್ರೆಯನ್ನು ಕೇಳಿ ಯುಧಿಷ್ಠಿರನು ಸಂತೋಷಯುಕ್ತನಾಗಿ ಬ್ರಹ್ಮಪುತ್ರನಾದ ನಾರದಮುನಿಯನ್ನು ಕುರಿತು 'ಎಲೈ ಕಾಲತ್ರಯಜ್ಞಾನಿಯಾದ ಬ್ರಹ್ಮಪುತ್ರನಾದ ನಾರದಋಷಿಯೆ, ಯಾವದರದೆಶೆಯಿಂದ ಪುರುಷನು ಜ್ಞಾನಭಕ್ತಿಗಳನ್ನು ಪಡೆಯುವನೋ ಅಂಥಾ ಪುರಾತನವಾದ ಮಾನವಧರ್ಮವನ್ನೂ ವರ್ಣಾಶ್ರಮಾಚಾರವನ್ನೂ ನಾನು ಕೇಳಲಿಚ್ಛೈಸುತ್ತೇನೆ ! ಎಲೈ ಪ್ರಾಜ್ಞನಾದ ಮುನಿಯೆ, ನೀನು ಸಾಕ್ಷಾದಾತ್ಮಸ್ವರೂಪನಾದ ಉತ್ಕೃಷ್ಟವಾದ ಸತ್ಯಲೋಕದಲ್ಲಿ ವಾಸಂಗೈವ ಬ್ರಹ್ಮನ ಮಾನಸಪುತ್ರರಲ್ಲಿ ತಪೋ ಯೋಗ ಸಮಾಧಿಗಳಿಂದ ಸಮ್ಮತನಾದವನು ; ನಾರಾಯಣನಲ್ಲಿ ವಿನ್ಯಸ್ತಚಿತ್ತರಾದ ಕರುಣಾವಂತರಾದ ಸಾಧುಗಳಾದ ಶಾಂತರಾದ ನಿಮ್ಮಂಥಾವರು ಹ್ಯಾಗೆ ಧರ್ಮವನ್ನು ತಿಳಿದಿಧಾರೆಯೋ ಹಾಗೆ ಕಡಮೆಯುವರು ತಿಳಿಯಲಾರರು ; ಅಂಥಾ ಧರ್ಮವನ್ನು ನಿರೂಪಿಸು' ಎಂದು ಪ್ರಶ್ನೆಗೈದನು.

"ನಾರದಋಷಿಯು 'ಎಲೈ ಧರ್ಮರಾಯನೆ, ಸಮಸ್ತ ಜನರು ಈ ಸಂಸಾರಸಮುದ್ರವನ್ನು ದಾಟಲು ಧರ್ಮಸೇತುವಾದ ಐಶ್ವರ್ಯಾದಿ ಷಡ್ಗುಣಗಳುಳ್ಳ ಅಜನಿಗೆ ನಮಸ್ಕರಿಸಿ ಸಾಕ್ಷಾನ್ನಾರಾಯಣನ ಮುಖದಿಂದ ಕೇಳಲ್ಪಟ್ಟ ಪುರಾತನವಾದ ಧರ್ಮವನ್ನು ನಿನಗೆ ಪೇಳುವೆನು ಕೇಳು : ಯಾವ ನಾರಾಯಣನು ತನ್ನ ಅಂಶದಿಂದ ಸಾಕ್ಷಾದ್ಧರ್ಮಪುರುಷನ ದೆಶೆಯಿಂದ ದಕ್ಷಪುತ್ರಿಯಾದ ಮೂರ್ತಿದೇವಿಯಲ್ಲಿ ಅವತರಿಸಿ ಸಮಸ್ತಲೋಕಗಳ ಕ್ಷೇಮಕ್ಕೋಸ್ಕರ ಬದರಿಕಾಶ್ರಮದಲ್ಲಿ ತಪೋನಿಷ್ಠನಾಗಿಧಾನೆಯೋ ಅಂಥಾ ಭಗವಂತನಿಂದ ಉಪದಿಷ್ಟವಾದ ಧರ್ಮವನ್ನು ನಿನಗೆ ಪೇಳುವೆನು ! ಕೇಳೈ ಅರಸೆ, ಸರ್ವದೇವಸ್ವರೂಪನಾದ ಭಗವಂತನೇ ಧರ್ಮಕ್ಕೆ ಮೂಲಭೂತವಾದ ಪ್ರಮಾಣವು ಶ್ರುತಿಯು ಸ್ಮೃತಿಯು ಸಹಾ ಪ್ರಮಾಣವು ; ಯಾವ ಧರ್ಮಪ್ರತಿಪಾದಕವಾದ ವೇದಾರ್ಥವನ್ನು ತಿಳಿದು ಧರ್ಮವನ್ನಾಚರಿಸುವವರ ಮನಸ್ಸು ಪ್ರಸನ್ನವಾಗುವದೋ ಆ ಧರ್ಮವನ್ನು ಪೇಳುತ್ತೇನೆ ; ಸತ್ಯವು ದಯೆಯು ಏಕಾದಶ್ಯುಪವಾಸರೂಪವಾದ ತಪಸ್ಸು ಶುಚಿತ್ವವು ತಿತಿಕ್ಷೆಯು ಯುಕ್ತಾಯುಕ್ತವಿವೇಕವು ಮನೋನಿಗ್ರಹವೆಂಬ ಶಮೆಯು ಬಾಹ್ಯೇಂದ್ರಿಯನಿಗ್ರಹರೂಪವಾದ ದಮೆಯು ಅಹಿಂಸೆಯು ಬ್ರಹ್ಮಚರ್ಯವು ದಾನರೂಪವಾದ ತ್ಯಾಗವು ಯಥೋಚಿತವಾದ ವೇದಾಧ್ಯಯನವು ಋಜುಭಾವವು ಅನ್ನ ಮೊದಲಾದ ವಸ್ತುಗಳನ್ನು ಭಕ್ಷಿಸುವ ಪ್ರಾಣಿಗಳಲ್ಲಿ ವಿವೇಚನವು ಆ ಪ್ರಾಣಿಗಳಲ್ಲಿಯೂ ಅದರಲ್ಲಿಯೂ ಮನುಷ್ಯರಲ್ಲಿ ವಿಶೇಷವಾಗಿ ಅಂತರ್ಯಾಮಿಬುದ್ಧಿಯೂ ದೇವತಾಬುದ್ಧಿಯೂ ದೈವವಶದಿಂದ ಪ್ರಾಪ್ತವಾದ ವಸ್ತುವಿನಿಂದ ಸಾಕೆಂಬ ಬುದ್ಧಿರೂಪವಾದ ಸಂತೋಷವು ಸಮದೃಕ್ಕುಗಳಾದ ಮಹಾತ್ಮರ ಸೇವೆಯು ಪ್ರವೃತ್ತಿಕರ್ಮಗಳಿಂದ ನಿವೃತ್ತಿಯು ನಿಷ್ಫಲಗಳಾದ ವ್ಯಾಪಾರಗಳನ್ನು ತಿಳಿವ ಮೂರ್ಖಸಲ್ಲಾಪವಿಲ್ಲದಿರುವರೆಂಬ ಮೌನವು ಆತ್ಮನು ದೇಹಾದಿವ್ಯತಿರಿಕ್ತನೆಂಬ ಆತ್ಮವಿಚಾರವು ಮಹಾತ್ಮರಿಗೆ ಪರಮಗತಿಪ್ರದನಾದ ಶ್ರೀಕೃಷ್ಣನ ಚರಿತ್ರಶ್ರವಣವು ನಾಮಸಂಕೀರ್ತನವು ಸ್ಮರಣೆಯು ಸೇವೆಯು ಪೂಜೆಯು ನಮಸ್ಕಾರವು ಸಖ್ಯವು ದಾಸಭಾವವು ಆತ್ಮಸಮರ್ಪಣವು ಎಂಬ ಈ ಮೂವತ್ತು ಲಕ್ಷಣಗಳಿಂದ ಯುಕ್ತವಾದ ಯಾವ ಧರ್ಮವುಂಟೋ ಆ ಧರ್ಮವು ಸಮಸ್ತರಾದ ಮನುಷ್ಯರಿಗೂ ಸಾಧಾರಣವಾದದ್ದು ; ಉತ್ಕೃಷ್ಟವಾದ ಇಂಥಾ ಧರ್ಮದಿಂದ ಸರ್ವಾಂತರ್ಯಾಮಿಯಾದ ಭಗವಂತನು ಸಂತುಷ್ಟನಾಗುವನು ! ಇನ್ನು ದ್ವಿಜರ ಲಕ್ಷಣವನ್ನು ಪೇಳುವೆನು ಕೇಳು : ಗರ್ಭಾದಾನಾದಿ ಸಮಂತ್ರಕಗಳಾದ ಸಂಸ್ಕಾರಗಳು ವಿಚ್ಛಿತ್ತಿಯಿಲ್ಲದೆ ಯಾವವನಿಗುಂಟಾಗಿವೆಯೋ ಅವನು ದ್ವಿಜನೆನಿಸಿಕೊಂಬನು ; ಯಜ್ಞಾಧ್ಯಯನ ದಾನಗಳು ದ್ವಿಜನಿಗೆ ವಿಹಿತಧರ್ಮಗಳು ; ಬ್ರಹ್ಮ ಕ್ಷತ್ರಿಯ ವೈಶ್ಯರು ಮೂರುಮಂದಿಯೂ ದ್ವಿಜರೆನಿಸಿಕೊಂಬುವರು ; ಉತ್ಪತ್ತಿಯಿಂದಲೂ ಸಂಸ್ಕಾರಗಳಿಂದಲೂ ಪರಿಶುದ್ಧರಾದ ಬ್ರಹ್ಮ

ಕ್ಷತ್ರಿಯ ವೈಶ್ಯರಿಗೆ ಬ್ರಹ್ಮಚರ್ಯಾದ್ಯಾಶ್ರಮಧರ್ಮಗಳು ವಿಹಿತಗಳು; ಬ್ರಾಹ್ಮಣಾದಿ ನಾಲ್ಕುವರ್ಣಗಳಿಗೂ ಜೀವನರೂಪಗಳಾದ ಧರ್ಮಗಳನ್ನು ವಿವರಿಸುವೆನು ಕೇಳು: ಬ್ರಾಹ್ಮಣನಿಗೆ ಷಟ್ಕರ್ಮಗಳು ಅಧ್ಯಯನಾಧ್ಯಾಪನ ಯಜನ ಯಾಜನ ದಾನ ಪ್ರತಿಗ್ರಹಗಳು ಈ ಆರರಲ್ಲಿ ಯಾಜನವು ಅಧ್ಯಾಪನವು ಪ್ರತಿಗ್ರಹವು ಈ ಮೂರು ಜೀವಿಕಾರೂಪವು; ಕ್ಷತ್ರಿಯರಿಗೆ ಅಧ್ಯಯನ ಯಜನ ದಾನಗಳುಹೊರ್ತು ಜೀವನಾರ್ಥವಾಗಿ ಪ್ರಜಾರಕ್ಷಣವು ಬ್ರಾಹ್ಮಣವ್ಯತಿರಿಕ್ತರಾದ ಜನರಿಂದ ಕಪ್ಪವನ್ನು ತೆಗದುಕೊಳ್ಳುವದು ಪರಾಕ್ರಮದಿಂದ ಪರರಾಯರುಗಳಿಂದ ಪಗದಿಯನ್ನು ತೆಗದುಕೊಳ್ಳುವದು ಇವು ಕ್ಷತ್ರಿಯಧರ್ಮಗಳು; ಕೃಷಿ ಗೋರಕ್ಷಣ ವಾಣಿಜ್ಯಾದಿಗಳು ವೈಶ್ಯರಿಗೆ ಜೀವನಾರ್ಥವಾದ ಕರ್ಮಗಳು; ಶುಶ್ರೂಷೆಯು ಸ್ವಧರ್ಮವು ತನ್ನಸ್ವಾಮಿಯಿಂದ ಶೇವಾಪೂರ್ವಕವಾಗಿ ಲಬ್ಧವಾದ ವಸ್ತುವಿನಿಂದ ಜೀವನವು ಇವು ಶೂದ್ರಧರ್ಮಗಳು; ಬ್ರಾಹ್ಮಣನಿಗೆ ಮುಖ್ಯಾನುಕಲ್ಪಭೇದದಿಂದ ವೃತ್ಯಂತರಗಳನ್ನು ಪೇಳುವೆನು; ಕೃಷಿರೂಪವಾದುದು ಅಯಾಚಿತವು; ನಿತ್ಯಗಟ್ಟೆಯಲ್ಲಿ ಧಾನ್ಯಯಾಚನವು ಶಿಲೋಂಛವೃತ್ತಿಯು ತತ್ಸ್ವಾಮಿಯಿಂದ ತ್ಯಕ್ತವಾಗಿ ಕಣಗಳಲ್ಲಿ ಬಿದ್ದಿರುವ ಧಾನ್ಯಗಳನ್ನು ಆರಿಸಿಕೊಂಬುವದೇ ಶಿಲವೆನಿಸಿಕೊಂಬುವದು; ಅಂಗಡಿಗಳ ಬೀದಿಗಳಲ್ಲಿ ಕರ್ತೃವಿಕರ್ತೃಗಳಿಂದ ತ್ಯಕ್ತಗಳಾದ ಧಾನ್ಯಾದಿಗಳನ್ನು ಆರಿಸಿಕೊಂಬುವದೇ ಉಂಛವೆನಿಸಿಕೊಂಬುವದು; ಈ ನಾಲ್ಕು ವಿಪ್ರವೃತ್ತಿಗಳು; ಈ ನಾಲ್ಕರಲ್ಲಿ ಉತ್ತರೋತ್ತರ ವೃತ್ತಿಯು ಶ್ರೇಯಸ್ಕರವೆಂದು ತಿಳಿಯುವದು; ಈ ನಾಲ್ಕು ವರ್ಣಗಳಲ್ಲಿ ನಿಕೃಷ್ಟ ವರ್ಣಪುರುಷನು ಆಪದ್ವ್ಯತಿರಿಕ್ತಕಾಲದಲ್ಲಿ ಉತ್ತಮವರ್ಣದ ವೃತ್ತಿಯನ್ನು ಸ್ವೀಕರಿಸಬಾರದು; ಅದರಲ್ಲಿ ಕ್ಷತ್ರಿಯನು ಪರಿಗ್ರಹ ವ್ಯತಿರಿಕ್ತವಾಗಿ ಯಜನಾಧ್ಯಾಪನವೃತ್ತಿಗಳನ್ನು ಗ್ರಹಿಸಬಹುದು; ಬ್ರಾಹ್ಮಣರಿಗೆ ಹೇಳಿದ ನಾಲ್ಕು ವೃತ್ತಿಯು ಇತರರಾದವರಿಗೆ ಆಪತ್ಕಾಲದಲ್ಲುಂಟಾಗಬಹುದು; ನಿತ್ಯಯಾಚನೆಯಿಂದಲಾದರೂ ಜೀವಿಸಬಹುದು; ಕೃಷಿಯಿಂದಲಾದರೂ ಜೀವಿಸಬಹುದು; ನೀಚಸೇವೆಯಿಂದ ಸರ್ವಥಾ ಜೀವಿಸಬಾರದು; ಉಂಛವೃತ್ತಿ ಶಿಲವೃತ್ತಿಗಳನ್ನು ಋತುವೆಂದು ಪೇಳುವರು; ಉಂಛವೆಂದರೆ: ಗದ್ದೆ ಮೊದಲಾದ ಕ್ಷೇತ್ರಗಳಲ್ಲಿ ಆ ಧಾನ್ಯವನ್ನು ಕ್ಷೇತ್ರಾಧಿಪತಿಯು ತೆಗದುಕೊಂಡು ಹೋದಮೇಲೆ ಅಲ್ಲಿ ಬಿದ್ದಿರುವ ಕಣಗಳನ್ನು ಬಂದೊಂದಾಗಿ ಆದು ತರುವದು ಅಂಗಡಿ ಮೊದಲಾದ ಸ್ಥಳಗಳಲ್ಲಿ ಬಿದ್ದಿರುವದನ್ನಾದು ತರುವದು ಶಿಲವೆನಿಸಿಕೊಂಬುವದು; ಅಯಾಚಿತವೃತ್ತಿಯನ್ನ ಮೃತವೆಂಬರು; ನಿತ್ಯದಲ್ಲೂ ಪರರನ್ನು ಯಾಚಿಸುವದು ಮೃತವೃತ್ತಿಯು; ಬ್ರಾಹ್ಮಣನು ಕ್ಷತ್ರಿಯನು ನಿಂದಿತವಾದ ನೀಚಸೇವನದ ವೃತ್ತಿಯನ್ನು ತ್ಯಜಿಸುವದು; ಅದೇನುಕಾರಣವೆಂದರೆ: ಬ್ರಾಹ್ಮಣನು ಸರ್ವವೇದಸ್ವರೂಪನಾದ್ದರಿಂದಲೂ ಕ್ಷತ್ರಿಯನು ಸರ್ವ ದೇವತಾಸ್ವರೂಪನಾದ್ದರಿಂದಲೂ ಇವರಿಬ್ಬರಿಗೂ ನೀಚಸೇವನ ವೃತ್ತಿಯು ಸರ್ವಥಾ ನಿಷಿದ್ಧವು! ಎಲೈ ಧರ್ಮರಾಯನೆ, ಶಮವು ದಮವು ತಪಸ್ಸು ಶುಚಿತ್ವವು ಸಂತೋಷವು ಕ್ಷಾಂತಿಯು ಋಜುತ್ವವು ಜ್ಞಾನವು ದಯೆಯು ವಿಷ್ಣುಪರತ್ವವು ಸತ್ಯವು ಬ್ರಾಹ್ಮಣರಿಗೆ ಲಕ್ಷಣವೆಂದು ತಿಳಿಯುವದು; ಯುದ್ಧೋತ್ಸಾಹರೂಪವಾದ ಶೌರ್ಯವು ಪ್ರಭಾವರೂಪವಾದ ವೀರ್ಯವು ಧೈರ್ಯವು ತೇಜಸ್ಸು ತ್ಯಾಗವು ಶತ್ರುಜಯವು ಕ್ಷಮೆಯು ಬ್ರಾಹ್ಮಣ ಭಕ್ತಿಯು ಪ್ರಸನ್ನತೆಯು ಪ್ರಜಾರಕ್ಷಣೆಯು ಇದು ಕ್ಷತ್ರಿಯ ಲಕ್ಷಣವು; ದೇವರಲ್ಲಿಯೂ ಗುರುಗಳಲ್ಲಿಯೂ ಪೂಜ್ಯರಲ್ಲಿಯೂ ಭಕ್ತಿಯು ತ್ರಿವರ್ಗರೂಪಗಳಾದ ಧರ್ಮಾರ್ಥಕಾಮಗಳಿಂದ ಸಂತೋಷವು ವೇದಶಾಸ್ತ್ರದಲ್ಲಿ ವಿಶ್ವಾಸವು ನಿತ್ಯದಲ್ಲಿಯೂ ಅರ್ಥಾರ್ಜನೆಯು ಪ್ರಯತ್ನವು ನಿಪುಣತೆಯು ಇವು ವೈಶ್ಯ ಲಕ್ಷಣವು; ನಮ್ರತೆಯು ಶುಚಿತ್ವವು ಸ್ವಾಮಿಯಲ್ಲಿ ನಿಷ್ಕಪಟವಾದ ಸೇವೆಯು ಮಂತ್ರರಹಿತವಾದ ಪೂಜಾದಿ ಯಜ್ಞವು ತಸ್ಕರನಲ್ಲದಿರುವದು ಗೋಬ್ರಾಹ್ಮಣರಕ್ಷಣವು ಇವು ಶೂದ್ರರ ಲಕ್ಷಣವು; ಪತಿಯೇ ದೇವತೆಯಾಗುಳ್ಳ ಸ್ತ್ರೀರುಗಳಿಗೆ ಆ ಪತಿಯ ಶುಶ್ರೂಷೆಯು ಆ ಪತಿಯ ಮನಸ್ಸು ಎಂತೋ ಆ ರೀತಿ ಅನುವರ್ತಿಸುವದು ಪತಿಯ ಬಂಧುಗಳನ್ನು ಅನುವರ್ತಿಸುವದು ನಿತ್ಯದಲ್ಲಿಯೂ ಆ ಪತಿಯ ನೇಮವನ್ನನುಸರಿಸಿ ನಡೆವದು ಈ ನಾಲ್ಕು ಪತಿವ್ರತೆಯರಿಗೆ ಲಕ್ಷಣಗಳಾದ ಗುಣಗಳು; ಗುಡಿಸಿ ಸಾರಿಸಿ ರಂಗವಲ್ಲ್ಯಾದಿಗಳಿಂದ ಗೃಹಾದಿಗಳನ್ನು ಅಲಂಕರಿಸಿ ತಾನು ಶರೀರೋದ್ವರ್ತನಗೈದು ಹರಿದ್ರಾ ಕುಂಕುಮಾದಿಗಳಿಂದ ಅಲಂಕೃತಳಾಗಿ ಗೃಹೋಪಕರಣಗಳನ್ನು ಶುದ್ಧಿಗೈದು ಪತಿವ್ರತೆಯಾದ ಕುಲಸ್ತ್ರೀಯು ಅನೇಕಪ್ರಕಾರಗಳಾದ ಪತಿಗೆ ಬೇಕಾದ ವಸ್ತು

ಗಳಿಂದ ಭಕ್ತಿಯಿಂದ ಮನೋನಿಗ್ರಹದಿಂದಲೂ ಸತ್ಯಗಳಾದ ಪ್ರಿಯಗಳಾದ ಅಸದೃಶಗಳಾದ ವಾಕ್ಯಗಳಿಂದಲೂ ಪ್ರೇಮದಿಂದ ಕಾಲಕಾಲದಲ್ಲಿಯೂ ಪತಿಯನ್ನು ಭಜಿಸಬೇಕು ; ಯಾವಕಾಲದಲ್ಲಿ ಎಷ್ಟು ದೊರೆಯುವದೋ ಅಷ್ಟುಮಾತ್ರದಿಂದಲೇ ಸಂತುಷ್ಟಳಾಗಿಅಷ್ಟುಮಾತ್ರ ಭೋಗವುಳ್ಳವಳಾದಾಗ್ಯೂ ಚಾಪಲ್ಯವಿಲ್ಲದವಳಾಗಿ ಆಲಸ್ಯವನ್ನು ಬಿಟ್ಟು ಎಲ್ಲಾ ಕಡೆಯಲ್ಲೂ ಜಾಗ್ರತೆಯುಳ್ಳವಳಾಗಿ ಪತಿತನಲ್ಲದ ಪತಿಯನ್ನು ಭಜಿಸುವಳಾಗಬೇಕು ; ಯಾವ ಸ್ತ್ರೀಯು ಲಕ್ಷ್ಮಿಯಂತೆ ಶ್ರೀಹರಿಯೆಂಬ ಭಾವನೆಯಿಂದ ಪತಿಯಲ್ಲಿ ಆಸಕ್ತಳಾಗಿ ಭಜಿಸುವಳೋ ಅವಳು ಶ್ರೀಹರಿಯ ಲೋಕದಲ್ಲಿ ಹರಿಸ್ವರೂಪನಾದ ಪತಿಯೊಡನೆ ಸಂತೋಷಪಡುವಳು ; ಸಂಕರಜಾತಿಯಲ್ಲಿ ಉತ್ಪನ್ನರಾದವರಿಗೆ ವೃತ್ತಿಯು ಅವರವರ ಕುಲಪರಂಪರೆಯಿಂದ ಪ್ರಾಪ್ತವಾಗುವದೇ ಶ್ರೇಯಸ್ಕರವು ; ಅವರು ನಿಷ್ಪಾಪರಾಗಿ ಅಚೋರರಾಗಿದ್ದರೆ ಇದೇಮೇರಿಗೆ ಚಂಡಾಲ ಮಾತಂಗ ಪುಲ್ಕಸಾದಿಗಳು ರಜಕನು ಚರ್ಮಕಾರನು ನಟನು ವ್ಯಾಧನು ಅಂಬಿಗನು ಬುರುಡನು ಭಿಲ್ಲನು ಈ ಏಳು ಜಾತಿಯವರೂ ಅಂತ್ಯಜರೆಂದು ತಿಳಿಯುವದು ! ಕೇಳೈ ಅರಸೆ, ಯುಗಯುಗದಲ್ಲಿಯೂ ಮನುಷ್ಯರಿಗೆ ಅವರವರ ಕುಲಕ್ರಮವಾಗಿ ಬಂದ ಸ್ವಾಭಾವಿಕ ಧರ್ಮವೇ ಇಹಪರಗಳಲ್ಲಿ ಶ್ರೇಯಸ್ಕರವೆಂದು ವೇದಜ್ಞರು ಪೇಳುವರು ; ತನ್ನ ಕುಲಕ್ಕೆ ಉಚಿತನಾದ ವೃತ್ತಿಯಲ್ಲಿರುವ ಮನುಜನು ಸ್ವಕರ್ಮವನ್ನು ಮಾಡುತ ಈಶ್ವರಾರಾಧನಂಗೈದು ಕರ್ಮಫಲವನ್ನು ಶ್ರೀಹರಿಗೆ ಸಮರ್ಪಣಂಗೈದರೆ ಕರ್ಮದಿಂದ ಬದ್ಧನಾಗನು ; ಬಹಳವಾಗಿ ಪ್ರತಿವರ್ಷಾದಿಗಳಲ್ಲಿ ಬಿತ್ತಲ್ಪಡುವ ಕ್ಷೇತ್ರವು ಮೆಲ್ಲಗೆ ಬಂಜೆಬಿದ್ದು ಹೆಚ್ಚು ಪೈರನ್ನುಂಟುಮಾಡದೆ ಬಿತ್ತಿದ ಬೀಜವು ನಷ್ಟವಾಗುವ ರೀತಿ ಕಾಮಾಶ್ರಯವಾದ ಚಿತ್ತವು ಕಾಮಗಳ ಅತ್ಯಂತ ಸೇವೆಯಿಂದ ವಿರಕ್ತಿಯನ್ನೈದುವದು ! ಎಲೈ ಅರಸೆ, ಯಾವರೀತಿ ಜ್ವಲಿಸುವ ಅಗ್ನಿಯು ಘೃತಬಿಂದುಗಳಿಂದ ಶಾಂತಿಯನ್ನೈದದಿದ್ದಾಗ್ಯೂ ಘೃತಪ್ರವಾಹದಿಂದ ಶಾಂತಿಯನ್ನೈದುವದೋ ಆರೀತಿ ತಾನು ಶಾಂತಿಯನ್ನೈದುವದು ; ಯಾವ ಪುರುಷನಿಗೆ ವರ್ಣಾಭಿವ್ಯಂಜಕವಾದ ಯಾವ ಲಕ್ಷಣವು ಪೇಳಲ್ಪಟ್ಟಿತೋ ಆ ಲಕ್ಷಣವು ವರ್ಣಾಂತರದಲ್ಲಿದ್ದರೆ ಅದೇವರ್ಣದಿಂದ ವ್ಯವಹಾರವುಂಟಾಗುವದು ” ಎಂದು ನುಡಿದನು.

೧೨ನೇ ಅಧ್ಯಾಯ.

ಬ್ರಹ್ಮಚಾರಿ ವಾನಪ್ರಸ್ಥರ ಧರ್ಮವು–ಈ ನಾಲ್ಕಾಶ್ರಮಗಳಿಗೂ ಸಾಧಾರಣ ಧರ್ಮಗಳು.

“ಎಲೈ ಧರ್ಮರಾಯನೆ, ಬ್ರಹ್ಮಚಾರಿಯು ಗುರುಕುಲವಾಸವನ್ನು ಮಾಡುವನಾಗಿ ಇಂದ್ರಿಯನಿಗ್ರಹಂಗೈದು ಗುರುವಿಗೆ ಹಿತವನ್ನಾಚರಿಸಿಕೊಂಡು ನಮ್ರನಾಗಿ ನೈಚ್ಯವನ್ನು ಮಾಡುವ ದಾಸನಂತೆ ಅತ್ಯಂತ ದೃಢವಾದ ಸೌಹಾರ್ದವುಳ್ಳವನಾಗಿರಬೇಕು ; ಸಾಯಂಪ್ರಾತಃಕಾಲಗಳಲ್ಲಿಯೂ ಗುರುವನ್ನೂ ಸೂರ್ಯನನ್ನೂ ಅಗ್ನಿಯನ್ನೂ ದೇವಶ್ರೇಷ್ಠರನ್ನೂ ಉಪಾಸನೆಯಂಗೈಯ್ಯುತ ಎರಡು ಸಂಧ್ಯಾಕಾಲಗಳಲ್ಲಿಯೂ ಮೌನವನ್ನು ಧರಿಸಿ ಅಚಂಚಲಚಿತ್ತನಾಗಿ ಗಾಯತ್ರಿಯನ್ನು ಜಪಿಸಬೇಕು ; ಗುರುವಿನಿಂದ ಕರೆಯಲ್ಪಟ್ಟವನಾಗಿ ಭಕ್ತಿಯಿಂದ ಗುರುವಿನಲ್ಲಿ ವೇದಗಳನ್ನಭ್ಯಾಸಂಗೈಯ್ಯುತ ಉಪಕ್ರಮೋಪಸಂಹಾರಗಳಲ್ಲಿ ಗುರುಚರಣವನ್ನು ನಮಿಸಿ ಮೌಂಜಿಮೇಖಲೆಯನ್ನೂ ಕೃಷ್ಣಾಜಿನ ವಸ್ತ್ರಗಳನ್ನೂ ಜಟೆಗಳನ್ನೂ ಕಮಂಡಲವನ್ನೂ ದಂಡೋಪವೀತಗಳನ್ನೂ ಧರಿಸಿ ದರ್ಭಪಾಣಿಯಾಗಿರಬೇಕು ; ಸಾಯಂಪ್ರಾತಃಕಾಲಗಳಲ್ಲಿ ಭಿಕ್ಷೆಯನ್ನು ಮಾಡಿ ಗುರುವಿಗೆ ವಿಜ್ಞಾಪನಂಗೈದು ತದನುಜ್ಞೆಯಿಂದ ಭೋಜನಂಗೈಯಬೇಕು ; ಇಲ್ಲದಿದ್ದರೆ ಉಪವಾಸಂಗೈಯುವದು ; ಒಳ್ಳೇ ಶೀಲವುಳ್ಳವನಾಗಿ ಮಿತವಾಗಿ ಭೋಜನಂಗೈಯುತ ಅಧ್ಯಯನದಲ್ಲಿ ಸಮರ್ಥನಾಗಿ ವಿಶ್ವಾಸವುಳ್ಳವನಾಗಿ ಇಂದ್ರಿಯಗಳನ್ನು ಜಯಿಸಿ ಸ್ತ್ರೀಯಲ್ಲಿಯೂ ಸ್ತ್ರೀರ ವಶವಾದವರಲ್ಲಿಯೂ ಎಷ್ಟು ಉಪಯೋಗವೋ ಅಷ್ಟೇ ಮಾತನಾಡುವದು ; ಬ್ರಹ್ಮಚಾರಿಯಾದವನೂ ಗೃಹಸ್ಥನಲ್ಲದವನೂ ಸ್ತ್ರೀಕಥೆಯನ್ನೇ ವರ್ಜಿಸಬೇಕು ; ಯಾಕಂದರೆ : ಇಂದ್ರಿಯಗಳು ಬಲಿಷ್ಠವಾದಕಾರಣ ಎಂಥಾವನ ಮನಸ್ಸನ್ನಾದರೂ ಅಪಹಾರಂಗೈವವು ; ಯೌವನಸ್ಥನಾದವನು ಯೌವನವತಿಗಳಾದ ಗುರುವಿನ ಪತ್ನಿಮೊದಲಾದವರಿಂದ ತಲೆಯನ್ನು

ಬಾಚಿಕೊಳ್ಳಲಾಗದು ; ಶರೀರವನ್ನೊತ್ತಿಸಿಕೊಳ್ಳಲಾಗದು ; ಅಭ್ಯಂಜನವನ್ನು ಮಾಡಿಸಿಕೊಳ್ಳಲಾಗದು ; ಯಾವಕಾರಣದಿಂದ ಸ್ತ್ರೀಯೆಂಬ ವ್ಯಕ್ತಿಮಾತ್ರವು ಅಗ್ನಿಯಂತೆಯೂ ಪುರುಷನು ಘೃತಕುಂಭದಂತೆಯೂ ಇರುವರು ; ಬುದ್ಧಿಶಾಲಿಯಾದವನು ಪಾನಭೋಜನಾದಿಗಳಲ್ಲಿ ಎಷ್ಟು ಉಚಿತವೋ ಅಷ್ಟುಮಾತ್ರದಲ್ಲೇ ಸಾಮೀಪ್ಯ ಸಲ್ಲಾಪಾದಿಗಳನ್ನು ಮಾಡುತ ಏಕಾಂತಸ್ಥಳಾದಿಗಳಲ್ಲಿ ಪುತ್ರಿಯನ್ನಾದರೂ ವರ್ಜನಂಗೈಯಬೇಕು ; ಸ್ವಸ್ವರೂಪ ಸಾಕ್ಷಾತ್ಕಾರದಿಂದ ಈ ದೇಹೇಂದ್ರಿಯಾದಿಗಳನ್ನು ಆಭಾಸಮಾತ್ರವನ್ನಾಗಿ ನಿಶ್ಚಯಿಸಿ ಎಷ್ಟುಪರ್ಯಂತವು ಈ ಜೀವನು ಈಶ್ವರನಾಗುವದಿಲ್ಲವೋ ಅಷ್ಟುಪರ್ಯಂತವು ನಾನು ಪುರುಷನು ಇವಳು ಸ್ತ್ರೀಯು ಎಂಬ ಭೇದವು ಪೋಗುವದಿಲ್ಲವಾದಕಾರಣ ಬಿಡುವದು ; ಸುಶೀಲವೆಂಬುವದೇ ಮೊದಲಾದ ಸರ್ವವು ಗೃಹಸ್ಥನಂತೆ ಯತಿಗೂ ಉಚಿತಗಳು ; ಇಷ್ಟುಮಾತ್ರ ವಿಶೇಷ ಋತುಗಾಮಿಯಾದ ಗೃಹಸ್ಥನಿಗೆ ಗುರುವಿನ ಅನುವರ್ತನವು ಐಚ್ಛಿಕವು ; ಯಾರು ವ್ರತನಿಷ್ಠರೋ ಅವರು ಶರೀರಾಭ್ಯಂಜನ ಶಿರೋಭ್ಯಂಜನ ಶರೀರೋನ್ಮರ್ದನಗಳನ್ನೂ ಸ್ತ್ರೀಚರಿತ್ರಾಸಕ್ತಿಯನ್ನೂ ಕುಡ್ಯಾದಿಗಳಲ್ಲಿ ಬರದ ಸ್ತ್ರೀಚಿತ್ರದ ಅವಲೋಕನವನ್ನೂ ಮಾಂಸದಂತೆ ನಿಷಿದ್ಧಗಳಾದ ಭೋಗ್ಯವಸ್ತುಗಳನ್ನೂ ಮದಕರಗಳಾದ ಪಾನದ್ರವ್ಯಗಳನ್ನೂ ಉತ್ತಮವಾದ ಗಂಧಲೇಪನವನ್ನೂ ಆಲಂಕಾರವನ್ನೂ ತ್ಯಜಿಸುವದು ; ಈಪ್ರಕಾರವಾಗಿ ಗುರುಕುಲವಾಸಂಗೈದು ಬ್ರಾಹ್ಮಣನು ಯಥಾಶಾಸ್ತ್ರವಾಗಿ ಯಾವದರ್ಥಾವಗತಿಯೋ ಅಷ್ಟುಪರ್ಯಂತ ಷಡಂಗಗಳಿಂದಲೂ ಉಪನಿಷತ್ತುಗಳಿಂದಲೂ ಯುಕ್ತವಾದ ವೇದವನ್ನು ನಿಯಮದಿಂದ ಪಾಠಂಗೈವದು ; ಸಮರ್ಥನಾದವನಾದರೆ ಗುರುವಿಗೆ ಕೊಡತಕ್ಕ ದಕ್ಷಿಣೆಯನ್ನು ಕೊಟ್ಟು ಗುರುವಿನಿಂದ ಅನುಜ್ಞಾತನಾಗಿ ಗೃಹವನ್ನೈದಿ ವಿವಾಹವನ್ನಾದರೂ ಮಾಡಿಕೊಳ್ಳಲಿ ವನವನ್ನಾದರೂ ಹೊಂದಲಿ ಸನ್ಯಾಸವನ್ನಾದರೂ ಮಾಡಲಿ ಅಲ್ಲೇಯಾದರೂ ವಾಸಂಗೈಯಲಿ ; ಅನಂತರದಲ್ಲಿ ಅಗ್ನಿಯಲ್ಲಿ ಗುರುವಿನಲ್ಲಿ ತನ್ನಲ್ಲಿ ಸರ್ವಪ್ರಾಣಿಗಳಲ್ಲಿಯೂ ಶ್ರೀಭಗವಂತನು ಅಪ್ರವಿಷ್ಟನಾದಾಗ್ಯೂ ಸ್ವಾಶ್ರಯಗಳಾದ ಜೀವಗಳಿಂದ ಕೂಡ ಪ್ರವಿಷ್ಟನಂತೆ ತಿಳಿವದು ; ಈರೀತಿಯಲ್ಲಿ ಬ್ರಹ್ಮಚಾರಿಯು ವಾನಪ್ರಸ್ಥನು ಗೃಹಸ್ಥನು ಯತಿಯು ನಡೆಯುವನಾಗಿ ತಿಳಿಯಲ್ಪಟ್ಟ ಜ್ಞಾನವುಳ್ಳವನಾದರೆ ಪರಬ್ರಹ್ಮವನ್ನೈದುವನು ; ಯಾವ ನಿಯಮಗಳಿಂದ ಮನುಜನು ಮಹರ್ಲೋಕಾದಿಗಳನ್ನೈದುವನೋ ಮುನಿಗಳಿಂದ ಪೇಳಲ್ಪಟ್ಟ ಅಂಥಾ ವಾನಪ್ರಸ್ಥನ ನಿಯಮಗಳನ್ನು ನಿರೂಪಣಂಗೈವೆನು ; ಉತ್ತು ಬೆಳದ ಧಾನ್ಯವನ್ನು ಉಳದೆ ಬೆಳದದ್ದಾದಾಗ್ಯೂ ಅಕಾಲದಲ್ಲಿ ಆದ್ದನ್ನು ಅಗ್ನಿಯಲ್ಲಿ ಪಕ್ವವಾದ ಅಕ್ಕಿಮೊದಲಾದ್ದನ್ನು ಭುಂಜಿಸಲಾಗದು ; ಅರ್ಧಪಕ್ವವಾದ ಫಲವನ್ನು ಭುಂಜಿಸುವದು ; ವನದಲ್ಲಿ ಬೆಳದ ನೀವಾರಾದಿಧಾನ್ಯಗಳಿಂದ ಚರುಪುರೋಡಾಶಾದಿಗಳನ್ನು ಧರ್ಮಶಾಸ್ತ್ರಚೋದಿತಗಳಾದಕಾರಣ ಹವನಾದಿಗಳಲ್ಲಿ ಅಂಗೀಕರಿಸುವದು ; ಪ್ರತಿನಿತ್ಯದಲ್ಲೂ ನೂತನವಾಗಿ ಧಾನ್ಯಲಭ್ಯವಾದಲ್ಲಿ ಪೂರ್ವದಿವಸದಲ್ಲಿ ಸಂಗ್ರಹಿತಶೇಷ ಧಾನ್ಯವನ್ನು ತ್ಯಾಗಂಗೈವದು; ಹಿಮವನ್ನು ವಾಯುವನ್ನು ಅಗ್ನಿಯನ್ನು ವರ್ಷವನ್ನು ಸೂರ್ಯನ ಬಿಸಲನ್ನು ತಾನು ಸಹಿಸುವನಾಗಿ ಅಗ್ನಿ ಸಂರಕ್ಷಣೆಗೋಸ್ಕರ ಪರ್ಣಶಾಲೆಯನ್ನಾದರೂ ಗಿರಿಗುಹೆಯನ್ನಾದರೂ ಆಶ್ರಯಮಾಡುವದು ; ಕೇಶಗಳನ್ನು ಶರೀರರೋಮಗಳನ್ನು ನಖಗಳನ್ನು ಗಡ್ಡಮೀಸೆಗಳನ್ನು ಶರೀರಕಲ್ಮಷವನ್ನೂ ಧರಿಸುವನಾಗಿ ಜಟೆಗಳನ್ನು ಧರಿಸಿ ಕಮಂಡಲವನ್ನೂ ಕೃಷ್ಣಾಜಿನವನ್ನೂ ದಂಡವನ್ನೂ ವಸ್ತ್ರವೇ ಮೊದಲಾದ ಉಪಕರಣಗಳನ್ನೂ ಧರಿಸಬೇಕು ; ಈರೀತಿಯಿಂದ ವನದಲ್ಲಿ ಹನ್ನೆರಡುವರ್ಷವನ್ನಾದರೂ ವರ್ಷವನ್ನಾದರೂ ಮನವಡಂಬಟ್ಟಂತೆ ವಾಸಂಗೈಯಬೇಕು ; ಈ ವಾನಪ್ರಸ್ಥನಿಯಮಗಳನ್ನು ಮಾಡಲು ಜರಾರೋಗಾದಿಗಳಿಂದ ಅಸಮರ್ಥನಾದರೆ ಜ್ಞಾನಾಭ್ಯಾಸನಿರತನಾಗಿ ಅನಶನಾದಿಗಳನ್ನು ಮಾಡುವದು ; ಅನಂತರದಲ್ಲಿ ಅಗ್ನಿಯನ್ನು ಸಮಾರೋಪಣಂಗೈದು ಅಹಂಕಾರ ಮಮಕಾರಗಳನ್ನು ಬಿಟ್ಟು ಯಥಾಯೋಗ್ಯವಾಗಿ ಆಕಾಶಾದಿ ಸ್ವಕಾರಣಗಳಲ್ಲಿ ಸ್ವದೇಹವನ್ನು ವಿಲಾಪನಂಗೈವದು ; ಆಕಾಶದಲ್ಲಿ ಶರೀರಛಿದ್ರಗಳಾದ ಆಕಾಶಗಳನ್ನೂ ವಾಯುವಿನಲ್ಲಿ ನಿಶ್ವಾಸಗಳನ್ನೂ ತೇಜಸ್ಸಿನಲ್ಲಿ ಉಷ್ಣತೆಯನ್ನೂ ಉದಕಗಳಲ್ಲಿ ರಕ್ತವನ್ನೂ ಶ್ಲೇಷ್ಮ ಮೊದಲಾದ್ದನ್ನೂ ಕ್ಷಿತಿಯಲ್ಲಿ ಲಯಿಸಿ ಇನ್ನೂ ಉಳಿದ ಅಸ್ಥಿಮಾಂಸಾದಿಗಳನ್ನು ತಮ್ಮ ತಮ್ಮ ಉತ್ಪತ್ತಿಸ್ಥಾನವಾದ ಭೂತಗಳಲ್ಲಿ ಬುದ್ಧಿಶಾಲಿಯಾದವನು ವಿಲಾಪನಂಗೈಯ್ಯಬೇಕು ; ಈರೀತಿ ಸ್ಥೂಲಶರೀರದ ಲಯವನ್ನು ಪೇಳಿ ಲಿಂಗಶರೀರದ ಅಧ್ಯಾತ್ಮಾದಿಗಳಿಗೆ ಲಯವನ್ನು ಪೇಳುವೆನು ; ಅದರಲ್ಲಿ ಅಧ್ಯಾತ್ಮಾದಿಗಳಿಗೆ ಸ್ವಕಾರಣಗಳಾದ ರಾಜಸಾಹಂಕಾ

ರಾದಿಗಳಲ್ಲಿ ಲಯವು ಪೇಳತಕ್ಕದ್ದು; ಆದಾಗ್ಯೂ ಅವುಗಳ ಈ ಲಯಭಾವನೆಯು ಅದ್ವಿತೀಯಾತ್ಮ ಸಾಕ್ಷಾತ್ಕಾರವುಳ್ಳ ಪುರುಷನಿಗೆ ಸಾಧ್ಯವಾದ್ದರಿಂದ ಯಥಾತಥಾ ಜಗಲ್ಲಯವಾಗುತಿರಲು ಈ ಇಂದ್ರಿಯಾಭಿಮಾನಿ ದೇವತೆಗಳಗೆ ಪ್ರಾಧಾನ್ಯದಿಂದ ಇಂದ್ರಿಯ ತದ್ವಿಷಯಗಳಿಗೆ ದೇವತೆಗಳಲ್ಲಿ ಲಯವು ಪೇಳಲ್ಪಡುತಲಿಧೆ; ಅರ್ಥಸಹಿತವಾದ ವಾಕ್ಯನ್ನು ಅಗ್ನಿಯಲ್ಲಿ ಲಯಿಸುವದು; ಶಿಲ್ಪದಿಂದ ಯುಕ್ತಗಳಾದ ಹಸ್ತಗಳನ್ನು ಇಂದ್ರನಲ್ಲಿ ಲಯಿಸುವದು; ಪಾದಗಳನ್ನು ವಿಷ್ಣುವಿನಲ್ಲಿ ಲಯಿಸುವದು; ಸುರತವ್ಯಾಪಾರಸಹಿತವಾದ ಉಪಸ್ಥೇಂದ್ರಿಯವನ್ನು ಬ್ರಹ್ಮನಲ್ಲಿ ಲಯಿಸಬೇಕು; ಪುರೀಷೋತ್ಸರ್ಜನರೂಪವಾದ ವ್ಯಾಪಾರಸಹಿತವಾದ ವಾಯುವನ್ನು ಮೃತ್ಯುವಿನಲ್ಲಿ ಲಯಿಸಬೇಕು; ನಾದದಿಂದ ಕೂಡಿದ ಶ್ರೋತ್ರವನ್ನು ದಿಕ್ಕಿನಲ್ಲಿ ಲಯಿಸಬೇಕು; ಸ್ಪರ್ಶಸಹಿತವಾದ ತ್ವಗೇಂದ್ರಿಯವನ್ನು ಆಧ್ಯಾತ್ಮನಲ್ಲಿ ಲಯಿಸಬೇಕು! ಕೇಳ್ವೈ ಅರಸೇ, ರೂಪಸಹಿತವಾದ ಚಕ್ಷುರಿಂದ್ರಿಯವನ್ನು ಆದಿತ್ಯರೂಪವಾದ ಜ್ಯೋತಿಸ್ಸಿನಲ್ಲಿ ಲಯಿಸಬೇಕು; ರಸಗಳೊಡಗೂಡಿದ ರಸವನ್ನು ಪ್ರಚೇತಸ್ಸಿನಿಂದ ಉದಕಗಳಲ್ಲಿ ಲಯಿಸಬೇಕು; ಗಂಧಸಹಿತವಾದ ಘ್ರಾಣವನ್ನು ಕ್ಷಿತಿಯಲ್ಲಿ ಲಯಿಸುವದು; ಮನಸ್ಸನ್ನು ಮನೋರಥಗಳಿಂದೊಡಗೂಡಿ ಚಂದ್ರನಲ್ಲಿ ಲಯಿಸಬೇಕು; ಬೋಧ್ಯಂಗಳಿಂದೊಡಗೂಡಿದ ಬುದ್ಧಿಯನ್ನು ಬ್ರಹ್ಮನಲ್ಲಿ ಲಯಿಸಬೇಕು; ಅಧ್ಯಾತ್ಮಸಹಿತಗಳಾದ ಕರ್ಮಗಳನ್ನು ರುದ್ರನಲ್ಲಿ ಲಯಿಸುವದು; ಯಾವ ರುದ್ರನಿಂದ ಅಹಂಕಾರಗಳುಂಟಾಗುವವೋ ಅಂಥಾ ರುದ್ರನಲ್ಲಿ ಅಹಂಕಾರವನ್ನು ಸೇರಿಸಬೇಕು; ಅಹಂಕಾರವನ್ನು ಮಹತ್ತತ್ವದಲ್ಲಿಯೂ ಮಹತ್ತತ್ವವನ್ನು ಅವ್ಯಕ್ತದಲ್ಲಿಯೂ ಅವ್ಯಕ್ತವನ್ನು ಅಕ್ಷರದಲ್ಲಿಯೂ ಲಯಿಸುವದು; ಈರೀತಿಯಿಂದ ಸರ್ವೋಪಾಧಿಲಯದಿಂದ ಉಳಿದ ಚಿನ್ಮಾತ್ರನಾದ ಆತ್ಮನಾದ ಕ್ಷೇತ್ರಜ್ಞನನ್ನು ಅಕ್ಷರನನ್ನಾಗಿ ತಿಳಿದು ಅದ್ವಯನಾಗಿ ಕಾಷ್ಠಗಳನ್ನವಲಂಬಿಸಿ ಜ್ವಲಿಸುವ ಅಗ್ನಿಯು ಕಾಷ್ಠವು ಭಸ್ಮೀಭೂತವಾದಮೇಲೆ ಹ್ಯಾಗೆ ಶಾಂತವಾಗುವದೋ ಹಾಗೆ ವಿರತಿಯನ್ನೈದುವದು” ಎಂದು ನುಡಿದನು.

---

೧೩ ನೇ ಅಧ್ಯಾಯ.

ಆರು ಮುಕ್ಷುವಾದ ಯತಿಧರ್ಮವೂ—ಅವಧೂತೋಪಾಖ್ಯಾನವು.

“ಎಲೈ ಧರ್ಮರಾಯನೆ, ಈರೀತಿಯಿಂದ ತತ್ವವನ್ನು ತಿಳಿದು ಸಮರ್ಥನಾದವನು ಸನ್ಯಾಸವನ್ನಾಶ್ರಯಿಸಿ ಶರೀರಮಾತ್ರವುಳ್ಳವನಾಗಿ ಗ್ರಾಮೈಕರಾತ್ರಿವಾಸಿಯಾಗಿ ನಿರಪೇಕ್ಷನಾಗಿ ಭೂಮಿಯಲ್ಲಿ ಸಂಚರಿಸುವದು; ಈರೀತಿಯಿಂದ ನಿರಪೇಕ್ಷನಾಗಿರುವ ಸನ್ಯಾಸಿಯು ಕೌಪೀನಮಾತ್ರ ವಸ್ತ್ರವುಳ್ಳವನಾಗಬೇಕು! ಕೇಳ್ವೈ ಅರಸೇ, ದಂಡವೇ ಮೊದಲಾದುವನ್ನು ಹೊರ್ತು ಅನ್ಯರಿಂದ ವ್ಯಕ್ತವಾದ ವಸ್ತ್ರವನ್ನು ಕೌಪೀನಕ್ಕೆ ಎಷ್ಟು ಉಪಯೋಗವೋ ಅಷ್ಟು ಹೊರ್ತು ಅಧಿಕವನ್ನು ಗ್ರಹಿಸಲಾಗದು; ಆತ್ಮಾರಾಮನಾಗಿ ಬಂದು ಆಶೆಯೂ ಇಲ್ಲದೆ ಒಬ್ಬನೇ ಸಂಚರಿಸುವದು; ಸರ್ವಭೂತಗಳಲ್ಲಿಯೂ ಸೌಹಾರ್ದಯುಕ್ತನಾಗಿ ಶಾಂತನಾಗಿ ಶ್ರೀನಾರಾಯಣನೇ ಗತಿಯುಳ್ಳವನಾಗಿ ಈ ಸಮಸ್ತಪ್ರಪಂಚವನ್ನೂ ಕಾರ್ಯಕಾರಣವ್ಯತಿರಿಕ್ತನಾದ ಅವ್ಯಯನಾದ ಪರಬ್ರಹ್ಮನಲ್ಲಿ ನೋಡಬೇಕು; ಕಾರ್ಯಕಾರಣರೂಪವಾದ ಈ ಪ್ರಪಂಚದಲ್ಲಿ ಆ ಪರಬ್ರಹ್ಮನನ್ನು ನೋಡಬೇಕು; ಸುಷುಪ್ತಿಯಲ್ಲಿ ಆತ್ಮತತ್ವವು ಮನಸ್ಸಿನಿಂದ ಆವೃತವಾಗಿರುವದು; ಜಾಗ್ರತ್ಸ್ವಪ್ನಗಳಲ್ಲಿಯಾದರೋ ವಿಕ್ಷಿಪ್ತವಾಗಿ ತೋರುವದು; ಸಂಧಿಯಲ್ಲಿ ತಮಸ್ಸೂ ಇಲ್ಲ; ವಿಕ್ಷೇಪವೂ ಇಲ್ಲ; ಆದಕಾರಣ ಆಗ ಶುದ್ಧ ಬ್ರಹ್ಮಸ್ವರೂಪವೇ ಹೊರ್ತು ಮತ್ತೊಂದು ತೋರದಾದಕಾರಣ ಆ ಬ್ರಹ್ಮವನ್ನೇ ಭಾವಿಸುತ ಆತ್ಮದರ್ಶಿಯಾಗಿ ಆತ್ಮತತ್ವವನ್ನೇ ನೋಡುತ ಬಂಧಮೋಕ್ಷಗಳನ್ನು ಮಾಯಾಮಾತ್ರಗಳನ್ನಾಗಿ ತಿಳಿದು ಬ್ರಹ್ಮನನ್ನು ಭಾವಿಸಬೇಕು; ಧ್ರುವವಾದ ಮೃತ್ಯುವನ್ನೂ ಅಧ್ರುವವಾದ ಜೀವಿತವನ್ನೂ ತುಚ್ಛವನ್ನಾಗಿ ತಿಳಿದು ಲೋಕಗಳನ್ನೂ ಉತ್ಪತ್ತಿ ವಿಲಯಗಳಿಗೆ ನಿಯಾಮಕವಾದ ಕಾಲವನ್ನೂ ಪ್ರತೀಕ್ಷಿಸುತಲಿರಬೇಕು; ಅನಾತ್ಮಪರಗಳಾದ ಅಸಚ್ಛಾಸ್ತ್ರಗಳಲ್ಲಿ ಆಸಕ್ತನಾಗದೇ ಜೀವನೋಪಾಯ ಸಾಧನಗಳಾದ ನಕ್ಷತ್ರ ವಿದ್ಯಾ

ದಿಗಳ ವೃತ್ತಿಯನ್ನಂಗೀಕರಿಸದೆ ಜಲ್ಪವಿತಂಡಾದಿ ದುಷ್ಟವಾದಗಳನ್ನು ಬಿಟ್ಟು ವಂಚನಾದಿಗಳಿಂದ ಒಂದು ಪಕ್ಷವನ್ನಾಶ್ರಯಿಸಲಾಗದು ; ಶಿಷ್ಯರನ್ನು ಕಟ್ಟಿಕೊಂಡು ತಿರಗಲಾಗದು ; ಬಹಳ ಗ್ರಂಥಗಳನ್ನಭ್ಯಾಸಂಗೈಯದೆ ವ್ಯಾಖ್ಯಾನಗಳನ್ನಾಚರಿಸದೆ ಮಠಾದಿಗಳ ನಿರ್ಮಾಣವನ್ನಾಚರಿಸದೆ ಇರಬೇಕು ; ಇನ್ನು ಪರಮಹಂಸ ಧರ್ಮವನ್ನು ಹೇಳುವೆನು ಕೇಳು : ಮಹಾತ್ಮನಾದ ಸಮಚಿತ್ತನಾದ ಯತಿಗೆ ಧರ್ಮ ಸಂಪಾದನಾರ್ಥವಾಗಿ ಆಶ್ರಮ ಕೆಲಸವಿಲ್ಲ ; ಆದಕಾರಣ ಜ್ಞಾನೋತ್ಪತ್ತಿಪರ್ಯಂತವೂ ಬಹೂದಕಾದಿ ಚಿಹ್ನಗಳನ್ನಾಶ್ರಯಿಸಿ ಸತ್ವಶುದ್ಧಿಗೋಸ್ಕರ ಯಮನಿಯಮಾದಿಗಳನ್ನಾಚರಿಸಬೇಕು ; ಜ್ಞಾನೋತ್ಪತ್ತಿಯಾದಮೇಲೆ ಯಮನಿಯಮಾದಿಗಳಿಂದೇನು ? ಬಹೂದಕಾದಿ ಚಿಹ್ನಗಳಿಂದ ಪ್ರಯೋಜನವಿಲ್ಲ ; ಆದ್ದರಿಂದ ಆ ಚಿಹ್ನಗಳು ಇದ್ದರೂ ಹೋದರೂ ಚಿಂತೆಪಡಬಾರದು ; ವ್ಯಕ್ತಗಳಾದ ಬಾಹ್ಯಗಳಾದ ದಂಡಕಮಂಡಲಮೊದಲಾದ ಚಿಹ್ನಗಳಿಂದರಹಿತನಾಗಿ ಆತ್ಮಾನುಸಂಧಾನಮಾತ್ರವೇ ಮುಖ್ಯವಾಗಿ ತಿಳಿದ ಬುದ್ಧಿಶಾಲಿಯಾದ ಪರಮಹಂಸನು ಅಂತರಜ್ಞಾನದಿಂದ ಪೂರ್ಣನಾಗಿ ಉನ್ಮತ್ತನಂತೆಯೂ ಬಾಲಕನಂತೆಯೂ ಮೂಕನಂತೆಯೂ ಪಿಶಾಚದಂತೆಯೂ ಜನರಿಗೆ ತೋರುತ ಸಂಚರಿಸುವದು ; ಈ ವಿಷಯದಲ್ಲಿ ಪ್ರಹ್ಲಾದನಿಗೂ ಅಜಗರ ವೃತ್ತಿಯುಳ್ಳ ಮುನಿಗೂ ಸಂವಾದರೂಪವಾದ ಪುರಾತನವಾದ ಇತಿಹಾಸವನ್ನು ಉದಾಹರಿಸಿ ತೋರುವೆನು ಕೇಳು ; ಒಂದಾನೊಂದುದಿನ ಭಗವತ್ಪ್ರಿಯನಾದ ಪ್ರಹ್ಲಾದನು ಈ ಪ್ರಪಂಚದ ತತ್ವವನ್ನು ತಿಳಿಯಲೋಸುಗ ಕೆಲವರಾದ ಮಂತ್ರಿಗಳಿಂದೊಡಗೂಡಿ ಸಂಚರಿಸುತ ಸಹ್ಯಪರ್ವತದ ಸಮೀಪದಲ್ಲಿ ಪ್ರವಹಿಸುವ ಕಾವೇರಿಯತೀರದಲ್ಲಿ ಭೂಮಿಯಲ್ಲಿ ಮಲಗಿರುವ ಧೂಳಿಗಳಿಂದ ಯುಕ್ತಗಳಾದ ಅವಯವಗಳಿಂದ ಮರೆಗೈಯಲ್ಪಟ್ಟ ನಿರ್ಮಲವಾದ ತೇಜಸ್ಸುಳ್ಳ ಒಬ್ಬ ಅವಧೂತನನ್ನು ಕಂಡು ಪ್ರಶ್ನೆಗೈಯ್ಯುವನಾಗಿ ಕರ್ಮಗಳಿಂದಲೂ ಆಕೃತಿಗಳಿಂದಲೂ ವಾಕ್ಯಗಳಿಂದಲೂ ಚಿಹ್ನಗಳಿಂದಲೂ ವರ್ಣಾಶ್ರಮಗಳಿಂದಲೂ ಜನರು ಯಾವನನ್ನು ನಿಶ್ಚಯವಾಗಿ ತಿಳಿಯಲಾರರೋ ಅವನೇ ಆತ್ಮನಾದಾನೋ ಅಲ್ಲವೋ ಎಂದು ಆ ಋಷಿಯನ್ನು ಕುರಿತು ನಮ್ರತೆಯಿಂದ ಪೂಜಿಸಿ ಯಥಾವಿಧಿಯಾಗಿ ಪಾದಗಳಲ್ಲಿ ಶಿರಸ್ಸಿನಿಂದ ನಮಸ್ಕಾರಂಗೈದು ‘ಎಲೈ ಮಹಾತ್ಮನೆ, ನೀನು ಪ್ರಯತ್ನವಿಲ್ಲದವನಾದಾಗ್ಯೂ ಭೋಗವುಳ್ಳವನಂತೆ ಸ್ಥೂಲವಾದ ದೇಹವನ್ನು ಧರಿಸುತ್ತೀಯೆ ; ಈ ಲೋಕದಲ್ಲಿ ಪ್ರಯತ್ನವುಳ್ಳವರಿಗೆ ವಿತ್ತಲಾಭವುಂಟಾಗಿರುವದು ; ವಿತ್ತವುಳ್ಳವರಿಗೆ ಭೋಗವುಂಟು ; ಭೋಗಿಗಳಿಗೆ ದೇಹವು ಸ್ಥೂಲವಾಗಿರುವದು ; ಅನ್ಯಥಾ ಆಗುವದಿಲ್ಲ ! ಎಲೈ ಬ್ರಹ್ಮಜ್ಞಾನವುಳ್ಳ ಬ್ರಾಹ್ಮಣನೇ, ಇಲ್ಲಿ ಪ್ರಯತ್ನರಹಿತನಾಗಿ ಮಲಗಿರುವ ನಿನಗೆ ಯಾವದರಿಂದ ಭೋಗವುಂಟಾಗಿರುವದೋ ಅಂಥಾ ಅರ್ಥವಿಲ್ಲವಾದಕಾರಣ ಭೋಗವಿಲ್ಲದಿರುವ ನಿನ್ನ ದೇಹವು ಯಾವ ಕಾರಣದಿಂದ ಸ್ಥೂಲವಾಯಿತು ; ಇದನ್ನು ನನಗೆ ಹೇಳತಕ್ಕದ್ದಾದರೆ ನಿರೂಪಿಸು ; ಇದಲ್ಲದೇ ನೀನು ವಿದ್ವಾಂಸನು ಸಮರ್ಥನು ಚತುರನು ಲೋಕರಂಜಕಗಳಾದ ಕಥೆಗಳನ್ನು ಹೇಳಲು ಯೋಗ್ಯನಾದವನು ಸಮದರ್ಶನನು ಲೋಕದ ಕರ್ಮವನ್ನು ಸ್ಮರಿಸಿ ನೋಡುವನಾದಾಗ್ಯೂ ಸರ್ವ ವ್ಯಾಪಾರವನ್ನು ಬಿಟ್ಟು ಆತ್ಮಾನುಸಂಧಾನಂಗೈಯುತ ಮಲಗಿರುವನಾಗಿದ್ದೀಯೆ’ ಎಂದು ದೈತ್ಯೇಂದ್ರನಾದ ಪ್ರಹ್ಲಾದನಿಂದ ಪ್ರಶ್ನೆಗೈಯಲ್ಪಟ್ಟ ಮುನಿಯು ಸಂತೋಷದಿಂದ ಪ್ರಹ್ಲಾದನ ವಚನವೆಂಬ ಸುಧೆಯಿಂದ ವಶೀಕೃತನಾಗಿ ‘ಎಲೈ ಅಸುರಶ್ರೇಷ್ಠನೇ, ಸಾಧುಗಳಿಗೆ ಸಮ್ಮತನಾದ ನೀನು ಜ್ಞಾನದೃಷ್ಟಿಯಿಂದ ಇದನ್ನು ತಿಳಿದೇ ಇದ್ದೀಯೆ ; ಮನುಷ್ಯರ ಪ್ರವೃತ್ತಿ ನಿವೃತ್ತಿಗಳಿಗೂ ಫಲವನ್ನು ನೀನೇ ತಿಳಿದಿದ್ದೀಯೆ ; ಅವ್ಯಾಹತ ಷಡ್ಗುಣೈಶ್ವರ್ಯಯುಕ್ತನಾದ ಶ್ರೀ ನಾರಾಯಣನು ಯಾವ ನಿನ್ನ ಹೃದಯದಲ್ಲಿ ವಾಸಂಗೈದು ಅಂಧಕಾರವನ್ನು ಸೂರ್ಯನಂತೆ ಪರಿಹರಿಸುವನೋ ಆತೆರದಿಂದ ಭಕ್ತಿಮಾತ್ರದಿಂದ ತುಷ್ಟನಾಗಿ ಅಜ್ಞಾನವನ್ನು ಪರಿಹರಿಸಿ ಸುಜ್ಞಾನವನ್ನು ಇತ್ತನೋ ಅಂಥಾ ನೀನು ಸಕಲವನ್ನೂ ತಿಳಿದಿದ್ದೀಯೆ ; ಯಾವಕಾರಣದಿಂದ ನಿನ್ನೊಡನೆ ಸಲ್ಲಾಪವು ಪಾಪವನ್ನು ಪರಿಹರಿಸಿ ಚಿತ್ತಪ್ರಸಾದವನ್ನುಂಟುಮಾಡುವದೋ ಅದುಕಾರಣ ನೀನು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಹೇಳುತ್ತೇನೆ ಕೇಳು : ಪೂರ್ವದಲ್ಲಿ ನಾನು ಸಂಸಾರ ಪ್ರವಾಹವನ್ನುಂಟುಮಾಡುವ ಯಥೋಚಿತಗಳಾದ ಕಾಮಗಳಿಂದ ತೃಪ್ತಿಯಿಲ್ಲದೆ ಮೇಲೆ ಮೇಲೆ ಅಧಿಕವಾಗುವ ಆಶೆಯಿಂದ ಅನುಚಿತಗಳಾದ ಕರ್ಮಗಳನ್ನು ಮಾಡುತ ನಾನಾವಿಧಗಳಾದ ಯೋನಿಗಳಲ್ಲಿ ಜನಿಸಿದೆನು ; ಈಗ ದೈವವಶದಿಂದ ಸ್ವರ್ಗ

ಮೋಕ್ಷಗಳಿಗೂ ತಿರ್ಯಗ್ಜನ್ಮಗಳಿಗೂ ಮಾನುಷಜನ್ಮಕ್ಕೂ ಕಾರಣವಾದ ಈ ಲೋಕವನ್ನು ಪಡೆಯಿಸಲ್ಪಟ್ಟೆನು ; ಈ ಮಾನುಷಜನ್ಮದಲ್ಲಿ ವಿಷಯಸುಖಕ್ಕೋಸ್ಕರಲೂ ದುಃಖಪರಿಹಾರಕ್ಕೋಸ್ಕರಲೂ ಕರ್ಮಗಳನ್ನು ಮಾಡುವದನ್ನೂ ಜನಗಳಿಗೆ ಉಂಟಾಗುವ ಫಲವಿಪರ್ಯಾಸವನ್ನೂ ನೋಡಿ ನಾನು ನಿವೃತ್ತಿಯನ್ನು ಪಡೆದೆನು ; ಈ ಜೀವನಿಗೆ ಸುಖವೇ ಸ್ವರೂಪವಾದ್ದರಿಂದ ಆ ಸುಖವು ಸರ್ವಕಾಮಗಳ ಉಪಶಾಂತಿಯುಂಟಾದಮೇಲೆ ಪ್ರಕಾಶಿಸುವದಾದ ಕಾರಣ ಸರ್ವವಿಷಯದಲ್ಲೂ ವಿರಕ್ತತೆಯಿಂದ ಜೀವರ ವಿಷಯಸುಖವನ್ನು ತುಚ್ಛವನ್ನಾಗಿಯೂ ಮನೋರಥಗಳನ್ನು ಅಶಾಶ್ವಿತಗಳನ್ನಾಗಿಯೂ ತಿಳಿದು ಮಲಗಿದೆನು ; ಈರೀತಿಯಲ್ಲಿ ಪುರುಷನು ತನ್ನಲ್ಲಿರುವ ಪರಮಸುಖವನ್ನು ಮರತು ಅಸದ್ರೂಪವಾದ ದ್ವೈತವನ್ನಾಶ್ರಯಿಸಿ ಘೋರವಾದ ಸಂಸಾರವನ್ನು ಪಡೆಯುವನು ; ಜಲದಲ್ಲಿ ಪುಟ್ಟಿದ ತೃಣಗಳು ಪಾಚಿಗಳು ಇವೇ ಮೊದಲಾದವುಗಳಿಂದ ಮುಚ್ಚಲ್ಪಟ್ಟ ಅವಿಚಾರದಿಂದ ಕಾಣಲ್ಪಡದ ಜಲವನ್ನು ಬಿಟ್ಟು ಬಿಸಲ ಹೊಳವನ್ನು ಕುರಿತು ಓಡುವ ನರನತೆರದಿಂದ ಪರಮ ಸುಖಸ್ವರೂಪನಾದ ಆತ್ಮನು ತನ್ನಲ್ಲೇ ಇದ್ದಾಗ್ಯೂ ಅದನ್ನು ವಿಚಾರಿಸದೆ ತುಚ್ಛವಾದ ಅನಿತ್ಯವಾದ ವಿಷಯಸುಖವನ್ನು ನಿಶ್ಚಯಿಸಿ ಸುಖವನ್ನು ಪಡೆಯನು ; ದೈವವಶವರ್ತಿಗಳಾದ ದೇಹಾದಿಗಳಿಂದ ತನಗೆ ಸುಖವನ್ನು ನಿಶ್ಚೈಸುವ ದೈವಬಲವಿಲ್ಲದವನ ಕ್ರಿಯೆಗಳು ಬಾರಿಬಾರಿಗೂ ಮಾಡಲ್ಪಡುವದಾದಾಗ್ಯೂ ನಿಷ್ಫಲಗಳಾಗುತಲಿವೆ ; ಆಧ್ಯಾತ್ಮಿಕಾದಿ ದುಃಖಗಳಿಂದ ಬಿಡಲ್ಪಡದಿರುವ ಮರಣಧರ್ಮವುಳ್ಳ ಪುರುಷನಿಗೆ ಅತಿಪ್ರಯಾಸದಿಂದ ಸಂಪಾದಿಸಲ್ಪಟ್ಟ ಅರ್ಥಕಾಮಗಳಿಂದ ಫಲವೇನು ? ಲುಬ್ಧರಾಗಿ ಇಂದ್ರಿಯಗಳ ಅಧೀನರಾಗಿ ಭಯದಿಂದ ನಿದ್ರಾರಹಿತರಾಗಿ ಎಲ್ಲಾಕಡೆಯಲ್ಲೂ ಶಂಕೆಯುಳ್ಳವರಾದ ಧನಿಕರ ಕ್ಲೇಶವನ್ನು ನೋಡುತಲಿದ್ದೇನೆ ; ಕ್ಷಿತಿಪತಿಯದೆಶೆಯಿಂದಲೂ ಚೋರರದೆಶೆಯಿಂದಲೂ ಶತೃಗಳದೆಶೆಯಿಂದಲೂ ಸ್ವಜನರದೆಶೆಯಿಂದಲೂ ಪಶು ಪಕ್ಷಿ ಮೊದಲಾದ ಪ್ರಾಣಿಗಳದೆಶೆಯಿಂದಲೂ ಯಾಚಕರದೆಶೆಯಿಂದಲೂ ಕಾಲದೇಶಗಳಿಂದಲೂ ತ್ಯಾಗ ಭೋಗ ವಿಸ್ಮರಣಾದಿಗಳಿಂದಲೂ ಯುಕ್ತನಾದ ತನ್ನದೆಶೆಯಿಂದಲೂ ನಿರಂತರದಲ್ಲಿಯೂ ಅರ್ಥವಂತರಿಗೂ ಪ್ರಾಣವಂತರಿಗೂ ಭಯವುಂಟು ; ಮನುಷ್ಯರಿಗೆ ಶೋಕವು ಮೋಹವು ಭಯವು ಕ್ರೋಧವು ರಾಗವು ಅಧೈರ್ಯವು ಶ್ರಮವು ಇವೇ ಮೊದಲಾದ ಅನರ್ಥಗಳು ಯಾವ ಅರ್ಥಪ್ರಾಣಮೂಲಕಗಳೊ ಆ ಅರ್ಥಪ್ರಾಣಗಳಲ್ಲಿ ಪ್ರಾಜ್ಞನು ಅಪೇಕ್ಷೆಯನ್ನು ಬಿಡಬೇಕು ; ಈ ಅರ್ಥದಲ್ಲಿ ಜೇನುಹುಳುವು ಮಹಾ ಸರ್ಪವು ಈ ಎರಡೂ ಈ ಲೋಕದಲ್ಲಿ ನಮಗೆ ಉತ್ತಮರಾದ ಗುರುಗಳು ; ಯಾವ ಮಧುಮಕ್ಷಿಕಾಜಗರಗಳದೆಶೆಯಿಂದ ಶೀಕ್ಷಿತರಾಗಿ ನಾವು ವೈರಾಗ್ಯಪರಿತೋಷಗಳನ್ನೈದಿದೆವೋ ಆ ಮಧು ಮಕ್ಷಿಕಾಜಗರಗಳು ನಮಗೆ ಗುರುಗಳು ; ಜೇನುಹುಳುಗಳಿಂದ ಲೇಶಲೇಶವಾಗಿ ತಂದು ಕೂಡಿಹಾಕಲ್ಪಟ್ಟ ಪುಷ್ಪರಸವನ್ನು ಅನ್ಯರು ಆ ಹುಳುಗಳನ್ನು ಸಂಹರಿಸಿ ಆ ಮಧುವನ್ನು ಆಕ್ರಮಿಸುವರೀತಿಯಲ್ಲಿ ಸ್ವಲ್ಪಸ್ವಲ್ಪವಾಗಿ ಕೂಡಿಸಲ್ಪಟ್ಟ ಧನವನ್ನು ಚೋರಾದಿಗಳು ಅಪಹರಿಸುವರು; ಎಂಬಅರ್ಥವನ್ನು ಆಲೋಚಿಸಿ ಜೇನುಹುಳುವಿನ ದೆಶೆಯಿಂದ ಅರ್ಥಕಾಮಗಳಲ್ಲಿ ವೈರಾಗ್ಯವು ಶೀಕ್ಷಿತವಾಯಿತು ; ಎಂತು ಮಹಾಸರ್ಪವು ಯದೃಚ್ಛೆಯಿಂದ ಪ್ರಾಪ್ತವಾದ ಆಹಾರದಿಂದ ತುಷ್ಟವಾಗಿರುವದೋ ಅದೇರೀತಿ ಇಚ್ಛೈಸದೆ ಯಾದೃಚ್ಛಿಕವಾಗಿ ಪ್ರಾಪ್ತವಾದುದರಿಂದ ನಾನು ಸಂತುಷ್ಟನಾಗಿರುವೆನು ; ಕೆಲವುಕಡೆಯಲ್ಲಿ ಅಲ್ಪವನ್ನೂ ಕೆಲವುಕಡೆಯಲ್ಲಿ ಬಹಳವನ್ನೂ ಒಂದುಕಡೆಯಲ್ಲಿ ಒಳ್ಳೇದನ್ನೂ ಮತ್ತೊಂದುಕಡೆಯಲ್ಲಿ ಅಲ್ಲದ್ದನ್ನೂ ಕೆಲವು ಸ್ಥಳಗಳಲ್ಲಿ ಬಹಳವಾಗಿ ಷಡ್ರಸೋಪೇತ ದಿವ್ಯಾನ್ನವನ್ನೂ ಮತ್ತೊಂದುಕಡೆಯಲ್ಲಿ ಕದನ್ನವನ್ನೂ ಒಂದುವೇಳೆಯಲ್ಲಿ ಭಕ್ತಿಯಿಂದ ಪ್ರಾಪ್ತವಾದುದನ್ನೂ ಮತ್ತೊಂದುಕಡೆಯಲ್ಲಿ ಮಾನವಿಲ್ಲದೆ ದೊರೆಯುವದನ್ನೂ ದಿವದಲ್ಲಿಯಾದರೂ ರಾತ್ರಿಯಲ್ಲಿಯಾದರೂ ಯದೃಚ್ಛಾಪ್ರಾಪ್ತವಾದುದನ್ನು ಭುಂಜಿಸುವೆನು ; ಪಟ್ಟೆವಸ್ತ್ರವನ್ನೂ ದುಕೂಲವನ್ನೂ ಕೃಷ್ಣಾಜಿನ ಮೊದಲಾದುದನ್ನೂ ಜೀರ್ಣವಸ್ತ್ರವಾದರೂ ವಸ್ತ್ರವಾದರೂ ಇಲ್ಲದೆ ಅನ್ಯವನ್ನಾದರೂ ಪ್ರಾರಬ್ಧವನ್ನನುಭವಿಸುವನಾಗಿ ದೊರತ ವಸ್ತುವಿನಿಂದ ಸಂತುಷ್ಟನಾಗಿ ಹೊದ್ದು ಉಡುವೆನು ; ಒಂದಾನೊಂದು ಕಾಲದಲ್ಲಿ ನೆಲದಮೇಲಾಗಲಿ ಹುಲ್ಲಿನಮೇಲಾಗಲಿ ಭಸ್ಮದಮೇಲಾಗಲಿ ಕಲ್ಲಿನಮೇಲಾಗಲಿ ಮಲಗುವೆನು ; ಮತ್ತೊಂದುಕಾಲದಲ್ಲಿ ಉಪ್ಪರಿಗೆ ಮನೆಯಲ್ಲಿ ಮಂಚದಮೇಲೆ ಸುಪ್ಪತ್ತಿಗೆಯಲ್ಲಿ ಜನರ ಪ್ರಾರ್ಥನೆಯಿಂದ ಮಲಗುವೆನು ; ಮತ್ತೊಂದುಕಡೆಯಲ್ಲಿ ಅಭ್ಯಂಜನಸ್ನಾನವನ್ನು

ಮಾಡಿ ದಿವ್ಯಗಂಧದಿಂದ ಲಿಪ್ತನಾಗಿ ಉತ್ತಮ ವಸ್ತ್ರವನ್ನು ಧರಿಸಿ ಜಾತ್ಯಾದಿ ಕುಸುಮಮಾಲಿಕೆಗಳಿಂದ ಅಲಂಕೃತನಾಗಿ ರಥಗಳಿಂದಲೂ ಆನೆಗಳಿಂದಲೂ ಕುದುರೆಗಳಿಂದಲೂ ಸಂಚರಿಸುವೆನು ; ಒಂದುವೇಳೆಯಲ್ಲಿ ದಿಗಂಬರನಾಗಿ ಪಿಶಾಚದಂತೆ ಜ್ಞಾನಿಯಾಗಿ ಸಂಚರಿಸುವೆನು ; ನಾನು ಇತರರನ್ನು ನಿಂದಿಸುವನಲ್ಲ ; ಸ್ತೋತ್ರವನ್ನು ಮಾಡುವನಲ್ಲ ; ಈ ಜನರ ಶ್ರೇಯಸ್ಸನ್ನಪೇಕ್ಷಿಸುವೆನು ; ಈ ಮಹಾತ್ಮನಾದ ಶ್ರೀವಿಷ್ಣುವಿನಲ್ಲಿ ಐಕಾತ್ಮ್ಯವನ್ನನುಸಂಧಾನಂಗೈಯುತಲಿರುವೆನು ; ಚಿತ್ತದಲ್ಲಿ ವಿಕಲ್ಪಾತ್ಮಕವೃತ್ತಿಯನ್ನು ವಿಲಾಪನಂಗೈದು ಆ ಚಿತ್ತವನ್ನು ನಿಶ್ಚಯಾತ್ಮಕವಾದ ಮನಸ್ಸಿನಲ್ಲಿ ವಿಲಾಪನಂಗೈದು ಆ ಮನಸ್ಸನ್ನು ವೈಕಾರಿಕದಲ್ಲಿ ವಿಲಾಪನಂಗೈದು ಆ ವೈಕಾರಿಕವಾದ ಅಹಂಕಾರವನ್ನು ಮಹತ್ತತ್ವದಲ್ಲಿ ವಿಲಾಪನಂಗೈದು ಆ ಮಹತ್ತತ್ವವನ್ನು ಮಾಯೆಯಲ್ಲಿ ವಿಲಾಪನಂಗೈದು ಸತ್ಯದಲ್ಲಿ ದೃಷ್ಟಿಯುಳ್ಳ ಮುನಿಯು ಆ ಮಾಯೆಯನ್ನು ಆತ್ಮಾನುಭವದಲ್ಲಿ ವಿಲಯಂಗೈಯಬೇಕು ; ಅನಂತರದಲ್ಲಿ ನಿಷ್ಕಾಮನಾಗಿ ಸ್ವಾನುಭೂತಿಯಿಂದ ಆ ಆತ್ಮೈಕ್ಯವನ್ನು ಪಡೆದು ಉಪಶಾಂತಿಯನ್ನೈದುವದು ! ಕೇಳೈ ಪ್ರಹ್ಲಾದನೆ, ಅತ್ಯಂತ ಗುಪ್ತವಾದ ಲೋಕಶಾಸ್ತ್ರಗಳಿಂದ ವ್ಯತಿರಿಕ್ತವಾದ ನನ್ನ ವೃತ್ತಾಂತವು ನನ್ನಿಂದ ನಿನಗೆ ವರ್ಣಿಸಲ್ಪಟ್ಟಿತು ; ನೀನು ಭಗವತ್ಪ್ರಿಯನು ' ಎಂದು ಈರೀತಿಯಿಂದ ಪ್ರಹ್ಲಾದನು ಧರ್ಮಸಾರವನ್ನು ಆ ಮುನಿಯ ದೆಸೆಯಿಂದ ರಹಸ್ಯವಾದಾಗ್ಯೂ ಕೃಪಾವಂತನಿಂದ ಕೇಳಿ ಪ್ರೀತನಾಗಿ ಆ ಮುನಿಯನ್ನು ಪೂಜಿಸಿ ಅಪ್ಪಣೆಯನ್ನು ತೆಗೆದುಕೊಂಡು ತನ್ನ ಮನೆಯನ್ನೈದಿದನು."

೧೪ ನೇ ಅಧ್ಯಾಯ.

ದೇಶಕಾಲಭೇದದಿಂದ ಗುರು ಲಘುರೂಪಗಳಾದ ವಿಶೇಷ ಶ್ರೇಯಃಪ್ರದಗಳಾದ ಗೃಹಸ್ಥ ಧರ್ಮಗಳು.

ಪೂರ್ವಾಧ್ಯಾಯದಲ್ಲಿ ಬ್ರಹ್ಮಚಾರಿ ವಾನಪ್ರಸ್ಥ ಯತಿಧರ್ಮಗಳನ್ನೂ ಪ್ರಹ್ಲಾದಾಜಗರ ಸಂವಾದ ರೂಪವಾದ ಪರಮಹಂಸಧರ್ಮೋಪಾಖ್ಯಾನವನ್ನೂ ಪೇಳಿದ್ದನ್ನು ಕೇಳಿ ಗೃಹಸ್ಥಧರ್ಮವನ್ನು ಪೇಳದೆ ವಾನಪ್ರಸ್ಥ ಬ್ರಹ್ಮಚಾರಿ ಯತಿಧರ್ಮಗಳು ನಿರೂಪಿಸಲ್ಪಡಲು ಗೃಹಸ್ಥನಿಗೆ ಮೋಕ್ಷವಿಲ್ಲವೋ ಏನೆಂದು ಶಂಕಿತಚಿತ್ತನಾದ ಯುಧಿಷ್ಠಿರನು ನಾರದಮುನಿಯನ್ನು ಕುರಿತು "ಎಲೈ ದೇವರ್ಷಿಯಾದ ನಾರದನೆ, ಸಂಸಾರದಲ್ಲಿ ಆಸಕ್ತವಾದ ಬುದ್ಧಿಯುಳ್ಳ ನನ್ನಂಥಾ ಗೃಹಸ್ಥನು ಯಾವ ಧರ್ಮದಿಂದ ಶೀಘ್ರವಾಗಿ ಈ ಮೋಕ್ಷಮಾರ್ಗವನ್ನೈದುವನೋ ಅಂಥಾ ಧರ್ಮವನ್ನು ನಿರೂಪಿಸು" ಎಂದು ಪ್ರಾರ್ಥಿಸಿದನು.

ನಾರದಮುನಿಯು "ಎಲೈ ಪೂಜ್ಯನಾದ ಧರ್ಮಪುತ್ರನೆ, ಲೋಕಾನುಗ್ರಹಾರ್ಥವಾಗಿ ನೀನು ಉತ್ತಮವಾದ ಪ್ರಶ್ನೆಯನ್ನು ಮಾಡಿದೆ ; ಯಾವ ಧರ್ಮದಿಂದ ಕರ್ಮಗಳನ್ನು ಮಾಡಿದಾಗ್ಯೂ ಅದರಿಂದ ಬಂಧವುಂಟಾಗದೋ ಆ ಧರ್ಮಗಳನ್ನು ತತ್ವದಿಂದ ಪೇಳುವೆನು : ಕೇಳೈ ಅರಸೆ, ಗಾರ್ಹಸ್ಥ್ಯವನ್ನು ಹೊಂದಿದವನು ತದುಚಿತಗಳಾದ ಕರ್ಮಗಳನ್ನು ಮಾಡುವನಾದಾಗ್ಯೂ ಸಾಕ್ಷಾದ್ವಾಸುದೇವನಲ್ಲಿ ಸಮರ್ಪಣಂಗೈದು ಮನನಶೀಲರಾದ ಮಹಾತ್ಮರನ್ನುಪಾಸನಂಗೈದು ಮುಮುಕ್ಷುವಾದ ಗೃಹಸ್ಥನು ಕಾಲಕಾಲದಲ್ಲಿ ಉಪಶಾಂತರಾದ ಜನರಿಂದ ಪರಿವೃತನಾಗಿ ಭಕ್ತಿಯುಳ್ಳವನಾಗಿ ಶ್ರವಣದಲ್ಲಿ ಏಕಾಯತ್ತಚಿತ್ತನಾಗಿ ಶ್ರೀವಾಸುದೇವನ ಕಥೆಯೆಂಬ ಅಮೃತವನ್ನು ಶ್ರೋತ್ರಾಂಜಲಿಗಳಿಂದ ಪಾನಂಗೈದು ಸಾಧುಗಳ ಸಂಗದಿಂದ ಮೆಲ್ಲಮೆಲ್ಲನೆ ಶರೀರದಲ್ಲಿ ಪತ್ನಿಯಲ್ಲಿ ಪುತ್ರಾದಿಗಳಲ್ಲಿ ಸಂಗವನ್ನು ಬಿಡುವದು; ಇದೊಂದು ತನ್ನದಲ್ಲವೆಂದು ಸ್ವಪ್ನದಲ್ಲಿ ದೃಷ್ಟಗಳಾದ ವಸ್ತುಗಳನ್ನು ಎಚ್ಚರಿತಮೇಲೆ ಮಿಥ್ಯಾಭೂತವನ್ನಾಗಿ ಹ್ಯಾಗೆ ತಿಳಿಯುವನೋ ಹಾಗೆ ದೇಹಾದಿಗಳನ್ನು ತಿಳಿಯುವನಾಗಬೇಕು ; ದೇಹದಲ್ಲಿಯೂ ಗೇಹದಲ್ಲಿಯೂ ಎಷ್ಟು ಉಪಯೋಗವೋ ಅಷ್ಟುಮಾತ್ರವನ್ನೇ ಸೇವಿಸುವನಾಗಿ ಜ್ಞಾನಿಯು ಅಂತರಂಗದಲ್ಲಿ ಆಸಕ್ತಿಯಿಲ್ಲದವನಾದಾಗ್ಯೂ ಜನರ ಮಧ್ಯದಲ್ಲಿ ತಾನೂ ಅವರಂತೆ ಆಸಕ್ತಿಯನ್ನು ನಟಿಸುತಲಿರುವದು; ಯಾವದರಲ್ಲಿಯೂ ಆಗ್ರಹವನ್ನು ಮಾಡಲಾಗದು ; ಜ್ಞಾತಿಗಳು ತಾಯಿತಂದೆಗಳು ಪುತ್ರರು ಭ್ರಾತೃಗಳು ಸುಹೃತ್ತುಗಳು ಇತರರು ಎಂತು ಪೇಳುವರೋ

ಯಾವದನ್ನಿಚ್ಛೈಸುವರೋ ಅದನ್ನು ತಾನು ಮಮತಾರಹಿತನಾದಾಗ್ಯೂ ಬಿಡಂಬಡುವನು ; ಕೃಷ್ಯಾದಿಗಳಿಂದುಂಟಾದ ಧಾನ್ಯಾದಿಗಳನ್ನು ಭೂಸಂಬಂಧಿಯಾದ ನಿಕ್ಷೇಪಾದಿ ಧನವನ್ನಾದರೂ ಆಕಸ್ಮಾತ್ಪ್ರಾಪ್ತವಾದ್ದನ್ನಾದರೂ ಶ್ರೀಭಗವಂತನಿಂದ ಕೊಡಲ್ಪಟ್ಟದ್ದನ್ನಾಗಿ ತಿಳಿದು ತನ್ನ ನಿತ್ಯಕರ್ಮಕ್ಕೆ ಉಪಯೋಗವನ್ನು ಮಾಡಿಕೊಳ್ಳಬೇಕು ; ಎಷ್ಟುಮಾತ್ರ ಅನ್ನಾದಿಗಳಿಂದ ಉದರಪೂರ್ತಿಯಾಗುವದೋ ಅಷ್ಟುಮಾತ್ರ ಭೋಜನದಿಂದ ಪ್ರಾಣಧಾರಣೆಯನ್ನು ಮಾಡಿಕೊಂಡಿರಬೇಕು ; ಅಧಿಕವಸ್ತುಗಳಲ್ಲಿ ಅಭಿಮಾನವುಂಟಾದಲ್ಲಿ ಆ ಪುರುಷನು ಚೋರಪ್ರಾಯನು ; ರಾಜಶಿಕ್ಷೆಗೆ ಯೋಗ್ಯನಾಗುವನು ; ಮೃಗಗಳನ್ನೂ ಉಷ್ಟ್ರಗಳನ್ನೂ ಖರಗಳನ್ನೂ ಕೋಡಗಗಳನ್ನೂ ಮೂಷಕಗಳನ್ನೂ ಸರ್ಪಗಳನ್ನೂ ಪಕ್ಷಿಗಳನ್ನೂ ನೊಣಗಳನ್ನೂ ತನ್ನ ಮಕ್ಕಳಂತೆ ನೋಡುವದು ; ಅವರಿಗೂ ಇವರಿಗೂ ಹೆಚ್ಚು ಕಡಿಮೆ ಇಲ್ಲ ; ಗೃಹಸ್ಥನಾದಾಗ್ಯೂ ಧರ್ಮಾರ್ಥ ಕಾಮಗಳನ್ನು ಅತ್ಯಾಯಾಸಪಟ್ಟು ಸೇವಿಸದೆ ಅನಾಯಾಸದಿಂದಷ್ಟು ದೊರಕುವದೋ ಯಾವದಶೆಯಲ್ಲಿ ಯಾವಕಾಲದಲ್ಲಿ ಅದೃಷ್ಟದಿಂದೆಷ್ಟು ಲಭ್ಯವಾಗುವದೋ ಅಷ್ಟುಮಾತ್ರದಿಂದಲೇ ಸಂತುಷ್ಟನಾಗಿರುವದು ; ಶ್ವಾನ ಪತಿತ ಚಂಡಾಲಪರ್ಯಂತವು ಯಥಾಯೋಗ್ಯವಾಗಿ ಸ್ವಕೀಯಗಳಾದ ಭೋಗ್ಯವಸ್ತುಗಳನ್ನು ಹಂಚಿಕೊಡುವದು ; ಪುರುಷನು ತನ್ನ ಪತ್ನಿಯನ್ನು ಬಹಳೇ ಜದಾಗ್ಯೂ ಅತಿಶಯ ಪ್ರೇಮಪಾತ್ರಳಾದಾಗ್ಯೂ ಅವಳಲ್ಲದೆ ತನ್ನ ಶೇವೆಯನ್ನು ಮಾಡುವರು ಮತ್ತೊಬ್ಬರಿಲ್ಲದಿದ್ದಾಗ್ಯೂ ಶಂಕೆಯನ್ನು ಬಿಟ್ಟು ಅವಳನ್ನು ಅತಿಥಿಗಳ ಸತ್ಕಾರಕ್ಕೋಸ್ಕರ ಯಥೋಚಿತವಾಗಿ ನಿಯೋಜಿಸಿ ಅವರನ್ನು ಸಂತೋಷಪಡಿಸಿದ್ದರಿಂದ ಶ್ರೀಹರಿಯು ಸಂತುಷ್ಟನಾಗುವನು ; ಮಾನವನು ಯಾವವಳನಿಮಿತ್ತವಾಗಿ ತನ್ನ ಪ್ರಾಣಗಳನ್ನು ಕಳೆಯುವನೋ ಯಾವನಿಮಿತ್ತವಾಗಿ ತಂದೆತಾಯಿಗಳನ್ನಾದರೂ ಗುರುವನ್ನಾದರೂ ಸಂಹರಿಸುವನೋ ಅಂಥಾ ಸ್ತ್ರೀಯಲ್ಲಿ ಸತ್ವಾಭಿಮಾನವನ್ನು ಬಿಡಲು ಅಜಿತನಾದ ಶ್ರೀಹರಿಯು ಅವನಿಂದ ಜಯಿಸಲ್ಪಡುವನು ; ಯಾವ ಶರೀರಪರಿಣಾಮದಲ್ಲಿ ಕ್ರಿಮಿಗಳು ಮಲವು ಭಸ್ಮವು ಇವೇ ಪರ್ಯವಸಾನವಾಗುಳ್ಳದ್ದೋ ಅಂಥಾ ಶರೀರವೆಲ್ಲಿ? ಈ ತುಚ್ಛವಾದ ಕಾಯದ ಪ್ರೀತಿಯಾರಲ್ಲೋ? ಇಂಥಾ ಸ್ತ್ರೀಯರೆಲ್ಲಿ? ನಿರ್ಮಲನಾದ ಆತ್ಮನೆಲ್ಲಿ? ಆದಕಾರಣ ಇಂಥಾ ದೇಹಾದಿಗಳಲ್ಲಿ ಅಭಿಮಾನವನ್ನು ಬಿಡಬೇಕು ; ದೇವಲಬ್ಧಗಳಾದ ಪಂಚಮಹಾ ಯಜ್ಞಶೇಷಗಳಾದ ಅನ್ನಗಳಿಂದ ತನ್ನ ವೃತ್ತಿಗಳನ್ನು ಕಲ್ಪಿಸಿ ಉಳಿದ ವಸ್ತುಗಳಲ್ಲಿ ಸ್ವತ್ವಾಭಿಮಾನವನ್ನು ಬಿಟ್ಟು ಮನುಜನು ಮಹಾತ್ಮರ ಮಾರ್ಗವನ್ನೈದುವನು ; ಪಂಚಯಜ್ಞದಲ್ಲಿ ದೇವತೆಗಳನ್ನೂ ಋಷಿಗಳನ್ನೂ ಮನುಷ್ಯರನ್ನೂ ಭೂತಗಳನ್ನೂ ಪಿತೃದೇವತೆಗಳನ್ನೂ ಅಂತರ್ಯಾಮಿಯಾದ ಈಶ್ವರನನ್ನೂ ತನ್ನ ಸ್ವಧರ್ಮದಿಂದ ಸಂಪಾದಿಸಲ್ಪಟ್ಟ ದ್ರವ್ಯದಿಂದ ಪೂಜಿಸಬೇಕು ; ತನ್ನ ಯೋಗ್ಯತಾನುಸಾರವಾಗಿ ಶ್ರೌತ ಸ್ಮಾರ್ತಾದಿ ವಿಧಿಯಿಂದ ಅಗ್ನಿಹೋತ್ರಾದಿಗಳನ್ನು ಮಾಡಬೇಕು ! ಎಲೈ ಅರಸೆ, ಯಜ್ಞಾದಿಗಳಲ್ಲಿ ಅಗ್ನಿಮುಖದಿಂದ ಕೊಡಲ್ಪಟ್ಟ ಚರುಪುರೋಡಾಶಾದಿಗಳಿಂದ ಯಜ್ಞಭೋಕ್ತೃವಾದ ವಾಸುದೇವನು ಎಂತು ಸಂತೋಷಪಡುವನೋ ಅದಕ್ಕಿಂತಲೂ ವಿಪ್ರಮುಖದಲ್ಲಿ ಕೊಡಲ್ಪಟ್ಟ ಷಡ್ರಸಂಗಳಿಂದ ಯುಕ್ತಗಳಾದ ಅನ್ನಾದಿಗಳಿಂದ ದಶಗುಣ ಅಧಿಕವಾಗಿ ಸಂತುಷ್ಟನಾಗುವನು ; ಆದಕಾರಣ ಬ್ರಾಹ್ಮಣರಲ್ಲಿ ಪಂಚಯಜ್ಞದೇವತೆಗಳಲ್ಲಿ ಇತರರಾದ ಮನುಜರಲ್ಲಿ ಪಶು ಪಕ್ಷ್ಯಾದಿಗಳಲ್ಲಿಯೂ ಅಂತರ್ಯಾಮಿಯಾದ ವಾಸುದೇವನನ್ನು ಪೂಜಿಸಬೇಕು ; ಬ್ರಾಹ್ಮಣನು ಭಾದ್ರಪದಮಾಸದಲ್ಲಿ ಅಪರಪಕ್ಷದಲ್ಲಿ ಶ್ರಾದ್ಧವನ್ನು ಪಿತೃಗಳನ್ನು ಕುರಿತು ತನ್ನ ಬಂಧುಗಳಿಗೂ ವಿತ್ತಾನುಸಾರವಾಗಿ ಮಾಡುವದು ; ದಕ್ಷಿಣಾಯನೋತ್ತರಾಯಣ ಸಂಕ್ರಮಣದಿವಸಗಳಲ್ಲಿ ಮೇಷತುಲಾದಿ ಸಂಕ್ರಮಣಗಳಲ್ಲಿ ಅಮಾವಾಸ್ಯೆಯಲ್ಲಿ ವ್ಯತೀಪಾತದ ದಿವಸದಲ್ಲಿ ದಿನಕ್ಷಯದಲ್ಲಿ ಚಂದ್ರ ಸೂರ್ಯ ಗ್ರಹಣಗಳಲ್ಲಿ ದ್ವಾದಶಿಯಲ್ಲಿ ಶ್ರವಣದಲ್ಲಿ ಅಕ್ಷಯತೃತೀಯದಲ್ಲಿ ಕಾರ್ತಿಕ ನವಮಿಯಲ್ಲಿ ಮಾರ್ಗಶಿರಮಾಸ ಚತುಷ್ಟಯದಲ್ಲಿ ಕೃಷ್ಣಪಕ್ಷದಲ್ಲಿ ಬರುವ ತಿಸ್ರಾಷ್ಟಕಗಳಲ್ಲಿ ಮಾಘಶುದ್ಧ ಸಪ್ತಮಿಯಲ್ಲಿ ತತ್ತನ್ನಕ್ಷತ್ರಯುಕ್ತಗಳಾದ ಪೂರ್ಣಿಮಾದಿ ದಿವಸಗಳಲ್ಲಿ ಪೂರ್ಣಚಂದ್ರಯುಕ್ತವಾದ ರಾಕೆಯಲ್ಲಿ ಏಕಕಳಾ ಶೂನ್ಯವಾದ ಅನುಮತಿಯಲ್ಲಿ ಅನೂರಾಧ ಶ್ರವಣ ಉತ್ತರ ಉತ್ತರಾಷಾಢಾ ಉತ್ತರಾಭಾದ್ರಪದೆ ಕೂಡಿದ ದಿವಸದಲ್ಲಿ ಈ ಉತ್ತರಾತ್ರಯದಲ್ಲಿ ಏಕಾದಶಿ ಕೂಡಿದಲ್ಲಿಯೂ ಜನ್ಮನಕ್ಷತ್ರಯುಕ್ತವಾದ ದಿವಸದಲ್ಲಿಯೂ ಶ್ರವಣನಕ್ಷತ್ರಯುಕ್ತವಾದ ದಿವಸದಲ್ಲಿಯೂ ಈ ಕಾಲಗಳು ಶ್ರೇಯಃ

ಪ್ರದಗಳು ; ಮನುಷ್ಯರಿಗೆ ಶ್ರೇಯಸ್ಸನ್ನು ವೃದ್ಧಿಗೈವವು ; ಈ ಕಾಲಗಳಲ್ಲಿ ಶ್ರೇಯಸ್ಕರಗಳಾದ ಶ್ರಾದ್ಧಾದಿ ಕರ್ಮಗಳನ್ನು ಮಾಡುವವನ ಆಯುಷ್ಯವು ಸಫಲವಾದದ್ದು ; ಈ ಯೋಗಗಳಲ್ಲಿ ಸ್ನಾನವು ತಪಸ್ಸು ಹೋಮವು ಜಪವು ದೇವಬ್ರಾಹ್ಮಣರ ಪೂಜೆಯು ಪಿತೃಗಳಿಗೂ ದೇವತೆಗಳಿಗೂ ಮನುಷ್ಯರಿಗೂ ಭೂತಗಳಿಗೂ ಯಾವದನ್ನು ಕೊಟ್ಟರೂ ಅದು ಅಕ್ಷಯವಾಗುವದು ; ಪತ್ನಿಯ ಪುಂಸವನಾದಿಕಾಲಗಳಲ್ಲಿ ಪುತ್ರನ ಜಾತಕರ್ಮಾದಿಕಾಲದಲ್ಲಿ ಪ್ರತಿಸಾಂವತ್ಸರಿಕ ಶ್ರಾದ್ಧಕಾಲದಲ್ಲಿ ಇದಲ್ಲದೆ ಇತರವಾದ ಅಭ್ಯುದಯಾರ್ಥವಾದ ಕರ್ಮದಲ್ಲಿಯೂ ಶ್ರೇಯಸ್ಕರವಾದುದನ್ನು ಮಾಡುವದು ; ಅನಂತರದಲ್ಲಿ ಧಾರ್ಮಿಕನಿಗೆ ಶ್ರೇಯಸ್ಸನ್ನುಂಟುಮಾಡುವ ದೇಶವನ್ನು ಪೇಳುವೆನು ; ಎಲ್ಲಿ ಸತ್ಪಾತ್ರ ದೊರಕುವದೋ ಅದೇ ಅತ್ಯಂತ ಪುಣ್ಯಕರವಾದ ದೇಶವು ; ಸತ್ಪಾತ್ರವ್ಯಾವದೆಂದರೆ ; ಈ ಸಮಸ್ತ ಚರಾಚರ ಪ್ರಪಂಚವು ಯಾವ ಭಗವಂತನಲ್ಲಿಧೆಯೋ ಅಂಥಾ ಭಗವಂತನ ಪ್ರತಿನಿಧಿಯಾದ ಪರಮಭಾಗವತನೇ ಸತ್ಪಾತ್ರನು ; ತಪೋವಿದ್ಯಾ ದಯಾನ್ವಿತವಾದ ಬ್ರಾಹ್ಮಣಕುಲವೆಲ್ಲಿಸುದೋ ಅದೇ ಉತ್ತಮವಾದ ದೇಶವು ; ಎಲ್ಲಿ ಶ್ರೀಭಗವಂತನ ಪೂಜೆ ನಡೆಯುವದೋ ಪುರಾಣಪ್ರಸಿದ್ಧಗಳಾದ ನದ ನದಿಗಳೆಲ್ಲಿ ಪ್ರವಹಿಸುವವೋ ಆ ಪ್ರದೇಶವು ಸಮಸ್ತಶ್ರೇಯಸ್ಸುಗಳಿಗೂ ಸ್ಥಾನವು ; ಪುಷ್ಕರವೇ ಮೊದಲಾದ ಸರಸ್ಸುಗಳು ಪೂಜ್ಯರಿಂದ ಆಶ್ರಯಿಸಲ್ಪಟ್ಟ ಕ್ಷೇತ್ರಗಳು ಕುರುಕ್ಷೇತ್ರ ಗಯಶಿರಸ್ಸು ಪ್ರಯಾಗವು ಪುಲಹಾಶ್ರಮವು ನೈಮಿಷಕ್ಷೇತ್ರವು ಫಾಲ್ಗುನವು ರಾಮಸೇತುವು ಭಾಸ್ಕರಕ್ಷೇತ್ರವು ದ್ವಾರಕಿಯು ಕಾಶಿಯು ಮಧುರೆಯು ಪಂಪೆಯು ಬಿಂದುಸರಸ್ಸು ನಾರಾಯಣಾಶ್ರಮವು ಅಳಕನಂದೆಯು ಸೀತಾರಾಮರ ಆಶ್ರಮಾದಿಗಳು ಮಹೇಂದ್ರ ಮಲಯಾದಿ ಸಮಗ್ರಗಳಾದ ಕುಲಾಚಲಗಳು ಇವೆಲ್ಲವೂ ಅತ್ಯಂತ ಶುಭಕರಗಳಾದ ದೇಶಗಳು ; ಇದಲ್ಲದೆ ಶ್ರೀಹರಿಯರ್ಚನೆಗೆ ಆಶ್ರಮಗಳಾದ ದೇಶಗಳ್ಯಾವವೋ ಅತಿಶಯವಾದ ಶ್ರೇಯಸ್ಸು ಬೇಕೆಂಬುವನು ಈ ದೇಶಗಳನ್ನಾಶ್ರಯಿಸಲಿ ; ಈ ಉತ್ತಮಗಳಾದ ದೇಶಗಳಲ್ಲಿ ವಾಸಂಗೈದು ಧರ್ಮವನ್ನು ಮಾಡುವವರಿಗೆ ಸಹಸ್ರಾಧಿಕ ಫಲವುಂಟು; ಪಾತ್ರಲಕ್ಷಣವನ್ನು ತಿಳಿದಿರುವ ಜ್ಞಾನಿಗಳಿಂದ ಪಾತ್ರವು ಪೇಳಲ್ಪಟ್ಟಿತು ; ದೇವತೆಗಳು ಋಷಿಗಳು ಪೂಜ್ಯರು ಸಾಧುಗಳು ಬ್ರಹ್ಮಪುತ್ರರಾದ ಸನಕಾದಿಗಳು ಇದ್ದಾಗ್ಯೂ ನಿಮ್ಮ ರಾಜಸೂಯಯಾಗದಲ್ಲಿ ಅಗ್ರಪೂಜೆಗೆ ಶ್ರೀಹರಿಯೇ ಪಾತ್ರನಾದವನು ; ಜೀವರಾಶಿಗಳಿಂದ ವ್ಯಾಪ್ತವಾದ ಬ್ರಹ್ಮಾಂಡಕೋಶವೆಂಬ ಮಹಾ ವೃಕ್ಷಕ್ಕೆ ಮೂಲವಾದ ಶ್ರೀ ಅಚ್ಯುತನ ಪೂಜೆಯೇ ಸರ್ವ ಜೀವಾತ್ಮತರ್ಪಣವು ; ಮನುಷ್ಯರು ತಿರ್ಯಗ್ಜಂತುಗಳು ಋಷಿಗಳು ದೇವತೆಗಳ ಪುರಗಳೆಂಬ ಶರೀರಗಳನ್ನು ಸೃಷ್ಟಿಗೈದು ಆ ಪುರುಷನು ಜೀವಸ್ವರೂಪದಿಂದ ಆ ಪುರಗಳಲ್ಲಿ ವಾಸಂಗೈವನು ! ಕೇಳೈ ಅರಸೆ, ಆ ಪುರಗಳಲ್ಲಿ ಸರ್ವೇಶ್ವರನಾದ ಶ್ರೀಭಗವಂತನು ತಪೋಯೋಗಾದಿ ಬಲದಿಂದ ನ್ಯೂನಾಧಿಕಭಾವವನ್ನೈದಿರುವದರಿಂದ ಇಂಥಾ ಯೋಗ್ಯವಾಗಿ ತತ್ತ್ವಾರ್ಣಿ ರೂಪದಿಂದ ಪಾತ್ರನಾಗುವನು ! ಕೇಳೈ ನೃಪನೆ, ಪರಸ್ಪರಾವಮಾನದಲ್ಲಿ ದೃಷ್ಟಿಯುಳ್ಳ ಈ ನರನ ಸ್ವಭಾವವನ್ನು ನೋಡಿ ಯಂತ್ರಾದಿಗಳಲ್ಲಿಯಾದರೂ ಸಾಲಗ್ರಾಮಾದಿಗಳಲ್ಲಿಯಾದರೂ ಪ್ರತಿಮಾದಿಗಳಲ್ಲಿಯಾದರೂ ಶ್ರೀಹರಿಯನ್ನು ಪೂಜಿಸಬೇಕೆಂದು ಶಾಸ್ತ್ರವು ವಿಹಿತವಾಗಿಧೆ ; ಪುರುಷನಲ್ಲಿ ದ್ವೇಷವನ್ನು ಬಿಟ್ಟು ಪ್ರತಿಮಾದಿಗಳಲ್ಲಿ ಮಾಡಲ್ಪಟ್ಟ ಶ್ರೀಹರಿಯ ಪೂಜೆಯು ಸಫಲವಾಗುವದು ; ಅದರಲ್ಲಿ ಶ್ರದ್ಧೆಯಿಲ್ಲದವರಿಗೆ ಪ್ರತಿಮಾದ್ಯರ್ಚನೆಯೆಂದು ತಿಳಿಯುವದು ! ಎಲೈ ರಾಜೇಂದ್ರನೇ ಕೇಳು : ಪುರುಷರೊಳಗೆ ತಪಸ್ಸಿನಿಂದಲೂ ವಿದ್ಯೆಯಿಂದಲೂ ತುಷ್ಟಿಯಿಂದಲೂ ಭಗವಚ್ಛರೀರವಾದ ದೇಹವನ್ನು ಧರಿಸಿರುವದರಿಂದಲೂ ಬ್ರಾಹ್ಮಣನೇ ಸುಪಾತ್ರನೆಂದು ತಿಳಿ ; ಬ್ರಾಹ್ಮಣರು ಶ್ರೀಕೃಷ್ಣಸ್ವರೂಪರಾದ್ದರಿಂದ ಪಾದರಜಸ್ಸಿನಿಂದ ಲೋಕವನ್ನು ಪಾವನಂಗೈಯುವರಾಗಿ ಸಂಚರಿಸುವರಾದಕಾರಣ ಪಾತ್ರರು ತತ್ರಾಪಿ ತಪೋ ಯೋಗ ಜ್ಞಾನಾದಿಗಳುಳ್ಳವರು ಸುಪಾತ್ರರೆಂದು ಹೇಳತಕ್ಕದ್ದೇನು.''

೧೫ನೇ ಅಧ್ಯಾಯ.

ವರ್ಣಾಶ್ರಮಧರ್ಮವು—ಮೋಕ್ಷಲಕ್ಷಣವು.

"ಕೇಳೈ ಧರ್ಮರಾಯನೆ, ಬ್ರಾಹ್ಮಣರಲ್ಲಿ ಕೆಲವರು ಕರ್ಮನಿಷ್ಠರು ಕೆಲವರು ತಪೋನಿಷ್ಠರು ಕೆಲವರು ವೇದಾಧ್ಯಯನದಲ್ಲಿ ಆಸಕ್ತರು ಕೆಲವರು ವೇದಶಾಸ್ತ್ರಗಳನ್ನು ಪರರಿಗೆ ಅಧ್ಯಯನಂಗೈಸುವರು ಕೆಲವರು ಜ್ಞಾನೈಕಾಸಕ್ತರು ಕೆಲವರು ಯೋಗಾಭ್ಯಾಸಿಗಳು; ಅಮಿತಫಲವನ್ನಿಚ್ಛೈಸುವ ಪುರುಷನು ದೇವತೆಗಳಿಗೆ ಪ್ರೀತ್ಯರ್ಥವಾಗಿ ಕೊಡತಕ್ಕ ಹವ್ಯಗಳನ್ನೂ ಪಿತೃದೇವತೆಗಳನ್ನು ಕುರಿತು ಕೊಡತಕ್ಕ ಕವ್ಯಗಳನ್ನೂ ಜ್ಞಾನನಿಷ್ಠಸಿಗೋಸ್ಕರ ಕೊಡುವರು; ಅಂಥಾ ಜ್ಞಾನನಿಷ್ಠನು ದೊರೆಯದಿದ್ದರೆ ತಾರತಮ್ಯಭಾವವನ್ನರಿತು ಕೊಡುವದು; ಅಧಿಕ ಸಮೃದ್ಧಿವುಳ್ಳವನಾದರೂ ಶ್ರಾದ್ಧಾದಿಗಳಲ್ಲಿ ವಿಶ್ವೇದೇವಸ್ಥಾನದಲ್ಲಿ ಇಬ್ಬರನ್ನೂ ಪಿತೃಸ್ಥಾನದಲ್ಲಿ ಮೂವ್ವರನ್ನೂ ವರಿಸುವದು; ಅಥವಾ ಎರಡುಕಡೆಯಲ್ಲಿಯೂ ಒಬ್ಬೊಬ್ಬನನ್ನೇ ಭೋಜನಂಗೈಸುವದು; ಶ್ರಾದ್ಧವನ್ನು ವಿಸ್ತಾರಂಗೈಯ್ಯಲಾಗದು; ದೇಶಕಾಲೋಚಿತಗಳಾದ ಶ್ರಾದ್ಧಾಪೂರ್ವಕಗಳಾದ ಕರ್ಮಗಳಲ್ಲಿ ದ್ರವ್ಯಗಳು ಪಾತ್ರಗಳು ಪೂಜೆಗಳು ಇವು ವಿಸ್ತರಿಸಲ್ಪಟ್ಟವಾದರೆ ಚನ್ನಾಗಿ ಆಗುವದಿಲ್ಲ; ಜ್ಞಾನ ತಾರತಮ್ಯವಿಲ್ಲದೆ ಸ್ವಜನಾಭಿಮಾನದಿಂದ ಜಾಮಾತೃವಿಗೆ ಹೇಳುವಲ್ಲಿ ಅವನ ತಂದೆಗೆ ಯಾಕೆ ಹೇಳಬಾರದೆಂದು ವಿಸ್ತಾರಂಗೈಯ್ಯಲು ಪ್ರತ್ಯವಾಯುಗಳು ಘಟಿಸುವವು; ದೇಶಕಾಲಗಳು ಪ್ರಾಪ್ತಗಳಾಗುತಿರಲು ಅರಣ್ಯಕಗಳಾದ ವ್ರೀಹಿ ಮೊದಲಾದ ಧಾನ್ಯಸಂಬಂಧಿಯಾದ ಅನ್ನವನ್ನು ಶ್ರೀಹರಿಗೆ ನಿವೇದಿತವಾದುದನ್ನು ಸತ್ಪಾತ್ರದಲ್ಲಿ ಶ್ರದ್ಧೆಯಿಂದಿತ್ತುದು ಅಕ್ಷಯವಾಗಿ ಇಷ್ಟಾರ್ಥಫಲವನ್ನೀವುದು; ದೇವತೆಗಳಿಗೂ ಋಷಿಗಳಿಗೂ ಪಿತೃಗಳಿಗೂ ತನಿಗೂ ಸ್ವಜನಕ್ಕೂ ಅನ್ನವನ್ನು ವಿಭಾಗಂಗೈದು ಸರ್ವವನ್ನು ಬ್ರಹ್ಮಸ್ವರೂಪವನ್ನಾಗಿ ತಿಳಿಯುವದು; ಶ್ರಾದ್ಧದಲ್ಲಿ ಆಮಿಷದಂತೆ ನಿಷಿದ್ಧಗಳಾದ ಶಾಖಾನ್ನಾದಿಗಳನ್ನು ಕೊಡಬಾರದು; ಇಂಥಾ ನಿಷಿದ್ಧವಾದುದನ್ನು ತಾನು ಭಕ್ಷಿಸಬಾರದು; ಯೋಗ್ಯವಾದ ಅನ್ನದಿಂದ ಪಿತೃಗಳಿಗೆ ಹ್ಯಾಗೆ ತೃಪ್ತಿಯಾಗುವದೋ ಹಾಗೆ ಹಿಂಸಾಪೂರ್ವಕವಾದ ಆಮಿಷದಿಂದ ತೃಪ್ತಿಯಾಗುವದಿಲ್ಲ; ಉತ್ತಮ ಧರ್ಮವನ್ನಪೇಕ್ಷಿಸುವ ಪುರುಷನಿಗೆ ಮನೋವಾಕ್ಕಾಯ ಕರ್ಮಗಳಿಂದ ಪ್ರಾಣಿಹಿಂಸಾ ಪರಿತ್ಯಾಗವೇ ಮುಖ್ಯ ಧರ್ಮವು; ನಿಷ್ಕಾಮರಾದ ಜ್ಞಾನಿಗಳಲ್ಲಿ ಶ್ರೇಷ್ಠರಾದ ಕೆಲವರು ಜ್ಞಾನದಿಂದ ಪ್ರಕಾಶಿತವಾದ ಆತ್ಮಸಂಯಮಾಗ್ನಿಯಲ್ಲಿ ಕರ್ಮಮಯವಾದ ಯಜ್ಞಗಳನ್ನು ಹವನಂಗೈಯುವರು; ಸಕಾಮನಾಗಿ ಯಾವವನು ದ್ರವ್ಯಮಯಗಳಾದ ಯಜ್ಞಗಳನ್ನು ಮಾಡುವನೋ ಅವನನ್ನು ನೋಡಿ ಸಮಸ್ತ ಭೂತಗಳು ಇವನ ಆತ್ಮತತ್ವವನ್ನು ತಿಳಿಯದವನಾದಕಾರಣ ತನ್ನ ಪ್ರಾಣವನ್ನು ತೃಪ್ತಿಪಡಿಸುವನು; ನಿಷ್ಕರುಣನು ನಮ್ಮಂಥಾವರನ್ನು ಹಿಂಸೆಗೈವನೆಂದು ಭಯಪಡುವವು; ಆದಕಾರಣ ಧರ್ಮವನ್ನು ತಿಳಿದವನು ದೈವವಶದಿಂದ ಪ್ರಾಪ್ತವಾದ ಮುನ್ಯನ್ನವಾದ ಶಾಲಿನೀವಾರಾದಿಗಳಿಂದಲೇ ಸಂತುಷ್ಟನಾಗಿ ಪ್ರತಿದಿವಸದಲ್ಲಿಯೂ ನಿತ್ಯನೈಮಿತ್ತಿಕಕರ್ಮಗಳನ್ನು ಮಾಡಬೇಕು; ವಿಧರ್ಮವೆಂದೂ ಪರಧರ್ಮವೆಂದೂ ಆಭಾಸವೆಂದೂ ಉಪಧರ್ಮವೆಂದೂ ಛಲವೆಂದೂ ಈ ಐದು ಧರ್ಮದ ಶಾಖೆಗಳ ಧರ್ಮವನ್ನು ತಿಳಿದವನು ಈ ಐದನ್ನು ಅಧರ್ಮದಂತೆ ಬಿಡುವನು; ಸ್ವಧರ್ಮಕ್ಕೆ ವಿರುದ್ಧವಾಗುವದು ವಿಧರ್ಮವೆನಿಸಿಕೊಳ್ಳುವದು; ಒಬ್ಬನಿಗೆ ಹೇಳಿದ್ದು ಮತ್ತೊಬ್ಬನಿಗೆ ಪರಧರ್ಮವು; ಅದು ಹ್ಯಾಗೆಂದರೆ: ಗೃಹಸ್ಥನ ಧರ್ಮವು ಯತಿಗೆ ಪರಧರ್ಮವು; ವೇದವಿರುದ್ಧವಾದ ಪಾಷಂಡಧರ್ಮವೇ ಉಪಧರ್ಮವೆನಿಸಿಕೊಂಬದು; ಧನವನ್ನು ಸಂಪಾದಿಸಲೋಸುಗ ಜನರನ್ನು ವಂಚನೆಗೈಯುವದ್ಯಾವದೋ ಅದೇ ದಂಭವು ಆಭಾಸವೆನಿಸಿಕೊಂಬದು; ಛಲಧರ್ಮವೆಂದರೆ: ಗೋದಾನವನ್ನು ಮಾಡಬೇಕೆಂಬ ಪ್ರಕೃತದಲ್ಲಿ ರೋಗಿಷ್ಠವಾದ ವೃದ್ಧಗೋವನ್ನು ದಾನಂಗೈವುದೇ ಛಲವೆನಿಸುವದು; ಸ್ವಧರ್ಮಾನುಷ್ಠಾನಾನಂತರದಲ್ಲಿ ಅಧಿಕವಾದ ಧರ್ಮವನ್ನು ಮಾಡಬೇಕೆಂದು ಪರಧರ್ಮವನ್ನು ಮಾಡಲಾಗದು; ಸ್ವಧರ್ಮಮಾತ್ರದಿಂದಲೇ ಶ್ರೇಯಸ್ಸುಂಟಾಗುತಿರಲು ಪರಧರ್ಮದಿಂದುಪಯೋಗವೇನು? ಧನವಿಲ್ಲದವನು ಧರ್ಮವನ್ನು ಮಾಡಬೇಕೆಂದು ಧನವನ್ನು ಸಂಪಾದಿಸಲೋಸುಗ ಯತ್ನಂಗೈಯ್ಯಲಾಗದು; ತೀರ್ಥಕ್ಷೇತ್ರಗಳ ಯಾತ್ರೆಗೋಸ್ಕರ ಧನವನ್ನಿಚ್ಛೈ

ಸಬಾರದು; ದೈವವಶದಿಂದೆಷ್ಟು ದೊರಕುವದೋ ಅಷ್ಟುಮಾತ್ರದಿಂದಲೇ ನಿರ್ವಾಹವನ್ನು ಮಾಡುವದು; ಆಹಾರವನ್ನು ಅಪೇಕ್ಷಿಸದೆ ನಿಶ್ಚಲವಾಗಿದ್ದ ಸ್ಥಳದಲ್ಲಿರುವ ಅಜಗರಸರ್ಪಕ್ಕೆ ಸ್ವಕೀಯವಾದ ನಿರಪೇಕ್ಷತ್ವವೇ ಜೀವನಪ್ರದವಾಗುವಂತೆ ನಿರಪೇಕ್ಷಕನಾದ ಪುರುಷನಿಗೂ ಅವನ ನಿಸ್ಪೃಹತ್ವವೇ ಜೀವನವನ್ನುಂಟುಮಾಡುವದು; ವ್ಯರ್ಥವಾಗಿ ಆಶೆಗೆ ಅವಕಾಶವನ್ನು ಕೊಡಬಾರದು; ಸರ್ವಕಾಲದಲ್ಲಿಯೂ ಸಂತುಷ್ಟಚಿತ್ತನಾಗಿ ಧನಾದಿ ಲೋಭವಿಲ್ಲದೆ ಸ್ವಾತ್ಮಾರಾಮನಾಗಿರುವ ಪುರುಷನ ಸುಖವು ಕಾಮ ಲೋಭಯುಕ್ತನಾಗಿ ಅಪೇಕ್ಷೆಯಿಂದ ದೇವತೆಗಳನ್ನು ಸುತ್ತುವ ಪುರುಷನಿಗೆ ಹ್ಯಾಗೆ ಬಂದೀತು; ಸದಾ ಸಂತೋಷಚಿತ್ತವುಳ್ಳವನಿಗೆ ಎಲ್ಲಿದ್ದಾಗ್ಯೂ ಸರ್ವತ್ರ ಸುಖವುಂಟು; ಪಾದರಕ್ಷೆಯುಳ್ಳವನಿಗೆ ಮಾರ್ಗದಲ್ಲಿ ಕಲ್ಲುಗಳು ಮೊದಲಾದ್ದರಿಂದೇನು ಭಯವು; ಇಂತು ಸಂತುಷ್ಟಚಿತ್ತನಾದವನನ್ನು ವಿಷಯಗಳೇನುಮಾಡಬಲ್ಲವು; ಉದಕದಿಂದಲಾದರೂ ಕಾಲಕ್ಷೇಪಂಗೈವನು; ಉಪಸ್ಥಸಂಬಂಧಿಯಾದ ಜಿಹ್ವಾಚಾಪಲ್ಯರೂಪವಾದ ಅಭಿಲಾಷೆಯಿಂದ ಮನುಜನು ನಾಯಿಯಂತೆ ಲಜ್ಜೆಗೆಟ್ಟು ತಿರುಗುವನು; ಯಾವ ಕಾಲದಲ್ಲಿ ಯಾವದೇಶದಲ್ಲಿ ಯಾವದು ಎಷ್ಟುದೊರೆಯುವದೋ ಅಷ್ಟುಮಾತ್ರದಿಂದಲೇ ಸಂತೋಷಪಡದೆ ಅಧಿಕಾಪೇಕ್ಷಿಯಾದ ಪುರುಷನ ತೇಜಸ್ಸೂ ವಿದ್ಯೆಗಳೂ ತಪಸ್ಸೂ ಕೀರ್ತಿಯೂ ಇವೇ ಮೊದಲಾದವೆಲ್ಲವೂ ನಷ್ಟಗಳಾಗುವವು; ಇಂದ್ರಿಯಾಧೀನತೆಯಿಂದ ಜ್ಞಾನವು ಮಲಿನವಾಗುವದು; ಮನುಷ್ಯನು ಹಸಿವಿನಿಂದಲೂ ನೀರಡಿಕೆಯಿಂದಲೂ ಕಾಮದ ಅಂತವನ್ನೈದುವನು; ಕ್ರೋಧಕ್ಕೆ ಫಲರೂಪವಾದ ಹಿಂಸಾವ್ಯಾಪಾರವು ನಡದಮೇಲೆ ಕ್ರೋಧವು ಶಾಂತಿಯನ್ನೈದುವದು; ಪುರುಷನು ದಿಕ್ಕುಗಳನ್ನು ಜಯಿಸಿದಾಗ್ಯೂ ಭೂಮಿಯನ್ನನುಭವಿಸಿದಾಗ್ಯೂ ಲೋಭದ ಅಂತ್ಯವನ್ನೈದಲಾರನು! ಕೇಳೈ ಅರಸೆ, ಸಂಶಯವನ್ನು ಛೇದಿಸುವ ಬಹಳವನ್ನು ತಿಳಿದಿರುವ ಬಹುಮಂದಿಯಾದ ವಿದ್ವಾಂಸರು ಕಾಮಗಳನ್ನನುಭವಿಸುವರಾಗಿ ಇದರ ಪಾರವನ್ನು ಕಂಡು ಅಲಂಬುದ್ಧಿ ಹುಟ್ಟಿ ತೃಪ್ತರಾದವರು ಒಬ್ಬರೂ ಇಲ್ಲ; ಆದಕಾರಣ ಅಧೋಗತಿಯನ್ನು ಪಡೆಯುವರು; ಅಸಂಕಲ್ಪದಿಂದ ಕಾಮವನ್ನು ಜಯಿಸುವದು; ಕಾಮವನ್ನು ಬಿಡುವದರಿಂದ ಕ್ರೋಧವನ್ನು ಜಯಿಸುವದು; ಧನವು ಅನರ್ಥಕರವೆಂದು ಲೋಭವನ್ನು ಜಯಿಸಿ ತತ್ವವಿಚಾರದಿಂದ ಭಯವನ್ನು ತ್ಯಜಿಸುವದು; ಆತ್ಮಾನಾತ್ಮವಿಚಾರದಿಂದ ಶೋಕಮೋಹಗಳನ್ನು ಜಯಿಸಬೇಕು; ಹಿಂಸಾದಿಗಳನ್ನು ಶರೀರ ಮೊದಲಾದುದರಲ್ಲಿ ಅನಿಚ್ಛೆಯುವೆಂದು ತ್ಯಜಿಸುವದು; ಪ್ರಾಣಿಗಳದೆಶೆಯಿಂದುಂಟಾದ ದುಃಖವನ್ನು ಆ ಪ್ರಾಣಿಗಳಿಗೆ ಹಿತಾಚರಣೆಯಿಂದ ಜಯಿಸುವದು; ದೇವಸಂಬಂಧಿಯಾದ ಮನೋವ್ಯಸನಾದಿ ದುಃಖವನ್ನು ಸಮಾಧಿಯಿಂದ ಜಯಿಸಬೇಕು; ಶರೀರಸಂಬಂಧಿಯಾದ ದುಃಖವನ್ನು ಪ್ರಾಣಾಯಾಮ ಬಲದಿಂದ ಜಯಿಸಬೇಕು; ಸಾತ್ವಿಕಾಹಾರದಿಂದ ನಿದ್ರೆಯನ್ನು ಬಿಡುವದು; ಸತ್ವಗುಣವನ್ನಾಶ್ರಯಿಸಿ ರಾಜಸ ತಾಮಸಗುಣಗಳನ್ನು ಜಯಿಸಬೇಕು; ಉಪಶಮದಿಂದ ಸತ್ವವನ್ನು ಜಯಿಸಬೇಕು; ಈ ಸಮಸ್ತವನ್ನೂ ಗುರುಭಕ್ತಿಯಿಂದ ಪುರುಷನು ಶೀಘ್ರದಿಂದ ಜಯಿಸುವದು; ಸಾಕ್ಷಾದ್ಭಗವತ್ಸ್ವರೂಪನಾದ ಜ್ಞಾನವೆಂಬ ದೀಪವನ್ನು ಕೊಟ್ಟ ಗುರುವಿನಲ್ಲಿ ಯಾವವನಿಗೆ ಮನುಷ್ಯನೆಂಬ ಬುದ್ಧಿಯುಂಟಾಗುವದೋ ಅವನಿಂದ ಅಭ್ಯಾಸಂಗೈಯಲ್ಪಟ್ಟ ವೇದಶಾಸ್ತ್ರಗಳೆಲ್ಲಾ ಗಜಸ್ನಾನದಂತೆ ವ್ಯರ್ಥಗಳು; ಆದಕಾರಣ ಗುರುವು ಯೋಗೀಶ್ವರರಿಂದ ಹುಡುಕುವದಕ್ಕೆ ಯೋಗ್ಯವಾದ ಪಾದಪದ್ಮವುಳ್ಳ ಪ್ರಧಾನಪುರುಷೇಶ್ವರನಾದ ಸಾಕ್ಷಾದ್ಭಗವಂತನೇ ಸರಿ; ಇಂಥಾ ಗುರುವನ್ನು ಮನುಷ್ಯನನ್ನಾಗಿ ತಿಳಿಯುವ ಪುರುಷನು ಸರ್ವೋಪಾಯದಿಂದಲೂ ಕಾಮಾದಿಗಳ ವೇಗವನ್ನು ಜಯಿಸಿ ನಿಗೃಹಿತೇಂದ್ರಿಯನಾಗಿ ಆತ್ಮಧ್ಯಾನಂಗೈಯುವದು; ಇಲ್ಲದಿದ್ದರೆ ವೇದಶಾಸ್ತ್ರಾಭ್ಯಾಸವು ವ್ಯರ್ಥವಾಗುವದು; ಸಮಸ್ತಗಳಾದ ವೇದಪ್ರೇರಣಗಳು ಇಷ್ಟಾಪೂರ್ತಗಳೇ ಮೊದಲಾದವನ್ನು ವಿವರಿಸುವವಾದಾಗ್ಯೂ ಷಡಿಂದ್ರಿಯನಿಗ್ರಹವೇ ಮುಖ್ಯವಾಗುಳ್ಳವಾದಾಗ್ಯೂ ಧಾರಣ ಧ್ಯಾನ ಸಮಾಧಿಗಳನ್ನುಂಟುಮಾಡದೇ ಹೋದರೆ ಕೇವಲ ಶ್ರಮವನ್ನು ಕೊಡುವವು; ಎಂತು ಕೃಷ್ಯಾದಿಗಳು ಆ ಪೈರುಗಳ ಫಲವನ್ನು ಕೊಡುವವಾದಾಗ್ಯೂ ಯೋಗದಿಂದುಂಟಾಗುವ ಮೋಕ್ಷವನ್ನು ಸಾಧಿಸಲಾರವೋ ಹಾಗೆ ಅನರ್ಥಕರವಾದ ಸಂಸಾರವನ್ನೇ ಪೋಷಿಸುವವು; ಈತೆರದಿಂದ ಬಹಿರ್ಮುಖನಾದ ಪುರುಷನಿಗೆ ಇಷ್ಟಾಪೂರ್ತಿ ಕರ್ಮಗಳು ಮೋಕ್ಷವನ್ನುಂಟುಮಾಡಲಾರವು; ಯಾವಾತನು ಚಿತ್ತವನ್ನು ಜಯಿಸಲಿಚ್ಛೆಯುಳ್ಳವನೋ ಆವನು ಸಂಸಾರದ

ಸಂಗವನ್ನು ಬಿಟ್ಟು ನಿಸ್ಸಂಗನಾಗಿ ಮಮತೆಯನ್ನು ಬಿಟ್ಟು ಒಬ್ಬನೇ ವಿವಿಕ್ತವಾಸವನ್ನು ಪಡದು ವಿರಕ್ತನಾಗಿ ಭಿಕ್ಷೆಯಿಂದ ಮಿತವಾದ ಆಹಾರವನ್ನು ಮಾಡಿಕೊಂಡು ಯೋಗಾಸಕ್ತನಾಗಿರುವದು! ಕೇಳೈ ಅರಸೆ, ಶುಚಿಯಾದ ಸಮಸ್ಥಳವಲ್ಲಿ ಯೋಗಾಸನದಲ್ಲಿ ಕುಳಿತು ಸ್ಥಿರಚಿತ್ತದಿಂದ ಋಜುಕಾಯನಾಗಿ ಕುಳಿತು ಸವಿದಿಂದ ಪ್ರಣವೋಚ್ಚಾರಣಂಗೈವದು ; ಯೋಗಾಭ್ಯಾಸವನ್ನು ಮಾಡುವವನು ತನ್ನ ನಾಸಾಗ್ರದಲ್ಲಿ ದೃಷ್ಟಿಯನ್ನಿಟ್ಟು ರೇಚಕ ಪೂರಕ ಕುಂಭಕಗಳಿಂದ ಪ್ರಾಣಾಪಾನ ವಾಯುಗಳನ್ನು ನಿರೋಧಂಗೈದು ತನ್ನ ಮನಸ್ಸು ಕಾಮಗಳನ್ನು ತ್ಯಜಿಸುವಪರ್ಯಂತವೂ ಅಭ್ಯಾಸಂಗೈವದು ; ವಿವೇಕವುಳ್ಳವನು ಕಾಮಾಧೀನವಾದಕಾರಣ ವಿಷಯದಲ್ಲಿ ಭ್ರಮಿಸುವ ಮನಸ್ಸು ಎಲ್ಲೆಲ್ಲಿ ಓಡುವದೋ ಅಲ್ಲಲ್ಲಿ ತಿರುಗಿಸಿ ಮೆಲ್ಲಮೆಲ್ಲನೆ ತನ್ನ ಹೃದಯದಲ್ಲಿ ನಿಲ್ಲಿಸುವದು ; ಈರೀತಿಯಿಂದ ಮನೋನಿಗ್ರಹಂಗೈವವನ ಚಿತ್ತವು ನಿರಂತರಾಭ್ಯಾಸಬಲದಿಂದ ಉಪಶಾಂತಿಯನ್ನು ಕಾಷ್ಠವಿಲ್ಲದ ಅಗ್ನಿಯಂತೆ ಶೀಘ್ರವಾಗಿ ಐದುವದು; ಕಾಮಾದಿಗಳಿಂದ ಕ್ಷೋಭೆಯನ್ನು ಪಡೆಯದೆ ಸಮಸ್ತ ವಿಷಯಗಳಲ್ಲಿ ವೃತ್ತಿಯನ್ನು ಬಿಟ್ಟು ಆತ್ಮಸುಖವನ್ನನುಭವಿಸುವ ಚಿತ್ತವು ಯಾವಾಗಲೂ ಕಾಮಾದಿಗಳಲ್ಲಿ ಪ್ರವರ್ತಿಸುವದಿಲ್ಲ; ಯಾವಾತನು ಧರ್ಮಾರ್ಥ ಕಾಮಾದಿಗಳಿಗೆ ಕ್ಷೇತ್ರವಾದ ಗೃಹಾಶ್ರಮವನ್ನು ಬಿಟ್ಟು ಸನ್ಯಾಸವನ್ನೈದಿ ಪುನಶ್ಚ ಕಾಮಾದಿಗಳನ್ನು ಅಪೇಕ್ಷಿಸುತ್ತಾನೆಯೋ ಆ ಪುರುಷನು ವಮನವಾದ ಉಚ್ಛಿಷ್ಟವನ್ನು ಭಕ್ಷಿಸುವನಂತೆ ನಿರ್ಲಜ್ಜನೇ ಸರಿ ; ಯಾರಿಂದ ಪೂರ್ವದಲ್ಲಿ ತನ್ನ ದೇಹವು ಆತ್ಮಭಿನ್ನವು ವೃತಿಯನ್ನೈದತಕ್ಕದ್ದು ಅಪವಿತ್ರವಾದರೂ ಕ್ರಿಮಿಯಾದರೂ ಭಸ್ಮವಾದರೂ ಆಗತಕ್ಕದ್ದೆಂದು ತಿಳಿಯಲ್ಪಟ್ಟಿತೋ ಅವರೇ ಪುನಶ್ಚ ಈ ದೇಹವನ್ನು ಆತ್ಮನೆಂದು ಶ್ಲಾಘಿಸುವರಾದರೆ ಅವರು ಮೂರ್ಖರೇ ಸರಿ ; ಸ್ವಧರ್ಮವನ್ನು ಬಿಟ್ಟ ಗೃಹಸ್ಥನೂ ವ್ರತತ್ಯಾಗಿಯಾದ ಬ್ರಹ್ಮಚಾರಿಯೂ ಗ್ರಾಮವಾಸಂಗೈವ ತಪಸ್ವಿಯೂ ಇಂದ್ರಿಯ ಚಾಂಚಲ್ಯವುಳ್ಳ ಭಿಕ್ಷುಕನೂ ಇವರು ಆಶ್ರಮಗಳಲ್ಲಿ ನಿಂದಿತರಾದಕಾರಣ ಆಶ್ರಮಗಳನ್ನು ವಿಡಂಬಂಗೈವವರು ದೇವಮಾಯೆಯಿಂದ ಮೂಢರಾದ ಇವರನ್ನು ಕುರಿತು ಪಶ್ಚಾತ್ತಾಪವನ್ನು ಪಡಬೇಕು ; ಜ್ಞಾನದಿಂದ ನಿರಸ್ತಗಳಾದ ವಾಸನೆಗಳುಳ್ಳ ಜ್ಞಾನಿಯೂ ತನ್ನನ್ನು ಪರಮಾತ್ಮನನ್ನಾಗಿ ತಿಳಿದಮೇಲೆ ಏನನ್ನು ಬಯಸಿ ಯಾತಕ್ಕೋಸ್ಕರ ಆಸಕ್ತನಾಗಿ ದೇಹವನ್ನು ಪೋಷಿಸ್ಯಾನು ? ಶರೀರವೇ ರಥವು ; ಇಂದ್ರಿಯಗಳೇ ಅಶ್ವಗಳು ; ಇಂದ್ರಿಯಪ್ರೇರಕವಾದ ಮನಸ್ಸೇ ಹಗ್ಗವು ; ಪಂಚತನ್ಮಾತ್ರೆಗಳೇ ಹೋಗತಕ್ಕ ದೇಶಗಳು ; ಬುದ್ಧಿಯೇ ಸಾರಥಿಯು ; ಚಿತ್ತವೇ ಬಹಿರ್ವ್ಯಾಪಿಯಾದ ಬಂಧನವು; ಈ ಬಂಧನವನ್ನು ಮಾಡಿದವನು ಈಶ್ವರನೆಂದು ಪೇಳುವರು ; ಪ್ರಾಣಾಪಾನವ್ಯಾನೋದಾನ ಸಮಾನಗಳೆಂಬ ಪಂಚಪ್ರಾಣಗಳು ನಾಗ ಕೂರ್ಮ ಕೃಕಲ ದೇವದತ್ತ ಧನಂಜಯಗಳೆಂಬ ಉಪಪ್ರಾಣಗಳು ಈ ದಶವು ಅಚ್ಚುಗಳು ; ಧರ್ಮಾಧರ್ಮಗಳು ಭಂಡಿಗಳು ; ಅಹಂಕಾರ ಸಹಿತನಾದ ಜೀವನು ರಥಿಕನು ; ಪ್ರಣವವೇ ಧನುಸ್ಸು ; ಶುದ್ಧಜೀವನೇ ಶರೀರವು ; ಪರಬ್ರಹ್ಮವೇ ಲಕ್ಷ್ಯವು ಎಂದು ಪೇಳುವರು ; ಎಂತು ಧನುಸ್ಸಿನಿಂದ ಬಾಣವು ಲಕ್ಷ್ಯದಲ್ಲಿ ಕೆಡಹಲ್ಪಡುತ್ತೆಯೋ ಆಪ್ರಕಾರದಿಂದ ಪ್ರಣವದಿಂದ ಜೀವನು ಬ್ರಹ್ಮದಲ್ಲಿ ಕೆಡಹಲ್ಪಡುವನು ; ರಾಗದ್ವೇಷವು ಲೋಭವು ಶೋಕವು ಮೋಹವು ಭಯವು ಮದವು ಮಾನವು ಅವಮಾನವು ಅಸೂಯೆಯು ಮಾಯೆಯು ಹಿಂಸೆಯು ಮತ್ಸರವು ರಜಸ್ಸು ಪ್ರಮಾದವು ಹಸಿವು ನಿದ್ರೆಯು ಇವೇ ಮೊದಲಾದವು ಶತ್ರುಗಳು ; ಇವುಗಳಲ್ಲಿ ಕೆಲವು ರಜಃಪ್ರಕೃತಿಗಳು ; ಕೆಲವು ತಮಃಪ್ರಕೃತಿಗಳು ; ಆರೂಢಸಮಾಧಿಯುಳ್ಳವನಿಗೆ ಪರೋಪಕಾರ ಮುಂತಾದ ಸತ್ವಪ್ರಕೃತಿಗಳಾದ ಕೆಲವು ವ್ಯಾಪಾರಗಳುಂಟು ; ಅವುಗಳು ಶತ್ರುಗಳೇ ಸರಿ ; ಅವುಗಳನ್ನೂ ಜಯಿಸಬೇಕು ; ಇಂದ್ರಿಯಪರಿಕರವುಳ್ಳ ಮನುಷ್ಯರ ಶರೀರವೆಂಬ ರಥವನ್ನು ತನ್ನ ಸ್ವಾಧೀನವಾಗಿರುವ ಪರ್ಯಂತವು ಧರಿಸುವನಾಗಿ ಸಾಧುಗಳ ಚರಣಸೇವೆಯಿಂದ ತೀಕ್ಷ್ಣವಾದ ಜ್ಞಾನವೆಂಬ ಖಡ್ಗವನ್ನು ಧರಿಸಿ ಅಚ್ಯುತಾಶ್ರಯವುಳ್ಳವನಾಗಿ ಶತ್ರುಗಳನ್ನು ಜಯಿಸಿ ಉಪಶಾಂತಿಯನ್ನು ಪಡದು ಸ್ವಾನಂದದಿಂದಿರುವನಾಗಿ ಈ ರಥಾದಿಗಳನ್ನು ಪೇಕ್ಷಿಸಬೇಕು ; ಅಚ್ಯುತಾಶ್ರಯವಿಲ್ಲದೆ ಪ್ರಮತ್ತನಾಗಿರುವವನನ್ನು ದುಷ್ಟಗಳಾದ ಇಂದ್ರಿಯಾಶ್ವ ಸಾರಥಿಗಳು ಸನ್ಮಾರ್ಗವನ್ನು ತಪ್ಪಿಸಿ ಅಮಾರ್ಗದಲ್ಲಿ ಶೆಳೆದು ವಿಷಯಗಳೆಂಬ ಶತ್ರುಗಳಿಗೆ ಶಿಕ್ಕಿಸಿ ಆ ಶತ್ರುಗಳ ವಶವನ್ನು ಮಾಡಲು ಅವರು ಅಶ್ವ ಸಾರಥಿ ರಥಗಳೊಡನೆ ಇರುವವನನ್ನು ತಮಸ್ಸಿನಿಂದ ವ್ಯಾಪ್ತವಾದ ಜನ್ಮ ಮೃತ್ಯುಭಯವುಳ್ಳ ಸಂಸಾರವೆಂಬ

ದಲ್ಲಿ ಬೀಳಿಸುವರು ; ಪ್ರವೃತ್ತವೆಂಬದಾಗಿಯೂ ನಿವೃತ್ತವೆಂಬದಾಗಿಯೂ ವೇದೋಕ್ತಕರ್ಮವು ಎರಡುಪ್ರಕಾರವಾಗಿರುವದು ; ಪ್ರವೃತ್ತಿಕರ್ಮದಿಂದ ಪುನರಾವೃತ್ತಿಯುಂಟಾಗುವದು ; ನಿವೃತ್ತಿಕರ್ಮದಿಂದ ಮೋಕ್ಷವನ್ನೈದುವನು ; ದರ್ಶಪೂರ್ಣಮಾಸವು ಚಾತುರ್ಮಾಸ್ಯವು ಪಶುಯಾಗವು ಸೋಮಯಾಗವು ಮೊದಲಾದ ಹಿಂಸಾಯುಕ್ತಗಳಾದ ಶ್ಯೇನಯಾಗಾದಿಗಳು ದ್ರವ್ಯಪ್ರಚುರಗಳಾದ ಕಾಮ್ಯಕರ್ಮಗಳೆಲ್ಲವೂ ಅತ್ಯಾಸಕ್ತಿಯನ್ನುಂಟುಮಾಡುವವು ; ವೈಶ್ವದೇವವು ಬಲಿಹರಣವು ಇವೇ ಮೊದಲಾದವು ಇಷ್ಟವೆನಿಸಿಕೊಂಬುವವು ; ದೇವಸ್ಥಾನ ತೋಪು ವಾಪೀ ಕೂಪ ತಟಾಕಾದಿಗಳು ಪೂರ್ತವೆನಿಸಿಕೊಂಬುವವು; ಈ ಇಷ್ಟಾಪೂರ್ತ ಕರ್ಮಗಳೆರಡೂ ಫಲಾಪೇಕ್ಷೆಯಿಂದಾಚರಿಸಲ್ಪಟ್ಟರೆ ಕಾಮ್ಯಗಳಾಗಿ ಪ್ರವೃತ್ತಗಳೆನಿಸಿಕೊಂಬವು ; ಫಲಾಪೇಕ್ಷಾರಹಿತಗಳಾಗಿ ಮಾಡಲ್ಪಟ್ಟರೆ ನಿವೃತ್ತಗಳೆನಿಸಿಕೊಂಬವು ; ಪ್ರವೃತ್ತಿಕರ್ಮಗಳನ್ನಾಚರಿಸುವದರಿಂದುಂಟಾಗುವ ಪುಣ್ಯಲೋಕಪ್ರಕಾರವು ಅಲ್ಲಿಂದ ಹಿಂದಕ್ಕೆತಿರುಗಿ ಪುನಶ್ಚ ಭೂಲೋಕದಲ್ಲಿ ಉತ್ಪತ್ತಿಯಾಗುವಪ್ರಕಾರವು ಹ್ಯಾಗಂದರೆ: ಚರುಪುರೋಡಾಶಾದಿ ದ್ರವ್ಯದ ಸೂಕ್ಷ್ಮಾವಯುವದ ಪರಿಣಾಮವು ಧೂಮಾಭಿಮಾನದೇವತೆಯು ರಾತ್ರ್ಯಭಿಮಾನದೇವತೆಯು ಕೃಷ್ಣಪಕ್ಷಾಭಿಮಾನದೇವತೆಯು ದಕ್ಷಿಣಾಯನದೇವತೆಯು ಚಂದ್ರನು ಇವುಗಳು ಪುಣ್ಯಲೋಕಪ್ರಾಪ್ತಿಸಾಧನಗಳು ; ದರ್ಶಾಭಿಮಾನಿದೇವತೆಯು ಓಷಧಿ ಲತೆಗಳು ಅನ್ನವು ರೇತಸ್ಸು ಇವು ಪುನಶ್ಚ ಭೂಲೋಕಪ್ರಾಪ್ತಿಗೆ ಸಾಧನಗಳು ; ಚರುಪುರೋಡಾಶಾದಿ ಸೂಕ್ಷ್ಮಾವಯುವದ ಪರಿಣಾಮದದೆಶೆಯಿಂದ ಭೋಗಶರೀರವನ್ನೈದಿ ಧೂಮರಾತ್ರಿ ಕೃಷ್ಣಪಕ್ಷ ದಕ್ಷಿಣಾಯನ ದೇವತೆಗಳಿಂದ ಚಂದ್ರಲೋಕವನ್ನು ಪಡೆಯಲ್ಪಟ್ಟವನಾಗಿ ಅಲ್ಲಿ ಭೋಗಗಳನ್ನನುಭವಿಸಿ ಪುಣ್ಯಕ್ಷಯಾನಂತರದಲ್ಲಿ ದರ್ಶಾಭಿಮಾನಿದೇವತೆಯಿಂದ ವೃಷ್ಟಿದ್ವಾರದಿಂದ ಓಷಧಿಗಳಲ್ಲಿ ಶೇರಿಸಲ್ಪಟ್ಟು ಅಲ್ಲಿಂದ ಅನ್ನರೂಪವಾಗಿ ಪ್ರಾಣಿಹೃದಯದಲ್ಲಿ ಶೇರಿ ರೇತೋರೂಪದಿಂದ ಸ್ತ್ರೀಗರ್ಭಪ್ರವೇಶವನ್ನು ಮಾಡಿ ಭೂಮಿಯಲ್ಲಿ ಜನಿಸುವನು ! ಎಲೈ ಅರಸೆ, ಈ ಹೇಳಲ್ಪಟ್ಟ ಮಾರ್ಗವೇ ಪಿತೃಯಾಣವೆನಿಸಿಕೊಂಬುದು ; ಈ ಮಾರ್ಗದಿಂದ ಸೋಮಲೋಕವನ್ನು ಪಡದ ಪುರುಷರು ಪುನಃಪುನಃ ಭೂಮಿಯಲ್ಲಿ ಹುಟ್ಟಿ ಸಂಸಾರವನ್ನೈದುವರು ; ಇದು ಪ್ರವೃತ್ತಿಮಾರ್ಗದಿಂದುಂಟಾಗುವ ಗತಿಯು ; ನಿವೃತ್ತಕರ್ಮನಿಷ್ಠನಾದ ಪುರುಷನಿಗೆ ಉಪಾಸನಾವಿಶೇಷವನ್ನು ಉಪದೇಶಂಗೈಯ್ಯುವನಾಗಿ ಅರ್ಚರಾದಿ ಮಾರ್ಗದಿಂದ ಬ್ರಹ್ಮಲೋಕಪ್ರಾಪ್ತಿಪ್ರಕಾರವನ್ನು ನುಡಿಯುವೆನು ; ಕೇಳೈ ಅರಸೆ, ನಿಷೇಕ ಮೊದಲಾದ ಸಂಸ್ಕಾರಗಳಿಂದ ಸಂಸ್ಕೃತನಾದ ಜ್ಞಾನಿಯಾದ ದ್ವಿಜನು ಇಂದ್ರಿಯವಿಷಯಗಳಾದ ಕ್ರಿಯೆಗಳನ್ನು ಜ್ಞಾನವೆಂಬ ತೇಜಸ್ಸಿನಲ್ಲಿ ಹವನಂಗೈವನು ; ಇಂದ್ರಿಯಗಳನ್ನು ದರ್ಶನಾದಿಸಂಕಲ್ಪರೂಪವಾದ ಮನಸ್ಸಿನಲ್ಲಿ ಶೇರಿಸಬೇಕು ; ವಿಕಾರಯುಕ್ತವಾದ ಮನಸ್ಸನ್ನು ವಾಕ್ಯದಲ್ಲಿ ಶೇರಿಸಬೇಕು ; ಆ ವಾಕ್ಕನ್ನು ವರ್ಣಸಮುದಾಯದಲ್ಲಿ ಶೇರಿಸಬೇಕು ; ಆ ವರ್ಣಸಮುದಾಯವನ್ನು ಸ್ವರತ್ರಯಯುಕ್ತವಾದ ಪ್ರಣವದಲ್ಲಿ ಶೇರಿಸಬೇಕು ; ಪ್ರಣವವನ್ನು ಬಿಂದುವಿನಲ್ಲಿ ಶೇರಿಸಬೇಕು ; ಆ ಬಿಂದುವನ್ನು ನಾದದಲ್ಲಿ ಶೇರಿಸಬೇಕು ; ಆ ನಾದವನ್ನು ಸೂತ್ರಾತ್ಮಕವಾದ ಪ್ರಾಣದಲ್ಲಿ ಶೇರಿಸಬೇಕು ; ಆ ಪ್ರಾಣವನ್ನು ಬ್ರಹ್ಮನಲ್ಲಿ ಶೇರಿಸಬೇಕು ; ಅಗ್ನಿ ಸೂರ್ಯ ಅಹಸ್ಸು ಶುಕ್ಲಪಕ್ಷ ಮಧ್ಯಾಹ್ನ ಪೌರ್ಣಮಾಸೆಯು ಉತ್ತರಾಯಣವು ಏತದಭಿಮಾನ ದೇವತೆಗಳಿಂದ ಬ್ರಹ್ಮಲೋಕವನ್ನೈದಿಸಲ್ಪಡುವನು ; ಈಪ್ರಕಾರವಾಗಿ ಬ್ರಹ್ಮಲೋಕವನ್ನೈದಿದ ಪುರುಷನಿಗೆ ಭೋಗಾವಸಾನದಲ್ಲಿ ಮೋಕ್ಷವುಂಟಾಗುವದು ; ಸ್ಥೂಲದೇಹೋಪಾಧಿಯಾದ ವಿಶ್ವನು ಆ ಸ್ಥೂಲದೇಹವನ್ನು ಸೂಕ್ಷ್ಮದೇಹದಲ್ಲಿ ವಿಲಾಪನಂಗೈದು ತೈಜಸನಾಗುವನು ; ಆ ಸೂಕ್ಷ್ಮದೇಹೋಪಾಧಿಯಾದ ತೈಜಸನು ಆ ಸೂಕ್ಷ್ಮದೇಹವನ್ನು ಕಾರಣದೇಹದಲ್ಲಿ ವಿಲಾಪನಂಗೈದು ಪ್ರಾಜ್ಞನಾಗುವನು ; ಕಾರಣದೇಹೋಪಾದಿಯಾದ ಪ್ರಾಜ್ಞನು ಆ ಕಾರಣಸಾಕ್ಷಿರೂಪವಾದ ವಸ್ತುವಿನಲ್ಲಿ ವಿಲಾಪನಂಗೈದು ತುರ್ಯನಾಗುವನು ; ಆ ತುರ್ಯನು ಸಾಕ್ಷಿಗಳಾದ ಈ ಸ್ಥೂಲ ಸೂಕ್ಷ್ಮಕಾರಣದೇಹಗಳ ವಿಲಯಾನಂತರದಲ್ಲಿ ಶುದ್ಧನಾದ ಆತ್ಮನಾಗುವನು ; ಇದೇ ದೇವಯಾನ ಮಾರ್ಗವೆನಿಸಿಕೊಂಬದು ; ಈ ರೀತಿಯಲ್ಲಿ ಪರಬ್ರಹ್ಮವನ್ನೈದಿದ ಪುರುಷನು ಪುನಶ್ಚ ಹಿಂದಕ್ಕೆ ತಿರುಗುವದಿಲ್ಲ ; ಈ ದೇವಯಾನವೆಂಬ ಮಾರ್ಗದಲ್ಲಿ ಪೂರ್ವೋಕ್ತ ದೇವತೆಗಳಿಂದ ಕ್ರಮವಾಗಿ ಬ್ರಹ್ಮಲೋಕವನ್ನೈದಿಸಲ್ಪಟ್ಟ ಪುರುಷನು ಆತ್ಮಯಾಜಿಯಾಗಿ ಉಪಶಾಂತಾತ್ಮನಾಗಿ ಆತ್ಮಸ್ಥನಾದವನು ನಿವೃತ್ತಿಯನ್ನೈದುವನು ; ದೇವನಿರ್ಮಿತಗಳಾದ ಯಾವ ಈ ಪಿತೃದೇವಸಂಬಂಧಿಗಳಾದ ದಕ್ಷಿಣೋತ್ತರಾಯಣಗಳೆಂಬ ಮಾರ್ಗಗಳನ್ನು ಶಾಸ್ತ್ರದೃಷ್ಟಿಯಿಂದ ಯಾವವನು ಬಲ್ಲನೋ

ಅವನು ಈ ದೇಹದಲ್ಲೇ ಇದ್ದಾಗ್ಯೂ ಮೋಹವನ್ನು ಪಡೆಯುವದಿಲ್ಲ ; ಈಪ್ರಕಾರವಾಗಿ ಜ್ಞಾನಿಯಾಗಿ ಜೀವನ್ಮುಕ್ತನಾದ ಪುರುಷನು ದೇಹಾದಿಗಳಲ್ಲಿ ಕಾರಣಭಾವದಿಂದ ಅಂತದಲ್ಲಿ ಅವಧಿಭಾವದಿಂದ ಒಳಗೆ ಭೋಗ್ಯವಸ್ತುವಾಗಿಯೂ ಬಾಹ್ಯದಲ್ಲಿ ಭೋಕ್ತೃವಾಗಿಯೂ ಉಚ್ಚನೀಚಭಾವವಾಗಿಯೂ ಇರುವ ಸರ್ವವೂ ತಾನೇ ಸರಿ ; ತದ್ವ್ಯತಿರಿಕ್ತವಸ್ತುವು ಯಾವದೂ ಇಲ್ಲ ; ಆದಕಾರಣ ಪುರುಷನು ಮೋಹವನ್ನೈದುವದಿಲ್ಲ ; ತರ್ಕವಿರೋಧದಿಂದ ಬಾಧಿತವಾದ್ದಾಗ್ಯೂ ಪ್ರತಿಬಿಂಬಾದಿ ವಸ್ತುಗಳು ಸದ್ರೂಪದಿಂದ ಎಂತು ತೋರುವವೋ ಹಾಗೆ ಇಂದ್ರಿಯಗ್ರಾಹ್ಯಗಳಾದ ಸರ್ವವಿಷಯಗಳೂ ವಸ್ತುರೂಪಗಳಾಗಿ ತೋರುವವೇ ಹೊರ್ತು ಪರಮಾರ್ಥವಾಗಿ ಇಲ್ಲ ; ಪೃಥುವ್ಯಾದಿ ಪಂಚಭೂತಗಳ ಐಕ್ಯಬುದ್ಧಿಗೆ ಅವಲಂಬನವಾಗಿರುವ ದೇಹಾದಿ ಸ್ವರೂಪವು ಪೃಥ್ವ್ಯಾದಿ ಪಂಚಭೂತಗಳ ಸಂಘಾತ ಆರಂಭ ಪರಿಣಾಮಗಳೊಳಗೆ ಪಂಚಭೂತ ಸಂಘಾತವೂ ಅಲ್ಲ ; ಅವಯವಗಳಿಂದ ಆರಂಭಿಸಲ್ಪಡುವದೂ ಅಲ್ಲ ; ಅವುಗಳ ಪರಿಣಾಮವೂ ಅಲ್ಲ ; ವೃಕ್ಷಗಳ ಸಂಘಾತರೂಪವಾದ ವನಕ್ಕೆ ಏಕದೇಶಾಕರ್ಷಣದಿಂದ ಸರ್ವಾಕರ್ಷಣವಾಗುವದಿಲ್ಲ ; ಈ ದೇಹದಲ್ಲಿ ಏಕ ದೇಹಾಕರ್ಷಣದಿಂದ ಸರ್ವಾಕರ್ಷಣವಾಗುವದರಿಂದ ಪಂಚಭೂತಗಳ ಸಂಘಾತವೇ ದೇಹಸ್ವರೂಪವೆಂದು ಹೇಳತಕ್ಕದ್ದಲ್ಲ ; ಅದೇರೀತಿ ಅವಯವಗಳಿಂದ ಆರಂಭಿಸಲ್ಪಡುವದಿಲ್ಲ ; ಆರಬ್ಧವಾದ ಅವಯವಗಳದೆಶೆಯಿಂದ ಅನ್ಯವೂ ಅಲ್ಲ ; ಅನ್ಯವೆಂಬಪಕ್ಷದಲ್ಲಿ ಕರಚರಣಾದಿಗಳಿಗೆ ದೇಹವೆಂಬ ವ್ಯವಹಾರವಿಲ್ಲದೇ ಹೋಗುವದು ; ಮತ್ತೂ ಅವಯವಂಗಳೊಡನೆ ಯುಕ್ತವಾದದ್ದೂ ಅಲ್ಲ ; ಯುಕ್ತವಾದ್ದೆಂಬಪಕ್ಷದಲ್ಲಿ ಸಾಕಲ್ಯದಿಂದ ಯುಕ್ತವಾದರೆ ಆಗ ಅಂಗುಳೀಮಾತ್ರದಲ್ಲಿ ದೇಹಬುದ್ಧಿಯುಂಟಾಗುವದು ; ಅಂಶದಿಂದ ಯುಕ್ತವಾದ್ದೆಂದರೆ : ಅಂಗಅಂಶಕ್ಕೂ ಅಂಶವನ್ನಂಗೀಕರಿಸುವಲ್ಲಿ ಅನವಸ್ಥೆಯುಂಟಾದೀತು ; ಅದ್ದರಿಂದ ದೇಹಸ್ವರೂಪವು ಅಸತ್ಯವೇ ಸರಿ ; ಪೃಥಿವ್ಯಾದಿ ಪಂಚಮಹಾಭೂತಗಳು ಅವಯವಗಳಾದ್ದರಿಂದ ಸೂಕ್ಷ್ಮಾವಯವಗಳಾದ ಶಬ್ದಾದಿ ತನ್ಮಾತ್ರಗಳನ್ನು ಹೊರತು ಉಂಟಾಗಲಾರವು ; ಆ ಸೂಕ್ಷ್ಮಾವಯವಗಳು ಸತ್ಯಗಳಾಗಲಿಯೆಂದರೆ ಅವಯವಗಳಾದ ಮಹಾಭೂತಗಳೇ ಮಿಥ್ಯಾಭೂತಗಳೆಂದು ಪೂರ್ವದಲ್ಲೇ ಹೇಳಲ್ಪಟ್ಟದ್ದರಿಂದ ಅವಯವಗಳಾದ ತನ್ಮಾತ್ರಗಳು ಮಿಥ್ಯಾಭೂತಗಳೆಂದು ಹೇಳಲ್ಪಟ್ಟಿತು ; ಅವಯವಗಳು ಮಿಥ್ಯಾಭೂತಗಳಾದಪಕ್ಷದಲ್ಲಿ ಉತ್ಪತ್ತಿ ವಿನಾಶಗಳುಳ್ಳ ಬಾಲ್ಯಾದ್ಯವಸ್ಥೆಗಳಲ್ಲಿ ಪೂರ್ವದಲ್ಲಿ ದೃಷ್ಟವಾದ ದೇಹವೇ ಇದು ; ಕಾಲಾಂತರದಲ್ಲಿ ಆ ದೇಹವಿಷಯವಾಗಿ ಪ್ರತ್ಯಭಿಜ್ಞೆಯು ಎಂತು ಉಂಟಾದೀತೆಂದರೆ ; ಪರಮಾತ್ಮವಸ್ತುವಿಗೆ ಭೇದವಿಲ್ಲದಿರುವದರಿಂದ ಅವಿದ್ಯಾನಿವೃತ್ತಿಯಾಗುವಪರ್ಯಂತವು ದೇಹಾದಿಗಳಲ್ಲಿ ಪೂರ್ವಪೂರ್ವಾಕೃತಿಸಾದೃಶ್ಯಭ್ರಮೆಯಿಂದ ಪ್ರತ್ಯಭಿಜ್ಞೆಯುಂಟಾಗುವದು ; ಈರೀತಿಯಲ್ಲಿ ಸರ್ವಮಿಥ್ಯಾತ್ವಪಕ್ಷದಲ್ಲಿ ವಿಧಿನಿಷೇಧ ಶಾಸ್ತ್ರಗಳಿಗೆ ಸಾರ್ಥಕ್ಯವೆಂತು ಉಂಟಾಗುವದೆಂದರೆ : ಮಿಥ್ಯಾಭೂತವಾದ ಸ್ವಪ್ನವನ್ನನುಭವಿಸುವ ಕಾಲದಲ್ಲಿ ಮತ್ತೊಂದು ಸ್ವಪ್ನವನ್ನನುಭವಿಸುವಂತೆಯೂ ಅದರಲ್ಲೇ ಪುನಃ ಪ್ರಬೋಧವುಂಟಾಗುವಂತೆಯೂ ಲೋಕಾನುಭವವಿದ್ದುದರಿಂದ ಪ್ರಥಮಸ್ವಪ್ನಮೊದಲುಕೊಂಡು ಸರ್ವಸ್ವಪ್ನಗಳೂ ಪ್ರಬೋಧಗಳು ಎಂತು ಮಿಥ್ಯಗಳೋ ಹಾಗೆ ಅವಿದ್ಯಾನಿವೃತ್ತಿಪರ್ಯಂತವು ವಿಧಿನಿಷೇಧ ಶಾಸ್ತ್ರಗಳು ಸಹಾ ಸತ್ಯವಾಗಿ ತೋರುವವು ; ವಾಸ್ತವದಿಂದೆಲ್ಲಾ ಮಿಥ್ಯವು ; ಮನನಶೀಲನಾದ ಯೋಗಿಯು ಸ್ವಸ್ವರೂಪಾನುಸಂಧಾನದಿಂದ ಪರಮಾತ್ಮನಿಗೆ ಭಾವಾದ್ವೈತವನ್ನೂ ದ್ರವ್ಯಾದ್ವೈತವನ್ನೂ ಆಲೋಚಿಸುವನಾಗಿ ಜಾಗ್ರತ್ಸ್ವಪ್ನಸುಷುಪ್ತಿಗಳಾದ ಈ ಮೂರು ಸ್ವಪ್ನಗಳನ್ನು ಬಿಡುವನು ; ವಸ್ತುವಿನಲ್ಲಿ ಭೇದಬುದ್ಧಿಯೇ ಪ್ರಥಮಸ್ವಪ್ನವು ; ಅಧಿಕಾರಭೇದದಿಂದ ಕರ್ಮಭೇದ ಬುದ್ಧಿಯೇ ದ್ವಿತೀಯಸ್ವಪ್ನವು ; ತನ್ನ ಕರ್ಮದಿಂದ ಸಾಧಿಸಲ್ಪಟ್ಟ ಈ ಫಲವು ತನಿಗೆ ಭೋಗ್ಯವೆಂಬ ಬುದ್ಧಿಯೇ ತೃತೀಯಸ್ವಪ್ನವು ; ಈ ಮೂರುಸ್ವಪ್ನಗಳನ್ನು ಬಿಡುವದು ; ಭೇದವು ಅವಸ್ತುವಾದಕಾರಣ ಕಾರ್ಯಕಾರಣರೂಪಗಳಾದ ಪಟತಂತುಗಳಿಗೆ ಐಕ್ಯದಂತೆ ಕಾರ್ಯಕಾರಣರೂಪವಾದ ದೃಶ್ಯಪ್ರಪಂಚ ಪರಮಾತ್ಮವಸ್ತುಗಳಿಗೆ ಐಕ್ಯಬುದ್ಧಿ ಯಾವದುಂಟೋ ಅದೇ ಭಾವದ್ವೈತವೆನಿಸಿಕೊಂಬದು ; ಮನೋವಾಕ್ಕಾಯಗಳಿಂದ ಮಾಡಲ್ಪಟ್ಟ ಸಮಸ್ತ ಕ್ರಿಯೆಗಳನ್ನು ಸಾಕ್ಷಾತ್ಪರಮಾತ್ಮನಲ್ಲಿ ಸಮರ್ಪಣಂಗೈವದೇ ಕ್ರಿಯಾದ್ವೈತವೆನಿಸಿಕೊಂಬದು ; ತನ್ನ ಪತ್ನೀ ಪುತ್ರರೇ ಮೊದಲಾದವರ ಇತರರಾದವರ ಕಾಮಾರ್ಥಗಳ ಐಕ್ಯಜ್ಞಾನವು ದ್ರವ್ಯಾದ್ವೈತವೆನಿಸಿಕ್ಕೊಂಬದು ; ಯಾವ ಪುರುಷನು ಯಾವ ದ್ರವ್ಯವು ಯಾವ ಉಪಾಯದಿಂದ ಯಾವವನದೆಶೆಯಿಂದ ಯಾವ ಪ್ರದೇಶದಲ್ಲಿ ಯಾವ ನಿಮಿತ್ತದಿಂದ ಅನಿಷಿದ್ಧವಾಗಿ ಎಷ್ಟುಮಾತ್ರ ಲಬ್ಧವಾಗುತ್ತೋ ಅಷ್ಟುಮಾ

ತ್ರದಿಂದಲೇ ತನ್ನ ಆಶ್ರಮವಿಹಿತವಾದ ಕರ್ಮಗಳನ್ನು ಮಾಡಬೇಕು ; ಆಪದ್ವ್ಯತಿರಿಕ್ತಕಾಲದಲ್ಲಿ ಅಧಿಕಾಪೇಕ್ಷೆಯನ್ನು ಮಾಡಬಾರದು ; ಮನುಜನು ಈ ವೇದೋಕ್ತಸ್ವಕರ್ಮಗಳಿಂದ ನಡೆಯುವನಾಗಿ ಶ್ರೀಹರಿಯಲ್ಲಿ ಭಕ್ತಿಮಾತ್ರ ದೃಢವಾಗುಳ್ಳವನಾಗಿ ಗೃಹಸ್ಥಾಶ್ರಮವುಳ್ಳವನು ಅಚ್ಯುತನ ಸಾನ್ನಿಧ್ಯವನ್ನೈದುವನು ; ಯಾವಪ್ರಕಾರವಾಗಿ ನೀವು ನೃಪರಿಂದಲೂ ದೇವತೆಗಳಿಂದಲೂ ತ್ಯಜಿಸಲಶಕ್ಯವಾದ ಆಪತ್ಸಮುದ್ರವನ್ನು ಶ್ರೀಕೃಷ್ಣನ ಕೃಪೆಯಿಂದ ದಾಟಿ ಯಾವ ಶ್ರೀಹರಿಯ ಪಾದಪದ್ಮಗಳ ಸೇವೆಯಿಂದ ನಿರ್ಭಯದಿಂದ ದಿಕ್ಕುಗಳನ್ನೂ ಧನಗಳನ್ನೂ ಜಯಿಸಿ ಮಹಾಕ್ರತುಗಳನ್ನು ಮಾಡಿದಿರೋ ಅದೆಲ್ಲವೂ ಭಕ್ತಿಯ ಮಹಿಮೆಯು ! ಕೇಳೈ ಧರ್ಮಪುತ್ರನೆ, ನಾನು ಮಹಾಕಲ್ಪವು ಅತೀತವಾಗುತಿರಲು ಗಂಧರ್ವರಲ್ಲಿ ಸಮ್ಮತನಾದ ಉಪಬರ್ಹಣನೆಂಬ ನಾಮವುಳ್ಳ ಗಂಧರ್ವನಾಗಿದ್ದೆನು ; ರೂಪ ಸೌಕುಮಾರ್ಯ ಮಾಧುರ್ಯಗಳಿಂದ ಪ್ರಿಯಕರವಾದ ದರ್ಶನವುಳ್ಳವನಾಗಿ ಸ್ತ್ರೀಯರುಗಳಿಗೆ ಪ್ರಿಯಕರನಾಗಿ ನಿತ್ಯಮತ್ತನಾಗಿ ಕಾಮಲಂಪಟನಾಗಿದ್ದೆನು ; ಒಂದಾನೊಂದು ಸಮಯದಲ್ಲಿ ದೇವಸತ್ರ ನಡೆಯುತಿರಲು ಶ್ರೀಹರಿ ಕಥೆಯನ್ನು ಗಾನಂಗೈಯಲೋಸುಗ ಪ್ರಜೇಶರುಗಳಿಂದ ಕರೆಯಲ್ಪಟ್ಟ ನಾನು ಗಂಧರ್ವರಿಂದಲೂ ಅಪ್ಸರಸ್ತ್ರೀಯರಿಂದಲೂ ಸಮೇತನಾಗಿ ಗಾನಂಗೈಯ್ಯುತ ಆ ಪ್ರಜೇಶರ ಸಮೀಪಕ್ಕೆ ಹೋದೆನು ; ಈರೀತಿಯಲ್ಲಿ ಗಾನಂಗೈಯ್ಯುತ ಸಭ್ಯರಾದ ಮಹಾತ್ಮರನ್ನು ಗಣನೆಮಾಡದೆ ಹೇಳನಂಗೈಯ್ಯುವನಾಗಿ ಬಂದ ನನ್ನನ್ನು ನೋಡಿ ಆ ಪ್ರಜೇಶರು 'ಎಲೈ ಗಂಧರ್ವನೆ, ಮಹಾತ್ಮರನ್ನು ಹೇಳನಂಗೈಯುತ ಮತ್ತನಾಗಿ ನೀನು ಬಂದಕಾರಣ ನಷ್ಟವಾದ ಸಂಪತ್ತುಳ್ಳವನಾಗಿ ಶೂದ್ರನಾಗಿ ಜನಿಸು' ಎಂದು ಶಾಪವನ್ನು ಕೊಟ್ಟರು ; ಆ ಶಾಪದಿಂದ ಕೆಲವುಕಾಲದಮೇಲೆ ಭೂಮಿಯಲ್ಲಿ ದಾಸೀಪುತ್ರನಾಗಿ ಉದ್ಭವಿಸಿ ಆ ಜನ್ಮದಲ್ಲಿಯೂ ಬ್ರಹ್ಮವಾದಿಗಳ ಶುಶ್ರೂಷೆಯಿಂದ ಬ್ರಹ್ಮಪುತ್ರನಾಗಿ ಜನಿಸಿದೆನು ! ಎಲೈ ಧರ್ಮಪುತ್ರನೆ, ನಿನಗೋಸ್ಕರ ಪಾಪಪರಿಹಾರಕವಾದ ಗಾರ್ಹಸ್ಥ್ಯಧರ್ಮವು ವರ್ಣಿಸಲ್ಪಟ್ಟಿತು ; ಈ ಗಾರ್ಹಸ್ಥ್ಯಧರ್ಮದಿಂದ ಗೃಹಸ್ಥಾಶ್ರಮಿಯು ಕೂಡ ಯತಿಗಳಿಂದ ಐದಲು ಯೋಗ್ಯವಾದ ಪರಮಗತಿಯನ್ನು ಪಡೆಯುವನು ! ಎಲೈ ಧರ್ಮರಾಯನೆ, ಕಪಟಮಾನುಷನಾದ ಸಾಕ್ಷಾದ್ವಾಸುದೇವನು ವಾಸಂಗೈಯ್ಯುವದರಿಂದ ಸಮಸ್ತ ಲೋಕಗಳನ್ನು ಪಾವನಂಗೈವ ಮಹಾಮುನಿಗಳೂ ನಿನ್ನ ಗೃಹವನ್ನು ಕುರಿತು ಬರುವರೋ ಅದರಿಂದ ನೀವೇ ಅಧಿಕಭಾಗ್ಯವುಳ್ಳವರು ! ಎಲೈ ಧರ್ಮರಾಯನೆ, ಮಹಾತ್ಮರಾದ ಬ್ರಹ್ಮಾದಿಗಳಿಂದ ಅರಸತಕ್ಕ ನಿರುಪಾಧಿಯಾದ ಪರಮಾನಂದಭಾವರೂಪನಾದ ಯಾವ ಪರಬ್ರಹ್ಮನುಂಟೋ ಆ ಪರಬ್ರಹ್ಮನೇ ನಿಮಗೆ ಪ್ರಿಯನಾಗಿಯೂ ಸುಹೃತ್ತಾಗಿಯೂ ಅಂತರ್ಯಾಮಿಯಾಗಿಯೂ ಪೂಜ್ಯನಾಗಿಯೂ ಹಿತಾಹಿತೋಪದೇಶ ಕರ್ತೃವಾಗಿಯೂ ಗುರುವಾಗಿಯೂ ಆಜ್ಞಾಧಾರಕನಾಗಿಯೂ ಶ್ರೀಕೃಷ್ಣರೂಪದಿಂದ ನಿಮ್ಮ ಮನೆಯಲ್ಲಿರುವನು ; ಯಾವಾತನ ತತ್ವವು ಸಾಕ್ಷಾತ್ಪರಮೇಶ್ವರನು ಬ್ರಹ್ಮದೇವನು ಇವರೇ ಮೊದಲಾದ ಮಹಾ ಯೋಗಿಗಳಿಂದಲೂ ಇದು ಹೀಗೇಸರಿಯೆಂಬದಾಗಿ ವರ್ಣಿಸಲ್ಪಡಲಿಲ್ಲವೋ ಆ ವಾಸುದೇವನು ನಿಮಗೆ ತಾನೇ ಪ್ರಸನ್ನನಾಗಿಧಾನೆ ; ನಮಗಾದರೋ ಮೌನದಿಂದಲೂ ಭಕ್ತಿಯಿಂದಲೂ ಉಪಶಾಂತಿಯಿಂದಲೂ ಅವನ ಪ್ರಸಾದವು ಪ್ರಾರ್ಥಿಸತಕ್ಕದ್ದು ; ಅಂಥಾ ಶ್ರೀಹರಿಯು ನಮಗೆ ಪ್ರಸನ್ನನಾಗಲಿ ; ಆದಕಾರಣ ನೀವೇ ನಮಗಿಂತಲೂ ಅಧಿಕ ಭಾಗ್ಯವುಳ್ಳವರು" ಎಂದು ಈರೀತಿ ದೇವಋಷಿಯಾದ ನಾರದನಿಂದ ನಿರೂಪಿಸಲ್ಪಟ್ಟ ಅರ್ಥವನ್ನು ಕೇಳಿ ಧರ್ಮರಾಯನು ಸುಪ್ರೀತನಾಗಿ ಆ ನಾರದನನ್ನೂ ಶ್ರೀಕೃಷ್ಣನನ್ನೂ ಪೂಜಿಸಿದನು ; ಅನಂತರದಲ್ಲಿ ನಾರದಮುನಿಯು ಶ್ರೀಕೃಷ್ಣನನ್ನೂ ಪಾಂಡವರನ್ನೂ ಕೇಳಿ ಅಪ್ಪಣೆಯನ್ನು ತೆಗದುಕೊಂಡು ತೆರಳಿಹೋದನು ; ಧರ್ಮರಾಯನು ಶ್ರೀಕೃಷ್ಣನನ್ನೇ ಸಾಕ್ಷಾತ್ಪರಬ್ರಹ್ಮನಾಗಿ ತಿಳಿದು ಆಶ್ಚರ್ಯಯುಕ್ತನಾದನು ; ದೇವಾಸುರ ಮನುಷ್ಯರೇ ಮೊದಲಾದ ಸಮಸ್ತ ಲೋಕಗಳು ದಕ್ಷಪುತ್ರೀರಾದ ಯಾವ ಸ್ತ್ರೀಯರುಗಳ ಸಂತತಿಗಳಲ್ಲಿ ಉತ್ಪನ್ನರಾದರೊ ಅಂಥಾ ವಂಶಗಳು ನಿನಗೋಸ್ಕರ ವರ್ಣಿಸಲ್ಪಟ್ಟವು—ಎಂದು ಶ್ರೀಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು ನಿರೂಪಿಸಿದನೆಂದು ಸೂತಪೌರಾಣಿಕನು ನೈಮಿಶಾರಣ್ಯವಾಸಿಗಳಾದ ಶೌನಕಾದಿ ಋಷಿಗಳಿಗೆ ನಿರೂಪಿಸಿದನು.

ಸಪ್ತಮಸ್ಕಂಧ ಸಮಾಪ್ತಿ.





ಶ್ರೀಬಾದರಾಯಣ ಸಮಾಕಲಿತಂ ರಸಾರ್ದ್ರಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋಭಾವುಕಾಃ ಪಿಬತಭಾಗವತಂ ರಸಮಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ಅಷ್ಟಮ ಸ್ಕಂಧ.

೧ನೇ ಅಧ್ಯಾಯ.

ಆಕೂತಿದೇವಿಯಲ್ಲಿ ಯಜ್ಞನಾಮಕನಾಗಿ ಅವತರಿಸಿದ ಭಗವಂತನ ಚರಿತ್ರೆಯು.

ಪೂರ್ವಸ್ಕಂಧಾಂತದಲ್ಲಿ ಶ್ರೀ ಶುಕಾಚಾರ್ಯನಿಂದ ಸಂಕ್ಷೇಪವಾಗಿ ವರ್ಣಿಸಲ್ಪಟ್ಟ ಸಾರಭೂತಗಳಾದ ವರ್ಣಾಶ್ರಮಧರ್ಮಗಳನ್ನೂ ಮೋಕ್ಷಲಕ್ಷಣವನ್ನೂ ತೃತೀಯಸ್ಕಂಧದಲ್ಲಿ ಸ್ವಾಯಂಭುವ ಮನ್ವಂತರ ಪ್ರಸ್ತಾಪದಲ್ಲಿ ವರ್ಣಿಸಲ್ಪಟ್ಟ ಅಸಂಖ್ಯಾತಗಳಾದ ಪರಮಾತ್ಮನ ಗುಣಗಳನ್ನೂ ಕೇಳಿ ಸಂತುಷ್ಟನಾಗಿ ಪರೀಕ್ಷಿದ್ರಾಯನು ಶ್ರೀ ಶುಕಾಚಾರ್ಯನನ್ನು ಕುರಿತು ಸ್ವಾರೋಚಿಷಮನು ಮೊದಲಾದ ಹದಿಮೂರು ಮನ್ವಂತರಗಳ ವೃತ್ತಾಂತವನ್ನು ತಿಳಿಯಲಿಚ್ಛೆಯುಳ್ಳವನಾಗಿ—ಎಲೈ ಸರ್ವಜ್ಞನಾದ ಶ್ರೀ ಶುಕಾಚಾರ್ಯನೆ, ಯಾವ ಸ್ವಾಯಂಭುವ ಮನುವಿನ ವಂಶದಲ್ಲಿ ಮರೀಚಿ ಮೊದಲಾದ ನವಪ್ರಜೇಶ್ವರರ ಸೃಷ್ಟಿಯು ಆ ಸ್ವಾಯಂಭುವಮನುವಿನ ಪುತ್ರಿಯರಾದ ಆಕೂತಿ ದೇವಹೂತಿ ಪ್ರಸೂತಿಗಳೆಂಬ ಸ್ತ್ರೀಯರುಗಳಲ್ಲಿ ಪುತ್ರ ಪೌತ್ರಾದಿ ಸೃಷ್ಟಿಯೂ ಉಂಟಾಯಿತೋ ಅಂಥಾ ಸ್ವಾಯಂಭುವ ಮನುವಿನ ವಂಶವು ನಿನ್ನಿಂದ ವಿಸ್ತರಿಸಿ ನಿರೂಪಿಸಲ್ಪಟ್ಟಿತು ; ಇನ್ನು ಸ್ವಾರೋಚಿಷ ಮೊದಲಾದ ಮನುಗಳ ಉತ್ಪತ್ತಿಯನ್ನೂ ಯಾವ ಮನ್ವಂತರಗಳಲ್ಲಿ ಪರಮಾತ್ಮನಾದ ಶ್ರೀಹರಿಯ ಅವತಾರಗಳನ್ನೂ ಚರಿತ್ರೆಗಳನ್ನೂ ಮಹಾತ್ಮರಾದ ಋಷಿಗಳು ಪ್ರಶಂಸೆಯನ್ನು ಮಾಡುವರೋ ಆ ಮನ್ವಂತರಗಳನ್ನೂ ಜಗತ್ಪ್ರವರ್ತಕನಾದ ಶ್ರೀ ಭಗವಂತನು ಪೂರ್ವದಲ್ಲಿ ಅತಿಕ್ರಾಂತವಾದ ಯಾವ ಮನ್ವಂತರದಲ್ಲಿ ಯಾವ ಕರ್ಮಗಳನ್ನಾಚರಿಸಿದನೋ ಉತ್ತರೋತ್ತರ ಬರುವ ಮನ್ವಂತರಗಳಲ್ಲಿ ಯಾವ ಕರ್ಮಗಳನ್ನಾಚರಿಸುವನೋ ಈಗ ವರ್ತಮಾನವಾದ ಈ ಮನ್ವಂತರದಲ್ಲಿ ಯಾವ ಕಾರ್ಯಗಳನ್ನು ಮಾಡುತಲಿಧಾನೆಯೋ ಆ ಮನ್ವಂತರಗಳನ್ನೂ ಆ ವ್ಯಾಪಾರಗಳನ್ನೂ ವಿಸ್ತರದಿಂದ ಪೇಳು—ಎಂದು ಪ್ರಶ್ನೆಗೈದನು.

ಶ್ರೀ ಶುಕಮುನಿಯು "ಎಲೈ ಪರೀಕ್ಷಿದ್ರಾಯನೆ, ಈಗಿನ ಬ್ರಹ್ಮಕಲ್ಪದಲ್ಲಿ ಸ್ವಾಯಂಭುವ ಮೊದಲಾದ ಆರು ಮನ್ವಂತರಗಳು ಅತಿಕ್ರಮಿಸಿದವು; ಯಾವ ಪ್ರಥಮಮನ್ವಂತರದಲ್ಲಿ ದೇವ ಮನುಷ್ಯಾದಿಗಳ ಉತ್ಪತ್ತಿಯುಂಟಾಯಿತೋ ಅಂಥಾ ಮೊದಲನೆಯದಾದ ಸ್ವಾಯಂಭುವಮನುವಿನ ವೃತ್ತಾಂತವು ಹೇಳಲ್ಪಟ್ಟಿತು; ಭಗವಂತನಾದ ಪರಮಾತ್ಮನು ಧರ್ಮೋಪದೇಶಾರ್ಥವಾಗಿಯೂ ಜ್ಞಾನೋಪದೇಶಾರ್ಥವಾಗಿಯೂ ಸ್ವಾಯಂಭುವಮನು ಪುತ್ರಿಯರಾದ ಆಕೂತಿ ದೇವಹೂತಿದೇವಿಗಳಿಗೆ ಪುತ್ರಭಾವವನ್ನೈದಿದನು; ದೇವಹೂತಿ ಗರ್ಭದಲ್ಲಿ ಕಪಿಲಋಷಿರೂಪದಿಂದ ಅವತರಿಸಿದ ಭಗವಂತನ ಚರಿತ್ರೆಯು ಪೂರ್ವದಲ್ಲಿ ನಿನಗೋಸ್ಕರ ನಿರೂಪಿಸಲ್ಪಟ್ಟಿತು; ಆಕೂತಿದೇವಿಯಲ್ಲಿ ಯಜ್ಞಮೂರ್ತಿಯಾಗಿ ಅವತರಿಸಿದ ಭಗವಂತನ ಚರಿತ್ರವನ್ನು ನಿನಗೆ ಹೇಳುತ್ತೇನೆ ಕೇಳು; ಎಲೈ ಪರೀಕ್ಷಿದ್ರಾಯನೆ, ಶತರೂಪಾದೇವಿಗೆ ಪತಿಯಾದ ಸ್ವಾಯಂಭುವಮನುವು ಕಾಮಭೋಗಗಳಲ್ಲಿ ವಿರಕ್ತನಾಗಿ ರಾಜ್ಯಾಧಿಪತ್ಯವನ್ನು ತ್ಯಜಿಸಿ ತಪವಂಗೈಯುವದಕ್ಕೋಸ್ಕರ ಪತ್ನಿಸಮೇತನಾಗಿ ವನವನ್ನು ಕುರಿತು ತೆರಳಿ ಸುನಂದಾನದೀತೀರದಲ್ಲಿ ಏಕಪಾದದಿಂದ ನಿಂತು ನೂರುವರ್ಷ ಪರ್ಯಂತವು ಉಗ್ರವಾದ ತಪವಂಗೈಯುತ ಆ ತಪೋಬಲದಿಂದ ಗೋಚರವಾದ ಈ ಅರ್ಥವನ್ನು ತಿಳಿದು ನುಡಿದನೆಂತೆನೆ; ಚಿದ್ರೂಪನಾದ ಯಾವ ಪರಮಾತ್ಮನಿಂದ ಜಗತ್ತು ಚೈತನ್ಯಯುಕ್ತವಾಗಿರುವದೋ ಈ ಜಗತ್ತು ಯಾವ ಪರಮಾತ್ಮನನ್ನು ಚೇತನನನ್ನಾಗಿ ಮಾಡಲಾರದೋ ಈ ಪ್ರಪಂಚವು ಶಯನಂಗೈದಿರಲಾಗಿ ಯಾವ ಪರಮಾತ್ಮನು ಸಾಕ್ಷಿಯಾಗಿ ನೋಡುತಲಿರುವನೋ ಯಾವ ಪರಮಾತ್ಮನನ್ನು ಈ ಜಗತ್ತು ಅರಿಯದೋ ಈ ಜಗತ್ತನ್ನು ಯಾವ ಪರಮಾತ್ಮನು ತಿಳಿಯುವನೋ ಲೋಕದಲ್ಲಿ ಯಾವ ಯಾವ ಪ್ರಾಣಿವರ್ಗವುಂಟೋ ಅದು ಸಮಸ್ತವೂ ಪರಮಾತ್ಮನಿಂದ ಅಧಿಷ್ಠಿತವಾಗಿರುವದು; ಆದ್ದರಿಂದ ಆ ಪರಮಾತ್ಮನಿಂದ ಕೊಡಲ್ಪಟ್ಟ ಧನದಿಂದ ಭೋಗಕ್ಕುಪಯೋಗವನ್ನು ಮಾಡು! ಎಲೈ ಜನರೇ, ಮತ್ತೊಬ್ಬನ ಧನವನ್ನು ಅಪೇಕ್ಷಿಸಬೇಡಿ; ಸರ್ವವನ್ನು ನೋಡುವ ಯಾವ ಪರಮಾತ್ಮನನ್ನು ಚಕ್ಷುಸ್ಸು ನೋಡಲಾರದೋ ಯಾವ ಪರಮಾತ್ಮನ ಸ್ವರೂಪಭೂತಜ್ಞಾನವು ನಶ್ವರವಲ್ಲವೋ ಸರ್ವಭೂತಾಂತರ್ಯಾಮಿಯಾದ ಆ ದೇವನನ್ನು ಭಜಿಸುವರಾಗಿ; ಯಾವ ಪರಮಾತ್ಮನಿಗೆ ಉತ್ಪತ್ತಿಯೂ ಮಧ್ಯಾವಸ್ಥೆಯೂ ಇಲ್ಲವೋ ಯಾವ ಪರಮಾತ್ಮನಿಗೆ ಒಳಗೆ ಹೊರಗೆಂಬ ವ್ಯವಹಾರವಿಲ್ಲವೋ ಈ ಉತ್ಪತ್ತಿ ಸ್ಥಿತಿ ಲಯಗಳು ಈ ಜಗತ್ತಿಗೆ ಯಾವ ಪರಮಾತ್ಮನಿಂದಲೋ ಈ ಜಗತ್ತು ಯಾವ ಪರಮಾತ್ಮಸ್ವರೂಪವೋ ಕಾಲತ್ರಯಬಾಧ್ಯನಾದ ಪೂರ್ಣನಾದ ಆ ಪರಮಾತ್ಮನನ್ನು ಭಜಿಸುವರಾಗಿ; ಈಶ್ವರನಾಗಿ ಉತ್ಪತ್ತಿಶೂನ್ಯನಾಗಿ ಕಾಲತ್ರಯಬಾಧ್ಯನಾಗಿ ಸ್ವಪ್ರಕಾಶನಾಗಿ ನಿರ್ವಿಕಾರನಾಗಿ ಸಮಸ್ತ ಪ್ರಪಂಚವೇ ಶರೀರವಾಗುಳ್ಳವನಾಗಿ ಅನೇಕ ಕರ್ಮಗಳಿಂದ ವಾಚ್ಯನಾಗಿರುವ ಆ ಪರಮಾತ್ಮನೇ ಸ್ವಕೀಯವಾದ ಮಾಯಾಶಕ್ತಿಯಿಂದ ಈ ಜಗತ್ತಿಗೆ ಸೃಷ್ಟಿ ಸ್ಥಿತಿ ಲಯಗಳನ್ನು ಮಾಡುವನಾಗಿ ನಿತ್ಯಸಿದ್ಧವಾದ ಚಿಚ್ಛಕ್ತಿಯಿಂದ ಆ ಮಾಯೆಯನ್ನು ನಿರಾಕರಿಸಿ ಆಮೇಲೆ ಕ್ರಿಯಾರಹಿತನಾಗಿರುವನು; ಯಾವಕಾರಣ ಪುರುಷನು ಆದಿಯಲ್ಲಿ ಕರ್ಮಗಳನ್ನಾಚರಿಸಿ ಅನಂತರದಲ್ಲಿ ನೈಷ್ಕರ್ಮಸಿದ್ಧಿಯನ್ನೈದುವನೋ ಅದುಕಾರಣ ಋಷಿಗಳು ಮೋಕ್ಷಸಿದ್ಧ್ಯರ್ಥವಾಗಿ ಮೊದಲೇ ಕರ್ಮಗಳನ್ನಾಚರಿಸುತ್ತಾರೆ; ಭಗವಂತನೂ ಕರ್ಮಗಳನ್ನಾಚರಿಸುತ್ತಾನೆ; ಆದಾಗ್ಯೂ ಆ ಕರ್ಮಫಲಗಳಲ್ಲಿ ಆಸಕ್ತನಾಗುವದಿಲ್ಲ; ಆ ಭಗವಂತನ ಮಾರ್ಗಾನುಸಾರಿಗಳಾದ ಮಹಾತ್ಮರು ಅದೇರೀತಿಯಲ್ಲಿ ಆತ್ಮಸ್ವರೂಪ ಲಾಭಾನಂತರದಲ್ಲಿ ಪೂರ್ಣಮನೋರಥರಾಗಿ ವ್ಯಸನವನ್ನೈದುವದಿಲ್ಲ; ರಾಮ ಕೃಷ್ಣಾವತಾರರೂಪವಾದ ಮಾನುಷಮಾರ್ಗದಲ್ಲಿದ್ದುಕೊಂಡು ಮಹಾತ್ಮರನ್ನು ಕರ್ಮಮಾರ್ಗದಲ್ಲಿ ಶಿಕ್ಷಿಸುವದಕ್ಕೋಸ್ಕರ ಕರ್ಮಗಳನ್ನಾಚರಿಸುವನಾಗಿ ನಿರಹಂಕೃತನಾಗಿ ಅಪೇಕ್ಷಾರಹಿತನಾಗಿ ಪರಿಪೂರ್ಣನಾಗಿ ಸರ್ವಜ್ಞನಾಗಿ ಸ್ವತಂತ್ರನಾಗಿ ಸರ್ವಧರ್ಮ ಪ್ರವರ್ತಕನಾಗಿ ಪ್ರಭುವಾದ ಆ ಪರಮಾತ್ಮನನ್ನು ಭಕ್ತಿಯಿಂದ ಶರಣುಹೊಂದುತ್ತೇನೆ; ಎಂಬದಾಗಿ ಉಪಕಾರವಾದ ಮಂತ್ರೋಪನಿಷತ್ತನ್ನು ಹೇಳುತಲಿರುವ ಸಮಾಹಿತಚಿತ್ತನಾದ ಆ ಸ್ವಾಯಂಭುವ ಮನುವನ್ನು ನೋಡಿ ಅಸುರರೂ ರಾಕ್ಷಸರೂ ಕ್ಷುತ್ಪೀಡಿತರಾಗಿ ಈ ಮನುವನ್ನು ಭಕ್ಷಿಸುವಬಗ್ಗೆ ಓಡಿಬಂದರು; ಆಗ ಸರ್ವಗತನಾದ ಯಜ್ಞಮೂರ್ತಿಯಾದ ಹರಿಯು ಓಡಿಬರುತಲಿರುವ ಆ ಅಸುರರನ್ನೂ ರಾಕ್ಷಸರನ್ನೂ ನೋಡಿ ಪುತ್ರರಾದ ದೇವತೆಗಳಸಮೇತನಾಗಿ ಅವರನ್ನು ಸಂಹರಿಸಿ ತಾನೇ

ಇಂದ್ರನಾಗಿ ಸ್ವರ್ಗವನ್ನು ರಕ್ಷಿಸಿದನು ; ಅಗ್ನಿಪುತ್ರನಾದ ಸ್ವಾರೋಚಿಷನಾಮಕನಾದವನೇ ಎರಡನೇ ಮನುವು ; ದ್ಯುಮಂತ ಸುಷೇಣ ರೋಚಿಷ್ಮಂತನೇ ಮೊದಲಾದವರು ಆ ಸ್ವಾರೋಚಿಷ ಮನುವಿನ ಪುತ್ರರು ; ಆ ಸ್ವಾರೋಚಿಷಮನ್ವಂತರದಲ್ಲಿ ರೋಚನನಾಮಕನಾದ ಇಂದ್ರನು ಸ್ವರ್ಗನಾಥನಾದನು ; ತುಷಿತಾಖ್ಯರಾದ ದೇವತೆಗಳು ಆಗ ಸ್ವರ್ಗವಾಸಿಗಳಾದರು ; ಬ್ರಹ್ಮವಾದಿಗಳಾದ ಊರ್ಜಸ್ತಂಭಮೊದಲಾದ ಸಪ್ತಋಷಿಗಳಿದ್ದರು ; ದೇವಶಿರಸ್ಸು ಎಂಬ ನಾಮಧೇಯವುಳ್ಳ ಋಷಿಗೆ ತುಷಿತಾಖ್ಯೆಯಾದ ಪತ್ನಿಯಲ್ಲಿ ಭಗವಂತನು ವಿಭುವೆಂಬ ನಾಮಧೇಯದಿಂದ ಜನಿಸಿದನು ; ಕೌಮಾರ ಬ್ರಹ್ಮಚಾರಿಯಾದ ವಿಭುನಾಮಕನಾದ ಭಗವಂತನಿಗೆ ವ್ರತಧಾರಿಗಳಾದ ಎಂಭತ್ತೆಂಟುಸಾವಿರ ಋಷಿಗಳು ಕೌಮಾರಚರ್ಯವನ್ನು ಶಿಕ್ಷೆಯಾಂಗೈದರು ; ಪ್ರಿಯವ್ರತ ಪುತ್ರನಾದ ಉತ್ತಮನೆಂಬ ನಾಮಧೇಯವುಳ್ಳವನು ಮೂರನೇ ಮನುವಾದನು ; ಪವನ ಸೃಂಜಯ ಯಜ್ಞಹೋತ್ರ ಮೊದಲಾದವರು ಆ ಮನುಪುತ್ರರು ; ಪ್ರಮಥನಾಮಕನಾದ ಋಷಿಯೇ ಮೊದಲಾದ ವಶಿಷ್ಠಪುತ್ರರು ಸಪ್ತಋಷಿಗಳಾದರು ; ಸತ್ಯನಾಮಕರು ವೇದಶ್ರುತ ನಾಮಕರು ಭದ್ರನಾಮಕರು ದೇವತೆಗಳಾದರು ; ಸತ್ಯಜಿತ್ತುಯೆಂಬವನು ಇಂದ್ರನಾದನು ; ಭಗವಂತನಾದ ಪುರುಷೋತ್ತಮನು ಧರ್ಮಪುರುಷನಿಗೆ ಪತ್ನಿಯಾದ ಸೂನೃತಾದೇವಿಯಲ್ಲಿ ಸತ್ಯವ್ರತರಾದ ಋಷಿಗಳೊಡನೆ ಸತ್ಯಸೇನ ನಾಮಕನಾಗಿ ಅವತರಿಸಿದನು ; ಸತ್ಯಜಿತ್ತೆಂಬ ಇಂದ್ರನಿಗೆ ಸಖನಾದ ಸತ್ಯಸೇನ ಸಂಜ್ಞಕನಾದ ಭಗವಂತನು ಅನೃತವ್ರತವುಳ್ಳ ದುಶ್ಶೀಲರಾದ ಪ್ರಾಣಿ ಹಿಂಸಕರಾದ ಯಕ್ಷ ರಾಕ್ಷಸರನ್ನು ಸಂಹರಿಸಿದನು ; ಉತ್ತಮನೆಂಬ ಮೂರನೇ ಮನುವಿಗೆ ತಮ್ಮನಾದ ತಾಮಸನು ನಾಲ್ಕನೆಯ ಮನುವಾದನು ; ವೃಷಖ್ಯಾತಿ ನರಕೇತು ಇವರುಮೊದಲಾದ ಹತ್ತು ಮಂದಿ ತಾಮಸಮನುವಿನ ಪುತ್ರರು ಸತ್ಯಕರೆಂಬದಾಗಿಯೂ ಹರಿಗಳೆಂಬದಾಗಿಯೂ ವೀರರೆಂಬದಾಗಿಯೂ ದೇವತೆಗಳಾದರು ; ತ್ರಿಶಿಖನೆಂಬವನು ಇಂದ್ರನಾದನು ; ಆ ತಾಮಸ ಮನ್ವಂತರದಲ್ಲಿ ಜ್ಯೋತಿರ್ಧಾಮ ಪ್ರಮುಖರಾದವರು ಸಪ್ತಋಷಿಗಳಾದರು ; ಕಾಲಾಂತರದಲ್ಲಿ ನಷ್ಟಗಳಾದ ವೇದಗಳನ್ನು ಸ್ವತೇಜಸ್ಸಿನಿಂದುದ್ಧಾರಂಗೈದ ವೈಧೃತಿನಾಮಕರಾದ ದೇವತೆಗಳು ಆ ತಾಮಸ ಮನ್ವಂತರದಲ್ಲಿದ್ದರು ; ಈ ತಾಮಸಮನ್ವಂತರದಲ್ಲೇ ಭಗವಂತನು ಹರಿಮೇಧಸ್ಸೆಂಬ ಋಷಿಯಿಂದ ಹರಿಣೀದೇವಿಯಲ್ಲಿ ಅವತರಿಸಿ ಹರಿಯೆಂಬ ನಾಮಧೇಯದಿಂದ ಪ್ರಸಿದ್ಧನಾಗಿ ಮೊಸಳೆಯಿಂದ ಪೀಡಿತನಾದ ಗಜೇಂದ್ರನನ್ನು ಬಿಡಿಸಿ ರಕ್ಷಿಸಿದನು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ವ್ಯಾಸಪುತ್ರನಾದ ಶುಕಮುನಿಯೆ, ಭಗವಂತನು ಮೊಸಳೆಯಿಂದ ಗ್ರಹಿಸಲ್ಪಟ್ಟ ಗಜೇಂದ್ರನನ್ನು ಯಾವಪ್ರಕಾರ ಬಿಡಿಸಿ ರಕ್ಷಿಸಿದನೋ ಆ ಅರ್ಥವನ್ನು ಕೇಳಲಿಚ್ಛೈಸುತ್ತೇನೆ ; ಪುಣ್ಯಶ್ಲೋಕನಾದ ಭಗವಂತನು ಯಾವಯಾವ ಕಥೆಯಲ್ಲಿ ಪ್ರಶಂಸೆ ಮಾಡಲ್ಪಡುವನೋ ಆ ಕಥೆಯು ಮಹಾ ಪುಣ್ಯಪ್ರದವಾದದ್ದು ; ಮಂಗಳಕರವಾಗಿ ಪ್ರಶಸ್ತವಾದದ್ದು" ಎಂಬದಾಗಿ ಪ್ರಾಯೋಪವಿಷ್ಟನಾದ ಪರೀಕ್ಷಿದ್ರಾಯನಿಂದ ಹರಿಕಥೆಗಳಲ್ಲಿ ಪ್ರೇರಿತನಾದ ಶುಕಮುನಿಯು ಅರಸನನ್ನು ಶ್ಲಾಘಿಸಿ ಶ್ರವಣಂಗೈಯುವ ಋಷಿಗಳ ಸಭೆಯಲ್ಲಿ ಸಂತೋಷದಿಂದ ಅರಸನ್ನು ಕುರಿತು ಹೇಳಿದನು.

೨ನೇ ಅಧ್ಯಾಯ.

ಗಜೇಂದ್ರ ಮೋಕ್ಷವು.

"ಎಲೈ ಅರಸೆ, ಹತ್ತುಸಾವಿರ ಯೋಜನಗಳ ಉದ್ದವುಳ್ಳದ್ದಾಗಿ ಕಾಂತಿಯುಕ್ತವಾಗಿ ಕ್ಷೀರಸಮುದ್ರದಿಂದ ಸುತ್ತುವರಿಯಲ್ಪಟ್ಟದ್ದಾಗಿ ತ್ರಿಕೂಟವೆಂಬ ಹೆಸರಿನಿಂದ ಪ್ರಸಿದ್ಧವಾದ ಒಂದು ಪರ್ವತವುಂಟು ; ಆ ಪರ್ವತವು ಹತ್ತುಸಾವಿರ ಯೋಜನದ ದಪ್ಪವುಳ್ಳದ್ದಾಗಿ ಚಿನ್ನ ಬೆಳ್ಳಿ ಕಬ್ಬಿಣಗಳಿಂದ ವ್ಯಾಪ್ತಗಳಾದ ಮೂರು ಶೃಂಗಗಳಿಂದ ಕ್ಷೀರಸಮುದ್ರವನ್ನೂ ದಿಕ್ಕುಗಳನ್ನೂ ಪ್ರಕಾಶಿಸುವಂತೆ ಮಾಡುವದಾಗಿತ್ತು ; ರತ್ನಗಳಿಂದಲೂ ಗೈರಿ

ಕಾದಿ ಧಾತುಗಳಿಂದಲೂ ಮಿಶ್ರಗಳಾಗಿ ನಾನಾರೂಪಗಳಾದ ವೃಕ್ಷಗಳಿಂದಲೂ ಲತೆಗಳಿಂದಲೂ ಪೊದರುಗಳಿಂದಲೂ ಪ್ರಕಾಶಮಾನಗಳಾದ ಅನೇಕ ಶೃಂಗಗಳಿಂದ ಗಿರಿ ನದಿ ಪ್ರವಾಹಗಳ ಝುಳಝುಳಶಬ್ದಗಳಿಂದಲೂ ಸರ್ವದಿಕ್ಕುಗಳನ್ನು ಶೋಭಿಸುವಂತೆ ಮಾಡುವದಾಗಿ ಸಮುದ್ರೋದಕ ತೆರೆಗಳಿಂದ ಎಲ್ಲಾಕಡೆಯಲ್ಲೂ ಮೊಳೆಯಲ್ಪಟ್ಟ ಮೂಲಪ್ರದೇಶಗಳುಳ್ಳದ್ದಾಗಿ ಹಸುರುವರ್ಣವುಳ್ಳ ಮರಕತ ಮಾಣಿಕ್ಯಕಾಂತಿಗಳಿಂದ ಭೂಮಿಯನ್ನು ಶ್ಯಾಮವರ್ಣವಾಗಿ ಮಾಡುವದು; ಅಲ್ಲಿ ವಿಹಾರಂಗೈಯ್ಯುತಲಿರುವ ಸಿದ್ಧ ಚಾರಣ ಗಂಧರ್ವರಿಂದಲೂ ವಿದ್ಯಾಧರರಿಂದಲೂ ಸರ್ಪಗಳಿಂದಲೂ ಕಿನ್ನರರಿಂದಲೂ ಅಪ್ಸರಸ್ತ್ರೀಯರಿಂದಲೂ ವ್ಯಾಪ್ತಗಳಾದ ಗುಹೆಗಳುಳ್ಳದ್ದಾಗಿರುವದು; ಕಿನ್ನರಾದಿಗಳ ಸಂಗೀತನಾದಗಳಿಂದಲೂ ಪೂರ್ಣವಾದ ಗುಹೆಗಳುಳ್ಳ ಸ್ಥಾನಂಗಳಿಂದಲೂ ಸಿಂಹಗಳು ಪ್ರತಿಸಿಹ್ಮಧ್ವನಿಯೆಂಬ ಭ್ರಾಂತಿಯಿಂದ ಕ್ರೋಧಾವಿಷ್ಟಗಳಾಗಿ ಗರ್ಜನಂಗೈಯುತ್ತಿರುವವು; ಆ ಪರ್ವತವು ನಾನಾವಿಧಗಳಾದ ಅರಣ್ಯದಲ್ಲಿರುವ ಪಶುಸಮೂಹದಿಂದಲೂ ನಿಬಿಡವಾದ ದೊಣೆಗಳಿಂದಲೂ ಅಲಂಕೃತವಾಗಿ ಅನೇಕವಿಧಗಳಾದ ದಿವ್ಯವೃಕ್ಷಗಳುಳ್ಳ ದೇವೋದ್ಯಾನಗಳಲ್ಲಿ ಧ್ವನಿಗೈಯುತಲಿರುವ ಕೋಕಿಲಗಳು ಮುಂತಾದ ಪಕ್ಷಿಗಳುಳ್ಳದ್ದಾಗಿರುವದು; ನಿರ್ಮಲೋದಕಗಳುಳ್ಳ ನದಿಗಳಿಂದಲೂ ಸರೋವರಗಳಿಂದಲೂ ರತ್ನಮಯಗಳಾದ ದೊಡ್ಡಮರಳುಗಳಿಂದ ಯುಕ್ತಗಳಾದ ಸಣ್ಣಮರಳುಗಳ ರಾಶಿಗಳಿಂದಲೂ ದೇವತಾಸ್ತ್ರೀಯರುಗಳ ಸ್ನಾನಾದಿಗಳಿಂದುತ್ಪನ್ನವಾದ ದಿವ್ಯಗಂಧದಿಂದ ಮಿಶ್ರವಾದ ಉದಕದಿಂದಲೂ ವಾಯುವಿನಿಂದಲೂ ಯುಕ್ತವಾಗಿರುವದು; ಆ ಪರ್ವತದ ದೊಣೆಯಲ್ಲಿ ದೇವತಾಸ್ತ್ರೀಯರುಗಳಿಗೆ ವಿಹಾರಸ್ಥಾನವಾಗಿ ಭಗವಂತನಾದ ಮಹಾತ್ಮನಾದ ವರುಣನ ಉದ್ಯಾನವು ಋತುಮಂತವೆಂಬ ನಾಮಧೇಯದಿಂದ ಪ್ರಕಾಶಿಸುವದು; ಆ ಉದ್ಯಾನವು ಸರ್ವಕಾಲಿಕವಾದ ಪುಷ್ಪ ಫಲಗಳುಳ್ಳ ವೃಕ್ಷಗಳಿಂದೆಲ್ಲಾಕಡೆಯಲ್ಲಿಯೂ ಅಲಂಕೃತವಾಗಿರುವದು; ಆ ಪರ್ವತವೆಂಥಾದ್ದೆಂದರೆ: ಮಂದಾರವೃಕ್ಷಗಳಿಂದಲೂ ಪಾರಿಜಾತಂಗಳಿಂದಲೂ ಪಾದರೀವೃಕ್ಷಗಳಿಂದಲೂ ಅಶೋಕಗಳಿಂದಲೂ ಸಂಪಿಗೆಗಳಿಂದಲೂ ಮಾವಿನಮರಗಳಿಂದಲೂ ಪ್ರಿಯಾಳಂಗಳಿಂದಲೂ ಹಲಸುಗಳಿಂದಲೂ ಶೀಮಾವುಗಳಿಂದಲೂ ಅಮಟೆಗಳಿಂದಲೂ ಕ್ರಮುಕಂಗಳಿಂದಲೂ ನಾರಿಕೇಳಂಗಳಿಂದಲೂ ಖರ್ಜೂರಂಗಳಿಂದಲೂ ದಾಳಿಂಬೆಗಳಿಂದಲೂ ಇಪ್ಪೇಮರಗಳಿಂದಲೂ ಸಾಲವೃಕ್ಷಗಳಿಂದಲೂ ತಾಳವೃಕ್ಷಗಳಿಂದಲೂ ಹೊಂಗೆಗಳಿಂದಲೂ ಬಂಧೂಕವೃಕ್ಷಗಳಿಂದಲೂ ಮತ್ತೀಮರಗಳಿಂದಲೂ ಅತ್ತೀಮರಗಳಿಂದಲೂ ಬಸರೀಮರಗಳಿಂದಲೂ ಆಲದಮರಗಳಿಂದಲೂ ಮುತ್ತುಗಗಳಿಂದಲೂ ಗಂಧದಮರಗಳಿಂದಲೂ ಬೇವುಗಳಿಂದಲೂ ಕೋವಿದಾರಗಳಿಂದಲೂ ದೇವದಾರುಗಳಿಂದಲೂ ಕಲ್ಪವೃಕ್ಷಗಳಿಂದಲೂ ದ್ರಾಕ್ಷಿಗಳಿಂದಲೂ ಕಬ್ಬುಗಳಿಂದಲೂ ಬಾಳೆಗಳಿಂದಲೂ ನೇರಳೆಗಳಿಂದಲೂ ಎಲಚಿಗಳಿಂದಲೂ ನೆಲ್ಲೀಮರಗಳಿಂದಲೂ ಬಿಲ್ವಗಳಿಂದಲೂ ಬ್ಯಾಲದಮರಗಳಿಂದಲೂ ನಿಂಬೇಗಿಡಗಳಿಂದಲೂ ಗೇರುಮರ ಮೊದಲಾದ ನಾನಾವೃಕ್ಷಜಾತಿಗಳಿಂದಲೂ ಶೋಭಿತವಾಗಿರುವದು; ಅಲ್ಲಿ ವಿಶಾಲವಾದ ಒಂದು ಸರೋವರವಿರುವದು; ಅದು ಎಂಥಾದ್ದೆಂದರೆ: ಪ್ರಕಾಶಿಸುವ ಸುವರ್ಣ ಕಲಶಗಳುಳ್ಳದ್ದಾಗಿ ಆವೆಲದ ಹುವ್ವುಗಳಿಂದಲೂ ಕನ್ನೈದಿಲೆಪುಷ್ಪಗಳಿಂದಲೂ ಕಲ್ಹಾರಪುಷ್ಪಗಳಿಂದಲೂ ಶತಪತ್ರಕಮಲಗಳಿಂದಲೂ ರಮ್ಯವಾಗಿರುವದು; ಮತ್ತು ಮದಯುಕ್ತಗಳಾದ ಭ್ರಮರಗಳಿಂದ ಧ್ವನಿಗೈಯಲ್ಪಟ್ಟದ್ದಾಗಿ ಚಕ್ರವಾಕಗಳು ಸಾರಸಗಳು ಮೊದಲಾದ ಮಧುರಸ್ವರವುಳ್ಳ ಪಕ್ಷಿಗಳಿಂದ ಯುಕ್ತವಾಗಿ ಹಂಸಕಾರಂಡಪಕ್ಷಿಗಳಿಂದ ವ್ಯಾಪ್ತವಾಗಿರುವದು; ಜಲಕುಕ್ಕುಟಗಳು ಟಿಟ್ಟವನಹಕ್ಕಿಗಳು ಕೆಂಬೂತಗಳು ಇವುಗಳ ಸಮೂಹದಿಂದ ಧ್ವನಿಗೈಯಲ್ಪಟ್ಟಂಥಾದ್ದಾಗಿ ಮತ್ಸ್ಯಗಳು ಕಚ್ಛಪಗಳು ಮೊದಲಾದ ಜಲಜಂತುಗಳ ಸಂಚಾರದಿಂದ ಚಲಿಸುತಲಿರುವ ಪದ್ಮಗಳ ಪರಾಗದಿಂದ ವ್ಯಾಪ್ತವಾದ ಉದಕವುಳ್ಳದ್ದು; ಕದಂಬಗಳಿಂದಲೂ ವೇತಸಗಳಿಂದಲೂ ಲಾಮಂಚಗಳಿಂದಲೂ ನೀವಂಗಳಿಂದಲೂ ಪಗಡೆವೃಕ್ಷಗಳಿಂದಲೂ ಯುಕ್ತವಾಗಿ ಮಲ್ಲಿಗೆಗಳಿಂದಲೂ ಗೋರಂಟೆಗಳಿಂದಲೂ ಅಶೋಕವೃಕ್ಷಗಳಿಂದಲೂ ಬಾಗೆವೃಕ್ಷಗಳಿಂದಲೂ ಕಾಡುಮೊಲ್ಲೆಗಳಿಂದಲೂ ಇಂಗಳದಮರಗಳಿಂದಲೂ ನಾಗಕೇಸರಗಳಿಂದಲೂ ಪುನ್ನಾಗಗಳಿಂದಲೂ ಸುರಹೊನ್ನೆಗಳಿಂದಲೂ ಜಾಜಿಗಳಿಂದಲೂ ಗುಲಗಂಜೀಲತೆಗಳಿಂದಲೂ ಸರ್ವಕಾಲದಲ್ಲೂ ಆಗುವ ಫಲಪುಷ್ಪಗಳುಳ್ಳ ನಾನಾವಿಧವಾದ ತಡಿಯಲ್ಲಿಹ ವೃಕ್ಷಗಳಿಂದ ಶೋಭಿಸುತಲಿರುವದು; ಹೀಗಿರುತಿರಲಾಗಿ ಒಂದು ಸಮಯದಲ್ಲಿ ಆ ತ್ರಿಕೂಟಪರ್ವತದ ವನವನ್ನಾಶ್ರಯಿಸಿಕೊಂಡಿರುವ

ಒಂದು ಮಹಾ ಗಜಪತಿಯು ಹೆಣ್ಣಾನೆಗಳೊಡಗೂಡಿ ಆ ವನದಲ್ಲಿ ಸಂಚರಿಸುತ ದೊಡ್ಡಬಿದರುಗಳು ಚಿಕ್ಕಬಿದರುಗಳು ಬೆತ್ತಗಳು ಮುಳ್ಳುಗಳು ಇವುಗಳಿಂದ ಯುಕ್ತವಾದ ಪೊದರುಗಳನ್ನೂ ವೃಕ್ಷಗಳನ್ನೂ ಮುರಿಯುತ ಸಂಚರಿಸಿತು; ಆ ಗಜೇಂದ್ರವೆಂಥಾದ್ದೆಂದರೆ: ಸಿಹ್ಮಗಳು ಪ್ರತಿಗಜಗಳು ವ್ಯಾಘ್ರಾದಿಗಳು ವ್ಯಾಳಮೃಗಗಳು ಖಡ್ಗಮೃಗಗಳು ಮಹಾ ಸರ್ಪಗಳು ಗೌರಮೃಗಗಳು ಕೃಷ್ಣಸಾರಂಗಗಳು ಶರಭಗಳು ಚಮರೀಮೃಗಗಳು ಈ ಸಮಸ್ತಮೃಗಗಳೂ ಆ ಗಜೇಂದ್ರನ ಗಂಧಾಘ್ರಾಣಮಾತ್ರದಿಂದಲೇ ಭಯದಿಂದ ಪಲಾಯನಂಗೈಯ್ಯುವವು; ಸ್ವಲ್ಪಬಲವುಳ್ಳ ಕ್ಷುದ್ರಮೃಗಗಳು ತೋಳಗಳು ಕಾಡುಹಂದಿಗಳು ಕಾಡುಕೋಣಗಳು ಕರಡಿಗಳು ಮುಳ್ಳುಹಂದಿಗಳು ಕೊಂಡಮುಸುವಗಳು ಶೀಳುನಾಯಿಗಳು ಕಪಿಗಳು ಹುಲ್ಲೆಗಳು ಮೊಲಗಳು ಮೊದಲಾದ ದುರ್ಬಲಪ್ರಾಣಿಗಳು ಈ ಗಜೇಂದ್ರನ ಸಂಚಾರವಿಲ್ಲದ ಪ್ರದೇಶದಲ್ಲಿ ನಿರ್ಭಯವಾಗಿ ಸಂಚರಿಸುವವು; ಮದೋದಕವನ್ನು ಸ್ರವಿಸುತಲಿರುವ ಆ ಗಜೇಂದ್ರವು ಬಿಸಲಿನಿಂದ ತಪ್ತವಾಗಿ ಚಿಕ್ಕಾನೆಗಳಿಂದಲೂ ದೊಡ್ಡಾನೆಗಳಿಂದಲೂ ಹೆಣ್ಣಾನೆಗಳಿಂದಲೂ ಸುತ್ತುವರೆಯಲ್ಪಟ್ಟದ್ದಾಗಿ ತನ್ನ ಶರೀರಭಾರದಿಂದ ಪರ್ವತವನ್ನು ಕಂಪಿಸುವಂತೆ ಮಾಡುವದಾಗಿ ಪದ್ಮಧೂಳಿಗಳಿಂದ ವ್ಯಾಪ್ತವಾದ ಸರೋವರಸಂಬಂಧಿಯಾದ ವಾಯುವನ್ನು ದೂರದಿಂದಲೇ ಆಘ್ರಾಣಂಗೈಯುವದಾಗಿ ಮದದಿಂದ ಸೊಕ್ಕುತಲಿರುವ ನೇತ್ರವುಳ್ಳದ್ದಾಗಿ ಬಾಯಾರಿಕೆಗಳಿಂದ ಪೀಡಿತವಾದ ತನ್ನ ಹಿಂಡಿನಿಂದ ಕೂಡಿಕೊಂಡು ಶೀಘ್ರದಿಂದ ಆ ಸರೋವರದ ಸಮೀಪವನ್ನು ಕುರಿತು ಬಂತು; ಅನಂತರದಲ್ಲಿ ಆ ಗಜೇಂದ್ರವು ಸರಸ್ಸಿನಲ್ಲಿಳಿದು ಸುವರ್ಣಮಯವಾದ ಪದ್ಮಗಳು ನೈದಲೆಗಳು ಮೊದಲಾದ ಜಲಪುಷ್ಪಗಳ ಪರಾಗಗಳಿಂದ ವಾಸನೆಕಟ್ಟಲ್ಪಟ್ಟ ನಿರ್ಮಲವಾದ ಸ್ವಾದೋದಕವನ್ನು ಪಾನಂಗೈದು ತನ್ನ ಸೊಂಡಲಿನಿಂದೆತ್ತಲ್ಪಟ್ಟ ಉದಕದಿಂದ ಶರೀರವನ್ನು ನೆನಸಿ ಶ್ರಮವನ್ನು ಪರಿಹರಿಸಿಕೊಂಡು ಉದಕಪಾನಂಗೈಯುತ ಪುನಶ್ಚ ಸೊಂಡಲಿನಿಂದೆತ್ತಲ್ಪಟ್ಟ ಉದಕಗಳನ್ನು ಹೆಣ್ಣಾನೆಗಳಿಗೂ ಮರಿಯಾನೆಗಳಿಗೂ ಪಾನಂಗೈಸಿ ಅವುಗಳನ್ನು ಚನ್ನಾಗಿ ನೆನಯಿಸಿ ಆಘ್ರಾಣಮಾಡುತ ಗೃಹಸ್ಥಾಶ್ರಮವುಳ್ಳ ಕುಟುಂಬಿಯಂತೆ ಸ್ವಜನವನ್ನು ಪೋಷಿಸುತ ದೈವಮಾಯೆಯಿಂದ ಆಕಸ್ಮಿಕವಾಗಿ ಕಷ್ಟವನ್ನೈದಿತು! ಅದೆಂತೆನೆ; ಎಲೈ ಅರಸೆ, ಆ ಸರೋವರದಲ್ಲಿ ದೈವದಿಂದ ಪ್ರೇರಿತನಾಗಿ ಬಲಿಷ್ಠವಾದ ಒಂದು ಮೊಸಳೆಯು ಬಂದು ಕೋಪದಿಂದ ಗಜೇಂದ್ರನ ಪಾದವನ್ನು ಗ್ರಹಿಸಿತು; ಆಗ ಆಕಸ್ಮಿಕವಾಗಿ ವ್ಯಸನವನ್ನೈದಿದ ಆ ಗಜೇಂದ್ರವು ಮಹಾ ಬಲಶಾಲಿಯಾದ್ದರಿಂದ ತನ್ನ ಶಕ್ತ್ಯನುಸಾರವಾಗಿ ಸಾಹಸಂಗೈದಾಗ್ಯೂ ಬಿಡಿಸಿಕೊಳ್ಳಲು ಸಮರ್ಥವಾಗದೆ ಬಲಿಷ್ಠವಾದ ಮೊಸಳೆಯಿಂದ ವೇಗದಿಂದ ಸೆಳೆಯಲ್ಪಡುತ ಪೀಡಿತವಾಗಿ ಶ್ರಮಪಡುತಲಿರುವ ಆ ಗಜೇಂದ್ರವನ್ನು ನೋಡಿ ಹೆಣ್ಣಾನೆಗಳು ಚಿಕ್ಕಾನೆಗಳು ದೊಡ್ಡಾನೆಗಳೂ ಸಹಾ ದೀನವಾದ ಮನಸ್ಸುಳ್ಳವಾಗಿ ಗಜೇಂದ್ರನನ್ನು ಬಿಡಿಸಲಾರದೆ ಸುಮ್ಮನೆ ವ್ಯಸನಪಡುತ ಮೊರೆಯಿಟ್ಟವು; ಈರೀತಿ ಮೇಲಕ್ಕೆ ಸೆಳೆಯುತಲಿರುವ ಗಜೇಂದ್ರಕ್ಕೂ ಒಳಕ್ಕೆ ಸೆಳೆಯುತಲಿರುವ ಮೊಸಳೆಗೂ ಪರಸ್ಪರವಾಗಿ ಯುದ್ಧವಾಗುತಿರಲು ಅವೆರಡೂ ಮಹಾ ಬಲಶಾಲಿಗಳಾದ್ದರಿಂದ ಪರಸ್ಪರ ಜಯಿಸಬೇಕೆಂಬದರಿಂದ ಮಹಾ ಸಾಹಸವನ್ನು ಗೈಯುತ ಸಹಸ್ರವರ್ಷಗಳು ಅತಿಕ್ರಾಂತವಾದವು; ಆಗ್ಗ ದೇವತೆಗಳು ಆಶ್ಚರ್ಯಪಟ್ಟು ನೋಡುತಲಿದ್ದರು; ಅನಂತರದಲ್ಲಿ ಆ ಗಜೇಂದ್ರಕ್ಕೆ ಬಹುಕಾಲಾತಿಕ್ರಮಣಾನಂತರದಲ್ಲಿ ಉತ್ಸಾಹಶಕ್ತಿಯೂ ಕಾಯಬಲವೂ ಇಂದ್ರಿಯಸಾಮರ್ಥ್ಯವೂ ತಗ್ಗುತ ಬಂತು; ಈ ಮೂರು ಶಕ್ತಿಗಳೂ ಜಲಚರವಾದ ಮೊಸಳೆಗೆ ವೃದ್ಧಿಯನ್ನೈದಿದವು; ಈಪ್ರಕಾರದಲ್ಲಿ ಆ ಗಜೇಂದ್ರವು ದೈವಗತಿಯಿಂದ ಮಹಾ ಕಷ್ಟವನ್ನೈದಿ ಯಾವಾಗ ಪರವಶವಾಗಿ ತನ್ನನ್ನು ಬಿಡಿಸಿಕೊಳ್ಳುವದಕ್ಕೆ ಸಾಮರ್ಥ್ಯವಿಲ್ಲದ್ದಾಗಿ ನಿಸ್ಸತ್ವವಾಯಿತೋ ಆಗ ಆ ಗಜೇಂದ್ರವು ಮನಸ್ಸಿನಲ್ಲಿ ಈರೀತಿಯಲ್ಲಿ ಆಲೋಚಿಸಿತು; ಈಪ್ರಕಾರವಾಗಿ ಪೀಡಿತವಾದ ನನ್ನನ್ನು ಬಿಡಿಸುವದಕ್ಕೆ ನನ್ನ ಜ್ಞಾತಿಗಳಾದ ಪರಿವಾರ ಗಜಗಳೂ ಸಮರ್ಥಗಳಾಗುವದಿಲ್ಲ; ಹೆಣ್ಣಾನೆಗಳು ಮತ್ತೂ ದುರ್ಬಲಗಳಾದ್ದರಿಂದ ಹ್ಯಾಗೆ ನನ್ನನ್ನು ಬಿಡಿಸಿ ರಕ್ಷಿಸ್ಯಾವು; ದೈವಪಾಶರೂಪವಾದ ಈ ಮಕರದಿಂದ ಆಕ್ರಮಿಸಲ್ಪಟ್ಟ ನಾನು ಆ ಪರದೈವವನ್ನೇ ರಕ್ಷಣವನ್ನಾಗೈದುತ್ತೇನೆ; ಪ್ರಾಣಿಸಂಹಾರಾರ್ಥವಾಗಿ ಹುಡಿಕಿಕೊಂಡು ಓಡಿಬರುತಲಿರುವ ಬಲಿಷ್ಠವಾದ ಮೃತ್ಯುವೆಂಬ ಸರ್ಪದಿಂದ ಭಯಪಟ್ಟು ಶರಣುಹೊಂದಿದ ಪ್ರಾಣಿಗಳನ್ನು ಯಾವ ಪರಮೇಶ್ವರನು ರಕ್ಷಿಸುವನೋ ಮೃತ್ಯುವೂ ಕೂಡ

ಯಾವ ಪರಮೇಶ್ವರನ ಭಯದಿಂದ ಸಂಚರಿಸುವನೋ ಆ ಪರಮೇಶ್ವರನನ್ನು ನಾನು ಶರಣುಹೊಂದುತ್ತೇನೆ'' ಎಂದು ಆ ಗಜೇಂದ್ರವು ಚಿಂತಿಸಿತು.

೩ನೇ ಅಧ್ಯಾಯ.

ಗಜೇಂದ್ರವು ಶ್ರೀಹರಿಯನ್ನು ಸ್ತುತಿಸಲು ಆ ಸ್ತುತಿಯಿಂದ ಪ್ರಸನ್ನನಾದ ಹರಿಯು ಮೊಸಳೆಯನ್ನು ಸಂಹರಿಸಿ ಗಜೇಂದ್ರವನ್ನು ರಕ್ಷಿಸಿದ್ದು.

"ಎಲೈ ಅರಸೆ, ಈರೀತಿಯಲ್ಲಿ ಆ ಗಜೇಂದ್ರವು ಬುದ್ಧಿನಿಶ್ಚಯಂಗೈದು ಮನಸ್ಸನ್ನು ಸ್ಥಿರೀಕರಿಸಿ ಪೂರ್ವ ಜನ್ಮದಲ್ಲಿ ಇಂದ್ರದ್ಯುಮ್ನನಾಮಕನಾಗಿದ್ದ ಕಾಲದಲ್ಲಿ ಶೀಕ್ಷಿತವಾದ ಸ್ತೋತ್ರವನ್ನು ಮನಸ್ಸಿನಲ್ಲಿ ಜಪಿಸಿತು! ಈ ಸಮಸ್ತವಾದ ಪ್ರಪಂಚವು ಚಿತ್ಸ್ವರೂಪನಾದ ಯಾವ ಪರಮಾತ್ಮನಿಂದ ಚೇತನವಾಗಿರುವದೊ ಸರ್ವಶರೀರಾಂತರ್ಯಾಮಿಯಾದ ಪ್ರಕೃತಿಗೂ ಕಾರಣನಾದ ಕಾರ್ಯಕಾರಣ ನಿಯಾಮಕನಾದ ಆ ಭಗವಂತನಿಗೋಸ್ಕರ ನಮಸ್ಕಾರವನ್ನು ವಾಕ್ಯದಿಂದಲೂ ಮನಸ್ಸಿನಿಂದಲೂ ಮಾಡುವೆನು! ಈ ಸಮಸ್ತಜಗತ್ತು ಯಾವ ಪರಮಾತ್ಮನಲ್ಲಿರುವದೋ ಯಾವ ಪರಮಾತ್ಮನಿಂದ ಅಭಿವ್ಯಕ್ತವಾಯಿತೊ ಯಾವ ಪರಮಾತ್ಮನಿಂದ ನಿರ್ಮಿತವಾಯಿತೊ ಯಾವ ಪರಮಾತ್ಮಸ್ವರೂಪವಾಗಿ ತಾನೇ ಇರುವದೊ ಯಾವ ಪರಮಾತ್ಮನು ಈ ಕಾರ್ಯರೂಪವಾದ ಪ್ರಪಂಚದದೆಶೆಯಿಂದಲೂ ಕಾರಣವಾದ ಪ್ರಧಾನದದೆಶೆಯಿಂದಲೂ ಹೊರಚ್ಚಾಗಿ ಸಾಕ್ಷಿಯಾಗಿರುವನೋ ಸ್ವಯಂಭುವಾದ ಆ ಪರಮಾತ್ಮನನ್ನು ಶರಣು ಹೊಂದುತ್ತೇನೆ! ನಿಜಮಾಯಾಶಕ್ತಿಯಿಂದ ಸ್ವಾತ್ಮನಲ್ಲಿ ಕಲ್ಪಿಸಲ್ಪಟ್ಟು ಸ್ಥಿತಿಕಾಲದಲ್ಲಿ ವ್ಯಕ್ತವಾಗಿ ಪ್ರಳಯಕಾಲದಲ್ಲಿ ಲೀನವಾಗಿರುವ ಈ ಪ್ರಪಂಚವನ್ನು ನಿತ್ಯಪ್ರಕಾಶಜ್ಞಾನರೂಪನಾಗಿ ಸಾಕ್ಷಿಯಾದ ಯಾವ ಪರಮಾತ್ಮನು ನೋಡುವನೋ ಸ್ವಪ್ರಕಾಶನಾದ ಚಕ್ಷುರಾದಿಗಳಿಗೆ ಪ್ರಕಾಶಕನಾದ ಆ ಪರಮಾತ್ಮನು ನನ್ನನ್ನು ರಕ್ಷಿಸಲಿ! ಸಮಸ್ತ ಲೋಕಗಳೂ ಲೋಕಪಾಲಕರೂ ಸರ್ವಪ್ರಾಣಿಗಳೂ ಕಾಲಾಧೀನವಾಗಿ ಲಯವನ್ನೈದುತಲಿರಲು ಸಮಸ್ತವೂ ಅಂಧತಮಸ್ಸ್ವರೂಪವಾಗಿರುವಲ್ಲಿ ಯಾವ ಪರಮಾತ್ಮನೊಬ್ಬನೇ ಸಾಕ್ಷಿಯಾಗಿ ಪ್ರಕಾಶಿಸುವನೋ ದೇವತೆಗಳೂ ಋಷಿಗಳೂ ಯಾವ ಪರಮಾತ್ಮನ ರೂಪವನ್ನರಿಯರೋ ಅಂಥಾ ಪರಮಾತ್ಮನನ್ನು ಪ್ರಾಕೃತನಾದ ಪಾಮರಪ್ರಾಣಿಯು ತಿಳಿಯುವದಕ್ಕೂ ಸ್ತುತಿಗೈಯ್ಯುವದಕ್ಕೂ ಹ್ಯಾಗೆ ಸಮರ್ಥನಾದಾನು! ನಾನಾರೂಪಗಳಾದ ವೇಷಗಳನ್ನು ಧರಿಸುವ ನಟನ ಸ್ವರೂಪವು ಎಂತು ತಿಳಿಯಲಶಕ್ಯವೋ ಹಾಗೆ ಈಶ್ವರನ ಸ್ವರೂಪವು ದೇವಾದಿಗಳಿಗೂ ತಿಳಿಯಲಶಕ್ಯವು; ಬುದ್ಧಿಗೆ ಅಗೋಚರವಾದ ಚರಿತ್ರೆಯುಳ್ಳ ಆ ಪರಮಾತ್ಮನು ನನ್ನನ್ನು ರಕ್ಷಿಸಲಿ! ಮುಕ್ತಸಂಗರಾಗಿ ಮನನಶೀಲರಾಗಿ ಸರ್ವಪ್ರಾಣಿಗಳಲ್ಲಿಯೂ ಈಶ್ವರಭಾವನೆಯುಳ್ಳ ಸರ್ವಭೂತಮಿತ್ರರಾದ ಸತ್ಪುರುಷರು ಮಂಗಳಪ್ರದವಾದ ಯಾವ ಪರಮೇಶ್ವರನ ಸ್ವರೂಪವನ್ನು ತಿಳಿಯಲಿಚ್ಛೆಯುಳ್ಳವರಾಗಿ ಅವಿಚ್ಛಿನ್ನವಾದ ಬ್ರಹ್ಮಚರ್ಯವ್ರತವನ್ನಾಚರಿಸುವರೋ ಆ ಈಶ್ವರನೇ ನನಗೆ ರಕ್ಷಕನು! ಯಾವ ಪರಮಾತ್ಮನಿಗೆ ಜನ್ಮವೂ ಕರ್ಮವೂ ನಾಮಧೇಯವೂ ಆಕೃತಿಯೂ ಗುಣದೋಷವೂ ಎಂಬದೊಂದೂ ಇಲ್ಲದಿದ್ದರೂ ಲೋಕಗಳ ಸೃಷ್ಟಿ ಸ್ಥಿತಿ ಲಯಗಳಿಗೋಸುಗ ತತ್ತತ್ಕಾಲಾನುಸಾರವಾಗಿ ಯಾವ ಪರಮಾತ್ಮನು ಜನ್ಮಾದಿಗಳನ್ನೈದುವನೋ ಅನಂತಶಕ್ತಿಯುಳ್ಳವನಾದ್ದರಿಂದ ಸ್ವತಃ ರೂಪರಹಿತನಾದಾಗ್ಯೂ ಮಾಯಾಶಕ್ತಿಯಿಂದ ಬಹುರೂಪನಾದ ಆಶ್ಚರ್ಯಚರಿತ್ರೆಯುಳ್ಳ ಪರಬ್ರಹ್ಮನಾದ ಪರೇಶನಾದ ಆ ಪರಮಾತ್ಮನಿಗೋಸ್ಕರ ನಮಸ್ಕಾರವು! ಚಿತ್ತವೃತ್ತಿಗಳಿಗೂ ಮನಸ್ಸಿಗೂ ವಾಕ್ಕುಗಳಿಗೂ ಅಗೋಚರನಾದ ಪರಮಾತ್ಮನಿಗೆ ನಮಸ್ಕಾರವು! ಸ್ವಪ್ರಕಾಶನಾಗಿ ಸಾಕ್ಷಿಯಾದ ಪರಮಾತ್ಮನಿಗೆ ನಮಸ್ಕಾರವು! ನಿಪುಣವಾದ ಸನ್ಯಾಸಯೋಗದಿಂದ ಪರಿಶುದ್ಧಚಿತ್ತದಿಂದ ಐದುವವಕ್ಕೆ ಯೋಗ್ಯನಾದ ಮೋಕ್ಷಸಾಮ್ರಾಜ್ಯಕ್ಕೆ ನಾಥನಾದ ಮೋಕ್ಷಾನಂದಾನುಭವಸ್ವರೂಪನಾದ ಪರಮೇಶ್ವರನಿಗೋಸ್ಕರ ನಮಸ್ಕಾರವು! ಶಾಂತನಾಗಿಯೂ ಭಯಂಕರನಾಗಿಯೂ ಗೂಢನಾಗಿ ಗುಣಧರ್ಮಗಳುಳ್ಳವನಾಗಿ ವಿಶೇಷರಹಿತನಾಗಿ ಗುಣಸಾಮ್ಯರೂಪನಾಗಿ ಜ್ಞಾನರೂಪನಾಗಿಯೂ

ಇರುವ ಭಗವಂತನಿಗೋಸ್ಕರ ನಮಸ್ಕಾರವು! ಕ್ಷೇತ್ರಜ್ಞನಾದ ಸರ್ವಾಧ್ಯಕ್ಷನಾದ ಸಾಕ್ಷಿಯಾದ ಸರ್ವಜೀವಿಗಳಿಗೂ ಕಾರಣನಾದ ಪ್ರಕೃತಿಪುರುಷರೂಪನಾದ ನಿನಗೋಸ್ಕರ ನಮಸ್ಕಾರವು! ಸರ್ವೇಂದ್ರಿಯಗಳ ವಿಷಯಗಳನ್ನು ನೋಡುವವನಾಗಿ ಸರ್ವೇಂದ್ರಿಯವೃತ್ತಿಗಳಿಗೆ ಕಾರಣನಾದ ಅಸದ್ರೂಪನಾದ ಅಹಂಕಾರಾದಿಗಳಲ್ಲಿ ಪ್ರತಿಬಿಂಬಿತವಾದ ಚಿತ್ತಾಭಾಸಕ್ಕೆ ಮೂಲಭೂತಬಿಂಬಸ್ವರೂಪನಾದ ನಿನಗೋಸ್ಕರ ನಮಸ್ಕಾರವು! ಸರ್ವಕಾರಣನಾದ ಸ್ವಕಾರಣರಹಿತನಾದ ಸರ್ವಕಾರಣವಿಲಕ್ಷಣಕಾರಣನಾದ ಸಮಸ್ತ ವೇದಗಳಿಗೂ ಸದಾಗಮಗಳಿಗೂ ಸಮುದ್ರರೂಪನಾದ ಮೋಕ್ಷರೂಪನಾಗಿ ಮುಕ್ತರಿಗೆ ಪರಗತಿಯಾದ ನಿನಗೋಸ್ಕರ ನಮಸ್ಕಾರವು! ಗುಣಗಳೆಂಬ ಅರಣಿಯಲ್ಲಿ ಗೂಢವಾಗಿರುವ ಜ್ಞಾನಾಗ್ನಿಯನ್ನು ರಕ್ಷಿಸುವನಾಗಿ ಆ ಗುಣಗಳ ಕ್ಷೋಭದಿಂದ ವಿಜೃಂಭಿತವಾದ ನಾನಾವೃತ್ತಿಗಳಿಂದ ವಿಕಸಿತವಾದ ಮನಸ್ಸುಳ್ಳವನಾಗಿ ಆತ್ಮತತ್ವಭಾವನೆಯಿಂದ ನಿವರ್ತಿತವಾದ ವಿಧಿನಿಷೇಧಮಾರ್ಗಗಳುಳ್ಳ ಯೋಗಿಗಳ ಚಿತ್ತಗಳಲ್ಲಿ ಸ್ವಪ್ರಕಾಶನಾಗಿರುವ ಪರಮಾತ್ಮನಿಗೋಸ್ಕರ ನಮಸ್ಕಾರವು! ಶರಣಾಗತರಾದ ನಮ್ಮಂಥಾ ಪಶುಗಳ ಅಜ್ಞಾನವನ್ನು ಪರಿಹರಿಸುವನಾಗಿ ಮುಕ್ತನಾಗಿ ಅಧಿಕ ದಯಾಶಾಲಿಯಾಗಿ ಲಯರಹಿತನಾದ ನಿನಗೋಸ್ಕರ ನಮಸ್ಕಾರವು! ಸರ್ವಪ್ರಾಣಿಗಳ ಮನಸ್ಸಿನಲ್ಲಿ ಅಂತರ್ಯಾಮಿರೂಪದಿಂದ ತೋರುತಲಿರುವ ಪ್ರತ್ಯಗಾತ್ಮನಾದ ನಿನಗೋಸ್ಕರ ನಮಸ್ಕಾರವು! ಶರೀರದಲ್ಲಿ ಪುತ್ರರಲ್ಲಿ ಮಿತ್ರರಲ್ಲಿ ಗೃಹದಲ್ಲಿ ಧನದಲ್ಲಿ ಬಂಧುಜನರಲ್ಲಿ ಆಸಕ್ತರಾಗಿ ಮೂಢರಾದ ಪಾಮರರಿಂದ ಪಡೆಯಲಶಕ್ಯನಾದ ಗುಣಸಂಬಂಧರಹಿತನಾದ ಮುಕ್ತರಾದವರಿಂದ ತಮ್ಮ ಹೃದಯದಲ್ಲಿ ಭಾವಿಸಲ್ಪಡುವ ಜ್ಞಾನಸ್ವರೂಪನಾದ ಈಶ್ವರನಾದ ಭಗವಂತನಾದ ನಿನಗೋಸ್ಕರ ನಮಸ್ಕಾರವು! ಪುರುಷರು ಧರ್ಮಕಾಮಾರ್ಥಗಳಲ್ಲಿ ಅಪೇಕ್ಷೆರಹಿತರಾಗಿ ಯಾವ ನಿನ್ನನ್ನು ಭಜಿಸುವರಾಗಿ ಇಷ್ಟಾರ್ಥವನ್ನೈದುವರೋ ಯಾವ ಈಶ್ವರನು ಆ ಭಕ್ತರಿಂದ ಅಪೇಕ್ಷಿಸಲ್ಪಡದಿದ್ದಾಗ್ಯೂ ಅಂಥಾ ಅನೇಕ ಶ್ರೇಯಸ್ಸನ್ನು ಕೊಡುವನೋ ಜರಾಮರಣರಹಿತವಾದ ದಿವ್ಯದೇಹವನ್ನೀವನೋ ಅಧಿಕವಾದ ದಯೆಯುಳ್ಳ ಆ ಭಗವಂತನು ನನ್ನ ಕಷ್ಟವನ್ನು ಪರಿಹರಿಸಲಿ! ಯಾವ ಪರಮಾತ್ಮನ ಏಕಾಂತಭಕ್ತರಾದ ಮಹಾತ್ಮರು ಯಾವ ಇಷ್ಟಾರ್ಥವನ್ನು ಅಪೇಕ್ಷಿಸುವದಿಲ್ಲವೋ ಮತ್ತು ಭಗವದ್ಭಕ್ತರಾದವರು ಆತ್ಯಾಶ್ಚರ್ಯಕರವಾದ ಶುಭಕರವಾದ ಯಾವ ಪರಮಾತ್ಮನ ಚರಿತ್ರವನ್ನು ಗಾನಂಗೈಯುವರಾಗಿ ಆನಂದಸಮುದ್ರದಲ್ಲಿ ಮುಳಗಿರುವರೋ ಇಂದ್ರಿಯಗೋಚರನಾಗಿ ಸೂಕ್ಷ್ಮನಾಗಿ ಅತಿ ದೂರಸ್ಥನಂತಿರುವನಾಗಿ ಅಪರಿಚ್ಛಿನ್ನನಾಗಿ ಅಧಿರೂಪನಾಗಿ ಪರಿಪೂರ್ಣನಾಗಿ ಅಧ್ಯಾತ್ಮಯೋಗದಿಂದ ಪಡೆಯತಕ್ಕವನಾಗಿ ಅವ್ಯಕ್ತನಾಗಿ ಪರಮೇಶ್ವರನಾಗಿ ನಾಶರಹಿತನಾಗಿ ಪರಬ್ರಹ್ಮನಾದ ಭಗವಂತನನ್ನು ಸ್ತುತಿಸುವೆನು! ಬ್ರಹ್ಮಾದಿ ದೇವತೆಗಳು ಸ್ಥಾವರಜಂಗಮಲೋಕಗಳೂ ವೇದಗಳೂ ಯಾವ ಪರಮಾತ್ಮನ ಸ್ವಲ್ಪವಾದ ಅಂಶದಿಂದ ಕೂಡಿ ನಾಮರೂಪವಿಭಾಗದಿಂದ ಪ್ರಸಿದ್ಧಗಳಾಗಿವೆಯೋ ಯಾವರೀತಿಯಲ್ಲಿ ಅಗ್ನಿಯದೆಶೆಯಿಂದ ಜ್ವಾಲೆಗಳೂ ಸೂರ್ಯನದೆಸೆಯಿಂದ ಕಿರಣಗಳೂ ವ್ಯಾಪಿಸಿ ಪುನಃ ಅಲ್ಲೇ ಲೀನಗಳಾಗುವವೋ ಹಾಗೆ ಸ್ವಪ್ರಕಾಶನಾದ ಯಾವ ಪರಮಾತ್ಮನದೆಶೆಯಿಂದ ಬುದ್ಧಿಯು ಮನಸ್ಸು ಇಂದ್ರಿಯಗಳು ಶರೀರಗಳು ಇವು ಗುಣಪ್ರವಾಹರೂಪವಾಗಿ ಅಭಿವ್ಯಕ್ತಗಳಾಗುವವೋ ಆ ಪುರುಷನು ದೇವನೂ ಅಲ್ಲ; ಅಸುರನೂ ಅಲ್ಲ; ಮನುಷ್ಯನೂ ಅಲ್ಲ; ತಿರ್ಯಕ್ಪ್ರಾಣಿಯೂ ಅಲ್ಲ; ಸ್ತ್ರೀಯೂ ಅಲ್ಲ; ಪುರುಷನೂ ಅಲ್ಲ; ನಪುಂಸಕನೂ ಅಲ್ಲ; ಗುಣಗಳೂ ಅಲ್ಲ; ಕರ್ಮವೂ ಅಲ್ಲ; ಸದ್ರೂಪವೂ ಅಲ್ಲ; ಅಸದ್ರೂಪವೂ ಅಲ್ಲ; ಅದುಕಾರಣ ಉಕ್ತಗಳಾದ ಸರ್ವಪದಾರ್ಥಗಳದೆಶೆಯಿಂದಲೂ ಅತಿರಿಕ್ತನಾದ ಅನಿರ್ವಾಚ್ಯನಾದ ಆ ಪರಮಾತ್ಮನು ನನ್ನನ್ನು ರಕ್ಷಿಸಲಿ! ನಾನು ಈ ಮಕರದ ಉಪದ್ರವವನ್ನು ಪರಿಹರಿಸಿಕೊಂಡು ಜೀವಿಸಬೇಕೆಂಬ ಇಚ್ಛೆಯುಳ್ಳವನಲ್ಲ; ಅಂತರ್ಬಹಿಃ ಅವಿವೇಕ ಪ್ರಾಪ್ತವಾದ ಈ ಜಡದೇಹದಿಂದ ನನಗೇನು ಫಲ; ಬಹುಕಾಲಾಂತರದಲ್ಲಿಯೂ ಯಾವ ಅಜ್ಞಾನಕ್ಕೆ ನಾಶವುಂಟಾಗುವದಿಲ್ಲವೋ ಆತ್ಮಜ್ಞಾನವನ್ನು ಮರೆಮಾಡುವ ಆ ಅಜ್ಞಾನಕ್ಕೆ ನಾಶವನ್ನು ನಾನು ಇಚ್ಛೈಸುತ್ತೇನೆ; ಭಗವದ್ಧರ್ಮಗಳಿಂದ ದಹಿಸಲ್ಪಟ್ಟ ಕರ್ಮಗಳುಳ್ಳ ಯೋಗಿಗಳು ಧ್ಯಾನಯೋಗದಿಂದ ಶುದ್ಧವಾದ ಹೃದಯದಲ್ಲಿ ಯಾವ ಪರಮಾತ್ಮನನ್ನು ನೋಡುವರೋ ಯೋಗೇಶ್ವರನಾದ ಆ ಭಗವಂತನನ್ನು ನಮಸ್ಕರಿಸುವೆನು; ಸಹಿಸಲಶಕ್ಯವಾದ ರಾಗಾದಿಸ್ವರೂಪವಾದ ಶಕ್ತಿತ್ರಯವುಳ್ಳವನಾದ ಸರ್ವೇಂದ್ರಿಯಜ್ಞಾನಗಳಿಗೆ ವಿಷಯವಾದ ಶಬ್ದಾ

ದಿಗಳ ಸ್ವರೂಪನಾದ ಶರಣಾಗತರನ್ನು ರಕ್ಷಿಸುವ ಅಪಾರಮಹಿಮೆಯುಳ್ಳವನಾದ ದುಷ್ಟವಾದ ಇಂದ್ರಿಯಗಳುಳ್ಳ ನೀಚರಿಗೆ ಐದಲಶಕ್ಯವಾದ ಮಾರ್ಗವುಳ್ಳ ಪರಮಾತ್ಮನಿಗೆ ನಮಸ್ಕಾರವು! ನಾನು ಜಗತ್ತನ್ನು ಸೃಷ್ಟಿಸುವವನಾಗಿ ಜಗದ್ರೂಪನಾಗಿ ಜಗತ್ತಿಗೆ ಹೊರಗಾಗಿ ಜಗತ್ತಿಗೆ ಸಾಕ್ಷಿಯಾಗಿ ಜಗದಂತರ್ಯಾಮಿಯಾಗಿ ಉತ್ಪತ್ತಿರಹಿತನಾದ ಆ ಪರಬ್ರಹ್ಮನನ್ನು ನಮಸ್ಕರಿಸುತ್ತೇನೆ; ಈ ಪಾಮರಜನರು ಯಾವ ಪರಮಾತ್ಮನ ಮಾಯಾರೂಪವಾದ ಅಹಂಬುದ್ಧಿಯಿಂದ ತಿರಸ್ಕೃತರಾಗಿ ಸ್ವಾತ್ಮನನ್ನರಿಯರೋ ತಿಳಿಯಲಶಕ್ಯವಾದ ಮಹಾತ್ಮ್ಯವುಳ್ಳ ಆ ಭಗವಂತನನ್ನು ನಮಸ್ಕರಿಸುತ್ತೇನೆ; ಈರೀತಿಯಲ್ಲಿ ನಾಮರೂಪರಹಿತನಾಗಿ ಕೇವಲ ಪರತತ್ವವನ್ನೇ ಸ್ತುತಿಗೈಯ್ಯುತಲಿರುವ ಗಜೇಂದ್ರವನ್ನು ಕುರಿತು ನಾನಾಪ್ರಕಾರವಾದ ನಾಮರೂಪ ವ್ಯಾಪಾರಾದಿಗಳಲ್ಲಿ ಅಭಿಮಾನವುಳ್ಳ ಬ್ರಹ್ಮಾದಿ ದೇವತೆಗಳು ಒಬ್ಬರೂ ಸಮೀಪಕ್ಕೆ ಯಾವಾಗ ಬಾರದೆ ಹೋದರೋ ಆಗ ಸರ್ವದೇವತಾರೂಪನಾದ ಶ್ರೀಹರಿಯು ಆ ಗಜೇಂದ್ರನ ಸ್ತೋತ್ರವನ್ನು ಕೇಳಿ ಸ್ತುತಿಗೈಯ್ಯುತಲಿರುವ ದೇವತೆಗಳೊಡನೆ ಕೂಡಿಕೊಂಡು ದೀನವಾದ ಗಜೇಂದ್ರವನ್ನು ತಿಳಿದು ವೇದಮಯವಾದ ಗರುಡನನ್ನೇರಿ ಚಕ್ರಾಯುಧವನ್ನು ಧರಿಸಿ ಗಜೇಂದ್ರವಿದ್ದ ಸ್ಥಾನಕ್ಕೆ ಬಂದನು; ಆ ಸರಸ್ಸಿನಲ್ಲಿ ಅಧಿಕವಾದ ಬಲವುಳ್ಳ ಮಕರದಿಂದ ಗ್ರಹಿಸಲ್ಪಟ್ಟಿರುವ ದೀನವಾದ ಗಜೇಂದ್ರವು ಗರುಡಾರೂಢನಾಗಿ ಚಕ್ರಾಯುಧವನ್ನು ಧರಿಸಿ ಆಕಾಶದಲ್ಲಿ ಪ್ರಕಾಶಿಸುತಲಿರುವ ಶ್ರೀಹರಿಯನ್ನು ನೋಡಿ ಕಮಲವನ್ನು ಹಿಡಿದಿರುವ ಸೊಂಡಲವನ್ನು ಮೇಲಕ್ಕೆ ನೆಗಹಿ ಅತಿ ಪ್ರಯಾಸದಿಂದ ಸರ್ವಗುರುವಾದ ಭಗವಂತನಾದ ನಾರಾಯಣನಿಗೆ ನಮಸ್ಕಾರವೆಂದು ವಂದಿಸಿತು; ಆಗ ಭಗವಂತನು ಮಕರದಿಂದ ಪೀಡಿತವಾದ ಆ ಗಜೇಂದ್ರವನ್ನು ನೋಡಿ ಕೃಪೆಯಿಂದ ಶೀಘ್ರವಾಗಿ ಗರುಡನಿಂದಿಳಿದು ಆ ಮಕರವನ್ನು ಸರೋವರದಿಂದ ಮೇಲಕ್ಕೆ ತುಡಿಗೆ ಶೆಳೆದು ಚಕ್ರಾಯುಧದಿಂದ ಶೀಳಲ್ಪಟ್ಟ ಮುಖವುಳ್ಳ ನಕ್ರದದೆಶೆಯಿಂದ ದೇವತೆಗಳು ನೋಡುತಿರಲಾಗಿ ಗಜೇಂದ್ರವನ್ನು ಬಿಡಿಸಿದನು.''

೪ ನೇ ಅಧ್ಯಾಯ.

ಭಗವಂತನು ಮೊಸಳೆಗೆ ಶಾಪವನ್ನು ಪರಿಹರಿಸಿ ಅನುಗ್ರಹಿಸಿದ್ದು.

"ಎಲೈ ಪರೀಕ್ಷಿದ್ರಾಯನೆ, ಆ ಸಮಯದಲ್ಲಿ ದೇವಋಷಿ ಗಂಧರ್ವರು ಬ್ರಹ್ಮ ರುದ್ರ ಮೊದಲಾದವರು ಆ ಭಗವಂತನ ವ್ಯಾಪಾರವನ್ನು ಪ್ರಶಂಸೆಯನ್ನು ಮಾಡುತ ಪುಷ್ಪವೃಷ್ಟಿಯನ್ನು ಕರೆದರು; ದೇವದುಂದುಭಿಗಳು ಝಾಂಕರಿಸಿದವು; ದೇವಸ್ತ್ರೀಯರು ನರ್ತನಂಗೈದರು; ಗಂಧರ್ವರು ಗಾನಂಗೈದರು; ಋಷಿಗಳು ಚಾರಣರು ಸಿದ್ಧರು ಪುರುಷೋತ್ತಮನನ್ನು ಸ್ತುತಿಸಿದರು; ಆ ಮೊಸಳೆಯು ಆಕ್ಷಣದಲ್ಲೇ ಆ ದುಷ್ಟದೇಹವನ್ನು ಬಿಟ್ಟು ಪರಮಾಶ್ಚರ್ಯಕರನಾದ ದಿವ್ಯದೇಹವನ್ನು ಧರಿಸಿ ದೇವಲಶಾಪದಿಂದ ಮುಕ್ತನಾಗಿ ಯಥಾಪ್ರಕಾರ ಹೂಹೂ ನಾಮಕನಾದ ಗಂಧರ್ವಪತಿಯಾದನು; ದೇವಲಶಾಪ ಕ್ರಮವೆಂತೆಂದರೆ: ಬಂದುಕಾಲದಲ್ಲಿ ಹೂಹೂ ನಾಮಕನಾದ ಗಂಧರ್ವನು ಸ್ತ್ರೀಸಮೇತನಾಗಿ ಸರೋವರದಲ್ಲಿ ಕ್ರೀಡಿಸುತ ಸ್ನಾನಾರ್ಥವಾಗಿ ಸರೋವರದಲ್ಲಿಳಿದಿರುವ ದೇವಲ ಋಷಿಯ ಪಾದಗಳನ್ನು ಹಿಡಿದೆಳೆದನು; ಆಗ ಆ ಋಷಿಯು ಕುಪಿತನಾಗಿ 'ಎಲೈ ಗಂಧರ್ವನೇ, ನೀನು ಮೊಸಳೆಯಾಗು' ಎಂದು ಶಪಿಸಿದನು; ಆಮೇಲೆ ಆ ಗಂಧರ್ವನಿಂದ ಪ್ರಾರ್ಥಿತನಾದ ಋಷಿಯು ಇದೇಪ್ರಕಾರ ಗಜೇಂದ್ರದ ಪಾದವನ್ನು ಗ್ರಹಿಸು; ಆಗ ಆ ಗಜೇಂದ್ರನನ್ನು ರಕ್ಷಿಸುವದಕ್ಕೆ ಶ್ರೀಹರಿಯು ನಿನ್ನನ್ನುದ್ಧಾರಂಗೈಯ್ಯುತ್ತಾನೆ; ಎಂದು ಶಾಪಾಂತವನ್ನು ಪೇಳಿ ಆ ಋಷಿಯು ಹೊರಟುಹೋದನು; ಅನಂತರದಲ್ಲಿ ಆ ಗಂಧರ್ವನು ಉತ್ತಮಕೀರ್ತಿಯುಳ್ಳ ಭಗವಂತನಾದ ಈಶ್ವರನನ್ನು ನಮಸ್ಕರಿಸಿ ಕೀರ್ತನಯೋಗ್ಯವಾದ ಗುಣಸಂಪತ್ತುಳ್ಳ ಭಗವಂತನನ್ನು ಗಾನಂಗೈದನು; ಈರೀತಿಯಲ್ಲಿ ಭಗವಂತನಿಂದ ಅನುಗ್ರಹಿಸಲ್ಪಟ್ಟ ಆ ಗಂಧರ್ವನು ಆ ಭಗವಂತನಿಗೆ ಪ್ರದಕ್ಷಿಣ ನಮಸ್ಕಾರಂಗೈದು ಮುಕ್ತಪಾಪನಾಗಿ ಸರ್ವಜನರೂ ನೋಡುತ್ತಿರಲು ತನ್ನ ಲೋಕವನ್ನು ಕುರಿತು ತೆರಳಿದನು; ಆ ಗಜೇಂದ್ರನು ಭಗವಂತನ ಸ್ಪರ್ಶದಿಂದ ಸಮಸ್ತ ಅಜ್ಞಾನಬಂಧವನ್ನು ಪರಿಹರಿಸಿಕೊಂಡು ಪೀತಾಂಬರಧಾರಿಯಾಗಿ

ಚತುರ್ಭುಜನಾಗಿ ಭಗವಂತನ ಸಾರೂಪ್ಯವನ್ನೈದಿದನು! ಆ ಗಜೇಂದ್ರನು ಪೂರ್ವದಲ್ಲಿ ದ್ರವಿಡದೇಶದಲ್ಲಿ ವಿಷ್ಣುವ್ರತಪಾರಾಯಣನಾಗಿ ಇಂದ್ರದ್ಯುಮ್ನನೆಂಬ ನಾಮಧೇಯವುಳ್ಳ ಪಾಂಡ್ಯವಂಶೋತ್ಪನ್ನನಾದ ಅರಸಾಗಿದ್ದನು; ಒಂದು ಸಮಯದಲ್ಲಿ ಭಗವಂತನ ಪೂಜಾಕಾಲದಲ್ಲಿ ಜಿತೇಂದ್ರಿಯನಾಗಿ ಮೌನವ್ರತವನ್ನು ಧರಿಸಿ ಜಟಾಧಾರಿಯಾಗಿ ತಪಶ್ಶೀಲನಾಗಿ ಸ್ನಾತನಾಗಿ ಮಲಯಪರ್ವತದಲ್ಲಿ ಆಶ್ರಮವನ್ನು ಮಾಡಿಕೊಂಡು ಆ ಆಶ್ರಮದಲ್ಲಿ ಈಶ್ವರನಾದ ಅಚ್ಯುತನಾದ ಶ್ರೀಹರಿಯನ್ನಾರಾಧಿಸಿದನು; ಆ ಸಮಯದಲ್ಲಿ ಮಹಾ ಕೀರ್ತಿಶಾಲಿಯಾದ ಅಗಸ್ತ್ಯಮಹಾಋಷಿಯು ಶಿಷ್ಯಗಣಪರಿವೃತನಾಗಿ ದೈವಗತಿಯಿಂದ ಅಲ್ಲಿಗೆ ಬಂದನು; ಆಗ ಪ್ರತ್ಯುತ್ಥಾನಾಭಿವಾದನ ಅರ್ಘ್ಯಪಾದ್ಯಾದ್ಯುಪಚಾರಂಗೈಯದೆ ಸುಮ್ಮನಿದ್ದ ಆ ಅರಸನನ್ನು ನೋಡಿ ಅಗಸ್ತ್ಯಋಷಿಯು ಕುಪಿತನಾಗಿ 'ಅಶಿಕ್ಷಿತವಾದ ಬುದ್ಧಿಯುಳ್ಳ ದುರಾತ್ಮನಾದ ಈ ಅರಸು ಗಜದಂತೆ ಸ್ತಬ್ಧಬುದ್ಧಿಯುಳ್ಳವನಾಗಿ ಬ್ರಾಹ್ಮಣಾವಮಾನವನ್ನು ಮಾಡಿದವನಾದಕಾರಣ ಗಜಗನ್ಮವನ್ನೈದಲಿ' ಎಂದು ಶಪಿಸಿ ಶಿಷ್ಯಸಮೇತನಾಗಿ ಹೊರಟುಹೋದನು; ರಾಜಋಷಿಯಾದ ಇಂದ್ರದ್ಯುಮ್ನನು ಇದು ದೈವಕೃತವೆಂದು ತಿಳಿದು ಪ್ರಜ್ಞಾನಾಶಕವಾದ ಗಜಯೋನಿಯನ್ನೈದಿ ಭಗವದಾರಾಧನ ಮಹಿಮೆಯಿಂದ ಗಜಜನ್ಮದಲ್ಲಿಯೂ ಪೂರ್ವಜನ್ಮಸ್ಮೃತಿಯುಳ್ಳವನಾಗಿದ್ದನು; ಆ ಪದ್ಮನಾಭನು ಈರೀತಿಯಲ್ಲಿ ಗಜೇಂದ್ರನನ್ನುದ್ಧರಿಸಿ ತನ್ನ ಸಾರೂಪ್ಯವನ್ನೈದಿದ ಆ ಗಜೇಂದ್ರನೊಡಗೂಡಿ ಗರುಡಾರೂಢನಾಗಿ ಗಂಧರ್ವರಿಂದಲೂ ಸಿದ್ಧರಿಂದಲೂ ದೇವತೆಗಳಿಂದಲೂ ಗಾನಂಗೈಯಲ್ಪಟ್ಟ ಚರಿತ್ರೆಯುಳ್ಳವನಾಗಿ ಸ್ವಲೋಕವನ್ನು ಕುರಿತು ತೆರಳಿಹೋದನು! ಎಲೈ ಮಹಾರಾಜನಾದ ಪರೀಕ್ಷಿದ್ರಾಯನೆ, ಈರೀತಿಯಲ್ಲಿ ಗಜೇಂದ್ರಮೋಕ್ಷರೂಪವಾದ ಭಗವನ್ಮಹಾತ್ಮ್ಯವು ನಿನಗೋಸ್ಕರ ನನ್ನಿಂದ ವರ್ಣಿಸಲ್ಪಟ್ಟಿತು; ಈ ಗಜೇಂದ್ರೋಪಾಖ್ಯಾನವು ಭಕ್ತಿಯಿಂದ ಕೇಳುವಂಥಾವರಿಗೆ ಸ್ವರ್ಗಪ್ರದವಾಗಿ ಯಶಸ್ಕರವಾಗಿ ಕಲಿಕಲ್ಮಷ ಪರಿಹಾರಕವಾಗಿ ದುಸ್ವಪ್ನನಾಶಕವಾಗಿ ಪರಮಪುರುಷಾರ್ಥಪ್ರದವಾಗಿರುವದು; ಅದುಕಾರಣ ಶ್ರೇಯಸ್ಕಾಮರಾದ ಬ್ರಾಹ್ಮಣರು ಪ್ರಾತಃಕಾಲದಲ್ಲೆದ್ದು ಪರಿಶುದ್ಧರಾಗಿ ದುಸ್ವಪ್ನಾದಿ ದೋಷಪರಿಹಾರಾರ್ಥವಾಗಿ ಈ ಗಜೇಂದ್ರಮೋಕ್ಷವನ್ನು ಕೀರ್ತನಂಗೈದು ಈ ಉಪಾಖ್ಯಾನವನ್ನು ಪಠನಂಗೈಯಬೇಕು! ಎಲೈ ಪರೀಕ್ಷಿದ್ರಾಯನೆ, ಸರ್ವಭೂತಾತ್ಮಕನಾದ ಪ್ರಭುವಾದ ಶ್ರೀಹರಿಯು ಸರ್ವಜನರು ಕೇಳುತ್ತಿರುವಾಗಲೇ ಗಜೇಂದ್ರನನ್ನು ಕುರಿತು ಪ್ರೀತನಾಗಿ ಈ ಅರ್ಥವನ್ನು ನಿರೂಪಿಸಿದನು: 'ಎಲೈ ಗಜೇಂದ್ರನೆ, ಯಾವ ಪುರುಷರು ಅಪರರಾತ್ರಿಯಲ್ಲೆದ್ದು ಪರಿಶುದ್ಧರಾಗಿ ಸ್ಥಿರಚಿತ್ತರಾಗಿ ನನ್ನನ್ನೂ ನಿನ್ನನ್ನೂ ಈ ಸರೋವರವನ್ನೂ ಈ ಪರ್ವತದ ಗುಹೆಗಳನ್ನೂ ಈ ವನವನ್ನೂ ಬಿದುರುಬೆತ್ತಗಳ ಹೊದರುಗಳನ್ನೂ ಕಲ್ಪವೃಕ್ಷಗಳನ್ನೂ ತ್ರಿಮೂರ್ತಿಗಳಿಗೂ ಸ್ಥಾನಗಳಾದ ಈ ಶೃಂಗಗಳನ್ನೂ ನನಗೆ ಪ್ರೀತಿಸ್ಥಾನವಾದ ಕ್ಷೀರಸಮುದ್ರವನ್ನೂ ಪ್ರಕಾಶಮಾನವಾದ ಶ್ವೇತದ್ವೀಪವನ್ನೂ ಶ್ರೀವತ್ಸ ಕೌಸ್ತುಭವನ್ನೂ ವನಮಾಲೆಯನ್ನೂ ಕೌಮೋದಕೀನಾಮಕವಾದ ಗದೆಯನ್ನೂ ನನ್ನ ಚಕ್ರಾಯುಧವನ್ನೂ ಪಾಂಚಜನ್ಯ ಶಂಖವನ್ನೂ ವಾಹನವಾದ ಗರುಡನನ್ನೂ ಮಹಾ ಶೇಷನನ್ನೂ ನನ್ನ ಶಕ್ತಿರೂಪಳಾದ ಲಕ್ಷ್ಮಿಯನ್ನೂ ಬ್ರಹ್ಮನನ್ನೂ ನಾರದ ಋಷಿಯನ್ನೂ ಪರಮೇಶ್ವರನನ್ನೂ ಪ್ರಹ್ಲಾದನನ್ನೂ ಮತ್ಸ್ಯ ಕೂರ್ಮ ವರಾಹಾದ್ಯವತಾರಗಳಿಂದ ಮಾಡಲ್ಪಟ್ಟ ಅನಂತ ಪುಣ್ಯಕರಗಳಾದ ಚರಿತ್ರೆಗಳನ್ನೂ ಚಂದ್ರನನ್ನೂ ಸೂರ್ಯನನ್ನೂ ಅಗ್ನಿಯನ್ನೂ ಸತ್ವರೂಪವಾದ ಪ್ರಣವವನ್ನೂ ಮಾಯೆಯನ್ನೂ ಗೋವುಗಳನ್ನೂ ಬ್ರಾಹ್ಮಣರನ್ನೂ ಅಕ್ಷಯವಾದ ಭಕ್ತಿಧರ್ಮವನ್ನೂ ಚಂದ್ರಪತ್ನೀರಾದ ಕೃತ್ತಿಕಾದಿಗಳನ್ನೂ ಕಶ್ಯಪಪತ್ನೀರಾದ ದಕ್ಷಪುತ್ರೀರಾದ ಅದಿತಿ ಮೊದಲಾದ ಸ್ತ್ರೀಯರನ್ನೂ ಗಂಗೆಯನ್ನೂ ಸರಸ್ವತಿಯನ್ನೂ ನಂದೆಯನ್ನೂ ಯಮುನೆಯನ್ನೂ ಐರಾವತವನ್ನೂ ಧೃವನನ್ನೂ ಸಪ್ತಋಷಿಗಳನ್ನೂ ಪುಣ್ಯಕೀರ್ತಿಯುಳ್ಳ ಮಾನವೋತ್ತಮರನ್ನೂ ಇತ್ಯಾದಿ ನನ್ನ ರೂಪಗಳನ್ನೂ ಯಾರು ಸ್ಮರಿಸುತ್ತಾರೆಯೋ ಅವರು ಸರ್ವಪಾಪಗಳ ಸಮೂಹದಿಂದ ಮುಕ್ತರಾಗುವರು! ಎಲೈ ಗಜೇಂದ್ರನೆ, ಯಾವ ಪುರುಷರು ಪ್ರಾತಃಕಾಲದಲ್ಲೆದ್ದು ನಿನ್ನಿಂದ ರಚಿಸಲ್ಪಟ್ಟ ಸ್ತೋತ್ರದಿಂದ ನನ್ನನ್ನು ಸ್ತುತಿಸುವರೋ ಅವರಿಗೆ ಚರಮಕಾಲದಲ್ಲಿ ಉತ್ತಮಗತಿಯನ್ನು ಕೊಡುತ್ತೇನೆ' ಎಂದು ಭಗವಂತನು ಆಜ್ಞಾಪಿಸಿ ಶಂಖಧ್ವನಿಯನ್ನುಗೈದು ದೇವಸಮೂಹವನ್ನು ಸಂತೋಷಪಡಿಸುತ ಗರುಡಾರೂಢನಾದನು.''

೫ನೇ ಅಧ್ಯಾಯ.

ಬ್ರಹ್ಮದೇವನು ಶ್ರೀ ಭಗವಂತನನ್ನು ಸ್ತುತಿಗೈದದ್ದು.

"ಎಲೈ ಅರಸೇ, ಪಾಪಪರಿಹಾರಕವಾದ ಪುಣ್ಯಾಕರವಾದ ಗಜೇಂದ್ರಮೋಕ್ಷರೂಪವಾದ ಈ ಹರಿಚರಿತ್ರೆಯು ನನ್ನಿಂದ ನಿನಿಗೆ ನಿರೂಪಿಸಲ್ಪಟ್ಟಿತು; ಇನ್ನು ರೈವತಮನುನಾಮಕನಾದ ಐದನೇ ಮನುವನ್ನು ಕೇಳು: ತಾಮಸ ಮನುವಿಗೆ ಸಹೋದರನಾದ ರೈವತನೆಂಬ ನಾಮಧೇಯವುಳ್ಳ ಐದನೇ ಮನುವು; ಬಲಪರಾಕ್ರಮವಂತನಾದ ಆ ರೈವತಮನುವಿಗೆ ಅರ್ಜುನ ಮೊದಲಾದ ಪುತ್ರರುಂಟಾದರು; ಆ ಪಂಚಮ ಮನ್ವಂತರದಲ್ಲಿ ವಿಭುನಾಮಕನಾದ ಇಂದ್ರನು ಭೂರಿದಯೆ ಮೊದಲಾದ ದೇವತೆಗಳು ಹಿರಣ್ಯರೋಮ ದೇವಶಿರ ಊರ್ಧ್ವಬ್ರಹ್ಮ ಮೊದಲಾದ ಸಪ್ತ ಋಷಿಗಳಾದರು; ಶುಭ್ರನಾಮಕನಾದ ಮಹರ್ಷಿಗೆ ಪತ್ನಿಯಾದ ವಿಕುಂಠಾದೇವಿಯಲ್ಲಿ ಭಗವಂತನು ಅನೇಕ ದೇವತೆಗಳೊಡನೆ ಅವತರಿಸಿ ವೈಕುಂಠನೆಂಬ ಪೆಸರನ್ನೈದಿದನು; ಆ ಭಗವಂತನು ಲಕ್ಷ್ಮೀದೇವಿಯಿಂದ ಪ್ರಾರ್ಥಿತನಾಗಿ ಆ ಲಕ್ಷ್ಮೀದೇವಿಗೆ ಪ್ರೀತಿಯನ್ನು ಮಾಡುವ ನಿಮಿತ್ತವಾಗಿ ಸರ್ವಲೋಕ ನಮಸ್ಕೃತವಾದ ವೈಕುಂಠನಾಮಕವಾದ ಲೋಕವನ್ನು ನಿರ್ಮಿಸಿದನು; ಆ ಭಗವಂತನ ಮಹಿಮೆಯು ಗುಣಗಳು ಮಹಾಸಮೃದ್ಧಿಗಳು ಪೂರ್ವದಲ್ಲೇ ವರ್ಣಿಸಲ್ಪಟ್ಟವೆ; ಆ ಭಗವಂತನ ಗುಣಗಳನ್ನು ಯಾವ ಪುರುಷನು ವರ್ಣಿಸುವದಕ್ಕೆ ಸಮರ್ಥನಾಗುವನೋ ಆ ಪುರುಷನು ಭೂಮಿಯ ಧೂಳಿಗಳನ್ನೂ ಸಹ ಎಣಿಸುವನು; ಚಕ್ಷುಸ್ಸೆಂಬವನ ಪುತ್ರನಾದ ಚಾಕ್ಷುಷನೆಂಬವನೇ ಆರನೇ ಮನುವು; ಪುರುಪುರುಷ ಸುದ್ಯುಮ್ನ ಮೊದಲಾದವರು ಚಾಕ್ಷುಷಮನು ಪುತ್ರರು; ಆ ಮನ್ವಂತರದಲ್ಲಿ ಮಂತ್ರದ್ರುಮನೆಂಬವನೇ ಇಂದ್ರನು; ಆದ್ಯಾದಿಗಳೇ ದೇವತೆಗಳು; ಹರಿಷ್ಮಂತ ಕಿರಕ ಮೊದಲಾದವರೇ ಸಪ್ತ ಋಷಿಗಳು; ಆ ಮನ್ವಂತರದಲ್ಲಿ ವೈರಾಜಋಷಿಗೆ ಪತ್ನಿಯಾದ ಸಂಭೂತಿದೇವಿಯಲ್ಲಿ ಭಗವಂತನು ಅಜಿತನಾಮಕನಾಗಿ ಅವತರಿಸಿದನು; ಆ ಭಗವಂತನು ಕೂರ್ಮರೂಪದಿಂದ ಮಂದರಪರ್ವವನ್ನೆತ್ತಿ ಕ್ಷೀರಸಮುದ್ರಮಥನದಿಂದ ದೇವತೆಗಳಿಗೆ ಅಮೃತವನ್ನು ಕೊಟ್ಟನು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಶ್ರೀ ಶುಕಮುನಿಯೆ, ಭಗವಂತನು ಯಾವರೀತಿಯಲ್ಲಿ ಸಮುದ್ರವನ್ನು ಮಥಿಸಿದನು? ಯಾವರೀತಿ ಕೂರ್ಮರೂಪದಿಂದ ಮಂದರವನ್ನು ಧರಿಸಿದನು? ದೇವತೆಗಳಿಂದ ಹ್ಯಾಗೆ ಅಮೃತವು ಸಾಧಿಸಲ್ಪಟ್ಟಿತು? ನಿನ್ನಿಂದ ವರ್ಣಿಸಲ್ಪಡುವ ಭಗವಂತನ ಮಹಿಮೆಯನ್ನು ಎಷ್ಟು ಕೇಳಿದಾಗ್ಯೂ ಮಹಾ ತಾಪತ್ರಪ್ತವಾದ ನನ್ನ ಚಿತ್ತವು ಚನ್ನಾಗಿ ತೃಪ್ತಿಯನ್ನೈದುವದಿಲ್ಲ" ಎಂದು ಪ್ರಶ್ನೆಗೈದನು.

ಶುಕಮುನಿಯು "ಎಲೈ ಅರಸೆ, ಪೂರ್ವದಲ್ಲಿ ದೇವೇಂದ್ರನು ಸ್ವಾರಿಹೋಗುತ್ತಿರಲಾಗಿ ಮಧ್ಯಮಾರ್ಗದಲ್ಲಿ ದೂರ್ವಾಸಮುನಿಯು ದೇವೇಂದ್ರನನ್ನು ಕಂಡು ಸುವರ್ಣಕಮಲಮಯವಾದ ದಿವ್ಯಮಾಲೆಯನ್ನು ಇಂದ್ರನಿಗೆ ಕೈಕಾಣಿಕೆಯಾಗಿ ಕೊಟ್ಟನು; ಇಂದ್ರನು ಐಶ್ವರ್ಯಮದದಿಂದ ಏಕಹಸ್ತದಿಂದ ತೆಗೆದು ಐರಾವತದ ಕುಂಭಸ್ಥಳದಲ್ಲಿರಿಸಿದನು; ಆ ಮತ್ತವಾದ ಐರಾವತವು ಸೊಂಡಲಿನಿಂದೆಳೆದು ಆ ಮಾಲೆಯನ್ನು ಭೂಮಿಯಲ್ಲಿಹಾಕಿ ಪಾದದಿಂದ ಚೂರ್ಣವನ್ನುಮಾಡಿತು; ಅದನ್ನುನೋಡಿ ದೂರ್ವಾಸಮುನಿಯು ಕುಪಿತನಾಗಿ 'ಎಲೈ ಇಂದ್ರನೇ, ನಿನ್ನ ತ್ರಿಲೋಕಾಧಿಪತ್ಯದ ಲಕ್ಷ್ಮಿಯು ನಿನ್ನ ಶತೃಗಳ ವಶವಾಗಲಿ' ಎಂದು ಶಾಪವನ್ನಿತ್ತನು; ಯಾವಾಗ ದೂರ್ವಾಸಶಾಪದಿಂದ ಇಂದ್ರಸಹಿತಗಳಾದ ಮೂರುಲೋಕಗಳು ನಷ್ಟವಾದ ಸಂಪತ್ತುಳ್ಳಂಥಾವಾದವೋ ಆಗ ಯಾಗಾದಿಗಳು ಖಿಲಗಳಾದವು; ಅನಂತರದಲ್ಲಿ ಇಂದ್ರ, ವರುಣ ಮೊದಲಾದ ದೇವಸಮೂಹಗಳು ಈ ಅರ್ಥವನ್ನು ತಿಳಿದು ಪರಸ್ಪರವಾಗಿ ಮಂತ್ರಾಲೋಚನಗೈದು ಅರ್ಥನಿಶ್ಚಯವನ್ನು ಮಾಡಲಾರದೆ ಎಲ್ಲರೂ ಕೂಡಿ ಮೇರುಶೃಂಗಾಗ್ರದಲ್ಲಿರುವ ಬ್ರಹ್ಮಲೋಕವನ್ನೈದಿ ಬ್ರಹ್ಮಸಭೆಗೆ ಹೋಗಿ ಬ್ರಹ್ಮನಿಗೆ ನಮಸ್ಕರಿಸಿ ಆ ವೃತ್ತಾಂತವೆಲ್ಲವನ್ನು ವಿಜ್ಞಾಪನಗೈದರು; ಆಗ ಬ್ರಹ್ಮನು ನಿಸ್ತೇಜಸ್ಕರಾಗಿ ಬಲಹೀನರಾದ ಇಂದ್ರ, ವಾಯು ಮೊದಲಾದ ದೇವತೆಗಳನ್ನೂ ಕಾಂತಿಹೀನವಾದ ಲೋ

ಕತ್ರಯುವನ್ನೂ ಬಲಪುಷ್ಟಿಯುಕ್ತರಾದ ಅಸುರರನ್ನೂ ನೋಡಿ ಸಮಾಹಿತವಾದ ಚಿತ್ತದಿಂದ ಪರಮಪುರುಷನನ್ನು ಸ್ಮರಿಸುತ ವಿಕಸಿತವಾದ ಮುಖವುಳ್ಳವನಾಗಿ 'ಎಲೈ ದೇವತೆಗಳಿರಾ, ನಾನು ಶ್ರೀ ಪರಮೇಶ್ವರನು ನೀವು ಅಸುರರು ಮನುಷ್ಯರು ಪಶ್ವಾದಿಗಳು ವೃಕ್ಷಾದಿಗಳು ಈ ಸಮಸ್ತರೂ ಯಾವ ಪರಮಾತ್ಮನ ಅವತಾರರೂಪನಾದ ವಿರಾಟ್ಪುರುಷನ ಅಂಶಭೂತನಾದ ಹಿರಣ್ಯಗರ್ಭನ ಅಂಶರೂಪನಾದ ಮರೀಚ್ಯಾದಿಗಳಿಂದ ಪುತ್ರಪೌತ್ರಾದಿ ಕ್ರಮದಿಂದ ಜನಿಸುವರೋ ಆ ಪರಮಾತ್ಮನನ್ನು ನಾವೆಲ್ಲರೂ ಶರಣುಹೊಂದೋಣ; ಆ ಪರಮಾತ್ಮನಿಗೆ ಸಂಹಾರಯೋಗ್ಯನೂ ಇಲ್ಲ; ಉಪೇಕ್ಷವಿಷಯನೂ ಇಲ್ಲ; ಆದರಕ್ಕೆ ಪಾತ್ರನೂ ಇಲ್ಲ; ಆದಾಗ್ಯೂ ಜಗತ್ತಿನ ಸೃಷ್ಟಿ ಸ್ಥಿತಿ ನಿಗ್ರಹಾರ್ಥವಾಗಿ ರಜಸ್ಸತ್ವ ತಮೋಗುಣಗಳನ್ನು ಕಾಲಾನುಸಾರವಾಗಿ ಧರಿಸುವನು; ಈಗ ಪ್ರಾಣಿಕ್ಷೇಮಾರ್ಥವಾಗಿ ಸತ್ವಗುಣವನ್ನವಲಂಬಿಸಿದ ಭಗವಂತನಿಗೆ ಇದು ಜಗದ್ರಕ್ಷಣಾಕಾಲವು; ಅದುಕಾರಣ ಜಗದ್ಗುರುವಾದ ಆ ಭಗವಂತನನ್ನು ಶರಣುಹೊಂದೋಣ; ದೇವಪ್ರಿಯನಾದ ಆ ಭಗವಂತನು ಸ್ವಜನರಾದ ನಮ್ಮನ್ನು ಸಂರಕ್ಷಿಸುತ್ತಾನೆ' ಎಂದು ನುಡಿದು ಶತೃಸಂಹಾರಕನಾದ ಆ ಬ್ರಹ್ಮದೇವನು ಸಮಸ್ತ ದೇವತೆಗಳೊಡಗೂಡಿಕೊಂಡು ಭಗವಂತನ ಸ್ಥಾನವಾದ ಕ್ಷೀರಸಮುದ್ರವನ್ನು ಕುರಿತು ತೆರಳಿದನು; ಆ ಕ್ಷೀರಸಮುದ್ರದಲ್ಲಿ ಬ್ರಹ್ಮದೇವನು ಏಕಾಗ್ರಚಿತ್ತನಾಗಿ ಅಗೋಚರಸ್ವರೂಪನಾದ ಶ್ರೋತ್ರೇಂದ್ರಿಯಧಿಂದ ಗ್ರಹಿಸಲಶಕ್ಯನಾದ ಭಗವಂತನನ್ನು ವೇದವಾಕ್ಯಗಳಿಂದ ಸ್ತುತಿಗೈದನು! ಅದೆಂತೆನೆ: 'ವಿಕೃತಿರಹಿತನಾಗಿ ಸತ್ಯರೂಪನಾಗಿ ಅಪರಿಚ್ಛಿನ್ನನಾಗಿ ಆದಿಪುರುಷನಾಗಿ ಊಹಿಸಲಶಕ್ಯನಾಗಿ ಮನಸ್ಸಿನಿಂದ ಗ್ರಹಿಸಲ್ಪಟ್ಟವಿಷಯದಲ್ಲೂ ಪೂರ್ವದಲ್ಲಿ ಸಿದ್ಧವಾಗಿ ವಾಕ್ಕಿಗೆ ಅಗೋಚರನಾಗಿ ದೇವಶ್ರೇಷ್ಠನಾದ ಭಗವಂತನನ್ನು ನಮಸ್ಕರಿಸುತ್ತೇನೆ! ಪ್ರಾಣಗಳು ಮನಸ್ಸು ಬುದ್ಧಿಯು ಅಹಂಕಾರವು ಇವುಗಳಿಗೆ ಸಾಕ್ಷಿಯಾಗಿ ನೋಡುತ ಇಂದ್ರಿಯರೂಪದಿಂದ ವಿಷಯರೂಪದಿಂದ ಪ್ರಕಾಶಿಸುವನಾಗಿ ಸಾಕ್ಷಿಯಾಗಿ ದೇಹರಹಿತನಾಗಿ ಜೀವಪಕ್ಷಪಾತಿಗಳಾದ ಅವಿದ್ಯಾವಿದ್ಯಗಳಿಂದ ರಹಿತನಾಗಿ ನಾಶರಹಿತನಾಗಿ ನಿರ್ಲೇಪನಾಗಿ ಕೃತಯುಗ ಮೊದಲಾದ ಮೂರು ಯುಗಗಳಲ್ಲಿ ಪ್ರಸಿದ್ಧವಾದ ಅವತಾರನಾದ ಭಗವಂತನನ್ನು ಶರಣುಹೊಂದುತ್ತೇನೆ! ಮನಸ್ಸೇ ಮುಖ್ಯವಾದ ದಶೇಂದ್ರಿಯಗಳು ಪಂಚಪ್ರಾಣಗಳು ಎಂಬ ಹದಿನೈದು ಅಂಶಗಳುಳ್ಳದ್ದಾಗಿ ಶೀಘ್ರಗಾಮಿಯಾಗಿ ಗುಣತ್ರಯವೇ ನಾಭಿಯಾಗುಳ್ಳದ್ದಾಗಿ ಮಿಂಚಿನಂತೆ ಚಲವಾಗಿ ಅಷ್ಟಪ್ರಕೃತಿಗಳೆಂಬ ಆವರಣವುಳ್ಳದ್ದಾಗಿ ಮಾಯೆಯಿಂದ ಪ್ರೇರಿತವಾದ ಜೀವಗಳ ದೇಹಾದಿ ಸಂಸಾರಚಕ್ರವು ಯಾವ ಪರಮಾತ್ಮನ ಆಧಾರದಲ್ಲಿರುವದೋ ಅಂಥಾ ಪರಮಾತ್ಮನನ್ನು ಶರಣುಹೊಂದುತ್ತೇನೆ! ಯಾವ ಪರಮಾತ್ಮನು ಜೀವಗಳಿಗೆ ನಿಯಾಮಕನಾಗಿರುವನೋ ಪ್ರಾಜ್ಞರು ಯಾವ ಪರಮಾತ್ಮನನ್ನು ಯೋಗವೆಂಬ ರಥದಿಂದುಪಾಸನಂಗೈದೈದುವರೋ ಜ್ಞಾನೈಕ್ಯಸ್ವರೂಪನಾದ ಮಾಯಾತೀತನಾದ ಅದೃಶ್ಯನಾದ ಅವ್ಯಕ್ತನಾದ ಅಪರಿಚ್ಛಿನ್ನನಾದ ಆ ಪರಮಾತ್ಮನನ್ನು ನಮಸ್ಕರಿಸುತ್ತೇನೆ! ಜನರು ಯಾವವನ ಮಾಯೆಯಿಂದ ಮೋಹಿತರಾಗಿ ಸ್ವರೂಪವನ್ನು ತಿಳಿಯಲಾರರೊ ಆ ಮಾಯೆಯನ್ನೂ ಮಾಯಾಗುಣಗಳನ್ನೂ ಸಹ ಜಯಿಸಿರುವ ಸರ್ವಭೂತಸಮನಾದ ಆ ಪರಮೇಶ್ವರನನ್ನು ನಮಸ್ಕರಿಸುತ್ತೇನೆ! ದೇವತೆಗಳೂ ಋಷಿಗಳೂ ನಾನೂ ಯಾವ ಭಗವಂತನ ಪ್ರೀತಿಪಾತ್ರವಾದ ಸತ್ವಗುಣರೂಪವಾದ ಶರೀರದಿಂದ ಸೃಷ್ಟಿಸಲ್ಪಟ್ಟವರಾದಾಗ್ಯೂ ಹೊರಗೆ ಸದ್ಭಾವದಿಂದಲೂ ಅಂತಃಪ್ರಕಾಶದಿಂದಲೂ ಪ್ರಕಟವಾದಾಗ್ಯೂ ಅಂಥಾ ಯಾವ ಪರಮಾತ್ಮನ ನಿರೂಪಾಧಿಸ್ವರೂಪವನ್ನರಿಯರೋ ರಜಃಸ್ತಮಃಪ್ರಧಾನರಾದ ಅಸುರಾದಿಗಳು ಸರ್ವಥಾ ಅರಿಯರೋ ಆ ಪರಮಾತ್ಮನನ್ನು ನಮಸ್ಕರಿಸುತ್ತೇನೆ! ಯಾವ ಭೂಮಿಯಲ್ಲಿ ಜರಾಯುಜಾಂಡಜ ಸ್ವೇದಜ ಉದ್ಭಿಜ್ಜಗಳೆಂಬ ಚತುರ್ವಿಧ ಭೂತಸೃಷ್ಟಿಯುಂಟಾಗಿಧೆಯೋ ತನ್ನಿಂದಲೇ ನಿರ್ಮಿತವಾದ ಆ ಭೂಮಿಯು ಯಾವ ವಿರಾಟ್ಪುರುಷನಿಗೆ ಪಾದಂಗಳೋ ಅಧಿಕವಾದ ಐಶ್ವರ್ಯವುಳ್ಳ ಪರಬ್ರಹ್ಮರೂಪನಾದ ಸ್ವತಂತ್ರನಾದ ಆ ಮಹಾಪುರುಷನು ನನಗೆ ಪ್ರಸನ್ನನಾಗಲಿ! ಯಾವ ಉದಕದಿಂದ ಮೂರು ಲೋಕಗಳೂ ಲೋಕಪಾಲಕರು ಮುಂತಾದ ಸರ್ವಪ್ರಾಣಿಗಳೂ ಜೀವಿಸಿ ವೃದ್ಧಿಯನ್ನೈದುವವೋ ಉತ್ಕೃಷ್ಟವಾದ ಶಕ್ತಿಯುಳ್ಳ ಆ ಉದಕವು ಯಾವ ವಿರಾಟ್ಪುರುಷನ ರೇತಸ್ಸೋ ಆ ಪರಮಾತ್ಮನು ಪ್ರಸನ್ನನಾಗಲಿ! ಯಾವ ಚಂದ್ರನು ದೇವತೆಗಳಿಗೆ ಅನಂತರೂಪನಾಗಿ ಆಯುಷ್ಯವನ್ನೂ ಬಲವನ್ನೂ ಉಂಟುಮಾಡುವನಾಗಿ ವೃಕ್ಷಗಳಿಗೆ

ನಾಥನಾಗಿ ಪ್ರಜೆಗಳಿಗೆ ಉತ್ಪಾದಕನೋ ಆ ಚಂದ್ರನನ್ನು ಯಾವ ಪರಮಾತ್ಮನಿಗೆ ಮನಸ್ಸನ್ನಾಗಿ ಪೇಳುವರೋ ಆ ಪರಮಾತ್ಮನು ಪ್ರಸನ್ನನಾಗಲಿ! ವೇದಪ್ರತಿಪಾದ್ಯಕವಾದ ಕರ್ಮಸಿದ್ಧಿಗೋಸ್ಕರ ಉತ್ಪತ್ತಿಯುಳ್ಳವನಾಗಿ ಪ್ರಾಣಿಗಳ ಉದರಮಧ್ಯದಲ್ಲಿ ಭುಕ್ತವಾದ ಅನ್ನಾದಿಯನ್ನು ಪಚನಂಗೈಯುವ ಅಗ್ನಿಯು ಯಾವ ಪರಮಾತ್ಮನಿಗೆ ಮುಖವಾಗಿರುವನೋ ಆ ಪರಮಾತ್ಮನು ಪ್ರಸನ್ನನಾಗಲಿ! ಅರ್ಚಿರಾದಿಮಾರ್ಗದೇವತೆಯಾದ ವೇದರೂಪನಾದ ಬ್ರಹ್ಮೋಪಾಸನಸ್ಥಾನವಾದ ಮೋಕ್ಷದ್ವಾರರೂಪನಾದ ಮುಕ್ತಿಸ್ವರೂಪನಾದ ಕಾಲಪ್ರವರ್ತಕನಾದ ಮೃತ್ಯುರೂಪನಾದ ಸೂರ್ಯನು ಯಾವ ಪರಮಾತ್ಮನಿಗೆ ನೇತ್ರವೋ ಆ ಪರಮಾತ್ಮನು ಪ್ರಸನ್ನನಾಗಲಿ! ಬುಧ್ಯಾಧ್ಯಧಿಷ್ಠಾತೃಗಳಾದ ನಾವು ಯಾವ ವಾಯುವನ್ನು ಪ್ರಭುವನ್ನು ಭೃತ್ಯರಂತೆ ಅನುಸರಿಸಿಧೇವೆಯೋ ಸಮಸ್ತ ಚರಾಚರ ಪ್ರಾಣಿಗಳಿಗೆ ಕಾಯಶಕ್ತಿಯೂ ಇಂದ್ರಿಯಶಕ್ತಿಯೂ ಬಲವೂ ದೇಹಕಾಂತಿಯೂ ಯಾವ ವಾಯುವಿನಿಂದುಂಟಾಗುವದೋ ಆ ವಾಯುವು ಯಾವ ಪರಮಾತ್ಮನ ಪ್ರಾಣದ ದೆಶೆಯಿಂದುಂಟಾದನೋ ಆ ಈಶ್ವರನು ಪ್ರಸನ್ನನಾಗಲಿ! ಯಾವ ಪರಮಾತ್ಮನ ಶ್ರೋತ್ರವು ದಿಕ್ಕುಗಳೋ ಯಾವ ಪರಮಾತ್ಮನ ಹೃದಯದಿಂದ ಶರೀರ ರಂಧ್ರಗಳು ಹುಟ್ಟಿದವೋ ಪಂಚಪ್ರಾಣಗಳು ದಶೇಂದ್ರಿಯಗಳು ಮನಸ್ಸು ನಾಗ ಕೂರ್ಮಾದ್ಯುಪಪ್ರಾಣಗಳು ಶರೀರವು ಇವೆಲ್ಲಕ್ಕೂ ಆಶ್ರಯವಾದ ಆಕಾಶವು ಯಾವ ಪರಮಾತ್ಮನ ನಾಭಿಯ ದೆಶೆಯಿಂದ ಜನಿಸಿತೋ ಆ ಪರಮಾತ್ಮನು ಪ್ರಸನ್ನನಾಗಲಿ! ಯಾವ ಪರಮಾತ್ಮನ ಬಲದದೆಶೆಯಿಂದ ಮಹೇಂದ್ರನು ಜನಿಸಿದನೋ ಪ್ರಸಾದದದೆಶೆಯಿಂದ ದೇವತೆಗಳು ಪುಟ್ಟಿದರೋ ಕೋಪದಿಂದ ರುದ್ರಮೂರ್ತಿಯು ಆವಿರ್ಭವಿಸಿದನೋ ಆ ಪರಮಾತ್ಮನು ಪ್ರಸನ್ನನಾಗಲಿ! ಬುದ್ಧಿಯಿಂದ ನಾನೂ ಇಂದ್ರಿಯಗಳದೆಶೆಯಿಂದ ಋಷಿಗಳು ವೇದಗಳು ಹುಟ್ಟಿದವೋ ಲಿಂಗದಿಂದ ಪ್ರಜೇಶನು ಜನಿಸಿದನೋ ಆ ಪರಮಾತ್ಮನು ಪ್ರಸನ್ನನಾಗಲಿ! ಯಾವ ಪರಮಾತ್ಮನ ವಕ್ಷಸ್ಥಳದಲ್ಲಿ ಶ್ರೀದೇವಿಯೂ ಛಾಯೆಯಿಂದ ಪಿತೃಗಳೂ ಸ್ತನದಿಂದ ಧರ್ಮಪುರುಷನೂ ಬೆನ್ನಿನಿಂದ ಅಧರ್ಮಪುರುಷನೂ ಶಿರಸ್ಸಿನ ದೆಶೆಯಿಂದ ಸ್ವರ್ಗವೂ ಮುಗುಳುನಗೆಯಿಂದ ಅಪ್ಸರಸ್ತ್ರೀಯರುಗಳೂ ಜನಿಸಿದರೋ ಆ ಪರಮಾತ್ಮನು ಪ್ರಸನ್ನನಾಗಲಿ! ಯಾವ ಪರಮಾತ್ಮನ ಮುಖದಿಂದ ಬ್ರಾಹ್ಮಣಜಾತಿಯು ವೇದವು ಹುಟ್ಟಿತೋ ಭುಜಗಳಿಂದ ಕ್ಷತ್ರಿಯಜಾತಿಯು ಬಲವು ಜನಿಸಿತೋ ತೊಡೆಗಳಿಂದ ವೈಶ್ಯಜಾತಿಯು ಕುಶಲತ್ವವು ಹುಟ್ಟಿತೋ ಪಾದಗಳಿಂದ ಶೂದ್ರವರ್ಣವು ಶುಶ್ರೂಷೆಯು ಜನಿಸಿತೋ ಆ ಪರಮಾತ್ಮನು ಪ್ರಸನ್ನನಾಗಲಿ! ಯಾವ ಪರಮಾತ್ಮನ ಅಧರೋಷ್ಟದಿಂದ ಲೋಭವೂ ಊರ್ಧ್ವೋಷ್ಟದಿಂದ ಪ್ರೀತಿಯೂ ನಾಶಿಕದಿಂದ ಕಾಂತಿಯೂ ಸ್ಪರ್ಶದಿಂದ ಮೂಢರಿಗೆ ಹಿತನಾದ ಕಾಮನೂ ಹುಬ್ಬುಗಳಿಂದ ಯಮನೂ ಕಪೋಲಗಳಿಂದ ಕಾಲವೂ ಜನಿಸಿದವೋ ಆ ಪರಮಾತ್ಮನು ಪ್ರಸನ್ನನಾಗಲಿ! ಪಂಚಭೂತಗಳು ವಯಸ್ಸು ಕರ್ಮಗಳು ಗುಣಗಳು ಕಾಲವು ಇವುಗಳೆಲ್ಲವನ್ನೂ ಯಾವ ಪರಮಾತ್ಮನ ಯೋಗಮಾಯಾ ಕಲ್ಪಿತಗಳನ್ನಾಗಿ ಹೇಳುವರೋ ಯಾವ ಪರಮಾತ್ಮವಸ್ತುವು ಮೂಢರಿಗೆ ತಿಳಿಯಲಶಕ್ಯವಾದದ್ದೋ ಪ್ರಾಜ್ಞರಾದ ಜ್ಞಾನಿಗಳಿಗೆ ಭಾವಿಸಲು ಯೋಗ್ಯವೋ ಆ ಪರಮಾತ್ಮವಸ್ತುವು ಪ್ರಸನ್ನನಾಗಲಿ! ಉಪಶಾಂತಶಕ್ತಿಯುಳ್ಳವನಾಗಿ ಸ್ವಾನಂದಲಾಭದಿಂದ ಪೂರ್ಣವಾದ ಮಾಯಾಕಲ್ಪಿತಗಳಾದ ವಿಷಯಗಳಲ್ಲಿ ಶಕ್ತನಲ್ಲದೆ ವಾಯುವಿನಂತೆ ನಿರ್ಲೇಪನಾದ ಆ ಭಗವಂತನಿಗೋಸ್ಕರ ನಮಸ್ಕಾರವು! ನಿನ್ನನ್ನೇ ಶರಣುಹೊಂದಿ ಮುಗುಳುನಗೆಯಿಂದ ಯುಕ್ತವಾದ ನಿನ್ನ ಮುಖವನ್ನು ನೋಡಲಿಚ್ಛೆಯುಳ್ಳ ನಮಗೆ ನಿನ್ನ ಮೂರ್ತಿಯನ್ನು ಗೋಚರವನ್ನು ಮಾಡಿ ತೋರಿಸು! ಎಲೈ ಭಗವಂತನೆ, ತತ್ತತ್ಕಾಲಗಳಲ್ಲಿ ಸ್ವಜನರ ಇಚ್ಛಾನುಸಾರವಾಗಿ ಕಲ್ಪಿತಗಳಾದ ಅನ್ಯಾದೃಶಗಳಾದ ಆಯಾ ರೂಪಗಳಿಂದ ನಮಗೆ ಅಸಾಧ್ಯವಾದ ಕರ್ಮವನ್ನು ಮಾಡುತ್ತೀಯೆ; ವಿಷಯಾಸಕ್ತರಾದ ಪ್ರಾಣಿಗಳ ಸಂಬಂಧಿಗಳಾದ ಕರ್ಮಗಳು ಅಧಿಕ ಕ್ಲೇಶವುಳ್ಳವಾಗಿ ಸ್ವಲ್ಪ ಫಲವುಳ್ಳವಾಗಿ ವಿಫಲಗಳಾಗುವವು; ನಿನ್ನಲ್ಲಿ ಸಮರ್ಪಿಸಲ್ಪಟ್ಟ ಆ ಕರ್ಮಗಳೇ ಮಹಾ ಫಲಪ್ರದಗಳಾಗುವವು; ಸ್ವಲ್ಪವಾಗಿ ಅವಿಧಿಯಾಗಿ ಮಾಡಲ್ಪಟ್ಟ ಆ ಕರ್ಮವು ನಿನ್ನಲ್ಲಿ ಅರ್ಪಿತವಾದರೆ ಅದು ವ್ಯರ್ಥವಾಗುವದಿಲ್ಲ; ನೀನು ಸರ್ವಭೂತಹಿತನಾದಕಾರಣ ನಿನ್ನ ವಶವನ್ನು ಮಾಡಿದ ಕರ್ಮವನ್ನು ಸಫಲವನ್ನು ಮಾಡುತ್ತೀಯೆ; ವೃಕ್ಷದ ಮೂಲದಲ್ಲಿ ಮಾಡಲ್ಪಟ್ಟ ಜಲಸೇಚನವು ಹ್ಯಾಗೆ ಶಾಖೋಪಶಾಖೆಗಳಿಗೆ ತುಷ್ಟಿಕರವಾಗುವದೋ ಹಾಗೆ

ಶ್ರೀವಿಷ್ಣುಪೂಜೆಯು ಸರ್ವದೇವತಾ ಸಂತೋಷಕರವಾಗುವದು; ಅಪರಿಚ್ಛಿನ್ನನಾದ ಊಹಿಸಲಶಕ್ಯವಾದ ಕರ್ಮಗಳುಳ್ಳ ಗುಣರಹಿತನಾದ ಗುಣತ್ರಯನಿಯಾಮಕನಾದ ಸತ್ವಮೂರ್ತಿಯಾದ ಅಂಥಾ ನಿನಿಗೋಸ್ಕರ ನಮಸ್ಕಾರವು!' ಎಂದು ಬ್ರಹ್ಮದೇವನು ಶ್ರೀ ಭಗವಂತನನ್ನು ಸ್ತುತಿಗೈದನು.''

೬ನೇ ಅಧ್ಯಾಯ.

ಭಗವಂತನು ಮಂದರಪರ್ವತವನ್ನು ಗರುಡನಮೇಲಿರಿಸಿಕೊಂಡುಬಂದು ಕ್ಷೀರಸಮುದ್ರದಲ್ಲಿರಿಸಿದ್ದು.

“ಎಲೈ ಅರಸೆ, ಈರೀತಿಯಲ್ಲಿ ದೇವಸಮೂಹಯುಕ್ತನಾದ ಬ್ರಹ್ಮದೇವನಿಂದ ಸ್ತುತಿಗೈಯಲ್ಪಟ್ಟ ಶ್ರೀ ಪರಮೇಶ್ವರನಾದ ಹರಿಯು ಸಹಸ್ರಸೂರ್ಯೋದಯವಾದರೆ ಯಾವ ತೇಜಸ್ಸುಂಟಾಗುವದೋ ಅಂಥಾ ಪ್ರಭೆಯುಳ್ಳವನಾಗಿ ಆ ದೇವತೆಗಳ ಮುಂಭಾಗದಲ್ಲಿ ಆವಿರ್ಭೂತನಾದನು; ಆಗ ಸಮಸ್ತ ದೇವತೆಗಳೂ ಆ ಮಹಾಪ್ರಭೆಯಿಂದ ಪ್ರತಿಹತವಾದ ದೃಷ್ಟಿಯುಳ್ಳವರಾಗಿ ಆಕಾಶವನ್ನೂ ದಿಕ್ಕುಗಳನ್ನೂ ಭೂಮಿಯನ್ನೂ ತಮ್ಮನ್ನೂ ಆ ಭಗವಂತನನ್ನೂ ಕಾಣಲಿಲ್ಲ; ಆಗೆ ಬ್ರಹ್ಮದೇವನು ಶ್ರೀ ಪರಮೇಶ್ವರನೊಡಗೂಡಿ ಆ ಭಗವಂತನ ಶರೀರವನ್ನು ನೋಡಿದನು; ಆ ಶರೀರವೆಂಥಾದ್ದೆಂದರೆ: ನಿರ್ಮಲವಾಗಿ ಮರಕತಮಾಣಿಕ್ಯಗಳಿಗೆ ಸಮಾನವಾದ ಶ್ಯಾಮರೂಪವುಳ್ಳದ್ದಾಗಿ ಕೆಂದಾವರೆಯ ಗರ್ಭದಳದಂತೆ ಕೆಂಪಾದ ನೇತ್ರಗಳುಳ್ಳದ್ದಾಗಿ ಕುಂದಣದಂತೆ ಹೊಳೆಯುತಲಿರುವ ಪೀತಾಂಬರದಿಂದ ಪ್ರಕಾಶಿಸುವದಾಗಿ ಪ್ರಸನ್ನವಾದ ರಮ್ಯವಾದ ಸರ್ವಾಂಗಗಳುಳ್ಳದ್ದಾಗಿ ಮನೋಹರವಾದ ಹುಬ್ಬುಗಳುಳ್ಳದ್ದಾಗಿ ಮಹಾ ರತ್ನಮಯವಾದ ಕಿರೀಟದಿಂದಲೂ ದಿವ್ಯವಾದ ಬಾಹುಪುರಿಗಳಿಂದಲೂ ಪ್ರಕಾಶಿಸುವದಾಗಿ ಕರ್ಣಾಭರಣಗಳಿಂದ ಶೋಭಿತವಾದ ಕಪೋಲಕಾಂತಿಯಿಂದ ಹೊಳೆವ ಮುಖಕಮಲವುಳ್ಳದ್ದಾಗಿ ಒಡ್ಯಾಣದಿಂದಲೂ ಕಡಗಗಳಿಂದಲೂ ಹಾರಗಳಿಂದಲೂ ಪಾದಾಭರಣಗಳಿಂದಲೂ ಶೋಭಿತವಾಗಿ ಕೌಂಸ್ತುಭದಿಂದ ಭೂಷಿತವಾಗಿ ಲಕ್ಷ್ಮಿಯನ್ನು ವಕ್ಷಸ್ಥಳದಲ್ಲಿ ಧರಿಸಿದವನಾಗಿ ವನಮಾಲೆಯಿಂದ ಅಲಂಕೃತವಾಗಿ ಚಕ್ರ ಮೊದಲಾದ ಮೂರ್ತಿಮತ್ತಾದ ಆಯುಧಪಂಚಕದಿಂದ ಸೇವಿಸಲ್ಪಡುವದಾಗಿರುವ ದಿವ್ಯಶರೀರವನ್ನು ಧರಿಸಿದ ಭಗವಂತನನ್ನು ನೋಡಿ ದೇವಶ್ರೇಷ್ಠನಾದ ಬ್ರಹ್ಮದೇವನು ಸಾಷ್ಟಾಂಗವಾಗಿ ಪ್ರಣಾಮಂಗೈದು ಸ್ತುತಿಸಿದನು! ಉತ್ಪತ್ತಿಸ್ಥಿತಿರಹಿತನಾದ ಗುಣಸಂಬಂಧರಹಿತನಾದ ಮೋಕ್ಷಸುಖರೂಪನಾದ ಅತ್ಯಂತ ಸೂಕ್ಷ್ಮನಾದ ಅಪರಿಚ್ಛಿನ್ನಪ್ರಕಾಶನಾದ ಮಹಾಮಹಿಮೆಯುಳ್ಳ ಭಗವಂತನಾದ ನಿನಿಗೋಸ್ಕರ ನಮಸ್ಕಾರವು! ಎಲೈ ಜಗತ್ಸೃಷ್ಟಿಕರ್ತೃವಾದ ಪುರುಷೋತ್ತಮನೆ, ನಿನ್ನ ಈ ರೂಪವು ಪುರುಷಾರ್ಥಾಪೇಕ್ಷಿಗಳಾದ ಜನರಿಂದ ವೇದೋದಿತವಾದ ಉಪಾಯದಿಂದಲೂ ತಂತ್ರೋದಿತವಾದ ಉಪಾಯದಿಂದಲೂ ಪೂಜಿಸಲು ಯೋಗ್ಯವಾದದ್ದು; ಅದೇನುಕಾರಣವೆಂದರೆ: ನಾನೇ ಮೊದಲಾದ ದೇವತೆಗಳನ್ನೂ ಮೂರುಲೋಕಗಳನ್ನೂ ನಿನ್ನ ಮಹಾ ಶರೀರದಲ್ಲಿ ಕಾಣುತ್ತೇನೆ! ಎಲೈ ಸ್ವತಂತ್ರನಾದ ಭಗವಂತನೆ, ಈ ಜಗತ್ತು ನಿನ್ನಲ್ಲೇ ಜನಿಸಿ ನಿನ್ನಲ್ಲೇ ಸ್ಥಿತಿಯನ್ನೈದಿ ನಿನ್ನಲ್ಲೇ ಲಯವನ್ನು ಪಡೆಯುವದು; ಈ ಜಗತ್ತಿಗೆ ಆದಿಯೂ ನೀನೆ; ಮಧ್ಯವೂ ನೀನೆ; ಅಂತ್ಯವೂ ನೀನೆ; ಘಟಕ್ಕೆ ಆದಿಯಲ್ಲಿಯೂ ಮೃತ್ತು ಮಧ್ಯಾವಸ್ಥೆಯಲ್ಲೂ ಮೃತ್ತು ಚರಮಾವಸ್ಥೆಯಲ್ಲೂ ಮೃತ್ತು ಹ್ಯಾಗೋ ಹಾಗೆ ಸ್ವಾಧೀನವಾಗಿ ನಿನ್ನಲ್ಲೇ ಆಶ್ರಯಿಸಿರುವ ಮಾಯೆಯಿಂದ ಈ ಜಗತ್ತನ್ನು ನಿರ್ಮಿಸಿ ಆ ಜಗತ್ತಿನಲ್ಲಿ ಪ್ರವಿಷ್ಟನಾಗಿ ಗುಣಪರಿಣಾಮರೂಪವಾದ ಈ ಜಗತ್ತಿನಲ್ಲಿದ್ದಾಗ್ಯೂ ಗುಣಸಂಬಂಧರಹಿತನಾಗಿರುವ ನಿನ್ನನ್ನು ಶಾಸ್ತ್ರಜ್ಞರಾದ ವಿವೇಕಿಗಳು ಮನಸ್ಸಿನಿಂದ ಭಾವಿಸುತ್ತಾರೆ; ಮನುಷ್ಯರು ಯಾವರೀತಿಯಲ್ಲಿ ಕಾಷ್ಠಗಳಲ್ಲಿ ಮಥನರೂಪವಾದ ಉಪಾಯದಿಂದ ಅಗ್ನಿಯನ್ನೂ ಗೋವುಗಳಲ್ಲಿ ದೋಹನಾದ್ಯುಪಾಯದಿಂದ ಕ್ಷೀರಾದಿ ವಸ್ತುವನ್ನೂ ಭೂಮಿಯಲ್ಲಿ ಕೃಷ್ಯಾದ್ಯುಪಾಯದಿಂದ ಅನ್ನವನ್ನೂ ಖನನಾದ್ಯುಪಾಯದಿಂದ ಜಲವನ್ನೂ ವಾಣಿಜ್ಯಾದಿ ಸಾಧನದಿಂದ ಜೀವನೋಪಾಯವನ್ನೂ ಹ್ಯಾಗೆ ಪಡೆಯುವರೋ ಹಾಗೆ ಗುಣತ್ರಯಾತ್ಮಕವಾದ ಈ ಜಗತ್ತಿನಲ್ಲಿ ವಿವೇಚಕರಾದ ಪ್ರಾಜ್ಞರು ಬುದ್ಧಿಯಿಂದ ನಿನ್ನನ್ನೇ ಪಡೆಯುವರು! ಎಲೈ ಜಗದೀಶ್ವರನಾದ ಪದ್ಮನಾಭನೆ, ಬಹುಕಾಲ

ದಿಂದ ಅಪೇಕ್ಷಿಸಲ್ಪಟ್ಟ ವಸ್ತುಸ್ವರೂಪನಾದ ಈಗ ಪ್ರತ್ಯಕ್ಷವಾಗಿ ಆವಿರ್ಭವಿಸಿದ ನಿನ್ನನ್ನು ನೋಡಿ ನಾವೆಲ್ಲರೂ ದಾವಾಗ್ನಿಯಿಂದ ಪೀಡಿತಗಳಾದ ಆನೆಗಳು ಗಂಗಾಪ್ರವಾಹವನ್ನು ನೋಡಿದರೆ ಹ್ಯಾಗೆ ಸಂತೋಷಪಡುವವೋ ಹಾಗೆ ಸಂತುಷ್ಟರಾದೆವು! ಎಲೈ ಸರ್ವಲೋಕರಕ್ಷಕನಾದ ಭಗವಂತನೆ, ನಾವಶೇಷರೂ ಯಾವ ಕಾರ್ಯನಿಮಿತ್ತವಾಗಿ ನಿನ್ನ ಚರಣಸನ್ನಿಧಾನಕ್ಕೆ ಬಂದೆವೋ ಆ ಕಾರ್ಯವನ್ನು ನೀನೇ ಮಾಡು ; ಸರ್ವಾಂತರ್ಯಾಮಿಯಾಗಿ ಸರ್ವಸಾಕ್ಷಿಯಾದ ನಿನಗೆ ನಮ್ಮಿಂದ ವಿಜ್ಞಾಪನೆಮಾಡತಕ್ಕ ಅರ್ಥವೇನಿಧೆ ; ಸರ್ವವೂ ನಿನಗೆ ವಿದಿತವಾಗಿಯೇ ಇಧೆ ; ನಾನು ರುದ್ರನು ದೇವತೆಗಳು ದಕ್ಷಾದಿಗಳು ನಾವೆಲ್ಲರೂ ಅಗ್ನಿಗೆ ಕಿಡಿಗಳಂತೆ ನಿನ್ನ ಅಂಶಭೂತರಾಗಿ ಬೇರೆ ಬೇರೆಯಾಗಿ ತೋರುವರು; ನಾವೇನುಬಲ್ಲೆವು ; ಅದರಿಂದ ನೀನೇ ಬ್ರಾಹ್ಮಣರಿಗೂ ದೇವತೆಗಳಿಗೂ ಇತಿಕರ್ತವ್ಯತೋಪದೇಶವನ್ನು ಮಾಡಿ ನಮಗೆ ಸುಖವನ್ನುಂಟುಮಾಡು ; ಎಂದು ಈರೀತಿ ಇಂದ್ರ ಬ್ರಹ್ಮಾದಿಗಳಿಂದ ಸ್ತುತಿಗೈದು ಪ್ರಾರ್ಥಿಸಲ್ಪಟ್ಟ ಭಗವಂತನು ಅವರ ಮನೋಗತಾರ್ಥವನ್ನು ಯಥಾವತ್ತಾಗಿ ತಿಳಿದು ಜಿತೇಂದ್ರಿಯರಾಗಿ ಅಂಜಲಿಬಂಧಗೈದು ತದೇಕಚಿತ್ತರಾದ ಬ್ರಹ್ಮಾದಿಗಳನ್ನು ಕುರಿತು ಮೇಘಗಂಭೀರವಾದ ವಾಕ್ಯದಿಂದ 'ಎಲೈ ಬ್ರಹ್ಮನೇ, ಎಲೈ ಶ್ರೀ ರುದ್ರನೆ, ಎಲೈ ದೇವತೆಗಳಿರಾ, ಎಲೈ ಮಿಕ್ಕಾದ ಗಂಧರ್ವಾದಿಗಳಿರಾ, ನೀವೆಲ್ಲರೂ ಏಕಾಗ್ರಚಿತ್ತರಾಗಿ ನನ್ನ ವಾಕ್ಯವನ್ನು ಕೇಳಿ ; ಎಲೈ ದೇವತೆಗಳಿರಾ, ನೀವು ಇಲ್ಲಿಂದ ತೆರಳಿಹೋಗಿ ದೈತ್ಯದಾನವರಾದ ಅಸುರರೊಡನೆ ಸಂಧಾನವನ್ನು ಮಾಡಿಕೊಂಡು ಅವರ ಸಂಗಡ ಸ್ನೇಹವನ್ನು ಬೆಳಸಿ ನಿಮಗೆ ಬಲಪುಷ್ಟಿಗಳು ವೃದ್ಧಿಯನ್ನೈದುವ ಪರ್ಯಂತವು ಏಕಸ್ಥರಾಗಿರಿ ; ಕಾರ್ಯವನ್ನು ಸಾಧಿಸುವಪರ್ಯಂತವು ಶತೃಗಳನ್ನೂ ಕೂಡ ಮಿತ್ರರನ್ನಾಗಿ ಮಾಡಿಕೊಳ್ಳಬೇಕು ; ಕಾರ್ಯಸಿದ್ಧಿಯಾದಮೇಲೆ ಶತೃಭಾವವಿದ್ದೇಯಿಧೆ ; ಅದೆಂತೆನೆ: ಪೆಟ್ಟಿಗೆಯಲ್ಲಿ ಸಿಕ್ಕಿರುವ ಸರ್ಪವು ಹೊರಕ್ಕೆ ಹೋಗುವದಕ್ಕೆ ಬಿಲವನ್ನು ಮಾಡುವದಕ್ಕೋಸ್ಕರ ಮೂಷಕದೊಡನೆ ಸ್ನೇಹವನ್ನು ಬೆಳಸಿ ಆಮೇಲೆ ಮೂಷಕದಿಂದ ಬಿಲನಿರ್ಮಾಣವಾದನಂತರದಲ್ಲಿ ಆ ಮೂಷಕವನ್ನು ಭಕ್ಷಿಸಿ ಅದೇ ಬಿಲದಿಂದ ಎಂತು ಹೊರಟುಹೋಗುವದೋ ಆರೀತಿಯಲ್ಲಿ ಕಾರ್ಯಸಿದ್ಧಿಪರ್ಯಂತವು ಶತೃಗಳನ್ನು ನಂಬಿಸಿ ಅಮೃತವನ್ನು ಸಂಪಾದಿಸುವದರಲ್ಲಿ ಪ್ರಯತ್ನವನ್ನು ಮಾಡಿ ; ಆ ಅಮೃತವನ್ನು ಪಾನಗೈದರೆ ಮೃತ್ಯುಗ್ರಸ್ತನಾದ ಪ್ರಾಣಿಯೂ ಕೂಡ ಜರಾ ಮರಣ ರಹಿತನಾಗುವನು! ಎಲೈ ದೇವತೆಗಳಿರಾ, ಕ್ಷೀರಸಮುದ್ರದಲ್ಲಿ ಸಮಸ್ತವಾದ ಜೀವನೌಷಧಿ ಲತೆಗಳ ಸಮೂಹವನ್ನು ಹಾಕಿ ಮಂದರಪರ್ವತವನ್ನು ಮಥನದಂಡವನ್ನು ಮಾಡಿ ಸರ್ಪರಾಜನಾದ ವಾಸುಕಿಯನ್ನು ರಜ್ಜುವನ್ನಾಗಿಮಾಡಿಕೊಂಡು ಸಹಾಯಕನಾದ ನನ್ನೊಡನೆ ಮಥನಂಗೈಯ್ಯಿರಿ ; ದೈತ್ಯರು ಪ್ರಯಾಸಪಡುತ್ತಾರೆ ; ಫಲವು ನಿಮಗೇ ಆಗುತ್ತೆ ! ಎಲೈ ದೇವತೆಗಳಿರಾ, ಅಸುರರು ಯಾವ ಅರ್ಥವನ್ನು ನಿಶ್ಚಯಿಸುತ್ತಾರೆಯೋ ಆ ಅರ್ಥವನ್ನೇ ನೀವು ಅನುಮೋದಂಗೈಯ್ಯಿರಿ; ಸರ್ವಕಾರ್ಯಗಳು ಪರಾನುಸರಣೆಯಿಂದಲೂ ಒಳ್ಳೇಮಾತುಗಳಿಂದಲೂ ಸಿದ್ಧಿಸುವಹಾಗೆ ಕಾಮ ಕ್ರೋಧಪೂರ್ವಕವಾದ ಕಲಹದಿಂದ ಸಿದ್ಧಿಸುವದಿಲ್ಲ ; ಸಮುದ್ರೋತ್ಪನ್ನವಾದ ಕಾಲಕೂಟ ವಿಷದಿಂದ ನೀವು ಭಯಪಡಬೇಡಿ ; ಸಮುದ್ರೋತ್ಪನ್ನಗಳಾದ ದಿವ್ಯವಸ್ತುಗಳಲ್ಲಿ ನೀವು ಆಸೆಯನ್ನು ಮಾಡಬೇಡಿ ; ತನ್ನಿಮಿತ್ತವಾಗಿ ನೀವು ಕಾಮ ಕ್ರೋಧಗಳನ್ನು ಮಾಡಬೇಡಿ ; ಈರೀತಿಯಲ್ಲಿ ದೇವತೆಗಳಿಗೆ ಆಜ್ಞಾಪಿಸಿ ಭಗವಂತನಾದ ಪುರುಷೋತ್ತಮನು ಸ್ವೇಚ್ಛಾಗಮನವುಳ್ಳವನಾಗಿ ಸ್ವತಂತ್ರನಾದಕಾರಣ ಆ ದೇವತೆಗಳು ನೋಡುವಾಗಲೇ ಅಂತರ್ಧಾನವನ್ನೈದಿದನು ; ಬ್ರಹ್ಮದೇವನು ಆ ಭಗವಂತನಿಗೆ ನಮಸ್ಕರಿಸಿ ತನ್ನ ಲೋಕಕ್ಕೆ ಹೋದನು ; ಈಶ್ವರನು ತನ್ನ ಸ್ವಸ್ಥಾನಕ್ಕೆ ತೆರಳಿಹೋದನು ; ಅನಂತರದಲ್ಲಿ ದೇವತೆಗಳು ಬಲಿಚಕ್ರವರ್ತಿಯ ಸಮೀಪಕ್ಕೆ ಹೋದರು ; ಆಗ ಸಂಧಿವಿಗ್ರಹಕಾಲಜ್ಞನಾದ ಕೀರ್ತಿಶಾಲಿಯಾದ ದೈತ್ಯಪತಿಯಾದ ಬಲಿಯು ದುರ್ಬಲರಾಗಿ ಸಂಧಾನಾರ್ಥವಾಗಿ ಬಂದಿರುವ ದೇವತೆಗಳನ್ನು ನೋಡಿ ಯುದ್ಧೋದ್ಯುಕ್ತರಾದ ಸ್ವಸೇನಾನಾಯಕರನ್ನು ತಡದನು ; ಆ ದೇವತೆಗಳು ಅಪರಿಮಿತೈಶ್ವರ್ಯಯುಕ್ತನಾಗಿ ತ್ರಿಲೋಕವಿಜಯಿಯಾಗಿ ಅಸುರನಾಯಕರಿಂದ ರಕ್ಷಿಸಲ್ಪಡುವವನಾಗಿ ಸಿಂಹಾಸನದಲ್ಲಿ ಕುಳಿತಿರುವ ಬಲಿಯ ಸಮೀಪವನ್ನೈದಲು ದೇವೇಂದ್ರನು ಬುದ್ಧಿಶಾಲಿಯಾದಕಾರಣ ಮೃದುವಾಕ್ಯಗಳಿಂದ ಬಲಿಯನ್ನು ಸಂತೋಷಪಡಿಸಿ ಭಗವಂತನಿಂದ ಆಜ್ಞಪ್ತವಾದ ಅರ್ಥವನ್ನು ಅಮೃತಮಥನಪರ್ಯಂ

ತವೂ ಪೇಳಿದನು ; ಆ ಅರ್ಥವು ಬಲಿಚಕ್ರವರ್ತಿಗೂ ಶಂಬರ ಅರಿಷ್ಟನೇಮಿ ಮೊದಲಾದ ಅಸುರನಾಥರಿಗೂ ತ್ರಿಪುರವಾಸಿಗಳಾದ ದೈತ್ಯದಾನವರಿಗೂ ಪೌಲೋಮ ಕಾಲೇಯಪ್ರಭೃತಿಗಳಾದ ಸಮಸ್ತ ದೈತ್ಯರಿಗೂ ಸಮ್ಮತವಾಯಿತು ; ಆಗ ದೇವಾಸುರರು ಪರಸ್ಪರವಾಗಿ ಸಮಾಖ್ಯೆಮಾಡಿಕೊಂಡು ಸ್ನೇಹಯುಕ್ತರಾಗಿ ಅಮೃತನಿಮಿತ್ತವಾಗಿ ಪ್ರಯತ್ನವನ್ನು ಮಾಡಿದರು ; ಆಮೇಲೆ ದುಷ್ಟವಾದ ಮದವುಳ್ಳ ಅಸುರರು ಲಾಳಮುಂಡಿಗೆಗಳಂತೆ ದೀರ್ಘಗಳಾದ ಸ್ಥೂಲಗಳಾದ ಬಾಹುಗಳುಳ್ಳವರಾದಕಾರಣ ತಮ್ಮ ಭುಜಬಲದಿಂದ ಮಂದರಪರ್ವತವನ್ನು ಕಿತ್ತು ಹೊತ್ತುಕೊಂಡು ಗರ್ಜಿಸುತ ಸಮುದ್ರತೀರಕ್ಕೆ ಬಂದು ಮಹಾ ಭಾರವುಳ್ಳ ಆ ಪರ್ವತವನ್ನು ಬಹುದೂರದಿಂದ ಹೊತ್ತು ಶ್ರಾಂತರಾದ ಮಹೇಂದ್ರ ಬಲಿ ಮೊದಲಾದ ದೇವಾಸುರರು ಹೊರಲಾರದೆ ಮಧ್ಯಮಾರ್ಗದಲ್ಲಿ ಪರವಶರಾಗಿ ಎತ್ತಿಹಾಕಿಬಿಟ್ಟರು ; ಕೆಳಗೆ ಬೀಳುತಲಿರುವ ಆ ಮಂದರಪರ್ವತವು ಮಹಾ ಭಾರದಿಂದ ಅನೇಕರಾದ ದೇವಾಸುರರನ್ನು ಚೂರ್ಣೀಕರಿಸಿತು ; ಆಗ ಭಗ್ನಮನಸ್ಕರಾಗಿ ಭಗ್ನಗಳಾದ ಬಾಹುಗಳೂ ತೊಡೆಗಳೂ ಕಂಠಗಳೂ ಉಳ್ಳವರಾದ ಖಿನ್ನರಾದ ದೇವಾಸುರರನ್ನು ನೋಡಿ ಭಗವಂತನಾದ ಗರುಡಧ್ವಜನು ಅಲ್ಲಿ ಆವಿರ್ಭವಿಸಿ ಆ ಮಂದರಗಿರಿಪತನದಿಂದ ಚೂರ್ಣೀಕೃತರಾದ ದೇವಾಸುರರನ್ನು ಕಟಾಕ್ಷಾವಲೋಕನದಿಂದ ದೃಢದೇಹವುಳ್ಳವರನ್ನಾಗಿ ಮಾಡಿದನು ; ಆಮೇಲೆ ಭಗವಂತನು ವಿಲಾಸದಿಂದಲೇ ಏಕಹಸ್ತದಿಂದ ಆ ಪರ್ವತವನ್ನೆತ್ತಿ ಗರುಡನಮೇಲಿರಿಸಿಕೊಂಡು ತಾನೂ ಗರುಡಾರೂಢನಾಗಿ ಸುರಾಸುರ ಸಮೂಹದಿಂದ ಪರಿವೃತನಾಗಿ ಕ್ಷೀರಸಮುದ್ರವನ್ನೈದಿದನು ; ಪಕ್ಷಿರಾಜನಾದ ಗರುಡನು ತನ್ನ ಹೆಗಲಿನಿಂದ ಆ ಪರ್ವತವನ್ನು ಸಮುದ್ರದಲ್ಲಿಳುಹಿ ಭಗವಂತನಿಂದ ಅಪ್ಪಣೆಯನ್ನು ತೆಗದುಕೊಂಡು ಹೊರಟುಹೋದನು."

೭ನೇ ಅಧ್ಯಾಯ.

ದೇವಾಸುರರು ಕ್ಷೀರಸಮುದ್ರವನ್ನು ಮಥಿಸಿದ್ದು—ಪರಮೇಶ್ವರನು ವಿಷಪಾನ ಮಾಡಿದ್ದು.

"ಎಲೈ ಅರಸೆ, ಅನಂತರದಲ್ಲಿ ದೇವತೆಗಳೂ ಅಸುರರೂ ನಿನಗೂ ಅಮೃತಭಾಗವನ್ನು ಕೊಡುತ್ತೇವೆಂದು ವಾಸುಕಿಯನ್ನು ಸಮ್ಮತಿಪಡಿಸಿ ಕರದುಕೊಂಡುಬಂದು ಸಂತೋಷಯುಕ್ತನಾದ ಸರ್ಪರಾಜನಾದ ಆ ವಾಸುಕಿಯನ್ನು ಮಂದರಪರ್ವತಕ್ಕೆ ಸುತ್ತುಹಾಕಿ ಮುಖಭಾಗವನ್ನೂ ಪುಚ್ಛಭಾಗವನ್ನೂ ಹಿಡಕೊಳ್ಳುವದಕ್ಕೆ ಬಿಟ್ಟು ಅಮೃತಾರ್ಥಿಗಳಾದ ದೇವಾಸುರರು ಉದ್ಯುಕ್ತರಾಗಿ ಮಥಿಸುವದಕ್ಕೆ ಉಪಕ್ರಮಿಸಿದರು ; ಮೊದಲೇ ಭಗವಂತನು ಮುಖಭಾಗವನ್ನು ಗ್ರಹಿಸಿದನು; ದೇವತೆಗಳೂ ಮುಖಭಾಗವನ್ನೇ ಗ್ರಹಿಸಿದರು ; ಆ ಭಗವಂತನ ವ್ಯಾಪಾರವನ್ನು ದೈತ್ಯಪತಿಗಳು ಸಮ್ಮತಿಸದೆ ಅಮಂಗಳವಾದ ಸರ್ಪದ ಪುಚ್ಛಭಾಗವನ್ನು ವೇದಶಾಸ್ತ್ರಾಧ್ಯಯನ ಸಂಪನ್ನರಾಗಿ ಉತ್ತಮಲೋಕೋತ್ಪನ್ನರಾಗಿ ಮಹಾಕಾರ್ಯಗಳನ್ನು ಮಾಡಿ ಪ್ರಸಿದ್ಧರಾದ ನಾವು ಗ್ರಹಿಸುವದಿಲ್ಲವೆಂದು ಸುಮ್ಮನೇ ನಿಂತಿರುವ ದೈತ್ಯರನ್ನು ನೋಡಿ ಪುರುಷೋತ್ತಮನು ಮುಗುಳುನಗೆಯಿಂದ ಯುಕ್ತವಾದ ಮುಖವುಳ್ಳವನಾಗಿ ವಾಸುಕಿಯ ಮುಖಭಾಗವನ್ನು ಬಿಟ್ಟು ದೇವತೆಗಳ ಸಮೇತನಾಗಿ ಪುಚ್ಛಭಾಗವನ್ನು ಗ್ರಹಿಸಿದನು ; ಈರೀತಿಯಲ್ಲಿ ಕಶ್ಯಪಪುತ್ರರಾದ ದೇವಾಸುರರು ಸ್ಥಾನವಿಭಾಗವನ್ನು ಮಾಡಿಕೊಂಡು ಅಮೃತಾರ್ಥವಾಗಿ ಪರಮೋದ್ಯುಕ್ತರಾಗಿ ಸಮುದ್ರವನ್ನು ಮಥಿಸುತಲಿರಲಾಗಿ ಬಲಿಷ್ಠರಾದ ದೇವಾಸುರರಿಂದ ಹಿಡಿಯಲ್ಪಟ್ಟದ್ದಾದಾಗ್ಯೂ ಆ ಮಂದರಪರ್ವತವು ಕೆಳಗೆ ಆಧಾರರಹಿತವಾದ್ದರಿಂದ ಪಾತಾಳಕ್ಕೆ ಇಳಿದುಹೋಯಿತು ; ಆಗ ಬಲವಂತವಾದ ದೈವದಿಂದ ಸ್ವಪೌರುಷ ನಷ್ಟವಾಗಲು ದೇವಾಸುರರು ಖಿನ್ನಮನಸ್ಕರಾಗಿ ಕುಂದಿದ ಮುಖಕಾಂತಿಯುಳ್ಳವರಾಗಿ ಸುಮ್ಮನಾದರು ; ಆಗ ಸತ್ಯಸಂಕಲ್ಪನಾದ ಅಪಾರಮಹಿಮೆಯುಳ್ಳ ಭಗವಂತನು ವಿಘ್ನೇಶ್ವರನಿಂದ ರಚಿತವಾದ ವಿಘ್ನವನ್ನು ನೋಡಿ ಆಶ್ಚರ್ಯಕರವಾದ ಮಹತ್ತಾದ ಕೂರ್ಮಶರೀರವನ್ನು ಧರಿಸಿ ಸಮುದ್ರವನ್ನು ಪ್ರವೇಶಿಸಿ ಮಂದರವನ್ನು ಮೇಲಕ್ಕೆತ್ತಿದನು ; ದೇವಾಸುರರು ಮೇಲಕ್ಕೆದ್ದ ಆ ಮಂದರವನ್ನು ನೋಡಿ ಪುನಶ್ಚ ಮಥಿಸುವದಕ್ಕೆ ಉದ್ಯುಕ್ತರಾದರು ; ಆ ಕೂರ್ಮರೂಪನಾದ ಭಗವಂತನು ಮತ್ತೊಂದು ದ್ವೀಪದಂತೆ ಲಕ್ಷಯೋಜನ ಪ್ರಮಾಣವುಳ್ಳ ಬೆನ್ನಿನಿಂದ ಆ ಪರ್ವತವನ್ನು

ಧರಿಸಿದನು; ದೇವಾಸುರ ಭುಜಬಲದಿಂದ ತಿರಿಗಿಸಲ್ಪಟ್ಟ ಮಹಾ ಕೂರ್ಮನ ಬೆನ್ನಿನಮೇಲೆ ಸುತ್ತುತಲಿರುವ ಆ ಮಂದರವನ್ನು ಧರಿಸಿಕೊಂಡಿರುವ ಆದಿಕೂರ್ಮರೂಪನಾದ ಭಗವಂತನು ಆ ಪರ್ವತದ ಭ್ರಮಣವನ್ನು ಬೆನ್ನನ್ನು ತುರಿಸೋಣವನ್ನಾಗಿ ತಿಳಿದನು; ಅನಂತರದಲ್ಲಿ ತಿಳಿಯಲಶಕ್ಯವಾದ ರೂಪವುಳ್ಳ ಭಗವಂತನು ಅಸುರರೂಪದಿಂದ ಅಸುರರನ್ನು ಪ್ರವೇಶಿಸಿ ಅವರಿಗೆ ಬಲಪರಾಕ್ರಮಗಳನ್ನು ವೃದ್ಧಿಯನ್ನೈದಿಸಿದನು; ದೇವತಾಸಂಬಂಧಿಯಾದರೂಪದಿಂದ ದೇವತೆಗಳನ್ನೂ ಸರ್ಪರಾಜನಾದ ವಾಸುಕಿಯನ್ನೂ ಪ್ರವೇಶಿಸಿ ಅವರಿಗೆ ಬಲೋತ್ಸಾಹಗಳನ್ನು ವೃದ್ಧಿಯನ್ನೈದಿಸಿದನು; ಸಹಸ್ರಬಾಹುವಾದ ಭಗವಂತನು ಉಪರಿಭಾಗದಲ್ಲಿ ಮತ್ತೊಂದು ಮಹಾ ಪರ್ವತದಂತೆ ಹಸ್ತದಿಂದ ಮಂದರವನ್ನಾಕ್ರಮಿಸಿ ಬ್ರಹ್ಮರುದ್ರಾದಿಗಳಿಂದ ಪುಷ್ಪವೃಷ್ಟಿಯನ್ನು ಕರಿಸಿಕೊಂಡು ಸ್ತುತಿಗೈಯಲ್ಪಡುವನಾಗಿ ಅಂತರಿಕ್ಷದಲ್ಲಿ ನಿಂತನು; ಆ ಮಂದರಪರ್ವತದ ಊರ್ಧ್ವಭಾಗದಲ್ಲಿಯೂ ಅಧೋಭಾಗದಲ್ಲಿಯೂ ರಜ್ಜುರೂಪನಾದ ವಾಸುಕಿಯಲ್ಲಿಯೂ ದೇವಾಸುರರಲ್ಲಿಯೂ ಭಗವಂತನು ಸ್ವಶಕ್ತಿಯಿಂದ ಪ್ರವೇಶಿಸಲಾಗಿ ಸಾಧನಸಾಮಗ್ರಿಯವು ಪ್ರಬಲವಾದ್ದರಿಂದ ದೇವಾಸುರರು ಮದೋದ್ಧತರಾಗಿ ಮಹಾ ಪರ್ವತದಿಂದ ಕ್ಷೋಭಿಸಲ್ಪಟ್ಟ ನಕ್ರಮಕರ ಮೊದಲಾದ ಜಲಜಂತು ಸಮೂಹವುಳ್ಳ ಆ ಸಮುದ್ರವನ್ನು ವೇಗದಿಂದ ಮಥನಂಗೈದರು; ಸರ್ಪರಾಜನಾದ ವಾಸುಕಿಯು ಸಹಸ್ರಸಂಖ್ಯಾತಗಳಾದ ಕಠೋರಗಳಾದ ನೇತ್ರಗಳಿಂದಲೂ ಮುಖಗಳಿಂದಲೂ ಶ್ವಾಸಗಳಿಂದಲೂ ಉತ್ಪನ್ನಗಳಾದ ಅಗ್ನಿಧೂಮಗಳಿಂದಲೂ ನಷ್ಟವಾದ ತೇಜಸ್ಸುಳ್ಳ ಪೌಲೋಮ ಕಾಲೇಯ ಬಲಿ ಇಲ್ವಲಾದಿ ಮಹಾದೈತ್ಯರೂ ಕಾಡುಕಿಚ್ಚಿನಿಂದ ದಹಿಸಲ್ಪಟ್ಟ ದೇವದಾರುವೃಕ್ಷಗಳಂತಾದರು; ಆಗ ವಾಸುಕಿಯ ಶ್ವಾಸಾಗ್ನಿಯಿಂದ ನಷ್ಟವಾದ ಪ್ರಭೆಯುಳ್ಳವರಾಗಿ ಧೂಮ್ರವರ್ಣಗಳಾದ ವಸ್ತ್ರಗಳೂ ಹಾರಗಳೂ ಕವಚಗಳೂ ಮುಖಗಳೂ ಉಳ್ಳವರಾದ ದೇವತೆಗಳನ್ನು ಕುರಿತು ಭಗವಂತನ ಅಧೀನಗಳಾದ ಮೇಘಗಳು ವರ್ಷಿಸಿದವು; ಸಮುದ್ರದ ತೆರೆಗಳಿಂದ ಮಿಶ್ರಗಳಾದ ವಾಯುಗಳು ಬೀಸಿದವು; ಈಪ್ರಕಾರ ಮಥಿಸಲ್ಪಡುವ ಸಮುದ್ರದಿಂದ ಅಮೃತವು ಯಾವಾಗ ಉತ್ಪನ್ನವಾಗದೆ ಹೋಯಿತೋ ಆಗ ಅಪರಾಜಿತನಾದ ಭಗವಂತನು ತಾನೇ ಸಮುದ್ರವನ್ನು ಮಥನಂಗೈದನು! ಅದೆಂತೆನೆ: ಭಗವಂತನು ಮೇಘಕ್ಕೆ ಸಮಾನವಾದ ಕಾಂತಿಯಿಂದ ಹೊಳೆಯುತ ಪೀತಾಂಬರಧಾರಿಯಾಗಿ ಶ್ರೋತ್ರದಲ್ಲಿ ಜೋಲುತಲಿರುವ ರತ್ನಕುಂಡಲಗಳುಳ್ಳವನಾಗಿ ಶಿರಸ್ಸಿನಲ್ಲಿ ಚದರಿದ ಕೇಶಗಳುಳ್ಳವನಾಗಿ ವನಮಾಲಾಧಾರಿಯಾಗಿ ಕೆಂಪಾದ ದಿವ್ಯಗಂಧದಿಂದ ಲಿಪ್ತನಾಗಿ ಮೂರುಲೋಕಗಳಿಗೂ ಅಭಯಪ್ರದಗಳಾದ ಜಯಶಾಲಿಗಳಾದ ನಾಲ್ಕುಭುಜಗಳಿಂದಲೂ ಮಂದರಪರ್ವತವನ್ನುಧರಿಸಿ ಸರ್ಪರಾಜನಾದ ವಾಸುಕಿಯನ್ನುಗ್ರಹಿಸಿ ಸಮುದ್ರವನ್ನು ಮಥಿಸುವನಾಗಿ ಮತ್ತೊಂದು ಮಹಾ ಪರ್ವತದಂತೆ ಪ್ರಕಾಶಿಸಿದನು; ಈಪ್ರಕಾರ ಮಥಿಸಲ್ಪಡುವ ಸಮುದ್ರದಿಂದ ಹಾಲಾಹಲನಾಮಕವಾದ ಮಹಾ ಕ್ರೂರವಾದ ವಿಷವು ಉತ್ಪನ್ನವಾಯಿತು; ಆ ವಿಷಜ್ವಾಲೆಗಳಿಂದ ಸಮುದ್ರದಲ್ಲಿರುವ ಮತ್ಸ್ಯಗಳು ಮಕರಗಳು ಕೂರ್ಮಗಳು ನೀರಾನೆಗಳು ಮಹಾ ಮೊಸಳೆಗಳು ತಿಮಿತಿಮಿಂಗಲಗಳೆಂಬ ಮಹಾಮತ್ಸ್ಯಗಳೇ ಮೊದಲಾದ ಜಲಜಂತುಗಳ ಸಮೂಹವು ತಪಿಸಲ್ಪಟ್ಟು ತೇಲಾಡಿದವು; ದಿಕ್ಕುದಿಕ್ಕುಗಳಲ್ಲಿಯೂ ಉಗ್ರವೇಗವುಳ್ಳದ್ದಾಗಿ ಉಪರಿಭಾಗದಲ್ಲೂ ಅಧೋಭಾಗದಲ್ಲೂ ವ್ಯಾಪಿಸುತಲಿರುವದಾಗಿ ಸಹಿಸಲಶಕ್ಯವಾಗಿ ಸುತ್ತುತಲಿರುವ ಮಹಾ ಕಾಲಕೂಟವಿಷವನ್ನುನೋಡಿ ಭೀತರಾಗಿ ದೇವಾಸುರರು ತಮ್ಮ ತಮ್ಮ ನಾಯಕರೊಡನೆ ಕೂಡಿ ಒಬ್ಬರಿಂದಲೂ ರಕ್ಷಿಸಲ್ಪಡದೆ ಪಲಾಯಿತರಾಗಿ ಸಾಕ್ಷಾತ್ ಸದಾಶಿವನಾದ ಪರಮೇಶ್ವರನನ್ನು ಶರಣುಹೊಂದಿದರು; ಲೋಕತ್ರಯಕ್ಷೇಮಾರ್ಥವಾಗಿ ಪಾರ್ವತೀದೇವಿಯೊಡನೆ ಕೈಲಾಸಪರ್ವತದಲ್ಲಿ ದಿವ್ಯಸಿಂಹಾಸನದಲ್ಲಿ ಕುಳಿತು ಮಹರ್ಷಿಗಳಿಗೆ ಪ್ರಿಯನಾದ ಮಹಾಮುಕ್ತ್ಯರ್ಥವಾಗಿ ತಪಸ್ಸನ್ನಾಚರಿಸುವ ದೇವಶ್ರೇಷ್ಠನಾದ ಪರಮೇಶ್ವರನನ್ನು ಕುರಿತು ಸ್ತುತಿಗಳಿಂದ ನಮಸ್ಕರಿಸಿದರು.

ಪ್ರಜೇಶ್ವರರು "ಎಲೈ ದೇವದೇವನಾದ ಸರ್ವಭೂತಾತ್ಮಕನಾದ ಸರ್ವಭೂತಕರ್ತೃವಾದ ಶ್ರೀ ಪರಮೇಶ್ವರನೇ, ಲೋಕತ್ರಯವನ್ನು ದಹಿಸುವ ಮಹಾವಿಷದಿಂದ ಭೀತರಾಗಿ ಶರಣಾಗತರಾಗಿ ಬಂದಿರುವ ನಮ್ಮನ್ನು ರಕ್ಷಿಸು! ಸರ್ವಜಗತ್ತುಗಳ ಬಂಧಮೋಕ್ಷಕ್ಕೆ ನೀನೊಬ್ಬನೇ ಈಶ್ವರನು; ಶರಣಾಗತರಾದವರ ಕಷ್ಟವನ್ನು ಪರಿಹರಿ

ಸುವ ನಿನ್ನನ್ನೇ ಮಹಾತ್ಮರು ಪೂಜಿಸುವರು! ಎಲೈ ಪ್ರಭುವಾದ ಪರಮೇಶ್ವರನೆ, ಗುಣತ್ರಯಮಯವಾದ ಸ್ವಮಾಯಾಶಕ್ತಿಯಿಂದ ಈ ಜಗತ್ತಿನ ಸೃಷ್ಟಿಸ್ಥಿತಿ ಲಯಗಳನ್ನು ಯಾವಾಗ ನೀನು ಮಾಡುತ್ತೀಯೋ ಆಗ ಬ್ರಹ್ಮ ವಿಷ್ಣು ರುದ್ರರೆಂಬ ನಾಮಧೇಯಗಳನ್ನು ಧರಿಸುತ್ತೀಯೆ! ಎಲೈ ಸ್ವಪ್ರಕಾಶನಾದ ಪರಬ್ರಹ್ಮನಾದ ಪರಮೇಶ್ವರನೇ, ನೀನು ಗೂಢವಾದ ಪರಬ್ರಹ್ಮವು; ನೀನು ಸದಸದಾತ್ಮಕವಾದ ಪ್ರಪಂಚಕ್ಕೆ ಸೃಷ್ಟಿಕರ್ತೃವು; ನಾನಾರೂಪವಾದ ಮಾಯಾಶಕ್ತಿಯಿಂದ ಜಗದೀಶ್ವರನಾದ ನೀನೊಬ್ಬನೇ ಅನೇಕ ರೂಪಗಳಿಂದ ಪ್ರಕಾಶಿಸುತ್ತೀಯೆ! ಎಲೈ ಶ್ರೀಪರಮೇಶ್ವರನೇ, ನೀನೇ ಶಬ್ದಾತ್ಮಕವಾದ ವೇದಕ್ಕೆ ಕಾರಣನಾದವನು; ಜಗದಾದಿಭೂತವಾದ ಮಹತ್ತತ್ವವು ನೀನೆ; ಪ್ರಾಣೇಂದ್ರಿಯದ್ರವ್ಯಗಳಿಗೆ ಕಾರಣಗಳಾದ ರಜಸ್ಸತ್ವತಮೋಗುಣಗಳ ಸ್ವಭಾವವುಳ್ಳ ಅಹಂಕಾರತತ್ವವೂ ನೀನೆ; ಕಾಲರೂಪನೂ ಸಂಕಲ್ಪರೂಪನೂ ಸತ್ಯವೂ ಧರ್ಮವೂ ನೀನೆ; ತ್ರಿಗುಣಾತ್ಮಕವಾದ ಪ್ರಧಾನವು ನಿನ್ನ ಅಧೀನವೆಂದು ಮಹಾತ್ಮರು ಹೇಳುವರು; ಸರ್ವದೇವಾತ್ಮಕನಾದ ಅಗ್ನಿಯೇ ನಿನ್ನ ಮುಖವು! ಎಲೈ ಜಗತ್ಕಾರಣನಾದ ಪರಮೇಶ್ವರನೆ, ಭೂಮಿಯನ್ನು ನಿನ್ನ ಪಾದವನ್ನಾಗಿ ಹೇಳುವರು; ಕಾಲವನ್ನು ಸರ್ವ ವೇದಾತ್ಮಕನಾದ ನಿನ್ನ ಗಮನವನ್ನಾಗಿ ಹೇಳುವರು; ದಿಕ್ಕುಗಳನ್ನು ನಿನ್ನ ಶ್ರೋತ್ರಗಳನ್ನಾಗಿಯೂ ವರುಣನು ನಿನ್ನ ರಸೇಂದ್ರಿಯವನ್ನಾಗಿಯೂ ಹೇಳುವರು! ಎಲೈ ಭಗವಂತನಾದ ಪರಮೇಶ್ವರನೆ, ಅಂತರಿಕ್ಷವೇ ನಿನ್ನ ನಾಭಿಯು; ವಾಯುವೇ ನಿನ್ನ ಶ್ವಾಸವು; ಸೂರ್ಯನೇ ನಿನ್ನ ಚಕ್ಷುಸ್ಸು; ಉದಕವೇ ನಿನ್ನ ರೇತಸ್ಸು; ಉತ್ಕೃಷ್ಟಾಪಕೃಷ್ಟಗಳಾದ ಜೀವಗಳಿಗೆ ಆಶ್ರಯವಾದ ಅಹಂಕಾರವೇ ನಿನ್ನ ಸ್ವರೂಪವು; ಚಂದ್ರನೇ ನಿನ್ನ ಮನಸ್ಸು; ಸ್ವರ್ಗವೇ ನಿನ್ನ ಶಿರಸ್ಸು! ಎಲೈ ಪರಮೇಶ್ವರನೇ, ಸಮುದ್ರಗಳೇ ನಿನ್ನ ಉದರವು; ಪರ್ವತಗಳೇ ನಿನ್ನ ಅಸ್ಥಿಗಳು; ಸಮಸ್ತಗಳಾದ ಓಷಧಿಗಳೇ ನಿನ್ನ ರೋಮಗಳು; ಛಂದಸ್ಸುಗಳೇ ನಿನ್ನ ಸಪ್ತಧಾತುಗಳು; ವೇದಸ್ವರೂಪನಾದ ಈಶ್ವರನೇ ನಿನ್ನ ಹೃದಯವು! ಎಲೈ ಮಹಾದೇವನೇ, ತತ್ಪುರುಷ ಅಘೋರ ಸದ್ಯೋಜಾತ ವಾಮದೇವ ಈಶಾನರೂಪಗಳಾದ ಪಂಚಬ್ರಹ್ಮಮಂತ್ರಗಳೇ ನಿನ್ನ ಪಂಚಮುಖಗಳು; ಆ ಪಂಚಮಂತ್ರಗಳೇ ಪದವಿಭಾಗಕ್ರಮದಿಂದ ಮೂವತ್ತೆಂಟು ಮಂತ್ರಗಳಾಗುವವು; ಸ್ವಪ್ರಕಾಶವಾದ ಶಿವಾಖ್ಯವಾದ ಪರಮಾತ್ಮತತ್ವವ್ಯಾವದುಂಟೋ ಅದೇ ನಿನ್ನ ಸ್ವರೂಪವು! ಎಲೈ ಈಶ್ವರನೆ, ಅಧರ್ಮಜನ್ಯಗಳಾದ ಡಂಭ ಲೋಭಾದಿಗಳಲ್ಲಿ ನಿನ್ನ ಛಾಯೆಯು ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಕಾರಣಗಳಾದ ರಜಸ್ಸತ್ವ ತಮೋಗುಣಗಳೇ ನಿನ್ನ ಮೂರು ನೇತ್ರಗಳು; ಛಂದೋಮಯವಾದ ಅನಾದಿಸಿದ್ಧವಾದ ಸರ್ವಮಂತ್ರ ಸಮೂಹರೂಪವಾದ ವೇದವು ಮಂತ್ರಪ್ರವರ್ತಕನಾದ ನಿನ್ನ ನೋಟವು! ಎಲೈ ಪರಮೇಶ್ವರನೆ, ಯಾವ ಸ್ವಪ್ರಕಾಶರೂಪನಾದ ಪರಬ್ರಹ್ಮನಲ್ಲಿ ಗುಣತ್ರಯವಿಲ್ಲವೋ ನಿರಾಕೃತವಾದ ಭೇದವುಳ್ಳ ಯಾವ ಸ್ವಯಂಜ್ಯೋತಿಯು ಸಮಸ್ತವಾದ ಧಿಕ್ಪಾಲಕರಿಗೂ ಬ್ರಹ್ಮನಿಗೂ ವಿಷ್ಣುವಿಗೂ ಇಂದ್ರನಿಗೂ ತಿಳಿಯಲಶಕ್ಯವೋ ಆ ಪರಬ್ರಹ್ಮನೇ ನೀನು! ಎಲೈ ಪರಮೇಶ್ವರನೆ, ಯಾವ ನೀನು ಪ್ರಳಯಕಾಲದಲ್ಲಿ ಸ್ವಕೀಯವಾದ ಲಲಾಟನೇತ್ರದಲ್ಲಿ ಜ್ವಲಿಸುವ ಅಗ್ನಿಯ ಕಿಡಿಗಳಿಂದ ಭಸ್ಮೀಭೂತವಾದ ಈ ಜಗತ್ತನ್ನು ನೋಡುವದಿಲ್ಲವೋ ಅಂಥಾ ನಿನಗೆ ಮನ್ಮಥನು ದಕ್ಷನು ತ್ರಿಪುರಗಳು ಯಮನು ಗಜಾಸುರನು ಇವರೇ ಮೊದಲಾದ ಪ್ರಾಣಿಕಂಟಕರನ್ನು ನಿಗ್ರಹಿಸೋಣವೆಂಬ ವ್ಯಾಪಾರಗಳು ವರ್ಣಿಸಲ್ಪಡುವವಾದರೆ ಆ ವರ್ಣನೆಯು ನಿನಗೆ ಸ್ತುತಿಯಾಗಲಾರದು! ಎಲೈ ಸ್ವಾಮಿಯೆ, ಯಾವ ಮೂಢರಾದ ಪಾಮರರು ಬ್ರಹ್ಮನಿಷ್ಠರಾದ ಮಹಾಯೋಗಿಗಳಿಂದ ಹೃದಯದಲ್ಲಿ ಧ್ಯಾನಿಸಲ್ಪಡುವ ಪಾದಯುಗ್ಮವುಳ್ಳವನಾಗಿ ಪಾರ್ವತೀದೇವಿಯೊಡನೆ ಸಂಚರಿಸುತ ತಪಸ್ಸನ್ನು ಮಾಡುತಲಿರುವ ಪ್ರಪಂಚರಕ್ಷಕನಾದ ನಿನ್ನನ್ನು ಕಾಮುಕನನ್ನಾಗಿಯೂ ಉಗ್ರನನ್ನಾಗಿಯೂ ಸ್ಮಶಾನವಾಸಿಯನ್ನಾಗಿಯೂ ದುರ್ಭಾಷೆಗಳಿಂದ ದೂಷಿಸುತ್ತಾರೆಯೋ ಲಜ್ಜಾಶೂನ್ಯರಾದ ಆ ಪುರುಷರು ನಿನ್ನ ವಿಲಾಸವನ್ನರಿಯದ ಅವಿವೇಕಿಗಳು! ಎಲೈ ಕಾರ್ಯಕಾರಣನಾಮಕನಾದ ಪರಮೇಶ್ವರನೆ, ಅದುಕಾರಣ ಆ ಬ್ರಹ್ಮಾದಿಗಳೂ ಕೂಡ ಅಪರಿಚ್ಛಿನ್ನನಾದ ಅಂಥಾ ನಿನ್ನ ರೂಪವನ್ನು ತಿಳಿಯುವದರಲ್ಲಿ ಸಮರ್ಥರಾಗುವದಿಲ್ಲ; ಅತ್ಯಂತ ನಿಕೃಷ್ಟರಾದ ನಮ್ಮಂಥಾವರು ನಿನ್ನನ್ನು ಸ್ತುತಿಸುವದಕ್ಕೆ ಹ್ಯಾಗೆ ಸಮರ್ಥರಾದೇವು; ಆದಾಗ್ಯೂ ನಮ್ಮ ಶಕ್ತ್ಯನುಸಾರವಾಗಿ ಸ್ತುತಿಗೈಯ್ಯುತ್ತೇವೆ! ಎಲೈ ಮಹೇಶ್ವರನೆ, ಅವ್ಯಕ್ತವಾದ ಕರ್ಮವುಳ್ಳ ನಿನ್ನ ವ್ಯಾಪಾರವು ಲೋಕಗಳನ್ನು ಸುಖಪಡಿಸುವದಕ್ಕೋಸ್ಕರವೇ ಸರಿ" ಎಂದು ಸ್ತುತಿಸಿದರು.

"ಈರೀತಿಯಲ್ಲಿ ಸ್ತುತಿಗೈಯುತ ದೀನರಾಗಿ ವ್ಯಸನಪಡುವ ದೇವತೆಗಳನ್ನು ನೋಡಿ ದಯಾಶಾಲಿಯಾದ ಸರ್ವಪ್ರಾಣಿಹಿತಕರನಾದ ಭಗವಂತನಾದ ಪರಮೇಶ್ವರನು ಪ್ರೀತಿಪಾತ್ರಳಾದ ಪಾರ್ವತೀದೇವಿಯನ್ನು ಕುರಿತು 'ಎಲೈ ಪಾರ್ವತಿಯೆ, ಕ್ಷೀರಸಮುದ್ರಮಥನದಿಂದುತ್ಪನ್ನವಾದ ಕಾಲಕೂಟನಾಮಕವಾದ ಮಹಾ ವಿಷದಿಂದುಂಟಾದ ದುಃಖವು ದೇವಾಸುರರಿಗೆ ಪ್ರಾಪ್ತವಾಯಿತು; ನೋಡಿದೆಯಲ್ಲಾ! ಕಟಕಟಾ—ಅದರಿಂದ ಪ್ರಾಣಿಗಳನ್ನು ರಕ್ಷಿಸಿಕೊಳ್ಳುವದಕ್ಕೆ ಶಕ್ತರಲ್ಲದೆ ಕಷ್ಟಪಡುತಲಿರುವ ಈ ಪ್ರಜೆಗಳಿಗೆ ಅಭಯಪ್ರಧಾನಂಗೈದು ಇವರನ್ನು ರಕ್ಷಿಸಬೇಕು; ಪ್ರಭುಗಳಾದವರಿಗೆ ದೀನರಾದ ಈ ಪ್ರಜೆಗಳನ್ನು ರಕ್ಷಿಸುವದೇ ಕೆಲಸವಲ್ಲದೆ ಮತ್ತೇನೂ ಇಲ್ಲ; ಲೋಕದಲ್ಲಿ ಈಶ್ವರಮಾಯೆಯಿಂದ ಮೋಹಿತರಾಗಿ ಪರಸ್ಪರ ಕ್ರೋಧಾವಿಷ್ಟರಾಗಿ ಪ್ರಬಲರಾದವರು ದುರ್ಬಲರಾದವರನ್ನು ಸಂಹಾರಂಗೈಯುತಿರಲಾಗಿ ಸತ್ಪುರುಷರು ಪ್ರಾಣಗಳನ್ನು ಅನಿತ್ಯಗಳೆಂದು ತಿಳಿದು ತಮ್ಮ ಪ್ರಾಣಗಳನ್ನಾದರೂ ಕೊಟ್ಟು ಅನ್ಯರ ಪ್ರಾಣಗಳನ್ನು ರಕ್ಷಿಸುವರು! ಎಲೈ ಮಂಗಳಕರಳಾದ ದೇವಿಯೆ, ಪ್ರಾಣಿಗಳಲ್ಲಿ ದಯೆಯುಳ್ಳ ಪುರುಷನಲ್ಲಿ ಹರಿಯು ಪ್ರಸನ್ನನಾಗುವನು; ಭಗವಂತನಾದ ಹರಿಯು ಪ್ರೀತನಾದರೆ ಚರಾಚರಪ್ರಪಂಚಾತ್ಮಕನಾದ ನಾನೂ ಪ್ರೀತನಾಗುತ್ತೇನೆ; ಅದರಿಂದ ಈ ಕಾಲಕೂಟವಿಷವನ್ನು ನಾನು ಭಕ್ಷಿಸುತ್ತೇನೆ; ನನ್ನ ಪ್ರಜೆಗಳಿಗೆ ಕ್ಷೇಮವುಂಟಾಗಲಿ' ಎಂದು ಜಗದೀಶ್ವರನಾದ ಪರಮೇಶ್ವರನು ಪಾರ್ವತೀದೇವಿಯನ್ನು ಒಡಂಬಡಿಸಿ ಆ ವಿಷವನ್ನು ಭಕ್ಷಿಸುವದಕ್ಕೆ ಉದ್ಯುಕ್ತನಾದನು; ಆ ಪರಮೇಶ್ವರನ ಮಹಿಮೆಯನ್ನು ತಿಳಿದಿರುವ ಪಾರ್ವತೀದೇವಿಯು ಆ ಅರ್ಥವನ್ನಂಗೀಕರಿಸಿ ಸಂತೋಷಪಟ್ಟಳು; ಅನಂತರದಲ್ಲಿ ಸರ್ವಭೂತಭಾವನನಾದ ಮಹಾದೇವನು ಕೃಪೆಯಿಂದ ಲೋಕವ್ಯಾಪಿಯಾದ ಮಹಾವಿಷವನ್ನು ಹಸ್ತದಲ್ಲಿ ಗುಳಿಗೆಯನ್ನು ಮಾಡಿ ಭಕ್ಷಿಸಿದನು; ಜಲಕಲ್ಮಷರೂಪವಾದ ಹಲಾಹಲನಾಮಕವಾದ ವಿಷವು ಆ ಪರಮೇಶ್ವರನ ಕಂಠದಲ್ಲಿ ನೀಲವರ್ಣವನ್ನುಂಟುಮಾಡಿತು; ಆ ನೈಲ್ಯವು ಪರಮೇಶ್ವರನಿಗೆ ಭೂಷಣವಾಯಿತು; ಲೋಕದಲ್ಲಿ ಸತ್ಪುರುಷರು ಪರರ ಸಂತಾಪದಿಂದ ತಾವು ವ್ಯಸನಪಡುವರು; ಅದರಿಂದ ಪರರ ಸಂತಾಪವನ್ನು ಪರಿಹರಿಸುವದೇ ಪರಮೇಶ್ವರಾರಾಧನವು; ದೇವದೇವನಾದ ಪರಮೇಶ್ವರನಿಂದ ಆಚರಿಸಲ್ಪಟ್ಟ ವಿಷಭಕ್ಷ್ಯವ್ಯಾಪಾರವನ್ನು ನೋಡಿ ಸಮಸ್ತ ಪ್ರಜೆಗಳೂ ಪಾರ್ವತಿಯು ಬ್ರಹ್ಮನು ವಿಷ್ಣುವು ಎಲ್ಲರೂ ಶ್ಲಾಘನೆಯನ್ನು ಮಾಡಿದರು; ಪರಮೇಶ್ವರನು ವಿಷವನ್ನು ಭಕ್ಷಿಸುವಾಗ ಹಸ್ತದಿಂದ ಚದರಿ ಸ್ವಲ್ಪ ಬಿಂದುಮಾತ್ರ ವಿಷವು ಕೆಳಕ್ಕೆ ಬೀಳಲು ಅದರ ಲೇಶಗಳನ್ನು ಸರ್ಪಗಳು ವೃಶ್ಚಿಕಗಳು ಮೊಂಡರಕಪ್ಪೆಗಳು ಮೊದಲಾದ ವಿಷವುಳ್ಳ ಪ್ರಾಣಿಗಳು ಗ್ರಹಿಸಿದವು."

೮ನೇ ಅಧ್ಯಾಯ.

ಅಮೃತೋತ್ಪತ್ತಿಯು.

"ಎಲೈ ಅರಸೆ, ಪರಮೇಶ್ವರನಿಂದ ವಿಷವು ಪಾನಂಗೈಯಲ್ಪಟ್ಟಮೇಲೆ ದೇವಾಸುರರು ಸಂತುಷ್ಟಚಿತ್ತರಾಗಿ ವೇಗದಿಂದ ಸಮುದ್ರವನ್ನು ಮಥಿಸಿದರು; ಆಗ ಸಮುದ್ರವು ಮಥಿಸಲ್ಪಡುತಲಿರಲಾಗಿ ಆ ಸಮುದ್ರದಿಂದ ಕಾಮಧೇನುವು ಪುಟ್ಟಿತು; ಬ್ರಹ್ಮವಾದಿಗಳಾದ ಮಹರ್ಷಿಗಳು ಹೋಮಸಾಧನವಾದ ಆ ಕಾಮಧೇನುವನ್ನು ಬ್ರಹ್ಮಲೋಕಪ್ರಾಪ್ತಿಮಾರ್ಗಪ್ರಾಪಕವಾದ ಹವಿರ್ದ್ರವ್ಯಕ್ಕೋಸ್ಕರ ಗ್ರಹಿಸಿದರು; ಅನಂತರದಲ್ಲಿ ಚಂದ್ರನಂತೆ ಶುಭ್ರವಾದ ಉಚ್ಚೈಶ್ರವಸ್ಸೆಂಬ ನಾಮಧೇಯವುಳ್ಳ ದಿವ್ಯಾಶ್ವವು ಪುಟ್ಟಿತು; ಆ ಅಶ್ವದಲ್ಲಿ ಬಲಿಚಕ್ರವರ್ತಿಯು ಅಪೇಕ್ಷೆಯನ್ನು ಮಾಡಿದನು; ಭಗವಂತನ ಆಜ್ಞೆಯಿಂದ ಇಂದ್ರನು ಅಪೇಕ್ಷೆಯನ್ನು ಮಾಡಲಿಲ್ಲ; ಅನಂತರದಲ್ಲಿ ಐರಾವತನಾಮಕವಾದ ಮಹಾಗಜವು ನಾಲ್ಕು ದಂತಗಳಿಂದ್ಯುಕ್ತವಾಗಿ ಪರಮೇಶ್ವರನ ಕೈಲಾಸಪರ್ವತದ ಕಾಂತಿಯನ್ನು ಪಹರಿಸುವದಾಗಿ ಪುಟ್ಟಿತು! ಎಲೈ ಪರೀಕ್ಷಿದ್ರಾಯನೆ, ಆ ಬಳಿಕ ನಿನ್ನೋಪಾದಿಯಲ್ಲಿ ಸಮಸ್ತಜನರ ಇಷ್ಟಾರ್ಥಗಳನ್ನೂ ಯಾಚಕರ ಮನೋರಥ ಪೂರ್ಣವನ್ನೂ ಮಾಡುವ ದೇವಲೋಕಕ್ಕೆ ಭೂಷಣವಾದ ಪಾರಿಜಾತವೃಕ್ಷವು

ಹುಟ್ಟಿತು ; ಅನಂತರದಲ್ಲಿ ದಿವ್ಯಹಾರಗಳಿಂದಲಂಕೃತವಾದ ಕಂಠವುಳ್ಳವರಾಗಿ ದಿವ್ಯದುಕೂಲಗಳನ್ನು ಧರಿಸಿ ಮನೋಹರವಾದ ಮಂದಗಮನದಿಂದಲೂ ವಿಲಾಸಗಳಿಂದಲೂ ಕಟಾಕ್ಷಪ್ರಸಾರಗಳಿಂದಲೂ ದೇವತೆಗಳನ್ನು ಮೋಹಪಡಿಸುವ ಅಪ್ಸರಸ್ತ್ರೀಯರು ಜನಿಸಿದರು ; ಅನಂತರದಲ್ಲಿ ಸುದಾಮವೆಂಬ ಪರ್ವತದಿಕ್ಕಿನಲ್ಲಿ ಉತ್ಪನ್ನವಾದ ದಿವ್ಯ ಮಿಂಚಿನಂತೆ ದಿಕ್ಕುಗಳನ್ನು ಬೆಳಗುತ ಸಾಕ್ಷಾನ್ಮಹಾಲಕ್ಷ್ಮೀದೇವಿಯು ಭಗವಂತನಾದ ಶ್ರೀ ನಾರಾಯಣನಲ್ಲಿ ಪ್ರೇಮಾತಿಶಯದಿಂದ ಬಯಸುತಲಿರುವವಳಾಗಿ ಜನಿಸಿದಳು ; ಆ ಲಕ್ಷ್ಮೀದೇವಿಯು ಸೌಂದರ್ಯದಿಂದಲೂ ದಿವ್ಯವಾದ ಯೌವ್ವನ ವಯಸ್ಸಿನಿಂದಲೂ ವರ್ಣದಿಂದಲೂ ವಿಲಾಸಗಳಿಂದಲೂ ಅಪಹರಿಸಲ್ಪಟ್ಟ ಮನಸ್ಸುಳ್ಳವರಾಗಿ ಸುರಾಸುರ ಮನುಷ್ಯಸಹಿತರಾದ ಸರ್ವರೂ ಆ ದೇವಿಯಲ್ಲಿ ಮನಸ್ಸನ್ನು ಮಾಡಿದರು ; ಆಗ ಮಹೇಂದ್ರನು ಆ ಲಕ್ಷ್ಮೀದೇವಿಗೆ ವಿಸ್ತಾರವಾದ ಪೀಠವನ್ನು ತಂದುಕೊಟ್ಟನು ; ಸ್ತ್ರೀರೂಪವನ್ನು ಧರಿಸಿದ ಮಹಾನದಿಗಳು ಆ ಲಕ್ಷ್ಮೀದೇವಿಗೆ ಅಭಿಷೇಕಾರ್ಥವಾಗಿ ಸುವರ್ಣ ಕಲಶಗಳಿಂದ ಶುದ್ಧವಾದ ಉದಕವನ್ನು ತಂದರು ; ಭೂದೇವಿಯು ಅಭಿಷೇಕಸಾಧನಗಳಾದ ದಿವ್ಯೌಷಧಿಗಳನ್ನು ತಂದಳು ; ಗೋವುಗಳು ಪಂಚಗವ್ಯದ್ರವ್ಯವನ್ನು ತಂದಿತ್ತವು ; ವಸಂತಋತುವು ಚೈತ್ರ ವೈಶಾಖಮಾಸಗಳಲ್ಲಿ ಆಗುವ ಫಲ ಪುಷ್ಪಗಳನ್ನು ತಂದುಕೊಟ್ಟನು ; ಆಮೇಲೆ ಮಹರ್ಷಿಗಳು ಯಥಾಶಾಸ್ತ್ರವಾಗಿ ಅಭಿಷೇಕವನ್ನು ಮಾಡಿದರು ; ಗಂಧರ್ವರು ಗಾನಂಗೈದರು ; ದೇವಸ್ತ್ರೀಯರು ನರ್ತನವನ್ನು ಮಾಡಿದರು ; ಮೇಘಗಳು ಮೃದಂಗ ಪಣವ ಆನಕ ಶೃಂಗಗಳನ್ನು ಧ್ವನಿಗೈಸಿದವು ; ಶಂಖಗಳು ವೀಣೆಗಳನ್ನು ಕೊಳಲುಗಳನ್ನು ಧ್ವನಿಗೈಸಿದವು ; ದಿಗ್ಗಜಗಳು ಸುವರ್ಣ ಕಲಶಗಳಿಂದ ಮಹರ್ಷಿಗಳ ಮಂತ್ರಸೂಕ್ತಪೂರ್ವಕವಾಗಿ ಪದ್ಮಹಸ್ತಳಾದ ಶ್ರೀದೇವಿಯನ್ನು ಅಭಿಷೇಕಮಾಡಿದವು ; ಸಮುದ್ರರಾಜನು ಹಳದಿವರ್ಣವುಳ್ಳ ಪಟ್ಟೆಶೀರೆಗಳನ್ನು ಇತ್ತನು ; ವರುಣನು ಮಕರಂದಪಾನದಿಂದ ಮತ್ತವಾದ ಭ್ರಮರ ಸಮೂಹವುಳ್ಳ ವೈಜಯಂತಿನಾಮಕವಾದ ಮಾಲೆಯನ್ನಿತ್ತನು ; ವಿಶ್ವಕರ್ಮನು ವಿಚಿತ್ರಗಳಾದ ಭೂಷಣಗಳನ್ನಿತ್ತನು ; ಸರಸ್ವತಿಯು ದಿವ್ಯವಾದ ಮೌಕ್ತಿಕಹಾರವನ್ನಿತ್ತಳು ; ಸರ್ಪಗಳು ಕುಂಡಲಗಳನ್ನಿತ್ತವು ; ಅನಂತರದಲ್ಲಿ ಶ್ರೀದೇವಿಯು ಮಂಗಳಸ್ನಾನಪೂರ್ವಕವಾಗಿ ಸರ್ವಾಭರಣಗಳನ್ನೂ ದಿವ್ಯ ವಸ್ತ್ರಗಳನ್ನೂ ಧರಿಸಿ ಧ್ವನಿಗೈಯುತ್ತಿರುವ ಭ್ರಮರಗಳುಳ್ಳ ಪದ್ಮೋತ್ಪಲಮಾಲೆಯನ್ನು ಹಸ್ತದಲ್ಲಿ ಪಿಡಿದು ಕಪೋಲಗಳಲ್ಲಿ ಪೊಳೆಯುತಲಿರುವ ರತ್ನಕುಂಡಲಗಳಿಂದ ಶೋಭಿಸುವ ಲಜ್ಜಾಯುಕ್ತವಾದ ಮುಗುಳುನಗೆಯುಳ್ಳ ದಿವ್ಯಮುಖವನ್ನು ಧರಿಸಿರುವವಳಾಗಿ ಮಂದಗಮನದಿಂದ ಸಂಚರಿಸಿದಳು ; ಕೃಶವಾದ ಮಧ್ಯಭಾಗವುಳ್ಳ ಆ ಲಕ್ಷ್ಮೀದೇವಿಯು ಕುಂಕುಮ ಚಂದನಗಳಿಂದ ಲಿಪ್ತವಾಗಿ ಪರಸ್ಪರವಾಗಿ ಕಿಕ್ಕಿರಿಸುವದಾಗಿ ಸಮಪ್ರಮಾಣವುಳ್ಳ ಮನೋಹರವಾದ ಸ್ತನದ್ವಯವನ್ನು ಕುಲಿಕಿಸುವಳಾಗಿ ಪಾದಾಭರಣಗಳ ಮನೋಹರವಾದ ಧ್ವನಿಗಳಿಂದ ಲ್ಲಲ್ಲಿ ಸಂಚರಿಸುವವಳಾಗಿ ಸ್ವರ್ಣಲತೆಯಂತೆ ಪ್ರಕಾಶಿಸಿದ್ದಳು ; ಆ ಲಕ್ಷ್ಮೀದೇವಿಯು ಗಂಧರ್ವರು ಸಿದ್ಧರು ಅಸುರರು ಯಕ್ಷರು ಚಾರಣರು ದೇವತೆಗಳು ಮೊದಲಾದ ಸಮಸ್ತ ಜನರಲ್ಲಿಯೂ ನಿತ್ಯಗಳಾದ ಸಮಸ್ತ ಗುಣಗಳುಳ್ಳ ತನಗೆ ಯೋಗ್ಯವಾದ ನಿರ್ದೋಷವಾದ ಸ್ಥಿರವಾದ ಆಶ್ರಯವನ್ನು ಹುಡಿಕೊಳ್ಳುವಳಾಗಿ ಯಾರನ್ನೂ ಸಮ್ಮತಿಸದೆ ಆಲೋಚನಂಗೈದಳು ! ಅದೆಂತೆನೆ : ಯಾವ ಪುರುಷನಿಗೆ ತಪಸ್ಸುಂಟೋ ಅವನಿಗೆ ಕೋಪಜಯವೂ ಸಂಗವರ್ಜಿತವಾದ ಜ್ಞಾನವೂ ಇಲ್ಲ ; ದೂರ್ವಾಸಾದಿ ಋಷಿಗಳಲ್ಲಿ ಮಹಾ ತಪಸ್ಸಿದ್ದಾಗ್ಯೂ ಕೋಪಾದಿಗಳಿಗೆ ಶಾಂತಿಯಿಲ್ಲ ; ಬ್ರಹ್ಮಾದಿಗಳಲ್ಲಿ ಮಹಿಮೆಯಿದ್ದಾಗ್ಯೂ ಕಾಮಜಯವಿಲ್ಲ ; ಇಂದ್ರಾದಿಗಳಲ್ಲಿ ಐಶ್ವರ್ಯವಿದ್ದಾಗ್ಯೂ ಅವರು ಪರಾಧೀನರು ; ಪರಶುರಾಮಾದಿಗಳಲ್ಲಿ ಧರ್ಮವಿದ್ದಾಗ್ಯೂ ಪ್ರಾಣಿಗಳಲ್ಲಿ ಮೈತ್ರಿಯಿಲ್ಲ ; ಶಿಬಿಮೊದಲಾದವರಲ್ಲಿ ತ್ಯಾಗಗುಣವಿದ್ದಾಗ್ಯೂ ಅದು ಮುಕ್ತಿಗೆ ಕಾರಣವಲ್ಲ ; ಕಾರ್ತವೀರ್ಯಾದಿಗಳಲ್ಲಿ ಶೌರ್ಯವಿದ್ದಾಗ್ಯೂ ಕಾಲಗತಿಯಿಂದುಂಟಾಗುವ ಜರಾಮರಣಗಳು ಅವರಿಗೆ ತಪ್ಪುವದಿಲ್ಲ ; ಸನಕಾದಿಗಳು ವಿರಕ್ತರಾದರೂ ಮಾರ್ಕಂಡೇಯಾದಿಗಳಲ್ಲಿ ದೀರ್ಘಾಯುಷ್ಯವಿದ್ದಾಗ್ಯೂ ನನಗೆ ಯೋಗ್ಯವಾದ ಶೀಲಸ್ವಭಾವವಿಲ್ಲ ; ಅವರು ಜಿತೇಂದ್ರಿಯರು ; ಹಿರಣ್ಯಕಶಿಪು ಮೊದಲಾದವರಲ್ಲಿ ಶೀಲಸ್ವಭಾವವುಂಟಾದಾಗ್ಯೂ ಈಶ್ವರದ್ವೇಷದಿಂದ ಆಯುಸ್ಸಿನ ವಿಷಯದಲ್ಲಿ ನಂಬಿಕೆಯಿಲ್ಲ ; ಪರಮೇಶ್ವರನಲ್ಲಿ ಈ ಉಭಯಗುಣಗಳಿದ್ದಾಗ್ಯೂ ಆತನು ಸ್ಮಶಾನವಾಸಾದಿಗಳಿಂದ ಅಮಂಗಲನಾಗಿ ತೋರುತ್ತಾನೆ ; ಸರ್ವ

ಗುಣಸಂಪನ್ನನಾಗಿ ಮಂಗಳಕರನಾದವನು ಒಬ್ಬನಿದ್ದಾಗ್ಯೂ ಆ ಪುರುಷನು ನನ್ನನ್ನಪೇಕ್ಷಿಸುವದಿಲ್ಲ' ಎಂದು ಈಪ್ರಕಾರದಲ್ಲಿ ಆ ಲಕ್ಷ್ಮೀದೇವಿಯು ಆಲೋಚಿಸಿ ನಿತ್ಯಗಳಾದ ಸದ್ಗುಣಗಳಿಂದ ಶ್ರೇಷ್ಠನಾಗಿ ತನಗೆ ಐದುವದಕ್ಕೆ ಯೋಗ್ಯವಾದ ಗುಣಶಾಲಿಯಾಗಿ ಸಮಸ್ತ ಕಲ್ಯಾಣಗುಣಗಳಿಂದ ಶ್ಲಾಘ್ಯನಾದ ನಿರಪೇಕ್ಷನಾದ ಮುಕುಂದನನ್ನೇ ತನಗೆ ಸಮ್ಮತನನ್ನಾಗಿ ತಿಳದು ಶ್ರೀದೇವಿಯು ಮದಿಸಿದ ಭ್ರಮರಸಮೂಹದಿಂದ ನಾದಿತವಾದ ರಮಣೀಯ್ಯವಾದ ನೂತನ ಪದ್ಮಮಾಲೆಯನ್ನು ಆ ಭಗವಂತನ ಕಂಠಪ್ರದೇಶದಲ್ಲಿ ಹಾಕಿ ಲಜ್ಜಾಯುಕ್ತವಾದ ಮುಗುಳುನಗೆಯಿಂದ ವಿಕಸಿತವಾದ ಮುಖಪದ್ಮವುಳ್ಳವಳಾಗಿ ಆ ಭಗವಂತನ ವಕ್ಷಸ್ಥಳದಲ್ಲಿ ತನಗೆ ವಾಸವನ್ನಾಲೋಚಿಸಿ ಸಮೀಪಕ್ಕೆ ಹೋಗಿ ಸುಮ್ಮನೆ ನಿಂತಳು; ಅನಂತರದಲ್ಲಿ ಶ್ರೀ ಭಗವಂತನು ನಾನಾವಿಧಗಳಾದ ಐಶ್ವರ್ಯಗಳುಳ್ಳ ಆ ಲೋಕಮಾತೃವಾದ ಶ್ರೀದೇವಿಗೆ ತನ್ನ ವಕ್ಷಸ್ಥಳವನ್ನೇ ಉತ್ಕೃಷ್ಟವಾದ ನಿವಾಸಸ್ಥಾನವನ್ನಾಗಿ ಮಾಡಿದನು; ಆ ಲಕ್ಷ್ಮಿಯು ಭಗವಂತನ ವಕ್ಷಸ್ಥಳದಲ್ಲಿದ್ದುಕೊಂಡು ಮೂರು ಲೋಕಗಳನ್ನೂ ತತ್ಪತಿಗಳನ್ನೂ ತನ್ನ ಪ್ರಜೆಗಳನ್ನಾಗಿ ಭಾವಿಸಿ ದಯಾಯುಕ್ತವಾದ ಕಟಾಕ್ಷದಿಂದ ಪೋಷಿಸಿದಳು; ಆ ಸಮಯದಲ್ಲಿ ಶಂಖಗಳು ಭೇರಿಗಳು ಮೃದಂಗಗಳು ಇನ್ನು ನಾನಾವಿಧಗಳಾದ ವಾದ್ಯಭೇದಗಳ ಧ್ವನಿಯು ಬೆಳೆಯಿತು; ಗಂಧರ್ವರ ಗಾನಗಳೂ ದೇವಸ್ತ್ರೀಯರ ನಾಟ್ಯವೂ ಉಂಟಾಯಿತು; ಬ್ರಹ್ಮ ರುದ್ರ ಅಂಗಿರಸ್ಸು ಮೊದಲಾದ ಪ್ರಜೇಶ್ವರರು ಪುಷ್ಪವರ್ಷಗಳನ್ನು ಕರೆಯುತ ವಿಷ್ಣುಪ್ರತಿಪಾದಕಗಳಾದ ಮಂತ್ರಗಳಿಂದ ಸ್ತುತಿಸಿದರು; ಈಪ್ರಕಾರ ಪ್ರಜೇಶ್ವರರಿಂದ ಕೂಡಿದ ಸಮಸ್ತ ದೇವತೆಗಳೂ ಪ್ರಜೆಗಳೂ ಮಹಾಲಕ್ಷ್ಮಿಯಿಂದ ಕಟಾಕ್ಷಿಸಲ್ಪಟ್ಟವರಾಗಿ ಶೀಲಾದಿಗುಣಸಂಪನ್ನರಾಗಿ ಸುಖವನ್ನೈದಿದರು; ಆಗ ಮಹಾಲಕ್ಷ್ಮಿಯಿಂದುಪೇಕ್ಷಿತರಾದ ದೈತ್ಯದಾನವರು ಬಲಹೀನರಾಗಿ ನಿಸ್ತೇಜಸ್ಕರಾಗಿ ವಿಕಲಚಿತ್ತರಾಗಿ ಉದ್ಯೋಗಶೂನ್ಯರಾಗಿ ಬುದ್ಧಿಹೀನರಾದರು; ಅನಂತರದಲ್ಲಿ ಪದ್ಮಸಮಾನವಾದ ನೇತ್ರವುಳ್ಳ ಕನ್ಯಾರೂಪಳಾದ ವಾರುಣಿದೇವಿಯು ಹುಟ್ಟಿದಳು; ಆ ಸುರೆಯನ್ನು ಭಗವಂತನ ಸಮ್ಮತಿಯಿಂದ ಅಸುರರು ಗ್ರಹಿಸಿದರು! ಎಲೈ ಪರೀಕ್ಷಿದ್ರಾಯನೆ, ಅಮೃತಾರ್ಥಿಗಳಾಗಿರುವ ದೇವಾಸುರರಿಂದ ಮಥಿಸಲ್ಪಡುವ ಸಮುದ್ರದದೆಶೆಯಿಂದ ಪರಮಾಶ್ಚರ್ಯಕರನಾದ ಒಬ್ಬ ಪುರುಷನು ಹುಟ್ಟಿದನು; ಆ ಪುರುಷನೆಂಥಾವನೆಂದರೆ: ದೀರ್ಘವಾದ ಸ್ಥೂಲವಾದ ಬಾಹುದಂಡವುಳ್ಳವನಾಗಿ ಶಂಖದೋಪಾದಿಯಲ್ಲಿ ರೇಖಾತ್ರಯವಿಶಿಷ್ಟವಾದ ಕಂಠವೂ ಕೆಂಪಾದ ನೇತ್ರವೂ ಶ್ಯಾಮಲವರ್ಣವೂ ಉಳ್ಳವನಾಗಿ ಯೌವನಶಾಲಿಯಾಗಿ ದಿವ್ಯವಾದ ಹಾರವನ್ನು ಧರಿಸಿ ಸರ್ವಾಭರಣಭೂಷಿತನಾಗಿರುವನು; ಮತ್ತು ಪೀತಾಂಬರಧಾರಿಯಾಗಿ ವಿಸ್ತಾರವಾದ ವಕ್ಷಸ್ಥಳವುಳ್ಳವನಾಗಿ ಪೊಳೆಯುವ ರತ್ನಕುಂಡಲಧಾರಿಯಾಗಿ ಮೃದುವಾದ ವಕ್ರವಾದ ಕೇಶಸಮೂಹವುಳ್ಳವನಾಗಿ ಮುಗುಳುನಗೆಯೂ ಸಿಂಹದಂತೆ ನಡೆಯೂ ಉಳ್ಳವನಾಗಿರುವ ಸಾಕ್ಷಾದ್ಭಗವಂತನ ಅಂಶಾವತಾರನಾದ ಆಯುರ್ವೇದವಾದ ವೈದ್ಯಶಾಸ್ತ್ರಕ್ಕೆ ಪ್ರವರ್ತಕನಾದ ಯಜ್ಞಭಾಗಭೋಕ್ತೃವಾದ ಧನ್ವಂತರಿಯೆಂಬ ನಾಮಧೇಯವುಳ್ಳ ಆ ಮಹಾಪುರುಷನು ಅಮೃತಪೂರ್ಣವಾದ ಕಲಶವನ್ನು ಧರಿಸಿ ಅಲ್ಲಿ ಆವಿರ್ಭವಿಸಿದನು; ಅಸುರರು ಆತನನ್ನೂ ಅಮೃತಪೂರ್ಣವಾದ ಕಲಶವನ್ನೂ ನೋಡಿ ಸರ್ವೇಷ್ಟಾರ್ಥಗಳನ್ನೈದಲಿಚ್ಛೆಯುಳ್ಳವರಾಗಿ ಅಮೃತಕಲಶವನ್ನಪಹರಿಸಿಕೊಂಡು ಹೋಗುತಿರಲಾಗಿ ದೇವತೆಗಳು ಖಿನ್ನಮನಸ್ಕರಾಗಿ ಭಗವಂತನನ್ನು ಶರಣುಹೊಂದಿದರು; ಈಪ್ರಕಾರವಾದ ದೇವತೆಗಳ ದೈನ್ಯವನ್ನು ನೋಡಿ ಭಗವಂತನು 'ಎಲೈ ದೇವತೆಗಳಿರಾ, ನೀವು ವ್ಯಸನಪಡಬೇಡಿ; ನಿಮ್ಮ ಕೆಲಸವನ್ನು ಅನುಕೂಲಮಾಡಿಕೊಡುವೆನು' ಎಂದು ನುಡಿದನು. ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಆ ಅಮೃತದಲ್ಲಿ ಅಪೇಕ್ಷೆಯಿಂದ ಆ ಅಸುರರಿಗೆ ಪರಸ್ಪರವಾಗಿ ಅಮೃತವು ನನಿಗೆ ಬರಬೇಕೆಂದೂ ನಿನಗೆ ಕೆಲಸವಿಲ್ಲವೆಂದೂ ವಾಗ್ವಾದಪೂರ್ವಕವಾಗಿ ಕಲಹವುಂಟಾಯಿತು; ಆಗ ದುರ್ಬಲರಾದ ಕೆಲವರು ಅಸುರರು ಪ್ರಯಾಸವು ಎಲ್ಲರಿಗೂ ಸಮವಾದ್ದರಿಂದ ಸತ್ರಯಾಗದಲ್ಲಿ ಫಲವೆಲ್ಲರಿಗೂ ಎಂತು ಸಮವೊ ಹಾಗೆ ಈಗಲೂ ಫಲವು ಸಮವಾಗಬೇಕು; ದೇವತೆಗಳೂ ನಮ್ಮಂತೆ ಪ್ರಯಾಸಪಟ್ಟವರಾದಕಾರಣ ಅವರಿಗೆ ಅರ್ಧಭಾಗ ಕೊಡತಕ್ಕದ್ದು; ಇದು ಅನಾದಿಧರ್ಮವು; ಎಂದು ಮತ್ಸರವುಳ್ಳ ದುರ್ಬಲರಾದ ದೈತ್ಯರು ಬಲಿಷ್ಠರಾದ ಅಸುರರನ್ನು ಕುರಿತು ಗಂಟುವ್ಯವಹಾರವನ್ನು ಮಾಡಿದರು; ಹೀಗಿರುತಿರಲಾಗಿ ಸರ್ವೋಪಾಯಗಳನ್ನು ತಿಳದ ಸರ್ವೇಶ್ವರ

ನಾದ ಶ್ರೀವಿಷ್ಣುವು ಅತ್ಯಾಶ್ಚರ್ಯಕರವಾದ ವರ್ಣಿಸಲಶಕ್ಯವಾದ ಸ್ತ್ರೀರೂಪವನ್ನು ಧರಿಸಿದನು ; ಆ ಸ್ತ್ರೀರೂಪವೆಂಥಾದ್ದೆಂದರೆ : ಮನೋಹರವಾದ ನೈದಲೆಯಂತೆ ಶ್ಯಾಮವರ್ಣವುಳ್ಳದ್ದಾಗಿಯೂ ಸರ್ವಾಂಗಗಳಲ್ಲಿಯೂ ಸೌಂದರ್ಯವುಳ್ಳದ್ದಾಗಿಯೂ ಮನೋಹರಂಗಳಾದ ಕರ್ಣಾಭರಣಗಳಿಂದ ಶೋಭಿತವಾಗಿ ಸುಂದರವಾದ ಕಪೋಲದ್ವಯವುಳ್ಳದ್ದಾಗಿಯೂ ಉನ್ನತವಾದ ನಾಶಿಕವುಳ್ಳದ್ದಾಗಿಯೂ ನೂತನವಾದ ಯವ್ವನದಿಂದ ಹೊಳೆಯುತಲಿರುವ ಸ್ತನಭಾರದಿಂದ ಕೃಶವಾದ ಮಧ್ಯಭಾಗವುಳ್ಳದ್ದಾಗಿಯೂ ಮುಖಸೌರಭ್ಯದಿಂದಿರುವ ಭ್ರಮರಗಳ ಝುಂಕಾರದಿಂದ ಚಂಚಲಗಳಾದ ಲೋಚನಗಳುಳ್ಳದ್ದಾಗಿಯೂ ಮನೋಹರವಾದ ಕಂಠಾಭರಣವುಳ್ಳದ್ದಾಗಿಯೂ ದಿವ್ಯಗಳಾದ ಭುಜಕೀರ್ತಿಯಿಂದೊಪ್ಪುವ ಭುಜಗಳುಳ್ಳದ್ದಾಗಿಯೂ ವಿಕಸಿತವಾದ ಮಲ್ಲಿಕಾಪುಷ್ಪಗಳ ಮಾಲೆಗಳಿಂದಲಂಕೃತವಾದ ಕೇಶಭಾರವುಳ್ಳದ್ದಾಗಿಯೂ ನಿರ್ಮಲವಾದ ದುಕೂಲದಿಂದ ಆಚ್ಛಾದಿತವಾದ ನಿತಂಬಗಳ ಕಾಂತಿಯಿಂದೊಪ್ಪುವ ಒಡ್ಯಾಣದಿಂದ ಶೋಭಿತವಾಗಿಯೂ ಮನೋಹರವಾಗಿ ಚಲಿಸುತಲಿರುವ ಪಾದಗಳಲ್ಲಿ ಧ್ವನಿಗೈಯ್ಯುವ ಪಾದಾಭರಣವುಳ್ಳದ್ದಾಗಿಯೂ ಸ್ವಲ್ಪ ಲಜ್ಜಾಯುಕ್ತವಾದ ಮುಗುಳುನಗೆಯಿಂದ ಚಲಿತಗಳಾದ ಹುಬ್ಬುಗಳುಳ್ಳ ವಿಲಾಸಯುಕ್ತಗಳಾದ ಕಟಾಕ್ಷಪ್ರಸಾರಗಳಿಂದ ದೈತ್ಯೇಶ್ವರರ ಹೃದಯಗಳಲ್ಲಿ ಬಾರಿಬಾರಿಗೂ ಕಾಮೋದ್ರೇಕವನ್ನುಂಟುಮಾಡುವದಾಗಿಯೂ ಇರುವ ಸರ್ವೋತ್ತಮವಾದ ದಿವ್ಯ ಸ್ತ್ರೀರೂಪವನ್ನು ಧರಿಸಿದನು.''

೯ನೇ ಅಧ್ಯಾಯ.

ಭಗವಂತನು ಸ್ತ್ರೀರೂಪದಿಂದ ಅಸುರರನ್ನು ಮೋಹನಡಿಸಿ ದೇವತೆಗಳಿಗೆ ಅಮೃತಪಾನವನ್ನು ಮಾಡಿಸಿದ್ದು— ರಾಹುವಿನ ಕೊರಳು ಕಡಿಯಲ್ಪಟ್ಟದ್ದು.

ಎಲೈ ಪರೀಕ್ಷಿದ್ರಾಯನೆ, ಈರೀತಿಯಲ್ಲಿ ಅಸುರರು ಪರಸ್ಪರ ಮಿತ್ರತ್ವವನ್ನು ಬಿಟ್ಟು ಅನ್ಯೋನ್ಯ ವಂಚನೆಯಿಂದ ಅಮೃತಕಲಶವನ್ನು ಮತ್ತೊಬ್ಬರಿಗೆ ತೋರಿಸದೆ ರಹಸ್ಯದಲ್ಲಿಟ್ಟುಕೊಂಡು ಚೋರರಂತೆ ಮೋಸಗತಿಯನ್ನು ಮಾಡುತಿರಲಾಗಿ ಆ ಸ್ತ್ರೀಯನ್ನು ಅಸುರರು ಕಂಡರು ; ಆ ಅಸುರರು ಸ್ತ್ರೀದರ್ಶನದಿಂದುತ್ಪನ್ನವಾದ ಕಾಮೋದ್ರೇಕದಿಂದ ಆಶ್ಚರ್ಯಕರವಾದ ಸೌಂದರ್ಯವೂ ಅದ್ಭುತವಾದ ಕಾಂತಿಯೂ ನೂತನವಾದ ಯವ್ವನ ವಯಸ್ಸೂ ಆಶ್ಚರ್ಯಕರವಾಗಿದೆ ಎಂದು ನುಡಿಯುತ ಆ ಸ್ತ್ರೀಸಮೀಪವನ್ನು ಕುರಿತು ವೇಗದಿಂದ ಹೋಗಿ ಪ್ರಶ್ನೆಗೈದರದೆಂತೆನೆ : ಎಲೈ ಪದ್ಮದಳಗಂತೆ ನೇತ್ರವುಳ್ಳ ಸ್ತ್ರೀಯೆ, ನೀನು ಯಾರು ? ಎಲ್ಲಿಂದ ಬರುತ್ತೀಯೆ ? ಏನುಮಾಡಲಿಚ್ಛೈಸುತ್ತೀಯೆ ? ಎಲೈ ಮನೋಹರಗಳಾದ ತೊಡೆಗಳುಳ್ಳ ಸ್ತ್ರೀಯೆ, ನೀನು ಯಾರ ಮಗಳು ಹೇಳು ? ನಮ್ಮ ಮನಸ್ಸುಗಳನ್ನು ಮಥಿಸುತ್ತೀಯೆ ? ದೇವತೆಗಳಿಂದಲೂ ದೈತ್ಯರಿಂದಲೂ ಸಿದ್ಧ ಗಂಧರ್ವ ಚಾರಣರಿಂದಲೂ ಯೋಗೀಶ್ವರರಿಂದಲೂ ಕೂಡ ನೀನು ಸ್ಪರ್ಶಮಾಡಲ್ಪಟ್ಟವಳಲ್ಲವೆಂದು ನಾವು ತಿಳಿಯುತ್ತೇವೆ ! ಎಲೈ ಮನೋಹರಗಳಾದ ಹುಬ್ಬುಗಳುಳ್ಳ ಸ್ತ್ರೀಯೆ, ಪ್ರಾಣಿಗಳ ಸಮಸ್ತಗಳಾದ ಇಂದ್ರಿಯಗಳಿಗೂ ಮನಸ್ಸಿಗೂ ಸಂತೋಷವನ್ನುಂಟುಮಾಡಲೋಸುಗ ದಯಾಶಾಲಿಯಾದ ದೈವದಿಂದ ನೀನು ಕಳುಹಿಸಲ್ಪಟ್ಟಿದ್ದೀಯೋ ಏನೋ ? ಎಲೈ ಸೂಕ್ಷ್ಮವಾದ ಮಧ್ಯಭಾಗವುಳ್ಳ ಸ್ತ್ರೀಯೆ, ಅಮೃತವೆಂಬ ಒಂದು ಪದಾರ್ಥದಲ್ಲಿ ಆಶೆಯಿಂದ ಸ್ಪರ್ಧೆಯನ್ನು ಮಾಡುತಲಿರುವವರಾಗಿ ಪರಸ್ಪರವಾಗಿ ವೈರವನ್ನು ಮಾಡುತಲಿರುವ ಜ್ಞಾತಿಗಳಾದ ನಮಗೆ ವಿವಾದವಿಲ್ಲದಂತೆ ವಿಭಾಗವನ್ನು ಮಾಡು ; ನಾವು ಕಶ್ಯಪನಿಗೆ ಪುತ್ರರಾದವರು ; ಅನ್ಯೋನ್ಯ ಭ್ರಾತೃಗಳು ; ಪೌರುಷವುಳ್ಳವರು ; ನಮಗೆ ಹ್ಯಾಗೆ ವಿರೋಧವಿಲ್ಲದಿರುವದೋ ಹಾಗೆ ನ್ಯಾಯದಿಂದ ವಿಭಾಗವನ್ನು ಮಾಡಿಕೊಡು ; ಈರೀತಿ ದೈತ್ಯರಿಂದ ಆಪ್ತಭಾವದಿಂದ ಆಲೋಚಿಸಲ್ಪಟ್ಟ ಮಾಯಾಸ್ತ್ರೀರೂಪಳಾದ ಮೋಹಿನಿಯು ನಸುನಗುತ ಮನೋಹರವಾದ ಕಟಾಕ್ಷದಿಂದ ನೋಡುತ ಅಸುರರನ್ನು ಕುರಿತು—ಎಲೈ ಅಸುರರಿರಾ, ಕಶ್ಯಪಪುತ್ರರಾದ ನೀವು ಜಾರಿಣಿಯಾದ ನನ್ನಲ್ಲಿ ಹ್ಯಾಗೆ ಆಸಕ್ತಿಯನ್ನು ಮಾ

ಹುತ್ತೀರಿ ; ಪ್ರಾಜ್ಞರಾದವರು ಒಂದು ಕಾಲದಲ್ಲಿಯೂ ಕಾಮುಕಿಯರಾದ ಸ್ತ್ರೀಯರುಗಳಲ್ಲಿ ವಿಶ್ವಾಸವನ್ನು ಮಾಡರು !
ಎಲೈ ದೇವದ್ವೇಷಿಗಳಾದ ದೈತ್ಯರಿರಾ, ನೂತನಗಳಾದ ವಸ್ತುಗಳನ್ನೇ ಹುಡುಕಿಕೊಂಡು ತಿರುಗುತ್ತಿರುವ ಸಾಲಾ
ವೃಕನಾಮಕಗಳಾದ ಮೃಗಗಳ ಮೈತ್ರಿಯೂ ಜಾರಿಣೀರಾದ ಸ್ತ್ರೀಯರ ಸಖ್ಯವು ನಿತ್ಯವಲ್ಲವು ಎಂದು ಮಹಾತ್ಮರು
ಹೇಳುವರು !—ಈರೀತಿಯಲ್ಲಿ ನುಡಿಯುತಲಿರುವ ಆ ಮೋಹಿನಿಯ ಹಾಸವಿಲಾಸಗಳಿಂದ ಮೋಹಿತರಾಗಿ ಪರಮಾ
ನಂದಭರಿತವಾದ ಮನಸ್ಸುಳ್ಳ ಆ ಅಸುರರು ಅಭಿಪ್ರಾಯದಿಂದ ಗಂಭೀರವಾಗಿ ನಗುವವರಾಗಿ ಅಮೃತಕಲಶವನ್ನು
ಮೋಹಿನಿಯ ವಶಕ್ಕೆ ಕೊಟ್ಟರು ; ಅನಂತರದಲ್ಲಿ ಮೋಹಿನಿರೂಪಧಾರಿಯಾದ ಶ್ರೀಹರಿಯು ಆ ಕಲಶವನ್ನು ಕೈಗೆ
ತೆಗೆದುಕೊಂಡು ಮಂದಹಾಸಪೂರ್ವಕವಾಗಿ-ಎಲೈ ಅಸುರರಿರಾ, ನಾನು ಒಳ್ಳೇದನ್ನು ಮಾಡಿದಾಗ್ಯೂ ಅಲ್ಲದ್ದನ್ನು
ಮಾಡಿದಾಗ್ಯೂ ನಿಮಗೆ ಸಮ್ಮತಿಯಾದರೆ ನಾನು ಅಮೃತವಿಭಾಗವನ್ನು ಮಾಡುವೆನು—ಎಂದು ನುಡಿಯುವ ಮೋಹಿ
ನಿಯ ವಾಕ್ಯವನ್ನು ಕೇಳಿ ಆ ಅಸುರಶ್ರೇಷ್ಠರು ಆಕೆಯ ಅಭಿಪ್ರಾಯವನ್ನರಿಯದವರಾದ್ದರಿಂದ--ಹಾಗೇ ಆಗಲಿ-
ದು ಸಮ್ಮತಿಸಿ ಆ ದೇವಾಸುರರು ಸ್ನಾತರಾಗಿ ಉಪವಾಸಪೂರ್ವಕವಾಗಿ ಯಜ್ಞೇಶ್ವರನಲ್ಲಿ ಹವಿರ್ದ್ರವ್ಯವನ್ನು
ಹೋಮಂಗೈದು ಗೋವುಗಳಿಗೂ ಬ್ರಾಹ್ಮಣರಿಗೂ ಕಡಿಮೆ ಪ್ರಾಣಿಗಳಿಗೂ ಯಥಾಯೋಗ್ಯವಾಗಿ ದಾನಾದಿಗಳು
ಮಾಡಿ ಬ್ರಾಹ್ಮಣರಿಂದ ಪುಣ್ಯಾಹಪೂರ್ವಕವಾಗಿ ಸ್ವಸ್ತಿವಚನಗಳಿಂದ ಅನುಗ್ರಹಿತರಾಗಿ ಪರಿಶುದ್ಧ ವಸ್ತ್ರಗಳನ್ನು
ಧರಿಸಿ ಭೂಷಿತರಾಗಿ ಪೂರ್ವಾಗ್ರಗಳ ದರ್ಭಾಸನದಲ್ಲಿ ಪ್ರೀತ್ಯನುಸಾರವಾಗಿ ಕುಳಿತರು ; ಧೂಪಗಳಿಂದ ಪರಿಮಳ
ಕಟ್ಟಲ್ಪಟ್ಟ ದೀಪಗಳಿಂದ ಪುಷ್ಪಮಾಲ್ಯಾದಿಗಳಿಂದ ಅಲಂಕೃತವಾದ ಶಾಲೆಯಲ್ಲಿ ಪೂರ್ವಾಭಿಮುಖವಾಗಿ ದೇವತೆ
ಗಳು ಅಸುರರು ಕುಳಿತರು ! ಎಲೈ ಅರಸೆ, ಅನಂತರದಲ್ಲಿ ಆ ಶಾಲೆಯಲ್ಲಿ ಆ ಮೋಹಿನೀದೇವಿಯು ದಿವ್ಯವಾದ
ದುಕೂಲವಸ್ತ್ರದಿಂದ ಶೋಭಿಸುವ ಕಟಿಪ್ರದೇಶವುಳ್ಳವಳಾಗಿ ಮೆಲ್ಲಮೆಲ್ಲನೆ ಮದದಿಂದ ಸೊಕ್ಕುವ ನೇತ್ರಗಳುಳ್ಳವ
ಳಾಗಿ ಸುವರ್ಣಕಲಶಗಳಿಗೆ ಸಮಾನವಾದ ಕುಚಗಳನ್ನು ಕುಲಿಕಿಸುವಳಾಗಿ ಬಂಗಾರದ ಪಾದಾಭರಣಗಳು ಬೆರಳು
ಗಳಲ್ಲಿರುವ ಕಾಲುಂಗರಗಳು ಘಲ್ಲ ಘಲ್ಲೆಂದು ನಾದವನ್ನು ಗೈಯುತ್ತಿರಲಾಗಿ ಅಮೃತಕಲಶವನ್ನು ಕೈಯಲ್ಲಿ ಹಿಡಿದು
ಮಂದಗಮನದಿಂದ ಬಳುಕುತ ಬಂದಳು ; ಸುವರ್ಣಮಯಗಳಾದ ಕುಂಡಲಗಳು ಕರ್ಣಪೂರಗಳು ಮೂಗುತಿಯು
ಮೊದಲಾದ ಭೂಷಣಗಳಿಂದ ಹೊಳೆಯುವ ನಾಸಿಕವೂ ಕಪೋಲಗಳೂ ಉಳ್ಳ ಮುಖವುಳ್ಳವಳಾಗಿ ಬರುತಲಿರುವ
ಶ್ರೀದೇವಿಗೆ ಸಖಿಯಾದ ಪರದೇವತೆಯಾದ ಆ ಮೋಹಿನಿಯನ್ನು ನೋಡಿ ಆ ದೇವಿಯ ಮಂದಹಾಸಯುಕ್ತಗಳಾದ
ಕಟಾಕ್ಷಪ್ರಸರಣೆಗಳಿಂದ ಮೋಹಿತರಾಗಿ ದೇವಾಸುರರು ಪರವಶರಾದರು ; ಅನಂತರದಲ್ಲಿ ಭಗವಂತನು ಸರ್ಪಗಳಿಗೆ
ಕ್ಷೀರಪಾನದಂತೆ ಅಸುರರಿಗೆ ಅಮೃತಪಾನವು ನ್ಯಾಯವಲ್ಲವೆಂದು ತಿಳಿದು ಸ್ವಭಾವದಿಂದಲೇ ಕ್ರೂರರಾದ ಅಸುರರಿಗೆ
ಅಮೃತವಿಭಾಗವನ್ನು ಮಾಡದೆ ದೇವಾಸುರರಿಗೆ ಬೇರೆಬೇರೆ ಪಙ್ಕ್ತಿಗಳನ್ನು ವಿಂಗಡಿಸಿ ಜಗನ್ನಿಯಾಮಕನಾದ ಭಗ
ವಂತನು ತತ್ತಜ್ಜಾತೀಯರಾದ ಸ್ವಜನರನ್ನು ಒಂದೊಂದು ಗುಂಪಾಗಿ ಕೇರಿಸಿ ಕುಳ್ಳಿರಿಸಿ ಅಮೃತಕಲಶವನ್ನು ಧರಿ
ಸಿಕೊಂಡು ಲೀಲಾವಲೋಕನಗಳಿಂದಲೂ ಮಧುರಾಲಾಪಗಳಿಂದಲೂ ದೈತ್ಯರನ್ನು ವಂಚಿಸಿ ನುಡಿಯುತ ಈ ದೇವ
ತೆಗಳು ಪಂಜಿಗಳು ; ಚಪಲರು ; ಆದ್ದರಿಂದ ಮುಂಚೆ ಇವರು ಸ್ವಲ್ಪ ಅಮೃತವನ್ನು ಪಾನಂಗೈಯಲಿ ; ನೀವು
ದೊಡ್ಡವರು ; ಮಾನಶಾಲಿಗಳು ; ಆದ್ದರಿಂದ ಕ್ಷಣಮಾತ್ರವು ಪ್ರತೀಕ್ಷಿಸಿಕೊಂಡಿರಿ ; ಆಮೇಲೆ ನಿಮ್ಮ ಸಮೀಪಕ್ಕೆ
ಬಂದು ನಿಮಗೆಲ್ಲರಿಗೂ ಬೇಕಾದಷ್ಟು ಅಮೃತವನ್ನು ಕೊಡುತ್ತೇನೆಂದು ಒಡಂಬಡಿಸಿ ದೂರದಲ್ಲಿದ್ದ ದೇವತೆಗಳಿಗೆ
ಜರಾಮರಣ ಪರಿಹಾರಕವಾದ ಅಮೃತವನ್ನು ಪಾನಂಗೈಸಿದನು ; ಆಗ ಅಸುರರು ಮಾತಿಗೆ ಕಟ್ಟುಬಿದ್ದವರಾಗಿ
ಸ್ನೇಹಮುಕ್ತರಾಗಿ ಸ್ತ್ರೀಯೊಡನೆ ವಿವಾದವು ಮಾನವಲ್ಲವೆಂದು ಜಿಗುಪ್ಸೆಯಿಂದ ಆ ಮೋಹಿನಿಯಲ್ಲಿ ಅತ್ಯಂತ
ಸ್ನೇಹವನ್ನು ಬೆಳಸಿದವರಾದ್ದರಿಂದ ಸ್ನೇಹಕ್ಕೆ ಚ್ಯುತಿಬಂದೀತೆಂಬ ಭಯದಿಂದ ಆ ದೇವಿಯಲ್ಲಿ ಬಹುಮಾನದಿಂದ
ಸ್ವಲ್ಪವಾದರೂ ಕಠಿನೋಕ್ತಿಗಳನ್ನು ನುಡಿಯದೆ ಸುಮ್ಮನಿದ್ದರು ; ಆ ಸಮಯದಲ್ಲಿ ರಾಹುನಾಮಕನಾದ ದೈತ್ಯನು
ದೇವರೂಪವನ್ನು ಧರಿಸಿ ದೇವತೆಗಳ ಪಙ್ಕ್ತಿಯಲ್ಲಿ ಸೂರ್ಯ ಚಂದ್ರರ ಮಧ್ಯದಲ್ಲಿ ಕುಳಿತು ಅಮೃತವನ್ನು ಪಾನಂ
ಗೈಯುತ್ತಿರಲು ಆಗ ಸೂರ್ಯಚಂದ್ರರು ಸಂಜ್ಞೆಯಿಂದ ಇವನು ಅಸುರನೆಂದು ದೇವಿಗೆ ಸೂಚನೆಯನ್ನು ಮಾಡಿ

ದರು; ಆಗ ಭಗವಂತನು ಅಮೃತವನ್ನು ಪಾನಂಗೈಯುತಲಿರುವ ಆ ದೈತ್ಯನ ಶಿರಸ್ಸನ್ನು ತೀಕ್ಷ್ಣವಾದ ಚಕ್ರದಿಂದ ಛೇದಿಸಿದನು; ಆ ದೈತ್ಯನ ಶರೀರವು ಕಂಠದಿಂದ ಕೆಳಭಾಗವು ಅಮೃತಸಂಬಂಧರಹಿತವಾದ್ದರಿಂದ ನಿರ್ಜೀವವಾಯಿತು; ಮುಖದಲ್ಲಿ ಅಮೃತವಿದ್ದಕಾರಣ ಆ ಮುಖಮಾತ್ರವು ಜೀವಿಸಿತು; ಭಗವಂತನು ಜರಾಮರಣರಹಿತವಾದ ಆ ಶಿರಸ್ಸನ್ನು ಸೂರ್ಯಾದಿ ಗ್ರಹಗಳಲ್ಲಿ ಸೇರಿಸಿದನು; ಅವನೇ ರಾಹುವೆನಿಸಿಕೊಂಡು ಪರ್ವಕಾಲಗಳಲ್ಲಿ ಆ ವೈರದಿಂದ ಸೂರ್ಯ ಚಂದ್ರರನ್ನು ಗ್ರಹಿಸುವನು; ಅನಂತರದಲ್ಲಿ ದೇವತೆಗಳು ಅಮೃತವನ್ನು ಪಾನಂಗೈದಮೇಲೆ ಭಗವಂತನಾದ ಶ್ರೀ ನಾರಾಯಣನು ಸಮಸ್ತರೂ ನೋಡುವಾಗಲೇ ಮೋಹಿನೀರೂಪವನ್ನು ಬಿಟ್ಟು ನಿಜರೂಪವನ್ನು ಧರಿಸಿದನು!

“ಎಲೈ ಅರಸೆ, ಈರೀತಿಯಲ್ಲಿ ದೇಶವು ಕಾಲವು ಸಾಧನಗಳು ಉದ್ದೇಶವು ಪ್ರಯಾಸವು ಇಷ್ಟು ದೇವಾಸುರರಿಗೆ ಸಮವಾದಾಗ್ಯೂ ಫಲಪ್ರಾಪ್ತಿಯಲ್ಲಿ ಈಶ್ವರಾನುಗ್ರಹವೇ ನಿಯಾಮಕವು; ದೇವಸಮೂಹಗಳು ಭಗವಂತನ ಪಾದವನ್ನಾಶ್ರಯಿಸಿದಕಾರಣ ಅವರಿಗೆ ಅಮೃತಪ್ರಾಪ್ತಿಯುಂಟಾಯಿತು; ದೈತ್ಯರಿಗೆ ಅಮೃತಲಾಭವಾಗಲಿಲ್ಲ; ಮನುಷ್ಯರು ಪ್ರಾಣಗಳಿಂದಲೂ ಧನಗಳಿಂದಲೂ ವ್ಯಾಪಾರಗಳಿಂದಲೂ ಮನೋವಾಕ್ಕಾಯಗಳಿಂದಲೂ ದೇಹ ಪತ್ನೀ ಪುತ್ರಾದಿಗಳ ನಿಮಿತ್ತವಾಗಿ ಯಾವ ಪ್ರಯಾಸವನ್ನು ಮಾಡುತ್ತಾರೆಯೋ ಆ ಪ್ರಯಾಸವು ಭೇದಬುದ್ಧಿವಿಷಯವಾದ್ದರಿಂದ ನಿಷ್ಫಲವು; ಅದೇ ಪ್ರಯಾಸವು ಭಗವಂತನ ವಿಷಯದಲ್ಲಿ ಮಾಡಲ್ಪಟ್ಟರೆ ಸಫಲವಾಗುವದು; ವೃಕ್ಷಕ್ಕೆ ಪ್ರತಿಪರ್ಣಕ್ಕೂ ಉದಕ ಸೇಚನೆಯಿಂದ ಪ್ರಯೋಜನವಿಲ್ಲ; ಮೂಲಕ್ಕೆ ಜಲಸೇಚನೆಯನ್ನು ಮಾಡಿದರೆ ಶಾಖೋಪಶಾಖೆಗಳಿಗೂ ತುಷ್ಟಿಯಾಗುವದು.”

೧೦ನೇ ಅಧ್ಯಾಯ.

ದೇವಾಸುರರು ದ್ವಂದ್ವಯುದ್ಧಂಗೈದದ್ದು.

“ಎಲೈ ಅರಸೆ, ದೈತ್ಯ ದಾನವರು ಈರೀತಿಯಲ್ಲಿ ಸಮುದ್ರಮಥನಕಾರ್ಯದಲ್ಲಿ ಉದ್ಯುಕ್ತರಾಗಿ ಮಹಾಪ್ರಯಾಸಪಟ್ಟವರಾದಾಗ್ಯೂ ವಾಸುದೇವನಲ್ಲಿ ಪರಾಙ್ಮುಖರಾದಕಾರಣ ಅಮೃತವನ್ನು ಪಡೆಯಲಿಲ್ಲ; ಅನಂತರದಲ್ಲಿ ಗರುಡಧ್ವಜನು ಅಮೃತವನ್ನು ಸಾಧಿಸಿ ಸ್ವಜನರಾದ ದೇವತೆಗಳಿಗೆ ಪಾನವನ್ನು ಮಾಡಿಸಿ ಸರ್ವಭೂತಗಳು ನೋಡುತಿರುವಾಗಲೇ ತೆರಳಿಹೋದನು; ದಿತೀಪುತ್ರರಾದ ದೈತ್ಯರು ಶತ್ರುಗಳಾದ ದೇವತೆಗಳ ಅಭ್ಯುದಯವನ್ನು ನೋಡಿ ಸಹಿಸಲಾರದೆ ಧರಿಸಲ್ಪಟ್ಟ ಆಯುಧಗಳುಳ್ಳವರಾಗಿ ದೇವತೆಗಳನ್ನು ಕುರಿತು ಯುದ್ಧಾರ್ಥವಾಗಿ ಹೊರಟುಬಂದರು; ಆಗ ನಾರಾಯಣನ ಪಾದಪದ್ಮಾಶ್ರಿತರಾದ ದೇವತೆಗಳೆಲ್ಲರೂ ಅಮೃತಪಾನದಿಂದ ಅಭಿವೃದ್ಧವಾದ ಬಲ ಶೌರ್ಯವುಳ್ಳವರಾಗಿ ಶಸ್ತ್ರಾಸ್ತ್ರದಿಂದ ದೈತ್ಯರೊಡನೆ ಯುದ್ಧವನ್ನು ಮಾಡಿದರು! ಎಲೈ ಅರಸೆ, ಆ ಸಮುದ್ರತೀರದಲ್ಲಿ ದೇವಾಸುರನಾಮಕವಾದ ಯುದ್ಧವು ಬೆಳೆಯಿತು; ಆ ಯುದ್ಧರಂಗದಲ್ಲಿ ದೇವಾಸುರರು ಮಹಾ ಕೋಪಿಷ್ಠರಾದ ಮನಸ್ಸುಳ್ಳವರಾಗಿ ಖಡ್ಗಗಳಿಂದಲೂ ಬಾಣಗಳಿಂದಲೂ ಶಸ್ತ್ರಾಸ್ತ್ರಗಳಿಂದಲೂ ಪರಿಹರಿಸಿದರು; ಆ ಯುದ್ಧದಲ್ಲಿ ಶಂಖ ಭೇರಿ ಮೃದಂಗಗಳು ಡಮರುಗಗಳು ರಥಗಳು ಪಾದಚಾರಿಗಳು ಇವರುಗಳ ಮಹಾ ಘೋರವಾದ ಶಬ್ದವುಂಟಾಯಿತು; ಆನೆಗಳು ಆನೆಗಳೊಡಗೂಡಿ ಕುದುರೆಗಳು ಕುದುರೆಗಳೊಡಗೂಡಿ ರಥಗಳು ರಥಗಳೊಡಗೂಡಿ ಪಾದಚಾರಿಗಳು ಪಾದಚಾರಿಗಳೊಡಗೂಡಿ ಯುದ್ಧಕ್ಕೆ ತಗಲಿ ಪರಸ್ಪರವಾಗಿ ಯುದ್ಧಂಗೈದರು; ಕೆಲವು ಭಟರು ಒಂಟೆಗಳನ್ನೇರಿಕೊಂಡು ಕೆಲವರು ಗಜಾರೂಢರಾಗಿ ಕೆಲವರು ಗರ್ದಭಗಳನ್ನೇರಿ ಕೆಲವರು ಗೌರಮೃಗಗಳನ್ನೇರಿ ಕೆಲವರು ಕರಡಿಗಳಮೇಲೆ ಕೆಲವರು ವ್ಯಾಘ್ರಗಳಮೇಲೆ ಕೆಲವರು ಸಿಂಹಗಳಮೇಲೆ ಕೆಲವರು ಗೃಧ್ರಗಳನ್ನು ಶ್ಯೇನಪಕ್ಷಿಗಳನ್ನು ಭಾಸಪಕ್ಷಿಗಳನ್ನು ಮಹಾಮತ್ಸ್ಯಗಳನ್ನು ಶರಭಗಳನ್ನು ಕೋಣಗಳನ್ನು ಖಡ್ಗ

ಮೃಗಗಳನ್ನು ವೃಷಭಗಳನ್ನು ಗವಯುಗಳನ್ನು ನರಿಗಳನ್ನು ಇಲಿಗಳನ್ನು ಹೆಂಟೆಗೊರ್ವಗಳನ್ನು ಮೊಲಗಳನ್ನು ಮನುಷ್ಯರನ್ನು ಟಗರುಗಳನ್ನು ಗಂಡು ಹುಲ್ಲೆಗಳನ್ನು ಹಂಸಗಳನ್ನು ಸಾರಸಪಕ್ಷಿಗಳನ್ನು ಮತ್ತು ನಾನಾಪ್ರಕಾರಗಳಾದ ಜಲಜಂತುಗಳನ್ನು ಏರಿಕೊಂಡು ಉಭಯ ಸೇನೆಗಳಲ್ಲಿಯೂ ವೇಗದಿಂದ ನಾಮುಂಚೆ ತಾಮುಂಚೆ ಎಂದು ಪ್ರವೇಶಿಸಿದರು ! ಎಲೈ ಅರಸೆ, ವಿಚಿತ್ರಗಳಾದ ಧ್ವಜಪತ್ರಗಳಿಂದಲೂ ಶುಭ್ರಗಳಾದ ಛತ್ರಗಳಿಂದಲೂ ಅನರ್ಘ್ಯಗಳಾದ ವಜ್ರಮಯಗಳಾದ ದಂಡಮಯಗಳುಳ್ಳ ಚಾಮರಗಳಿಂದಲೂ ಮಹಾವಾಯುಪ್ರಹಾರದಿಂದ ಹಾರಿ ಕೆಳಕ್ಕೆ ಬಿದ್ದ ಪಾಗುಗಳಿಂದ ಪ್ರಕಾಶಿಸುವ ಕಿರೀಟಗಳಿಂದ ಹೊಳೆಯುತಲಿರುವ ನಾನಾರೂಪಗಳಾದ ಶಸ್ತ್ರಂಗಳಿಂದ ಸೂರ್ಯನಂತೆ ಪ್ರಕಾಶಿಸುವ ಆಭರಣಗಳಿಂದಲೂ ಪ್ರಕಾಶಿಸುವ ಮಹಾ ಶೂರರ ಪಙ್ತಿಗಳಿಂದ ದೇವಾಸುರ ಸೈನ್ಯಗಳೆರಡೂ ತಿಮಿ ತಿಮಿಂಗಲಾದಿ ಮಹಾ ಜಲಜಂತುಗಳಿಂದ ಸಮುದ್ರಗಳಂತೆ ಒಪ್ಪಿದವು ; ಅಸುರಪತಿಯಾದ ವಿರೋಚನ ಪುತ್ರನಾದ ಬಲಿಯು ಸ್ವೇಚ್ಛಾಗಮನವುಳ್ಳದ್ದಾಗಿ ಮಯನಿಂದ ನಿರ್ಮಿತವಾಗಿ ಸಮಸ್ತ ಯುದ್ಧ ಸಾಮಗ್ರಿಗಳಿಂದ ಯುಕ್ತವಾಗಿ ಅತ್ಯಾಶ್ಚರ್ಯಕರವಾಗಿ ಊಹಿಸಲಶಕ್ಯವಾಗಿ ನಿಶ್ಚಯಿಸುವದಕ್ಕೆ ಶಕ್ಯವಲ್ಲದೆ ಅದೃಶ್ಯವಾಗಿರುವ ವೈಹಾಯಸನಾಮಕವಾದ ದಿವ್ಯ ವಿಮಾನದಲ್ಲಿ ಕುಳಿತು ಸರ್ವಸೇನಾನಾಯಕರಿಂದ ಕೂಡಿ ಛತ್ರ ಚಾಮರಗಳಿಂದ ಶೋಭಿಸುತ ಆ ಯುದ್ಧರಂಗದಲ್ಲಿ ಚಂದ್ರನಂತೆ ಪ್ರಕಾಶಿಸಿದನು ; ಸೇನಾನಾಯಕರಾದ ಅಸುರರು ತಮ್ಮ ತಮ್ಮ ವಾಹನಗಳನ್ನಾರೂಢರಾಗಿ ಆ ಬಲಿಚಕ್ರವರ್ತಿಗೆ ಸುತ್ತಲೂ ಬಂದರು ; ನಮುಚಿಯು ಶಂಬರನು ಬಾಣನು ವಿಪ್ರಚಿತ್ತಿಯು ಅಯೋಮುಖನು ದ್ವಿಮೂರ್ಧನು ಕಾಲನಾಭನು ಪ್ರಹೇತಿಯು ಹೇತಿನಾಮಕನು ಇಲ್ವಲನು ಶಕುನಿಯು ಭೂತಸಂತಾಪನು ದೇವದುಂದುಭಿಯು ವಿರೋಚನನು ವಜ್ರದಂಷ್ಟ್ರನು ಹಯಗ್ರೀವನು ಶಂಖುಶಿರನು ಕಪಿಲನು ತಾರಕನು ಚಕ್ರದಿಕ್ಕು ಶುಂಭನು ನಿಶುಂಭನು ಜಂಭನು ಉತ್ಕಲನು ಅರಿಷ್ಟನೇಮಿಯು ಮಯನು ಅರಿಷ್ಟನು ತ್ರಿಪುರಾಧಿಪತಿಯು ಇನ್ನೂ ಪೌಲೋಮ ಕಾಲೇಯ ನಿವಾತಕವಚರು ಮೊದಲಾದವರು ; ಇವರೆಲ್ಲರೂ ಪೂರ್ವದಲ್ಲಿ ಬಹು ಪ್ರಕಾರವಾಗಿ ದೇವತೆಗಳನ್ನು ಜೈಸಿದವರಾದಕಾರಣ ಈಗ ಅಮೃತಭಾಗವನ್ನು ಪಡೆಯದೆ ಬರೀ ಶ್ರಮವನ್ನು ಮಾಡಿದವರಾದ್ದರಿಂದ ಬಹುಪ್ರಕಾರ ಕೋಪಾವೇಶವುಳ್ಳವರಾಗಿ ಸಿಂಹನಾದಗಳನ್ನು ಮಾಡುತ ಮಹಾ ಧ್ವನಿಯುಳ್ಳ ಶಂಖಗಳನ್ನು ಧ್ವನಿಸುತ ಅಟ್ಟಹಾಸಗಳನ್ನು ಮಾಡಿದರು ; ಈರೀತಿಯಲ್ಲಿ ಕೊಬ್ಬಿಬರುವ ಶತ್ರುಗಳನ್ನು ನೋಡಿ ದೇವೇಂದ್ರನು ಬಹುಕೋಪವುಳ್ಳವನಾಗಿ ಗಿರಿ ನದಿ ಪ್ರವಾಹಗಳನ್ನು ಸ್ರವಿಸುವ ಉದಯಪರ್ವತವನ್ನು ಸೂರ್ಯನಂತೆ ಮದಧಾರೆಗಳನ್ನು ಸ್ರವಿಸುತಲಿರುವ ದಿಗ್ಗಜವಾದ ಐರಾವತವನ್ನಾರೋಹಣಂಗೈದು ಯುದ್ಧರಂಗವನ್ನು ಪ್ರವೇಶಿಸಿದನು ; ವಾಯುವು ಅಗ್ನಿಯು ವರುಣನು ಇವರೇ ಮೊದಲಾದ ದಿಕ್ಪಾಲಕರು ಸ್ವಸ್ವ ಸೇನೆಗಳಿಂದ ಕೂಡಿ ನಾನಾಪ್ರಕಾರಗಳಾದ ವಾಹನಗಳು ಧ್ವಜಗಳು ಆಯುಧಗಳು ಉಳ್ಳವರಾಗಿ ದೇವೇಂದ್ರನ ಸುತ್ತಲೂ ನಿಂತರು ! ಎಲೈ ಅರಸೆ, ಈರೀತಿಯಲ್ಲಿ ದೇವಾಸುರರು ಪರಸ್ಪರ ನಾಮಗ್ರಹಣಪೂರ್ವಕವಾಗಿ ಕರೆಯುವವರಾಗಿ ಅನ್ಯೋನ್ಯಪ್ರಹಾರಪೂರ್ವಕವಾಗಿ ದ್ವಂದ್ವಯುದ್ಧಂಗೈದರು ; ಬಲಿಯು ದೇವೇಂದ್ರನೊಡನೆ ತಾರಕನೊಡನೆ ಕುಮಾರಸ್ವಾಮಿಯು ವರುಣನು ಹೇತಿನಾಮಕನಾದ ಅಸುರನೊಡನೆ ಮಿತ್ರನು ಪ್ರಹೇತಿನಾಮಕನಾದ ಅಸುರನೊಡನೆ ಯಮನು ಕಾಲನಾಭನೊಡನೆ ವಿಶ್ವಕರ್ಮನು ಮಯನೊಡನೆ ಶಂಬರನು ತ್ವಷ್ಟ್ರುವಿನೊಡನೆ ವಿರೋಚನನು ಸೂರ್ಯನೊಡನೆ ಅಪರಾಜಿತನು ನಮುಚಿಯೊಡನೆ ಅಶ್ವಿನೀದೇವತೆಗಳು ವೃಷಪರ್ವನೊಡನೆ ಸಾಕ್ಷಾತ್ ಸೂರ್ಯನು ಬಲಿಪುತ್ರನಾದ ಬಾಣಾಸುರನೊಡನೆಯೂ ಆ ಬಾಣಾಸುರನಿಗೆ ತಮ್ಮಂದಿರಾದ ನೂರುಮಂದಿಯೊಡನೆಯೂ ಚಂದ್ರನು ರಾಹುವಿನೊಡನೆ ವಾಯುವು ಪುಲೋಮನೊಡನೆ ಭದ್ರಕಾಳಿದೇವಿಯು ಶುಂಭ ನಿಶುಂಭರೊಡನೆ ವೃಷಾಕಪಿಯು ಜಂಭನೊಡನೆ ವಿಭಾವಸುವು ಮಹಿಷಾಸುರನೊಡನೆ ಇಲ್ವಲ ವಾತಾಪಿಗಳು ಬ್ರಹ್ಮಪುತ್ರರೊಡನೆ ದುರ್ಮರ್ಷನು ಮನ್ಮಥನೊಡನೆ ಉತ್ಕಲನು ಮಾತೃಕೆಗಳೊಡನೆ ಬೃಹಸ್ಪತಿಯು ಶುಕ್ರನೊಡನೆ ಶನೈಶ್ಚರನು ನರಕಾಸುರನೊಡನೆ ಮರುತ್ತುಗಳು ನಿವಾತಕವಚರೊಡನೆ ವಸುಗಳು ಕಾಲೇಯರೊಡನೆ ವಿಶ್ವದೇವರು ಪೌಲೋಮರೊಡನೆ ರುದ್ರರು ಕ್ರೋಧವಶರೊಡನೆ ಯುದ್ಧಂಗೈದರು ! ಎಲೈ ಪರೀಕ್ಷಿದ್ರಾಯನೆ, ಈರೀತಿಯಲ್ಲಿ ಆ ದೇವಶ್ರೇಷ್ಠರು ದೈತ್ಯಪತಿಗಳೊಡನೆ

ಕೂಡಿ ದ್ವಂದ್ವಯುದ್ಧಕ್ರಮದಿಂದ ಪರಸ್ಪರ ಜಯೇಚ್ಛೆಯುಳ್ಳವರಾಗಿ ತೀಕ್ಷ್ಣಗಳಾದ ಬಾಣಗಳಿಂದಲೂ ಖಡ್ಗಗಳಿಂದಲೂ ತೋಮರಗಳಿಂದಲೂ ಪ್ರಹರಿಸಿದರು ; ಮುಸಲಗಳಿಂದಲೂ ಚಕ್ರಗಳಿಂದಲೂ ಗದೆಗಳಿಂದಲೂ ಭಲ್ಲೆಗಳಿಂದಲೂ ಪರಿಘೆಗಳಿಂದಲೂ ಮುದ್ಗರಗಳಿಂದಲೂ ಭಿಂಡಿವಾಲಗಳಿಂದಲೂ ಅನ್ಯೋನ್ಯವಾಗಿ ಶಿರಸ್ಸುಗಳನ್ನು ಛೇದಿಸಿದರು ; ಮೇಲೆ ಕುಳಿತು ಯುದ್ಧಂಗೈವ ಭಟರೊಡನೆ ಸಮವಾಗಿ ಆನೆ ಕುದುರೆ ಪದಾತಿಗಳು ನಾನಾಪ್ರಕಾರವಾಗಿ ಛೇದಿಸಲ್ಪಟ್ಟ ಬಾಹುಗಳು ತೊಡೆಗಳು ಕಂಠಗಳು ಪಾದಗಳು ಕತ್ತರಿಸಲ್ಪಟ್ಟ ಧ್ವಜಗಳು ಧನುಸ್ಸುಗಳು ಕವಚಗಳು ಆಭರಣಗಳುಳ್ಳವುಗಳಾದವು ! ಎಲೈ ಅರಸೆ, ಆ ದೇವಾಸುರರ ಪಾದಪ್ರಹಾರಗಳಿಂದಲೂ ಕುದುರೆಗಳ ಕಾಲುಕೊಳಗಗಳ ಸಂಘಟ್ಟನೆಗಳಿಂದಲೂ ರಥಗಳ ಭಂಡಿಗಳ ಸಮ್ಮರ್ದದಿಂದಲೂ ಚೂರ್ಣೀಕೃತವಾದ ಯುದ್ಧಭೂಮಿಯಿಂದುತ್ಪನ್ನವಾದ ಧೂಳಿಯು ಆಕಾಶವನ್ನೂ ದಿಕ್ಕುಗಳನ್ನೂ ಸೂರ್ಯನನ್ನೂ ಕವಿಯಿತು ; ಆಮೇಲೆ ಛೇದಿಸಲ್ಪಟ್ಟ ಸೇನೆಗಳ ಶರೀರಗಳಿಂದ ಸ್ರವಿಸುವ ರಕ್ತಪ್ರವಾಹಗಳಿಂದ ಆ ಧೂಳಿಯು ಅಡಗಿತು ; ವ್ಯತ್ಯಸ್ತಗಳಾದ ಕಿರೀಟ ಕುಂಡಲಗಳೂ ರೋಷಾರುಣವಾದ ನೇತ್ರಗಳೂ ಉಳ್ಳವಾಗಿ ತುಟಿಗಳನ್ನು ಕಚ್ಚಿಕೊಂಡು ಶಸ್ತ್ರಗಳಿಂದ ಛೇದಿಸಲ್ಪಟ್ಟು ಕೆಳಗೆ ಬಿದ್ದಿರುವ ಭಟರ ಶಿರಸ್ಸುಗಳಿಂದಲೂ ಆಯುಧಗಳೊಡನೆಯೂ ಆಭರಣಗಳೊಡನೆಯೂ ಯುಕ್ತಗಳಾದ ಬಾಹುಗಳಿಂದಲೂ ಛೇದಿಸಲ್ಪಟ್ಟ ಛತ್ರಗಳಿಂದಲೂ ಆ ಯುದ್ಧಭೂಮಿಯು ಹರಹಲ್ಪಟ್ಟಿತು ; ಶಿರೋರಹಿತಗಳಾದ ಶರೀರಗಳು ಕತ್ತರಿಸಲ್ಪಟ್ಟು ಕೆಳಗೆ ಬಿದ್ದಿರುವ ತಮ್ಮ ಶಿರಸ್ಸುಗಳಲ್ಲಿರುವ ತಮ್ಮ ನೇತ್ರಗಳಿಂದ ನೋಡುತ ಎತ್ತಲ್ಪಟ್ಟ ಆಯುಧಗಳುಳ್ಳ ಬಾಹುದಂಡವುಳ್ಳವಾಗಿ ಓಡ್ಯಾಡುತ ಪ್ರಾಣಗಳಿರುವಪರ್ಯಂತವೂ ಕುಣಿದಾಡಿದುವು ; ಈಪ್ರಕಾರವಾದ ಮಹಾಯುದ್ಧದಲ್ಲಿ ಬಲಿಚಕ್ರವರ್ತಿಯು ಹತ್ತು ಬಾಣಗಳಿಂದ ದೇವೇಂದ್ರನನ್ನೂ ಮೂರು ಬಾಣಗಳಿಂದ ಐರಾವತವನ್ನೂ ನಾಲ್ಕು ಬಾಣಗಳಿಂದ ಗಜರಕ್ಷಕಗಳಾದ ಅಶ್ವಗಳನ್ನೂ ಒಂದು ಬಾಣದಿಂದ ಆನೆಯ ಮಾವುತನನ್ನೂ ಪ್ರಹರಿಸಿದನು ; ಮಹಾಪರಾಕ್ರಮಿಯಾದ ದೇವೇಂದ್ರನು ಲೀಲೆಯಿಂದಲೂ ಅಷ್ಟುಸಂಖ್ಯೆಯುಳ್ಳ ಭಲ್ಲೆಗಳಿಂದಲೂ ಬರುತಲಿರುವ ಆ ಬಾಣಗಳನ್ನು ಸಮೀಪಕ್ಕೆ ಬರುವದಕ್ಕೆ ಮೊದಲೇ ಛೇದಿಸಿದನು ; ಆಗ ಬಲಿಯು ದೇವೇಂದ್ರನ ಲಾಘವವನ್ನು ನೋಡಿ ಸಹಿಸಲಾರದೆ ಶಕ್ತ್ಯಾಯುಧವನ್ನು ಪ್ರಯೋಗಿಸುವದಕ್ಕೆ ತೆಗೆದನು ; ಕೊಳ್ಳಿಯಂತೆ ಜ್ವಲಿಸುತಲಿರುವ ಆ ಶಕ್ತ್ಯಾಯುಧವನ್ನು ಬಲಿಯು ಹಸ್ತದಲ್ಲಿರುವಾಗಲೇ ದೇವೇಂದ್ರನು ಛೇದಿಸಿದನು ; ಅನಂತರದಲ್ಲಿ ಬಲಿಯು ಶೂಲವನ್ನೂ ಆಮೇಲೆ ಪ್ರಾಸವನ್ನೂ ಆಮೇಲೆ ತೋಮರವನ್ನೂ ಇನ್ನೂ ಯಾವ ಯಾವ ಶಸ್ತ್ರವನ್ನು ಪ್ರಯೋಗಿಸಿದನೋ ಆಯಾ ಶಸ್ತ್ರವನ್ನು ಸಮರ್ಥನಾದ ದೇವೇಂದ್ರನು ಛೇದಿಸಿದನು ; ಆ ಬಳಿಕ ಬಲಿಯು ಅಂತರ್ಧಾನವನ್ನೈದಿ ಅಸುರಸಂಬಂಧಿಯಾದ ಮಾಯೆಯನ್ನು ಸೃಜಿಸಿದನು ; ಆ ಮಾಯಾಬಲದಿಂದ ದೇವಸೇನೆಯ ಉಪರಿಭಾಗದಲ್ಲಿ ಮಹಾಪರ್ವತವು ಆವಿರ್ಭವಿಸಿತು ; ಕಾಡುಗಿಚ್ಚಿನಿಂದ ದಹಿಸಲ್ಪಡುತಲಿರುವ ವೃಕ್ಷಗಳು ಟಂಕಗಳಂತೆ ತೀಕ್ಷ್ಣಗಳಾದ ಅಗ್ರಗಳುಳ್ಳ ಶಿಲೆಗಳು ದೇವಬಲವನ್ನು ಚೂರ್ಣೀಕರಿಸುತ ಸೇನೆಯಲ್ಲಿ ಬಿದ್ದವು ; ಮಹಾಸರ್ಪಗಳು ಮೊಂಡ್ರಗಪ್ಪೆಗಳು ಚೇಳುಗಳು ಸಿಂಹ ವ್ಯಾಘ್ರ ವರಾಹಗಳು ದೇವಸೇನೆಯನ್ನು ಮರ್ದಿಸುತ ಬಿದ್ದವು ; ದಿಗಂಬರರಾದ ಶೂಲಧಾರಿಣಿಯರಾದ ರಾಕ್ಷಸಸ್ತ್ರೀಯರು ಛೇದಿಸು ಭೇದಿಸು ಎಂಬದಾಗಿ ಕೂಗುತ ಅನೇಕ ಸಹಸ್ರಸಂಖ್ಯಾತಗಳಾಗಿ ಬಂದರು ; ಆಕಾಶದಲ್ಲಿ ಮಹಾಮೇಘಗಳು ಘರ್ಜಿಸುತ ಮಹಾ ವಾಯುಗಳಿಂದ ಪ್ರೇರಿತಗಳಾಗಿ ಬೆಂಕಿಕೆಂಡಗಳನ್ನೇ ವರ್ಷಿಸಿದವು ; ಆಗ ದೈತ್ಯನಾಯಕನಿಂದ ನಿರ್ಮಿಸಲ್ಪಟ್ಟ ಮಹತ್ತಾದ ಅಗ್ನಿಯು ಪ್ರಚಂಡವಾತ ಸಹಿತವಾಗಿ ಪ್ರಳಯಕಾಲದ ಅಗ್ನಿಯಂತೆ ದೇವಸೇನೆಯನ್ನು ದಹಿಸಿತು ; ಸಮುದ್ರವು ಪ್ರಚಂಡವಾತಗಳಿಂದೆಬ್ಬಿಸಲ್ಪಟ್ಟ ಮಹತ್ತಾದ ತೆರೆಗಳಿಂದಲೂ ಸುಳಿಗಳಿಂದಲೂ ಭಯಂಕರವಾಗಿ ಮೇರೆದಪ್ಪಿ ಉಕ್ಕಿಬಂದು ಕಾಣಲ್ಪಟ್ಟಿತು ; ಈರೀತಿಯಲ್ಲಿ ಅದೃಶ್ಯವಾದ ಗಮನಾಗಮನಗಳುಳ್ಳ ಮಹಾ ಮಾಯಾಶಾಲಿಗಳಾದ ದೈತ್ಯರಿಂದ ಮಹಾ ಮಾಯೆಗಳು ಸೃಷ್ಟಿಸಲ್ಪಡುತಲಿರಲಾಗಿ ದೇವಸೇನೆಯಲ್ಲಿರುವ ವೀರರು ಭ್ರಮೆಪಟ್ಟರು ; ಆಗ ಇಂದ್ರಾದಿಗಳು ಆ ಮಾಯೆಗಳಿಗೆ ಪ್ರತೀಕಾರವನ್ನು ಮಾಡಲರಿಯದೆ ವಿಶ್ವಭಾವನನಾದ ಭಗವಂತನನ್ನು ಸ್ಮರಿಸಲಾಗಿ ಗರುಡನ ಭುಜದಲ್ಲಿ ಪ್ರಕಾಶಿಸುವ ಪಾದಗಳುಳ್ಳವನಾಗಿ ಪೀತಾಂಬರಧಾರಿಯಾಗಿ ಆಯುಧಗಳಿಂದ ಯುಕ್ತಗಳಾದ ಅಷ್ಟಬಾಹುಗ

ಳುಳ್ಳವನಾಗಿ ವಕ್ಷಸ್ಥಳದಲ್ಲಿ ಪ್ರಕಾಶಿಸುವ ಶ್ರೀದೇವಿಯು ಕೌಸ್ತುಭಮಣಿಯುಳ್ಳವನಾಗಿ ಅಮೂಲ್ಯಗಳಾದ ಕಿರೀಟ ಕುಂಡಲಗಳುಳ್ಳವನಾಗಿ ನೂತನ ಪದ್ಮನಾಳಗಳಂತೊಪ್ಪುವ ನೇತ್ರಗಳುಳ್ಳವನಾಗಿ ಶ್ರೀನಾರಾಯಣನು ಪ್ರತ್ಯಕ್ಷನಾಗಿ ಕಾಣಲ್ಪಟ್ಟನು; ಮಹಾಮಹಿಮೆಯುಳ್ಳ ಭಗವಂತನು ಆ ಯುದ್ಧರಂಗವನ್ನು ಪ್ರವೇಶಿಸಲಾಗಿ ಅಸುರರ ಕಪಟಕೃತಗಳಾದ ಮಾಯೆಗಳು ದುಸ್ವಪ್ನಾನುಭವಕಾಲದಲ್ಲಿ ಪ್ರಾಪ್ತಗಳಾದ ಭಯಕಂಪಾದಿಗಳು ಎಚ್ಚರವಾದಮೇಲೆ ಎಂತು ಇರುವದಿಲ್ಲವೋ ಅಂತು ನಷ್ಟಗಳಾದವು! ಎಲೈ ಅರಸೇ, ಶ್ರೀಹರಿ ಸ್ಮರಣಮಾತ್ರವೇ ಸರ್ವವಿಪತ್ತುಗಳನ್ನು ಪರಿಹರಿಸುವದು; ಹರಿಯೇ ಪ್ರತ್ಯಕ್ಷವಾಗಿ ಬಂದರೆ ಹೇಳತಕ್ಕದ್ದೇನು! ಅನಂತರದಲ್ಲಿ ಕಾಲನೇಮಿಯೆಂಬ ಅಸುರನು ಸಿಂಹಾರೂಢನಾಗಿ ಬಂದು ಯುದ್ಧದಲ್ಲಿ ಗರುಡವಾಹನನನ್ನು ನೋಡಿ ಶೂಲವನ್ನೆತ್ತಿ ಪ್ರಯೋಗಿಸಿದನು; ಭಗವಂತನು ಗರುಡನ ಶಿರಸ್ಸಿನಲ್ಲಿ ಬೀಳುತಲಿರುವ ಆ ಶೂಲವನ್ನು ಲೀಲೆಯಿಂದಲೇ ಹಿಡಿದು ಅದರಿಂದಲೇ ಸಿಂಹಸಹಿತನಾದ ಆ ಕಾಲನೇಮಿಯನ್ನು ಪ್ರಹರಿಸಿದನು; ಮಹಾ ಬಲಶಾಲಿಗಳಾದ ಮಾಲಿ ಸುಮಾಲಿನಾಮಕರಾದ ದೈತ್ಯರನ್ನು ಭಗವಂತನು ಚಕ್ರಾಯುಧದಿಂದ ಛೇದಿಸಲ್ಪಟ್ಟ ಶಿರಸ್ಸುಳ್ಳವರನ್ನಾಗಿ ಮಾಡಿದನು; ಮಾಲ್ಯವಂತನು ಗದೆಯಿಂದ ಆ ಭಗವಂತನನ್ನು ಪ್ರಹರಿಸಿ ಗರುಡನನ್ನು ಪ್ರಹರಿಸಿದನು; ಆಗ ಭಗವಂತನು ಘರ್ಜಿಸುತಲಿರುವ ಆ ಮಾಲ್ಯವಂತನ ಶಿರಸ್ಸನ್ನು ಚಕ್ರಾಯುಧದಿಂದ ಛೇದಿಸಿದನು.

೧೧ ನೇ ಅಧ್ಯಾಯ.

ದೇವತೆಗಳು ಬಲಿಚಕ್ರವರ್ತಿಯೇ ಮೊದಲಾದ ದೈತ್ಯರನ್ನು ಜಯಿಸಿದ್ದು.

“ಎಲೈ ಅರಸೇ, ಅನಂತರದಲ್ಲಿ ಪರಮಪುರುಷನ ಅನುಗ್ರಹದಿಂದ ಅಭಿವೃದ್ಧವಾದ ಬಲವುಳ್ಳ ಇಂದ್ರ ವಾಯು ಮೊದಲಾದ ದೇವತೆಗಳು ಮೊದಲು ಯಾರ ಯಾರ ಸಂಗಡ ದ್ವಂದ್ವಯುದ್ಧವನ್ನು ಪರಾಕ್ರಮಿಸಿದ್ದರೋ ಆಯಾ ದೈತ್ಯರನ್ನು ಪ್ರಹರಿಸಿದರು; ಭಗವಂತನಾದ ದೇವೇಂದ್ರನು ಕೋಪಿಷ್ಠನಾಗಿ ವಿರೋಚನನ ಪುತ್ರನಾದ ಬಲಿಗೋಸ್ಕರ ಯಾವಾಗ ವಜ್ರಾಯುಧವನ್ನೆತ್ತಿದನೋ ಆಗ ಪ್ರಜೆಗಳು ಹಾಹಾ ಎಂದು ವ್ಯಸನಪಟ್ಟರು; ವಜ್ರಪಾಣಿಯಾದ ಇಂದ್ರನು ಕೋಪದಿಂದ ಮುಂದುಗಡೆಯಲ್ಲಿ ನಿಂತವನಾಗಿ ಗಂಭೀರನಾಗಿ ಗುಣಸಂಪನ್ನನಾಗಿ ಮಹಾಯುದ್ಧದಲ್ಲಿ ಸಂಚರಿಸುತಲಿರುವ ಬಲಿಚಕ್ರವರ್ತಿಯನ್ನು ಧಿಕ್ಕರಿಸಿ ‘ಎಲೈ ಮೂಢನಾದ ಬಲಿಯೇ, ಗಾರುಡವಿದ್ಯೆಯನ್ನು ತೋರಿಸುವ ವೇಷಧಾರಿಯು ಕಣ್ಣುಗಟ್ಟುವಿದ್ಯೆಯಿಂದ ಬಾಲಕರನ್ನು ಮೋಸಮಾಡಿ ಅಪರ ಧನವನ್ನು ಹ್ಯಾಗೆ ಅಪಹರಿಸುವನೋ ಹಾಗೆ ನೀನು ಮಾಯೆಗಳಿಗೆ ನಾಥರಾದ ನಮ್ಮನ್ನು ಮಾಯೆಗಳಿಂದ ಜಯಿಸಲಿಚ್ಛೈಸುತ್ತೀಯೆ; ಯಾರಾದಾಗ್ಯೂ ಮಾಯೆಗಳಿಂದ ಸ್ವರ್ಗವನ್ನು ಸಾಧಿಸಲಿಚ್ಛೈಸುವರೋ ಸ್ವರ್ಗವನ್ನು ಲಂಘಿಸುವದಕ್ಕೆ ಇಚ್ಛೈಸುವರೋ ಆ ಶತ್ರುಗಳನ್ನು ನಾನಾದಿಕ್ಕುಗಳಲ್ಲಿಯೂ ಕೊಡಹಿ ಕೆಳಕ್ಕೆ ಕೆಡಹಿಬಿಡುವೆನು! ಎಲೈ ಮೂಢಾತ್ಮನೇ, ಅಂತಹ ನಾನು ನೂರು ಹರಿತಗಳುಳ್ಳ ವಜ್ರಾಯುಧದಿಂದ ದುಷ್ಟಮಾಯೆಯುಳ್ಳ ನಿನ್ನ ಶಿರಸ್ಸನ್ನು ಛೇದಿಸುವೆನು; ನಿನ್ನ ಗುಂಪನ್ನೆಲ್ಲವನ್ನೂ ಕರಕೊಂಡು ಬಾ’ ಎಂದು ನುಡಿದನು.

“ಆ ವಾಕ್ಯವನ್ನು ಕೇಳಿ ಯಶಶ್ಶಾಲಿಯಾದ ಬಲಿಚಕ್ರವರ್ತಿಯು ‘ಎಲೈ ದೇವೇಂದ್ರನೇ, ಕಾಲದಿಂದ ಪ್ರೇರಿತವಾದ ಕರ್ಮಗಳುಳ್ಳವರಾಗಿ ಯುದ್ಧರಂಗದಲ್ಲಿ ಪರಾಕ್ರಮಿಸುವ ವೀರರಿಗೆಲ್ಲರಿಗೂ ಕೀರ್ತಿಯು ಜಯವು ಅಪಜಯವು ಮೃತ್ಯುವು ಕ್ರಮವಾಗಿ ಬರುವವು; ಪ್ರಾಜ್ಞರಾದವರು ಕಾಲಕ್ಕೆ ಅಧೀನವಾಗಿ ಸುಖದುಃಖವನ್ನನುಭವಿಸುವ ಜನರನ್ನು ನೋಡಿ ಸಂತೋಷಪಡುವದೂ ಇಲ್ಲ; ವ್ಯಸನಪಡುವದೂ ಇಲ್ಲ; ನೀವು ಅಪ್ರಾಜ್ಞರಾದಕಾರಣ ಹೀಗೆ ಮಾತಾಡುತ್ತೀರಿ; ಜಯಾದಿಗಳಲ್ಲಿ ಶರೀರವನ್ನೇ ಸಾಧನವನ್ನಾಗಿ ತಿಳಿದು ಅಹಂಭಾವದಿಂದ ಮೂಢರಾದ ನಿಮ್ಮ ಮರ್ಮಸ್ಪೃಕ್ಕುಗಳಾದ ಮಾತುಗಳನ್ನು ನಾವು ಗ್ರಹಿಸುವದಿಲ್ಲ’ ಎಂದು ಆಕರ್ಣಪೂರ್ಣಗಳಾದ ಬಾಣಗಳಿಂದಲೂ

ಪ್ರಹರಿಸಿದನು ; ಪ್ರಮಾಣಿಕಾರ್ಥವನ್ನು ಪೇಳುತಲಿರುವ ಬಲಿಯಿಂದೀರೀತಿ ಧಿಕ್ಕರಿಸಲ್ಪಟ್ಟ ದೇವೇಂದ್ರನು ಅಂಕುಶದಿಂದ ಪ್ರಹರಿಸಲ್ಪಟ್ಟ ಆನೆಯಂತೆ ಈ ಅವಮಾನವನ್ನು ಸಹಿಸಲಾರದೆ ಅಮೋಘವಾದ ವಜ್ರಾಯುಧವನ್ನು ಆ ಬಲಿಯಮೇಲೆ ಪ್ರಯೋಗಿಸಿದನು ; ಆಗ ಆ ಬಲಿಯು ಛೇದಿಸಲ್ಪಟ್ಟ ರೆಕ್ಕೆಗಳುಳ್ಳ ಪರ್ವತದಂತೆ ಆ ವಜ್ರಪ್ರಹಾರದಿಂದ ವಿಮಾನಸಮೇತನಾಗಿ ಕೆಳಗೆ ಬಿದ್ದನು ; ಆಗ ಬಲಿಗೆ ಮಿತ್ರನಾದ ಜಂಭಾಸುರನು ಸಂಹೃತನಾಗಿ ಬಿದ್ದಿರುವ ಬಲಿಯನ್ನು ನೋಡಿ ಇಂದ್ರನನ್ನು ಅಟ್ಟಿಕೊಂಡು ಬಂದು ಸಿಂಹಾರೂಢನಾಗಿ ಗದೆಯನ್ನೆತ್ತಿಕೊಂಡು ವೇಗದಿಂದ ದೇವೇಂದ್ರನನ್ನೂ ಐರಾವತವನ್ನೂ ಪ್ರಹರಿಸಿದನು ; ಗದಾಪ್ರಹಾರದಿಂದ ಪೀಡಿತವಾದ ಆ ಗಜರಾಜವು ಮೂರ್ಛೆಯನ್ನೈದಿ ಮೊಳಕಾಲುಗಳನ್ನು ಊರಿಕೊಂಡು ಭೂಮಿಯಲ್ಲಿ ಬಿತ್ತು ; ಅನಂತರದಲ್ಲಿ ಇಂದ್ರಸಾರಥಿಯಾದ ಮಾತಲಿಯು ಹತ್ತುಸಾವಿರ ಕುದುರೆಗಳನ್ನು ಕಟ್ಟಿರುವ ರಥವನ್ನು ಶೀಘ್ರವಾಗಿ ತಂದನು ; ಆಗ ಇಂದ್ರನು ಆನೆಯನ್ನು ಬಿಟ್ಟು ರಥವನ್ನೇರಿದನು ; ದಾನವೋತ್ತಮನಾದ ಜಂಭನು ಆ ಮಾತಲಿಯ ಜಾಗ್ರತೆಯನ್ನು ನೋಡಿ ಮೆಚ್ಚಿದವನಾಗಿ ನಗುತ ಯುದ್ಧದಲ್ಲಿ ಜ್ವಲಿಸುವ ಶೂಲದಿಂದ ಮಾತಲಿಯನ್ನು ಪ್ರಹರಿಸಿದನು ; ಆಗ ಮಾತಲಿಯು ಧೈರ್ಯವನ್ನವಲಂಬಿಸಿ ಆ ಪ್ರಹಾರವೇದನೆಯನ್ನು ಸಹಿಸಿಕೊಂಡು ರಥವನ್ನು ನಡೆಸುತ್ತಿರಲು ದೇವೇಂದ್ರನು ಕ್ರೋಧವುಳ್ಳವನಾಗಿ ವಜ್ರಾಯುಧದಿಂದ ಜಂಭನ ಶಿರಸ್ಸನ್ನು ಪ್ರಹರಿಸಿದನು ; ಆ ಜಂಭನ ಜ್ಞಾತಿಗಳಾದ ನಮುಚಿಯು ಬಲನು ಪಾಕನು ಎಂಬ ಮೂರುಮಂದಿ ಅಸುರರು ನಾರದನ ಮುಖದಿಂದ ಜಂಭನು ಸಂಹೃತನಾದ್ದನ್ನು ಕೇಳಿ ವೇಗಯುಕ್ತರಾಗಿ ಬಂದರು ; ಆ ಮೂರುಮಂದಿಯೂ ಕ್ರೂರವಾಕ್ಯಗಳಿಂದ ಮರ್ಮಗಳನ್ನು ಭೇದಿಸುತ ಮೇಘಗಳು ಜಲಧಾರೆಗಳಿಂದ ಪರ್ವತವನ್ನು ಭೇದಿಸುವಂತೆ ಬಾಣಗಳಿಂದ ದೇವೇಂದ್ರನನ್ನು ವರ್ಷಿಸಿದರು ; ಬಲಾಸುರನು ಹತ್ತುಸಾವಿರ ಬಾಣಗಳಿಂದ ದೇವೇಂದ್ರನ ಹತ್ತುಸಾವಿರ ರಥಾಶ್ವಗಳನ್ನು ಏಕಕಾಲದಲ್ಲಿ ಅತಿ ಲಾಘವದಿಂದ ಪ್ರಹರಿಸಿದನು ; ಪಾಕನೆಂಬ ಅಸುರನು ಒಂದೇಸಾರಿ ಎರಡು ಬಾಣಗಳನ್ನು ಸಂಧಾನಮಾಡಿ ಇಂದ್ರಸಾರಥಿಯಾದ ಮಾತಲಿಯನ್ನು ಪ್ರಹರಿಸಿ ರಥವನ್ನು ಚೂರ್ಣವನ್ನಾಗಿ ಮಾಡಿದನು ; ನಮುಚಿಯೆಂಬ ಅಸುರನು ಸ್ವರ್ಣಮಯಗಳಾದ ಮಹತ್ತಾದ ಹದಿನೈದು ಬಾಣಗಳಿಂದ ಇಂದ್ರನನ್ನು ಪ್ರಹರಿಸಿ ಮೇಘದಂತೆ ಘರ್ಜಿಸಿದನು ; ಈ ಅಸುರರು ಎಲ್ಲಾಕಡೆಯಲ್ಲಿಯೂ ಬಾಣಸಮೂಹದಿಂದ ಸಾರಥಿಸಮೇತನಾದ ದೇವೇಂದ್ರನನ್ನು ವರ್ಷಾಕಾಲದ ಮೇಘಗಳು ಸೂರ್ಯನನ್ನು ಮರೆಮಾಡುವಂತೆ ಮರೆಮಾಡಿದರು ; ಈಪ್ರಕಾರವಾಗಿ ಬಾಣಸಮೂಹಗಳಿಂದಾಚ್ಛಾದಿತನಾದ ದೇವೇಂದ್ರನನ್ನು ಕಾಣದೆ ಸಪರಿವಾರರಾದ ದೇವತೆಗಳು ಅನಾಥರಾಗಿ ಶತ್ರುಗಳಿಂದ ಪೀಡಿತರಾಗಿ ಸಮುದ್ರದಲ್ಲಿ ಹಡಗು ಹೊಡೆದುಹೋದರೆ ಆಗ ಅದರಲ್ಲಿರುವ ವರ್ತಕರಂತೆ ದೀನಸ್ವರವುಳ್ಳವರಾಗಿ ಕೂಗಿದರು ; ಅನಂತರದಲ್ಲಿ ದೇವೇಂದ್ರನು ಅಶ್ವಗಳಿಂದ ಯುಕ್ತವಾದ ರಥದಿಂದಲೂ ಧ್ವಜದಿಂದಲೂ ಸಮೇತನಾಗಿ ಬಾಣಸಮೂಹವೆಂಬ ಪಂಜರದಿಂದ ತಪ್ಪಿಸಿಕೊಂಡು ಹೊರಕ್ಕೆ ಬಂದವನಾಗಿ ಉದಯಕಾಲದ ಸೂರ್ಯನಂತೆ ಸ್ವಕಾಂತಿಗಳಿಂದ ದಿಕ್ಕುಗಳನ್ನೂ ಆಕಾಶವನ್ನೂ ಭೂಮಿಯನ್ನೂ ಪ್ರಕಾಶಿಸುವಂತೆ ಮಾಡುತ ಯಥಾಪ್ರಕಾರವಾಗಿ ನಿಂತನು ; ಆಗ ದೇವೇಂದ್ರನು ಶತ್ರುಗಳಿಂದ ಪೀಡಿತವಾದ ತನ್ನ ಸೇನೆಯನ್ನು ನೋಡಿ ಕೋಪದಿಂದ ಶತ್ರುಗಳನ್ನು ಸಂಹರಿಸಲೋಸುಗ ನೂರು ಹರಿತಗಳುಳ್ಳ ವಜ್ರಾಯುಧದಿಂದ ದೈತ್ಯರು ನೋಡುತಿರುವಾಗಲೇ ಬಲಪಾಕರೆಂಬ ಈರ್ವರ ಶಿರಸ್ಸುಗಳನ್ನು ಛೇದಿಸಿದನು ! ಎಲೈ ಅರಸೇ, ನಮುಚಿಯು ಬಲಪಾಕರೆಂಬ ಈರ್ವರಸುರರ ವಧವನ್ನು ನೋಡಿ ಮಹಾ ಕೋಪಯುಕ್ತನಾಗಿ ಇಂದ್ರನನ್ನು ಸಂಹರಿಸಲಿಚ್ಛೆಯಿಂದ ಮಹಾಯತ್ನವನ್ನು ಮಾಡುತ ಉಕ್ಕಿನಿಂದ ರಚಿತವಾದ ಘಂಟಾಯುಕ್ತವಾದ ಸ್ವರ್ಣಭೂಷಿತವಾದ ಶೂಲವನ್ನು ಗ್ರಹಿಸಿ ಕೋಪಿಷ್ಠನಾಗಿ—ಎಲೈ ಇಂದ್ರನೇ, ನೀನು ಹತನಾಗುತ್ತೀಯೆ—ಎಂದು ನುಡಿಯುತ ಘರ್ಜಿಸುತ ಆ ಶೂಲವನ್ನು ದೇವೇಂದ್ರನಮೇಲೆ ಪ್ರಯೋಗಿಸಿದನು ; ಆಗ ದೇವೇಂದ್ರನು ಧ್ವನಿಗೈಯ್ಯುತ ಮಹಾವೇಗದಿಂದ ಬರುತಲಿರುವ ಆ ಶೂಲವನ್ನು ಬಾಣಗಳಿಂದ ಸಹಸ್ರಭಾಗವಾಗಿ ಛೇದಿಸಿ ಆ ನಮುಚಿಯ ಕಂಠದಲ್ಲಿ ವಜ್ರಾಯುಧದಿಂದ ಪ್ರಹರಿಸಿದನು ; ದೇವೇಂದ್ರನಿಂದ ಮಹಾಬಲದಿಂ ಪ್ರೇರಿತವಾದ ಮಹಾ ಬಲಿಷ್ಠನಾದ ವೃತ್ರಾಸುರನನ್ನು ಸಂಹರಿಸಿದ ಆ ವಜ್ರವು ನಮುಚಿಯ ಕಂಠದ ಚರ್ಮವನ್ನು ಸಹಾ ಭೇದಿಸಲಾರದೆ ಹೋಯಿ

ತು– ಇದು ಆಶ್ಚರ್ಯವೆಂದು ಎಲ್ಲರೂ ತಿಳಿದರು ; ಆಗ ದೇವೇಂದ್ರನು ಚಿಂತಾಕ್ರಾಂತನಾಗಿ 'ಇದೇನು ದೈವಯೋಗವು ; ಲೋಕವನ್ನೇ ವಿಪರೀತವಾಗಿ ಮಾಡುವದಾಗಿದೆ ; ಯಾವ ನನ್ನ ವಜ್ರಾಯುಧವು ಮಹಾಭಾರದಿಂದ ಯುಕ್ತಗಳಾಗಿ ರೆಕ್ಕೆಗಳನ್ನು ಬೀಸಿ ಹಾರಿಬಂದು ಕುಳಿತುಕೊಂಡು ಭೂಮಂಡಲವನ್ನೇ ನಾಶವನ್ನು ಮಾಡುವ ಮಹಾಪರ್ವತಗಳನ್ನು ಸಹ ಛೇದಿಸಿತೋ ತ್ವಷ್ಟ್ರುವಿನ ಪುತ್ರನಾದ ವೃತ್ರನನ್ನೂ ಇನ್ನೂ ಮಹಾಬಲಶಾಲಿಗಳಾದ ಅಸುರರನ್ನೂ ಯಾವ ವಜ್ರಾಯುಧವು ಸಂಹಾರಮಾಡಿತೋ ಸರ್ವಾಸ್ತ್ರಗಳಿಂದ ಪರಾಜಿತವಾಗದ ಅಂಥಾ ನನ್ನ ವಜ್ರವು ಸ್ವಲ್ಪಮಾತ್ರನಾದ ಈ ನಮುಚಿಯಲ್ಲಿ ಪ್ರತಿಹತವಾಯಿತು ; ಇನ್ನು ಮೇಲೆ ಕಾಷ್ಠಪ್ರಾಯವಾದ ಈ ವಜ್ರವನ್ನು ನಾನು ಧರಿಸುವದಿಲ್ಲ ; ಮಹಾತ್ಮನಾದ ದಧೀಚಿ ಋಷಿಯ ತೇಜಸ್ಸು ಕೂಡ ವ್ಯರ್ಥವಾಯಿತು' ಎಂದು ವ್ಯಸನಪಡುತ್ತಲಿರುವ ದೇವೇಂದ್ರನನ್ನು ಕುರಿತು 'ಎಲೈ ದೇವೇಂದ್ರನೇ, ಈ ಅಸುರನು ಶುಷ್ಕವಸ್ತುಗಳಿಂದಲೂ ಆರ್ದ್ರವಸ್ತುಗಳಿಂದಲೂ ವಧವನ್ನೈದುವದಿಲ್ಲ ; ಆರ್ದ್ರವಸ್ತುಗಳಿಂದಲೂ ಶುಷ್ಕವಸ್ತುಗಳಿಂದಲೂ ಸಹ ಸಂಹಾರಬೇಡವೆಂದು ನನ್ನಿಂದ ಈ ಅಸುರನಿಗೆ ವರವು ಕೊಡಲ್ಪಟ್ಟಿದೆ ; ಆದಕಾರಣ ಇವನ ಸಂಹಾರಾರ್ಥವಾಗಿ ಬೇರೆ ಉಪಾಯವನ್ನಾಲೋಚಿಸು' ಎಂದು ಹೇಳುತ್ತಲಿರುವ ಅಶರೀರವಾಕ್ಯವನ್ನು ಕೇಳಿದವನಾಗಿ ಇಂದ್ರನು ಧ್ಯಾನಾರೂಢನಾಗಿ ಆರ್ದ್ರವೂ ಅಲ್ಲದೇ ಶುಷ್ಕವೂ ಅಲ್ಲದೇ ಉಭಯಾತ್ಮಕವಾದ ನೊರೆಯನ್ನು ಜ್ಞಾನದೃಷ್ಟಿಯಿಂದ ಕಂಡವನಾಗಿ ಆ ನೊರೆಯಿಂದ ನಮುಚಿಯ ಶಿರಸ್ಸನ್ನು ಕತ್ತರಿಸಿದನು ; ಅನಂತರದಲ್ಲಿ ಋಷಿಗಳು ದೇವೇಂದ್ರನನ್ನು ಸ್ತುತಿಸಿ ಪುಷ್ಪಮಾಲ್ಯಗಳನ್ನು ವರ್ಷಿಸಿದರು ; ವಿಶ್ವಾವಸು ಪರಾವಸುಗಳೆಂಬ ಗಂಧರ್ವನಾಯಕರು ಗಾನಂಗೈದರು ; ದೇವಭೇರಿಗಳು ಧ್ವನಿಗೈದವು ; ದೇವಸ್ತ್ರೀಯರು ನರ್ತನಂಗೈದರು ; ವಾಯು ಅಗ್ನಿ ವರುಣ ಮೊದಲಾದ ದಿಕ್ಪಾಲಕರು ಶಸ್ತ್ರಾಸ್ತ್ರಗಳಿಂದ ಸಿಂಹಗಳು ಮೃಗಗಳನ್ನು ಕೊಲ್ಲುವಂತೆ ಅಸುರರನ್ನು ಸಂಹರಿಸಿದರು ! ಎಲೈ ಅರಸೇ, ಅನಂತರದಲ್ಲಿ ಅಸುರಕ್ಷಯವನ್ನು ನೋಡಿ ಬ್ರಹ್ಮದೇವನು ನಾರದಋಷಿಯನ್ನು ಕಳುಹಿಸಿ ಇಂದ್ರಾದಿ ದೇವತೆಗಳನ್ನು ಕುರಿತು ಯುದ್ಧ ಬೇಡವೆಂದು ನಿಕ್ಷಿಸಿದನು ! 'ಎಲೈ ಇಂದ್ರಾದಿ ದೇವತೆಗಳಿರಾ, ನಿಮ್ಮಿಂದ ಅಮೃತವು ಪಡೆಯಲ್ಪಟ್ಟಿತು ; ನಾರಾಯಣನ ಭುಜಾಶ್ರಯರಾದ ನಿಮಗೆ ಐಶ್ವರ್ಯಲಾಭವುಂಟಾಯಿತು ; ವೃದ್ಧಿಯನ್ನೈದಿದಿರಿ ; ಇನ್ನು ಮೇಲೆ ಯುದ್ಧಪ್ರಸಕ್ತಿಯು ಬೇಡ' ಎಂದು ಹೇಳಲ್ಪಟ್ಟ ನಾರದವಾಕ್ಯವನ್ನು ಬಹುಮಾನಂಗೈದು ಕ್ರೋಧವನ್ನು ನಿಗ್ರಹಿಸಿ ಗಂಧರ್ವರಿಂದ ಗಾನಂಗೈಯ್ಯಲ್ಪಡುವರಾಗಿ ಇಂದ್ರಾದಿಗಳು ಸ್ವರ್ಗವನ್ನು ಕುರಿತು ತೆರಳಿಹೋದರು ; ಯುದ್ಧದಲ್ಲಿ ಹತಶೇಷರಾದ ಅಸುರರು ನಾರದನ ಅನುಮತಿಯಿಂದ ಮೃತನಾದ ಬಲಿಯನ್ನು ತೆಗೆದುಕೊಂಡು ಅಸ್ತಪರ್ವತವನ್ನು ಕುರಿತು ಹೋದರು ; ಛೇದಿಸಲ್ಪಟ್ಟ ಅವಯವಗಳುಳ್ಳ ಅಸುರರನ್ನು ಶುಕ್ರಾಚಾರ್ಯನು ಸಂಜೀವನೀವಿದ್ಯೆಯಿಂದ ಬದುಕಿಸಿದನು ; ಬಲಿಚಕ್ರವರ್ತಿಯು ಶುಕ್ರಾಚಾರ್ಯನಿಂದ ಸ್ಪರ್ಶಂಗೈಯ್ಯಲ್ಪಟ್ಟವನಾಗಿ ಪುನಃ ಕೂಡಿದ ಪ್ರಾಣಗಳುಳ್ಳವನಾಗಿ ಲೋಕತತ್ತ್ವಸ್ವರೂಪಜ್ಞನಾದಕಾರಣ ಪರಾಜಿತನಾದಾಗ್ಯೂ ವ್ಯಸನವನ್ನೈದಲಿಲ್ಲ.''

೧೨ನೇ ಅಧ್ಯಾಯ.

ಶ್ರೀಹರಿಯು ಜಗನ್ಮೋಹಿನೀ ರೂಪವನ್ನು ಧರಿಸಿ ಪರಮೇಶ್ವರನನ್ನು ಮೋಹಿಸುವಂತೆ ಮಾಡಿದ್ದು.

"ಎಲೈ ಪರೀಕ್ಷಿದ್ರಾಜನೇ, ಶ್ರೀಹರಿಯು ಸ್ತ್ರೀರೂಪದಿಂದ ದೈತ್ಯರನ್ನು ವಂಚಿಸಿ ದೇವತೆಗಳಿಗೆ ಅಮೃತಪಾನವನ್ನು ಮಾಡಿಸಿದನೆಂಬ ಅರ್ಥವನ್ನು ಕೇಳಿ ವೃಷಭಧ್ವಜನಾದ ಪರಮೇಶ್ವರನು ಪಾರ್ವತೀದೇವಿಯೊಡನೆ ಮಹಾವೃಷಭಾರೂಢನಾಗಿ ಪ್ರಮಥಗಣ ಪರಿವೃತನಾಗಿ ಹರಿಯನ್ನು ನೋಡಬೇಕೆಂದು ಅಲ್ಲಿಗೆ ಬಂದನು ; ಭಗವಂತನಿಂದ ಪಾರ್ವತೀಸಮೇತನಾದ ಪರಮೇಶ್ವರನು ಆದರಪೂರ್ವಕವಾಗಿ ಸತ್ಕರಿಸಲ್ಪಟ್ಟವನಾಗಿ ಕುಳಿತುಕೊಂಡು ಹರಿಯನ್ನು ಮೆಚ್ಚಿ ನಗುತ 'ಎಲೈ ಹರಿಯೇ, ನಿನ್ನ ವಿಷಯದಲ್ಲಿ ಆಶ್ಚರ್ಯವೇನೂ ಇಲ್ಲ ; ಸರ್ವಪ್ರಮಾತೃ ಆಶ್ಚರ್ಯವನ್ನುಂಟುಮಾಡುವೆ' ಎಂದು ನುಡಿದು 'ಎಲೈ ದೇವದೇವನಾಗಿ ಜಗದ್ವ್ಯಾಪಿಯಾಗಿ ಜಗದೀಶ್ವರನಾಗಿ ಜಗತ್ತ್ರಯ

ನಾದ ಹರಿಯೇ, ಸಮಸ್ತ ವಿಷಯಗಳಿಗೂ ಕಾರಣನಾದ ಈಶ್ವರನು ಜಗತ್ತಿಗೆ ಆದಿಮಧ್ಯಾಂತಗಳು ಯಾವ ಬ್ರಹ್ಮನಿಂದಲೋ ಯಾವ ಬ್ರಹ್ಮನಿಗೆ ಆದ್ಯಂತ ಮಧ್ಯಗಳಿಲ್ಲವೋ ಈ ದೃಶ್ಯಪ್ರಪಂಚವು ಯಾವ ಬ್ರಹ್ಮಸ್ವರೂಪವೋ ಅಂಥಾ ಚಿದ್ರೂಪವಾದ ಅಹಂಕಾರಾಸ್ಪದವಾದ ದ್ರಷ್ಟ್ರುವಾದದ್ದು ಬಾಹ್ಯದಲ್ಲಿ ಭೋಗ್ಯವಾದದ್ದು ಸಹಾ ಯಾವ ಪರಬ್ರಹ್ಮಸ್ವರೂಪವೋ ಅಂಥಾ ಸತ್ಯವಾದ ಬ್ರಹ್ಮವಸ್ತುವೇ ನೀನು ; ಶ್ರೇಯಸ್ಕಾಮರಾಗಿ ನಿಸ್ಪೃಹರಾಗಿರುವ ಮುನಿಗಳು ಐಹಿಕಾಮುಷ್ಮಿಕಗಳಾದ ಫಲಗಳಲ್ಲಿ ಸಂಗವನ್ನು ಬಿಟ್ಟು ನಿನ್ನ ಪಾದಕಮಲವನ್ನೇ ಉಪಾಸನಂಗೈಯ್ಯುತ್ತಾರೆ ! ಎಲೈ ಹರಿಯೇ, ನೀನು ಮೋಕ್ಷಸ್ವರೂಪನಾಗಿ ಗುಣತ್ರಯರಹಿತನಾಗಿ ಶೋಕರಹಿತನಾಗಿ ಆನಂದರೂಪನಾಗಿ ವಿಕೃತಿರಹಿತನಾಗಿ ಜಗದ್ರೂಪನಾಗಿ ಜಗತ್ತಿನಿಂದ ಅವಚ್ಛಿನ್ನನಾಗಿ ಈ ಜಗತ್ತಿನ ಉದಯ ಸ್ಥಿತಿ ಲಯಗಳಿಗೆ ಕಾರಣನಾಗಿ ಜೀವನಿಯಾಮಕನಾಗಿ ಸ್ವಯಂ ನಿರಪೇಕ್ಷನಾಗಿ ಜೀವರ ಅಪೇಕ್ಷಾನುಸಾರವಾಗಿ ಪೂರ್ಣನಾಗಿ ತೋರುವ ಬ್ರಹ್ಮನೇ ನೀನು ! ಕಾರ್ಯಕಾರಣೋಭಯರೂಪನೂ ಮೂಲಕಾರಣನೂ ನೀನೇ ; ಹ್ಯಾಗಂದರೆ ಸುವರ್ಣವು ಕುಂಡಲಾದಿ ವಿಕಾರಗಳನ್ನೈದಿದರೆ ನಾಮಭೇದವೇಹೊರ್ತು ವಸ್ತುಭೇದವಿಲ್ಲದಂತೆ ಸುವರ್ಣವೇ ಆಗಿರುವುದು ; ಮೂಢರಿಂದ ಅಜ್ಞಾನಕೃತವಾದ ಭೇದವು ಉಪಾಧಿರಹಿತನಾದ ನಿನಗೆ ಗುಣಸಂಬಂಧದಿಂದ ಉಂಟಾದದ್ದು! ಎಲೈ ನಾರಾಯಣನೇ, ವೇದಾಂತಿಗಳು ನಿನ್ನನ್ನು ಬ್ರಹ್ಮವೆಂದು ಹೇಳುವರು ; ಮೀಮಾಂಸಕರು ನಿನ್ನನ್ನು ಧರ್ಮವನ್ನಾಗಿ ಹೇಳುವರು ; ಪ್ರಕೃತಿ ಪುರುಷರೊಳಗೆ ನಿನ್ನನ್ನು ಪುರುಷನನ್ನಾಗಿ ಸಾಂಖ್ಯರು ಹೇಳುವರು ; ವಿಮಲಾ ಉತ್ಕರ್ಷಿಣೀ ಜ್ಞಾನಾ ಕ್ರಿಯಾ ಯೋಗಾ ಪ್ರಹ್ವಾ ಸತ್ಯಾ ಈಶಾನಾ ಅನುಗ್ರಹಾಯೆಂಬ ನವಶಕ್ತಿಯುತನಾದ ಪರಮಪುರುಷನನ್ನಾಗಿ ಪಾಂಚರಾತ್ರರು ನುಡಿವರು ; ಮಹಾಪುರುಷನನ್ನಾಗಿ ಯೋಗಶಾಸ್ತ್ರಜ್ಞರು ಹೇಳುವರು ; ಬ್ರಹ್ಮನು ನಾನು ಮರೀಚಿ ಮೊದಲಾದ ಋಷಿಗಳು ಸತ್ವಗುಣಸೃಷ್ಟರಾಗಿ ನಿನ್ನಿಂದ ರಚಿತರಾದಾಗ್ಯೂ ಯಾವ ನಿನ್ನಿಂದ ರಚಿತವಾದ ಈ ಪ್ರಪಂಚವನ್ನು ತತ್ವದಿಂದ ತಿಳಿಯಲರಿಯೆವೋ ನಿನ್ನನ್ನು ಸರ್ವಥಾ ಅರಿಯೆವೋ ರಾಜಸ ತಾಮಸಪ್ರಕೃತಿಸೃಷ್ಟರಾದ ಜನರು ನಿನ್ನನ್ನು ಹ್ಯಾಗೆ ತಿಳಿದಾರು ? ಅಂತಹ ನೀನು ಇಚ್ಛೈಸಲ್ಪಟ್ಟ ಈ ಜಗತ್ತಿನ ಜನ್ಮ ಸ್ಥಿತಿ ಲಯಗಳನ್ನು ಪ್ರಾಣಿಗಳಿಗೆ ಅಪೇಕ್ಷಿತವಾದ ಅರ್ಥವನ್ನು ಜಗತ್ತಿಗೆ ಸಂಸಾರಬಂಧ ಮೋಕ್ಷಗಳನ್ನು ಸಹಾ ತಿಳಿಯುತ್ತೀಯೆ ; ವಾಯುವು ಚರಾಚರ ಪ್ರಪಂಚವನ್ನೂ ಆಕಾಶವನ್ನೂ ವ್ಯಾಪಿಸಿರುವಂತೆ ಸರ್ವಾತ್ಮಕನಾದ ನೀನು ಸರ್ವವನ್ನು ತಿಳಿಯುತ್ತೀಯೆ ! ಎಂದು ಸ್ತುತಿಗೈದು ಗುಣಗಳಿಂದ ವಿಹಿತಗಳಾಗಿರುವ ನಿನ್ನ ಅವತಾರಭೇದಗಳನ್ನು ನಾವು ನೋಡಿದ್ದೇವೆ ; ಈ ನಿನ್ನಿಂದ ಧರಿಸಲ್ಪಟ್ಟ ಸ್ತ್ರೀರೂಪವನ್ನು ನೋಡಲಿಚ್ಛೈಸುತ್ತೇವೆ ; ಯಾವ ಸ್ತ್ರೀರೂಪದಿಂದ ದೈತ್ಯರು ಮೋಹಿತರಾದರೋ ದೇವತೆಗಳು ಅಮೃತಪಾನವನ್ನು ಮಾಡಿಸಲ್ಪಟ್ಟರೋ ಆ ದಿವ್ಯ ಸ್ತ್ರೀರೂಪವನ್ನು ನೋಡಲೋಸುಗ ನಾವು ಬಂದಿದ್ದೇವೆ ; ನಮಗೆ ಕುತೂಹಲ ಅಧಿಕವಾಗಿದೆಯೆಂದು ಯಾಚಿಸಿದನು ; ಆಗ ವಿಷ್ಣುವು ಮುಗುಳು ನಗೆಯುಳ್ಳವನಾಗಿ ಭಾವಗಂಭೀರವಾಗಿ ಶಿವನನ್ನು ಕುರಿತು 'ಎಲೈ ಪರಮೇಶ್ವರನೇ, ದೈತ್ಯರಿಗೆ ಕುತೂಹಲಾರ್ಥವಾಗಿ ಸ್ತ್ರೀರೂಪವು ನನ್ನಿಂದ ಧರಿಸಲ್ಪಟ್ಟಿತು ; ಅಮೃತಕಲಶವನ್ನು ಅಪಹರಿಸಿಕೊಂಡು ದೈತ್ಯರು ಹೊರಡಲು ದೇವಕಾರ್ಯವು ಅಭಾಸವನ್ನೈದೀತೆಂದು ಆಲೋಚಿಸಿ ನಾನು ಹೀಗೆ ಮಾಡಿದೆನು ! ಎಲೈ ದೇವದೇವನಾದ ಈಶ್ವರನೇ, ಕಾಮುಕರಿಗೆ ಬಹುಮಾನಯೋಗ್ಯವಾಗಿ ಕಾಮೋದ್ದೀಪಕವಾಗಿರುವ ಸ್ತ್ರೀರೂಪವನ್ನು ನೋಡಲಿಚ್ಛೆಯುಳ್ಳ ನಿನಗೆ ತೋರಿಸುತ್ತೇನೆ' ಎಂದು ಮಾತನಾಡುತಲೇ ಅಂತರ್ಧಾನವನ್ನೈದಿದನು ; ಪರಮೇಶ್ವರನು ದೇವಿಯೊಡನೆ ಎಲ್ಲಾಕಡೆಯಲ್ಲೂ ನೋಡುತಲಿದ್ದನು ;' ಅನಂತರದಲ್ಲಿ ನಾನಾಪುಷ್ಪಗಳಿಂದಲೂ ಚಿಗುರುಗಳಿಂದಲೂ ಪ್ರಕಾಶಿಸುವ ವೃಕ್ಷಗಳುಳ್ಳ ಉದ್ಯಾನದಲ್ಲಿ ಚಂಡಾಡುತಲಿರುವ ಪ್ರಕಾಶಿಸುವ ದುಕೂಲದಿಂದ ಶೋಭಿಸುವ ನಿತಂಬದಲ್ಲಿ ಹೊಳೆಯುತಲಿರುವ ಒಡ್ಯಾಣವುಳ್ಳವಳಾಗಿ ಚಂಡನ್ನಾಡಿಸುವಾಗ ಮೇಲಕ್ಕೆ ಕೆಳಕ್ಕೆ ಅಲುಗಿ ಆಡುತಲಿರುವ ಸ್ತನಗಳಮೇಲಿರುವ ಅನೇಕ ಮುಕ್ತಾಹಾರಗಳ ಭಾರದಿಂದ ಬಳುಕುತಲಿರುವ ಮಧ್ಯಭಾಗವುಳ್ಳವಳಾಗಿ ಹಾರಿ ಆಚೆಗೆ ಹೋದ ಚಂಡನ್ನು ತೆಗೆದುಕೊಂಡು ಬರುವದಕ್ಕೋಸುಗ ಚಿಗುರುಗಳಂತೆ ಮೃದುಗಳಾದ ಪಾದಗಳನ್ನು ಚಲಿಸುವಂತೆ ಮಾಡುತ ಆ ಚಂಡು ಯಾವಯಾಕಡೆ ಹೋಗುವದೋ ಅದಾ ಕಡೆಗೆ ಚಲಿಸುತಲಿ

ರುವ ನೇತ್ರಗಳಿಂದ ಪ್ರಕಾಶಿಸುವಳಾಗಿ ಕರ್ಣಗಳಲ್ಲಿ ಹೊಳೆಯುತಲಿರುವ ಕುಂಡಲಗಳ ಕಾಂತಿಯಿಂದ ಪ್ರಕಾಶಿಸುವ ಕಪೋಲಗಳು ನೀಲಗಳಾದ ಮುಂಗುರುಳುಗಳು ಇವುಗಳಿಂದ ಮನೋಹರವಾದ ಮುಖವುಳ್ಳವಳಾಗಿ ಚಂಡನ್ನಾಡುವಾಗ ಶಿಥಿಲವಾದ ದುಕೂಲವನ್ನು ಚದರಿಹೋದ ಕೇಶಗಳನ್ನು ಮನೋಹರವಾದ ವಾಮಹಸ್ತದಿಂದ ಸಿಕ್ಕಿಸಿ ಸರಿಮಾಡುವಳಾಗಿ ದಕ್ಷಿಣಹಸ್ತದಿಂದ ಚಂಡಾಡುತಲಿರುವ ಜಗನ್ಮೋಹಿನೀರೂಪವಾದ ಸ್ತ್ರೀಯನ್ನು ಕಂಡನು ; ಪರಮೇಶ್ವರನು ಆ ಸ್ತ್ರೀಯನ್ನು ನೋಡಿ ಕಂತುಕ ಕ್ರೀಡೆಯಿಂದ ಸ್ವಲ್ಪ ಲಜ್ಜೆಯಿಂದ ಅಸ್ಫುಟವಾದ ಮಂದಹಾಸದಿಂದ ಯುಕ್ತವಾದ ಕಟಾಕ್ಷಪ್ರಸಾರಗಳಿಂದ ಪರವಶಚಿತ್ತನಾಗಿ ಸಮೀಪದಲ್ಲಿರುವ ಪಾರ್ವತೀದೇವಿಯನ್ನು ಪ್ರಮಥಗಣಗಳನ್ನು ಸಹಾ ತಿಳಿಯಲಿಲ್ಲ ; ಆಗ ಆಕೆಯ ಹಸ್ತಾಗ್ರದಿಂದ ತಪ್ಪಿಸಿಕೊಂಡು ಚಂಡು ದೂರಕ್ಕೆ ಹೋಗಲಾಗಿ ಅದನ್ನು ತರುವುದಕ್ಕೆ ಎದ್ದುಹೋಗುತಲಿರುವ ಆ ಮೋಹಿನಿಯ ದುಕೂಲವನ್ನೂ ಬದ್ಧಾಣವನ್ನೂ ವಾಯುವು ಹಾರಿಸಿಬಿಡಲಾಗಿ ಪರಮೇಶ್ವರನು ಬೊಂಬೆ ಕಳಿಸ್ಸನು, ಈ ಪ್ರಕಾರವಾಗಿ ಮನೋಹರವಾದ ಕಡೆಗಣ್ಣು ನೋಟಗಳುಳ್ಳ ನೋಡುವುದಕ್ಕೆ ಮತ್ತೂ ಮತ್ತೂ ಕುತೂಹಲವನ್ನು ವೃದ್ಧಿಮಾಡುತಲಿರುವ ಆ ದಿವ್ಯಸ್ತ್ರೀಯನ್ನು ನೋಡಿ ಪರಮೇಶ್ವರನು ಆಕೆಯಲ್ಲಿ ಮನಸ್ಸನ್ನು ಮಾಡಿ ಆ ಸ್ತ್ರೀಯಿಂದ ಅಪಹೃತವಾದ ಜ್ಞಾನವುಳ್ಳವನಾಗಿ ತದ್ದರ್ಶನದಿಂದುಂಟಾದ ಕಾಮೋದ್ದೀಪನದಿಂ ವಶನಾಗಿ ಪಾರ್ವತೀದೇವಿಯು ನೋಡುತಿರುವಾಗಲೇ ಆ ಸ್ತ್ರೀಯ ಸಮೀಪಕ್ಕೆ ಹೋದನು ; ಆ ಸ್ತ್ರೀಯು ಸಮೀಪಕ್ಕೆ ಬರುತಲಿರುವ ಈಶ್ವರನನ್ನು ನೋಡಿ ವಸ್ತ್ರರಹಿತಳಾದ್ದರಿಂದ ಅತ್ಯಂತ ಲಜ್ಜಿತಳಾಗಿ ವೃಕ್ಷಗಳ ಮರೆಗೆ ಹೋಗುವಳಾಗಿ ನಗುತ ನಿಲ್ಲದೆ ಸಂಚರಿಸುತ್ತಿದ್ದಳು ; ಭಗವಂತನಾದ ಪರಮೇಶ್ವರನು ಇಂದ್ರಿಯ ವಿಕಾರವುಳ್ಳವನಾಗಿ ಕಾಮವಶನಾಗಿ ಸ್ತ್ರೀಗಜವನ್ನು ಕುರಿತು ಪುರುಷಗಜವು ಅಟ್ಟಿಹೋದಂತೆ ಅತಿವೇಗದಿಂದ ಸಮೀಪಕ್ಕೆ ಹೋಗಿ ಇಚ್ಛೈಸದೇ ಇರುವ ಆ ಸ್ತ್ರೀಯನ್ನು ಕೇಶಗಳಲ್ಲಿ ಪಿಡಿದು ಬಾಹುಗಳಿಂದ ಆಲಿಂಗನಂಗೈದನು ; ಗಂಡಾನೆಯಿಂದ ಹೆಣ್ಣಾನೆಯು ಆಲಿಂಗಿಸಲ್ಪಟ್ಟಂತೆ ಭಗವಂತನಾದ ಈಶ್ವರನಿಂದ ಆಲಿಂಗಿತಳಾದ ಆ ಸ್ತ್ರೀಯು ಇಲ್ಲಲ್ಲಿ ತಪ್ಪಿಸಿಕೊಂಡು ಕೇಶಗಳು ಚದರಿಹೋಗುತಿರಲಾಗಿ ಪರಮೇಶ್ವರನ ಭುಜಾಂತದಿಂದ ನುಣುಚಿಕೊಂಡು ವಿಷ್ಣುಮಾಯೆಯಾದ ಆ ಸ್ತ್ರೀಯು ಓಡಿಹೋದಳು ; ಅದ್ಭುತವ್ಯಾಪಾರವುಳ್ಳ ಮೋಹಿನೀರೂಪನಾದ ವಿಷ್ಣುವಿನ ಮಾರ್ಗವನ್ನು ಶತೃವಾದ ಕಾಮನಿಂದ ಪರಾಜಿತನಂತೆ ಪರಮೇಶ್ವರನು ಬಿಡದೆ ಗಂಡಾನೆಯು ಹೆಣ್ಣಾನೆಯನ್ನು ಅನುಸರಿಸುವಂತೆ ಆ ಮೋಹಿನಿಯನ್ನನುಸರಿಸಿ ಓಡುತಲಿರುವ ಅಮೋಘವೀರ್ಯವಾದ ಮಹಾತ್ಮನಾದ ಪರಮೇಶ್ವರನ ರೇತಸ್ಸು ಸ್ಖಲಿತವಾಯಿತು ; ಆ ಮಹಾತ್ಮನಾದ ಪರಮೇಶ್ವರನ ರೇತಸ್ಸು ಎಲ್ಲೆಲ್ಲಿ ಬಿತ್ತೋ ಆಯಾ ಸ್ಥಳಗಳು ಸ್ವರ್ಣಭೂಮಿಗಳು ರಜತಭೂಮಿಗಳು ಆದವು; ಯಾವ ಯಾವ ಸ್ಥಳಗಳಲ್ಲಿ ಋಷಿಗಳಿದ್ದರೋ ಆಯಾ ನದಿಗಳಲ್ಲಿ ಸರೋವರಗಳಲ್ಲಿ ಪರ್ವತಗಳಲ್ಲಿ ಉದ್ಯಾನಗಳಲ್ಲಿ ಪರಮೇಶ್ವರನು ಸನ್ನಿಹಿತನಾದನು ! ಎಲೈ ಪರೀಕ್ಷಿದ್ರಾಯನೆ, ಆ ಪರಮೇಶ್ವರನು ರೇತಸ್ಸು ಗಳಿತವಾದಮೇಲೆ ದೇವಮಾಯೆಯಿಂದ ಮೋಹಿತವಾದ ಸ್ವಸ್ವರೂಪವನ್ನು ತಿಳಿದು ಆ ಮೋಹವನ್ನು ಬಿಟ್ಟವನಾದನು ; ಅನಂತರದಲ್ಲಿ ಪರಮೇಶ್ವರನು ಜಗದಾತ್ಮನಾದ ನಾರಾಯಣನ ಮಹಾತ್ಮ್ಯವನ್ನು ಆಶ್ಚರ್ಯವನ್ನಾಗಿ ತಿಳಿಯಲಿಲ್ಲ; ಬಳಿಕ ಸ್ವಸ್ಥಚಿತ್ತನಾದ ಈಶ್ವರನನ್ನು ನೋಡಿ ಮಧುಸೂದನನು ಅತ್ಯಂತ ಸಂಪ್ರೀತಿಯುಳ್ಳವನಾಗಿ ಪುರುಷರೂಪವನ್ನು ಧರಿಸಿ 'ಎಲೈ ದೇವಶ್ರೇಷ್ಠನಾದ ಪರಮೇಶ್ವರನೇ, ದೈವಯೋಗದಿಂದ ನೀನು ನಿಜಸ್ವರೂಪವನ್ನೈದಿದೆ ; ಮಾಯಾರೂಪನಾದ ನನ್ನ ಸ್ತ್ರೀರೂಪದಿಂದ ಮೋಹಿತನಾಗಿ ಪುನಃ ಸ್ವಭಾವವನ್ನೈದಿದೆ ; ಅವಿವೇಕಿಗಳಾದ ಮೂಢರಿಂದ ಅತಿಕ್ರಮಿಸಲಶಕ್ಯವಾಗಿ ನಾನಾಪ್ರಕಾರಗಳಾದ ಭಾವಗಳನ್ನು ಕಲ್ಪಿಸುವ ನನ್ನ ಮಾಯೆಯನ್ನು ನಿನ್ನ ಹೊರತಾಗಿ ಮತ್ತಾರು ಅತಿಕ್ರಮಿಸುವರು ! ಸೃಷ್ಟ್ಯಾದಿ ಕಾಲಾನುಸಾರವಾಗಿ ಕಾಲರೂಪನಾದ ನಿನ್ನಿಂದ ಸತ್ವರಜಸ್ತಮಸ್ಸುಗಳ ಅಂಶಗಳಿಂದ ಸ್ವೀಕರಿಸಲ್ಪಟ್ಟ ಆ ಮಾಯೆಯು ಗುಣಮಯಿಯಾದುದರಿಂದ ನಿನಗೂ ಸ್ವಾಧೀನವಾದಕಾರಣ ನಿನ್ನನ್ನು ತಿಕ್ರಮಿಸಲಾರದು ; ಈರೀತಿಯಲ್ಲಿ ಶ್ರೀವತ್ಸಭೂಷಿತನಾದ ವಿಷ್ಣುವಿನಿಂದ ಸತ್ಕರಿಸಲ್ಪಟ್ಟ ಪರಮೇಶ್ವರನು ಆ ವಿಷ್ಣುವಿನಿಂದ ಅಪ್ಪಣೆ ತೆಗೆದುಕೊಂಡು ಸ್ವಸ್ಥಾನವಾದ ಕೈಲಾಸವನ್ನು ಕುರಿತು ತೆರಳಿದನು ; ಭಗವಂತನಾದ

ಪರಮೇಶ್ವರನು ತನ್ನಿಂದನುಭೂತವಾದ ಆ ಮಾಯೆಯನ್ನು ಮಹರ್ಷಿಗಳು ನೋಡುತ್ತಿರುವಾಗಲೇ ಪಾರ್ವತೀದೇವಿಯನ್ನು ಕುರಿತು 'ಎಲೈ ಪಾರ್ವತಿಯೇ, ಪರಮಪುರುಷನಾದ ಪರದೇವತೆಯಾದ ನಾರಾಯಣನ ಮಾಯೆಯನ್ನು ನೀನು ನೋಡಿದೆಯಾ ! ಸರ್ವೇಶ್ವರನಾದ ನಾನೂ ಕೂಡ ಮಾಯಾವಶನಾಗಿ ಮೋಹವನ್ನೈದಿದೆ ; ಕಡಮೆ ಅಸ್ವತಂತ್ರರಾದವರು ಹೇಳತಕ್ಕದ್ದೇನು ; ಸಹಸ್ರ ಸಂವತ್ಸರಗಳ ಪರ್ಯಂತವೂ ಯೋಗನಿಷ್ಠೆಯಾಗಿ ನೀನು ಯಾವ ನಾರಾಯಣನ ಸ್ವರೂಪವನ್ನು ನಿರೂಪಿಸೆಂದು ನನ್ನನ್ನು ಪ್ರಶ್ನೆಗೈದೆಯೋ ಆ ಪರಮಪುರುಷನೇ ಈ ನಾರಾಯಣನು ; ಈ ಸಮಸ್ತ ಲೋಕವು ಯಾವ ನಾರಾಯಣನಲ್ಲಿ ಪ್ರವೇಶಿಸಿದ್ದಾಗ್ಯೂ ಆ ವಿಷ್ಣುವಿನನ್ನರಿಯದೋ ಆ ಪುರುಷನೇ ಈತನು ' ಎಂದು ಪೇಳಿದನು ! ಎಲೈ ಪರೀಕ್ಷಿದ್ರಾಯನೇ, ಸಮುದ್ರಮಥನದಲ್ಲಿ ಯಾವ ಭಗವಂತನಿಂದ ಕೂರ್ಮರೂಪದ ಬೆನ್ನಿನಮೇಲೆ ಮಂದರಪರ್ವತವು ಧರಿಸಲ್ಪಟ್ಟಿತೋ ಅಂತಹ ನಾರಾಯಣನ ಪ್ರಭಾವವು ನಿನಗೋಸ್ಕರ ನಿರೂಪಿಸಲ್ಪಟ್ಟಿತು ; ಯಾವಕಾರಣ ಉತ್ತಮಶ್ಲೋಕನಾದ ಭಗವಂತನ ಗುಣಾನುಕೀರ್ತನವು ಸಂಸಾರಪರಿಶ್ರಮವನ್ನು ಪರಿಹರಿಸುವುದೋ ಅದುಕಾರಣ ಈ ಸಮುದ್ರಮಥನೋಪಾಖ್ಯಾನ ಪಠನಂಗೈಯುವ ಶ್ರವಣಂಗೈಯುವ ಪುರುಷರಿಗೆ ಸರ್ವಕಾರ್ಯಗಳು ಸಿದ್ಧಿಸುವವು ; ಯಾವ ಭಗವಂತನು ಕಪಟಸ್ತ್ರೀರೂಪಧಾರಿಯಾಗಿ ದೈತ್ಯರನ್ನು ಮೋಹಪಡಿಸಿ ಶರಣಾಗತರಾದ ದೇವತೆಗಳಿಗೆ ಅಮೃತವನ್ನು ಪಾನಂಗೈಸಿದನೋ ದುರಾತ್ಮರಿಗೆ ಗೋಚರನಲ್ಲದವನಾಗಿ ಶುದ್ಧಭಾವದಿಂದ ಧ್ಯಾನಯೋಗ್ಯನಾಗಿ ಸೇವಕ ಇಷ್ಟಾರ್ಥ ಪೂರಕನಾದ ಆ ಭಗವಂತನನ್ನು ನಮಸ್ಕರಿಸುತ್ತೇನೆ."

೧೩ನೇ ಅಧ್ಯಾಯ.

ವೈವಸ್ವತಮನ್ವಂತರಾದಿಯಾಗಿ ಭವಿಷ್ಯತ್ಸಪ್ತ ಮನ್ವಂತರಗಳ ನಿರೂಪಣವು.

ಎಲೈ ಅರಸೇ, ಈಗ ವರ್ತಮಾನವಾದ ವೈವಸ್ವತ ಮನುವೇ ಏಳನೇ ಮನುವು ; ಈ ಮನುವು ವಿವಸ್ವತನೆಂಬ ಸೂರ್ಯನ ಪುತ್ರನು ; ಶ್ರಾದ್ಧದೇವನೆಂಬ ನಾಮವುಳ್ಳವನು ; ಇಕ್ಷ್ವಾಕುರಾಯನು ನೃಗರಾಯನು ಧೃಷ್ಟರಾಯನು ಶರ್ಯಾತಿರಾಯನು ನರಿಷ್ಯಂತರಾಯನು ನಾಭಾಗರಾಯನು ಅರಿಷ್ಟರಾಯನು ಕರೂಷರಾಯನು ಪೃಷಧ್ರರಾಯನು ವಸುಮಂತರಾಯನು ಎಂಬ ಹತ್ತುಮಂದಿ ವೈವಸ್ವತಮನುವಿನ ಪುತ್ರರು ; ಆದಿತ್ಯರು ವಸುಗಳು ರುದ್ರರು ವಿಶ್ವೇದೇವರು ಅಶ್ವಿನೀ ದೇವತೆಗಳೀರ್ವರು ಇವರೇ ದೇವತೆಗಳು ; ಈ ದೇವತೆಗಳಿಗೆ ಪುರಂದರನಾಮಕನಾದವನೇ ಇಂದ್ರನು ; ಕಶ್ಯಪನು ಅತ್ರಿಯು ಭರದ್ವಾಜನು ವಿಶ್ವಾಮಿತ್ರನು ಗೌತಮನು ಜಮದಗ್ನಿಯು ವಶಿಷ್ಠನು ಇವರು ಸಪ್ತಋಷಿಗಳು ; ದ್ವಾದಶಾದಿತ್ಯರೊಳಗೆ ಕಡೇಯವನಾದ ವಿಷ್ಣುವೇ ವೈವಸ್ವತ ಮನ್ವಂತರದಲ್ಲಿ ಕಶ್ಯಪ ಋಷಿಯ ದೆಸೆಯಿಂದ ಅದಿತೀದೇವಿಯಲ್ಲಿ ವಾಮನ ರೂಪನಾಗಿ ಅವತರಿಸಿದನು ! ಎಲೈ ಅರಸೇ, ಈ ಏಳನೇ ಮನ್ವಂತವು ಸಂಕ್ಷೇಪದಿಂದ ನಿನಗೆ ಪೇಳಲ್ಪಟ್ಟಿತು ; ವಿಷ್ಣುಶಕ್ತಿ ಯುಕ್ತಗಳಾದ ಭವಿಷ್ಯತುಗಳಾದ ಮನುಗಳನ್ನು ಪೇಳುತ್ತೇನೆ ಕೇಳು : ಎಲೈ ಅರಸೇ, ವಿಶ್ವಕರ್ಮನ ಪುತ್ರೀರಾದ ಸಂಜ್ಞಾ ಛಾಯಾ ದೇವಿಗಳೆಂಬ ಈರ್ವರು ವಿವಸ್ವತನೆಂಬ ನಾಮಧೇಯವುಳ್ಳ ಸೂರ್ಯನ ಪತ್ನೀರು ; ಬಡಬಾದೇವಿಯು ಮೂರನೇ ಪತ್ನಿಯೆಂದು ಕೆಲವರು ಪೇಳುವರು ; ಸಂಜ್ಞಾದೇವಿಯೇ ಬಡಬಾ ರೂಪಳಾದಳೆಂದು ನಮ್ಮ ಸಿದ್ಧಾಂತವು ; ಆ ಮೂರು ಮಂದಿ ಪತ್ನೀರಲ್ಲಿ ಸಂಜ್ಞಾಪುತ್ರರು ಮೂರು ಮಂದಿ ; ಯಮನು ಯಮುನಾನದಿಯು ಶ್ರಾದ್ಧದೇವನು ಎಂಬ ಪೆಸರುಳ್ಳವರು ; ಸಾವರ್ಣಿಯು ತಪತಿಯೆಂಬ ಕನ್ಯೆಯು ಶನೈಶ್ಚರನು ಈ ಮೂರುಮಂದಿಯು ಛಾಯಾದೇವಿಯ ಪುತ್ರರು ; ಅಶ್ವಿನೀ ದೇವತೆಗಳೀರ್ವರು ಬಡಬಾ ದೇವಿಯ ಪುತ್ರರು ; ತಪತಿಯೆಂಬ ಕನ್ಯೆಯು ಸಂವರಣನೆಂಬ ಅರಸಿಗೆ ಪತ್ನಿಯಾದಳು ; ಛಾಯಾ ಪುತ್ರನಾದ ಸಾವರ್ಣಿಯು ಎಂಟನೇ ಮನುವಾಗುತ್ತಾನೆ ; ನಿರ್ಮೋಹ ವಿರಜಸ್ಕ ಮೊದಲಾದವರು ಆ ಮನು ಪುತ್ರರಾಗುತ್ತಾರೆ ; ಸುತಪಸರು ವಿರಜರು ಅಮೃತಪ್ರಭರೆಂಬವರು ದೇವ

ತೆಗಳಾಗುತ್ತಾರೆ ; ವಿರೋಚನನ ಪುತ್ರನಾದ ಬಲಿಚಕ್ರವರ್ತಿಯು ಆ ದೇವತೆಗಳಿಗೆ ಇಂದ್ರನಾಗುತ್ತಾನೆ; ಆ ಬಲಿಯು ಯಾಚಿಸುವ ವಿಷ್ಣುವಿಗೋಸ್ಕರ ಈ ಲೋಕತ್ರಯವನ್ನು ಮೂರು ಹೆಜ್ಜೆಯನ್ನಾಗಿ ಕೊಟ್ಟು ಸಿದ್ಧವಾದ ಇಂದ್ರಪದವನ್ನು ಬಿಟ್ಟು ಮೋಕ್ಷಸಿದ್ಧಿಯನ್ನೈದುತ್ತಾನೆ ; ಯಾವ ಬಲಿಯು ಒಂದು ಹೆಜ್ಜೆ ಭೂಮಿನಿಮಿತ್ತವಾಗಿ ಭಗವಂತನಿಂದ ಬದ್ಧನಾಗಿ ಆಮೇಲೆ ಪ್ರೀತನಾದ ಭಗವಂತನಿಂದ ಸ್ವರ್ಗಕ್ಕಿಂತಲೂ ಅಧಿಕವಾದ ಸುತಲದಲ್ಲಿ ಇಂದ್ರನಾಗಿ ನಿಲ್ಲಿಸಲ್ಪಟ್ಟನೋ ಆ ಬಲಿಯೇ ಇಂದ್ರನಾಗುತ್ತಾನೆ ; ಗಾಲವನು ದೀಪ್ತಿಮಂತನು ಪರಶುರಾಮನು ಅಶ್ವತ್ಥಾಮನು ಕೃಪನು ಋಷ್ಯಶೃಂಗನು ನಮ್ಮ ತಂದೆಯಾದ ವ್ಯಾಸಮುನಿಯು ಇವರೇಳು ಮಂದಿಯು ಸಪ್ತಋಷಿಗಳಾಗುತ್ತಾರೆ ; ಈ ಏಳು ಮಂದಿಯು ಈಗ ತಮ್ಮ ತಮ್ಮ ಆಶ್ರಮಗಳಲ್ಲಿ ಯೋಗನಿಷ್ಠರಾಗಿದ್ದಾರೆ ; ಭಗವಂತನು ದೇವಗುಹ್ಯನ ದೆಸೆಯಿಂದ ಸರಸ್ವತಿಯಲ್ಲಿ ಸಾರ್ವಭೌಮ ನಾಮಕನಾಗಿ ಅವತರಿಸಿ ಪುರಂದರನ ದೆಸೆಯಿಂದ ಸ್ವರ್ಗವನ್ನಪಹರಿಸಿ ಬಲಿಚಕ್ರವರ್ತಿಗೆ ಕೊಡುತ್ತಾನೆ ; ವರುಣಪುತ್ರನಾದ ದಕ್ಷಸಾವರ್ಣಿಯು ಒಂಭತ್ತನೇ ಮನುವಾಗುತ್ತಾನೆ; ಧೃತಕೇತು ದೀಪ್ತಿಕೇತು ಮೊದಲಾದ ಹತ್ತು ಮಂದಿಯು ಆ ಮನುವಿನ ಪುತ್ರರು ; ದ್ಯುತಿಮಂತನೆಂಬ ಋಷಿ ಮುಂತಾದವರು ಸಪ್ತಋಷಿಗಳು ; ಆಯುಷ್ಮಂತರೆಂಬವರು ದೇವತೆಗಳು ; ಭಗವಂತನೇ ಇಂದ್ರನು ; ಉಪಶ್ಲೋಕನ ಪುತ್ರನಾದ ಬ್ರಹ್ಮಸಾವರ್ಣಿಯೇ ಹತ್ತನೇ ಮನುವಾಗುತ್ತಾನೆ ; ಭೂರಿಷೇಣಾದಿಗಳು ಆ ಮನುವಿನ ಪುತ್ರರು; ಹವಿಷ್ಮಂತ ಮೊದಲಾದವರು ಋಷಿಗಳು ; ಪ್ರಜೇಶ್ವರರ ಗೃಹದಲ್ಲಿ ಭಗವಂತನ ಅವತಾರವಾಗುತ್ತದೆ ; ಜಗತ್ತನ್ನು ಆಹ್ಲಾದಗೈವ ಅಮೂರ್ತಿಯೆಂಬ ನಾಮಧೇಯವುಳ್ಳ ಭಗವಂತನು ಅವತರಿಸುತ್ತಾನೆ ; ಹವಿಷ್ಮಂತನು ಸುಕೃತಿಯು ಸತ್ಯನು ಮುಂತಾದವರು ಸಪ್ತಋಷಿಗಳು ; ವಿಬುದ್ಧ್ಯಾದಿಗಳು ದೇವತೆಗಳು ; ಶಂಭುವೇ ಸುರೇಶನು ; ಭಗವಂತನು ಪ್ರಜೇಶ್ವರರ ಗೃಹದಲ್ಲಿ ವಿಷೂಚೀ ದೇವಿಯಲ್ಲಿ ಅವತರಿಸಿ ಇಂದ್ರನಿಗೆ ಸಹಾಯವನ್ನು ಮಾಡುತ್ತಾನೆ ; ಧರ್ಮಸಾವರ್ಣಿಯೇ ಹನ್ನೊಂದನೇ ಮನುವು ; ಸತ್ಯ ಧರ್ಮ ಮೊದಲಾದವರು ಹತ್ತುಮಂದಿಯೂ ಆ ಮನುಪುತ್ರರು ; ವಿಹಂಗಮರು ಕಾಮಗರು ಎಂಬವರು ನಿರ್ವಾಣ ರುಚಿಗಳೆಂಬ ದೇವತೆಗಳು ; ವೈಧೃತನಾಮಕನಾದ ಇಂದ್ರನು ಅರುಣಾದಿಗಳು ಋಷಿಗಳು ; ಆರ್ಯಕನಿಗೆ ವೈಧೃತಾಯೆಂಬ ಪತ್ನಿಯಲ್ಲಿ ಭಗವಂತನು ತನ್ನ ಅಂಶದಿಂದ ಅವತರಿಸಿ ಧರ್ಮಕೇತು ಸಂಜ್ಞಕನಾಗಿ ಲೋಕತ್ರಯವನ್ನು ರಕ್ಷಿಸುತ್ತಾನೆ ! ಎಲೈ ಅರಸೇ, ರುದ್ರಸಾವರ್ಣಿಯೇ ಹನ್ನೆರಡನೇ ಮನುವು ; ದೇವವಂತನು ಉಪದೇವನು ದೇವಶ್ರೇಷ್ಠನು ಮೊದಲಾದವರು ಅವನ ಪುತ್ರರು ; ಋತುಧಾಮನೆಂಬ ಇಂದ್ರನು ಹರಿತಾದಿ ದೇವತೆಗಳು ತಪೋಮೂರ್ತಿಯು ತಪಸ್ವಿಯು ಆಗ್ನೀಧ್ರನು ಮೊದಲಾದವರು ಋಷಿಗಳು ; ಸ್ವಧಾಮನಾಮಕನಾದ ಭಗವದಂಶನು ಆ ಮನುವಂಶವನ್ನು ಸಾಧಿಸುತ್ತಾನೆ ; ಸೂನೃತಾದೇವಿಯಲ್ಲಿ ಸತ್ಯತಪನೆಂಬ ಋಷಿಗೆ ಉತ್ಪನ್ನನಾದ ದೇವಸಾವರ್ಣಿಯು ಹದಿಮೂರನೇ ಮನುವು ; ಚಿತ್ರಸೇನನು ವಿಚಿತ್ರನು ಮುಂತಾದವರು ಆ ಮನುಪುತ್ರರು ; ಸುಕರ್ಮ ಸುತ್ರಾಮ ಸಂಜ್ಞಕರಾದ ದೇವತೆಗಳು ದಿವಸ್ಪತಿಯೆಂಬ ಇಂದ್ರನು ನಿರ್ಮೋಹ ತತ್ವದರ್ಶಾದಿಗಳು ಋಷಿಗಳಾಗುತ್ತಾರೆ ; ಭಗವಂತನು ದೇವಹೋತ್ರನ ಪತ್ನಿಯಾದ ಬೃಹತೀದೇವಿಯಲ್ಲಿ ಅವತರಿಸಿ ಆ ಇಂದ್ರನಿಗೆ ಸಹಾಯಕನಾಗುತ್ತಾನೆ ; ಇಂದ್ರಸಾವರ್ಣಿಯೆಂಬ ಮನುವೇ ಹದಿನಾಲ್ಕನೇ ಮನುವು ; ಉರು ಗಂಭೀರ ವಸು ಮೊದಲಾದವರು ಆ ಮನುಪುತ್ರರು ; ಪವಿತ್ರರು ಚಾಕ್ಷುಷರು ಎಂಬವರೇ ದೇವತೆಗಳು ; ಶುಚಿನಾಮಕನಾದವನೇ ಇಂದ್ರನು ; ಅಗ್ನಿಬಾಹು ಶುಚಿ ಶುಕ್ರ ಮಾಗಧನು ಮೊದಲಾದವರು ಋಷಿಗಳು ; ಭಗವಂತನು ಸತ್ರಾಯಣನ ಪುತ್ರನಾದ ಬೃಹದ್ಭಾನುನಾಮಕನಾಗಿ ಯಾಗಾದಿ ಕ್ರಿಯೆಗಳನ್ನು ವಿಸ್ತರಿಸುತ್ತಾನೆ ! ಎಲೈ ಅರಸೇ, ಭೂತಭವಿಷ್ಯದ್ವರ್ತಮಾನಗಳಾದ ಹದಿನಾಲ್ಕು ಮನ್ವಂತರಗಳು ನಿನಗೋಸ್ಕರ ಹೇಳಲ್ಪಟ್ಟುವು ; ದೇವಯುಗ ಸಹಸ್ರತ್ತಿಕವಾದ ಬ್ರಹ್ಮಕಲ್ಪವು ಈ ಹದಿನಾಲ್ಕು ಮನುಗಳಿಂದ ಪರಿಮಿತವಾಗಿರುವುದು."

೧೪ನೇ ಅಧ್ಯಾಯ.

ಮನ್ವಾದಿಗಳ ಪ್ರತ್ಯೇಕ ಪ್ರತ್ಯೇಕಗಳಾದ ವ್ಯಾಪಾರಗಳ ವರ್ಣನೆಯು.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶ್ರೀಶುಕಮುನಿಯೇ, ಮನ್ವಂತರಗಳಲ್ಲಿ ಈ ಮನುಗಳು ಭಗವಂತನಿಂದ ಪ್ರೇರಿತರಾಗಿ ಯಾರ್ಯಾರು ಯಾವ ಯಾವ ಕರ್ಮಗಳನ್ನು ಮಾಡಿದರೋ ಆಯಾಯ ವೃತ್ತಾಂತವನ್ನು ನನಗೆ ನಿರೂಪಿಸು" ಎಂದು ಪ್ರಶ್ನೆ ಮಾಡಿದನು.

ಆ ವಾಕ್ಯವನ್ನು ಕೇಳಿ ಶುಕಮುನಿಯು "ಎಲೈ ಅರಸೇ, ಈ ಮನುಗಳು ಮನು ಪುತ್ರರು ಮುನಿಗಳು ಇಂದ್ರಾದಿ ದೇವತೆಗಳು ಎಲ್ಲರೂ ಭಗವಂತನಿಂದ ಆಜ್ಞಪ್ತರಾಗಿ ಲೋಕರಕ್ಷಣವನ್ನು ಮಾಡುವರು ; ಯಜ್ಞಾದಿ ಮೂರ್ತಿಭೇದಗಳಿಂದ ಅವತರಿಸಿದ ಭಗವಂತನಿಂದ ಪ್ರೇರಿತರಾಗಿ ಜಗದ್ರಕ್ಷಣವನ್ನು ಮಾಡುತ್ತಾರೆ ; ಚತುರ್ಯುಗಾವಸಾನದಲ್ಲಿ ಕಾಲದಿಂ ಖಿಲಗಳಾದ ವೇದಸಮೂಹಗಳನ್ನು ಋಷಿಗಳು ತಪೋಬಲದಿಂದ ಪ್ರತ್ಯಕ್ಷೀಕರಿಸಿ ಆ ವೇದೋಕ್ತ ಧರ್ಮಗಳನ್ನು ವ್ಯವಸ್ಥಾಪನಂಗೈವರು ; ಮನುಗಳು ಭಗವತ್ಪ್ರೇರಿತರಾಗಿ ತಮ್ಮ ತಮ್ಮ ಮನ್ವಂತರ ಕಾಲಗಳಲ್ಲಿ ನಾಲ್ಕು ಪಾದಗಳಿಂದ ಧರ್ಮವನ್ನು ನಿಲ್ಲಿಸಿ ಭೂಮಿಯನ್ನು ಪಾಲನಂಗೈವರು ; ಆ ಮನುಪುತ್ರರು ತಮ್ಮ ಪುತ್ರಪೌತ್ರಾದಿ ಕ್ರಮದಿಂದ ಸ್ವಸ್ವಮನ್ವಂತರಕಾಲ ಮುಗಿಯುವ ಪರ್ಯಂತವೂ ಪ್ರಜಾರಕ್ಷಣಂಗೈವರು ; ಆಯಾಯ ಮನ್ವಂತರೋಕ್ತ ದೇವತೆಗಳು ಯಜ್ಞಭಾಗಗಳನ್ನು ಭುಂಜಿಸುವರು ; ಆಯಾಯಾ ಮನ್ವಂತರಗಳಲ್ಲಿ ಆ ಇಂದ್ರರು ಭಗವಂತನಿಂದ ಕೊಡಲ್ಪಟ್ಟ ತ್ರಿಲೋಕಾಧಿಪತ್ಯಲಕ್ಷ್ಮಿಯನ್ನನುಭವಿಸಿಕೊಂಡು ವೃಷ್ಟಿಪ್ರದರಾಗಿ ಲೋಕರಕ್ಷಣವನ್ನು ಮಾಡುವರು ; ಭಗವಂತನು ಪ್ರತಿಯುಗದಲ್ಲಿಯೂ ಸಿದ್ಧರೂಪವನ್ನು ಧರಿಸಿ ಜ್ಞಾನೋಪದೇಶಂಗೈವನು ; ಋಷಿರೂಪಧಾರಿಯಾಗಿ ಕರ್ಮಯೋಗವನ್ನುಪದೇಶಿಸುವನು ; ಯೋಗೀಶ್ವರರೂಪನಾಗಿ ಯೋಗಶಾಸ್ತ್ರವನ್ನು ಪೇಳುವನು ; ಮರೀಚ್ಯಾದಿ ಪ್ರಜೇಶರೂಪದಿಂದ ಸೃಷ್ಟಿಯನ್ನು ಮಾಡುವನು ; ಭಗವಂತನು ರಾಜರೂಪದಿಂದ ಶತ್ರುನಿಗ್ರಹವನ್ನು ಮಾಡುವನು ; ಕಾಲರೂಪದಿಂದ ನಾನಾರೂಪವಾದ ಶೀತೋಷ್ಣಾದಿ ಗುಣಗಳುಳ್ಳವನಾಗಿ ಪ್ರಜೆಗಳನ್ನು ನಿಗ್ರಹಿಸುವನು ; ನಾಮರೂಪಾತ್ಮಕವಾದ ಮಾಯೆಯಿಂದ ಮೋಹಿತಮನಸ್ಕರಾದ ಈ ಋಷ್ಯಾದಿಗಳಿಂದ ನಾನಾಶಾಸ್ತ್ರಗಳಿಂದ ಸ್ತುತಿಸಲ್ಪಡುವವನಾಗಿ ಸರ್ವರಿಗೂ ಅದೃಶ್ಯನಾಗಿ ವ್ಯಾಪ್ತನಾಗಿರುವನು ; ಯಾವ ಅವಾಂತರಕಲ್ಪದಲ್ಲಿ ಹದಿನಾಲ್ಕು ಮನ್ವಂತರಗಳು ಪ್ರವರ್ತಿಸುವವೋ ಅದೇ ಬ್ರಹ್ಮನ ದೈನಂದಿನ ಪ್ರಳಯವೆನಿಸಿಕೊಂಬುವುದು ; ಇದೇ ಪ್ರಮಾಣವು" ಎಂದು ನುಡಿದನು.

೧೫ನೇ ಅಧ್ಯಾಯ.

ದೇವತೆಗಳು ಬಲಿಮುಂತಾದ ದೈತ್ಯರಿಂದ ಪರಾಜಿತರಾಗಿ ಪಲಾಯನಂಗೈದದ್ದು.

ಆ ಬಳಿಕ ಪರೀಕ್ಷಿದ್ರಾಯನು ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ಭಗವಂತನು ಸರ್ವೇಶ್ವರನಾದಾಗ್ಯೂ ಸರ್ವಾರ್ಥಗಳನ್ನು ಪಡೆದವನಾದಾಗ್ಯೂ ಯಾವನಿಮಿತ್ತವಾಗಿ ಬಲಿಚಕ್ರವರ್ತಿಯನ್ನು ಕುರಿತು ಮೂರಡಿ ಭೂಮಿಯನ್ನು ಯಾಚಿಸಿದನು ? ಯಾವನಿಮಿತ್ತವಾಗಿ ಬಲಿಯನ್ನು ಬಂಧಿಸಿದನು ? ಯಜ್ಞೇಶ್ವರನಾದ ಪರಮಾತ್ಮನು ನಿರಪರಾಧಿಯಾದ ಬಲಿಯನ್ನು ಯಾವನಿಮಿತ್ತವಾಗಿ ಬಂಧನಂಗೈದನು ? ಈ ಅರ್ಥವನ್ನು ತಿಳಿಯಬೇಕೆಂದು ನನಗೆ ಬಹಳ ಕುತೂಹಲವುಂಟಾಗಿದೆ" ಎಂದು ಕೇಳಿದನು.

ಆ ವಾಕ್ಯವನ್ನು ಕೇಳಿ ಶುಕಮುನಿಯು "ಎಲೈ ಅರಸೆ, ಬಲಿಚಕ್ರವರ್ತಿಯು ಇಂದ್ರನಿಂದ ಪರಾಜಿತನಾಗಿ ಸಂಹರಿಸಲ್ಪಟ್ಟವನಾದಾಗ್ಯೂ ಭೃಗುವಂಶಸ್ಥರಾದ ಶುಕ್ರಾದಿಗಳಿಂದ ಜೀವಿಸಲ್ಪಟ್ಟವನಾಗಿ ಸರ್ವಪ್ರಕಾರದಿಂದಲೂ ಆ ಭಾರ್ಗವರಿಗೆ ಶಿಷ್ಯನಾಗಿ ಅಧಿಕವಾದ ಧನವನ್ನು ಸಮರ್ಪಿಸಿದನು ; ಅನಂತರದಲ್ಲಿ ಮಹಾತ್ಮರಾದ ಭೃಗುವಂ

ಶೋದ್ಭವರಾದ ಶುಕ್ರಾಚಾರ್ಯ ಮೊದಲಾದ ಬ್ರಾಹ್ಮಣರು ಸಂತುಷ್ಟರಾಗಿ ಸ್ವರ್ಗವನ್ನು ಜಯಿಸಲಿಚ್ಛೆಯುಳ್ಳ ಆ ಬಲಿಚಕ್ರವರ್ತಿಗೆ ಶಾಸ್ತ್ರವಿಧಾನದಿಂದ ಋಗ್ವೇದಬ್ರಾಹ್ಮಣದಲ್ಲಿ ಪ್ರಸಿದ್ಧವಾದ ಮಹಾ ಅಭಿಷೇಕಖಂಡಗಳಿಂದ ಅಭಿಷೇಕವನ್ನು ಮಾಡಿ ವಿಶ್ವಜಿತ್ತೆಂಬ ಯಾಗವನ್ನು ಮಾಡಿಸಿದರು ; ಹವಿರ್ಭಾಗಗಳಿಂದ ಸಂತುಷ್ಟನಾದ ಯಜ್ಞೇಶ್ವರನ ದಯೆಯಿಂದ ಸುವರ್ಣದ ತಗಡುಗಳಿಂದ ಬಿಗಿಯಲ್ಪಟ್ಟ ರಥವು ದೇವೇಂದ್ರನ ಅಶ್ವಗಳಿಗೆ ಸಮಾನವರ್ಣಗಳುಳ್ಳ ಅಶ್ವಗಳು ಸಿಂಹದಿಂದ ಪ್ರಕಾಶಿಸುವ ಧ್ವಜವು ಆವಿರ್ಭೂತವಾಯಿತು ; ಅನಂತರದಲ್ಲಿ ಪಿತಾಮಹನಾದ ಪ್ರಹ್ಲಾದನು ಸುವರ್ಣ ಭೂಷಿತವಾದ ಧನುಸ್ಸನ್ನೂ ಅಕ್ಷಯಗಳಾದ ತೂಣೀರಗಳನ್ನೂ ದಿವ್ಯವಾದ ಕವಚವನ್ನೂ ಮೊಮ್ಮಗನಾದ ಬಲಿಚಕ್ರವರ್ತಿಗೆ ಕೊಟ್ಟನು ; ನೂತನವಾದ ಮತ್ತು ವಿಕಸಿತವಾದ ಪದ್ಮಮಾಲೆಯನ್ನೂ ಶಂಖವನ್ನೂ ಶುಕ್ರಾಚಾರ್ಯನಿತ್ತನು ; ಬಲಿಚಕ್ರವರ್ತಿಯು ಬ್ರಾಹ್ಮಣರಿಂದ ಸಂಪಾದಿಸಲ್ಪಟ್ಟ ಯುದ್ಧಸಾಮಗ್ರಿಯುಳ್ಳವನಾಗಿ ಆ ಬ್ರಾಹ್ಮಣರಿಂದ ಮಾಡಲ್ಪಟ್ಟ ಆಶೀರ್ವಾದಗಳನ್ನು ಶಿರಸಾವಹಿಸಿ ಅವರಿಗೆ ಪ್ರದಕ್ಷಿಣ ನಮಸ್ಕಾರಗಳನ್ನು ಮಾಡಿ ಪಿತಾಮಹನಾದ ಪ್ರಹ್ಲಾದನಿಗೆ ನಮಸ್ಕರಿಸಿ ಆತನನ್ನನುಜ್ಞಾಪಿಸಿ ಭೃಗುದತ್ತವಾದ ರಥವನ್ನೇರಿ ಧನುರ್ಧಾರಿಯಾಗಿ ಖಡ್ಗವನ್ನೂ ಬತ್ತಳಿಕೆಗಳನ್ನೂ ಧರಿಸಿ ಸ್ವರ್ಣಮಯಗಳಾದ ಭುಜಕೀರ್ತಿಗಳಿಂದ ಅಲಂಕೃತನಾಗಿ ಹೊಳೆಯುವ ಮಕರಕುಂಡಲಗಳಿಂದ ಶೋಭಿಸುವನಾಗಿ ವೇದಿಮಧ್ಯದಲ್ಲಿ ಯಜ್ಞೇಶ್ವರನಂತೆ ರಥಸ್ಥನಾಗಿ ಪ್ರಕಾಶಿಸಿದನು ; ಆ ಬಳಿಕ ಸಮಾನವಾದ ಐಶ್ವರ್ಯವೂ ಬಲವೂ ಕಾಂತಿಯೂ ಉಳ್ಳ ಸೇನೆಗಳಿಂದ ಕೂಡಿರುವ ಆಕಾಶವನ್ನು ಪಾನಂಗೈವರಂತೆಯೂ ದಿಕ್ಕುಗಳನ್ನು ದಹಿಸುವರಂತೆಯೂ ಕೊಬ್ಬಿರುವ ಸೇನಾಪತಿಗಳೊಡನೆ ಪರಿವೃತನಾಗಿ ಮಹತ್ತಾದ ಅಸುರಸೇನೆಯನ್ನು ಕರಕೊಂಡು ಭೂಮ್ಯಂತರಿಕ್ಷಗಳನ್ನು ಕಂಪಿಸುವಂತೆ ಮಾಡುತ ಬಲಿಚಕ್ರವರ್ತಿಯು ಸ್ವರ್ಗಲೋಕವನ್ನು ಕುರಿತು ತೆರಳಿದನು ; ಆ ಇಂದ್ರಪುರವೆಂಥಾದ್ದೆಂದರೆ : ಗಾನಂಗೈವ ಮತ್ತಭ್ರಮರಗಳುಳ್ಳದ್ದಾಗಿ ಧ್ವನಿಗೈವ ಪಕ್ಷಿಸಮೂಹಗಳುಳ್ಳದ್ದಾಗಿ ಕಾಂತಿಯುಕ್ತಗಳಾದ ನಂದನ ಮೊದಲಾದ ಉದ್ಯಾನಗಳಿಂದ ರಮ್ಯವಾಗಿರುವುದು ; ಚಿಗುರುಗಳು ಪುಷ್ಪಗಳು ಫಲಗಳು ಇವುಗಳಿಂದ ಬಗ್ಗಿರುವ ಕೊಂಬೆಗಳುಳ್ಳ ಕಲ್ಪವೃಕ್ಷಗಳಿಂದ ಶೋಭಿತವಾಗಿರುವುದು ; ಹಂಸಗಳು ಸಾರಸಗಳು ಚಕ್ರವಾಕಗಳು ಕಾರಂಡವಗಳು ಮೊದಲಾದ ಜಲಪಕ್ಷಿಗಳಿಂದ ವ್ಯಾಪ್ತಗಳಾದ ಸರೋವರಗಳಲ್ಲಿ ದೇವಸಮೇತರಾಗಿ ಸುರಸ್ತ್ರೀಯರು ಕ್ರೀಡೆಯಂಗೈವರು ; ಅಗಳತೆಯಂತೆ ಸುತ್ತಲೂ ಇರುವ ದೇವಗಂಗೆಯಿಂದ ಪರಿವೃತವಾಗಿರುವುದು ; ಮತ್ತು ಅಗ್ನಿವರ್ಣವಾಗಿ ಬತ್ತೇರಿಗಳಿಂದ ಯುಕ್ತವಾಗಿ ಉನ್ನತವಾದ ಪ್ರಾಕಾರದಿಂದಲೂ ಚಿನ್ನದ ತಗಡುಗಳಿಂದ ಬಿಗಿದಿರುವ ಕವಾಟಗಳಿಂದಲೂ ಸ್ಫಟಿಕಮಯಗಳಾದ ಗೋಪುರಗಳುಳ್ಳ ಬಾಗಿಲುಗಳಿಂದಲೂ ಯುಕ್ತವಾಗಿ ವಿಂಗಡಿಸಲ್ಪಟ್ಟ ಬೀದಿಗಳುಳ್ಳದ್ದಾಗಿ ಅರಮನೆಗಳಿಂದಲೂ ಹಜಾರಗಳಿಂದಲೂ ಅಂಗಳಗಳಿಂದಲೂ ರಾಜಬೀದಿಗಳಿಂದಲೂ ಯುಕ್ತವಾಗಿ ವಿಶ್ವಕರ್ಮನಿಂದ ನಿರ್ಮಿಸಲ್ಪಟ್ಟಿರುವುದು ; ಶತಕೋಟಿ ವಿಮಾನಗಳಿಂದ ಶೋಭಿತವಾಗಿ ವಜ್ರಗಳು ಹವಳಗಳು ದಿವ್ಯರತ್ನಗಳು ಇವುಗಳಿಂದ ಕೆತ್ತಲ್ಪಟ್ಟ ಜಗುಲಿಗಳಿಂದಲೂ ಚತುಷ್ಪಥಗಳಿಂದಲೂ ರಮ್ಯವಾಗಿರುವುದು ; ನಿತ್ಯವಾದ ಯೌವ್ವನವೂ ಸೌಂದರ್ಯವೂ ಉಳ್ಳವರಾಗಿ ದಿವ್ಯದುಕೂಲಧಾರಿಣೀರಾಗಿ ಸುಂದರಸ್ತ್ರೀರುಗಳು ಅಗ್ನಿಜ್ವಾಲೆಗಳಂತೆ ಹೊಳೆಯುತ ಆ ದೇವಪುರದಲ್ಲಿ ಪ್ರಕಾಶಿಸುವರು ; ಮತ್ತು ಆ ಸ್ವರ್ಗಪುರದಲ್ಲಿ ದೇವಸ್ತ್ರೀಯರುಗಳ ಕೇಶಗಳಿಂದ ಜಾರಿದ ಕಲ್ಹಾರ ಮೊದಲಾದ ಪುಷ್ಪಮಾಲ್ಯಗಳ ಪರಿಮಳವನ್ನು ತೆಗೆದುಕೊಂಡು ಇಂಪಾಗಿ ವಾಯುವು ಬೀಸುವುದು ; ಮತ್ತು ಆ ದೇವಪುರದಲ್ಲಿ ಅಗರುಗಂಧವುಳ್ಳದ್ದಾಗಿ ಸುವರ್ಣಮಯಗಳಾದ ಗವಾಕ್ಷಗಳ ಮಾರ್ಗದಿಂದ ಬರುವ ಧೂಪಗಳಿಂದ ಪರಿಮಳವುಳ್ಳದ್ದಾಗಿ ಶುದ್ಧವಾದ ಮಾರ್ಗದಲ್ಲಿ ದೇವಸ್ತ್ರೀಯರು ಸಂಚರಿಸುವರು ; ಮುತ್ತುಗಳ ಮೇಲುಕಟ್ಟುಗಳಿಂದಲೂ ಸುವರ್ಣ ರತ್ನಧ್ವಜಗಳಿಂದಲೂ ನಾನಾಪ್ರಕಾರಗಳಾದ ಟೆಕ್ಕೆಗಳಿಂದಲೂ ಲೋವೆಗಳಿಂದಲೂ ಯುಕ್ತವಾಗಿ ನವಿಲುಗಳಿಂದಲೂ ಪಾರಾವತಗಳಿಂದಲೂ ಭೃಂಗಗಳಿಂದಲೂ ನಾದಿತವಾಗಿ ದೇವಸ್ತ್ರೀರುಗಳ ದಿವ್ಯಗಾನದಿಂದಲೂ ಸುಖಕರವಾಗಿರುವುದು ; ಮೃದಂಗಗಳು ಶಂಖಗಳು ತಮಟೆಗಳು ಭೇರಿಗಳು ತಾಳಗಳು ವೀಣೆಗಳು ಡೋಲುಗಳು ಕೊಳಲುಗಳು ಇವುಗಳ ನಾದಗಳಿಂದಲೂ ನಾಟ್ಯಗಳಿಂದಲೂ ಗಂಧರ್ವರ ಗಾನಗಳಿಂದಲೂ ಮನೋಹರವಾಗಿ ಸ್ವಪ್ರಭೆಯಿಂದ ಸೂರ್ಯಾದಿ ಗ್ರಹ

ಗಳ ಕಾಂತಿಯನ್ನು ಜಯಿಸುವದಾಗಿರುವುದು; ಅಧರ್ಮಿಷ್ಠರು ಪ್ರಾಣಿದ್ರೋಹಿಗಳು ದುರ್ಜನರು ಯಾವಸ್ವರ್ಗಪುರಿಯನ್ನೈದುವದಿಲ್ಲವೋ ಕಾಮುಕರು ಲುಬ್ಧರು ಯಾವ ಸ್ವರ್ಗವನ್ನು ಪಡೆಯುವದಿಲ್ಲವೋ ಮಹಾತ್ಮರಾದ ಮಹಾತಪಸ್ವಿಗಳು ಯಾವ ಸ್ವರ್ಗವನ್ನೈದುವರೋ ಅಂಥಾ ಸ್ವರ್ಗಪುರವನ್ನು ಕುರಿತು ಬಲಿಚಕ್ರವರ್ತಿಯು ತೆರಳಿದನು! ಎಲೈ ಅರಸೇ, ಅನಂತರದಲ್ಲಿ ಬಲಿಚಕ್ರವರ್ತಿಯು ಮಹಾ ಸೇನಾಪರಿವೃತನಾಗಿ ಆ ಸ್ವರ್ಗವನ್ನು ಹೊರಗೆ ನಾಲ್ಕು ಕಡೆಯಲ್ಲಿಯೂ ತನ್ನ ಸೇನೆಯನ್ನು ಮುತ್ತಿಗೆಹಾಕಿದನು; ಇಂದ್ರನ ಸ್ತ್ರೀರುಗಳಿಗೆ ಭಯವನ್ನುಂಟುಮಾಡುವನಾಗಿ ಶುಕ್ರದತ್ತವಾದ ಶಂಖವನ್ನು ಧ್ವನಿಗೈಸಿದನು; ಆಗ ದೇವೇಂದ್ರನು ಬಲಿಚಕ್ರವರ್ತಿಯ ಮಹಾ ಸನ್ನಾಹವನ್ನು ತಿಳಿದು ಸರ್ವದೇವ ಸಮೂಹಯುತನಾಗಿ ಬೃಹಸ್ಪತಿಯನ್ನು ಕುರಿತು 'ಎಲೈ ಪೂಜ್ಯನಾದ ಬೃಹಸ್ಪತಿಯೇ, ನಮಗೆ ಪೂರ್ವವೈರಿಯಾದ ಬಲಿಚಕ್ರವರ್ತಿಯ ಪ್ರಯತ್ನವು ಸಹಿಸಲಶಕ್ಯವಾಗಿ ತೋರುತ್ತದೆ. ಈ ಬಲಿಯು ಯಾವದರಿಂದ ಇಷ್ಟು ಬಲಿಷ್ಠನಾದನೋ ಈ ಸ್ವರ್ಗಲೋಕವನ್ನು ಮುಖದಿಂದಲೇ ಗ್ರಾಸವನ್ನು ಮಾಡುವನಂತೆ ಹತ್ತು ದಿಕ್ಕುಗಳನ್ನು ಆಕ್ರಮಿಸುವಂತಿರುವ ಈ ಬಲಿಯನ್ನು ನಿರಾಕರಿಸುವದಕ್ಕೆ ಒಬ್ಬನೂ ಸಮರ್ಥನಿಲ್ಲ; ಪ್ರಳಯ ಕಾಲಾಗ್ನಿಯಂತೆ ದೃಷ್ಟಿಯಿಂದಲೇ ಆಕಾಶವನ್ನು ದಹಿಸುವಂತಿಧಾನೆ; ಈರೀತಿಯಲ್ಲಿ ನನ್ನ ಶತೃವಾದ ಬಲಿಗೆ ಏಕಾದೃಶವಾದ ಪ್ರತಾಪವು ದೇಹಬಲವು ಇಂದ್ರಿಯಬಲವು ಬುದ್ಧಿಬಲವು ಕಾಂತಿಯೂ ಈ ಮಹಾಪ್ರಯತ್ನವು ಸಹ ಬರುವದಕ್ಕೆ ಕಾರಣವನ್ನು ಪೇಳು' ಎಂದು ನುಡಿದ ಇಂದ್ರನ ವಾಕ್ಯವನ್ನು ಕೇಳಿ ಬೃಹಸ್ಪತಿಯು 'ಎಲೈ ಇಂದ್ರನೇ, ಶತೃವಾದ ಬಲಿಗೆ ಇಂಥಾ ಔನ್ನತ್ಯವು ಬರುವದಕ್ಕೆ ಕಾರಣವನ್ನು ನಾನು ತಿಳಿದು ಇಧೇನೆ; ಬ್ರಹ್ಮವಾದಿಗಳಾದ ಭಾರ್ಗವರಾದ ಬ್ರಾಹ್ಮಣೋತ್ತಮರಿಂದ ಶಿಷ್ಯನಾದ ಬಲಿಗೋಸ್ಕರ ಮಹತ್ತಾದ ತೇಜಸ್ಸು ಸಂಪಾದಿಸಲ್ಪಟ್ಟಿತು; ನಿನ್ನಂಥಾವನಾಗಲಿ ನೀನೇ ಆಗಲಿ ಈಶ್ವರನಾದ ಶ್ರೀಹರಿಯನ್ನು ಬಿಟ್ಟು ಸ್ವಸಾಮರ್ಥ್ಯದಿಂದ ಬ್ರಾಹ್ಮಣರನ್ನು ನಂಬಿರುವ ಬಲಿಯನ್ನು ಯುದ್ಧದಲ್ಲಿ ಜಯಿಸಲೋಸುಗ ಸಮರ್ಥನಾಗುವದಿಲ್ಲ; ಅದುಕಾರಣ ನೀವೆಲ್ಲರು ಸ್ವರ್ಗಲೋಕವನ್ನು ಬಿಟ್ಟು ಅದೃಶ್ಯಭಾವವನ್ನೈದಿ ಶತೃವಾದ ಬಲಿಗೆ ಶಕ್ತಿಕ್ಷಯಕಾಲ ಬರುವವರಿವಿಗೂ ಪ್ರತೀಕ್ಷಿಸಿಕೊಂಡಿರುವರಾಗಿ; ಈ ಬಲಿಯು ಬ್ರಾಹ್ಮಣರ ಬಲದಿಂದ ಉತ್ತರೋತ್ತರ ಶ್ರೇಯಸ್ಸನ್ನೈದಿದವನಾಗಿ ಪ್ರಬಲವಾದ ಪರಾಕ್ರಮವುಳ್ಳವನಾಗಿಧಾನೆ; ಪುನಃ ಆ ಬ್ರಾಹ್ಮಣರೇ ದೇವೋಪದ್ರವವನ್ನಾಲೋಚಿಸಿ ಅವರ ಯತ್ನದಿಂದಲೇ ಸಪರಿವಾರನಾಗಿ ಈ ಬಲಿಯು ನಾಶವನ್ನೈದುತ್ತಾನೆ; ಈರೀತಿಯಲ್ಲಿ ಸರ್ವಜ್ಞನಾದ ಬೃಹಸ್ಪತಿಯಿಂದ ಆಲೋಚಿತರಾಗಿ ದೇವತೆಗಳು ಕಾಮರೂಪಿಗಳಾಗಿ ಸ್ವರ್ಗವನ್ನು ಬಿಟ್ಟು ಹೊರಟುಹೋದರು; ಅನಂತರದಲ್ಲಿ ದೇವತೆಗಳು ಅದೃಶ್ಯರಾಗಿರುತಿರಲಾಗಿ ವಿರೋಚನ ಪುತ್ರನಾದ ಬಲಿಯು ಆ ದೇವಪುರಿಯಲ್ಲಿದ್ದುಕೊಂಡು ಲೋಕತ್ರಯವನ್ನು ಸ್ವವಶವನ್ನು ಮಾಡಿಕೊಂಡನು; ಶಿಷ್ಯವತ್ಸಲರಾದ ಭಾರ್ಗವರು ಜಗದ್ವಿಜಯಿಯಾದ ಭಕ್ತನಾದ ಪ್ರಿಯಶಿಷ್ಯನಾದ ಬಲಿಚಕ್ರವರ್ತಿಯಿಂದ ಶತಾಶ್ವಮೇಧಗಳನ್ನು ಮಾಡಿಸಿದರು; ಆ ಶತಾಶ್ವಮೇಧಗಳ ಪ್ರಭಾವದಿಂದ ಬಲಿಚಕ್ರವರ್ತಿಯು ಲೋಕತ್ರಯದಲ್ಲಿಯೂ ಆಶ್ಚರ್ಯಕರವಾದ ಕೀರ್ತಿಯನ್ನು ದಶದಿಕ್ಕುಗಳಲ್ಲಿಯೂ ಪ್ರಕಾಶಿಸುವಂತೆ ಮಾಡುವನಾಗಿ ಪೂರ್ಣಚಂದ್ರನಂತೆ ಪ್ರಕಾಶಿಸಿದನು; ಮಹಾ ಮನಸ್ವಿಯಾದ ಆ ಬಲಿಯು ತನ್ನನ್ನು ಕೃತಕೃತ್ಯನನ್ನಾಗಿ ತಿಳಿದು ಬ್ರಾಹ್ಮಣರಿಂದಲೂ ದೇವತೆಗಳಿಂದಲೂ ಸಂಪಾದಿಸಿ ಕೊಡಲ್ಪಟ್ಟ ಅಭಿವೃದ್ಧವಾದ ತ್ರಿಲೋಕಸಾಮ್ರಾಜ್ಯ ಲಕ್ಷ್ಮಿಯನ್ನನುಭವಿಸಿದನು."

೧೬ನೇ ಅಧ್ಯಾಯ.

ಕಶ್ಯಪಋಷಿಯು ಅದಿತಿದೇವಿಗೆ ಪಯೋವ್ರತವೆಂಬ ಮಹಾ ವ್ರತವನ್ನುಪದೇಶಿಸಿದ್ದು.

"ಎಲೈ ಅರಸೇ, ಆಗ ದೇವಮಾತೃವಾದ ಅದಿತಿದೇವಿಯು ದೈತ್ಯರಿಂದ ಸ್ವರ್ಗವು ಅಪಹರಿಸಲ್ಪಡುತಲಿರಲಾಗಿ ಪುತ್ರರಾದ ದೇವತೆಗಳು ಅದೃಶ್ಯರಾಗಿ ಹೋಗುತಿರಲು ಅನಾಥೆಯಂತೆ ದುಃಖಪಟ್ಟಳು; ಹೀಗಿರುವಲ್ಲಿ ಒಂದು ಸಮ

ಯದಲ್ಲಿ ಭಗವಂತನಾದ ಕಶ್ಯಪನು ಶಾಂತವಾದ ಸಮಾಧಿಯುಳ್ಳವನಾಗಿ ಉತ್ಸವರಹಿತವಾಗಿ ನಿರಾನಂದವಾಗಿರುವ ಅದಿತಿದೇವಿಯ ಆಶ್ರಮವನ್ನು ಕುರಿತು ಬಂದು ಆ ದೇವಿಯಿಂದ ಯಥಾಶಾಸ್ತ್ರವಾಗಿ ಪೂಜಿತನಾಗಿ ದರ್ಭಾಸನದಲ್ಲಿ ಕುಳಿತು ದೀನವಾದ ಮುಖವುಳ್ಳ ಪತ್ನಿಯಾದ ಅದಿತಿದೇವಿಯನ್ನು ಕುರಿತು 'ಎಲೈ ಶುಭಕರಳಾದ ಅದಿತಿಯೇ, ಏನು ಕಾರಣ ದುಃಖಿತಳಾಗಿದ್ದೀಯೆ ; ಲೋಕತ್ರಯದಲ್ಲಿ ಬ್ರಾಹ್ಮಣರಿಗೂ ಗೋವುಗಳಿಗೂ ಕ್ಷೇಮತಪ್ಪಿದೆಯೋ ಏನು ? ಧರ್ಮಕ್ಕೆ ಅಶುಭಬಂದಿದೆಯೋ ಏನು ? ಎಲೈ ಪತ್ನಿಯೇ, ನಮ್ಮ ಮನೆಗಳಲ್ಲಿ ಧರ್ಮಾರ್ಥ ಕಾಮಗಳಿಗೆ ಅಕುಶಲ ವುಂಟಾಗಿದೆಯೋ ಏನು ? ಅಥವಾ ಗೃಹಕೃತ್ಯದಲ್ಲಿ ಆಸಕ್ತಳಾಗಿ ನೀನು ಮನೆಗೆ ಬಂದ ಅತಿಥಿಗಳನ್ನು ಉಪಚರಿಸದೇ ಇದ್ದುದರಿಂದ ಆ ಅತಿಥಿಗಳು ಪ್ರತ್ಯುತ್ಥಾನಾರ್ಘ್ಯಾದಿಗಳಿಂದ ಸತ್ಕರಿಸಲ್ಪಡದೇ ಹೋದರೋ ಏನು ? ಅದೇನುಕಾರಣ ವೆಂದರೆ ; ಯಾವ ಮನೆಗಳಲ್ಲಿ ಅತಿಥಿಗಳು ಉದಕದಿಂದಲಾದರೂ ಸತ್ಕೃತರಾಗದೇ ಹೊರಟುಹೋಗುವರೋ ಆ ಮನೆಗಳು ನರಿಗಳ ದರಿಗಳೆಂದು ದೊಡ್ಡವರು ಹೇಳ್ವರು ! ಎಲೈ ಶುಭಕರಳಾದ ಅದಿತಿಯೇ, ನಾನು ತಪಸ್ಸಿಗೋಸುಗ ಅನ್ಯತ್ರ ಹೊರಟುಹೋಗಿರಲಾಗಿ ನನ್ನ ವಿಯೋಗದಿಂದ ವ್ಯಸನಪಡುತಲಿರುವ ನಿನ್ನಿಂದ ಅಗ್ನಿಗಳು ಹವಿರ್ದ್ರವ್ಯಗಳಿಂದ ಕಾಲಕಾಲಗಳಲ್ಲಿ ಹೋಮಂಗೈಯಲ್ಪಡಲಿಲ್ಲವೋ ಏನು ? ಬ್ರಾಹ್ಮಣನು ಅಗ್ನಿಯು ಸರ್ವದೇವಾತ್ಮಕನಾದ ವಿಷ್ಣುವಿನ ಮುಖರೂಪರಾದಕಾರಣ ಬ್ರಾಹ್ಮಣನನ್ನು ಅಗ್ನಿಯನ್ನು ಪೂಜಿಸುವ ಜನರು ಇಷ್ಟಗಳಾದ ಭೋಗಗಳುಳ್ಳ ಲೋಕಗಳನ್ನೈದುವರು ! ಎಲೈ ಅದಿತಿಯೇ, ನಿನ್ನ ಪುತ್ರರೆಲ್ಲರೂ ಕ್ಷೇಮವಂತರಾಗಿದ್ದಾರೆಯೋ ಏನು ? ನಿನ್ನ ಮುಖಚಿನ್ಹೆಗಳಿಂದ ಅಸ್ವಸ್ಥಚಿತ್ತಳಾಗಿ ವ್ಯಸನವುಳ್ಳವಳಂತೆ ನಿನ್ನನ್ನು ನೋಡುತ್ತೇನೆ' ಎಂದು ನುಡಿದ ಪತಿಯ ವಾಕ್ಯವನ್ನು ಕೇಳಿ ಅದಿತಿಯು ಕಶ್ಯಪಋಷಿಯನ್ನು ಕುರಿತು 'ಎಲೈ ಬ್ರಾಹ್ಮಣೋತ್ತಮನಾದ ಪತಿಯೇ, ಬ್ರಾಹ್ಮಣರಿಗೂ ಗೋವುಗಳಿಗೂ ಧರ್ಮಕ್ಕೂ ಕ್ಷೇಮವೇ ಇದೆ ; ನಿನ್ನ ಈ ಗೃಹವು ಧರ್ಮಾರ್ಥ ಕಾಮಗಳಿಗೆ ಸಿದ್ಧಸ್ಥಾನವಾಗಿ ಕ್ಷೇಮವಾಗೇ ಇದೆ ; ಅಗ್ನಿಯು ಅತಿಥಿಗಳು ಭೃತ್ಯರು ಭಿಕ್ಷುಗಳು ಅನ್ನಾರ್ಥಿಗಳಾದವರು ಈ ಸಮಸ್ತ ಜನರೂ ನಾನೂ ನಿನ್ನನ್ನೇ ಧ್ಯಾನಮಾಡಿಕೊಂಡಿರುವ ಮಹಿಮೆಯಿಂದ ಸಂತೋಷಯುಕ್ತರಾಗಿದ್ದೇವೆ ; ಈ ಪ್ರಕಾರವಾಗಿ ಧರ್ಮಗಳನ್ನು ಶಿಕ್ಷಿಸುವ ಮಹಾತ್ಮನಾದ ಪತಿಯಾದ ನಿನ್ನ ಅನುಗ್ರಹಕ್ಕೆ ಪಾತ್ರಳಾದ ನನ್ನ ಮನೋರಥವು ಯಾವದುತಾನೆ ಪೂರ್ಣವಲ್ಲದೇ ಹೋದೀತು ! ಎಲೈ ಮರೀಚಿ ಪುತ್ರನಾದ ಪತಿಯೇ, ನಿನ್ನ ಪುತ್ರರಲ್ಲಿಯೂ ಸತ್ವರಜಸ್ತಮೋಗುಣಯುಕ್ತವಾದ ದೇವ ಮನುಷ್ಯ ತಿರ್ಯಗಾದಿ ಪ್ರಾಣಿಗಳಲ್ಲಿಯೂ ನೀನು ಸಮದೃಷ್ಟಿಯುಳ್ಳವನು ; ಈಶ್ವರನು ಭಕ್ತರನ್ನೇ ಐದುವನು ; ಆದುದರಿಂದ ನಿನ್ನ ಭಕ್ತಳಾದ ನನ್ನನ್ನನುಗ್ರಹಿಸು ; ನನ್ನ ಪುತ್ರರಾದ ದೇವತೆಗಳು ಶತೃಗಳಿಂದ ಅಪಹೃತವಾದ ಐಶ್ವರ್ಯವೂ ಸ್ಥಾನವೂ ಉಳ್ಳವರಾಗಿ ಶ್ರಮವನ್ನು ಪಡುತ್ತಾರೆ ; ನನ್ನ ಪುತ್ರರನ್ನೂ ನನ್ನನ್ನೂ ರಕ್ಷಿಸು ; ಬಲಿಷ್ಠರಾಗಿ ಶತೃಗಳಾದ ದೈತ್ಯರಿಂದ ನಮ್ಮ ಐಶ್ವರ್ಯವೂ ಲಕ್ಷ್ಮಿಯೂ ಯಶಸ್ಸೂ ಸ್ಥಾನವೂ ಅಪಹೃತವಾಯಿತು ; ಅದರಿಂದ ಹೊರಡಿಸಲ್ಪಟ್ಟ ವ್ಯಸನಸಮುದ್ರದಲ್ಲಿ ಮುಳುಗಿದ್ದೇನೆ ! ಎಲೈ ಶುಭಕರನಾದ ಕಶ್ಯಪಪ್ರಜೇಶನೇ, ನನ್ನ ಪುತ್ರರಾದ ದೇವತೆಗಳು ನಷ್ಟಗಳಾದ ಐಶ್ವರ್ಯಾದಿಗಳನ್ನು ಪ್ರಸಕ್ತವಾಗಿ ಪಡೆಯುವರೋ ಹಾಗೆ ನನಗೆ ಅನುಗ್ರಹವನ್ನು ಮಾಡು' ಎಂದು ನುಡಿದ ಪತ್ನೀವಾಕ್ಯವನ್ನು ಕೇಳಿ ಕಶ್ಯಪಋಷಿಯು 'ಎಲೈ ಅದಿತಿಯೇ, ಸ್ನೇಹಬಂಧವುಳ್ಳ ಈ ಪ್ರಪಂಚವು ಭಗವಂತನ ಮಾಯಾಬಲವು ; ಈ ಆಶ್ಚರ್ಯವನ್ನು ನೋಡು ! ಅನಾತ್ಮನಾದ ಭೂತಮಯವಾಗಿರುವ ದೇಹವೆಲ್ಲಿ ? ಮಾಯೆಗೆ ಹೊರಚಾದ ಆತ್ಮನೆಲ್ಲಿ ? ಯಾರಿಗೆ ಯಾರು ? ಪತ್ನೀಪುತ್ರಾದಿಗಳೆಂಬ ಈ ಸ್ನೇಹಾನುಬಂಧಕ್ಕೆ ಮೋಹವೇ ಕಾರಣವು ; ಜನಾರ್ದನನಾಗಿ ಸರ್ವಪ್ರಾಣಿಗಳ ಹೃದಯಾಂತರ್ಯಾಮಿಯಾಗಿ ಜಗದ್ಗುರುವಾಗಿ ವಾಸುದೇವನಾಗಿ ಪರಮಪುರುಷನಾದ ಭಗವಂತನನ್ನು ಸೇವಿಸು ಹೋಗು ; ದೀನದಯಾಪರನಾದ ಆ ಹರಿಯು ನಿನ್ನ ಮನೋರಥಗಳನ್ನು ಕೊಡುತ್ತಾನೆ ; ಭಗವತ್ಸೇವೆಯೇ ಸಫಲವಾದುದೆಂದು ನನ್ನ ಮತಿ ; ಮಿಕ್ಕಾವದೂ ಸಫಲವಾಗುವದಿಲ್ಲ' ಎಂಬ ಪತಿಯ ವಾಕ್ಯವನ್ನು ಕೇಳಿ ಅದಿತಿಯು ಪ್ರಸಕ್ತ 'ಎಲೈ ಪತಿಯೇ, ಜಗದ್ಗುರುವಾದ ಭಗವಂತನನ್ನು ಯಾವ ವಿಧಾನದಿಂದ ಭಜಿಸಲಿ ; ಸತ್ಯಸಂಕಲ್ಪನಾದ ಆ ಭಗವಂತನು ಎಂತು ನನ್ನ ಮನೋರಥವನ್ನು ಪರಿಪೂರ್ಣಮಾಡ್ಯಾನು ; ಪುತ್ರಸಮೇತಳಾಗಿ ವ್ಯಸನಪಡುತಲಿರುವ ನನ್ನಲ್ಲಿ ಶ್ರೀ ಭಗ

ವಂತನು ಶೀಘ್ರವಾಗಿ ಯಾವ ಸಾಧನದಿಂದ ಪ್ರಸನ್ನನಾಗುವನೋ ಅಂತಹ ವಿಧಾನವನ್ನು ನನಗೆ ಉಪದೇಶವನ್ನು ಮಾಡು' ಎಂಬ ಪತ್ನೀವಾಕ್ಯವನ್ನು ಕೇಳಿ ಕಶ್ಯಪಋಷಿಯು 'ಎಲೈ ಅದಿತಿಯೆ, ಪುತ್ರಕಾಮನಾದ ನನ್ನಿಂದ ಪ್ರಶ್ನೆಗೈಯಲ್ಪಟ್ಟ ಬ್ರಹ್ಮದೇವನು ಯಾವ ವ್ರತವನ್ನು ನನಿಗೆ ಉಪದೇಶಂಗೈದನೋ ಭಗವತ್ಸಂತೋಷಕರವಾದ ಆ ವ್ರತವನ್ನು ನಿನಗೆ ಹೇಳುತ್ತೇನೆ; ಫಾಲ್ಗುಣ ಶುಕ್ಲಪಕ್ಷದಲ್ಲಿ ಪಯೋವ್ರತವೆಂಬ ಉತ್ತಮವ್ರತವನ್ನಾಚರಿಸಬೇಕು; ಆ ವ್ರತವು ಹನ್ನೆರಡುದಿವಸ ಮಾಡತಕ್ಕದ್ದು; ಭಕ್ತಿಯುಕ್ತನಾಗಿ ವಿಷ್ಣುಪೂಜೆಯನ್ನು ಮಾಡಬೇಕು; ಮಾಘ ಬಹುಳ ಅಮಾವಾಸ್ಯೆಯಲ್ಲಿ ವರಾಹದಿಂದ ಅಗಿಯಲ್ಪಟ್ಟ ಮೃತ್ತನ್ನು ತಂದು ಆ ಮೃತ್ತನ್ನು ದೇಹಕ್ಕೆ ಲೇಪನಂಗೈದುಕೊಂಡು ಸ್ನಾನವನ್ನು ಮಾಡಬೇಕು; ಅಂತಹ ಮೃತ್ತು ಶಿಕ್ಕದೆ ಇದ್ದರೆ ಸಾಧಾರಣವಾದ ಶುದ್ಧಮೃತ್ತಿನಿಂದಲಾದರೂ ಲೇಪನಂಗೈದುಕೊಂಡು ಸ್ನಾನವನ್ನು ಮಾಡಬೇಕು; ಅದಕ್ಕೆ ಮಂತ್ರವೇನೆಂದರೆ: ಎಲೈ ಭೂದೇವಿಯೆ, ಆದಿವರಾಹರೂಪನಾದ ಭಗವಂತನಿಂದ ನೀನು ಎತ್ತಲ್ಪಟ್ಟವಳು; ಆದಕಾರಣ ನಿನಿಗೆ ~~ನಮಸ್ಕಾರವು! ನನ್ನ~~ ಪಾಪವನ್ನು ಪರಿಹರಿಸು ಎಂಬ ಮಂತ್ರದಿಂದ ಸ್ನಾನಂಗೈಯಬೇಕು; ಈರೀತಿಯಲ್ಲಿ ತನ್ನ ನಿತ್ಯಕರ್ಮವನ್ನು ಮಾಡಿಕೊಂಡು ಅನಂತರದಲ್ಲಿ ಸ್ಥಂಡಿಲದಲ್ಲಾದರೂ ಸೂರ್ಯನಲ್ಲಾದರೂ ಜಲದಲ್ಲಾದರೂ ಅಗ್ನಿಯಲ್ಲಾದರೂ ಗುರುವಿನಲ್ಲಾದರೂ ಭಗವಂತನನ್ನು ಪೂಜಿಸಬೇಕು; ಪುರುಷನಾದ ವ್ಯಾಪಕನಾದ ಸರ್ವಭೂತಾಂತರ್ಯಾಮಿಯಾದ ವಾಸುದೇವನಾದ ಸಾಕ್ಷಿಯಾದ ಭಗವಂತನಾದ ನಿನಿಗೆ ನಮಸ್ಕಾರವು! ಅವ್ಯಕ್ತನಾಗಿ ಸೂಕ್ಷ್ಮನಾಗಿ ಪ್ರಧಾನಪುರುಷನಾಗಿ ಇಪ್ಪತ್ತುನಾಲ್ಕು ತತ್ವಗಳನ್ನು ತಿಳಿದವನಾಗಿ ಸಾಂಖ್ಯಶಾಸ್ತ್ರ ಪ್ರವರ್ತಕನಾದ ನಿನಿಗೆ ನಮಸ್ಕಾರವು! ಎರಡು ಶಿರಸ್ಸುಗಳೂ ಮೂರು ಪಾದಗಳೂ ನಾಲ್ಕು ಶೃಂಗಗಳೂ ಸಪ್ತ ಹಸ್ತಗಳೂ ಉಳ್ಳವನಾಗಿ ಫಲಪ್ರದನಾಗಿ ಅಗ್ನಿಮೂರ್ತಿಯಾದ ನಿನಿಗೋಸುಗ ನಮಸ್ಕಾರವು! ಶಿವರೂಪನಾಗಿ ರುದ್ರನಾಗಿ ಶಕ್ತಿಧರನಾಗಿ ಸರ್ವವಿದ್ಯಾಪತಿಯಾಗಿ ಭೂತಪತಿಯಾಗಿ ಭೂಪತಿಯಾದ ನಿನಿಗೆ ನಮಸ್ಕಾರವು! ಹಿರಣ್ಯಗರ್ಭನಾಗಿ ಜಗದ್ರೂಪನಾಗಿ ಸೂಕ್ಷ್ಮನಾಗಿ ಯೋಗೈಶ್ವರ್ಯ ಶರೀರನಾಗಿ ಯೋಗಕಾರಣನಾದ ನಿನಿಗೆ ನಮಸ್ಕಾರವು! ಆದಿದೇವನಾಗಿ ನಾರಾಯಣನಾಮಕ ಋಷಿಯಾದ ಹರಿಯಾದ ನಿನಗೆ ನಮಸ್ಕಾರವು! ಮರಕತಗಳಿಗೆ ಸಮಾನವಾದ ಶ್ಯಾಮವರ್ಣ ಶರೀರವುಳ್ಳವನಾಗಿ ಪಡೆಯಲ್ಪಟ್ಟ ಲಕ್ಷ್ಮಿಯುಳ್ಳ ಕೇಶವನಾದ ಪೀತಾಂಬರಧರನಾದ ನಿನಿಗೆ ನಮಸ್ಕಾರವು! ಎಲೈ ಭಗವಂತನೆ, ನೀನು ಪುರುಷರಿಗೆ ಸಮಸ್ತ ವರಪ್ರದನಾದುದರಿಂದ ಪ್ರಾಜ್ಞರು ಶ್ರೇಯಸ್ಸಿಗೋಸುಗ ನಿನ್ನ ಪಾದರೇಣುವನ್ನು ಭಜಿಸುತ್ತಾರೆ; ದೇವತೆಗಳು ಮಹಾಲಕ್ಷ್ಮಿಯು ಯಾವ ಭಗವಂತನ ಪಾದಪದ್ಮಗಳ ಸೌರಭವನ್ನಪೇಕ್ಷಿಸುವರಂತೆ ಯಾವ ಭಗವಂತನನ್ನನುಸರಿಸುವರೋ ಆ ಭಗವಂತನು ಪ್ರಸನ್ನನಾಗಲಿ' ಎಂಬ ಅರ್ಥವುಳ್ಳ ಮಂತ್ರಗಳಿಂದ ಆವಾಹನಪೂರ್ವಕವಾಗಿ ಪಾದ್ಯಾಚಮನೀಯಗಳು ಮುಂತಾಗಿರುವ ಉಪಚಾರಗಳಿಂದ ಶ್ರದ್ಧಾಯುಕ್ತನಾಗಿ ಭಗವಂತನನ್ನು ಪೂಜಿಸಬೇಕು; ಗಂಧಮಾಲ್ಯಾದಿಗಳಿಂದ ಪೂಜಿಸಿ ಕ್ಷೀರಾದಿಗಳಿಂದ ಸ್ನಾನಂಗೈಸಬೇಕು; ವಸ್ತ್ರಗಳು ಉಪವೀತವು ಆಭರಣಗಳು ಮೊದಲಾದ ಉಪಚಾರಗಳಿಂದ ಪೂಜಿಸಬೇಕು; ವಿಭವವಿದ್ದಲ್ಲಿ ಕ್ಷೀರದಿಂದ ಪಕ್ವವಾದ ಶಾಲ್ಯನ್ನವನ್ನು ಶರ್ಕರಾಜ್ಯಗಳಿಂದ ಮಿಶ್ರಮಾಡಿ ದ್ವಾದಶಾಕ್ಷರ ಮಂತ್ರದಿಂದ ನಿವೇದನವನ್ನು ಮಾಡಬೇಕು; ಆ ಮೂಲಮಂತ್ರದಿಂದ ಪಾಯಸವನ್ನು ಹೋಮಂಗೈಯ್ಯಬೇಕು; ಭಗವನ್ನಿವೇದಿತವಾದ ಪಾಯಸವನ್ನು ಭಕ್ತನಿಗೆ ಕೊಡಬೇಕು; ತಾನಾದರು ಭಕ್ಷಿಸಬೇಕು; ಆಚಮನವನ್ನು ಕೊಟ್ಟು ತಾಂಬೂಲವನ್ನು ನಿವೇದಿಸಬೇಕು; ದ್ವಾದಶಾಕ್ಷರ ಮೂಲಮಂತ್ರವನ್ನು ನೂರೆಂಟಾವರ್ತಿ ಜಪಿಸಬೇಕು; ಸ್ತೋತ್ರವಾಕ್ಯಗಳಿಂದ ಸ್ತುತಿಸಬೇಕು; ಪ್ರದಕ್ಷಿಣವನ್ನು ಮಾಡಿ ದಂಡಾಕಾರವಾಗಿ ನಮಸ್ಕರಿಸಬೇಕು; ಭಗವನ್ನಿರ್ಮಾಲ್ಯವನ್ನು ಶಿರಸ್ಸಿನಲ್ಲಿ ಧರಿಸಿ ಆಮೇಲೆ ಉದ್ವಾಸನಂಗೈಯ್ಯಬೇಕು; ವಿಭವಾನುಸಾರವಾಗಿ ಇಬ್ಬರು ಮೊದಲುಗೊಂಡು ಪಾಯಸಾನ್ನವನ್ನು ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಬೇಕು; ಆ ಬ್ರಾಹ್ಮಣರಿಂದ ಅನುಜ್ಞಾತನಾಗಿ ಬಂಧುಸಮೇತನಾಗಿ ಶೇಷವನ್ನು ಭೋಜನಂಗೈಯಬೇಕು; ಅನಂತರದಲ್ಲಿ ಅಮಾವಾಸ್ಯೆಯ ರಾತ್ರಿಯಲ್ಲಿ ಬ್ರಹ್ಮಚರ್ಯ ವ್ರತವುಳ್ಳವನಾಗಿ ಆ ಬೆಳಗಾಗ ಫಾಲ್ಗುಣ ಶುದ್ಧ ಪಾಡ್ಯದ ಪ್ರಾತಃಕಾಲದಲ್ಲಿ ಸ್ನಾನವನ್ನು ಮಾಡಿ ನಿತ್ಯಕರ್ಮವನ್ನು ಪೂರ್ತಿಗೈದು ಭಗವಂತನ

ನ್ನು ಕ್ಷೀರದಿಂದ ಅಭಿಷೇಕವನ್ನು ಮಾಡಿ ಪೂಜೆಯನ್ನು ಮಾಡಬೇಕು ; ಹನ್ನೆರಡು ದಿವಸ ಪರ್ಯಂತವೂ ತಾನು ಕ್ಷೀರಾಹಾರವನ್ನು ಮಾಡಿಕೊಂಡು ವಿಷ್ಣುಪೂಜೆಯಲ್ಲಿ ಆದರವುಳ್ಳವನಾಗಿ ವ್ರತವನ್ನು ಮಾಡಬೇಕು ; ಪೂರ್ವದ ಹಾಗೆ ಹೋಮವನ್ನು ಮಾಡಿ ಭಗವಂತನ ಪೂಜೆಯೂ ಹೋಮವೂ ಬ್ರಾಹ್ಮಣ ಭೋಜನವೂ ಬ್ರಹ್ಮಚರ್ಯವೂ ಅಧ್ಯಯನವೂ ತ್ರಿಷವಣಸ್ನಾನವೂ ಈಕ್ರಮದಿಂದ ಪಾಡ್ಯ ಮೊದಲುಗೊಂಡು ತ್ರಯೋದಶೀಪರ್ಯಂತವೂ ವ್ರತವನ್ನಾಚರಿಸಬೇಕು; ಅಶ್ಲೀಲವಾದ ದುಷ್ಟಾಲಾಪವನ್ನು ಬಿಡಬೇಕು ; ಗಂಧಮಾಲ್ಯಾದಿ ಭೋಗಗಳನ್ನು ಬಿಡಬೇಕು; ವಾಸುದೇವ ಪರಾಯಣನಾಗಿ ಸರ್ವಭೂತಗಳಲ್ಲಿ ದಯಾವಂತನಾಗಿ ತ್ರಯೋದಶಿಯಲ್ಲಿ ಪಂಚಗವ್ಯಗಳಿಂದ ವಿಷ್ಣುವಿಗೆ ಅಭಿಷೇಕವನ್ನು ಮಾಡಬೇಕು; ವಿತ್ತಲೋಭವರ್ಜಿತನಾಗಿ ವಿಧಾನಜ್ಞರಾದ ಬ್ರಾಹ್ಮಣರಿಂದ ಯಥಾಶಾಸ್ತ್ರವಾಗಿ ವಿಷ್ಣುವಿನ ಪೂಜೆಯನ್ನು ಮಾಡಿಸಿ ತಾನೂ ಪೂಜೆಯನ್ನು ಮಾಡಬೇಕು ; ಕ್ಷೀರದಿಂದ ಚರುಶ್ರಪಣವನ್ನು ಮಾಡಿ ~~ವಿಷ್ಣುವಿಗೋಸ್ಕರ~~ ಪುರುಷಸೂಕ್ತದಿಂದ ಹೋಮವನ್ನು ಮಾಡಬೇಕು; ಅನೇಕ ಭಕ್ಷ್ಯಗಳಿಂದಲೂ ನಾನಾವಿಧ ಫಲಗಳಿಂದಲೂ ಯುಕ್ತವಾದ ತುಷ್ಟಿಕರವಾದ ನೈವೇದ್ಯವನ್ನು ಭಗವಂತನಿಗೆ ಸಮರ್ಪಿಸಬೇಕು ; ಜ್ಞಾನಸಂಪನ್ನನಾದ ಆಚಾರ್ಯನನ್ನು ವಸ್ತ್ರಾಭರಣ ಗೋ ಹಿರಣ್ಯಾದಿವ್ಯನ್ನಗಳಿಂದ ಭೋಜನಂಗೈಸಬೇಕು ; ಇದು ಉತ್ತಮವಾದ ಭಗವದಾರಾಧನೆವು ; ಮತ್ತು ಆ ಸಮಯದಲ್ಲಿ ಬಂದ ಬ್ರಾಹ್ಮಣರಿಗೆ ಭೋಜನವನ್ನು ಮಾಡಿಸಿ ಆಚಾರ್ಯನಿಗೆ ಋತ್ವಿಕ್ಕುಗಳಿಗೆ ಯಥಾಯೋಗ್ಯವಾಗಿ ದಕ್ಷಿಣಾದಿಗಳನ್ನು ಕೊಟ್ಟು ಭಗವದರ್ಪಣವನ್ನು ಮಾಡಬೇಕು ; ಶೂದ್ರಾದಿ ಶ್ವಪಚಪರ್ಯಂತವು ಯಾರು ಬಂದಾಗ್ಯೂ ಅನ್ನಾದಿಗಳಿಂದ ಅವರನ್ನು ಸಂತೋಷಪಡಿಸಿ ಅವರು ಭೋಜನವನ್ನು ಮಾಡಿದಮೇಲೆ ದೀನಾಂಧ ಕೃಪಣಾದಿಗಳನ್ನು ಭೋಜನವನ್ನು ಮಾಡಿಸಬೇಕು ; ಭಗವದರ್ಪಣವನ್ನು ಮಾಡಿದಮೇಲೆ ತಾನು ಬಂಧುಯುಕ್ತನಾಗಿ ಭೋಜನಂಗೈಯ್ಯಬೇಕು ; ನೃತ್ತಗೀತ ವಾದ್ಯಗಳಿಂದಲೂ ಸ್ವಸ್ತಿವಾಚನಗಳಿಂದಲೂ ಭಗವಂತನ ಕಥೆಗಳಿಂದಲೂ ಪ್ರತಿದಿವಸವು ಭಗವಂತನ ಪೂಜೆಯನ್ನು ಮಾಡಬೇಕು ; ಇದು ಭಗವದಾರಾಧನರೂಪವಾದ ಪಯೋವ್ರತವು ; ಬ್ರಹ್ಮದೇವನಿಂದ ನನಗೋಸ್ಕರ ಹೇಳಲ್ಪಟ್ಟ ಈ ವ್ರತವು ನಿನಗೆ ನನ್ನಿಂದ ಹೇಳಲ್ಪಟ್ಟಿತು ! ಎಲೈ ಪೂಜ್ಯಳಾದ ಅದಿತಿಯೆ, ನೀನು ಶುದ್ಧಭಾವದಿಂದ ಇಂದ್ರಿಯನಿಗ್ರಹವನ್ನು ಮಾಡಿ ಚನ್ನಾಗಿ ಆಚರಿಸಲ್ಪಟ್ಟ ಈ ವ್ರತದಿಂದ ವಿಷ್ಣುವನ್ನು ಪೂಜಿಸಬೇಕು ; ಈ ವ್ರತವು ಸರ್ವಯಜ್ಞಾತ್ಮಕವಾದದ್ದು ; ಸರ್ವ ವ್ರತಗಳಲ್ಲಿಯೂ ಶ್ರೇಷ್ಠವಾದದ್ದು ; ದಾನವು ಈಶ್ವರತರ್ಪಣವು ಇದೇ ತಪಸ್ಸಾದವು ! ಎಲೈ ಮಂಗಳಕರಳಾದ ಅದಿತಿಯೇ, ಅದುಕಾರಣ ಪರಿಶುದ್ಧಳಾಗಿ ಶ್ರದ್ಧೆಯಿಂದ ಈ ವ್ರತವನ್ನಾಚರಿಸು ; ಭಗವಂತನು ನಿನಗೆ ಪ್ರೀತನಾಗಿ ನಿನ್ನ ಇಷ್ಟಾರ್ಥವನ್ನು ಕೊಡುತ್ತಾನೆ ' ಎಂದು ಕಸ್ಯಪಪ್ರಜೇಶನು ಪತ್ನಿಯಾದ ಅದಿತಿಯನ್ನು ಕುರಿತು ಉಪದೇಶಂಗೈದನು.''

---

೧೭ ನೇ ಅಧ್ಯಾಯ.

ಪಯೋವ್ರತದಿಂದ ತೃಪ್ತನಾದ ಹರಿಯು ಅದಿತೀದೇವಿಯಲ್ಲಿ ಅವತರಿಸಿ ಬ್ರಹ್ಮನಿಂದ ಸ್ತುತಿಸಲ್ಪಟ್ಟದ್ದು.

ಕೇಳೈ ಅರಸೆ, ಈರೀತಿಯಲ್ಲಿ ತನ್ನ ಪತಿಯಾದ ಕಸ್ಯಪಋಷಿಯಿಂದ ಆಜ್ಞಪ್ತಳಾದ ಅದಿತೀದೇವಿಯು ಅಪ್ರಮತ್ತಳಾಗಿ ಈ ದ್ವಾದಶದಿವಸ ಬುದ್ಧಿಯೇ ಸಾರಥಿಯಾಗುಳ್ಳವಳಾಗಿ ಮನಸ್ಸಿನಿಂದ ಇಂದ್ರಿಯಗಳೆಂಬ ದುಷ್ಟಾಶ್ವಗಳನ್ನು ನಿಗ್ರಹಿಸುವಳಾಗಿ ಮಹಾಪುರುಷನಾದ ಪರಮಾತ್ಮನನ್ನೇ ಏಕಾಗ್ರಚಿತ್ತಳಾಗಿ ಧ್ಯಾನಿಸುವಳಾಗಿ ಅಖಿಲಾತ್ಮಕನಾದ ಭಗವಂತನಾದ ವಾಸುದೇವನಲ್ಲಿ ಚಿತ್ತವನ್ನಿಟ್ಟಿಸಿ ಪಯೋವ್ರತವನ್ನಾಚರಿಸಿದಳು ! ಎಲೈ ಅರಸೆ, ಭಗವಂತನಾದ ಆದಿಪುರುಷನಾದ ಶಂಖಚಕ್ರಗದಾಧರನಾದ ಪೀತಾಂಬರನಾದ ಚತುರ್ಬಾಹುವಾದ ನಾರಾಯಣನು ಅದಿತೀದೇವಿಗೆ ಪ್ರತ್ಯಕ್ಷನಾದನು ; ಆಗ ಅದಿತೀದೇವಿಯು ಪ್ರತ್ಯಕ್ಷನಾದ ಆ ಭಗವಂತನನ್ನು ನೋಡಿ ಪ್ರೀತಿಯಿಂದ ಪರವಶಳಾಗಿ ಶೀಘ್ರವಾಗಿ ಎದ್ದು ಆದರಪೂರ್ವಕವಾಗಿ ದಂಡಾಕಾರವಾಗಿ ಸಾಷ್ಟಾಂಗ ಪ್ರಣಾಮಂಗೈದು ಅಂಜಲಿಬಂಧಂಗೈದು

ಆನಂದಬಾಷ್ಪಪೂರಿತನೇತ್ರಳಾಗಿ ಭಗವಂತನ ದರ್ಶನದಿಂದ ರೋಮಾಂಚಿತಳಾಗಿ ಶರೀರಕಂಪವುಳ್ಳವಳಾಗಿ ಸ್ತುತಿಗೈಯ್ಯುವದಕ್ಕೆ ತೋರದೆ ಸುಮ್ಮನಿದ್ದಳು ! ಎಲೈ ಅರಸೆ, ಆ ಅದಿತಿದೇವಿಯು ರಮಾಪತಿಯಾಗಿ ಯಜ್ಞಪತಿಯಾಗಿ ಜಗತ್ಪತಿಯಾದ ಭಗವಂತನನ್ನು ನೇತ್ರಗಳಿಂದ ಪಾನಂಗೈವವಳಂತೆ ನೋಡುವವಳಾಗಿ ಗದ್ಗದವಾಕ್ಯದಿಂದ ಮೆಲ್ಲನೆ ಸ್ತುತಿಗೈದಳು ! ಎಲೈ ಯಜ್ಞೇಶ್ವರನೆ, ಯಜ್ಞಪುರುಷನೆ ಅಚ್ಯುತನೆ ಪಾದದಲ್ಲಿ ಗಂಗಾತೀರ್ಥವುಳ್ಳವನೆ ಪ್ರಶಸ್ತಕೀರ್ತಿಶಾಲಿಯೆ ಶ್ರೋತ್ರಗಳಿಗೆ ಶುಭಕರವಾದ ನಾಮಧೇಯವುಳ್ಳವನೆ ಆಪತ್ತುಗಳಿಂದ ಪೀಡಿತರಾದ ಜನರ ಪಾಪವನ್ನು ಶಮನವನ್ನು ಮಾಡುವದಕ್ಕೋಸುಗ ಆವಿರ್ಭಾವವುಳ್ಳ ಭಗವಂತನೆ ನೀನು ದೀನಬಂಧುವಾದುದರಿಂದ ನಮಗೆ ಸುಖವನ್ನು ಕೊಡು ; ಜಗದ್ರೂಪನಾಗಿ ಜಗತ್ತುಗಳನ್ನು ಸೃಷ್ಟಿಸ್ಥಿತಿಲಯಗಳನ್ನು ಮಾಡಲೋಸುಗ ಸ್ವೇಚ್ಛೆಯಿಂದ ಗ್ರಹಿಸಲ್ಪಟ್ಟ ನಾನಾವಿಧ ಗುಣಶಕ್ತಿಯುಳ್ಳವನಾಗಿ ಅವಿಕೃತಸ್ವರೂಪನಾಗಿ ಸರ್ವಕಾಲದಲ್ಲಿಯೂ ವೃದ್ಧಿಪಡದಿರುವ ಪೂರ್ತವಾದ ಬೋಧಶಕ್ತಿಯಿಂದ ಪರಾಕೃತವಾದ ಆತ್ಮಮಾಯೆಯುಳ್ಳ ಮಹತ್ತಾದ ಸ್ವರೂಪವುಳ್ಳ ಪರಮಾತ್ಮನಾದ ನಿನಗೆ ನಮಸ್ಕಾರವು ! ಎಲೈ ಅಪರಿಚ್ಛಿನ್ನನಾದ ಭಗವಂತನೆ, ನೀನು ಪ್ರಸನ್ನನಾದರೆ ಅಧಿಕವಾದ ಆಯುಷ್ಯವು ಇಷ್ಟವಾದ ಶರೀರವು ಅಧಿಕವಾದ ಸಂಪತ್ತು ಲೋಕತ್ರಯಾಧಿಪತ್ಯವು ಅಣಿಮಾದಿ ಸಕಲ ಸಿದ್ಧಿಗಳು ಧರ್ಮಾರ್ಥಕಾಮಗಳು ಮುಕ್ತಿಕಾರಣವಾದ ದಿವ್ಯಜ್ಞಾನವು ಸಹಾ ಉಂಟಾಗುವುದು ; ಶತ್ರುಜಯರೂಪವಾದ ಸ್ವಲ್ಪಫಲವಾಗುವದರಲ್ಲಿ ಸಂಶಯವೇನು ! ಎಲೈ ಅರಸೆ, ಅದಿತಿದೇವಿಯಿಂದ ಈರೀತಿಯಲ್ಲಿ ಸ್ತುತಿಗೈಯಲ್ಪಟ್ಟ ಪದ್ಮನೇತ್ರನಾದ ಭಗವಂತನು ಸರ್ವಭೂತಾಂತರ್ಯಾಮಿಯಾದುದರಿಂದ ಅದಿತಿದೇವಿಯನ್ನು ಕುರಿತು ‘ಎಲೈ ಮಾತೃವಾದ ಅದಿತಿಯೆ, ನಿನ್ನ ಮನೋಗತಾರ್ಥವನ್ನು ನಾನು ತಿಳಿದಿದ್ದೇನೆ ; ಶತ್ರುಗಳಿಂದ ಪರಾಜಿತರಾಗಿ ಸ್ಥಾನಚ್ಯುತರಾಗಿ ಶ್ರಮಪಡುವ ದೇವತೆಗಳ ಕ್ಷೇಮವನ್ನಪೇಕ್ಷಿಸುತ್ತೀಯೆ ; ನಿಗ್ರಹಿಸಲಶಕ್ಯರಾದ ಅಸುರರನ್ನು ಯುದ್ಧದಲ್ಲಿ ಜಯಿಸಿ ತನ್ನ ಐಶ್ವರ್ಯವನ್ನೂ ಸ್ಥಾನವನ್ನೂ ಪುನಶ್ಚ ಐದಿ ಸುಖದಿಂದಿರುವ ಪುತ್ರರಾದ ದೇವತೆಗಳೊಡನೆ ಏಕತ್ರ ವಾಸಂಗೈಯ್ಯಲೋಸುಗ ನೀನು ಅಪೇಕ್ಷಿಸುತ್ತೀಯೆ ; ಇಂದ್ರನೇ ಜ್ಯೇಷ್ಠನಾಗುಳ್ಳ ನಿನ್ನ ಪುತ್ರರಾದ ದೇವತೆಗಳಿಂದ ಸಂಹೃತರಾದ ದೈತ್ಯರ ಪತ್ನೀರು ರೋದನಂಗೈಯುತಲಿರಲಾಗಿ ಪುನಶ್ಚ ಪಡೆಯಲ್ಪಟ್ಟ ಶ್ರೇಯಸ್ಸೂ ಸಂಪತ್ತೂ ಉಳ್ಳವರಾಗಿ ಸ್ವರ್ಗಲೋಕವನ್ನೈದಿ ನಿರ್ಭಯದಿಂದ ವಿಹರಿಸುತಲಿರುವ ಸಮೃದ್ಧರಾದ ಪುತ್ರರಾದ ದೇವತೆಗಳನ್ನು ನೋಡಲೋಸುಗ ಇಚ್ಛೈಸುತ್ತೀಯೆ ! ಎಲೈ ಅದಿತಿಯೆ, ಈಗ ಯಾವಕಾರಣ ಅಸುರಸಮೂಹನಾಥರು ಅನುಕೂಲವಾದ ಈಶ್ವರನಿಂದಲೂ ಬ್ರಾಹ್ಮಣರಿಂದಲೂ ಸಂರಕ್ಷಿಸಲ್ಪಡುವರಾಗಿ ಸ್ವತಂತ್ರರಾಗಿಧಾರೆಯೋ ಅದುಕಾರಣ ಅಸುರರು ನಿಗ್ರಹಿಸಲಶಕ್ಯರು ; ಇದು ಪರಾಕ್ರಮಕ್ಕೆ ಕಾಲವಲ್ಲವಾದುದರಿಂದ ನಮಗೆ ಸುಖಕಾಲವಲ್ಲ ; ಆದಾಗ್ಯೂ ನಿನ್ನಿಂದ ಆಚರಿಸಲ್ಪಟ್ಟ ವ್ರತದಿಂ ಸಂತುಷ್ಟನಾದ ನಾನು ನಿನ್ನ ಇಷ್ಟಾರ್ಥಕ್ಕೋಸುಗ ಉಪಾಯವನ್ನಾಲೋಚಿಸುತ್ತೇನೆ ; ಶ್ರದ್ಧಾಪೂರ್ವಕವಾದ ನನ್ನ ಪೂಜೆಯು ನಿಷ್ಫಲವಾಗುವದಿಲ್ಲವಾದುದರಿಂದ ಶ್ರದ್ಧಾನುರೂಪವಾಗಿ ಫಲವನ್ನೀವುದು ; ನಿನ್ನಿಂದ ಪಯೋವ್ರತಾನುಷ್ಠಾನದಿಂದ ಪುತ್ರರಕ್ಷಣಾರ್ಥವಾಗಿ ಪೂಜಿತನಾಗಿ ಯಥಾಯೋಗ್ಯವಾಗಿ ಸ್ತುತಿಗೈಯಲ್ಪಟ್ಟವನಾದಕಾರಣ ನಾನು ನನ್ನ ಅಂಶದಿದ ನಿನಗೆ ಪುತ್ರಭಾವವನ್ನೈದಿ ನಿನ್ನ ಪತಿಯಾದ ಕಶ್ಯಪಋಷಿಯ ತಪಸ್ಸಿನಲ್ಲಿದ್ದುಕೊಂಡು ನಿನ್ನ ಪುತ್ರರಾದ ದೇವತೆಗಳನ್ನು ರಕ್ಷಿಸುತ್ತೇನೆ ! ಎಲೈ ಅದಿತಿದೇವಿಯೆ, ನೀನು ನಿರ್ದೋಷನಾದ ಪತಿಯಾದ ಕಶ್ಯಪಪ್ರಜೇಶನನ್ನೈದಿ ಈ ರೂಪದಿಂದಿರುವ ನನ್ನನ್ನು ಭಾವಿಸು ; ಈ ದೇವರಹಸ್ಯವಾದ ಈ ಅರ್ಥವನ್ನು ಮತ್ತೊಬ್ಬರಿಗೆ ಹೇಳಬೇಡ ; ರಹಸ್ಯವಾಗಿದ್ದರೆ ಸರ್ವಕಾರ್ಯವು ಅನುಕೂಲವಾಗುವುದು’ ಎಂದು ಇಷ್ಟುಮಾತ್ರವನ್ನು ಹೇಳಿ ಅಲ್ಲೇ ಭಗವಂತನು ಅಂತರ್ಧಾನವನ್ನೈದಿದನು ; ಅದಿತೀದೇವಿಯು ತನ್ನ ಉದರದಲ್ಲಿ ದುರ್ಲಭವಾದ ಭಗವದವತಾರವನ್ನು ನಿಶ್ಚೈಸಿ ಅಧಿಕವಾದ ಭಕ್ತಿಯಿಂದ ಕೃತಕೃತ್ಯಳಾಗಿ ಪತಿಯಾದ ಕಶ್ಯಪಋಷಿಯನ್ನೈದಿದಳು ; ಸ್ಥಿರಚಿತ್ತನಾದ ಆ ಕಶ್ಯಪಪ್ರಜೇಶನು ಸಮಾಧಿದೃಷ್ಟಿಯಿಂದ ಸ್ವವೀರ್ಯದಲ್ಲಿ ಭಗವಂತನು ಸ್ವಾಂಶದಿಂದ ಪ್ರವೇಶಿಸುವನಾಗುತ್ತಾನೆಂದು ತಿಳಿದು ತಪಸ್ಸಿನಿಂದ ಬಹುಕಾಲದಿಂದ ಸಂಪಾದಿತವಾದ ಭಗವಂತನಾದ ಹರಿಯಿಂದ ಅಧಿಷ್ಠಿತವಾದ ಸ್ವವೀರ್ಯವನ್ನು ಅದಿತೀಗರ್ಭದಲ್ಲಿ ದಾರುವಿನಲ್ಲಿ ವಾಯುವು ಅಗ್ನಿಯನ್ನಂತೆ ಇರಿಸಿದನು.

ಆಗ ಬ್ರಹ್ಮನು ಈ ಅರ್ಥವನ್ನು ತಿಳಿದು ರಹಸ್ಯನಾಮಗಳಿಂದ ಭಗವಂತನನ್ನು ಕುರಿತು "ಎಲೈ ಸರ್ವಸ್ತುತ್ಯನಾದ ಭಗವಂತನೇ, ಸರ್ವೋತ್ಕರ್ಷೆಯಿಂದಿರುವ ಉರುಕ್ರಮನೇ, ನಿನಗೋಸುಗ ನಮಸ್ಕಾರವು! ಬ್ರಾಹ್ಮಣಪ್ರಿಯನಾದ ಗುಣತ್ರಯವನ್ನಾಶ್ರಯಿಸಿದ ದೇವನೇ ನಿನಗೋಸ್ಕರ ನಮಸ್ಕಾರವು! ಪ್ರಾಗ್ಜನ್ಮದಲ್ಲಿ ಪೃಶ್ನಿಯೆಂಬ ನಾಮಧೇಯವುಳ್ಳ ಅದಿತಿದೇವಿಗೆ ಬಾಲಕನಾದ ದೇವಗರ್ಭನಾದ ಲೋಕತ್ರಯಾತ್ಮಕವಾದ ನಾಭಿಯುಳ್ಳ ಸರ್ವಜೀವಾಂತರ್ಯಾಮಿಯಾದ ಲೋಕಾತೀತನಾದ ನಿನಿಗೆ ನಮಸ್ಕಾರವು! ನೀನೇ ಪ್ರಪಂಚಕ್ಕೆ ಆದಿರೂಪನು; ಮಧ್ಯವಾದ ಸ್ಥಿತಿರೂಪನು; ಚರಮಾವಸ್ಥೆಯನ್ನುಂಟುಮಾಡುವವನು; ಅನಂತಶಕ್ತಿಯುಳ್ಳ ಪುರುಷನು; ಜಲಪ್ರವಾಹವು ತನ್ನಲ್ಲಿ ಬಿದ್ದ ತೃಣಾದಿಗಳನ್ನು ಎಂತು ಆಕರ್ಷಿಸುವುದೋ ಅಂತು ನೀನು ಕಾಲರೂಪನಾಗಿ ಜಗತ್ತನ್ನಾಕರ್ಷಿಸುತ್ತೀಯೆ! ಎಲೈ ಭಗವಂತನೇ, ನೀನು ಸ್ಥಾವರಜಂಗಮ ಪ್ರಾಣಿಗಳಿಗೂ ಪ್ರಜೇಶ್ವರರಿಗೂ ಜನಕನಾದವನು; ಸ್ವರ್ಗಚ್ಯುತರಾದ ದೇವತೆಗಳಿಗೆ ಜಲದಲ್ಲಿ ಮುಳುಗಿಹೋಗಿರುವ ಪ್ರಾಣಿಗಳಿಗೆ ನಾವೆಯಂತೆ ನೀನೇ ಗತಿಯು! ಈ ಸ್ತುತಿಗೆ ಭಾವವೇನಂದರೆ: ನಿರ್ಗುಣಪರಬ್ರಹ್ಮನಾದ ನಿನಗೆ ಜನ್ಮಾದಿಗಳಿಲ್ಲ; ಆದಾಗ್ಯೂ ದೇವತೆಗಳಿಗೆ ನೀನೇ ಪರಮರಕ್ಷಕನಾದುದರಿಂದ ಅವರ ಕಾರ್ಯಸಾಧನಾರ್ಥವಾಗಿ ನಿನಗೆ ಅವತಾರವು; ಅದರಿಂದ ಸ್ವರ್ಗಚ್ಯುತರಾದ ದೇವತೆಗಳನ್ನು ಪುನಃ ಸ್ವರ್ಗದಲ್ಲಿರಿಸು" ಎಂಬ ಅಭಿಪ್ರಾಯದಿಂದ ಬ್ರಹ್ಮನು ರಹಸ್ಯಸ್ತುತಿಯಂಗೈದನು.

೧೮ನೇ ಅಧ್ಯಾಯ.

ವಾ ಮ ನಾ ವ ತಾ ರ ವು .

ಎಲೈ ಅರಸೇ, ಈಪ್ರಕಾರವಾಗಿ ಬ್ರಹ್ಮನಿಂದ ಸ್ತುತಿಸಲ್ಪಟ್ಟ ಕರ್ಮಗಳೂ ಪರಾಕ್ರಮಗಳೂ ಉಳ್ಳ ಅನಾದ್ಯನಂತನಾದ ಶ್ರೀಹರಿಯು ಚತುರ್ಭುಜನಾಗಿ ಶಂಖ ಚಕ್ರ ಗದಾ ಪದ್ಮಗಳನ್ನು ಧರಿಸಿ ಕಮಲನೇತ್ರನಾಗಿ ಪೀತಾಂಬರನಾಗಿ ನಿರ್ಮಲವಾದ ಶ್ಯಾಮವರ್ಣವುಳ್ಳವನಾಗಿ ಮಕರಕುಂಡಲಗಳ ಕಾಂತಿಯಿಂದ ಪ್ರಕಾಶಿಸುವ ಮಂಗಳಕರವಾದ ಮುಖಪದ್ಮವುಳ್ಳವನಾಗಿ ಶ್ರೀವತ್ಸವೆಂಬ ಚಿಹ್ನೆಯಿಂದ ಸುಂದರವಾದ ವಕ್ಷಸ್ಥಳವುಳ್ಳವನಾಗಿ ರತ್ನಮಯಗಳಾದ ಕಡಗಗಳು ಭುಜಕೀರ್ತಿಗಳು ದಿವ್ಯ ಕಿರೀಟ ಒಡ್ಯಾಣವು ಪಾದಾಭರಣಗಳು ಮುಂತಾದ ಭೂಷಣಗಳಿಂದ ಅಲಂಕೃತನಾದ ಸರ್ವಾಂಗವುಳ್ಳವನಾಗಿ ಭ್ರಮರಸಮೂಹಗಳಿಂದ ಧ್ವನಿಗೈಯಲ್ಪಟ್ಟ ಸ್ವಕೀಯವಾದ ವನಮಾಲೆಯಿಂದ ಪ್ರಕಾಶಿಸುವನಾಗಿ ಕಂಠದಲ್ಲಿ ಹೊಳೆಯುತಲಿರುವ ಕೌಸ್ತುಭಮಣಿಯುಳ್ಳವನಾಗಿ ಸ್ವಪ್ರಭೆಯಿಂದ ಕಶ್ಯಪಪ್ರಜೇಶನ ಗೃಹದ ಅಂಧಕಾರವನ್ನು ಪರಿಹರಿಸುವನಾಗಿ ಅದಿತೀದೇವಿಯಲ್ಲಿ ಆವಿರ್ಭವಿಸಿದನು; ಆ ಭಗವಂತನ ಅವತಾರೋತ್ಸವದಲ್ಲಿ ದಿಕ್ಕುಗಳು ಪ್ರಸನ್ನಗಳಾದವು; ಸರೋವರಗಳು ನಿರ್ಮಲಗಳಾದವು; ಪ್ರಜೆಗಳು ಸಂತುಷ್ಟರಾದರು; ವಸಂತಾದಿಗಳು ಗುಣಯುಕ್ತಗಳಾದವು; ಸ್ವರ್ಗವು ಅಂತರಿಕ್ಷವು ಭೂಮಿಯು ದೇವತೆಗಳು ಗೋವುಗಳು ಬ್ರಾಹ್ಮಣರು ಸಹ ಸಂತೋಷಪಡುವರಾದರು; ಭಾದ್ರಪದ ಶುದ್ಧ ದ್ವಾದಶೀಯಲ್ಲಿ ಶ್ರವಣನಕ್ಷತ್ರ ಪ್ರಥಮಾಂಶದಲ್ಲಿ ಅಭಿಜಿನ್ನಕ್ಷತ್ರದ ಅಂಶದಲ್ಲಿ ಶ್ರೀ ಭಗವಂತನು ಅವತರಿಸಿದನು; ಆಗ ಅಶ್ವಿನ್ಯಾದಿ ನಕ್ಷತ್ರಗಳು ಕುಜಾದಿ ಗ್ರಹಗಳು ಸೂರ್ಯಚಂದ್ರರು ಮುಂತಾದ ಜ್ಯೋತಿರ್ಗಣಗಳು ಆ ಭಗವಂತನ ಜನ್ಮಸಮಯದಲ್ಲಿ ಶುಭಪ್ರದರಾಗಿದ್ದರು; ಯಾವ ದ್ವಾದಶಿಯಲ್ಲಿ ಭಗವಂತನ ಜನನವುಂಟಾಯಿತೋ ಆ ದ್ವಾದಶಿಯು ವಿಜಯದ್ವಾದಶಿಯೆನಿಸಿಕೊಂಬುವುದು; ಸೂರ್ಯನು ಮಧ್ಯಾಹ್ನದಲ್ಲಿದ್ದನು; ಆ ಸಮಯದಲ್ಲಿ ಶಂಖಗಳು ಭೇರಿಗಳು ನಗಾರಿಗಳು ಮೃದಂಗಗಳು ಪಣವಗಳು ಡೋಲುಗಳು ಮುಂತಾದ ವಿಚಿತ್ರವಾದ್ಯಗಳ ಧ್ವನಿಗಳು ವಿಜೃಂಭಿಸಿದವು; ಸಂತುಷ್ಟರಾದ ಅಪ್ಸರಸ್ತ್ರೀಯರು ನರ್ತನಗೈದರು; ಗಂಧರ್ವಪತಿಗಳು ಗಾನಗೈದರು; ಋಷಿಗಳು ದೇವತೆಗಳು ಮನುಗಳು ಪಿತೃಗಳು ಅಗ್ನಿಗಳು ಸಂತೋಷಪಟ್ಟರು; ಸಿದ್ಧರು ವಿದ್ಯಾಧರರು ಕಿನ್ನರರು ಕಿಂಪುರುಷರು ಚಾರಣರು ಯಕ್ಷರು ರಾಕ್ಷಸರು ಪಕ್ಷಿಸರ್ಪಶ್ರೇಷ್ಠಗಳು ಗಾನಗೈವ ನಾಗಕನ್ಯಾಸಮೂಹಗಳಿಂದೊಡಗೂಡಿ ದೇವತೆಗಳನ್ನು ಹಾಡಿ ನಾಟ್ಯಂ

ಗೈವ ದೇವಸ್ತ್ರೀರುಗಳಿಂದಲೂ ಸಹ ಅದಿತೀದೇವಿಯು ಆಶ್ರಮವನ್ನು ಪ್ರವೇಶಂಗೈಯ್ಯುವರಾಗಿ ಪುಷ್ಪಗಳಿಂದ ವರ್ಷಿಸಿದರು ; ಆಗ ಅದಿತಿಯು ತನ್ನ ಗರ್ಭದಲ್ಲಿ ಆವಿರ್ಭೂತನಾದ ಪರಮಪುರುಷನನ್ನು ನೋಡಿ ಆಶ್ಚರ್ಯಪಡುವಳಾಗಿ ಸಂತೋಷವನ್ನೈದಿದಳು ; ತನ್ನ ಯೋಗಮಾಯೆಯಿಂದ ಗ್ರಹಿಸಲ್ಪಟ್ಟ ದೇಹವುಳ್ಳ ಭಗವಂತನನ್ನು ಕಶ್ಯಪಬ್ರಹ್ಮನು ಆಶ್ಚರ್ಯಯುಕ್ತನಾಗಿ–ಜಯ ಜಯ–ಎಂದು ನುಡಿದನು ; ಆಶ್ಚರ್ಯವ್ಯಾಪಾರವುಳ್ಳ ಅವ್ಯಕ್ತನಾದ ಚಿದ್ರೂಪನಾದ ಶ್ರೀಹರಿಯು ದಿವ್ಯತೇಜಸ್ಸಿನಿಂದಲೂ ಭೂಷಣಗಳಿಂದಲೂ ಆಯುಧಗಳಿಂದಲೂ ಪ್ರಕಾಶಿತವಾದ ಲೋಕವ್ಯಕ್ತವಾದ ಯಾವ ದೇಹವನ್ನು ಧರಿಸಿ ಅವತರಿಸಿದನೋ ಮಾತಾಪಿತೃಗಳು ನೋಡುತಲಿರುವಾಗಲೇ ಆ ಶರೀರದಿಂದಲೇ ವೇಷಧಾರಿಯಂತೆ ವಾಮನರೂಪನಾಗಿ ಬ್ರಹ್ಮಚಾರಿರೂಪನಾದನು ; ವಟುವಾದ ವಾಮನಮೂರ್ತಿಯನ್ನು ನೋಡಿ ಮಹರ್ಷಿಗಳು ಸಂತೋಷಪಡುವವರಾಗಿ ಕಶ್ಯಪಋಷಿಯನ್ನು ಪುರಸ್ಕರಿಸಿಕೊಂಡು ಜಾತಕರ್ಮಾದಿ ಶುಭಕರ್ಮಗಳನ್ನು ಮಾಡಿದರು ; ಆ ವಾಮನಮೂರ್ತಿಯ ಉಪನಯನಕಾಲದಲ್ಲಿ ಸಾವಿತ್ರೀ ಉಪದೇಶವನ್ನು ಸೂರ್ಯನೇ ಮಾಡಿದನು ; ಬೃಹಸ್ಪತಿಯು ಯಜ್ಞೋಪವೀತವನ್ನಿತ್ತನು; ಕಶ್ಯಪನು ಮುಂಜಿಯನ್ನು ಕಟ್ಟಿದನು ; ಭೂದೇವಿಯು ಕೃಷ್ಣಾಜಿನವನ್ನು ಕೊಟ್ಟಳು ; ಓಷಧೀಪತಿಯಾದ ಚಂದ್ರನು ದಂಡವನ್ನಿತ್ತನು ; ಕೌಪೀನವನ್ನೂ ವಸ್ತ್ರವನ್ನೂ ತಾಯಾದ ಅದಿತಿ ಕೊಟ್ಟಳು ; ಅಂತರಿಕ್ಷದೇವತೆಯು ಛತ್ರವನ್ನಿತ್ತಳು ; ಬ್ರಹ್ಮದೇವನು ಕಮಂಡಲವನ್ನಿತ್ತನು ; ಸಪ್ತಋಷಿಗಳು ಕುಶದರ್ಭೆಗಳನ್ನು ಕೊಟ್ಟರು ! ಸರಸ್ವತಿಯು ಅಕ್ಷಮಾಲೆಯನ್ನಿತ್ತಳು ; ಕುಬೇರನು ಭಿಕ್ಷಾಹರಣಾರ್ಥವಾದ ದಿವ್ಯಪಾತ್ರವನ್ನಿತ್ತನು ; ಷಡ್ಗುಣೈಶ್ವರ್ಯಸಂಪನ್ನಳಾದ ಆದಿಪತಿವ್ರತೆಯಾದ ಸಾಕ್ಷಾಲ್ಲೋಕಮಾತೃವಾದ ಪಾರ್ವತೀದೇವಿಯು ಭಿಕ್ಷೆಯನ್ನಿತ್ತಳು ! ಎಲೈ ಅರಸೇ, ವಟುವಾದ ವಾಮನಮೂರ್ತಿಯು ಈಪ್ರಕಾರ ಮಹರ್ಷಿಗಳಿಂದುಪನೀತನಾಗಿ ಸರ್ವಾದ್ಭುತವಾದ ಬ್ರಹ್ಮವರ್ಚಸ್ಸಿನಿಂದ ಮಹರ್ಷಿಗಳ ಮಂತ್ರಘೋಷದಿಂದ ಪ್ರಕಾಶಿಸಲ್ಪಟ್ಟ ಆ ಸಭೆಯನ್ನತಿಕ್ರಮಿಸಿ ಪ್ರಕಾಶಿಸಿದನು ; ಅನಂತರದಲ್ಲಿ ಭಗವಂತನಾದ ವಾಮನಮೂರ್ತಿಯು ಅಗ್ನಿಕಾರ್ಯಾರ್ಥವಾಗಿ ಅಗ್ನಿಪ್ರತಿಷ್ಠೆಯನ್ನು ಮಾಡಿಕೊಂಡು ಪ್ರಜ್ವಾಲನಂಗೈದು ಪರಿಸಮೂಹನವನ್ನು ಮಾಡಿ ಪರಿಸ್ತರಣವನ್ನಿರಿಸಿ ಅಗ್ನಿಯನ್ನು ಪೂಜಿಸಿ ಸಮಿತ್ತುಗಳಿಂದ ಹೋಮಂಗೈದನು ; ಆ ವಾಮನಮೂರ್ತಿಯು ಭೃಗುವಂಶಸ್ಥರಾದ ಬ್ರಹ್ಮತ್ರೋತ್ತಮರಿಂದ ಕಲ್ಪಿತಗಳಾದ ಸಾಮಗ್ರಿಗಳಿಂದ ಅಶ್ವಮೇಧಯಾಗದಲ್ಲಿ ದೀಕ್ಷಿತನಾದ ಬಲಿಚಕ್ರವರ್ತಿಯನ್ನು ಕೇಳಿ ಸಕಲವಾದ ಬಲದಿಂದ ಪರಿಪೂರ್ಣನಾಗಿ ಪಾದವಿನ್ಯಾಸದಿಂದ ಭೂಮಿಯನ್ನು ತಗ್ಗುವಂತೆ ಮಾಡುವವನಾಗಿ ಆ ಯಜ್ಞಶಾಲೆಯನ್ನು ಕುರಿತು ಬಂದನು ; ನರ್ಮದಾನದಿಯ ಉತ್ತರತೀರದಲ್ಲಿ ಭೃಗುವತ್ಸನಾಮಕವಾದ ಕ್ಷೇತ್ರದಲ್ಲಿ ಕ್ರತುಶ್ರೇಷ್ಠವಾದ ಅಶ್ವಮೇಧವನ್ನು ಬೆಳೆಸುತಲಿರುವ ಬಲಿಚಕ್ರವರ್ತಿಯ ಋತ್ವಿಕ್ಕುಗಳಾದ ಭಾರ್ಗವರು ಸಮೀಪದಲ್ಲೀ ಉದಯಿಸಿ ಬರುವ ಸೂರ್ಯನಂತೆ ಆ ವಾಮನಮೂರ್ತಿಯನ್ನು ಕಂಡರು ; ಆ ಋತ್ವಿಕ್ಕುಗಳು ಯಜಮಾನನು ಸಭೆಯಲ್ಲಿ ಕೂಡಿರುವ ಬ್ರಾಹ್ಮಣರೂ ವಾಮನಮೂರ್ತಿಯ ತೇಜಸ್ಸಿನಿಂದ ಪ್ರತಿಹತಪ್ರಭರಾಗಿ ಈ ಕ್ರತುವನ್ನು ನೋಡಲಿಚ್ಛೆಯಿಂದ ಸೂರ್ಯನೇ ಬರುತ್ತಾನೆಯೋ ಅಲ್ಲದಿದ್ದರೆ ಅಗ್ನಿಯೋ ಬರುತ್ತಾನೆಯೋ ಸನತ್ಕುಮಾರಮುನಿಯೋ ಬರುತ್ತಾನೆಯೋ ಎಂದು ನಾನಾರೂಪವಾದ ಊಹೆಯುಳ್ಳವರಾದರು ; ಈರೀತಿಯಲ್ಲಿ ಶಿಷ್ಯಸಮೇತರಾದ ಭಾರ್ಗವರಿಂದ ಅನೇಕಪ್ರಕಾರವಾಗಿ ಊಹಿಸಲ್ಪಡುವನಾಗಿ ಆ ವಾಮನಮೂರ್ತಿಯು ದಂಡವನ್ನೂ ಛತ್ರವನ್ನೂ ಜಲಪೂರ್ಣವಾದ ಕಮಂಡಲವನ್ನೂ ಧರಿಸಿದವನಾಗಿ ಮೌಂಜೀಬಂಧದಿಂದ ಅಲಂಕೃತವಾದ ಕಟಿಪ್ರದೇಶವುಳ್ಳವನಾಗಿ ಯಜ್ಞೋಪವೀತದಂತೆ ಧರಿಸಲ್ಪಟ್ಟ ಕೃಷ್ಣಾಜಿನವೇ ಉತ್ತರೀಯವಾಗುಳ್ಳವನಾಗಿ ಆ ಯಜ್ಞಶಾಲೆಯನ್ನು ಪ್ರವೇಶಿಸಿದ ಕಪಟಬ್ರಹ್ಮಚಾರಿಯಾದ ಶ್ರೀವಿಷ್ಣುವನ್ನು ನೋಡಿ ಶಿಷ್ಯಸಮೇತರಾದ ಭಾರ್ಗವರು ಆ ಭಗವಂತನ ತೇಜಸ್ಸಿನಿಂದ ತಿರಸ್ಕೃತರಾಗಿ ಅಗ್ನಿತ್ರಯದೊಡನೆ ಮೇಲಕ್ಕೆದ್ದು ಪ್ರತ್ಯುತ್ಥಾನಾದಿಗಳಿಂದ ವಾಮನಮೂರ್ತಿಯನ್ನು ಉಪಚರಿಸಿದರು ; ಆಗ ಯಜಮಾನನಾದ ಬಲಿಯು ನೋಡುವದಕ್ಕೆ ರಮ್ಯವಾಗಿ ಸೌಂದರ್ಯಕ್ಕೆ ಅನುರೂಪವಾದ ಅಂಗಸೌಷ್ಟವವುಳ್ಳ ಆ ಭಗವಂತನನ್ನು ನೋಡಿ ಆ ಶ್ರೀಹರಿಗೋಸ್ಕರ ಪರಿಶುದ್ಧವಾದ ಪೀಠವನ್ನು ತರಿಸಿದನು ; ಅನಂತರದಲ್ಲಿ ಬಲಿಚಕ್ರವರ್ತಿಯು ಕುಶಲಪ್ರಶ್ನೆಯಿಂದ ಸಂತೋಷಪಡಿಸಿ ಭಗವಂತನ ಪಾದಗಳನ್ನು ಪ್ರಕ್ಷಾಳನಂಗೈದು

ಮುಕ್ತಸಂಗನಾದ ಮನೋಹರನಾದ ಭಗವಂತನನ್ನು ಪೂಜಿಸಿದನು; ಆಮೇಲೆ ಉತ್ತಮಧರ್ಮಗಳನ್ನು ತಿಳಿದಿರುವ ಆ ಬಲಿಚಕ್ರವರ್ತಿಯು ದೇವತೆಗಳಿಗೂ ದೇವನಾದ ಚಂದ್ರಶೇಖರನಾದ ಶ್ರೀ ಪರಮೇಶ್ವರನೂ ಕೂಡ ಯಾವ ಭಗವಂತನ ಪಾದಸಂಬಂಧವುಳ್ಳ ಗಂಗಾತೀರ್ಥವನ್ನು ಪರಮ ಭಕ್ತಿಯಿಂದ ಶಿರಸ್ಸಿನಲ್ಲಿ ಧರಿಸಿದನೋ ಅಂಥಾ ಕಲ್ಮಷಪರಿಹಾರಕವಾದ ಆ ಭಗವಂತನ ಪಾದಪ್ರಕ್ಷಾಳನೋದಕ ತೀರ್ಥವನ್ನು ಧರಿಸಿದನು; ಅನಂತರದಲ್ಲಿ ಬಲಿಯು ಭಗವಂತನನ್ನು ಕುರಿತು "ಎಲೈ ಬ್ರಾಹ್ಮಣೋತ್ತಮನೆ, ನಿನಗೆ ನಮಸ್ಕಾರವು! ಕ್ಷೇಮವೆ? ಎಲ್ಲಿಂದ ಬರೋಣವಾಯಿತು? ನಾನು ನಿನಗೆ ಯಾವ ಪ್ರಿಯವನ್ನುಂಟುಮಾಡಲಿ? ಎಲೈ ಶ್ರೇಷ್ಠನಾದ ಋಷಿಯೆ, ಬ್ರಹ್ಮರ್ಷಿಗಳ ತಪಸ್ಸೇ ಶರೀರವನ್ನು ಧರಿಸಿ ಪ್ರತ್ಯಕ್ಷವಾಗಿ ಬಂದಂತೆ ನಿನ್ನನ್ನು ತಿಳಿಯುತ್ತೇನೆ; ನಮ್ಮ ಪಿತೃಗಳು ಈಗ ತೃಪ್ತರಾದರು; ನಮ್ಮ ಕುಲವು ಈಗ ಪವಿತ್ರವಾಯಿತು; ಯಾವಕಾರಣ ನೀನು ನನ್ನ ಮನೆಗೆ ಬಂದೆಯೋ ಅದುಕಾರಣ ಈ ಅಶ್ವಮೇಧಕ್ರತುವು ಈಗ ಸಾಂಗವಾಯಿತು! ಎಲೈ ಬ್ರಾಹ್ಮಣವಟುವೆ, ನನ್ನ ಅಗ್ನಿಗಳು ಈಗ ಯಥಾಶಾಸ್ತ್ರವಾಗಿ ಹೋಮಗೈಯ್ಯಲ್ಪಟ್ಟವು; ನಿನ್ನ ಪಾದೋದಕಗಳಿಂದ ನಾವು ಪರಿಹೃತವಾದ ಪಾಪವುಳ್ಳವರಾದೆವು; ಪುಟ್ಟಪುಟ್ಟದಾದ ನಿನ್ನ ಪಾದವಿನ್ಯಾಸದಿಂದೀ ಭೂಮಿಯು ಪವಿತ್ರವಾಯಿತು; ನಿಶ್ಚಯವೇ ಸರಿ! ಎಲೈ ಬ್ರಾಹ್ಮಣಪುತ್ರನೆ, ನೀನು ಯಾಚನಾರ್ಥವಾಗಿ ಬಂದಿದ್ದೀಯೆಂದು ನಾನು ಊಹಿಸುತ್ತೇನೆ; ನೀನು ಯಾವಯಾವ ವಸ್ತುವನ್ನು ಯಾಚಿಸುತ್ತೀಯೋ ಆಯಾ ವಸ್ತುವನ್ನು ಕೊಡುವೆನು; ಗೋವುಗಳನ್ನೂ ಗ್ರಾಮಗಳನ್ನೂ ಕುದುರೆಗಳನ್ನೂ ಆನೆಗಳನ್ನೂ ಉತ್ತಮವಾದ ರಥವನ್ನೂ ಕೊಡುವೆನು; ನೀನು ಪರಿಗ್ರಹಿಸು" ಎಂದು ಬಲಿಚಕ್ರವರ್ತಿಯು ಶ್ರೀ ವಾಮನಮೂರ್ತಿಯನ್ನು ಕುರಿತು ವಿಜ್ಞಾಪಿಸಿದನು.

೧೯ ನೇ ಅಧ್ಯಾಯ.

ವಾಮನಮೂರ್ತಿಗೆ ಮೂರಡಿ ಭೂಮಿಯನ್ನು ಕೊಡಲುದ್ಯುಕ್ತನಾದ ಬಲಿಚಕ್ರವರ್ತಿಯನ್ನು ಶುಕ್ರಾಚಾರ್ಯನು ಕೊಡಬೇಡವೆಂದು ನಿಷೇಧಿಸಿದ್ದು.

ಎಲೈ ಅರಸೆ, ಈರೀತಿಯಲ್ಲಿ ಸತ್ಯಪ್ರಿಯವಾದ ಧರ್ಮಯುಕ್ತವಾದ ಬಲಿಚಕ್ರವರ್ತಿಯ ವಾಕ್ಯವನ್ನು ಕೇಳಿ ಭಗವಂತನಾದ ವಾಮನಮೂರ್ತಿಯು ಪ್ರೀತನಾಗಿ ಶ್ಲಾಘನಪೂರ್ವಕವಾಗಿ "ಎಲೈ ಚಕ್ರವರ್ತಿಯಾದ ಬಲಿಯೆ, ನಿನ್ನ ವಾಕ್ಯವು ಸತ್ಯವಾಗಿ ಪ್ರಿಯವಾಗಿ ಸತ್ಕುಲಕ್ಕೆ ಅನುರೂಪವಾಗಿ ಧರ್ಮಯುಕ್ತವಾಗಿ ಕೀರ್ತಿಕರವಾಗಿರುವುದು; ಪರಲೋಕಸಾಧನವಾದ ಉತ್ತಮಧರ್ಮದಲ್ಲಿ ಭಾರ್ಗವರು ನಿನ್ನ ಕುಲವೃದ್ಧನಾದ ಪ್ರಶಾಂತನಾದ ಪ್ರಹ್ಲಾದನು ಸಹಾ ದೃಷ್ಟಾಂತವು; ಈ ನಿನ್ನ ಕುಲದಲ್ಲಿ ಒಬ್ಬನಾದಾಗ್ಯೂ ಯಾಚಕರನ್ನು ನಿರಾಕರಿಸುವಂತಹ ದುಷ್ಟಚಿತ್ತನಾದವನಿಲ್ಲ; ಮೊದಲು ಕೊಡುತ್ತೇನೆಂದು ಯಾಚಕರಿಗೆ ಆಶೆಯನ್ನುಂಟುಮಾಡಿ ಆಮೇಲೆ ಕೊಡದೆ ಅವರನ್ನು ವ್ಯಸನಪಡಿಸುವ ಕೃಪಣನೂ ಇಲ್ಲ! ಎಲೈ ಅರಸೆ, ನಿನ್ನ ಕುಲದಲ್ಲಿ ದಾನಕಾಲದಲ್ಲಿ ಯಾಚಕರಿಂದ ಯಾಚಿಸಲ್ಪಟ್ಟವರಾಗಿ ಅವರಿಗೆ ಕೊಡುವದಕ್ಕೆ ಮನಸ್ಸುಬರದೆ ಮುಖವೈವರ್ಣ್ಯದಿಂದ ಪರಾಙ್ಮುಖರಾಗಿ ಮನಸ್ವಿಗಳಲ್ಲದೇ ಇರುವುದಿಲ್ಲ; ಯುದ್ಧಾರ್ಥವಾಗಿ ಶತ್ರುಗಳಿಂದ ಕರೆಯಲ್ಪಟ್ಟವರಾಗಿ ಯುದ್ಧದಲ್ಲಿ ನಿರ್ವಹಿಸಲಾರದೆ ಭೀತರಾಗಿ ಹಿಂದಕ್ಕೆ ಬರುವವರೂ ಇಲ್ಲ; ಈ ವಿಷಯದಲ್ಲಿ ಆಕಾಶದಲ್ಲಿ ಚಂದ್ರನಂತೆ ನಿರ್ಮಲವಾದ ಯಶಸ್ಸಿನಿಂದ ಪ್ರಕಾಶಿಸುವ ಪ್ರಹ್ಲಾದನೇ ದೃಷ್ಟಾಂತವಲ್ಲವೆ; ನಿನ್ನ ಕುಲದಲ್ಲಿ ಹುಟ್ಟಿದ ಹಿರಣ್ಯಾಕ್ಷನು ಅಸಹಾಯನಾಗಿ ಒಬ್ಬನೇ ದಿಗ್ವಿಜಯಾರ್ಥವಾಗಿ ಭೂಮಂಡಲವನ್ನು ಸಂಚರಿಸುವನಾಗಿ ತನಗೆ ಪ್ರತಿಯುದ್ಧವನ್ನು ಕೊಡುವ ವೀರರನ್ನು ಕಾಣದೆ ಅನೇಕಯುಗಪರಿಯಂತವು ಸಂಚರಿಸಿದನು; ಭಗವಂತನು ಭೂಮಿಯನ್ನುದ್ಧರಿಸುವ ಸಮಯದಲ್ಲಿ ಅತಿಪ್ರಯಾಸದಿಂದ ಹಿರಣ್ಯಾಕ್ಷನನ್ನು ಜಯಿಸಿದಾಗ್ಯೂ ಅಧಿಕವಾದ ಆ ಹಿರಣ್ಯಾಕ್ಷನ ಪರಾಕ್ರಮವನ್ನು ಸ್ಮರಿಸುವವನಾಗಿ ತಾನು ಜಯಿಸಿದೆನೆಂದು ಭಾವಿಸಲಿಲ್ಲ; ಪೂರ್ವದಲ್ಲಿ ಹಿರಣ್ಯಕಶಿಪುವು ಸಹೋದರನಾದ ಹಿರಣ್ಯಾಕ್ಷನ ಸಂಹಾರವನ್ನು ಕೇಳಿ ಕೋಪಿಷ್ಠನಾಗಿ ಅನು

ಜನನ್ನು ಸಂಹರಿಸಿದ ವಿಷ್ಣುವನ್ನು ಹುಡುಕಿಕೊಂಡು ವೈಕುಂಠವನ್ನು ಕುರಿತು ಹೋದನು ; ಶೂಲವನ್ನು ಧರಿಸಿಕೊಂಡು ಯಮನಂತೆ ಬರುತಲಿರುವ ಆ ಹಿರಣ್ಯಕಶಿಪುವನ್ನು ನೋಡಿ ಮಾಯಾವಿಗಳೊಳಗೆ ಶ್ರೇಷ್ಠನಾದ ಕಾಲಜ್ಞನಾದ ವಿಷ್ಣುವು ಮೃತ್ಯುದೇವತೆಯು ಪ್ರಾಣಿಗಳನ್ನು ಹುಡುಕಿಕೊಂಡು ಹೋಗುವಂತೆ ಈ ಅಸುರನು ನಾನು ಎಲ್ಲಿಗೆ ಹೋದಾಗ್ಯೂ ಅಲ್ಲಿ ಹುಡಿಕಿಕೊಂಡು ಬರುತ್ತಾನೆ ; ಆದುದರಿಂದ ಬಾಹ್ಯದೃಷ್ಟಿಯುಳ್ಳ ಅಸುರನ ಹೃದಯವನ್ನು ಪ್ರವೇಶಿಸುತ್ತೇನೆಂದು ನಿಶ್ಚಯಿಸಿ ದೇವೋತ್ತಮನಾದ ಭಗವಂತನು ಭೀತಮನಸ್ಕನಾಗಿ ಅಸುರನ ಶ್ವಾಸವಾಯುವಿನಲ್ಲಿ ತಿರೋಹಿತವಾದ ಸೂಕ್ಷ್ಮದೇಹವುಳ್ಳವನಾಗಿ ನಾಶಿಕಾರಂಧ್ರಗಳ ಮಾರ್ಗದಿಂದ ಆಟ್ಟೆ ಬರುತಲಿರುವ ಆ ಹಿರಣ್ಯಕಶಿಪುವಿನ ಶರೀರವನ್ನು ಪ್ರವೇಶಿಸಿದನು ; ಅನಂತರದಲ್ಲಿ ಹಿರಣ್ಯಕಶಿಪುವು ಶೂನ್ಯವಾದ ವೈಕುಂಠವಲ್ಲಿ ವಿಷ್ಣುವನ್ನು ಕಾಣದೆ ಕುಪಿತನಾಗಿ ಭೂಮಿಯಲ್ಲಿಯೂ ಸ್ವರ್ಗದಲ್ಲಿಯೂ ದಿಕ್ಕುಗಳಲ್ಲಿಯೂ ಅಂತರಿಕ್ಷದಲ್ಲಿಯೂ ಪಾತಾಳರಂಧ್ರಗಳಲ್ಲಿಯೂ ಸಮುದ್ರಗಳಲ್ಲಿಯೂ ಹುಡಿಕಿ ಕಾಣದೆ ಈ ಜಗತ್ತನ್ನೆಲ್ಲವನ್ನೂ ಹುಡುಕಿದನು, ನನ್ನ ಸಹೋದರನನ್ನು ಸಂಹರಿಸಿದ ಆ ಪುರುಷನು ಹಿಂದಕ್ಕೆ ತಿರುಗಿ ಬರದೆ ಹೊರಟೇಹೋದನು ; ಇದು ನಿಶ್ಚಯವು ; ಅಜ್ಞಾನಜನ್ಯವಾಗಿ ಅಹಂಭಾವದಿಂದ ವೃದ್ಧಿಯನ್ನೈದಿಸಲ್ಪಟ್ಟ ಪ್ರಾಣಿಗಳ ವೈರಾನುಬಂಧವು ಶತೃಗಳ ಮರಣಪರ್ಯಂತವೇ ಸರಿಯೆಂದು ಹಿರಣ್ಯಕಶಿಪುವು ತಿಳಿದು ಗರ್ಜಿಸಿದನು ! ಎಲೈ ಬಲಿಚಕ್ರವರ್ತಿಯೆ, ಪ್ರಹ್ಲಾದನ ಪುತ್ರನಾದ ನಿನಗೆ ತಂದೆಯಾದ ವಿರೋಚನನು ಬ್ರಾಹ್ಮಣಪ್ರಿಯನಾದಕಾರಣ ದ್ವೇಷಿಗಳಾದ ದೇವತೆಗಳ ಕಪಟವ್ಯಾಪಾರವನ್ನು ಬಲ್ಲವನಾದಾಗ್ಯೂ ಯಾಚಕರ ವೇಷದಿಂದ ಬಂದು ಆಯುಸ್ಸನ್ನು ಯಾಚಿಸುವ ದೇವತೆಗಳಿಗೆ ತನ್ನ ಸರ್ವಾಯುಷ್ಯವನ್ನೂ ದಾನಂಗೈದನು ! ಎಲೈ ಬಲಿಚಕ್ರವರ್ತಿಯೆ, ಶೂರರಾದ ಪೂರ್ವಪುರುಷರಿಂದಲೂ ಗೃಹಸ್ಥಾಶ್ರಮನಿಷ್ಠರಾದ ಬ್ರಾಹ್ಮಣೋತ್ತಮರಿಂದಲೂ ಆಚರಿಸಲ್ಪಟ್ಟ ಧರ್ಮಗಳನ್ನು ನೀನು ಆಚರಿಸುವನಾಗುತ್ತೀಯೆ ; ಆದುದರಿಂದ ಇಷ್ಟಾರ್ಥಗಳನ್ನು ಕೊಡುವ ಮಹಾ ಶೂರರೊಳಗೆ ಶ್ರೇಷ್ಠನಾದ ನಿನ್ನದೆಶೆಯಿಂದ ನನ್ನ ಅಡಿಗಳಿಂದ ಅಳೆಯಲ್ಪಟ್ಟ ಮೂರಡಿ ಭೂಮಿಯನ್ನು ಅಪೇಕ್ಷಿಸುತ್ತೇನೆ! ಎಲೈ ಬಲಿಚಕ್ರವರ್ತಿಯೆ, ಪರಮೋದಾರಿಯಾದ ಜಗತ್ಪತಿಯಾದ ನಿನ್ನದೆಶೆಯಿಂದ ಇನ್ನೂ ಅಧಿಕವಾದ ಅರ್ಥವನ್ನು ನಾನು ಅಪೇಕ್ಷಿಸುವುದಿಲ್ಲ ; ಪ್ರಾಜ್ಞನಾದ ಪುರುಷನು ತನಗೆ ಎಷ್ಟು ಪ್ರಕೃತವೋ ಅಷ್ಟನ್ನೇ ಪರಿಗ್ರಹಿಸುವನಾದರೆ ಪಾಪವನ್ನೈದುವುದಿಲ್ಲ ; ಅಧಿಕವನ್ನು ಯಾರು ಅಪೇಕ್ಷಿಸುತ್ತಾರೆಯೋ ಆ ಪುರುಷರು ಚೋರರಿಗೆ ಸಮಾನರು ; ರಾಜಶಿಕ್ಷಾಯೋಗ್ಯರು ” ಅಂದನು.

ಬಲಿಚಕ್ರವರ್ತಿಯು “ಎಲೈ ಬ್ರಾಹ್ಮಣ ಕುಮಾರಕನೆ, ನಿನ್ನ ಮಾತುಗಳು ಮಹಾತ್ಮರಿಗೆ ಸಮ್ಮತವಾದದ್ದು ; ನೀನು ಮೂಢಬುದ್ಧಿಯುಳ್ಳವನು ; ಬಾಲಕನು ; ಸ್ವಾರ್ಥಸಾಧನ ವಿಷಯದಲ್ಲಿ ಬುದ್ಧಿವಂತನಲ್ಲ ; ಸಪ್ತದ್ವೀಪಗಳನ್ನು ಕೊಡುವುದಕ್ಕೆ ಉದ್ಯುಕ್ತನಾಗಿ ತ್ರಿಲೋಕಗಳಿಗೂ ಏಕಾಧಿಪತಿಯಾದ ನನ್ನನ್ನು ಸ್ತೋತ್ರವಾಕ್ಯಗಳಿಂದ ಸಂತೋಷಪಡಿಸಿ ಸ್ವಲ್ಪವಾಗಿ ಮೂರಡಿ ಭೂಮಿಯನ್ನು ಯಾಚಿಸುತ್ತೀಯೆ ; ನೀನು ಬುದ್ಧಿಶಾಲಿಯಲ್ಲ ; ನನ್ನನ್ನು ಯಾಚಿಸಿದ ಪುರುಷನು ಪುನಶ್ಚ ಮತ್ತೊಬ್ಬರನ್ನು ಯಾಚಿಸುವುದಿಲ್ಲ ; ಅದರಿಂದ ಜೀವನೋಪಯುಕ್ತವಾದ ಭೂಕ್ಷೇತ್ರವನ್ನು ಯಾಚಿಸುವನಾಗು ಕೊಡುತ್ತೇನೆ ” ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪುನಶ್ಚ ಭಗವಂತನು “ಎಲೈ ಅರಸೆ, ಮೂರುಲೋಕಗಳಲ್ಲಿಯೂ ಪ್ರಶಸ್ತಗಳಾದ ಭೋಗ್ಯವಸ್ತುಗಳು ಎಷ್ಟು ಉಂಟೋ ಅಷ್ಟರಿಂದಲೂ ತೃಪ್ತನಲ್ಲದೆ ಆಶಾಬದ್ಧನಾದ ಅಜಿತೇಂದ್ರಿಯನಾದ ಪುರುಷನಿಗೆ ಕೀರ್ತಿ ಸರ್ವವಸ್ತುಗಳಿಂದಲೂ ತೃಪ್ತಿಯಾಗುವುದಿಲ್ಲ ; ಮೂರಡಿ ಭೂಮಿಯಿಂದ ತೃಪ್ತಿಯನ್ನೈದದಿರುವವನಿಗೆ ನವವರ್ಷಗಳಿಂದ್ಯುಕ್ತವಾದ ದ್ವೀಪದಿಂದಲೂ ಆಶಾಪೂರ್ತಿಯಾಗಲಾರದು ; ಒಂದು ದ್ವೀಪಲಾಭವಾದರೆ ಸಪ್ತದ್ವೀಪಗಳು ತನಗೆ ಬೇಕೆಂದು ಆಶೆಯುಂಟಾಗುವುದು ; ಪೂರ್ವದಲ್ಲಿ ಸಪ್ತದ್ವೀಪಾಧಿಪತಿಗಳಾದ ಪೃಥುರಾಯ ಗಯರಾಯ ಮೊದಲಾದ ಚಕ್ರವರ್ತಿಗಳು ಅರ್ಥ ಕಾಮಗಳಿಂದ ಆಶೆಯ ಪಾರಗಳನ್ನು ಕಾಣಲಿಲ್ಲವೆಂದು ನಾವು ಕೇಳಿದ್ದೇವೆ ; ದೈವಯತ್ನದಿಂದ ಲಬ್ಧವಾದ ವಿಷಯಗಳಿಂದುಂಟಾಗುವ ಚಿತ್ತಸಂತೋಷವು ಮುಕ್ತಿಸಾಧನವಾಗುವುದು ; ಯದೃಚ್ಛಾಲಾಭದಿಂದ ಸಂತುಷ್ಟನಾದ ಬ್ರಾಹ್ಮಣನಿಗೆ ಬ್ರಹ್ಮತೇಜಸ್ಸು ವೃದ್ಧಿಯನ್ನೈದುವುದು ! ಎಲೈ ಅರಸೆ, ಅದರಿಂದ

ವರಪ್ರದರೊಳಗೆ ಶ್ರೇಷ್ಠನಾದ ನಿನ್ನಿಂದ ಮೂರಡಿ ಭೂಮಿಯನ್ನೇ ನಾನು ಅಪೇಕ್ಷಿಸುತ್ತೇನೆ ; ಇಷ್ಟುಮಾತ್ರದಿಂದ ನಾನು ಕೃತಾರ್ಥನು ; ಎಷ್ಟು ಪ್ರಕೃತವೋ ಅಷ್ಟು ವಿತ್ತವೇ ಸಫಲವು ; ಅಧಿಕವಾದರೆ ಮಹಾ ಕ್ಲೇಶಸಾಧನವಾಗುವುದು " ಎಂದು ನುಡಿದನು.

ಬಲಿಚಕ್ರವರ್ತಿಯು "ನಗುತ ಹಾಗೇ ಆಗಲಿ ; ನಿನ್ನ ಇಚ್ಛಾನುಸಾರವಾಗಿ ಪ್ರತಿಗ್ರಹಿಸು" ಎಂದು ಹೇಳಿ ವಾಮನಮೂರ್ತಿಗೆ ಭೂಮಿಯನ್ನು ಕೊಡುವುದಕ್ಕೆ ತೀರ್ಥಜಲಪಾತ್ರವನ್ನು ಗ್ರಹಿಸಿದನು.

ಆಗ ವಿಷ್ಣುವಿಗೆ ಭೂಮಿಯನ್ನು ಕೊಡುವದಕ್ಕೆ ಉದ್ಯುಕ್ತನಾದ ಅಸುರಪತಿಯನ್ನು ನೋಡಿ ಭಗವಂತನ ಅಭಿಪ್ರಾಯವನ್ನು ತಿಳಿದ ಪ್ರಾಜ್ಞನಾದ ಶುಕ್ರಾಚಾರ್ಯನು "ಎಲೈ ವಿರೋಚನನಪುತ್ರನಾದ ಬಲಿಚಕ್ರವರ್ತಿಯೇ, ನಾಶರಹಿತನಾದ ಭಗವಂತನಾದ ಸಾಕ್ಷಾದ್ವಿಷ್ಣುವೇ ಈತನು; ಕಶ್ಯಪಋಷಿಯ ದೆಶೆಯಿಂದ ಅದಿತೀದೇವಿಯಲ್ಲಿ ಅವತರಿಸಿ ದೇವಕಾರ್ಯಾರ್ಥವಾಗಿ ಬಂದಿದ್ದಾನೆ ; ಮುಂದೆ ಬರುವ ವಿಪತ್ತನ್ನರಿಯದೇ ನಿನ್ನಿಂದ ಈ ಭಗವಂತನಿಗೋಸ್ಕರ ಭೂಮಿಯನ್ನು ಕೊಡುವೆನೆಂದು ಪ್ರತಿಜ್ಞೆಯು ಮಾಡಲ್ಪಟ್ಟಿತು ; ಅದು ಕ್ಷೇಮಕರವಾಗುವಂತೆ ನನಗೆ ತೋರುವುದಿಲ್ಲ ; ದೈತ್ಯರಿಗೆ ಮಹಾವಿಪತ್ತು ಬರುವಂತೆ ತೋರುತ್ತಿದೆ ; ಕಪಟಬ್ರಹ್ಮಚಾರಿಯಾದ ಈ ಹರಿಯು ನಿನ್ನ ಜ್ಞಾನವನ್ನೂ ಸಂಪತ್ತನ್ನೂ ಪರಾಕ್ರಮವನ್ನೂ ಅಧಿಕವಾದ ಕೀರ್ತಿಯನ್ನೂ ನಿನ್ನ ದೆಶೆಯಿಂದ ಅಪಹರಿಸಿ ದೇವೇಂದ್ರನಿಗೆ ಕೊಡುತ್ತಾನೆ ; ಜಗತ್ತೇ ಶರೀರವಾಗುಳ್ಳ ಭಗವಂತನು ಮೂರಡಿಗಳಾದ ಸಮಸ್ತ ಲೋಕಗಳನ್ನೂ ಆಕ್ರಮಿಸುತ್ತಾನೆ ! ಎಲೈ ಮೂಢನೇ, ಸರ್ವಸ್ವವನ್ನು ವಿಷ್ಣುವಿಗೋಸ್ಕರ ಕೊಟ್ಟು ನೀನು ಹ್ಯಾಗೆ ಜೀವಿಸುತ್ತೀಯೆ ; ಮಹಾ ಶರೀರಯುಕ್ತನಾದ ಭಗವಂತನು ಒಂದಡಿಯಿಂದ ಭೂಮಿಯನ್ನಾಕ್ರಮಿಸುತ್ತಾನೆ ; ಸ್ವರ್ಗವನ್ನೂ ಅಂತರಿಕ್ಷವನ್ನೂ ಎರಡನೇ ಅಡಿಯಿಂದ ಆಕ್ರಮಿಸುತ್ತಾನೆ ! ಎಲೈ ಪ್ರಭುವೇ, ಮೂರನೇ ಅಡಿ ಇಡುವುದಕ್ಕೆ ಆಧಾರವಿಲ್ಲದೇ ಇದೆ ; ಯಾವ ದಾನದಿಂದ ತನ್ನ ಜೀವನೋಪಾಯವೇ ಲುಪ್ತವಾಗುವುದೋ ಅಂಥಾ ದಾನವನ್ನು ಬುದ್ಧಿವಂತರು ಪ್ರಶಂಸೆಯನ್ನು ಗೈಯ್ಯರು; ಲೋಕದಲ್ಲಿ ದಾನವು ಯಜ್ಞವು ತಪಸ್ಸು ಸತ್ಕರ್ಮವು ಇವಿಷ್ಟು ವೃತ್ತಿವುಳ್ಳ ಪುರುಷನಿಗೆ ಸಿದ್ಧಿಸುವುವು; ಧರ್ಮಕ್ಕೋಸ್ಕರವೂ ಕೀರ್ತಿಗೋಸ್ಕರವೂ ಅರ್ಥಕ್ಕೋಸ್ಕರವೂ ಕಾಮಕ್ಕೋಸ್ಕರವೂ ವಿತ್ತವನ್ನೈದುವ ಭಾಗವನ್ನು ಮಾಡಿ ಅನುಭವಿಸುವ ಪುರುಷನು ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಸುಖಪಡುವನು ! ಎಲೈ ಅರಸೇ, ಕೊಡುತ್ತೇನೆಂದು ಪ್ರತಿಜ್ಞೆಯನ್ನು ಮಾಡಿ ಇಲ್ಲವೆಂದು ಅನೃತವನ್ನು ಹ್ಯಾಗೆ ಹೇಳಲಿ ಎಂಬ ಚಿಂತೆ ನಿನಗೆ ಬೇಡ ; ಅನೃತವು ಕೆಲವು ಸಮಯಗಳಲ್ಲಿ ದೋಷಕರಗಳಾಗುವುದಿಲ್ಲ ; ಈ ಅರ್ಥದಲ್ಲಿ ಋಗ್ವೇದದಲ್ಲಿ ನಿರೂಪಿಸಲ್ಪಡುತ್ತದೆ ; ಅದೆಂತೆನೆ ; ಅನ್ಯರನ್ನು ಕುರಿತು ನಿಮ್ಮ ಇಷ್ಟಾರ್ಥವನ್ನು ನಾನು ಮಾಡುತ್ತೇನೆಂಬ ವಾಕ್ಯವೇ ಸತ್ಯವೆನಿಸಿಕೊಂಬುವುದು ; ಇಲ್ಲವೆಂಬ ವಚನವೇ ಅನೃತವೆನಿಸಿಕೊಂಬುವುದು ; ದೇಹವೆಂಬ ವೃಕ್ಷಕ್ಕೆ ಸತ್ಯವೇ ಪುಷ್ಪಫಲರೂಪವಾದದ್ದು ; ಅನೃತವೇ ಶರೀರವೆಂಬ ವೃಕ್ಷಕ್ಕೆ ಮೂಲವೃಕ್ಷವು; ಸಜೀವವಾಗಿದ್ದರೆ ಪುಷ್ಪಫಲಗಳುಂಟಾಗುವವು ; ವೃಕ್ಷಮೂಲ ದೃಢವಾಗಿದ್ದರೆ ಪುಷ್ಪಾದಿಗಳುಂಟಾಗುವವು ; ಆ ವೃಕ್ಷಕ್ಕೆ ಅನೃತವೇ ಮೂಲವಾದುದರಿಂದ ಅನೃತವು ಇರಬೇಕು ; ಅದರಿಂದ ಅನೃತರೂಪವಾದ ಮೂಲವು ನಷ್ಟವಾದರೆ ದೇಹವೃಕ್ಷ ಒಣಗಿಹೋಗುವದು ; ಆದುದರಿಂದ ದೇಹಕ್ಷೇಮಾರ್ಥವಾಗಿ ಅನೃತವಿರಬೇಕು ; ಪರಯಾಚನೆಯನ್ನು ನಿರ್ವಹಿಸುತ್ತೇನೆಂದು ಅಂಗೀಕಾರರೂಪವಾದ ಪ್ರತಿಜ್ಞಾವಾಕ್ಯವು ಪುರುಷನನ್ನು ರಿಕ್ತನನ್ನಾಗಿ ಮಾಡುವುದು ; ಇಲ್ಲವೇ ಅತ್ಯಂತಾನೃತವು ಪುರುಷನಿಗೆ ಶ್ರೇಯಸ್ಕರವಾದದ್ದು ; ಅರ್ಥವ್ಯಯವಾಗದೇ ಇದ್ದಾಗ್ಯೂ ಅಪಯಶಸ್ಸನ್ನು ಪಡೆವನು ; ಆದುಕಾರಣ ಸತ್ಯಾನೃತಗಳು ಕಾಲಾನುರೂಪವಾಗಿ ಯಥಾಯೋಗ್ಯವಾಗಿ ಅವಲಂಬಿಸತಕ್ಕದ್ದು ; ಸ್ತ್ರೀಯರುಗಳನ್ನು ಚಾಟೂಕ್ತಿಗಳಿಂದ ವಶೀಕಾರದಲ್ಲಿಯೂ ಪರಿಹಾಸದಲ್ಲಿಯೂ ವರ ಕನ್ಯಾಘಟನಾರ್ಥವಾದ ವ್ಯಾಪಾರದಲ್ಲಿಯೂ ಜೀವನೋಪಾಯವಿಷಯದಲ್ಲಿಯೂ ಪ್ರಾಣಸಂಕಟ ಬರುವ ಕಾಲದಲ್ಲಿಯೂ ಗೋರಕ್ಷಣಾರ್ಥವಾದ ವ್ಯಾಪಾರದಲ್ಲಿಯೂ ಬ್ರಾಹ್ಮಣ ಸಂರಕ್ಷಣಾರ್ಥವಾಗಿಯೂ ಹಿಂಸೆ ಪ್ರಸಂಗದಲ್ಲಿ ತತ್ಪರಿಹಾರಾರ್ಥವಾಗಿಯೂ ಇತ್ಯಾದಿ ಕಾಲಗಳಲ್ಲಿಯೂ ಅನೃತವು ದೂಷಿತವಲ್ಲ" ಎಂದು ನುಡಿದನು.

೨೦ನೇ ಅಧ್ಯಾಯ.

ವಾಮನಮೂರ್ತಿಯು ಬಲಿಚಕ್ರವರ್ತಿಯಿಂದ ಕೊಡಲ್ಪಟ್ಟ ಭೂಮಿಯನ್ನು ಪರಿಗ್ರಹಿಸಿ ವಿಶ್ವರೂಪಧಾರಿಯಾಗಿ ಮೂರುಲೋಕಗಳನ್ನು ಆಕ್ರಮಿಸಿದ್ದು.

ಎಲೈ ಅರಸೆ, ಬಲಿಚಕ್ರವರ್ತಿಯು ಕುಲಾಚಾರ್ಯನಾದ ಶುಕ್ರನಿಂದ ಈಪ್ರಕಾರ ಹೇಳಲ್ಪಟ್ಟವನಾಗಿ ಕ್ಷಣಮಾತ್ರ ಸುಮ್ಮನಿದ್ದು ಆಮೇಲೆ ಏಕಾಗ್ರಚಿತ್ತನಾಗಿ ಶುಕ್ರನನ್ನು ಕುರಿತು "ಎಲೈ ಆಚಾರ್ಯನೆ, ಅರ್ಥಕಾಮಂಗಳಿಗೆ ಅವಿರುದ್ಧವಾದ ಗೃಹಮೇಧಿಗಳ ಧರ್ಮವು ಷಡ್ಗುಣಸಂಪನ್ನನಾದ ನಿನ್ನಿಂದ ಹೇಳಲ್ಪಟ್ಟದ್ದು ಸತ್ಯವೇ ಸರಿ; ಆದರೆ ಪ್ರಹ್ಲಾದನಿಗೆ ಪಾತ್ರನಾದ ನಾನು ಕೊಡುತ್ತೇನೆಂದು ಬ್ರಾಹ್ಮಣನಿಗೆ ಪ್ರತಿಜ್ಞೆಯನ್ನು ಮಾಡಿ ವಂಚಕನಂತೆ ಈಗ ಆ ಬ್ರಾಹ್ಮಣನನ್ನು ಹ್ಯಾಗೆ ನಿರಾಕರಿಸಲಿ; ಸತ್ಯಕ್ಕಿಂತ ಅಧಿಕವಾದ ಧರ್ಮವಿಲ್ಲ; ಅನೃತವಾದಿಯಾದ ಪುರುಷನನ್ನು ಹೊರ್ತು ಈಡವೇ ಸಮಸ್ತವಸ್ತುಸಮೂಹವು ನನಗೆ ಭಾರವಿಲ್ಲವೆಂದು ಭೂದೇವಿಯು ಹೇಳಿದ್ದು ನೀನು ತಿಳಿಯದೇ ಇದ್ದೀಯೆ! ಎಲೈ ಆಚಾರ್ಯನೇ, ನಾನು ನರಕದ ದೆಶೆಯಿಂದಲೂ ಭಯಪಡುವುದಿಲ್ಲ; ಸ್ಥಾನಚ್ಯುತಿಗೂ ಭಯಪಡುವುದಿಲ್ಲ; ಮೃತ್ಯುವಿಗೂ ಭಯಪಡುವುದಿಲ್ಲ; ಬ್ರಾಹ್ಮಣರಿಗೆ ಆಶೆಯನ್ನುಂಟುಮಾಡಿ ವಂಚಿಸೋಣವೆಂಬ ಮೋಸಗತಿಯಿಂದ ಭಯಪಡುತ್ತೇನೆ; ಲೋಕದಲ್ಲಿ ಪುರುಷನು ಯಾವ ಯಾವ ವಸ್ತುಗಳನ್ನು ಕೊಡುವನೋ ಆ ವಸ್ತುಗಳಿಂದ ಬ್ರಾಹ್ಮಣನಿಗೆ ಸಂತೋಷವುಂಟಾಗದೇ ಇದ್ದರೆ ಆ ವಸ್ತುತ್ಯಾಗದಿಂದ ಫಲವೇನು? ದಧೀಚಿ ಶಿಬಿ ಮೊದಲಾದ ಸತ್ಪುರುಷರು ತ್ಯಜಿಸುವದಕ್ಕೆ ಅಶಕ್ಯವಾದ ಪ್ರಾಣಗಳಿಂದಲೂ ಕೂಡ ಪರೋಪಕಾರವನ್ನು ಮಾಡಿದರು; ಭೂಮಿ ಮೊದಲಾದ ವಸ್ತುಗಳಲ್ಲಿ ವಿಚಾರವೇನು? ಎಲೈ ಆಚಾರ್ಯನೆ, ಯುದ್ಧದಲ್ಲಿ ಹಿಂದಕ್ಕೆತಿರುಗಿ ಬರದೆ ಪರಾಕ್ರಮಿಸುವ ದೈತ್ಯೇಂದ್ರರಾದ ಯಾವ ಪೂರ್ವಪುರುಷರಿಂದ ಭೂಮಿಯು ಬಹುಕಾಲಪರ್ಯಂತವು ಅನುಭವಿಸಲ್ಪಟ್ಟಿತೋ ಅವರುಗಳ ಭೋಗಗಳನ್ನೂ ಆಯುಸ್ಸನ್ನೂ ಪರಲೋಕಗಳನ್ನೂ ಕಾಲವು ಗ್ರಸಿಸಿತು; ಅದರಿಂದ ಸಂಪಾದಿತವಾದ ಯಶಸ್ಸುಮಾತ್ರವೇ ಕಾಲಕ್ಕೆ ಅಧೀನವಾಗದೆ ಸ್ಥಿರವಾಗಿದೆ; ಅದರಲ್ಲಿಯೂ ಪ್ರಾಣಗಳನ್ನು ಕೊಡುವದಕ್ಕಿಂತಲೂ ಧನತ್ಯಾಗವೇ ಪ್ರಶಸ್ತವು; ಯುದ್ಧದಲ್ಲಿ ಹಿಂದಕ್ಕೆ ತಿರುಗದೆ ಪರಾಕ್ರಮಿಸಿ ಶರೀರವನ್ನು ತ್ಯಾಗಂಗೈವ ಶೂರಪುರುಷರು ಸುಲಭವಾಗಿ ದೊರತಾರು; ಉತ್ತಮವಾದ ಸತ್ಪಾತ್ರಲಾಭವಾದ ಕಾಲದಲ್ಲಿ ಶ್ರದ್ಧಾತಿಶಯದಿಂದ ಧನತ್ಯಾಗಂಗೈವ ಪುರುಷರು ದುರ್ಲಭರು; ದಯಾಶಾಲಿಯಾದ ಮನಸ್ವಿಯಾದ ಪುರುಷನಿಗೆ ಸಾಧಾರಣರಾದ ಯಾಚಕರ ಮನೋರಥ ಪೂರಣದಿಂದುಂಟಾಗುವ ದಾರಿದ್ರ್ಯವೂ ಕೂಡಾ ಮಹಾಶುಭಕರವಾದದ್ದು; ಅದರಲ್ಲಿಯು ಬ್ರಹ್ಮನಿಷ್ಠರಾದ ನಿಮ್ಮಂಥಾ ಮಹಾತ್ಮರ ಮನೋರಥ ಪೂರಣಂಗೈದರೆ ಹೇಳತಕ್ಕದ್ದೇನು? ಅದರಿಂದೀ ಬ್ರಹ್ಮಚಾರಿಯಾದ ಬ್ರಾಹ್ಮಣನ ಇಷ್ಟಾರ್ಥವನ್ನು ಕೊಡುತ್ತೇನೆ; ವೇದಹಿತಗಳಾದ ಕರ್ಮಗಳ ವಿಧಾನವನ್ನು ತಿಳಿದಿರುವ ನಿಮ್ಮಂಥಾ ಮಹಾ ಬ್ರಾಹ್ಮಣರು ಆದರವುಳ್ಳವರಾಗಿ ಯಜ್ಞಕ್ರತುಗಳಿಂದ ಯಾವವನನ್ನು ಆರಾಧಿಸುತ್ತಾರೆಯೋ ಅಂಥಾ ಈ ವಿಷ್ಣುವಿಗೆ ಅಪೇಕ್ಷಿತವಾದ ಭೂಮಿಯನ್ನು ಕೊಡುವೆನು; ಹಾಗಲ್ಲದಿದ್ದರೆ ಶತ್ರುವಾದ ಈ ವಿಷ್ಣುವು ನಿರಪರಾಧಿಯಾದ ನನ್ನನ್ನು ಅಧರ್ಮದಿಂದ ಬಂಧಿಸಿದಾಗ್ಯೂ ಭೀತನಾಗಿ ಬ್ರಾಹ್ಮಣಶರೀರವನ್ನು ಧರಿಸಿ ಬಂದವನಾದುದರಿಂದಲು ಈ ವಿಷ್ಣುವನ್ನು ನಾನು ಹಿಂಸೆಮಾಡುವದಿಲ್ಲ; ಉತ್ತಮಶ್ಲೋಕನಾದ ಈ ಭಗವಂತನು ಯಶಸ್ಸನ್ನು ಬಿಡಲಾರದಿದ್ದರೆ ಯುದ್ಧದಲ್ಲಿ ನನ್ನನ್ನು ಸಹ್ಮರಿಸಿ ಈ ಭೂಮಿಯನ್ನಪಹರಿಸಲಿ; ಅಲ್ಲದಿದ್ದರೆ ನನ್ನಿಂದ ಹತನಾಗಿ ಶಯನಂಗೈಯ್ಯಲಿ; ಈಪ್ರಕಾರವಾಗಿ ನಿಶ್ಚಯಿಸಿ ಶುಕ್ರಾಚಾರ್ಯನಿಂದ ಬಹುಪ್ರಕಾರವಾಗಿ ಪೇಳಲ್ಪಟ್ಟವನಾದಾಗ್ಯೂ ಗುರುವಾಕ್ಯದಲ್ಲಿ ಶ್ರದ್ಧಾರಹಿತನಾಗಿ ಗುರುವಾಕ್ಯವನ್ನು ನಡಿಸದಿರುವ ಮನಸ್ವಿಯಾದ ಸತ್ಯಸಂಧನಾದ ಬಲಿಚಕ್ರವರ್ತಿಯನ್ನು ಕುರಿತು ದೈವದಿಂ ಪ್ರೇರಿತನಾದ ಶುಕ್ರಾಚಾರ್ಯನು 'ಎಲೈ ಬಲಿಯೆ, ನೀನು ಅಜ್ಞನಾದಾಗ್ಯೂ ನಾನೇ ಪ್ರಾಜ್ಞನೆಂದು ತಿಳಿದಿರುವನಾಗಿ ಸ್ತಬ್ಧನಾಗಿ ನನ್ನನ್ನು ಉಪೇಕ್ಷಿಸಿ ನನ್ನ ಹಿತೋಪದೇಶವನ್ನು ಅತಿಕ್ರಮಿಸಿದವನಾದುದರಿಂದ ಶೀಘ್ರದಿಂದ ರಾಜ್ಯಚ್ಯುತನಾಗುತ್ತೀಯೆ' ಎಂದು ಶಾಪವನ್ನಿತ್ತನು; ಆದಾಗ್ಯೂ ಮಹಾತ್ಮನಾದ ಬಲಿಚಕ್ರವರ್ತಿಯು ಸತ್ಯವಂ ಬಿಡದೆ ಪೂಜೆಯಂಮಾಡಿ ವಾಮನಮೂರ್ತಿಗೋಸುಗ ಉದಕಪೂರ್ವಕವಾಗಿ ಭೂಮಿಯನ್ನಿತ್ತನು; ಆಗ ಮುತ್ತಿನಹಾರ

ಗಳೇ ಮೊದಲಾದ ಭೂಷಣಗಳಿಂದ ಪ್ರಕಾಶಿಸುವ ವಿಂಧ್ಯಾವಳೀನಾಮಕಳಾದ ಬಲಿಚಕ್ರವರ್ತಿಯ ಪತ್ನಿಯು ಪಾದ ಪ್ರಕ್ಷಾಳನಾರ್ಥವಾಗಿ ಉದಕಗಳಿಂದ ಪೂರಿತವಾದ ಸುವರ್ಣಮಯವಾದ ಕಲಶವನ್ನು ತೆಗೆದುಕೊಂಡು ಬಂದಳು ; ಯಜಮಾನನಾದ ಬಲಿಚಕ್ರವರ್ತಿಯು ಲಕ್ಷ್ಮೀಕರವಾದ ಭಗವಂತನ ಪಾದಯುಗ್ಮವನ್ನು ತೊಳೆದು ಜಗತ್ಪವಿತ್ರಂ ಗಳಾದ ಆ ಉದಕಗಳನ್ನು ತನ್ನ ಶಿರಸ್ಸಿನಲ್ಲಿ ಧರಿಸಿದನು ; ಆಗ ಸ್ವರ್ಗದಲ್ಲಿ ದೇವಸಮೂಹಗಳು ಗಂಧರ್ವರು ವಿದ್ಯಾ ಧರರು ಸಿದ್ಧರು ಚಾರಣರು ಬಲಿಚಕ್ರವರ್ತಿಯ ಋಜುಬುದ್ಧಿಯನ್ನೂ ಆತನ ನಿಷ್ಠೆಯವನ್ನೂ ಸಹ ಸ್ತುತಿಗೈವವ ರಾಗಿ ಸಂತೋಷಯುಕ್ತರಾಗಿ ಆ ಬಲಿಚಕ್ರವರ್ತಿಯಮೇಲೆ ಪುಷ್ಪವರ್ಷಗಳನ್ನು ವರ್ಷಿಸಿದರು ; ಪ್ರಾಜ್ಞನಾದ ಬಲಿಚಕ್ರವರ್ತಿಯು ಶತೃವಾದ ಭಗವಂತನಿಗೋಸ್ಕರ ಲೋಕತ್ರಯವನ್ನು ಕೊಟ್ಟವನಾದಕಾರಣ ಮನಸ್ವಿಯಾದ ಈ ಬಲಿಚಕ್ರವರ್ತಿಯಿಂದ ಮಾಡಲ್ಪಟ್ಟ ವ್ಯಾಪಾರವು ಮತ್ತೊಬ್ಬರಿಂದ ಮಾಡಲಶಕ್ಯವೆಂದು ದೇವದುಂದುಭಿಗಳು ಧ್ವನಿಗೈದವು ; ಗಂಧರ್ವರು ಕಿಂಪುರುಷರು ಕಿನ್ನರರು ಗಾನಂಗೈದರು ; ಅಪರಿಚ್ಛಿನ್ನನಾದ ಪರಮಾತ್ಮನ ಅದ್ಭುತವಾ ದ ವಾಮನರೂಪವು ಗುಣತ್ರಯಾತ್ಮಕವಾದುದರಿಂದ ಅಭಿವೃದ್ಧಿಯನ್ನೈದಿತು; ಭೂಮಿಯು ದಿಕ್ಕುಗಳು ಅಂತರಿಕ್ಷ ವು ಸ್ವರ್ಗವು ಸಮುದ್ರಗಳು ಪರ್ವತಗಳು ತಿರ್ಯಕ್ಪ್ರಾಣಿಗಳು ಮನುಷ್ಯರು ದೇವತೆಗಳು ಋಷಿಗಳು ಈ ಸಮ ಸ್ತವು ಆ ಶರೀರದಲ್ಲಿ ಅಂತರ್ಭೂತವಾದವು ; ಆಚಾರ್ಯನಿಂದಲೂ ಋತ್ವಿಕ್ಕುಗಳಿಂದಲೂ ಸಭಾಜನರಿಂದಲೂ ಸ ಮೇತನಾದ ಬಲಿಚಕ್ರವರ್ತಿಯು ಮಹಾವಿಭೂತಿಯುಳ್ಳ ಭಗವಂತನ ಗುಣತ್ರಯಾತ್ಮಕವಾದ ಶರೀರದಲ್ಲಿ ಪಂಚ ಭೂತಗಳಿಂದಲೂ ಇಂದ್ರಿಯಗಳಿಂದಲೂ ಅರ್ಥಗಳಿಂದಲೂ ಚಿತ್ತಗಳಿಂದಲೂ ಜೀವಗಳಿಂದಲೂ ಯುಕ್ತವಾದ ಗುಣ ಮಯವಾದ ಸಮಸ್ತ ಜಗತ್ತನ್ನು ಕಂಡನು ; ಆ ಭಗವಂತನ ಮಹಾ ಶರೀರದಲ್ಲಿ ಅಂಗಾಲುಗಳಲ್ಲಿ ಪಾತಾಳವನ್ನೂ ಪಾದಗಳಲ್ಲಿ ಭೂಮಿಯನ್ನೂ ಮೊಳಕಾಲಿಗೂ ಪಾದಕ್ಕೂ ಮಧ್ಯವಾದ ಜಂಘೆಗಳಲ್ಲಿ ಪರ್ವತಗಳನ್ನೂ ಭಗವಂತನ ಮೊಳಕಾಲಿನಲ್ಲಿ ಪಕ್ಷಿಗಳನ್ನೂ ತೊಡೆಗಳಲ್ಲಿ ವಾಯುಸಮೂಹವನ್ನೂ ಕಟಿಪ್ರದೇಶದಲ್ಲಿ ಸಂಧ್ಯೆಯನ್ನೂ ಗುಹ್ಯ ಸ್ಥಾನದಲ್ಲಿ ಪ್ರಜೇಶನನ್ನೂ ಕಟಿಪುರೋಭಾಗದಲ್ಲಿ ತಾನು ಮೊದಲಾದ ಅಸುರರನ್ನೂ ನಾಭಿಯಲ್ಲಿ ಅಂತರಿಕ್ಷವನ್ನೂ ಉದರದಲ್ಲಿ ಸಪ್ತಸಮುದ್ರಗಳನ್ನೂ ವಕ್ಷಸ್ಥಳದಲ್ಲಿ ನಕ್ಷತ್ರಸಮೂಹವನ್ನೂ ಕಂಡನು ! ಎಲೈ ಪರೀಕ್ಷಿದ್ರಾಯನೆ, ಹೃದಯದಲ್ಲಿ ಧರ್ಮವನ್ನೂ ಸ್ತನಗಳಲ್ಲಿ ಋತುಗಳನ್ನೂ ಸತ್ಯವನ್ನೂ ಮನಸ್ಸಿನಲ್ಲಿ ಚಂದ್ರನನ್ನೂ ವಕ್ಷಸ್ಥಳದಲ್ಲಿ ಪದ್ಮಹಸ್ತಳಾದ ಲಕ್ಷ್ಮಿಯನ್ನೂ ಕಂಠದಲ್ಲಿ ಸಾಮಗಳನ್ನೂ ಸಮಸ್ತ ಶಬ್ದಗಳನ್ನೂ ಕಂಡನು ; ಭುಜಗಳಲ್ಲಿ ಇಂ ದ್ರಾದಿ ದೇವತೆಗಳನ್ನೂ ಶ್ರೋತ್ರಗಳಲ್ಲಿ ದಿಕ್ಕುಗಳನ್ನೂ ಶಿರಸ್ಸಿನಲ್ಲಿ ಸ್ವರ್ಗವನ್ನೂ ಕೇಶಗಳಲ್ಲಿ ಮೇಘಗಳನ್ನೂ ನಾಸಿಕದಲ್ಲಿ ವಾಯುವನ್ನೂ ನೇತ್ರಗಳಲ್ಲಿ ಸೂರ್ಯನನ್ನೂ ಮುಖದಲ್ಲಿ ಅಗ್ನಿಯನ್ನೂ ಕಂಡನು ; ವಾಕ್ಕಿನಲ್ಲಿ ಛಂದಸ್ಸುಗಳನ್ನೂ ರಸನೇಂದ್ರಿಯದಲ್ಲಿ ವರುಣನನ್ನೂ ಹುಬ್ಬುಗಳಲ್ಲಿ ನಿಷೇಧಶಾಸ್ತ್ರವನ್ನೂ ರೆಪ್ಪೆಗಳಲ್ಲಿ ವಿಧಿ ಗಳನ್ನೂ ಅಹೋರಾತ್ರಗಳನ್ನೂ ಕೋಪವನ್ನೂ ಲಲಾಟಸ್ಥಾನದಲ್ಲಿ ಅಧರೋಷ್ಟದಲ್ಲಿ ಲೋಭವನ್ನೂ ಕಂಡನು ! ಎಲೈ ಅರಸೆ, ಸ್ಪರ್ಶದಲ್ಲಿ ಕಾಮನನ್ನೂ ರೇತಸ್ಸಿನಲ್ಲಿ ಉದಕವನ್ನೂ ಬೆನ್ನಿನಲ್ಲಿ ಅಧರ್ಮವನ್ನೂ ಗಮನದಲ್ಲಿ ಯಜಮಾನನ್ನೂ ಛಾಯೆಗಳಲ್ಲಿ ಮೃತ್ಯುವನ್ನೂ ನಗುವಿನಲ್ಲಿ ಮಾಯೆಯನ್ನೂ ರೋಮಗಳಲ್ಲಿ ಓಷಧಿ ಲತೆಗಳ ನ್ನೂ ಕಂಡನು ; ನರಗಳಲ್ಲಿ ನದಿಗಳನ್ನೂ ಉಗುರುಗಳಲ್ಲಿ ಶಿಲೆಗಳನ್ನೂ ಬುದ್ಧಿಯಲ್ಲಿ ಬ್ರಹ್ಮನನ್ನೂ ಪ್ರಾಣಗಳಲ್ಲಿ ದೇವತೆಗಳನ್ನೂ ಋಷಿಗಳನ್ನೂ ಶರೀರದಲ್ಲಿ ನಾನಾಪ್ರಕಾರವಾದ ಸ್ಥಾವರ ಜಂಗಮ ಪ್ರಾಣಿಗಳನ್ನೂ ಕಂಡನು ; ಈಪ್ರಕಾರ ಬಲಿಚಕ್ರವರ್ತಿಯು ಭಗವಂತನಲ್ಲಿ ಸರ್ವಪ್ರಪಂಚವನ್ನೂ ನೋಡಿ ಅನಂತರದಲ್ಲಿ ಸಹಿಸಲಶಕ್ಯವಾದ ತೇಜಸ್ಸುಳ್ಳ ಸುದರ್ಶನನಾಮಕವುಳ್ಳ ಚಕ್ರವು ಮೇಘದಂತೆ ಘೋಷವುಳ್ಳ ಶಾರ್ಙವೂ ಪರ್ಜನ್ಯದಂತೆ ಧ್ವನಿಯುಳ್ಳ ಪಾಂಚಜನ್ಯವೂ ವೇಗಶಾಲಿಯಾದ ಕೌಮೋದಕಿಯೂ ಶತಚಂದ್ರಯುಕ್ತವಾದ ನಂದಕವೂ ಅಕ್ಷಯಬಾಣಗಳುಳ್ಳ ಬತ್ತಳಿಕೆಗಳೂ ಸುನಂದನೇ ಮೊದಲಾದ ಪಾರಿಷದರೂ ಭಗವಂತನ ಸಮೀಪದಲ್ಲಿ ನಿಂತರು ; ಈಪ್ರಕಾರವಾಗಿ ಪಾರಿ ಷದರಿಂದ ಯುಕ್ತನಾಗಿ ಲೋಕಪಾಲಯುಕ್ತವಾಗಿ ಪ್ರಕಾಶಿಸುವ ಕಿರೀಟಗಳೂ ಬಾಹುಪುರಿಗಳೂ ಮಕರಕುಂಡಲ ಗಳೂ ಉಳ್ಳವನಾಗಿ ಶ್ರೀವತ್ಸ ಚಿಹ್ನದಿಂದಲೂ ಕೌಸ್ತುಭಮಣಿಯಿಂದಲೂ ಬಡ್ಯಾಣದಿಂದಲೂ ಪೀತಾಂಬರದಿಂದಲೂ

ಭ್ರಮರಗಳುಳ್ಳ ವನಮಾಲೆಯಿಂದಲೂ ಶೋಭಿತನಾದ ಉರುಕ್ರಮನಾದ ಭಗವಂತನು ಮಿಂಚುಗಳಿಂದ ಯುಕ್ತವಾದ ನೀಲಮೇಘದಂತೆ ಪ್ರಕಾಶಿಸಿದನು! ಎಲೈ ಅರಸೆ, ಈಪ್ರಕಾರನಾಗಿ ಭಗವಂತನು ಒಂದು ಹೆಜ್ಜೆಯಿಂದ ಬಲಿಚಕ್ರವರ್ತಿಯ ಭೂಮಿಯನ್ನೂ ಶರೀರದಿಂದ ಆಕಾಶವನ್ನೂ ಬಾಹುಗಳಿಂದ ದಿಕ್ಕುಗಳನ್ನೂ ಆಕ್ರಮಿಸಿದನು; ಎರಡನೇ ಹೆಜ್ಜೆಯಿಂದ ಸ್ವರ್ಗವನ್ನಾಕ್ರಮಿಸಿದನು; ಮೂರನೇ ಹೆಜ್ಜೆಗೆ ಆ ಬಲಿಚಕ್ರವರ್ತಿಯ ಪದಾರ್ಥವೇನೂ ಇಲ್ಲದೇ ಹೋಯಿತು; ಭಗವಂತನ ಎರಡನೇ ಹೆಜ್ಜೆಯೇ ಸ್ವರ್ಗವನ್ನಾಕ್ರಮಿಸಿ ಸಾಲದೆ ಮಹರ್ಲೋಕ ಮೊದಲುಗೊಂಡು ಸತ್ಯಲೋಕದ ಪರ್ಯಂತವೂ ವ್ಯಾಪಿಸಿತು.''

೨೧ನೇ ಅಧ್ಯಾಯ.

ವಾಮನಮೂರ್ತಿಯು ಬಲಿಚಕ್ರವರ್ತಿಯನ್ನು ವರುಣಪಾಶಗಳಿಂದ ಬಂಧಿಸಿದ್ದು.

ಎಲೈ ಅರಸೇ, ಆಗ ಬ್ರಹ್ಮದೇವನು ಸತ್ಯಲೋಕವನ್ನು ವ್ಯಾಪಿಸಿದ ಭಗವಂತನ ಪಾದವನ್ನು ನೋಡಿ ಆ ಪಾದದ ನಖಗಳೆಂಬ ಚಂದ್ರರ ಕಾಂತಿಯಿಂದ ತಿರಸ್ಕೃತವಾದ ಪ್ರಭೆಯುಳ್ಳ ಸತ್ಯಲೋಕವನ್ನು ನೋಡಿ ಆ ಕಾಂತಿಗಳಿಂದ ವ್ಯಾಪ್ತನಾಗಿ ಬಂದನು; ಮರೀಚಿಮೊದಲಾದ ಪ್ರಜೇಶರು ಮಹಾವ್ರತವುಳ್ಳ ಸನಕಾದಿ ಯೋಗಿಗಳು ವೇದಗಳು ಉಪವೇದಗಳು ನಿಯಮಗಳು ತರ್ಕವು ಇತಿಹಾಸವು ಪುರಾಣಗಳು ವೇದಾಂಗಗಳು ಯೋಗವೆಂಬ ವಾಯುವಿನಿಂದ ಅಭಿವೃದ್ಧಿ ಮಾಡಲ್ಪಟ್ಟ ಜ್ಞಾನಾಗ್ನಿಯಿಂದ ದಹಿಸಲ್ಪಟ್ಟ ಅಜ್ಞಾನಕಲ್ಮಷವುಳ್ಳ ಮಹಾಯೋಗಿಗಳು ಯಾರುಂಟೋ ಅವರು ಸಹಾ ಯಾವ ಭಗವಂತನ ಪಾದಸ್ಮರಣಮಾಹಾತ್ಮ್ಯದಿಂದ ಕರ್ಮಗಳಿಂದ ಲಭ್ಯವಲ್ಲದ ಬ್ರಹ್ಮಲೋಕವನ್ನೈದಿದರೋ ಅಂಥಾ ಭಗವಂತನ ಪಾದವನ್ನು ನಮಸ್ಕರಿಸಿದರು; ಅನಂತರದಲ್ಲಿ ಬ್ರಹ್ಮದೇವನು ಮೇಲಕ್ಕೆತ್ತಲ್ಪಟ್ಟ ಭಗವಂತನ ಪಾದಪೂಜಾರ್ಥವಾಗಿ ಅರ್ಘ್ಯೋದಕವನ್ನು ತೆಗದುಕೊಂಡುಬಂದು ತಾನು ಯಾವ ಭಗವಂತನ ನಾಭೀಪದ್ಮದಲ್ಲಿ ಜನಿಸಿದನೋ ಆ ಭಗವಂತನನ್ನು ಪೂಜಿಸಿ ಭಕ್ತಿಯಿಂದ ಸ್ತೋತ್ರವನ್ನು ಮಾಡಿದನು; ಆ ಬ್ರಹ್ಮನ ಕಮಂಡಲೋದಕವು ಭಗವಂತನ ಪಾದಪ್ರಕ್ಷಾಳನದಿಂದ ಪವಿತ್ರವಾದಕಾರಣ ಅದೇ ದೇವಗಂಗೆಯಾಯಿತು; ಭಗವಂತನ ನಿರ್ಮಲವಾದ ಕೀರ್ತಿಯಂತೆ ಆ ಗಂಗೆಯು ಲೋಕತ್ರಯವನ್ನು ಪರಿಶುದ್ಧವನ್ನು ಮಾಡುವದು; ಸಪರಿವಾರರಾದ ಬ್ರಹ್ಮಾದಿ ಲೋಕನಾಥರೆಲ್ಲರೂ ಆದರಪೂರ್ವಕವಾಗಿ ವೃದ್ಧಿಯನ್ನೈದಿದ ಆ ಶರೀರವನ್ನು ಸಂಕ್ಷೇಪಿಸಿ ವಾಮನರೂಪನಾದ ಭಗವಂತನನ್ನು ಪೂಜೆಯನ್ನು ಮಾಡಿದರು; ಉದಕಗಳಿಂದಲೂ ಪೂಜಾರ್ಥಗಳಾದ ಮಾಲ್ಯಗಳಿಂದಲೂ ದಿವ್ಯಗಂಧಲೇಪನಗಳಿಂದಲೂ ಲಾಜಗಳಿಂದಲೂ ಅಕ್ಷತಗಳಿಂದಲೂ ಫಲಸಮೂಹಗಳಿಂದಲೂ ಸ್ತೋತ್ರಗಳಿಂದಲೂ ಜಯಜಯ ಎಂಬ ಶಬ್ದಗಳಿಂದಲೂ ಭಗವಂತನ ಪರಾಕ್ರಮ ಮಾಹಾತ್ಮ್ಯಗಳಿಂದಲೂ ಅಂಕಿತಗಳಾದ ಗಾನಗಳಿಂದಲೂ ನಾಟ್ಯಗಳಿಂದಲೂ ವಾದ್ಯಗಳಿಂದಲೂ ಶಂಖಭೇರೀ ನಾದಗಳಿಂದಲೂ ಭಗವಂತನನ್ನಾರಾಧಿಸಿದರು; ಋಕ್ಷಪತಿಯಾದ ಜಾಂಬವಂತನು ಭೇರೀಶಬ್ದಪೂರ್ವಕವಾಗಿ ಭಗವಂತನಿಂದ ಮಾಡಲ್ಪಟ್ಟ ಈ ಮಾಯಾಸಾಹಸವನ್ನು ಸರ್ವಲೋಕಗಳಲ್ಲಿಯೂ ಸಾರಿದನು! ಎಲೈ ಅರಸೆ, ಭಗವಂತನ ಕಪಟಯಾಚನೆಯಿಂದ ಅಪಹೃತವಾದ ಸಮಸ್ತ ಭೂಮಿಯನ್ನು ನೋಡಿ ಬಲಿಚಕ್ರವರ್ತಿಯ ಅನುಚರರಾದ ಅಸುರರು ಕೋಪಯುಕ್ತರಾಗಿ ಪರಸ್ಪರವಾಗಿ ಮಾತನಾಡಿಕೊಂಡು ಈ ವಟುವು ಬ್ರಾಹ್ಮಣಾಧಮನೇ ಅಲ್ಲ; ಮಾಯಾವಿಗಳಲ್ಲಿ ಶ್ರೇಷ್ಠನಾದ ವಿಷ್ಣುವು; ಬ್ರಾಹ್ಮಣ ವೇಷದಿಂದ ಪ್ರಚ್ಛನ್ನನಾಗಿ ದೇವತಾಕಾರ್ಯವನ್ನು ಮಾಡಲಿಚ್ಛೈಸುತ್ತಾನೆ; ಯಾಚನಾರ್ಥವಾಗಿ ಬಂದಿರುವ ವಟುರೂಪನಾದ ಶತ್ರುವಾದ ಈ ವಿಷ್ಣುವಿನಿಂದ ಯಜ್ಞದೀಕ್ಷಿತನಾದ ನಮ್ಮ ಧೊರೆಯ ಸರ್ವಸ್ವವು ಅಪಹರಿಸಲ್ಪಟ್ಟಿತು; ಸತ್ಯವ್ರತನಾಗಿ ಯಜ್ಞದೀಕ್ಷಿತನಾಗಿ ಬ್ರಾಹ್ಮಣಪ್ರಿಯನಾಗಿ ದಯಾಶಾಲಿಯಾದ ನಮ್ಮ ಧೊರೆಯಾದ ಬಲಿಚಕ್ರವರ್ತಿಯು ಮಾಡಿದ ಪ್ರತಿಜ್ಞೆಯು ಅನೃತವಾಗದಂತೆ ದಾನವನ್ನು ಮಾಡಲಿ; ನಾವೆಲ್ಲರೂ ಈ ವಾಮನನನ್ನು ಸಂಹರಿಸೋಣ; ನಮಗೆ ಪ್ರಭುಶುಶ್ರೂಷೆಯೇ ಧರ್ಮವು! ಎಂದು ಈರೀತಿಯಲ್ಲಿ ಅಸುರರು ಮಾತನಾಡಿಕೊಂಡು ಎಲ್ಲರೂ ಗುಂಪಾಗಿ

ಶೂಲ ಮೊದಲಾದ ಆಯುಧಗಳನ್ನು ಧರಿಸಿ ವಾಮನಮೂರ್ತಿಯನ್ನು ಸಂಹರಿಸುವದಕ್ಕೆ ಉದ್ಯುಕ್ತರಾಗಿ ಬಲಿಚಕ್ರವರ್ತಿಯು ಸಮ್ಮತಿಪಡದೇ ಇದ್ದಾಗ್ಯೂ ಅಸುರರು ಕ್ರೋಧಾವಿಷ್ಟರಾಗಿ ಹೊರಟರು ! ಎಲೈ ಅರಸೆ, ಈರೀತಿಯಲ್ಲಿ ಯುದ್ಧಾರ್ಥವಾಗಿ ಬರುತಲಿರುವ ಅಸುರಸೇನಾಪತಿಗಳನ್ನು ನೋಡಿ ನಗುತ ಭಗವಂತನ ಅನುಚರರಾದ ಸೇನಾಪತಿಗಳು ಆಯುಧಗಳನ್ನು ಧರಿಸಿಕೊಂಡು ಅವರನ್ನು ಕಂಡರು ; ನಂದನು ಸುನಂದನು ಜಯನು ವಿಜಯನು ಪ್ರಬಲನು ಉದ್ಬಲನು ಕುಮುದನು ಕುಮುದಾಕ್ಷನು ವಿಷ್ವಕ್ಸೇನನು ಗರುಡನು ಜಯಂತನು ಶ್ರುತದೇವನು ಪುಷ್ಪದಂತನು ಸಾತ್ವತನು ಮೊದಲಾದ ಹತ್ತು ಸಹಸ್ರ ಗಜಗಳ ಬಲವುಳ್ಳ ಮಹಾ ಸೇನಾಪತಿಗಳು ಬಂದು ಅಸುರ ಸೇನೆಗಳನ್ನು ಪ್ರಹರಿಸಿದರು ; ಆಗ ಬಲಿಚಕ್ರವರ್ತಿಯು ಶುಕ್ರಶಾಪವನ್ನು ಸ್ಮರಿಸಿ ಭಗವಂತನ ಅನುಚರರಿಂದ ಪ್ರಹರಿಸಲ್ಪಡುತಲಿರುವ ಸ್ವಕೀಯರಾದ ಅಸುರರನ್ನು ನೋಡಿ ರೋಷಾವಿಷ್ಟರಾದ ಆ ಅಸುರರನ್ನು ಯುದ್ಧವು ಬೇಡವೆಂದು ತಡೆದನು ! ಎಲೈ ವಿಪ್ರಚಿತ್ತಿಯೆ ಎಲೈ ರಾಹುವೆ ಎಲೈ ಹೇತಿನಾಮಕನೆ ನನ್ನ ವಾಕ್ಯವನ್ನು ಕೇಳಿ ; ನೀವು ಯುದ್ಧವನ್ನು ಮಾಡಬೇಡಿ ; ಹಿಂದಕ್ಕೆ ತಿರಿಗಿ ಬನ್ನಿ ; ಈಗ ನಮಗೆ ಜಯಕಾಲವಲ್ಲ ; ಸಕಲ ಪ್ರಾಣಿಗಳ ಸುಖದುಃಖಾನುಭವನಿಯಾಮಕನಾದ ಕಾಲವನ್ನತಿಕ್ರಮಿಸುವುದಕ್ಕೆ ಪುರುಷನು ಸಮರ್ಥನಾಗುವದಿಲ್ಲ ! ಎಲೈ ದೈತ್ಯರಿರಾ, ಯಾವಕಾಲವು ಪೂರ್ವದಲ್ಲಿ ನಮಗೆ ಐಶ್ವರ್ಯಕೋಸ್ಕರಲೂ ದೇವತೆಗಳಿಗೆ ಕಷ್ಟಕೋಸ್ಕರಲೂ ಆಯಿತೋ ಆ ಕಾಲವೇ ಈಗ ವ್ಯತ್ಯಸ್ತವಾಯಿತು ; ಲೋಕದಲ್ಲಿ ಜನಬಲದಿಂದಲೂ ಮಂತ್ರಿಗಳಿಂದಲೂ ಬುದ್ಧಿಯಿಂದಲೂ ದುರ್ಗಂಗಳಿಂದಲೂ ಮಂತ್ರಗಳಿಂದಲೂ ಔಷಧಗಳಿಂದಲೂ ಸಾಮಾದಿ ಚತುರೋಪಾಯಗಳಿಂದಲೂ ಕಾಲಗತಿಯನ್ನು ತಪ್ಪಿಸಲಾಗದು ; ದೈವಬಲಸಂಪನ್ನರಾದ ನಿಮ್ಮಿಂದಲೇ ವಿಷ್ಣುವಿನ ಅನುಚರರಾದ ಈ ಜನರು ಬಹುಪ್ರಕಾರವಾಗಿ ಪರಾಜಿತರಾಗಲಿಲ್ಲವೇ ? ಈಗ ಆ ಜನರೇ ನಮ್ಮನ್ನು ಜೈಸಿ ಗರ್ಜಿಸುತ್ತಾರೆ ; ನಮಗೂ ದೈವಗತಿ ಪ್ರಸನ್ನವಾದರೆ ಇವರನ್ನು ನಾವು ಜೈಸುತ್ತೇವೆ ; ಆದರಿಂದ ನಮಗೆ ದೈವಾನುಕೂಲ್ಯ ಯಾವಾಗ ಉಂಟಾಗುವುದೋ ಆ ಕಾಲವನ್ನು ಪ್ರತೀಕ್ಷಿಸಿಕೊಂಡಿರಿ ಎಂದು ಹೇಳಿದ ಬಲಿಚಕ್ರವರ್ತಿಯ ವಾಕ್ಯವನ್ನು ಕೇಳಿ ದೈತ್ಯದಾನವ ಸೇನಾಪತಿಗಳಾದ ಅಸುರರು ವಿಷ್ಣುವಿನ ಅನುಚರರಿಂದ ಪ್ರಹರಿಸಲ್ಪಟ್ಟವರಾಗಿ ರಸಾತಲವನ್ನು ಪ್ರವೇಶಿಸಿದರು ; ಅನಂತರದಲ್ಲಿ ಪಕ್ಷಿರಾಜನಾದ ಗರುಡನು ಭಗವಂತನ ಆಶಯವನ್ನು ತಿಳಿದು ಸುತ್ಯಾಹಸ್ಸಿನಲ್ಲಿ ವರುಣಪಾಶಗಳಿಂದ ಬಲಿಚಕ್ರವರ್ತಿಯನ್ನು ಬಂಧಿಸಿದನು ; ಪ್ರಭುವಾದ ವಿಷ್ಣುವಿನಿಂದ ಬಲಿಚಕ್ರವರ್ತಿಯು ನಿಗ್ರಹಿಸಲ್ಪಡುತಲಿರಲಾಗಿ ಭೂವ್ಯಂತರಿಕ್ಷಗಳಲ್ಲಿಯೂ ಸರ್ವದಿಕ್ಕುಗಳಲ್ಲಿಯೂ ಮಹತ್ತಾದ ಹಾಹಾಕಾರವುಂಟಾಯಿತು ! ಆ ಭಗವಂತನಾದ ವಾಮನಮೂರ್ತಿಯು ವರುಣಪಾಶದಿಂದ ಬದ್ಧನಾಗಿ ನಷ್ಟವಾದ ಸಂಪತ್ತುಳ್ಳವನಾದಾಗ್ಯೂ ಸ್ಥಿರಬುದ್ಧಿಯುಳ್ಳ ಉತ್ಕೃಷ್ಟ ಯಶಸ್ಸುಳ್ಳ ಆ ಬಲಿಚಕ್ರವರ್ತಿಯನ್ನು ಕುರಿತು "ಎಲೈ ಅಸುರನೆ, ನಿನ್ನಿಂದ ನನಗೋಸ್ಕರ ಮೂರಡಿ ಭೂಮಿಯು ಕೊಡಲ್ಪಟ್ಟಿತು; ನಿನ್ನ ಭೂಮಿಯಲ್ಲಾ ಎರಡು ಹೆಜ್ಜೆಗಳಿಗೇ ಸರಿಯಾಯಿತು ; ಮೂರನೇ ಹೆಜ್ಜೆಗೆ ಭೂಮಿಯನ್ನು ಕೊಡುವನಾಗು ; ಈ ಸೂರ್ಯನು ಕಿರಣಗಳಿಂದ ಎಷ್ಟು ಪ್ರಮಾಣವುಳ್ಳ ಭೂಮಿಯನ್ನು ತಪಿಸುತ್ತಾನೆಯೋ ಚಂದ್ರನು ನಕ್ಷತ್ರಗಳೊಡನೆ ಎಷ್ಟು ಭೂಮಿಯನ್ನು ಬೆಳಗುತ್ತಾನೆಯೋ ಪರ್ಜನ್ಯಯುಕ್ತನಾದ ಅಗ್ನಿಯು ಎಷ್ಟುಪ್ರದೇಶದಲ್ಲಿ ಸಂಚರಿಸುತ್ತಾನೆಯೋ ಅಷ್ಟು ಪ್ರಮಾಣವುಳ್ಳ ಭೂಮಿಯು ನಿನ್ನದೇ ಸರಿಯಷ್ಟೆ ; ಈ ಭೂಮಿಯಲ್ಲವೂ ನನ್ನ ಒಂದಡಿಯಿಂದ ಆಕ್ರಮಿಸಲ್ಪಟ್ಟಿತು ; ಆಕಾಶವು ದಿಕ್ಕುಗಳು ನನ್ನ ಶರೀರದಿಂದ ವ್ಯಾಪ್ತಗಳಾದವು ; ನೀನು ನೋಡುತ್ತಿರುವಾಗಲೇ ಸ್ವರ್ಗಲೋಕವು ಎರಡನೇ ಅಡಿಯಿಂದ ಆಕ್ರಮಿಸಲ್ಪಟ್ಟಿತು ; ಪ್ರತಿಜ್ಞಾತವಾದ ಅರ್ಥವನ್ನು ಕೊಡದೆ ವಂಚಿಸಿದವನಿಗೆ ನರಕವಾಸವು ಸಿದ್ಧವು ; ಆದರಿಂದ ನೀನು ಶುಕ್ರಾಚಾರ್ಯನಿಂದ ಅನುಮೋದಿತನಾಗಿ ನರಕದಲ್ಲಿ ವಾಸವನ್ನು ಮಾಡು ; ಯಾವ ಪುರುಷನು ಯಾಚಕನಿಗೆ ಕೊಡುತ್ತೇನೆಂದು ಹೇಳಿ ಕೊಡಲಾರದೆ ಹೋಗುವನೋ ಅವನ ಮನೋರಥಗಳು ಸಫಲವಾಗಲಾರವು ; ಅವನಿಗೆ ಸ್ವರ್ಗವು ದೂರವಾಗುವುದು ; ಅಧಃಪತನವೇ ಉಂಟಾಗುವುದು ; ಐಶ್ವರ್ಯಮದದಿಂದ ಅಹಂಕೃತನಾದ ನಿನ್ನಿಂದ ಕೊಡುತ್ತೇನೆಂದು ಹೇಳಿ ಆಮೇಲೆ ಕೊಡದೆ ನಾನು ವಂಚಿಸಲ್ಪಟ್ಟೆನು ; ಆ ದೋಷಕ್ಕೆ ಫಲರೂಪವಾದ ನರಕವನ್ನು ನೀನು ಕೆಲವು ಸಂವತ್ಸರಗಳಲ್ಲಿ ಅನುಭವಿಸು " ಎಂದು ನುಡಿದನು.

೨೨ನೇ ಅಧ್ಯಾಯ.

ಭಗವಂತನು ಬಲಿಚಕ್ರವರ್ತಿಯನ್ನು ಸುತಲಲೋಕದಲ್ಲಿ ವಾಸವನ್ನು ಮಾಡಲು ಆಜ್ಞಾಪಿಸಿದ್ದು.

ಎಲೈ ಅರಸೆ, ಈರೀತಿಯಲ್ಲಿ ಭಗವಂತನಿಂದ ಬಾಧಿಸಲ್ಪಟ್ಟು ಸತ್ಯವನ್ನು ತಪ್ಪುವಂತೆ ಮಾಡಲ್ಪಟ್ಟಾಗ್ಯೂ ಸತ್ಯವನ್ನು ಬಿಡದೆ ದೃಢಚಿತ್ತನಾದ ಬಲಿಚಕ್ರವರ್ತಿಯು ಧೈರ್ಯವನ್ನು ಬಿಡದೆ ಉತ್ತಮವಾದ ವಾಕ್ಯವನ್ನು ನುಡಿಯುತ "ಎಲೈ ಉತ್ತಮಕೀರ್ತಿಯುಳ್ಳ ಭಗವಂತನೆ, ನನ್ನಿಂದ ನುಡಿಯಲ್ಪಟ್ಟ ವಾಕ್ಯವನ್ನು ಅನೃತವನ್ನಾಗಿ ನೀನು ತಿಳಿಯುತ್ತೀಯೆ; ಆದಾಗ್ಯೂ ನನ್ನ ವಾಕ್ಯವನ್ನು ಸತ್ಯವನ್ನೇ ಮಾಡುತ್ತೇನೆ; ನನ್ನಿಂದ ವಂಚನೆಯಾಗುವದಿಲ್ಲ; ಮೂರನೇ ಅಡಿಯನ್ನು ನನ್ನ ಶಿರಸ್ಸಿನಲ್ಲಿರಿಸು! ಎಲೈ ಭಗವಂತನೆ, ನಾನು ನರಕಕ್ಕೂ ಭಯಪಡುವದಿಲ್ಲ; ವರುಣಪಾಶಬಂಧಕ್ಕೂ ಹೆದರುವದಿಲ್ಲ; ಮಹತ್ತಾದ ವ್ಯಸನಕ್ಕೂ ದಿಗಿಲುಪಡುವುದಿಲ್ಲ; ನಷ್ಟಕ್ಕೂ ಭಯಪಡುವುದಿಲ್ಲ; ನೀನು ಮಾಡಿದ ಅವಮಾನಕ್ಕೂ ಭಯಪಡುವುದಿಲ್ಲ; ಬಲಿಯು ಅಸತ್ಯವಂತನೆಂಬ ಅಪಕೀರ್ತಿಗೆ ಭಯಪಡುತ್ತೇನೆ; ಪರಮಪೂಜ್ಯನಾದ ಮಹಾಪುರುಷನಿಂದ ಮಾಡಲ್ಪಟ್ಟ ಶಿಕ್ಷೆಯು ಪುರುಷರಿಗೆ ಶ್ಲಾಘ್ಯವಾದದ್ದೆಂದು ತಿಳಿಯುತ್ತೇನೆ; ಮಾತೃಗಳು ಪಿತೃಗಳು ಭ್ರಾತೃಗಳು ಮಿತ್ರರು ಸಹ ಯಾವ ಶಿಕ್ಷೆಯನ್ನು ಮಾಡುವದಿಲ್ಲವೋ ಅಂತಹ ಬುದ್ಧಿಪ್ರದವಾದ ಶಿಕ್ಷೆಯು ಹಿತಾರ್ಥವಾಗಿ ಮಹಾತ್ಮರಿಂದ ಮಾಡಲ್ಪಡುವದು; ಅದರಿಂದ ನಿನ್ನಿಂದ ಮಾಡಲ್ಪಟ್ಟ ಶಿಕ್ಷೆಗೆ ಒಳಗಾಗುವದು ನನಗೆ ಮಹಾ ಕೀರ್ತಿಪ್ರದವೇ ಹೊರ್ತು ಬೇರೆ ಅಲ್ಲ! ಎಲೈ ಭಗವಂತನೆ, ನೀನು ಅಸುರರಾದ ನಮಗೆ ಶತ್ರುವೆಂದು ಲೋಕಾಪವಾದವು ವಿಚಾರಿಸಿದಲ್ಲಿ ನೀನೇ ನಮಗೆ ಮೋಕ್ಷಗುರುವು; ಅನೇಕಗಳಾದ ಧನಾದಿ ಮದಗಳಿಂದ ಅಂಧರಾದ ನಮಗೆ ಮದವನ್ನು ಪರಿಹರಿಸಿ ಜ್ಞಾನವನ್ನು ಉಪದೇಶಮಾಡುತ್ತೀಯೆ; ಅನೇಕರಾದ ಅಸುರರು ನಿನ್ನಲ್ಲಿ ಶತ್ರುಭಾವದಿಂದಲೇ ಸಿದ್ಧಿಯನ್ನೈದಿದರು; ನಿನ್ನಲ್ಲಿ ಏಕಾಂತಭಕ್ತರು ಸಿದ್ಧಿಯನ್ನೈದುತ್ತಾರೆಂಬ ಅರ್ಥದಲ್ಲಿ ಹೇಳತಕ್ಕದ್ದೇನು! ಅದರಿಂದ ಆಶ್ಚರ್ಯಚರಿತ್ರವುಳ್ಳ ನಿನ್ನಿಂದ ನಾನು ನಿಗ್ರಹಿಸಲ್ಪಟ್ಟವನಾಗಿ ವರುಣಪಾಶದಿಂದ ಬದ್ಧನಾದಾಗ್ಯೂ ವ್ಯಥೆಪಡುವುದಿಲ್ಲ; ನಿನ್ನ ಭಕ್ತರಿಗೆ ಸಮ್ಮತವಾಗಿ ಪ್ರಕಟಮಾಡಲ್ಪಟ್ಟ ಸಾಧುವ್ಯವಹಾರವುಳ್ಳವನಾಗಿ ನನಗೆ ಪಿತಾಮಹನಾಗಿರುವ ಪ್ರಹ್ಲಾದನು ನಿನ್ನನ್ನೇ ಸರ್ವಪ್ರಕಾರದಿಂದಲೂ ಆಶ್ರಯಿಸಿದವನಾಗಿ ನಿನಗೆ ದ್ವೇಷಿಯಾದ ಸ್ವಪಿತೃವಾದ ಹಿರಣ್ಯಕಶಿಪುವಿನಿಂದ ನಾನಾಪ್ರಕಾರವಾದ ಹಿಂಸೆಯನ್ನು ಪಡೆಯಿಸಲ್ಪಟ್ಟವನಾದಾಗ್ಯೂ ನಶ್ವರವಾದ ಈ ದೇಹದಿಂದೇನು? ವಿತ್ತವನ್ನಪಹರಿಸುವ ಸ್ವಜನರೆಂಬ ಚೋರರಿಂದೇನು? ಸಂಸಾರಬಂಧಕ್ಕೆ ಕಾರಣಭೂತಳಾದ ಪತ್ನಿಯಿಂದೇನು? ಗೃಹಾದಿಗಳಿಂದೇನು ಫಲವು? ವ್ಯರ್ಥವಾಗಿ ಆಯುಸ್ಸು ಕ್ಷಯವನ್ನೈದುತಲಿದೆಯೆಂದು ನಿಶ್ಚಯಿಸಿ ಸ್ವಕೀಯವಾದ ಅಸುರಪಕ್ಷವನ್ನು ನಿಗ್ರಹಿಸುವ ನಿನ್ನ ಸಂಬಂಧಿಯಾದ ಭಯಪರಿಹಾರಕವಾದ ಪಾದಪದ್ಮವನ್ನು ದೃಢವಾಗಿ ಐದಿದನು; ಅದೇರೀತಿಯಲ್ಲಿ ನಾನು ಕೂಡ ದೈವದಿಂದ ಬಲಾತ್ಕಾರದಿಂದ ಪರಿತ್ಯಾಗವನ್ನು ಮಾಡಿಸಲ್ಪಟ್ಟ ಸಂಪತ್ತುಳ್ಳವನಾಗಿ ಅಸುರದ್ವೇಷಿಯಾದ ನಿನ್ನ ಸಮೀಪವನ್ನೈದಿಸಲ್ಪಟ್ಟೆನು; ಯಾವ ಐಶ್ವರ್ಯಮದದಿಂದ ಸ್ತಬ್ಧವಾದ ಬುದ್ಧಿಯುಳ್ಳ ಪುರುಷನು ಮೃತ್ಯುವಶವಾದ ಈ ದೇಹವನ್ನು ದೃಢವಲ್ಲವೆಂದು ತಿಳಿಯುವದಿಲ್ಲವೋ ಅಂತಹ ಐಶ್ವರ್ಯವನ್ನು ಪರಿಹರಿಸಿ ದೈವಸಹಾಯವನ್ನು ಮಾಡಿಸು" ಎಂಬದಾಗಿ ಬಲಿಚಕ್ರವರ್ತಿಯು ಮಾತನಾಡುತಲಿರುವಾಗ ಭಗವತ್ಪ್ರಿಯನಾದ ಪ್ರಹ್ಲಾದನು ಅಲ್ಲಿಗೆ ಬಂದನು; ಆಗ ಬಲಿಯು ತೇಜಸ್ಸಿನಿಂದ ಪ್ರಕಾಶಮಾನನಾದ ಕೆಂದಾವರೆಯಂತೆ ನೇತ್ರಗಳುಳ್ಳ ಉನ್ನತವಾದ ಹೊಂಬಣ್ಣವಾದ ವಸ್ತ್ರವುಳ್ಳ ಶ್ಯಾಮವರ್ಣನಾದ ದೀರ್ಘಬಾಹುವಾದ ಸುಂದರನಾದ ಪಿತಾಮಹನಾದ ಪ್ರಹ್ಲಾದನನ್ನು ಕಂಡು ವರುಣಪಾಶದಿಂದ ಬದ್ಧನಾದ್ದರಿಂದ ಪೂರ್ವದಂತೆ ಆ ಪ್ರಹ್ಲಾದನಿಗೆ ಪ್ರತ್ಯುತ್ಥಾನಾದ್ಯುಪಚಾರಗಳನ್ನು ಮಾಡಲಿಲ್ಲ; ಶಿರಸ್ಸಿನಿಂದ ನಮಸ್ಕರಿಸಿ ಬಾಷ್ಪಪೂರಿತಗಳಾದ ನೇತ್ರಗಳುಳ್ಳವನಾಗಿ ಲಜ್ಜೆಯಿಂದ ತಗ್ಗಿಸಲ್ಪಟ್ಟ ಮುಖವುಳ್ಳವನಾದನು; ಆಗ ಮಹಾಮನಸ್ವಿಯಾದ ಪ್ರಹ್ಲಾದನು ಸುನಂದಾದಿಗಳಿಂದುಪಾಸಿತನಾಗಿ ಅಲ್ಲಿ ಕುಳಿತಿರುವ ಸತ್ಪತಿಯಾದ ಹರಿಯನ್ನು ನೋಡಿ ಆನಂದಬಾಷ್ಪದಿಂದಲೂ ರೋಮಾಂಚದಿಂದಲೂ ಪರವಶನಾಗಿ ಸಮೀಪವನ್ನೈದಿ ಶಿರಸ್ಸಿನಿಂದ ನಮಸ್ಕರಿಸಿದನು.

ಅನಂತರದಲ್ಲಿ ಪ್ರಹ್ಲಾದನು ಭಗವಂತನನ್ನು ಕುರಿತು “ಎಲೈ ಶ್ರೀಹರಿಯೆ, ನಿನ್ನನ್ನಾರಾಧಿಸಿದ ಬಲಿಚಕ್ರವರ್ತಿಗೆ ದೇವೇಂದ್ರಪದವು ನಿನ್ನಿಂದಲೇ ಕೊಡಲ್ಪಟ್ಟಿತು ; ಈಗ ನಿನ್ನಿಂದಲೇ ಅಪಹರಿಸಲ್ಪಟ್ಟಿತು ; ಅದು ಮಹಾ ಯಶಸ್ಕರವಾದದ್ದು ; ಯಾವಕಾರಣ ಈ ಬಲಿಯು ಆತ್ಮಮೋಹಕವಾದ ಐಶ್ವರ್ಯದಿಂದ ಬಿಡಲ್ಪಟ್ಟನೋ ಅದರಿಂದ ಪರಮಾನುಗ್ರಹವು ಮಾಡಲ್ಪಟ್ಟಿತೆಂದು ನಾನು ತಿಳಿಯುತ್ತೇನೆ ; ಯಾವ ಐಶ್ವರ್ಯಲಕ್ಷ್ಮಿಯಿಂದ ಬದ್ಧನಾದ ವಿದ್ವಾಂಸನು ಕೂಡಾ ಮೋಹಿತನಾಗುವನೋ ಅಂತಹ ಐಶ್ವರ್ಯವಿದ್ದ ಕಾಲದಲ್ಲಿ ಪುರುಷನು ತತ್ವವನ್ನು ಯಥಾವತ್ತಾಗಿ ತಿಳಿಯಲಾರನು ; ಅದುಕಾರಣ ಭಕ್ತಾನುಗ್ರಾಹಕನಾದ ಸರ್ವಲೋಕಸಾಕ್ಷಿಯಾದ ಜಗದೀಶ್ವರನಾದ ನಾರಾಯಣನಿಗೋಸ್ಕರ ನಮಸ್ಕಾರವು” ಎಂದು ಅಂಜಲೀಬಂಧಂಗೈದು ನಮಸ್ಕರಿಸಿದನು.

ಅಷ್ಟರೊಳಗೆ ಪತಿವ್ರತೆಯಾದ ಬಲಿಚಕ್ರವರ್ತಿಗೆ ಪತ್ನಿಯಾದ ವಿಂಧ್ಯಾವಳಿಯು ಪಾಶಬದ್ಧನಾದ ಪತಿಯನ್ನು ನೋಡಿ ಭಯದಿಂದ ವ್ಯಾಕುಲಳಾಗಿ ನಮ್ರಮುಖಿಯಾಗಿ ಭಗವಂತನನ್ನು ಕುರಿತು “ಎಲೈ ಈಶ್ವರನೆ, ನಿನ್ನಿಂದ ಕ್ರೀಡಾರ್ಥವಾಗಿ ಸೃಷ್ಟಿಸಲ್ಪಟ್ಟ ಲೋಕತ್ರಯದಲ್ಲಿ ಕುಬುದ್ಧಿಯುಳ್ಳ ಅನ್ಯರು ಸ್ವಾಮಿತ್ವವನ್ನು ತಮ್ಮಲ್ಲಿ ತಿಳಿಯುತ್ತಾರೆ; ಲೋಕಗಳನ್ನು ಸೃಷ್ಟಿಸುವದರಲ್ಲಿಯೂ ಸಂಹರಿಸುವದರಲ್ಲಿಯೂ ಸಮರ್ಥನಾದ ನಿನಗೆ ಕೊಡುವದಕ್ಕೆ ಯಾರು ಸ್ವತಂತ್ರರು ; ತಾವೇ ಕರ್ತೃಗಳೆಂಬ ಸ್ವಾತಂತ್ರ್ಯಭ್ರಮೆಯು ನಿನ್ನಿಂದಲೇ ಕಲ್ಪಿತವಾದದ್ದೇ ಹೊರ್ತು ಮತ್ತೇನಿದೆ” ಎಂದು ಪ್ರಾರ್ಥಿಸಿದಳು.

ಆ ಬಳಿಕ ಬ್ರಹ್ಮದೇವನು ಭಗವಂತನನ್ನು ಕುರಿತು “ಎಲೈ ಭೂತಭಾವನನಾದ ಭೂತೇಶನಾದ ದೇವದೇವನಾದ ಜಗನ್ಮಯನಾದ ಭಗವಂತನೆ, ಸರ್ವಸ್ವವನ್ನು ನಿನಗೆ ಸಮರ್ಪಿಸಿದ ಬಲಿಚಕ್ರವರ್ತಿಯನ್ನು ಬಿಟ್ಟುಬಿಡು ; ಈತನು ನಿಗ್ರಹಕ್ಕೆ ಪಾತ್ರನಲ್ಲ; ಈ ಬಲಿಚಕ್ರವರ್ತಿಯಿಂದ ಸಮಸ್ತ ಭೂಮಿಯು ನಿನಗೆ ಕೊಡಲ್ಪಟ್ಟಿತು ; ಸತ್ಕರ್ಮಗಳಿಂದ ಸಂಪಾದಿತಗಳಾದ ಸಮಸ್ತ ಲೋಕಗಳು ಕೊಡಲ್ಪಟ್ಟವು ; ದೃಢಬುದ್ಧಿಯಿಂದ ಸರ್ವಸ್ವವನ್ನು ನಿನಗೆ ಒಪ್ಪಿಸಿ ತನ್ನ ಶರೀರವೂ ಕೂಡ ನಿನಗೆ ಒಪ್ಪಿಸಲ್ಪಟ್ಟಿತು ! ಎಲೈ ಹರಿಯೆ, ಲೋಕದಲ್ಲಿ ಬುದ್ಧಿಯುಳ್ಳ ಪುರುಷನು ನಿನ್ನ ಪಾದಗಳಲ್ಲಿ ಜಲವನ್ನು ಸಮರ್ಪಿಸಿ ಪೂಜೆಯನ್ನು ಮಾಡಿದ ಮಾತ್ರದಲ್ಲೇ ಉತ್ತಮಗತಿಯನ್ನೈದುತ್ತಾನೆ ; ದೃಢಬುದ್ಧಿಯಿಂದ ಲೋಕತ್ರಯವನ್ನೂ ನಿನಗೆ ಸಮರ್ಪಿಸಿದ ಈ ಮಹಾಪುರುಷನು ಹ್ಯಾಗೆ ಕಷ್ಟವನ್ನೈದುವನು ” ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಭಗವಂತನು “ಎಲೈ ಬ್ರಹ್ಮನೆ, ನಾನು ಯಾವ ಪುರುಷನನ್ನನುಗ್ರಹಿಸುತ್ತೇನೆಯೋ ಆ ಪುರುಷನ ಸರ್ವಸ್ವವನ್ನೂ ಅಪಹರಿಸುತ್ತೇನೆ ; ಧನಮದದಿಂದ ಸ್ತಬ್ಧನಾಗಿ ಪುರುಷನು ಲೋಕವನ್ನೂ ನನ್ನನ್ನೂ ಸಹಾ ಅವಮಾನವನ್ನು ಮಾಡುವನು ; ಲೋಕದಲ್ಲಿ ಜೀವಾತ್ಮನು ಸ್ವಕರ್ಮಗಳಿಂದ ಬದ್ಧನಾಗಿ ಅಸ್ವತಂತ್ರನಾಗಿ ಕ್ರಿಮಿಕೀಟಾದಿ ನಾನಾಯೋನಿಗಳಲ್ಲಿ ಹುಟ್ಟಿ ಬಹುಕಾಲಾನಂತರದಲ್ಲಿ ಮಾನುಷಜನ್ಮವನ್ನೈದುವನು ; ಈರೀತಿಯಲ್ಲಿ ಮಾನುಷಜನ್ಮದಲ್ಲಿ ಜನ್ಮವು ಕರ್ಮವು ವಯಸ್ಸು ಸೌಂದರ್ಯವು ವಿದ್ಯೆಯು ಐಶ್ವರ್ಯವು ಮುಂತಾದ ನಿಮಿತ್ತಗಳಿಂದ ಯಾವಾಗ ಮದವಿಲ್ಲದೆ ಇರುವುದೋ ಆಗ ನನಗೆ ಅವನಲ್ಲಿ ಅನುಗ್ರಹವುಂಟಾಗುವುದು ; ಪೂರ್ವೋಕ್ತಗಳಾದ ಮದನಿಮಿತ್ತಗಳಾದ ಜನ್ಮಕರ್ಮ ವಯಸ್ಸುಗಳು ಮೊದಲಾದ ವಿಷಯಗಳಿಂದ ಸ್ತಬ್ಧನಲ್ಲದೆ ನನ್ನಲ್ಲೇ ಚಿತ್ತವುಳ್ಳ ಮಹಾತ್ಮರ ಐಶ್ವರ್ಯವನ್ನು ನಾನು ಅಪಹರಿಸುವದಿಲ್ಲ ; ಮೂಢರಾದ ಯಾರು ಮತ್ತರಾಗುತ್ತಾರೆಯೋ ಅವರ ಸಂಪತ್ತು ಸಹ ಪರಿಹರಿಸಿ ಅನುಗ್ರಹವನ್ನು ಮಾಡುತ್ತೇನೆ ; ಈ ಬಲಿಚಕ್ರವರ್ತಿಯು ದೈತ್ಯದಾನವರಿಗ ಪ್ರಭುವಾದವನು ; ಕೀರ್ತಿವರ್ಧನನು ; ವ್ಯಸನಪಡುವವನಾದಾಗ್ಯೂ ಜಯಿಸಲಶಕ್ಯವಾದ ಮಾಯೆಯನ್ನು ಜಯಿಸುವನಾಗಿ ಮೋಹಪಡುವವನಾಗಲಿಲ್ಲ; ಮತ್ತು ಈ ಬಲಿಚಕ್ರವರ್ತಿಯು ಕ್ಷೀಣವಾದ ಐಶ್ವರ್ಯವುಳ್ಳವನಾಗಿ ಸ್ಥಾನಭ್ರಂಶವನ್ನೈದಿ ಧಿಕ್ಕೃತನಾಗಿ ಶಪಿಸಲ್ಪಟ್ಟವನಾಗಿಯೂ ಕೂಡ ಸತ್ಯವನ್ನು ಬಿಡಲಿಲ್ಲ ; ನನ್ನಿಂದ ಕಪಟಸ್ತುತಿಯಿಂದ ಕೃತ್ರಿಮಧರ್ಮಗಳನ್ನು ಉಪದೇಶಿಸಲ್ಪಟ್ಟವನಾದಾಗ್ಯೂ ಸನ್ಮಾರ್ಗವನ್ನು ಬಿಡಲಿಲ್ಲ ; ಅದುಕಾರಣ ದೇವತೆಗಳಿಗೂ ದುರ್ಲಭವಾದ ಉತ್ತಮ ಸ್ಥಾನವನ್ನು ನನ್ನಿಂದ ಪಡೆಯಿಸಲ್ಪಟ್ಟ ಈ ಮನ್ವಂತರವಾದಮೇಲೆ ಸೂರ್ಯಸಾವರ್ಣಿ ಮನ್ವಂತರದಲ್ಲಿ ದೇವೇಂ

ದ್ರನಾಗುತ್ತಾನೆ; ಇಂದ್ರಪದ ಲಾಭವಾಗುವ ಪರ್ಯಂತವೂ ವಿಶ್ವಕರ್ಮನಿರ್ಮಿತವಾದ ಸುತಲಸ್ಥಾನದಲ್ಲಿ ವಾಸವನ್ನು ಮಾಡಲಿ! ಆ ಸುತಲದಲ್ಲಿ ಮನೋವ್ಯಥೆಗಳು ರೋಗಾದಿಗಳು ಬಳಲಿಕೆಗಳು ಆಲಸ್ಯವು ಅವಮಾನವು ಕಾರ್ಯವಿಘ್ನಗಳು ಇವುಗಳು ನನ್ನ ಕಟಾಕ್ಷಪ್ರಸಾದದಿಂದ ಉಂಟಾಗುವದಿಲ್ಲ" ಎಂದು ಬ್ರಹ್ಮದೇವನನ್ನು ಕುರಿತು ನುಡಿದನು.

ಆ ಬಳಿಕ ಭಗವಂತನು ಕರುಣಾಶಾಲಿಯಾದಕಾರಣ ಬಲಿಚಕ್ರವರ್ತಿಯನ್ನು ಕುರಿತು "ಎಲೈ ಮಹಾರಾಜನಾದ ಬಲಿಚಕ್ರವರ್ತಿಯೆ, ನಿನಗೆ ಶುಭವುಂಟಾಗಲಿ; ಸ್ವಬಂಧುಗಳಿಂದ ಪರಿವಾರಿತನಾಗಿ ದೇವತೆಗಳಿಗೂ ಅಪೇಕ್ಷಿಸಲು ಯೋಗ್ಯವಾದ ಸುತಲವನ್ನು ಕುರಿತು ತೆರಳುವನಾಗು; ಅಲ್ಲಿ ವಾಸಂಗೈದಿರುವ ನಿನ್ನನ್ನು ಇಂದ್ರ, ವರುಣ ಮೊದಲಾದ ಲೋಕಾಧಿಪತಿಗಳು ಕೂಡಾ ಮಾತನಾಡಿಸಲಾರರು; ಮಿಗಿಲಾದವರು ಹೇಳತಕ್ಕದ್ದೇನು? ನಿನ್ನಾಜ್ಞೆಯನ್ನತಿಕ್ರಮಿಸುವ ದೈತ್ಯರನ್ನು ನನ್ನ ಚಕ್ರವು ಸಹ್ಮಾರಂಗೈಯುತಲಿದೆ; ಸಪರಿವಾರನಾದ ಧನಕನಕಾದಿ ಸಮಸ್ತವಸ್ತುಗಳಿಂದ ಯುಕ್ತನಾದ ನಿನ್ನನ್ನು ಸರ್ವಪ್ರಕಾರದಿಂದಲೂ ನಾನು ರಕ್ಷಿಸುತ್ತೇನೆ; ಆ ಸುತಲಸ್ಥಾನದಲ್ಲಿ ಸರ್ವಕಾಲದಲ್ಲಿಯೂ ನಿನ್ನ ಸಮೀಪದಲ್ಲೇ ನಾನು ಸನ್ನಿಹಿತನಾಗಿರುತ್ತೇನೆ; ಆ ಸ್ಥಳದಲ್ಲಿ ದಾನವ ದೈತ್ಯರ ಸಹವಾಸದಿಂದುಂಟಾದ ಅಸುರಭಾವವು ನಿನಗೆ ನನ್ನ ಪ್ರಭಾವದ ದೆಸೆಯಿಂದ ಹೋಗುತ್ತದೆ; ಸುಖದಿಂದಲ್ಲಿ ವಾಸಮಾಡು" ಎಂದು ನುಡಿದನು.

೨೩ನೇ ಅಧ್ಯಾಯ.

ಬಲಿಚಕ್ರವರ್ತಿಯು ಸುತಲಲೋಕವನ್ನೈದಲು ಇಂದ್ರನು ಉಪೇಂದ್ರನಾದ ಭಗವಂತನೊಡನೆ ಸ್ವರ್ಗವನ್ನೈದಿದ್ದು.

ಎಲೈ ಅರಸೆ, ಈಪ್ರಕಾರ ಮಾತನಾಡುತಲಿರುವ ಪುರಾಣಪುರುಷನಾದ ಭಗವಂತನನ್ನು ಕುರಿತು ಮಹಾನುಭಾವನಾದ ಸರ್ವಸಜ್ಜನಸಮ್ಮತನಾದ ಬಲಿಚಕ್ರವರ್ತಿಯು ಆನಂದಬಾಷ್ಪಪೂರಿತವಾದ ನೇತ್ರವುಳ್ಳವನಾಗಿ ಭಕ್ತಿಯಿಂದ ವಿವಶನಾಗಿ ಅಂಜಲೀ ಬಂಧಂಗೈದು ಗದ್ಗದ ವಾಕ್ಯದಿಂದ "ಎಲೈ ಭಗವಂತನೆ, ನಿನಗೆ ನಮಸ್ಕಾರವನ್ನು ಮಾಡಬೇಕೆಂಬ ಪ್ರಯತ್ನವು ಶರಣಾಗತರಾದ ಭಕ್ತರ ಇಷ್ಟಾರ್ಥಗಳನ್ನು ಕೊಡುವದರಲ್ಲಿ ಸಿದ್ಧಸಂಕಲ್ಪವುಳ್ಳದ್ದು; ಇದು ಆಶ್ಚರ್ಯವು; ಯಾವ ನಮಸ್ಕಾರಪ್ರಯತ್ನಮಾತ್ರದಿಂದಲೇ ಮಹಾತ್ಮರಾದ ಲೋಕಪಾಲಕರಿಂದಲೂ ಪೂರ್ವದಲ್ಲಿ ಪಡೆಯದಿರುವ ನಿನ್ನ ಅನುಗ್ರಹವು ನೀಚನಾದ ಅಸುರನಾದ ನನ್ನಲ್ಲಿ ಅರ್ಪಿಸಲ್ಪಟ್ಟಿತೋ ಅಂತಹ ನಮಸ್ಕಾರಪ್ರಯತ್ನದ ಮಹಿಮೆ ಎಂಥಾದ್ದೋ; ಅಂತಹ ನಮಸ್ಕಾರವೇ ಮಾಡಲ್ಪಟ್ಟರೆ ಅದರ ಮಾಹಾತ್ಮ್ಯವೆಂಥಾದ್ದೋ" ಎಂದು ಭಗವಂತನನ್ನು ಕುರಿತು ನುಡಿದು ವರುಣಪಾಶ ಬಂಧದಿಂದ ಮುಕ್ತನಾಗಿ ಭಗವಂತನಿಗೂ ಬ್ರಹ್ಮನಿಗೂ ಪರಮೇಶ್ವರನಿಗೂ ನಮಸ್ಕರಿಸಿ ಸಪರಿವಾರನಾಗಿ ಸುತಲವನ್ನು ಪ್ರವೇಶಿಸಿದನು! ಈರೀತಿಯಲ್ಲಿ ಭಗವಂತನು ಇಂದ್ರನಿಗೆ ಸ್ವರ್ಗರಾಜ್ಯವನ್ನು ಸಾಧಿಸಿಕೊಟ್ಟು ಅದಿತಿದೇವಿಯ ಮನೋರಥವನ್ನು ಪೂರಣಂಗೈದು ಉಪೇಂದ್ರನಾಗಿ ಲೋಕತ್ರಯವನ್ನು ಸಂರಕ್ಷಿಸಿದನು; ಅನಂತರದಲ್ಲಿ ಭಗವಂತನ ಅನುಗ್ರಹಕ್ಕೆ ಪಾತ್ರನಾಗಿ ಬಂಧಮುಕ್ತನಾಗಿ ವಂಶೋದ್ಧಾರಕನಾದ ಮೊಮ್ಮಗನಾದ ಬಲಿಚಕ್ರವರ್ತಿಯನ್ನು ನೋಡಿ ಪ್ರಹ್ಲಾದನು ಹರಿಭಕ್ತಿಯಿಂದ ನಮ್ರನಾಗಿ ಬಲಿಚಕ್ರವರ್ತಿಯನ್ನು ಕುರಿತು "ಎಲೈ ಬಾಲಕನಾದ ಬಲಿಚಕ್ರವರ್ತಿಯೆ, ಇಂತಹ ಭಗವದನುಗ್ರಹವನ್ನು ಬ್ರಹ್ಮನೂ ಪಡೆಯಲಿಲ್ಲ; ಲಕ್ಷ್ಮಿಯೂ ಪಡೆಯಲಿಲ್ಲ; ಪರಮೇಶ್ವರನೂ ಪಡೆಯಲಿಲ್ಲ; ಮಿಗಿಲಾದವರು ಹೇಳತಕ್ಕದ್ದೇನು! ಸರ್ವರಿಂದಲೂ ನಮಸ್ಕಾರಯೋಗ್ಯರಾದ ಮಹಾಪುರುಷರಿಂದಲೂ ನಮಸ್ಕರಿಸಲ್ಪಟ್ಟ ಪಾದವುಳ್ಳವನಾಗಿ ನೀನು ಸಮಸ್ತರಾದ ಅಸುರರಿಗೂ ನಾಥನಾಗಿ ದುರ್ಗಾಧಿಪತಿಯಾದೆಯೋ ಅಂತಹ ಭಗವದನುಗ್ರಹಕ್ಕೆ ನೀನು ಪಾತ್ರನಾದೆಯೆಂದು ನುಡಿದು ಆ ಮೇಲೆ ಭಗವಂತನನ್ನು ಕುರಿತು "ಎಲೈ ಆಶ್ರಯಪ್ರದನಾದ ಭಗವಂತನೆ, ಯಾವ ನಿನ್ನ ಪಾದಪದ್ಮ ಮಕರಂದವನ್ನು

ಸೇವಿಸುವುದರಿಂದ ಬ್ರಹ್ಮಾದಿಗಳು ಮಹಾ ವಿಭೂತಿಯನ್ನನುಭವಿಸುತ್ತಾರೆಯೋ ದುರ್ವೃತ್ತರಾಗಿ ದುರ್ಜನರಾದ ಅಸುರರಾದ ನಾವು ಅಂತಹ ನಿನ್ನ ದಾಕ್ಷಿಣ್ಯದೃಷ್ಟಿಗೆ ಪಾತ್ರರಾದೆವು ! ಎಲೈ ಶ್ರೀಹರಿಯೆ, ಅಮಿತವಾದ ಯೋಗಮಾಯೆಯಿಂದ ಸೃಜಿಸಿ ರಕ್ಷಿಸಲ್ಪಟ್ಟ ಭುವನವುಳ್ಳ ಸರ್ವಜ್ಞನಾದ ಸರ್ವಾಂತರ್ಯಾಮಿಯಾದ ಸಮದೃಷ್ಟಿಯುಳ್ಳ ನಿನ್ನ ಸಂಕಲ್ಪವು ಆಶ್ಚರ್ಯಕರವಾದದ್ದು; ನೀನು ಭಕ್ತಪ್ರಿಯನಾಗಿ ಕಲ್ಪವೃಕ್ಷನಾದುದರಿಂದ ನಿನ್ನ ಸ್ವಭಾವವು ವಿಷಮವಲ್ಲ ” ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಭಗವಂತನು “ಎಲೈ ಬಾಲಕನಾದ ಪ್ರಹ್ಲಾದನೆ, ನಿನಗೆ ಶುಭವಾಗಲಿ ; ಮೊಮ್ಮಗನಾದ ಬಲಿಚಕ್ರವರ್ತಿಯೊಡಗೂಡಿ ಸುತಲವನ್ನು ಕುರಿತು ತೆರಳು ; ಮಕ್ಕಳನ್ನು ಸುಖಪಡಿಸಿಕೊಂಡು ಸಂತೋಷದಿಂದಲ್ಲಿ ವಾಸವಂಮಾಡು ; ಆ ಸುತಲದಲ್ಲಿ ಗದಾಪಾಣಿಯಾಗಿ ಸಾನ್ನಿಧ್ಯವನ್ನೈದಿರುವ ನನ್ನನ್ನು ನಿತ್ಯದಲ್ಲಿಯೂ ಕಾಣುತ್ತೀಯೆ ; ನನ್ನ ದರ್ಶನದಿಂದ ನಷ್ಟವಾದ ಅಜ್ಞಾನಕರ್ಮಬಂಧವುಳ್ಳವನಾಗಿ ಸುಖದಿಂದಿರುವನಾಗು ” ಅಂದನು.

ಆ ಭಗವದ್ವಾಕ್ಯವನ್ನು ಕೇಳಿ ಶಿರಸಾವಹಿಸಿ ನಿರ್ಮಲಜ್ಞಾನಿಯಾದ ಪ್ರಹ್ಲಾದನು ಬಲಿಚಕ್ರವರ್ತಿಯೊಡನೆ ಕೃತಾಂಜಲಿಯಾಗಿ ಪುರಾಣಪುರುಷನನ್ನು ಪ್ರದಕ್ಷಿಣಂಗೈದು ನಮಸ್ಕರಿಸಿ ಸಮಸ್ತವಾದ ಅಸುರಸೇನೆಗೂ ನಾಥನಾಗಿ ಭಗವಂತನಿಂದ ಅನುಜ್ಞಾತನಾಗಿ ಸುತಲವನ್ನು ಪ್ರವೇಶಿಸಿದನು !

ಅನಂತರದಲ್ಲಿ ಶ್ರೀಹರಿಯು ಬ್ರಹ್ಮವಾದಿಗಳಾದ ಋತ್ವಿಕ್ಕುಗಳ ಸಭೆಯಲ್ಲಿ ಕುಳಿತಿರುವ ಶುಕ್ರಾಚಾರ್ಯನನ್ನು ಕುರಿತು “ಎಲೈ ಬ್ರಾಹ್ಮಣೋತ್ತಮನಾದ ಶುಕ್ರಾಚಾರ್ಯನೆ, ಅಶ್ವಮೇಧಯಾಗವನ್ನು ಮಾಡುತಲಿರುವ ಬಲಿಚಕ್ರವರ್ತಿಯ ಯಜ್ಞದಲ್ಲಿ ನ್ಯೂನಾತಿರಿಕ್ತವನ್ನೆಲ್ಲ ಸಾಂಗವನ್ನು ಮಾಡು ” ಎಂದು ನುಡಿದನು.

ಬ್ರಾಹ್ಮಣರಿಂದಂಗೀಕೃತವಾದದ್ದೇ ಸಾಂಗವು ಎಂಬ ಭಗವದ್ವಾಕ್ಯವನ್ನು ಕೇಳಿ ಶುಕ್ರಾಚಾರ್ಯನು “ಎಲೈ ಶ್ರೀಹರಿಯೇ, ಕರ್ಮದಲ್ಲಿ ವೈಷಮ್ಯವು ಹ್ಯಾಗೆ ಬಂದೀತು ; ಸಮಸ್ತ ಕರ್ಮಗಳಿಗೂ ಈಶ್ವರನಾದ ಯಜ್ಞೇಶನಾದ ಯಜ್ಞಪುರುಷನಾದ ನೀನು ಸರ್ವಭಾವದಿಂದಲೂ ಪೂಜಿತನಾದಮೇಲೆ ನ್ಯೂನಾತಿರಿಕ್ತವು ಹ್ಯಾಗೆ ಬಂದೀತು; ಮಂತ್ರಗಳಲ್ಲಿ ತಂತ್ರಗಳಲ್ಲಿ ದೇಶಕಾಲಗಳಲ್ಲಿ ಪದಾರ್ಥಗಳಲ್ಲಿ ಯಾವದರಲ್ಲಿ ಸ್ಖಾಲಿತ್ಯಬಂದಾಗ್ಯೂ ನಿನ್ನ ನಾಮಕೀರ್ತನವೇ ಸರ್ವಕ್ಕೂ ಪ್ರಾಯಶ್ಚಿತ್ತರೂಪವಾದದ್ದು ! ಎಲೈ ಪರಮಾತ್ಮನೇ, ಆದಾಗ್ಯೂ ನಿನ್ನ ಆಜ್ಞಾನುಸಾರವಾಗಿ ಹಾಗೇ ಮಾಡುತ್ತೇನೆ ; ನಿನ್ನ ಆಜ್ಞಾಪರಿಪಾಲನವೇ ನಮಗೆ ಶ್ರೇಯಸ್ಕರವಾದದ್ದು” ಎಂದು ನುಡಿದನು.

ಎಲೈ ಅರಸೇ, ಈಪ್ರಕಾರ ಶುಕ್ರಾಚಾರ್ಯನು ಭಗವಂತನ ವಾಕ್ಯವನ್ನಭಿನಂದಿಸಿ ಆದೇಶಪ್ರಕಾರಕ್ಕೆ ಋತ್ವಿಕ್ಕುಗಳಿಂದೊಡಗೂಡಿ ಕರ್ಮಸ್ಖಾಲಿತ್ಯಗಳೆಲ್ಲವನ್ನೂ ಪ್ರಾಯಶ್ಚಿತ್ತಾದಿಗಳಿಂದ ಸಾಂಗವನ್ನು ಮಾಡಿದನು ; ಭಗವಂತನು ಈಪ್ರಕಾರವಾಗಿ ಬಲಿಚಕ್ರವರ್ತಿಯ ಬಳಿಯಿಂದ ಭೂಮಿಯನ್ನು ಯಾಚನಾರೂಪದಿಂದ ಸಂಪಾದಿಸಿ ಅಣ್ಣನಾದ ದೇವೇಂದ್ರನಿಗೋಸುಗ ಶತ್ರುಗಳಿಂದಪಹೃತವಾದ ಸ್ವರ್ಗವನ್ನು ಕೊಟ್ಟನು ; ಅನಂತರದಲ್ಲಿ ಸಮಪ್ರಜೇಶರಿಗೂ ನಾಥನಾದ ಬ್ರಹ್ಮನು ದೇವತೆಗಳಿಂದಲೂ ಪಿತೃಗಳಿಂದಲೂ ಋಷಿಗಳಿಂದಲೂ ಅರಸುಗಳಿಂದಲೂ ಪರಮೇಶ್ವರನಿಂದಲೂ ಸಮೇತನಾಗಿ ಕಶ್ಯಪನಿಗೂ ಅದಿತಿಗೂ ಪ್ರೀತ್ಯರ್ಥವಾಗಿ ಸರ್ವಪ್ರಾಣಿಗಳ ಕ್ಷೇಮಕ್ಕೋಸುಗ ಲೋಕಗಳಿಗೂ ಲೋಕಪಾಲಕರಿಗೂ ವಾಮನನನ್ನಧಿಪತಿಯನ್ನಾಗಿಮಾಡಿ ವೇದಗಳಿಗೂ ಸರ್ವದೇವತೆಗಳಿಗೂ ಧರ್ಮಕ್ಕೂ ಯಶಸ್ಸಿಗೂ ಸಂಪತ್ತುಗಳಿಗೂ ಶುಭಗಳಿಗೂ ಸ್ವರ್ಗಾಪವರ್ಗಗಳಿಗೂ ಪರಿಪಾಲಕನಾದ ವಾಮನನನ್ನು ನಿಯಾಮಕನನ್ನಾಗಿ ಮಾಡಿದನು ; ಆಗ ಸರ್ವಭೂತಗಳು ಸಂತೋಷಪಟ್ಟವು; ಅನಂತರದಲ್ಲಿ ಇಂದ್ರನು ವಾಮನಮೂರ್ತಿಯನ್ನು ವಿಮಾನವನ್ನೇರಿಸಿ ಪುರಸ್ಕರಿಸಿಕೊಂಡು ಬ್ರಹ್ಮನಿಂದಲೂ ಈಶ್ವರನಿಂದಲೂ ಅನುಮೋದಿತನಾಗಿ ಲೋಕಪಾಲಕರೊಡನೆ ಸ್ವರ್ಗಕ್ಕೆ ಕರದುಕೊಂಡು ಹೋಗಿ ಉಪೇಂದ್ರನಿಂದ ಪರಿಪಾಲಿಸಲ್ಪಟ್ಟ ಸ್ವರ್ಗರಾಜ್ಯವನ್ನೈದಿ ಪರಮೈಶ್ವರ್ಯಸಂಪನ್ನನಾಗಿ ನಿರ್ಭಯನಾಗಿ ಸಂತೋಷಪಟ್ಟನು ; ಬ್ರಹ್ಮನು ಪರಮೇಶ್ವರನು ಸನತ್ಕುಮಾರನು ಭೃಗು ಮೊದಲಾದ ಮುನಿಗಳು ಪಿತೃಗಳು ಸರ್ವಭೂತಗಳು ದೇವತೆಗಳು ಭಗವಂತನ ಮಹತ್ತಾದ ಕರ್ಮವನ್ನು ಗಾನಂ

ಗೈಯ್ಯುವವರಾಗಿ ತಮ್ಮ ತಮ್ಮ ಸ್ಥಾನವನ್ನೈದಿ ಅದಿತಿಯಂ ಪ್ರಶಂಸೆಯನ್ನು ಮಾಡಿದರು! ಎಲೈ ಅರಸೇ, ಭಗವಂತನ ಚರಿತ್ರವು ಶ್ರೋತೃಗಳಿಗೆ ಪಾಪಪರಿಹಾರಕವಾದದ್ದು; ನಿನಿಗೋಸ್ಕರ ಎಲ್ಲವೂ ಹೇಳಲ್ಪಟ್ಟಿತು; ತ್ರಿವಿಕ್ರಮನಾದ ಭಗವಂತನ ಮಹಿಮೆಯ ಪಾರವನ್ನು ವರ್ಣಿಸುವನು ಭೂಮಿಯಲ್ಲಿರುವ ಧೂಳಿಗಳನ್ನು ಸಹಾ ಎಣಿಸ್ಯಾನು; ಈ ಅರ್ಥವನ್ನು ಸಾಕ್ಷಾದ್ವೇದಂಗಳೇ ಪೇಳುತಲಿವೆ; ದೇವದೇವನಾದ ಆಶ್ಚರ್ಯಂಗಳಾದ ಕರ್ಮಗಳುಳ್ಳ ಶ್ರೀಹರಿಯ ಅವತಾರಚರಿತ್ರೆಯನ್ನು ಪೇಳುವ ಪುರುಷನು ಪರಮಗತಿಯನ್ನೈದುವನು! ದೇವತೋದ್ದೇಶ್ಯವಾಗಿ ಪಿತೃವುದ್ದೇಶ್ಯವಾಗಿ ಹವ್ಯಕವ್ಯಾದಿ ಕರ್ಮಗಳನ್ನಾಚರಿಸುವ ಕಾಲದಲ್ಲಿ ಈ ಭಗವಂತನ ಚರಿತ್ರನನ್ನು ಪಠನಂಗೈದರೆ ಶ್ರೇಯಸ್ಸುಗಳುಂಟಾಗುವವು" ಎಂದು ನುಡಿದನು.

೨೪ನೇ ಅಧ್ಯಾಯ.

ಭಗವಂತನು ವೇದೋದ್ಧಾರಾರ್ಥವಾಗಿ ಮತ್ಸ್ಯಾವತಾರವನ್ನು ಧರಿಸಿ ಹಯಗ್ರೀವಾಸುರನನ್ನು ಸಂಹರಿಸಿ ವೇದವನ್ನುದ್ಧರಿಸಿದ್ದು.

ಅನಂತರದಲ್ಲಿ ಪರೀಕ್ಷಿದ್ರಾಯನು "ಎಲೈ ಪೂಜ್ಯನಾದ ಶುಕಮುನಿಯೆ, ಆಶ್ಚರ್ಯಕರ್ಮಗಳುಳ್ಳ ಶ್ರೀಹರಿಯ ಪ್ರಥಮವಾದ ಮತ್ಸ್ಯಾವತಾರದ ಕಥೆಯನ್ನು ಕೇಳಲಿಚ್ಛೈಸುತ್ತೇನೆ; ಈಶ್ವರನಾದಾಗ್ಯೂ ಕರ್ಮಬದ್ಧನಂತೆ ಲೋಕದಲ್ಲಿ ಜಿಗುಪ್ಸಿತವಾದ ತಮೋಗುಣಪ್ರಕೃತಿಯಾದ ಸಹಿಸಲಶಕ್ಯವಾದ ಮತ್ಸ್ಯದೇಹವು ಏನುಕಾರಣ ಧರಿಸಲ್ಪಟ್ಟಿತು; ಉತ್ತಮಕೀರ್ತಿಯುಳ್ಳ ಭಗವಂತನ ಚರಿತ್ರವು ಸರ್ವಲೋಕಗಳಿಗೂ ಸುಖಕರವಾದಕಾರಣ ಈ ಚರಿತ್ರವನ್ನೆಲ್ಲಾ ಯಥಾವತ್ತಾಗಿ ನನಿಗೋಸ್ಕರ ನಿರೂಪಿಸು" ಎಂದು ಪ್ರಶ್ನೆಗೈದನು.

ಆ ಬಳಿಕ ಪೂಜ್ಯನಾದ ಶುಕಮುನಿಯು ಪರೀಕ್ಷಿದ್ರಾಯನನ್ನು ಕುರಿತು "ಎಲೈ ಅರಸೆ, ಈಶ್ವರನಾದ ವಿಷ್ಣುವು ಗೋವುಗಳು ಬ್ರಾಹ್ಮಣರು ದೇವತೆಗಳು ಸತ್ಪುರುಷರು ವೇದಗಳು ಧರ್ಮಾರ್ಥಕಾಮಗಳು ಇವುಗಳ ಸಂರಕ್ಷಣಾರ್ಥವಾಗಿ ನಾನಾರೂಪಗಳಾಗಿ ಅವತಾರಗಳನ್ನು ಗೈಯ್ಯುತ್ತಾನೆ; ಪ್ರಕೃತಿಗುಣಗಳಿಂದ ನಾನಾವಿಧಗಳಾದ ಪ್ರಾಣಿಗಳಲ್ಲಿ ವಾಯುವಿನಂತೆ ಸಂಚರಿಸುವನಾದಾಗ್ಯೂ ಪರಮಾತ್ಮನು ತಾನು ನಾನಾವಿಧ ಭೇದಗಳನ್ನು ಧರಿಸುವದಿಲ್ಲ; ನಿರ್ಗುಣನಾದಕಾರಣ ಶುದ್ಧನಾಗಿರುವನು; ಪೂರ್ವಕಲ್ಪದ ಅವಸಾನದಲ್ಲಿ ಬ್ರಹ್ಮನಿಗೆ ರಾತ್ರಿರೂಪವಾದ ಪ್ರಳಯವುಂಟಾಯಿತು; ಭೂಲೋಕ ಮೊದಲಾಗಿ ಮೂರುಲೋಕಗಳು ಸಮುದ್ರೋದಕಗಳಿಂದ ಮುಳಿಗಿದವು; ಅನಂತರದಲ್ಲಿ ನಿದ್ರಾವಸಾನದಲ್ಲಿ ಬ್ರಹ್ಮನ ಮುಖಗಳಿಂದ ಹೊರಟುಬರುವ ವೇದಗಳನ್ನು ಹಯಗ್ರೀವನಾಮಕನಾದ ಬಲಿಷ್ಠನಾದ ಅಸುರನು ಅಪಹರಿಸಿದನು; ಭಗವಂತನಾದ ಶ್ರೀಹರಿಯು ಆ ಅಸುರನ ವ್ಯಾಪಾರವನ್ನು ತಿಳಿದು ಮತ್ಸ್ಯರೂಪವನ್ನು ಧರಿಸಿದನು; ಆ ಕಾಲದಲ್ಲಿ ನಾರಾಯಣಭಕ್ತನಾದ ತಪಸ್ವಿಯಾದ ಮಹಾತ್ಮನಾದ ಸತ್ಯವ್ರತನಾಮಕನಾದ ಒಬ್ಬ ರಾಜರ್ಷಿಯು ಉದಕಮಧ್ಯದಲ್ಲಿದ್ದುಕೊಂಡು ತಪವಂಗೈದನು; ಸತ್ಯವ್ರತನೆಂಬ ಆ ರಾಜರ್ಷಿಯೇ ವಿವಸ್ವತನೆಂಬ ಸೂರ್ಯನಿಗೆ ಪುತ್ರನಾಗಿ ಶ್ರಾದ್ಧದೇವನೆಂಬ ನಾಮಧೇಯದಿಂದ ಪ್ರಸಿದ್ಧನಾಗಿ ಭಗವಂತನಿಂದ ವೈವಸ್ವತಮನುವಾಗಿ ಮಾಡಲ್ಪಟ್ಟನು; ಆ ಸತ್ಯವ್ರತನು ಒಂದು ಸಮಯದಲ್ಲಿ ಕೃತಮಾಲಾಯೆಂಬ ನದಿಯಲ್ಲಿ ಜಲತರ್ಪಣವನ್ನು ಮಾಡುತಲಿರುವಾಗ ಬೊಗಸೆಯಿಂದ ಜಲವನ್ನು ತೆಗೆಯುವಾಗ ಒಂದು ಚಿಕ್ಕಮತ್ಸ್ಯವು ಬೊಗಸೆಯೊಳಕ್ಕೆ ಬಂತು; ದ್ರವಿಡದೇಶಪತಿಯಾದ ಆ ಸತ್ಯವ್ರತನು ಉದಕದೊಡನೆ ಆ ಮತ್ಸ್ಯವನ್ನು ನದೀಜಲದಲ್ಲಿ ಬಿಟ್ಟನು; ಆ ಮತ್ಸ್ಯವು ಮಹಾದಯಾಶಾಲಿಯಾದ ಆ ಅರಸನನ್ನು ಕುರಿತು ದೈನ್ಯದಿಂದ 'ಎಲೈ ದೀನವತ್ಸಲನಾದ ಮಹಾದಯಾಶಾಲಿಯಾದ ಅರಸೆ, ಸ್ವಜಾತಿ ಜಂತುಗಳನ್ನೇ ಬಾಧಿಸುವ ಜಲಜಂತುಗಳದೆಶೆಯಿಂದ ಭೀತನಾಗಿ ದೀನನಾದ ನನ್ನನ್ನು ಹ್ಯಾಗೆ ನದಿಯಲ್ಲಿ ಬಿಡುತ್ತೀಯೆ' ಎಂದು ನುಡಿಯಿತು. ಆ ವಾಕ್ಯವನ್ನು ಕೇಳಿ ಸತ್ಯವ್ರತನು ತನ್ನನ್ನು ಅನುಗ್ರಹಿಸುವದಕ್ಕೋಸ್ಕರ ಪ್ರೀತಿ

ಯಿಂದ ಮತ್ಸ್ಯರೂಪದಿಂದ ಬಂದಿರುವ ಭಗವಂತನನ್ನರಿಯದೆ ಸಾಧಾರಣ ಮತ್ಸ್ಯವನ್ನಾಗಿ ತಿಳಿದು ಅದನ್ನು ರಕ್ಷಿಸು ವುದಕ್ಕೋಸ್ಕರ ಮನಸ್ಸನ್ನು ಮಾಡಿ ಕುಂಭದಲ್ಲಿ ಜಲವನ್ನು ತುಂಬಿ ಅದರಲ್ಲಿ ಆ ಮತ್ಸ್ಯವನ್ನಿರಿಸಿಕೊಂಡು ತನ್ನ ಆಶ್ರ ಮಕ್ಕೆ ಬಂದನು ; ಆ ಮತ್ಸ್ಯವು ಒಂದು ರಾತ್ರಿಗೆ ದೇಹವನ್ನು ಬೆಳಸಿ ಆ ಕುಂಭದಲ್ಲಿ ಸ್ಥಳಸಾಲದೆ ಅರಸನನ್ನು ಕುರಿ ತು 'ಎಲೈ ಅರಸೆ, ಈ ಕುಂಭದಲ್ಲಿ ನನಗೆ ಸ್ಥಳಸಾಲದು; ಇಲ್ಲಿರುವುದಕ್ಕೆ ಪ್ರಯಾಸವಾಗಿದೆ ; ವಿಸ್ತಾರವಾದ ಸ್ಥಳ ವನ್ನು ಕಲ್ಪಿಸಿಕೊಟ್ಟರೆ ಅಲ್ಲಿ ಸುಖದಿಂದಿದ್ದೇನು' ಎಂದು ನುಡಿಯಿತು. ಆ ವಾಕ್ಯವನ್ನು ಕೇಳಿ ಅರಸು ದೊಡ್ಡ ಗುಡಾಣವಲ್ಲಿ ನೀರನ್ನು ತುಂಬಿ ಅದರಲ್ಲಿರಿಸಿದನು ; ಅದರಲ್ಲಿ ಒಂದು ಮುಹೂರ್ತಮಾತ್ರದಲ್ಲಿ ಮೂರುಮೊಳ ಪ್ರಮಾ ಣ ದೇಹವುಳ್ಳದ್ದಾಯಿತು ; ಪುನಹ ಆ ಮತ್ಸ್ಯವು ನನಗೆ ಈ ಗುಡಾಣ ಸಾಲದು ; ನನ್ನ ದೇಹವು ಸ್ಥೂಲವಾಗುತ್ತ ದೆ; ಅದಕ್ಕೆ ತಕ್ಕ ಸ್ಥಳವನ್ನು ಮಾಡಿಕೊಡು ; ನಿನ್ನನ್ನೇ ನಂಬಿದ್ದೇನೆಂದು ನುಡಿಯಿತು. ಆ ಮಾತನ್ನು ಕೇಳಿ ಅರಸು ಒಂದು ಸರೋವರದಲ್ಲಿ ಆ ಮತ್ಸ್ಯವನ್ನಿರಿಸಲಾಗಿ ಆ ಸರೋವರದಲ್ಲಿ ತುಂಬಾ ಆ ಮತ್ಸ್ಯವೇ ವ್ಯಾಪಿಸಿ ಕೊಂಡು ಮಹತ್ತಾದ ದೇಹವುಳ್ಳದ್ದಾಯಿತು ; ಅನಂತರದಲ್ಲಿ ಆ ಮತ್ಸ್ಯವು 'ಎಲೈ ಅರಸೆ, ಈ ಸ್ಥಳವು ನನಗೆ ಸಾ ಲದು ; ನನ್ನ ರಕ್ಷಣಾರ್ಥವಾಗಿ ಅಶೋಷ್ಯವಾದ ಮಡುವಿನಲ್ಲಿ ನನ್ನನ್ನಿರಿಸು' ಎಂದು ಹೇಳಲಾಗಿ ಅರಸು ಆ ಮತ್ಸ್ಯವನ್ನು ವಿಸ್ತಾರಗಳಾದ ಮಡುವುಗಳಲ್ಲಿ ಇರಿಸಲಾಗಿ ಎಷ್ಟು ದೊಡ್ಡ ಮಡುವುಗಳಲ್ಲಿರಿಸಿದಾಗ್ಯೂ ಬೆಳದು ಯಾವ ಮಡುವೂ ಸಾಲದೇ ಹೋದುದರಿಂದ ಸಮುದ್ರದಲ್ಲಿ ಆ ಮತ್ಸ್ಯವನ್ನು ಬಿಟ್ಟನು ; ಬಿಡುವಾಗ 'ಎಲೈ ಅರಸೆ, ಈ ಸಮುದ್ರದಲ್ಲಿ ಮಹಾ ಬಲಿಷ್ಠಗಳಾದ ಮಕರಾದಿಗಳು ನನ್ನನ್ನು ಭಕ್ಷಿಸಿಬಿಡುತ್ತವೆ ; ನನ್ನನ್ನು ಈ ಸಮು ದ್ರದಲ್ಲಿ ಬಿಡಬೇಡ' ಎಂಬದಾಗಿ ಮನೋಹರವಾದ ಮಾತುಗಳನ್ನಾಡುತಲಿರುವ ಆ ಮತ್ಸ್ಯದಿಂದ ಮೋಹಿತನಾದ ಅರಸು ಆ ಮತ್ಸ್ಯವನ್ನು ಕುರಿತು 'ಎಲೈ ಮತ್ಸ್ಯವೆ, ನೀನು ಭಗವಂತನು ; ಮತ್ಸ್ಯರೂಪದಿಂದ ನನ್ನನ್ನು ಮೋ ಹಪಡಿಸುವನಾಗಿ ಬಂದಿದ್ದೀಯೆ ; ಇಂಥಾ ಮಹಿಮೆಯುಳ್ಳ ಮತ್ಸ್ಯವನ್ನು ನಾವು ಎಲ್ಲಿಯೂ ಕಾಣಲೂ ಇಲ್ಲ ; ಕೇಳಲೂ ಇಲ್ಲ ; ಯಾವ ನೀನು ಒಂದು ದಿವಸಕ್ಕೆ ನೂರುಯೋಜನ ಪ್ರಮಾಣ ದೇಹದಿಂದ ಸರೋವರವನ್ನು ವ್ಯಾಪಿಸಿದೆಯೋ ಆ ನೀನು ಸಾಕ್ಷಾತ್ ನಾರಾಯಣನಾದ ಅವ್ಯಯನಾದ ಭಗವಂತನಾದ ಶ್ರೀಹರಿಯು ; ಸಂಶಯವಿಲ್ಲ ; ಲೋಕಾನುಗ್ರಹಾರ್ಥವಾಗಿ ಮತ್ಸ್ಯರೂಪವನ್ನು ಧರಿಸಿದ್ದೀಯೆ ; ಪುರುಷೋತ್ತಮನಾದ ಜಗತ್ತಿನ ಸೃಷ್ಟಿ ಸ್ಥಿತಿ ಲಯಗಳಿಗೆ ಅಧಿಪತಿಯಾದ ನಿನಗೆ ನಮಸ್ಕಾರವು ! ಶರಣಾಗತರಾದ ಭಕ್ತರಾದ ನಮಗೆ ಅಂತರಾತ್ಮನಾಗಿ ಮುಖ್ಯ ನಾದ ರಕ್ಷಕನು ನೀನೇ ಸರಿ ! ಎಲೈ ಭಗವಂತನೆ, ನಿನ್ನ ಸಮಸ್ತಗಳಾದ ಅವತಾರಗಳು ಲೋಕಗಳ ಶ್ರೇಯಸ್ಸು ಗಳಿಗೆ ಕಾರಣಗಳಾದಂಥಾವು ; ಈ ಮತ್ಸ್ಯರೂಪವನ್ನು ಯಾವನಿಮಿತ್ತವಾಗಿ ಧರಿಸಿದೆಯೋ ಆ ಅರ್ಥವನ್ನು ತಿಳಿಯ ಲಿಚ್ಛೈಸುತ್ತೇನೆ ! ಎಲೈ ಪದ್ಮಲೋಚನನಾದ ಭಗವಂತನೆ, ದೇಹಾಭಿಮಾನಿಗಳಾದ ಇತರರಾದ ಪುರುಷರ ಪಾದಾ ನುಸರಣವು ವ್ಯರ್ಥವಾದಂತೆ ನಿನ್ನ ಪಾದಗಳ ಅನುಸರಣವು ವ್ಯರ್ಥವಾಗುವುದಿಲ್ಲ ; ಆಶ್ಚರ್ಯಕರವಾದ ಇಂಥಾ ಮತ್ಸ್ಯರೂಪದಿಂದ ನಮಗೆ ಪ್ರಸನ್ನನಾದೆಯಾದುದರಿಂದ ನಿನ್ನ ಅನುಸರಣವು ಸಫಲವೇ ಸರಿ' ಅಂದನು.

ಈರೀತಿ ಮಾತನಾಡುತಲಿರುವ ಸತ್ಯವ್ರತರಾಯನನ್ನು ಕುರಿತು ಭಕ್ತಪ್ರಿಯನಾದ ಜಗತ್ಪತಿಯಾದ ಭಗವಂ ತನು ಕಲ್ಪಾಂತಸಮುದ್ರೋದಕದಲ್ಲಿ ಮತ್ಸ್ಯರೂಪದಿಂದ ವಿಹರಿಸಲಿಚ್ಛೆಯುಳ್ಳವನಾಗಿ ಸತ್ಯವ್ರತರಾಯನನ್ನು ಕುರಿತು "ಎಲೈ ಅರಸೆ, ಈ ದಿವಸಕ್ಕೆ ಏಳನೇ ದಿವಸದಲ್ಲಿ ಉಕ್ಕಿ ಬಂದ ಸಮುದ್ರದಲ್ಲಿ ಭೂಲೋಕ ಮೊದಲಾದ ಮೂರು ಲೋಕಗಳೂ ಮುಳುಗುತಲಿವೆ ; ಪ್ರಳಯಸಮುದ್ರದಲ್ಲಿ ಮೂರು ಲೋಕಗಳು ಮುಳುಗುತಲಿರಲಾಗಿ ನನ್ನಿಂದ ಕಳುಹಿಸಲ್ಪಟ್ಟ ವಿಶಾಲವಾದ ನಾವೆಯು ನಿನ್ನ ಸಮೀಪಕ್ಕೆ ಬರುತಲಿದೆ ; ಆಗ ನೀನು ಸಮಸ್ತವಾದ ಓಷಧಿಗಳನ್ನೂ ನಾನಾವಿಧಗಳಾದ ಬೀಜಗಳನ್ನೂ ತೆಗೆದುಕೊಂಡು ಸಪ್ತಋಷಿಗಳಿಂದ ಯುಕ್ತನಾಗಿ ಸರ್ವಪ್ರಾಣಿಗಳಿಂದ್ಯುಕ್ತನಾಗಿ ಪ್ರಕಾಶಶೂನ್ಯನಾಗಿ ಋಷಿಗಳ ತೇಜಸ್ಸಿನಿಂದ ಪ್ರಕಾಶವಾದ ಬೆಳಕಿನಲ್ಲಿ ವಿಸ್ತಾರವಾದ ಆ ನಾವೆಯನ್ನೇರಿಕೊಂಡು ಸಂಚರಿಸುವನಾಗು ; ಪ್ರಳಯ ವಾಯುವಿನಿಂದ ತೂಗ್ಯಾಡಿಸಲ್ಪಡುವ ಆ ನಾವೆಯು ಸಮೀಪಕ್ಕೆ ಬಂದ ನನ್ನನ್ನು ಶೃಂ

ಗದಲ್ಲಿ ಮಹಾ ಸರ್ಪದಿಂದ ಕಟ್ಟಿಹಾಕಿಬಿಡು; ನಾನು ಋಷಿಗಳಿಂದ ಸಮೇತನಾಗಿ ನಾವೆಯುಮೇಲಿರುವ ನಿನ್ನನ್ನು ಎಳಕೊಂಡು ಮಹಾಸಮುದ್ರದಲ್ಲಿ ಬ್ರಹ್ಮನ ರಾತ್ರಿಯು ಮುಗಿಯುವ ಪರ್ಯಂತವೂ ವಿಹರಿಸುತ್ತೇನೆ; ಆಗ ನನಗೆ ನೀನು ಪ್ರಶ್ನೋತ್ತರ ರೂಪವಾಗಿ ಸಂವಾದದಲ್ಲಿ ನನ್ನ ಅನುಗ್ರಹದಿಂದ ನನ್ನ ಮಹಿಮೆಯುನ್ನೂ ನಾನು ಪರಬ್ರಹ್ಮನೆಂಬ ಅರ್ಥವನ್ನೂ ಸಹಾ ನೀನು ತಿಳಿಯುತ್ತೀಯೆ" ಎಂದು ಅಜ್ಞಾಪಿಸಿ ಅಂತರ್ಧಾನವನ್ನೈದಿದನು.

ಆ ಸತ್ಯವ್ರತನು ಭಗವಂತನು ಹೇಳಿದ ಕಾಲವನ್ನು ಪ್ರತೀಕ್ಷಿಸುತ ಪೂರ್ವಾಗ್ರಗಳಾದ ದರ್ಭೆಗಳನ್ನು ಹಾಸಿಕೊಂಡು ಈಶಾನ್ಯದಿಗ್ಮುಖನಾಗಿ ಮತ್ಸ್ಯರೂಪಿಯಾದ ಶ್ರೀಹರಿಯ ಪಾದಗಳನ್ನು ಧ್ಯಾನಂಗೈಯುತ ಕುಳಿತಿದ್ದನು; ಅನಂತರದಲ್ಲಿ ಅತ್ಯದ್ಭುತ ವರ್ಷಧಾರೆಗಳನ್ನು ಕರೆಯುತಲಿರುವ ಮಹಾಮೇಘಗಳಿಂದ ತುಂಬಿಸಲ್ಪಟ್ಟ ಸಮುದ್ರವು ಮೇರೆದಪ್ಪಿ ಉಕ್ಕಿಬಂದು ಭೂಮಂಡಲವನ್ನು ಮುಳುಗಿಸಿತು; ಆಗ ಸತ್ಯವ್ರತನು ಭಗವಂತನ ಅಜ್ಞಾವಚನವನ್ನು ಧ್ಯಾನಿಸುತ ಸಮೀಪಕ್ಕೆ ಬಂದ ನಾವೆಯುನ್ನು ಕಂಡು ಮಹರ್ಷಿಗಳ ಸಮೇತನಾಗಿ ಓಷಧಿಗಳನ್ನು ತೆಗೆದುಕೊಂಡು ಆ ನಾವೆಯುನ್ನೇರಿದನು! ಆಗ ಋಷಿಗಳು ಪ್ರೀತರಾಗಿ ಸತ್ಯವ್ರತರಾಯನನ್ನು ಕುರಿತು 'ಎಲೈ ಸತ್ಯವ್ರತನೆ, ಭಗವಂತನನ್ನು ಧ್ಯಾನಂಗೈಯುವನಾಗು; ಆ ಭಗವಂತನೇ ನಮ್ಮ ವಿಪತ್ತನ್ನು ಪರಿಹರಿಸಿ ಸುಖವನ್ನು ಕೊಡುತ್ತಾನೆ' ಎಂದು ನುಡಿದರು. ಅನಂತರದಲ್ಲಿ ಸತ್ಯವ್ರತರಾಯನು ಭಗವಂತನನ್ನು ಧ್ಯಾನಿಸುತಲಿರಲು ಮಹಾ ಸಮುದ್ರದಲ್ಲಿ ಒಂದು ಶೃಂಗವನ್ನು ಧರಿಸಿಕೊಂಡು ಲಕ್ಷಯೋಜನ ಪ್ರಮಾಣ ದೇಹವುಳ್ಳ ಸುವರ್ಣಮಯವಾದ ಮತ್ಸ್ಯಾಕೃತಿಯುಳ್ಳ ಭಗವಂತನು ಪ್ರಾದುರ್ಭೂತನಾದನು; ಸತ್ಯವ್ರತರಾಯನು ಆ ಮತ್ಸ್ಯದ ಶೃಂಗದಲ್ಲಿ ಭಗವಂತನು ಮೊದಲು ಹೇಳಿದಪ್ರಕಾರವಾಗಿ ಮಹಾ ಸರ್ಪದಿಂದ ನಾವೆಯುನ್ನು ಕಟ್ಟಿಹಾಕಿ ಸಂತುಷ್ಟನಾಗಿ ಭಗವಂತನನ್ನು ಸ್ತೋತ್ರಂಗೈದನು! 'ಅನಾದಿಯಾದ ಅವಿದ್ಯಾತಿರೋಹಿತವಾದ ಆತ್ಮಸ್ವರೂಪ ಜ್ಞಾನವುಳ್ಳವರಾಗಿ ಅವಿದ್ಯಾಮೂಲಕಗಳಾದ ಸಂಸಾರಭ್ರಮಣಗಳಿಂದ ಪೀಡಿತರಾದ ಪುರುಷರು ಯಾವ ಪರಮಾತ್ಮನ ಅನುಗ್ರಹದಿಂದ ಯಾವ ಭಗವಂತನನ್ನಾಶ್ರಯಿಸಿದವರಾಗಿ ಯಾವ ಪರಮಾತ್ಮನನ್ನೈದುವರೋ ಮುಕ್ತಿಪ್ರದನಾದ ಪರಮಾತ್ಮನಾದ ಅಂಥಾ ನೀನು ಪರಮಗುರುವಾದವನು; ಪೂರ್ವಕರ್ಮಬಂಧದಿಂದ ಅಜ್ಞರಾದ ಜನರು ಸುಖೇಚ್ಛೆಯಿಂದ ದುಃಖಪ್ರದವಾದ ಕರ್ಮವನ್ನು ಮಾಡುತ್ತಾರೆ; ಆಮೇಲೆ ಯಾವ ಭಗವಂತನ ಸೇವೆಯಿಂದ ಆ ಅಸದ್ಬುದ್ಧಿಯನ್ನು ಬಿಡುವರೋ ಆ ಪರಮಾತ್ಮನು ನಮ್ಮ ಹೃದಯದ ಅಜ್ಞಾನಗ್ರಂಥಿಯನ್ನಪಹರಿಸಲಿ; ಅಗ್ನಿಯಲ್ಲಿ ತಪ್ತವಾಗುವುದರಿಂದ ರಜತವು ಹ್ಯಾಗೆ ಕಲ್ಮಷವನ್ನು ಪರಿಹರಿಸಿಕೊಂಡು ಶುದ್ಧವಾದ ನಿಜವರ್ಣವನ್ನೈದುವುದೋ ಹಾಗೆ ಪುರುಷನು ಯಾವ ಭಗವಂತನ ಸೇವೆಯಿಂದ ಚಿತ್ತಕಲ್ಮಷವನ್ನು ಪರಿಹರಿಸಿಕೊಂಡು ನಿಜಸ್ವರೂಪವನ್ನೈದುವನೋ ಈಶ್ವರನಾದ ಪರಮಗುರುವಾದ ಆ ಪರಮಾತ್ಮನು ನನ್ನ ಹೃದಯಗ್ರಂಥಿಯನ್ನು ಭೇದಿಸಲಿ; ಇತರರಾದ ದೇವತೆಗಳು ಗುರುಗಳು ಯಾರುಂಟೋ ಅವರೆಲ್ಲರೂ ಕೂಡಿದಾಗ್ಯೂ ಯಾವ ಭಗವಂತನ ಅನುಗ್ರಹದ ದಶಸಹಸ್ರಾಂಶ ಲೇಶವನ್ನು ಕೂಡ ಮಾಡಲಾರರೋ ಅಂಥಾ ಈಶ್ವರನಾದ ನಿನ್ನನ್ನು ಶರಣುಹೊಂದುತ್ತೇನೆ; ಅಂಧನಾದ ಪುರುಷನಿಗೆ ಅಂಧನು ಮಾರ್ಗವನ್ನು ತೋರಿಸುವಂತೆ ಅಜ್ಞನಾದ ಪುರುಷನಿಗೆ ಮೂಢನು ಗುರುವಾದರೆ ಫಲವೇನು? ನೀನು ಸೂರ್ಯನಂತೆ ಸ್ವಪ್ರಕಾಶನಾಗಿ ಸರ್ವೇಂದ್ರಿಯಗಳಿಗೂ ಪ್ರವರ್ತಕನಾಗಿ ಸದ್ಗತಿಯನ್ನು ತಿಳಿಯಲಿಚ್ಛೆಯುಳ್ಳ ನಮಗೆ ಗುರುವಾಗಬೇಕೆಂದು ನಾವು ಅಪೇಕ್ಷಿಸುತ್ತೇವೆ; ಲೋಕದಲ್ಲಿ ಜನರು ಇತರ ಜನಕ್ಕೆ ಅಸಮೀಚೀನವಾದ ಅರ್ಥಕಾಮರೂಪವಾದ ಗತಿಯನ್ನುಪದೇಶವನ್ನು ಮಾಡುತ್ತಾರೆ; ಆ ಸದ್ಗತಿಯಿಂದ ಪರಿಹರಿಸಲಶಕ್ಯವಾದ ತಮಸ್ಸನ್ನೇ ಪಡೆಯುತ್ತಾರೆ; ಯಾವ ನಿನ್ನ ಉಪದೇಶದಿಂದ ಶಾಶ್ವತವಾದ ಪರಮಪದವನ್ನು ಜನರು ಐದುವರೋ ಅಂಥಾ ಪರಮಾತ್ಮನು ನೀನು; ನೀನು ಸರ್ವಲೋಕಕ್ಕೂ ಸುಹೃತ್ತಾದವನು; ಪ್ರಿಯನಾಗಿಯೂ ಈಶ್ವರನಾಗಿಯೂ ಆತ್ಮನಾಗಿಯೂ ಗುರುವಾಗಿಯೂ ಇಷ್ಟಾರ್ಥಪ್ರದನಾಗಿಯೂ ಇರುವವನು; ಆದಾಗ್ಯೂ ಹೃದಯದಲ್ಲಿ ಕಾಮ್ಯಫಲಾಶೆಯಿಂದ ಅಂಧವಾದ ಬುದ್ಧಿಯುಳ್ಳ ಮೂಢಜನರು ಹೃದಯದಲ್ಲೇ ಇರುವ ನಿನ್ನನ್ನರಿಯರು! ಎಲೈ ಭಗವಂತನೇ, ನಾನು ದೇವಶ್ರೇಷ್ಠನಾದ ಈಶ್ವರನಾದ ವರೇಣ್ಯನಾದ ನಿನ್ನನ್ನು ಜ್ಞಾನೋದಯಾರ್ಥವಾಗಿ ಶರಣುಹೊಂದುತ್ತೇನೆ! ಎಲೈ ಭಗವಂತನೆ,

ಅರ್ಥಪ್ರಕಾಶಗಳಾದ ವಚನಗಳಿಂದ ನನ್ನ ಹೃದಯದ ಅಜ್ಞಾನಗ್ರಂಥಿಯನ್ನು ಭೇದಿಸಿ ನಿಜಸ್ಥಾನವನ್ನು ತೋರಿಸು' ಎಂದು ಈರೀತಿಯಲ್ಲಿ ಪ್ರಾರ್ಥಿಸುವ ಸತ್ಯವ್ರತರಾಯನನ್ನು ಕುರಿತು ಆದಿಪುರುಷನಾದ ಭಗವಂತನು ಮತ್ಸ್ಯರೂಪದಿಂದ ಸಮುದ್ರದಲ್ಲಿ ವಿಹರಿಸುವನಾಗಿ ತತ್ವಾರ್ಥವನ್ನೂ ಸಾಂಖ್ಯಯೋಗಶಾಸ್ತ್ರವಾದ ಆತ್ಮತತ್ವಪ್ರಕಾಶವಾದ ಮತ್ಸ್ಯಪುರಾಣ ಸಂಹಿತೆಯನ್ನೂ ಸಮಗ್ರವಾಗಿ ಹೇಳಿದನು; ಆ ಸತ್ಯವ್ರತರಾಯನು ಋಷಿಗಳೊಡನೆ ನಾವೆಯಲ್ಲಿ ಕುಳಿತು ಭಗವಂತನಿಂದ ಹೇಳಲ್ಪಟ್ಟ ಆತ್ಮತತ್ವವನ್ನು ನಿಸ್ಸಂಶಯವಾಗಿ ತಿಳಿದನು; ಮನುಷ್ಯನು ಭಗವಂತನ ಅವತಾರವನ್ನು ಪ್ರತಿದಿವಸದಲ್ಲಿಯೂ ಭಕ್ತಿಯಿಂದ ಕೀರ್ತನಂಗೈಯ್ಯುವನಾದರೆ ಅವನಿಗೆ ಸಮಸ್ತ ಮನೋರಥಗಳೂ ಸಿದ್ಧಿಸುವವು; ಆ ಪುರುಷನು ಪರಮಗತಿಯನ್ನೈದುವನು; ಶ್ರೀಹರಿಯು ಪೂರ್ವಕಲ್ಪಾಂತದಲ್ಲಿ ಮತ್ಸ್ಯರೂಪದಿಂದ ಆವಿರ್ಭವಿಸಿ ಹಯಗ್ರೀವಾಸುರನನ್ನು ಸಂಹರಿಸಿ ವೇದಗಳನ್ನು ಪುನಶ್ಚ ಸಾಧಿಸಿದನು!"

ಎಲೈ ಪರೀಕ್ಷಿದ್ರಾಯನೆ, ಸತ್ಯವ್ರತನಾಮಕನಾದ ಆ ರಾಜರ್ಷಿಯು ಜ್ಞಾನವಿಜ್ಞಾನಯುಕ್ತನಾಗಿ ವಿಷ್ಣುಪ್ರಸಾದದಿಂದ ವರ್ತಮಾನವಾದ ಕಲ್ಪದಲ್ಲಿ ವೈವಸ್ವತಮನುವಾದನು; ರಾಜರ್ಷಿಯಾದ ಸತ್ಯವ್ರತರಾಯನಿಗೂ ಮಾಯಾಮತ್ಸ್ಯರೂಪನಾದ ಭಗವಂತನಿಗೂ ನಡದ ಸಂವಾದರೂಪವಾದ ಮಹತ್ತಾದ ಆಖ್ಯಾನವನ್ನು ಕೇಳುವ ಪುರುಷರು ಸರ್ವಪಾಪಗಳನ್ನು ಪರಿಹರಿಸಿಕೊಳ್ಳುವರು; ಪ್ರಳಯೋದಕದಲ್ಲಿ ಶಯನಂಗೈದಿರುವ ಬ್ರಹ್ಮನ ಮುಖಗಳ ದೆಸೆಯಿಂದ ವೇದಗಳನ್ನಪಹರಿಸಿದ ಹಯಗ್ರೀವಾಸುರನನ್ನು ಸಂಹರಿಸಿ ಸತ್ಯವ್ರತರಾಯ ಮುಂತಾದ ಮಹರ್ಷಿಗಳಿಗೆ ಬ್ರಹ್ಮೋಪದೇಶವನ್ನು ಮಾಡಿದ ಜಗತ್ಕಾರಣನಾದ ಮಾಯಾಮತ್ಸ್ಯರೂಪನಾದ ಶ್ರೀ ನಾರಾಯಣನನ್ನು ನಮಸ್ಕರಿಸುತ್ತೇನೆ—ಎಂದು ಶ್ರೀ ಶುಕಾಚಾರ್ಯನು ಪರೀಕ್ಷಿದ್ರಾಯನನ್ನು ಕುರಿತು ನಿರೂಪಿಸಿದನು.

ಇಂತು ಶ್ರೀಮದ್ರಾಜಾಧಿರಾಜ ರಾಜಪರಮೇಶ್ವರ ಪ್ರೌಢಪ್ರತಾಪಾಪ್ರತಿಮ ವೀರ ನರಪತಿ ಬಿರುದೆಂತೆಂಬರಗಂಡ ಲೋಕೈಕವೀರ ಯದುಕುಲ ಪಯಃಪಾರಾವಾರ ಕಳಾನಿಧಿ ಶಂಖ ಚಕ್ರಾಂಕುಶ ಕುಠಾರ ಮಕರ ಮತ್ಸ್ಯ ಶರಭ ಸಾಳ್ವ ಗಂಡಭೇರುಂಡ ಧರಣೀ ವರಾಹ ಹನುಮದ್ಗರುಡ ಕಂಠೀರವಾದ್ಯನೇಕ ಬಿರುದಾಂಕಿತರಾಗಿ ಮಹಿಶೂರ ಶ್ರೀಚಾಮರಾಜ ಮಹೀಪಾಲ ಧರ್ಮಪತ್ನಿ ಕೆಂಪನಂಜಮಾಂಬಾ ಗರ್ಭಸುಧಾಂಬುಧಿ ರಾಕಾಸುಧಾಕರಾಯಮಾನ ಶ್ರೀಚಾಮುಂಡಿಕಾಂಬಾ ವರಪ್ರಸಾದೋದ್ಭವರಾದ ಶ್ರೀ ಕೃಷ್ಣರಾಜ ಒಡೆಯರವರಿಂದ ಬುಧಜನ ಸಮ್ಮತಿಯಿಂದ ರಚಿಸಲ್ಪಟ್ಟ ಕರ್ನಾಟಕ ಭಾಷಾರೂಪವಾದ ಶ್ರೀಕೃಷ್ಣರಾಜ ವಾಣೀವಿಲಾಸವೆಂಬ ಶ್ರೀಮದ್ಭಾಗವತದ ಟೀಕಿನ

ಅಷ್ಟಮಸ್ಕಂಧ ಸಮಾಪ್ತಂ.



  

ಶ್ರೀಬಾದರಾಯಣ ಸಮಾಕಲಿತಂ ರಸಾರ್ದ್ರಂ ವೇದಾಮರದ್ರುಮಫಲಂ ಶುಕವಕ್ತ್ರಮುಕ್ತಂ ।
ಕೃಷ್ಣಾವತಾರಚರಿತಾಮೃತಪೂರಪೂರ್ಣಂ ಭೋ ಭಾವುಕಾಃ ಪಿಬತ ಭಾಗವತಂ ರಸಮಾತ್ಮಬೋಧಂ ॥

ಶ್ರೀ ಕೃಷ್ಣರಾಜ ವಾಣೀವಿಲಾಸ

ಎಂಬ

ಶ್ರೀಮದ್ಭಾಗವತದ ಕನ್ನಡ ಟೀಕು

ನವಮಸ್ಕಂಧ.

೧ನೇ ಅಧ್ಯಾಯ.

ವೈವಸ್ವತಮನುವಿನ ಸಂತತಿಯ ವರ್ಣನೆ.

ಅನಂತರದಲ್ಲಿ ಪರೀಕ್ಷಿದ್ರಾಯನು ಶುಕಾಚಾರ್ಯರಿಂದ ನಿರೂಪಿಸಲ್ಪಟ್ಟ ಅಷ್ಟಮಸ್ಕಂಧಾರ್ಥವನ್ನೆಲ್ಲವನ್ನು ಪುನಶ್ಚ ಶುಕಮುನಿಯನ್ನು ಕುರಿತು "ಎಲೈ ಶುಕಮುನಿಯೆ, ನಿನ್ನಿಂದ ನಿರೂಪಿಸಲ್ಪಟ್ಟ ಹದಿನಾಲ್ಕು ಮನ್ವಂತರಗಳು ಅನಂತಮಹಿಮನಾದ ಭಗವಂತನ ಪರಾಕ್ರಮ ಚರಿತ್ರಗಳು ಸಹಾ ನನ್ನಿಂದ ಕೇಳಲ್ಪಟ್ಟವು; ಪೂರ್ವಕಲ್ಪದಲ್ಲಿ ದ್ರವಿಡ ದೇಶಾಧಿಪತಿಯಾದ ಸತ್ಯವ್ರತನೆಂಬ ಯಾವ ರಾಜರ್ಷಿಯು ಪರಮಾತ್ಮನ ಸೇವೆಯಿಂದ ಬ್ರಹ್ಮವಿಷಯಕವಾದ ಜ್ಞಾನವನ್ನೈದಿದನೋ ಆ ಸತ್ಯವ್ರತರಾಯನೇ ವಿವಸ್ವತನೆಂಬ ಸೂರ್ಯನಿಗೆ ಪುತ್ರನಾಗಿ ವೈವಸ್ವತಮನುವಾದನೆಂದು ನಿನ್ನಿಂದ ನಿರೂಪಿತವಾದ ಅರ್ಥವು ನನ್ನಿಂದ ಕೇಳಲ್ಪಟ್ಟಿತು; ಇಕ್ಷ್ವಾಕುರಾಯ ಮುಂತಾದ ಆ ವೈವಸ್ವತಮನುವಿನ ಪುತ್ರರನ್ನು ಸಹಾ ನಿನ್ನಿಂದ ಕೇಳಿದೆನು; ಆ ಮನುಪುತ್ರರ ವಂಶಗಳನ್ನೂ ವಂಶಗಳ ಚರಿತ್ರಗಳನ್ನೂ ಪ್ರತ್ಯೇಕ ಪ್ರತ್ಯೇಕವಾಗಿ ಕೇಳಲಿಚ್ಛೆಯುಳ್ಳ ನನಗೋಸ್ಕರ ನಿರೂಪಿಸು; ಯಾವ ಅರಸುಗಳು ಪೂರ್ವದಲ್ಲಿದ್ದರೋ ಉತ್ತರತ್ರ ಯಾರು ಆವಿರ್ಭವಿಸುತ್ತಾರೆಯೋ ಈಗ ವರ್ತಮಾನರಾಗಿ ಯಾರು ಇದ್ದಾರೆಯೋ ಪುಣ್ಯಕೀರ್ತಿಶಾಲಿಗಳಾದ ಆ ಮಹಾಪುರುಷರ ಪರಾಕ್ರಮಗಳನ್ನು ನನಗೆ ನಿರೂಪಿಸು" ಎಂದು ಪ್ರಶ್ನೆಗೈದನು.

ಈರೀತಿಯಲ್ಲಿ ಪರೀಕ್ಷಿದ್ರಾಜನಿಂದ ಬ್ರಹ್ಮವಾದಿಗಳಾದ ಮಹರ್ಷಿಗಳ ಸಭೆಯಲ್ಲಿ ಪ್ರಶ್ನೆಗೈಯಲ್ಪಟ್ಟ ಜ್ಞಾನಾದಿ ಗುಣಸಂಪನ್ನನಾದ ಪರಮಧರ್ಮಜ್ಞನಾದ ಶುಕಾಚಾರ್ಯನು ಸಂತುಷ್ಟನಾಗಿ "ಎಲೈ ಅರಸೆ, ವೈವಸ್ವತ ಮನುವಿನ ವಂಶವನ್ನು ಪೇಳುತ್ತೇನೆ; ನೀನು ಸಾವಧಾನ ಮನಸ್ಕನಾಗಿ ಕೇಳು : ಸಾಕಲ್ಯವಾಗಿ ವಿಸ್ತರಿಸುವುದಕ್ಕೆ ಸಂವತ್ಸರ ಸಹಸ್ರಗಳಿಂದಲೂ ಕೂಡಾ ಶಕ್ಯವಾಗುವುದಿಲ್ಲ ; ಸಂಕ್ಷೇಪದಿಂದ ಪೇಳುತ್ತೇನೆ ! ಎಲೈ ಅರಸೆ, ಸ್ಥಾವರಜಂಗಮ ಭೂತಗಳಿಗೆ ಅಂತರಾತ್ಮನಾಗಿ ಮಾಯೆಗೆ ಹೊರಚ್ಚಾದ ಯಾವ ಪರಮಾತ್ಮನುಂಟೋ ಆ ಪರಮಾತ್ಮನೊಬ್ಬನೇ ಕಲ್ಪಾಂತದಲ್ಲಿದ್ದನು ; ಮತ್ತೇನು ದೃಶ್ಯಪ್ರಪಂಚವಿಲ್ಲ ; ಆ ಪರಮಾತ್ಮನ ನಾಭೀದೇಶೆಯಿಂದ ಹಿರಣ್ಮಯವಾದ ಮಹತ್ತಾದ ಅಂಡಕೋಶವುಂಟಾಯಿತು ; ಆ ಅಂಡಕೋಶದಲ್ಲಿ ಚತುರ್ಮುಖನಾದ ಬ್ರಹ್ಮದೇವನಾವಿರ್ಭವಿಸಿದನು ; ಆ ಚತುರ್ಮುಖನಿಗೆ ಮಾನಸ ಪುತ್ರನಾಗಿ ಮರೀಚಿಪ್ರಜೇಶನು ಜನಿಸಿದನು ; ಆ ಮರೀಚಿಗೆ ಕಶ್ಯಪಪ್ರಜೇಶನು ಜನಿಸಿದನು; ಆ ಕಶ್ಯಪಋಷಿಗೆ ಪತ್ನಿಯಾದ ದಕ್ಷಪುತ್ರಿಯಾದ ಅದಿತೀದೇವಿಯಲ್ಲಿ ವಿವಸ್ವತನೆಂಬ ಸೂರ್ಯನು ಹುಟ್ಟಿದನು ; ಆ ವಿವಸ್ವತನೆಂಬ ಸೂರ್ಯನಿಗೆ ಪತ್ನಿಯಾದ ಸಂಜ್ಞಾದೇವಿಯಲ್ಲಿ ಶ್ರಾದ್ಧದೇವನೆಂಬ ಪುತ್ರನು ಹುಟ್ಟಿದನು ; ಅತನೇ ವೈವಸ್ವತ ಮನುವೆಂದು ಪ್ರಸಿದ್ಧನು ; ಆ ವೈವಸ್ವತಮನುವಿಗೆ ಪತ್ನಿಯಾದ ಶ್ರದ್ಧಾದೇವಿಯಲ್ಲಿ ಇಕ್ಷ್ವಾಕು ನೃಗ ಶರ್ಯಾತಿ ರಿಷ್ಟ ಧೃಷ್ಟ ಕರೂಷಕ ನರಿಷ್ಯಂತ ವೃಷಧ್ರ, ನಾಭಾಗ ಕವಿ ಎಂಬ ನಾಮಧೇಯಗಳುಳ್ಳ ಹತ್ತುಮಂದಿ ಪುತ್ರರು ಜನಿಸಿದರು ! ಎಲೈ ಅರಸೆ, ಪೂರ್ವದಲ್ಲಿ ಪುತ್ರಸಂತಾನರಹಿತನಾದ ವೈವಸ್ವತಮನುವಿಗೆ ಭಗವಂತನಾದ ವಶಿಷ್ಠನು ಪುತ್ರಾರ್ಥವಾಗಿ ಮಿತ್ರಾವರುಣ ದೇವತಾಕವಾದ ಇಷ್ಟಿಯನ್ನು ಮಾಡಿಸಿದನು ; ಆಗ ಸ್ತ್ರೀಪ್ರಜೇಶಗಳನ್ನು ಅಪೇಕ್ಷಿಸುತಲಿರುವ ಮನುಪತ್ನಿಯಾದ ಶ್ರದ್ಧಾದೇವಿಯು ಕ್ಷೀರಾಹಾರದಿಂದ ವ್ರತನಿಷ್ಠಳಾಗಿ ಹೋತೃವಾದ ಮಹರ್ಷಿಯನ್ನು ಕುರಿತು 'ಎಲೈ ಮಹರ್ಷಿಯೆ, ನನಗೆ ಸ್ತ್ರೀಪ್ರಜೆ ಆಗುವಂತೆ ಅನುಗ್ರಹಿಸೀ' ಎಂದು ಯಾಚಿಸಿದಳು ; ಹೋಮಂಗೈಯಲೋಸುಗ ಹವಿರ್ದ್ರವ್ಯವನ್ನು ಗ್ರಹಿಸಿ ನಿಂತಿರುವ ಅಧ್ವರ್ಯುವಿನಿಂದ ಪ್ರೇರಿತನಾದ ಹೋತೃವು ಶ್ರದ್ಧಾದೇವಿಯಿಂದ ಪ್ರಾರ್ಥಿತವಾದ ಅರ್ಥವನ್ನು ಮನಸ್ಸಿನಲ್ಲಿ ಧ್ಯಾನಂಗೈಯುತ್ತ ಮಂತ್ರವನ್ನು ಉಚ್ಚರಿಸಿದನು ; ಹೋತೃವಿನ ವ್ಯತಿಕ್ರಮದಿಂದ ಇಳಾನಾಮಕಳಾದ ಕನ್ಯೆಯು ಜನಿಸಿದಳು ; ಆ ಕನ್ಯೆಯನ್ನು ನೋಡಿ ಮನುವು ಅತ್ಯಂತ ಸಂತೋಷರಹಿತನಾಗಿ ಗುರುವಾದ ವಶಿಷ್ಠಋಷಿಯನ್ನು ಕುರಿತು 'ಎಲೈ ಭಗವಂತನಾದ ವಶಿಷ್ಠನೆ, ಬ್ರಹ್ಮವಾದಿಗಳಾದ ನಿಮ್ಮಂಥಾ ಮಹಾತ್ಮರಿಂದ ಅನುಷ್ಠಿತವಾದ ಕರ್ಮವು ಏನುಕಾರಣ ಹೀಗಾಯಿತು ; ಪುತ್ರಾರ್ಥವಾಗಿ ಮಾಡಲ್ಪಟ್ಟ ಕರ್ಮವು ಸ್ತ್ರೀಪ್ರಜಾಸಂಪಾದಕವಾಗಿ ವ್ಯತ್ಯಸ್ತವಾಯಿತು ; ಮಂತ್ರಾರ್ಥಕ್ಕೆ ಈರೀತಿಯಲ್ಲಿ ವಿಪರ್ಯಾಸವಾಗಬಾರದಲ್ಲ; ನೀವೆಲ್ಲರು ಮಂತ್ರವೇತ್ತೃಗಳು ; ತಪಸ್ಸಿನಿಂದ ದಹಿಸಲ್ಪಟ್ಟ ಪಾಪಗಳುಳ್ಳವರು ; ಧ್ಯಾನನಿಷ್ಠರು ; ಹೀಗಿದ್ದಾಗ್ಯೂ ಸಂಕಲ್ಪವೈಷಮ್ಯವು ಅನ್ಯತವೆಲ್ಲಿ ಬಂತು; ಈ ವೈಷಮ್ಯವು ದೇವತೆಗಳಲ್ಲೇ ಹೊರ್ತು ಬ್ರಾಹ್ಮಣರಲ್ಲಿಲ್ಲವಲ್ಲ' ಎಂದು ನುಡಿದನು. ಆ ಮನುವಾಕ್ಯವನ್ನು ಕೇಳಿ ಭಗವಂತನಾದ ವಶಿಷ್ಠಋಷಿಯು ಹೋತೃವಿನ ವ್ಯತಿಕ್ರಮವನ್ನು ತಿಳಿದು ಮನುವನ್ನು ಕುರಿತು 'ಎಲೈ ಮನುವೆ, ಈ ಸಂಕಲ್ಪ ವೈಷಮ್ಯವು ನಿನ್ನ ಹೋತೃವಿನ ಅನುಸಂಧಾನ ಭೇದದಿಂದ ಉಂಟಾಯಿತು ; ಆದಾಗ್ಯೂ ನನ್ನ ತಪಸ್ಸಿನ ತೇಜಸ್ಸಿನಿಂದ ನಿನ್ನ ಸಂಕಲ್ಪವನ್ನು ಸಾಧಿಸಿ ನಿನಗೆ ಪುತ್ರನಾಗುವಂತೆ ಮಾಡುತ್ತೇನೆ' ಎಂದು ನಿಶ್ಚಯಿಸಿ ಇಳಾಯೆಂಬ ಕನ್ಯೆಯು ಪುರುಷನಾಗಲೋಸುಗ ಆದಿಪುರುಷನಾದ ಪರಮಾತ್ಮನನ್ನು ಸ್ತುತಿಸಿದನು ! ಆಗ ಭಗವಂತನಾದ ಹರಿಯು ಸಂತುಷ್ಟನಾಗಿ ಆ ವಶಿಷ್ಠನಿಗೆ ಇಷ್ಟವಾದ ವರವನ್ನಿತ್ತನು ; ಅದರಿಂದ ಇಳಾನಾಮಕಳಾದ ಕನ್ಯೆಯು ಸುದ್ಯುಮ್ನನಾಮಕನಾದ ಪುರುಷಶ್ರೇಷ್ಠಳಾದಳು ! ಎಲೈ ಅರಸೆ, ಆ ಸುದ್ಯುಮ್ನನು ಒಂದು ಕಾಲದಲ್ಲಿ ಬೇಟೆಯನ್ನಾಡುವದಕ್ಕೋಸ್ಕರ ಉತ್ತಮಾಶ್ವವನ್ನೇರಿ ಕೆಲವು ಮಂತ್ರಿಗಳೊಡಗೂಡಿ ಉತ್ತಮವಾದ ಧನುಸ್ಸನ್ನೂ ಅದ್ಭುತಗಳಾದ ಬಾಣಗಳನ್ನೂ ಧರಿಸಿಕೊಂಡು ಕವಚವನ್ನು ತೊಟ್ಟು ಮೃಗಗಳನ್ನಟ್ಟಿಕೊಂಡು ಉತ್ತರದಿಕ್ಕನ್ನು ಕುರಿತು ತೆರಳಿದನು ; ಆ ಉತ್ತರದಿಕ್ಕಿನಲ್ಲಿ ಮೇರುಪರ್ವತದ ಕೆಳಭಾಗದಲ್ಲಿ ಸಾಕ್ಷಾತ್ಪಾರ್ವತಿ ಪರಮೇಶ್ವರರಿಗೆ ವಿಹಾರಸ್ಥಾನವಾದ ಕುಮಾರವೆಂಬ ನಾಮಧೇಯವುಳ್ಳ ವನವನ್ನು ಕುರಿತು ಸುದ್ಯು

ಮ್ನನು ಪ್ರವೇಶಿಸಿದನು ; ಸುದ್ಯುಮ್ನನು ಆ ವನವನ್ನು ಪ್ರವೇಶಿಸಿದ ಮಾತ್ರದಿಂದಲೇ ಸ್ತ್ರೀರೂಪನಾದನು ; ಅವನ ಅಶ್ವವು ಹೆಣ್ಣುಕುದುರೆಯಾಯಿತು ; ಆ ಅರಸಿನ ಸಂಗಡ ಹೋಗಿದ್ದ ಭಟರು ಮಂತ್ರಿಗಳು ಮೊದಲಾದವರೆಲ್ಲರೂ ಸ್ತ್ರೀರುಗಳಾಗಿ ಅನ್ಯೋನ್ಯವಾಗಿ ನೋಡಿಕೊಂಡು ವಿಮನಸ್ಕರಾದರು " ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಶುಕಮುನಿಯೆ, ಆ ಪ್ರದೇಶವು ಯಾರಿಂದ ಈಪ್ರಕಾರವಾದ ಮಹಿಮೆಯುಳ್ಳದ್ದಾಯಿತು ; ಈ ಅರ್ಥವನ್ನು ನನಿಗೆ ಮುಂಚೆ ನಿರೂಪಿಸು ; ನನಿಗೆ ಕುತೂಹಲ ಅಧಿಕವಾಗಿದೆ " ಎಂದು ಕೇಳಿದನು.

ಶುಕಾಚಾರ್ಯನು "ಎಲೈ ಅರಸೆ, ಒಂದು ಸಮಯದಲ್ಲಿ ಸುವ್ರತರಾದ ಮಹರ್ಷಿಗಳು ತಮ್ಮ ತೇಜಸ್ಸಿನಿಂದ ದಿಕ್ಕುಗಳನ್ನು ಬೆಳಗುವರಾಗಿ ಪರಮೇಶ್ವರನ ದರ್ಶನಾರ್ಥವಾಗಿ ಆ ವನವನ್ನು ಕುರಿತು ಬಂದರು ; ಆಗ ಪಾರ್ವತೀದೇವಿಯು ಕ್ರೀಡಾಕಾಲವಾದ್ದರಿಂದ ವಸ್ತ್ರರಹಿತಳಾಗಿ ಆ ಋಷಿಗಳನ್ನು ಕಂಡು ಅತ್ಯಂತ ಲಜ್ಜಿತಳಾಗಿ ಪರಮೇಶ್ವರನ ತೊಡೆಯಿಂದಿಳಿದು ಶೀಘ್ರದಿಂದ ವಸ್ತ್ರವನ್ನುಟ್ಟುಕೊಂಡಳು ; ಆಗ ಆ ಋಷಿಗಳು ವಿಹಾರಂಗೈಯ್ಯುತಲಿರುವ ಪಾರ್ವತೀಪರಮೇಶ್ವರನನ್ನು ತಿಳಿದು ಇದು ಸಮಯುವಲ್ಲವೆಂದು ಹಿಂತಿರುಗಿ ನರನಾರಾಯಣಾಶ್ರಮವನ್ನು ಕುರಿತು ಬಂದರು ; ಆಗ ಪರಮೇಶ್ವರನು ಪಾರ್ವತೀದೇವಿಗೆ ಪ್ರಿಯುವಂ ಮಾಡಲೋಸುಗ ' ಈ ವನವನ್ನು ಯಾರು ಪ್ರವೇಶಿಸುತ್ತಾರೆಯೋ ಅವರು ಸ್ತ್ರೀರುಗಳಾಗಲಿ ' ಎಂದು ಶಾಪವನ್ನಿತ್ತನು ; ಅದು ಮೊದಲುಕೊಂಡು ಆ ವನಕ್ಕೆ ಪುರುಷರು ಹೋಗುವದಿಲ್ಲ ; ಆ ಸುದ್ಯುಮ್ನನು ಸ್ತ್ರೀಯಾಗಿ ಸ್ತ್ರೀರೂಪರಾದ ಅನುಚರರಿಂ ಕೂಡಿ ವನಗಳಲ್ಲಿ ಸಂಚರಿಸಿದನು ; ಅನಂತರದಲ್ಲಿ ಆಶ್ರಮಸಮೀಪದಲ್ಲಿ ಸಂಚರಿಸುತಲಿರುವ ಉತ್ತಮಳಾದ ಆ ಸ್ತ್ರೀಯನ್ನು ನೋಡಿ ಬುಧನು ಕಾಮಿಸಿದನು ; ಮನೋಹರವಾದ ಹುಬ್ಬುಗಳುಳ್ಳ ಆ ಸ್ತ್ರೀಯು ಚಂದ್ರಪುತ್ರನಾದ ಬುಧನನ್ನು ತನಗೆ ಪತಿಯನ್ನಾಗಿ ಕಾಮಿಸಿದಳು ; ಆ ಸ್ತ್ರೀಯಲ್ಲಿ ಬುಧನು ಪುರೂರವಸ್ಸೆಂಬ ಚಕ್ರವರ್ತಿಯನ್ನು ಪಡೆದನು ! ಎಲೈ ಅರಸೆ, ಮನುಪುತ್ರನಾದ ಸುದ್ಯುಮ್ನನು ಈಪ್ರಕಾರ ಸ್ತ್ರೀತ್ವವನ್ನೈದಿದವನಾಗಿ ಸ್ವಕುಲಾಚಾರ್ಯನಾದ ವಶಿಷ್ಠನನ್ನು ಸ್ಮರಿಸಿದನು ; ಆಗ ವಶಿಷ್ಠಋಷಿಯು ಸುದ್ಯುಮ್ನನಿಗೆ ಬಂದ ಅವಸ್ಥೆಯಂ ನೋಡಿ ದಯದಿಂದ ಪೀಡಿತನಾಗಿ ಸುದ್ಯುಮ್ನನಿಗೆ ಪುರುಷಭಾವವಂ ನಿಶ್ಚಯಿಸಿ ಪರಮೇಶ್ವರನನ್ನು ಪ್ರಾರ್ಥಿಸಿದನು ; ಆಗ ಶ್ರೀಪರಮೇಶ್ವರನು ಸಂತುಷ್ಟನಾಗಿ ವಶಿಷ್ಠಋಷಿಗೆ ಪ್ರಿಯುವನ್ನು ಮಾಡುವನಾಗಿ ಪೂರ್ವದಲ್ಲಿ ತನ್ನಿಂದ ಪೇಳಲ್ಪಟ್ಟ ವಾಕ್ಯವನ್ನು ಸತ್ಯವನ್ನು ಮಾಡುವನಾಗಿ 'ಎಲೈ ವಶಿಷ್ಠಋಷಿಯೆ, ನಿನ್ನ ತಪಸ್ಸಿನಿಂದ ಈ ಸುದ್ಯುಮ್ನನು ಒಂದು ತಿಂಗಳು ಪುರುಷನಾಗಿ ರಾಜ್ಯವನ್ನು ಪಾಲಿಸಲಿ ; ಒಂದು ತಿಂಗಳು ಸ್ತ್ರೀಯಾಗಿರಲಿ ; ಈಪ್ರಕಾರ ವ್ಯವಸ್ಥೆಯಿಂದ ಭೂಮಿಯನ್ನು ರಕ್ಷಿಸಲಿ ' ಎಂಬ ಪರಮೇಶ್ವರನ ವರದಿಂದಲೂ ವಶಿಷ್ಠರ ಅನುಗ್ರಹದಿಂದಲೂ ವ್ಯವಸ್ಥೆಯಿಂದ ಪುಂಸ್ತ್ವವನ್ನೈದಿ ಭೂಮಿಯನ್ನು ರಕ್ಷಿಸಿದನು ; ಆದಾಗ್ಯೂ ಸುದ್ಯುಮ್ನನನ್ನು ನೋಡಿ ಪ್ರಜೆಗಳು ಚನ್ನಾಗಿ ಸಂತೋಷಪಡಲಿಲ್ಲ ; ಆ ಸುದ್ಯುಮ್ನನಿಗೆ ಉಲ್ಕಲನು ಗಯನು ವಿಮಲನು ಎಂಬ ಮೂರುಮಂದಿ ಪುತ್ರರು ಜನಿಸಿದರು ; ಆ ಮೂರುಮಂದಿಯು ಧರ್ಮನಿರತರಾಗಿ ದಕ್ಷಿಣ ದೇಶಕ್ಕೆ ಧೊರೆಗಳಾದರು ; ಅನಂತರದಲ್ಲಿ ಕಾಲಾಂತರದಲ್ಲಿ ಪ್ರತಿಷ್ಠಾನಪುರಕ್ಕೆ ನಾಥನಾದ ಸುದ್ಯುಮ್ನನಿಗೆ ಪುತ್ರನಾದ ಪುರೂರವನಿಗೆ ಭೂಮಿಯನ್ನು ಕೊಟ್ಟು ವನವನ್ನು ಕುರಿತು ತಪಸ್ಸಿಗೆ ತೆರಳಿಹೋದನು" ಎಂದು ನುಡಿದನು.

೨ನೇ ಅಧ್ಯಾಯ.

ಇಕ್ಷ್ವಾಕುರಾಯನ ಸಂತತಿಯು.

"ಎಲೈ ಅರಸೆ, ಈರೀತಿಯಲ್ಲಿ ಸುದ್ಯುಮ್ನನು ಅರಣ್ಯಕ್ಕೆ ಹೋಗಲಾಗಿ ವೈವಸ್ವತಮನುವು ಪುತ್ರಕಾಮನಾಗಿ ಯಮುನಾತೀರದಲ್ಲಿ ನೂರು ವರ್ಷಗಳು ತಪಸ್ಸನ್ನು ಮಾಡಿದನು ; ಅನಂತರದಲ್ಲಿ ಆ ಮನುವು ಪುತ್ರಾರ್ಥ

ವಾಗಿ ಪ್ರಥಮವಾದ ಶ್ರೀಹರಿಯನ್ನು ಪೂಜಿಸಿದನು ; ಭಗವದನುಗ್ರಹದಿಂದ ಇಕ್ಷ್ವಾಕುರಾಯನು ಮೊದಲಾದ ಹತ್ತು ಮಂದಿ ತನಗೆ ಸಮಾನರಾದ ಪುತ್ರರನ್ನು ಪಡೆದನು ; ಮನುಪುತ್ರನಾದ ಪೃಷಧ್ರನು ಗುರುವಿನ ಆಜ್ಞೆಯಿಂದ ರಾತ್ರಿಯಲ್ಲಿ ಖಡ್ಗಪಾಣಿಯಾಗಿ ನಿಂತು ನಿದ್ರೆಯನ್ನು ಬಿಟ್ಟು ಅಪ್ರಮತ್ತನಾಗಿ ಗೋವುಗಳನ್ನು ಕಾದುಕೊಂಡಿದ್ದನು; ಒಂದು ಸಮಯದಲ್ಲಿ ರಾತ್ರಿಯಲ್ಲಿ ಮೇಘವು ವರ್ಷಿಸುತಲಿರಲಾಗಿ ಮೋಡದಿಂದ ನಕ್ಷತ್ರಗಳು ಕಾಣಲ್ಪಡದಿರುವ ಮಹಾಂಧಕಾರದಲ್ಲಿ ಬಲಿಷ್ಠವಾದ ಒಂದು ವ್ಯಾಘ್ರವು ಗೋವುಗಳ ಗೋಷ್ಠದಲ್ಲಿ ಪ್ರವೇಶಿಸಿತು; ಆ ವ್ಯಾಘ್ರವನ್ನು ನೋಡಿ ಮಲಗಿದ್ದ ಗೋವುಗಳು ಎದ್ದು ಘಾಬರಿಯಾಗಿ ಗೋಷ್ಠದಲ್ಲಿ ಸುತ್ತಿದವು ; ಆ ಬಲಿಷ್ಠವಾದ ವ್ಯಾಘ್ರವು ಒಂದು ಗೋವನ್ನು ಹಿಡಿಯಿತು ; ಆಗ ಆ ಗೋವು ಬೇಳಗರದು ಕೂಗಲು ಆ ಶಬ್ದವನ್ನು ಕೇಳಿ ಪೃಷಧ್ರಯನು ಸಮೀಪಕ್ಕೆ ಬೇಗಹೋದನು ; ಮೇಘವರ್ಷಗಳಿಂದ ಆಚ್ಛಾದಿತಗಳಾದ ನಕ್ಷತ್ರಗಳುಳ್ಳ ರಾತ್ರಿಯಲ್ಲಿ ಪೃಷಧ್ರರಾಯನು ಶೀಘ್ರವಾಗಿ ಶಸ್ತ್ರವನ್ನು ತೆಗೆದುಕೊಂಡು ವ್ಯಾಘ್ರವನ್ನು ಸಂಹರಿಸಲೋಸುಗ ಹೋಗಿ ತಿಳಿಯದೆ ಆ ಕಪಿಲಗೋವನ್ನು ಛೇದಿಸಿದನು; ಖಡ್ಗದ ಕೊನೆ ತಗಲಿ ವ್ಯಾಘ್ರದ ಶ್ರೋತ್ರಗಳು ಛೇದಿಸಲ್ಪಟ್ಟು ರಕ್ತವಂ ಸೋರಿಸುತ್ತ ಆ ವ್ಯಾಘ್ರವು ಭಯಪಟ್ಟು ಪಲಾಯನಂಗೈದುದು ; ಪೃಷಧ್ರರಾಯನು ವ್ಯಾಘ್ರ ಹತವಾಯಿತೆಂದು ತಿಳಿದು ಬೆಳಗಾದಮೇಲೆ ಸಂಹೃತವಾದ ಗೋವನ್ನು ನೋಡಿ ಬಹು ದುಃಖಿತನಾದನು ; ಆಗ ಕುಲಗುರುವಾದ ಋಷಿಯು ಅಜ್ಞಾನದಿಂದ ಅಪರಾಧವನ್ನು ಮಾಡಿದ ಆ ಪೃಷಧ್ರನನ್ನು ನೋಡಿ 'ಎಲೈ ಪೃಷಧ್ರನೆ, ನೀನು ಅಕಾರ್ಯವನ್ನು ಮಾಡಿದ್ದರಿಂದ ನೀನು ಕ್ಷತ್ರಿಯನಾಗಬೇಡ ; ಶೂದ್ರನೇ ಆಗು 'ಎಂದು ಶಪಿಸಿದನು; ಈರೀತಿಯಲ್ಲಿ ಗುರುವಿನಿಂದ ಕೊಡಲ್ಪಟ್ಟ ಶಾಪವನ್ನು ಅಂಜಲೀಬಂಧಂಗೈದು ಗ್ರಹಿಸಿದನು ; ಆಮೇಲೆ ವೀರನಾದ ಪೃಷಧ್ರನು ಊರ್ಧ್ವರೇತಸ್ಕನಾಗಿ ಮುನಿಪ್ರಿಯವಾದ ವ್ರತವನ್ನು ಧರಿಸಿದನು ; ಸರ್ವಭೂತ ದಯಾಪರನಾಗಿ ಪೃಷಧ್ರನು ಸರ್ವಭೂತಾತ್ಮಕನಾದ ವಾಸುದೇವನಾದ ಪರಮಾತ್ಮನಲ್ಲಿ ಏಕಾಂತಭಕ್ತಿಯನ್ನು ಮಾಡಿ ಮುಕ್ತಸಂಗನಾಗಿ ಶಾಂತಚಿತ್ತನಾಗಿ ಜಿತೇಂದ್ರಿಯನಾಗಿ ಪ್ರತಿಗ್ರಹ ಪರಾಙ್ಮುಖನಾಗಿ ದೈವವಶದಿಂದ ಲಬ್ಧವಾದ ಪದಾರ್ಥದಿಂದ ಜೀವಿಸಿಕೊಂಡು ಸಮಾಹಿತಮನಸ್ಕನಾಗಿ ಚಿತ್ತವನ್ನು ಪರಮಾತ್ಮನಲ್ಲಿರಿಸಿ ಜಡನಂತೆಯೂ ಅಂಧನಂತೆಯೂ ಕಿವುಡನಂತೆಯೂ ಭೂಮಿಯಲ್ಲಿ ಸಂಚರಿಸುವನಾಗಿ ವ್ರತವನ್ನಾಚರಿಸುತ ಅರಣ್ಯವನ್ನೈದಿ ಅಲ್ಲಿ ಮಹತ್ತಾದ ಕಾಡುಗಿಚ್ಚನ್ನು ನೋಡಿ ಆ ಅಗ್ನಿಯಲ್ಲಿ ತನ್ನ ದೇಹವನ್ನರ್ಪಿಸಿ ಪರಬ್ರಹ್ಮವನ್ನೈದಿದನು ! ಎಲೈ ಅರಸೆ, ಮನುವಿನ ಹತ್ತನೆಯವನಾದ ಸರ್ವಕನಿಷ್ಠನಾದ ಕವಿಯೆಂಬ ಪುತ್ರನು ಬಾಲ್ಯವಯಸ್ಸಿನಲ್ಲೇ ವಿಷಯಗಳಲ್ಲಿ ನಿಸ್ಪೃಹನಾಗಿ ಬಂಧುಗಳನ್ನೂ ರಾಜ್ಯವನ್ನೂ ಪರಿತ್ಯಜಿಸಿ ಸ್ವಪ್ರಕಾಶನಾದ ಪರಮಾತ್ಮನನ್ನು ಚಿತ್ತದಲ್ಲಿ ಸ್ಥಿರವಾಗಿ ಅನುಸಂಧಾನಂಗೈದು ಪರಮಗತಿಯನ್ನೈದಿದನು ; ಕರೂಷನೆಂಬ ಮನುಪುತ್ರನ ದೆಸೆಯಿಂದ ಕರೂಷರೆಂಬ ಕ್ಷತ್ರಿಯರುಂಟಾಗಿ ಬ್ರಾಹ್ಮಣಪ್ರಿಯರಾಗಿ ಧಾರ್ಮಿಕರಾಗಿ ಉತ್ತರ ದೇಶಾಧಿಪತಿಗಳಾದರು ; ಮನುಪುತ್ರನಾದ ಧೃಷ್ಟನ ದೆಸೆಯಿಂದ ಧಾರ್ಷ್ಟರೆಂಬ ಕ್ಷತ್ರಿಯಸಮೂಹವುಂಟಾಗಿ ಅವರೆಲ್ಲರೂ ಬ್ರಾಹ್ಮಣತ್ವವನ್ನೈದಿದರು ; ನೃಗನೆಂಬ ಮನುಪುತ್ರನಿಗೆ ಸುಮತಿಯೆಂಬ ಮಗನಾದನು ; ಅವನಿಗೆ ಭೂತಜ್ಯೋತಿಯೆಂಬ ಪುತ್ರನು ಹುಟ್ಟಿದನು ; ಅವನಿಗೆ ವಸುವೆಂಬ ಸುತನಾದನು ; ವಸುವಿಗೆ ಪ್ರತೀರನೆಂಬ ಪುತ್ರನಾದನು ; ಅವನಿಗೆ ಓಘವಂತನು ಮಗನು ; ಅವನಿಗೆ ಓಘವಂತನೆಂಬ ಪುತ್ರನೂ ಓಘವತಿಯೆಂಬ ಕನ್ಯೆಯೂ ಆದರು ; ಆ ಕನ್ಯೆಯನ್ನು ಸುದರ್ಶನನು ವಿವಾಹಮಾಡಿಕೊಂಡನು ; ನರಿಷ್ಯಂತನೆಂಬ ಮನುಪುತ್ರನಿಗೆ ಚಿತ್ರಸೇನನೆಂಬ ಮಗನು ಹುಟ್ಟಿದನು ; ಚಿತ್ರಸೇನನಿಗೆ ದಕ್ಷನು; ದಕ್ಷನಿಗೆ ಮೀಢ್ವಾಂತನು; ಅವನಿಗೆ ಕೂರ್ಚನು ; ಅವನಿಗೆ ಇಂದ್ರಸೇನನು ; ಆ ಇಂದ್ರಸೇನನಿಗೆ ವೀತಿಹೋತ್ರನು ; ಅವನಿಗೆ ಸತ್ಯಶ್ರವಸ್ಸು ; ಅವನಿಗೆ ಉರುಶ್ರವಸ್ಸು ; ಅವನಿಗೆ ದೇವದತ್ತನು ; ಆ ದೇವದತ್ತನಿಗೆ ಅಗ್ನಿಯೆ ಅಗ್ನಿವೇಶ್ಯನೆಂಬ ನಾಮಧೇಯದಿಂದ ಪುತ್ರನಾದನು ; ಅವನೇ ಕಾನೀನನೆಂದು ಜಾತುಕರ್ಣನೆಂದು ಪೆಸರುಳ್ಳ ಮಹರ್ಷಿಯಾದನು ; ಆ ಅಗ್ನಿವೇಶ್ಯಋಷಿಯಿಂದ ಬ್ರಾಹ್ಮಣಕುಲವುಂಟಾಯಿತು ; ಇದು ನರಿಷ್ಯಂತನ ವಂಶವು ! ಎಲೈ ಅರಸೆ, ದಿಷ್ಟನ ವಂಶವನ್ನು ಕೇಳು : ದಿಷ್ಟನಿಗೆ ನಾಭಾಗನೆಂಬ ಪುತ್ರನು ಜನಿಸಿ ಅವನು ವ್ಯಾಪಾರದಿಂದ ವೈಶ್ಯತ್ವವನ್ನು ಪಡೆದನು ; ಆ ನಾಭಾಗನಿಗೆ ಜಲಂಧರನು ; ಅವನಿಗೆ ವತ್ಸಪ್ರೀತಿಯು ; ಅವನಿಗೆ ಪ್ರಾಂಶುವೆಂಬ ಪುತ್ರನು ; ಅವನಿಗೆ ಪ್ರಮಿತಿಯು ;

ಅವನಿಗೆ ಪವಿತ್ರನು ; ಅವನಿಗೆ ಚಾಕ್ಷುಷನು ; ಅವನಿಗೆ ವಿಂಶತಿಯು ; ಅವನಿಗೆ ರಂಭನು ; ಅವನಿಗೆ ಧಾರ್ಮಿಕನಾದ ಖನಿತ್ರನು ; ಆ ಖನಿತ್ರನಿಗೆ ಕರಂಧಮನು ; ಅವನಿಗೆ ಅವಿಕ್ಷಿತ್ತೆಂಬ ಪುತ್ರನು ; ಅವನಿಗೆ ಚಕ್ರವರ್ತಿಯಾದ ಮರುತ್ತರಾಯನು ಜನಿಸಿದನು ; ಅಂಗೀರಸ್ಸಿನ ಪುತ್ರನಾದ ಮಹಾ ಯೋಗಿಯಾದ ಸಂವರ್ತ ಋಷಿಯು ಆ ಮರುತ್ತರಾಯನಿಗೆ ಯಜ್ಞಗಳನ್ನು ಮಾಡಿಸಿದನು ! ಎಲೈ ಅರಸೆ, ಮರುತ್ತರಾಯನ ಯಜ್ಞಕ್ಕೆ ಸಮಾನವಾದ ಯಜ್ಞ ಹಿಂದೆಯೂ ಆಗಲಿಲ್ಲ ; ಮುಂದೆಯೂ ಆಗತಕ್ಕದ್ದಲ್ಲ ; ಆ ಮರುತ್ತರಾಯನ ಯಜ್ಞದಲ್ಲಿ ಸಮಸ್ತ ವಸ್ತುಗಳು ಸುವರ್ಣಮಯವಾದದ್ದೇ ಹೊರ್ತು ಮತ್ತೊಂದಿಲ್ಲ ; ಸೋಮದ್ರವ್ಯದಿಂದ ಇಂದ್ರನು ಸಂತುಷ್ಟನಾದನು ; ಬ್ರಾಹ್ಮಣರು ದಕ್ಷಿಣೆಗಳಿಂದ ಸಂತುಷ್ಟರಾಗಿ ಮದಿಸಿದರು ; ಇಂದ್ರಾದಿ ದೇವತೆಗಳು ಮರುತ್ತರಾಯನ ಸಭೆಯಲ್ಲಿ ಪ್ರತ್ಯಕ್ಷರಾಗಿ ಬಂದು ಹವಿರ್ಭಾಗಗಳಿಂದ ಸಂತುಷ್ಟರಾಗಿ ಮದಿಸಿದರು ; ಆ ಮರುತ್ತರಾಯನಿಗೆ ದಮನು ; ಆ ದಮನಿಗೆ ರಾಜವರ್ಧನನು ; ಅವನಿಗೆ ಸುಧೃತಿಯು ; ಅವನಿಗೆ ನರನು ; ಅವನಿಗೆ ಕೇವಲನು ; ಅವನಿಗೆ ಬಂಧುಮಂತನು ; ಅವನಿಗೆ ವೇಗವಂತನು ; ಅವನಿಗೆ ಬಂಧುವೆಂಬ ಪುತ್ರನು ; ಆ ಬಂಧುವಿಗೆ ತೃಣಬಿಂದುವೆಂಬುವನು ಜನಿಸಿದನು ; ಆ ಗುಣಾಢ್ಯನಾದ ತೃಣಬಿಂದುವನ್ನು ಉತ್ತಮಳಾದ ಅಪ್ಸರಸ್ತ್ರೀಯಾದ ಅಲಂಬುಸಾದೇವಿಯು ವಿವಾಹವನ್ನು ಮಾಡಿಕೊಂಡಳು ; ಆ ಅಲಂಬುಸಾದೇವಿಯಲ್ಲಿ ತೃಣಬಿಂದುವಿಗೆ ಪುತ್ರರು ಜನಿಸಿದರು ; ಇಲಬಿಳಾಯೆಂಬ ಕನ್ಯೆಯೂ ಹುಟ್ಟಿದಳು ; ಆ ಇಲಬಿಳಾದೇವಿಯಲ್ಲಿ ವಿಶ್ರವಸ್ಸೆಂಬ ಪ್ರಜೇಶನು ಕುಬೇರನನ್ನು ಪುಟ್ಟಿಸಿದನು ; ಆ ಕುಬೇರನು ಯೋಗೇಶ್ವರನಾದ ಪಿತೃವಾದ ವಿಶ್ರವಸ್ಸಿನ ಬಳಿಯಿಂದ ಉತ್ಕೃಷ್ಟವಾದ ತತ್ವವಿದ್ಯೆಯನ್ನೈದಿದನು ; ವಿಶಾಲನು ಶೂನ್ಯಬಂಧುವು ಧೂಮ್ರಕೇತುವೆಂಬ ಮೂರುಮಂದಿ ತೃಣಬಿಂದುವಿನ ಪುತ್ರರು ; ಅವರೊಳಗೆ ವಿಶಾಲನೆಂಬ ಪುತ್ರನು ವಂಶೋದ್ಧಾರಕನಾಗಿ ವೈಶಾಲಿಯೆಂಬ ಪುರವನ್ನು ನಿರ್ಮಿಸಿದನು ; ಆ ವಿಶಾಲನಿಗೆ ಹೇಮಚಂದ್ರನು ; ಅವನಿಗೆ ಧೂಮ್ರಾಕ್ಷನು ; ಅವನಿಗೆ ಸಂಯಮನು ; ಅವನಿಗೆ ಕೃಶಾಶ್ವನು ; ಅವನಿಗೆ ಸೋಮದತ್ತನು ; ಆ ಸೋಮದತ್ತನು ಅಶ್ವಮೇಧಗಳಿಂದ ಪರಮಾತ್ಮನನ್ನು ಸಂತೋಷಪಡಿಸಿ ಪರಮಗತಿಯನ್ನೈದಿದನು ; ಸೋಮದತ್ತನಿಗೆ ಸುಮತಿಯು ; ಅವನಿಗೆ ಜನಮೇಜಯನು ; ಇವರು ತೃಣಬಿಂದು ರಾಜರ್ಷಿಯ ಯಶಸ್ಸನ್ನು ವೃದ್ಧಿಮಾಡಿದವರಾದ್ದರಿಂದ ವೈಶಾಲರಾದರು " ಎಂದು ನುಡಿದನು.

೩ನೇ ಅಧ್ಯಾಯ.

ಶರ್ಯಾತಿರಾಯನ ಪುತ್ರಿಯಾದ ಸುಕನ್ಯಾದೇವಿಯ ವೃತ್ತಾಂತವು.

"ಎಲೈ ಅರಸೆ, ವೈವಸ್ವತಮನು ಪುತ್ರನಾದ ವೇದಾರ್ಥಜ್ಞನಾದ ಶರ್ಯಾತಿಯು ಅಂಗೀರಸ್ಸುಗಳ ಯಜ್ಞದಲ್ಲಿ ದ್ವಿತೀಯಾಹಸ್ಸಿನಲ್ಲಿ ಮಾಡಲ್ಪಡುವ ಕರ್ಮವನ್ನು ತಿಳಿದನು ; ಅದರಿಂದ ಆ ಶರ್ಯಾತಿಯು ವೇದಾರ್ಥತತ್ವಜ್ಞನು ; ಆ ಶರ್ಯಾತಿಗೆ ಪದ್ಮನೇತ್ರೆಯಾದ ಸುಕನ್ಯಾನಾಮಕಳಾದ ಪುತ್ರಿಯುಂಟಾಗಿದ್ದಳು ; ಆ ಕನ್ಯೆಯನ್ನು ಕರೆದುಕೊಂಡು ಆ ಶರ್ಯಾತಿಯು ವನವನ್ನು ಕುರಿತು ಹೋಗಿ ಚ್ಯವನಾಶ್ರಮವನ್ನೈದಿದನು ; ಅನಂತರದಲ್ಲಿ ಆ ಸುಕನ್ಯೆಯು ಸಖೀಯರುಗಳೊಡಗೂಡಿ ಆ ವನದಲ್ಲಿ ಫಲಪುಷ್ಪ ವೃಕ್ಷಗಳನ್ನು ಹುಡಿಕಿಕೊಂಡು ಬಂದು ಹುತ್ತದ ರಂಧ್ರದಲ್ಲಿ ಮಿಂಚಿನ ಹುಳುಗಳಂತೆ ಹೊಳೆಯುತಲಿರುವ ಎರಡು ಜ್ಯೋತಿಸ್ಸುಗಳನ್ನು ಕಂಡು ಆ ಕನ್ಯೆಯು ಬಾಲಭಾವದಿಂದ ದೈವಪ್ರೇರಿತಳಾಗಿ ಬಂದು ಮುಳ್ಳಿನಿಂದ ಹೊಳೆಯುತಲಿರುವ ಜ್ಯೋತಿಸ್ಸುಗಳನ್ನು ಚುಚ್ಚಿದಳು ; ಅಲ್ಲಿಂದ ರಕ್ತವು ಸ್ರವಿಸಿತು ; ಆಗ ಚ್ಯವನಋಷಿಯ ಕಣ್ಣುಗಳನ್ನು ಯಾವಾಗ ಸುಕನ್ಯೆಯು ಚುಚ್ಚಿದಳೋ ಆ ದೋಷದಿಂದ ಆ ಸೇನಾಜನಗಳಿಗೆ ಮಲಮೂತ್ರಗಳು ಬಂಧಿಸಿದವು ; ಶರ್ಯಾತಿಯು ಆ ಅರ್ಥವನ್ನು ನೋಡಿ ಆಶ್ಚರ್ಯಪಟ್ಟು ಭಾರ್ಗವ ಚ್ಯವನ ಋಷಿಗೋಸ್ಕರ ನಮ್ಮ ಸೇನೆಯಲ್ಲಿ ಯಾರಿಂದಲಾದರೂ ಅಪರಾಧವು ಮಾಡಲ್ಪಟ್ಟು ಇದ್ದೀತು ; ಇಲ್ಲದಿ

ದ್ದರೆ ಹೀಗೆ ಬರುವುದಕ್ಕೆ ನಿಮಿತ್ತವಿಲ್ಲವೆಂದು ನುಡಿದನು ; ಆ ಮಾತನ್ನು ಕೇಳಿ ಸುಕನ್ಯೆಯು ತಂದೆಯನ್ನು ಕುರಿತು ಭಯಪಡುತ 'ಎಲೈ ತಂದೆಯೆ, ನಾನು ಬಾಲ್ಯದಿಂದ ಸ್ವಲ್ಪ ಅವಿವೇಕವನ್ನು ಮಾಡಿದೆನು ; ಏನೆಂದರೆ : ಮುಳ್ಳಿನಿಂದ ಹುತ್ತದಲ್ಲಿ ಹೊಳೆಯುತಲಿರುವ ಎರಡು ಜ್ಯೋತಿಸ್ಸುಗಳನ್ನು ಚುಚ್ಚಿದೆನು ' ಎಂದು ನುಡಿದಳು.

" ಈಪ್ರಕಾರವಾದ ಕನ್ಯಾವಾಕ್ಯವನ್ನು ಕೇಳಿ ಶರ್ಯಾತಿಯು ಭಯದಿಂದ ಕಂಪಿತನಾಗಿ ಹುತ್ತದೊಳಗಿರುವ ಚ್ಯವನ ಋಷಿಯನ್ನು ಪ್ರಾರ್ಥಿಸಿ ಸಮಾಧಾನಗೈದನು ; ಅನಂತರದಲ್ಲಿ ಆ ಚ್ಯವನಋಷಿಯ ಅಭಿಪ್ರಾಯವನ್ನು ತಿಳಿದು ಶರ್ಯಾತಿರಾಯನು ಸುಕನ್ಯೆಯೆಂಬ ತನ್ನ ಪುತ್ರಿಯನ್ನು ಚ್ಯವನಋಷಿಗೆ ವಿವಾಹವನ್ನು ಮಾಡಿಕೊಟ್ಟು ಆಮೇಲೆ ಚ್ಯವನಋಷಿಯಿಂದ ಸತ್ಕೃತನಾಗಿ ಅಪ್ಪಣೆ ತೆಗದುಕೊಂಡು ಸೇನಾಸಮೇತನಾಗಿ ತನ್ನ ಪುರಕ್ಕೆ ಬಂದನು ; ಆ ಸುಕನ್ಯೆಯು ಪರಮಕೋಪಿಷ್ಠನಾದ ಪತಿಯಾದ ಚ್ಯವನಋಷಿಯನ್ನೈದಿ ಅಪ್ರಮತ್ತಳಾಗಿ ಪತಿಯ ಚಿತ್ತಾಭಿಪ್ರಾಯವನ್ನು ತಿಳಿದು ಶುಶ್ರೂಷಾದಿಗಳಿಂದ ಸಂತೋಷಪಡಿಸಿದಳು ; ಕೆಲವು ಕಾಲಾಂತರದಲ್ಲಿ ಆಶ್ರಮವನ್ನು ಕುರಿತು ಬಂದ ಅಶ್ವಿನೀದೇವತೆಗಳನ್ನು ಚ್ಯವನಋಷಿಯು ವಿಧ್ಯುಕ್ತವಾಗಿ ಪೂಜಿಸಿ ಆ ದೇವತೆಗಳನ್ನು ಕುರಿತು 'ಎಲೈ ದೇವವೈದ್ಯರಾದ ಅಶ್ವಿನೀದೇವತೆಗಳೇ, ನೀವು ನನಗೆ ಯೌವನ ವಯಸ್ಸನ್ನೀವವರಾಗಬೇಕು ; ಅಸೋಮಪರಾದ ನಿಮಗೆ ಸೋಮಯಾಗದಿಂದ ಸಂತೋಷವನ್ನುಂಟುಮಾಡಿ ಸೋಮದ್ರವ್ಯದಿಂದ ನಿಮ್ಮನ್ನು ಯಜ್ಞದಲ್ಲಿ ಪೂಜೆಯನ್ನು ಮಾಡುತ್ತೇನೆ ; ಸ್ತ್ರೀಯರುಗಳಿಗೆ ಸಂತೋಷಕರವಾದ ಉತ್ತಮವಾದ ಯೌವನವಯಸ್ಸನ್ನು ನನಗೆ ದಯಮಾಡಬೇಕು ' ಎಂದು ಪ್ರಾರ್ಥಿಸಲಾಗಿ ಅಶ್ವಿನೀದೇವತೆಗಳು ' ಹಾಗೇ ಆಗಲಿ ' ಎಂದು ಅಂಗೀಕರಿಸಿ ' ಎಲೈ ಋಷಿಯೆ, ಈ ಮಡುವಿನಲ್ಲಿ ನೀನು ಸ್ನಾನವನ್ನು ಮಾಡು ' ಎಂದು ನುಡಿದರು ; ಈರೀತಿಯಲ್ಲಿ ನುಡಿದು ಜರಾಗ್ರಸ್ತದೇಹನಾದ ಚ್ಯವನ ಋಷಿಯನ್ನು ಕೈಹಿಡುಕೊಂಡು ಸಿದ್ಧನಿರ್ಮಿತವಾದ ಆ ಮಡುವಿನಲ್ಲಿ ಆ ಅಶ್ವಿನೀದೇವತೆಗಳು ಮುಳುಗಿಸಿದರು ; ಆ ಮಡುವಿನದೆಸೆಯಿಂದ ಪದ್ಮಮಾಲೆಗಳನ್ನು ಧರಿಸಿಕೊಂಡು ಕುಂಡಲಗಳಿಂದ ಅಲಂಕೃತರಾದ ಸಮಾನ ವಯೋರೂಪಗಳುಳ್ಳ ಸುಂದರರಾದ ಸ್ತ್ರೀಯರುಗಳಿಗೆ ಮೋಹಿಸುವದಕ್ಕೆ ಯೋಗ್ಯರಾದ ಮೂರುಮಂದಿ ಪುರುಷರು ಎದ್ದು ಬಂದರು ; ಆಗ ಸುಕನ್ಯೆಯು ದಿವ್ಯರೂಪಧಾರಿಗಳಾದ ಸಮಾನಾಕೃತಿಯುಳ್ಳ ಕಾಂತಿಶಾಲಿಗಳಾದ ಆ ಮೂರುಮಂದಿಯನ್ನು ನೋಡಿ ತನ್ನ ಪತಿಯನ್ನು ಗುರುತು ತಿಳಿಯದೆ ಅಶ್ವಿನೀದೇವತೆಗಳನ್ನು ಪ್ರಾರ್ಥಿಸಿದಳು ; ಅಶ್ವಿನೀದೇವತೆಗಳು ಸುಕನ್ಯಾದೇವಿಯ ಪಾತಿವ್ರತ್ಯದಿಂದ ಸಂತೋಷಿತರಾಗಿ ಪತಿಯನ್ನು ತೋರಿಸಿ ಚ್ಯವನ ಋಷಿಯಿಂದ ಅಪ್ಪಣೆಯನ್ನು ತೆಗದುಕೊಂಡು ವಿಮಾನಾರೂಢರಾಗಿ ಸ್ವರ್ಗವನ್ನು ಕುರಿತು ತೆರಳಿದರು ; ಅನಂತರದಲ್ಲಿ ಶರ್ಯಾತಿರಾಯನು ಯಜ್ಞವನ್ನು ಮಾಡುವದಕ್ಕೋಸುಗ ಚ್ಯವನ ಆಶ್ರಮವನ್ನು ಕುರಿತು ಬಂದು ಪುತ್ರಿಯಾದ ಸುಕನ್ಯಾದೇವಿಯ ಬಳಿಯಲ್ಲಿ ಕುಳಿತು ಇರುವ ಸೂರ್ಯಸಮಾನನಾದ ಪುರುಷನನ್ನು ಕಂಡನು ; ಅನಂತರದಲ್ಲಿ ತಂದೆಗೆ ನಮಸ್ಕಾರವನ್ನು ಮಾಡಿ ನಮ್ರಳಾಗಿ ನಿಂತಿರುವ ಪುತ್ರಿಯನ್ನು ನೋಡಿ ಶರ್ಯಾತಿರಾಯನು ಖಿನ್ನಮನಸ್ಕನಾಗಿ ಆಶೀರ್ವಾದವನ್ನು ಮಾಡದೆ 'ಎಲೈ ದುಷ್ಟಚರಿತ್ರೆಯುಳ್ಳವಳೇ, ಇದೇನು ಕೆಟ್ಟಕೆಲಸವನ್ನು ಮಾಡಿದ್ದೀಯೆ ; ಲೋಕನಮಸ್ಕೃತನಾದ ಚ್ಯವನಋಷಿಯು ವೃದ್ಧನೆಂದು ವಂಚಿಸಿ ಜಾರನಾದ ಈ ಪುರುಷನನ್ನೈದುತ್ತೀಯೆ ; ಸತ್ಕುಲದಲ್ಲಿ ಜನಿಸಿದವಳಾದಾಗ್ಯೂ ನೀನು ಕುಲದೂಷಕವಾದ ಈ ವಿಪರೀತ ಬುದ್ಧಿಯನ್ನು ಹ್ಯಾಗೆ ನಿಶ್ಚಯಿಸಿದೆ ; ಲಜ್ಜಾರಹಿತನಾದ ಈ ಜಾರಪುರುಷನನ್ನು ಸಂಭೋಗಿಸುವಳಾಗಿ ಪಿತೃಕುಲವನ್ನೂ ಪತಿಕುಲವನ್ನೂ ಸಹಾ ಅಧೋಗತಿಯನ್ನೈದಿಸುವಳಾಗುತ್ತೀಯೆ ' ಎಂಬದಾಗಿ ಮಾತನಾಡಿಸುತಲಿರುವ ತಂದೆಯಾದ ಶರ್ಯಾತಿರಾಯನನ್ನು ಕುರಿತು ಸುಕನ್ಯೆಯು ಮುಗುಳುನಗೆಯಿಂದ ಪ್ರಕಾಶಮಾನವಾದ ಮುಖವುಳ್ಳವಳಾಗಿ 'ಎಲೈ ತಂದೆಯೆ, ಭೃಗುನಂದನನಾದ ನಿನ್ನ ಅಳಿಯನಾದ ಚ್ಯವನಋಷಿಯೇ ಈತನು ' ಮತ್ತೊಬ್ಬನಲ್ಲವೆಂದು ನುಡಿದು ಚ್ಯವನಋಷಿಯ ವ್ಯಾಪಾರವನ್ನೆಲ್ಲ ಕ್ರಮದಿಂದ ಹೇಳಿದಳು ; ಆ ವೃತ್ತಾಂತವನ್ನು ಕೇಳಿ ಶರ್ಯಾತಿಯು ಆಶ್ಚರ್ಯಪಟ್ಟು ಸಂತೋಷದಿಂದ ಪುತ್ರಿಯನ್ನಾಲಿಂಗನೆಯನ್ನು ಮಾಡಿಕೊಂಡನು ; ಚ್ಯವನಋಷಿಯು ಶರ್ಯಾತಿರಾಯನ ಕೈಯಲ್ಲಿ ಸೋಮಯಾಗವನ್ನು ಮಾಡಿಸಿದನು; ಅಸೋಮಪರಾದ ಅಶ್ವಿನೀ ದೇವತೆಗಳನ್ನು ಸೋಮದ್ರವ್ಯದಿಂದ ಸಂತೋಷಪಡಿಸಿ

ಅವರಿಗೂ ಸೋಮಪಾನವನ್ನು ಮಾಡಿಸಿದನು ; ಆಗ ದೇವೇಂದ್ರನು ಅಸೋಮಪರಾದ ಅಶ್ವಿನೀದೇವತೆಗಳಿಗೆ ತನ್ನ ತಪಸ್ಸಿನ ಶಕ್ತಿಯಿಂದ ಸೋಮಪಾನವನ್ನು ಮಾಡಿಸಿದ ಚ್ಯವನಋಷಿಯನ್ನು ಕುರಿತು ಕೋಪವನ್ನು ಮಾಡಿ ಚ್ಯವನನನ್ನು ಸಂಹರಿಸಲೋಸುಗ ವಜ್ರಾಯುಧವನ್ನೆತ್ತಿದನು ; ಆಗ ಚ್ಯವನಋಷಿಯು ವಜ್ರಸಮೇತವಾದ ಇಂದ್ರನ ಭುಜವನ್ನು ಸ್ತಂಭಿಸಿದನು ; ವೈದ್ಯರಾದ ಅಶ್ವಿನೀ ದೇವತೆಗಳು ಅಪವಿತ್ರರಾದಕಾರಣ ಸೋಮದ್ರವ್ಯಕ್ಕೆ ಯೋಗ್ಯರಲ್ಲವೆಂದು ಪೂರ್ವದಲ್ಲಿ ಅಶ್ವಿನೀದೇವತೆಗಳಿಗೆ ಸೋಮಯಾಗವನ್ನು ಯಾರು ಸಮ್ಮತಿಸದೇ ಇದ್ದರೋ ಅವರೆಲ್ಲರೂ ಆಗ ಸಮ್ಮತಿಪಟ್ಟು ಅಶ್ವಿನೀದೇವತೆಗಳನ್ನು ಸೋಮಯೋಗ್ಯರನ್ನಾಗಿ ಅಂಗೀಕರಿಸಿದರು ; ಉತ್ತಾನಬರ್ಹಿ ಆನರ್ತ ಭೂರಿಷೇಣ ಎಂಬದಾಗಿ ಮೂರುಮಂದಿ ಪುತ್ರರು ಶರ್ಯಾತಿರಾಯನಿಗೆ ಉಂಟಾದರು ; ಆನರ್ತನೆಂಬವನಿಗೆ ರೇವತನು ಹುಟ್ಟಿದನು ; ಆ ರೇವತನು ಸಮುದ್ರಮಧ್ಯದಲ್ಲಿ ಕುಶಸ್ಥಲಿ ಎಂಬ ನಾಮಧೇಯವುಳ್ಳ ನಗರವನ್ನು ನಿರ್ಮಿಸಿ ಆ ನಗರದಲ್ಲಿದ್ದುಕೊಂಡು ಶತ್ರುಸಂಹಾರಕನಾಗಿ ಆನರ್ತದೇಶ ಮೊದಲಾದ ಅನೇಕ ದೇಶಗಳನ್ನನುಭವಿಸಿದನು ; ಆ ರೇವತರಾಯನಿಗೆ ಕಕುದ್ಮಿಯೆಂಬವನೇ ಮೊದಲಾದ ನೂರುಮಂದಿ ಪುತ್ರರು ಜನಿಸಿದರು ; ಕಕುದ್ಮಿರಾಯನು ತನ್ನ ಪುತ್ರಿಯಾದ ರೇವತೀದೇವಿಯನ್ನು ಕರಕೊಂಡು ಬ್ರಹ್ಮದೇವನ ಸಮೀಪಕ್ಕೆ ಪುತ್ರಿಗೆ ವರನಿಶ್ಚಯಾರ್ಥವಾಗಿ ತೆರಳಿಹೋದನು ; ಆ ಬ್ರಹ್ಮಸಭೆಯಲ್ಲಿ ಗಾಂಧರ್ವಗಾನವಾಗುತಿರಲಾಗಿ ಸಮಯ ನಿರೀಕ್ಷಣವನ್ನು ಮಾಡಿಕೊಂಡು ಬಂದುಕ್ಷಣ ಕಾದಿದ್ದನು ; ಅನಂತರದಲ್ಲಿ ಕಕುದ್ಮಿರಾಯನು ಆ ಗಾನಪೂರ್ತಿಯಾದಮೇಲೆ ಬ್ರಹ್ಮನಿಗೆ ನಮಸ್ಕರಿಸಿ ತನ್ನ ಅಭಿಪ್ರಾಯವನ್ನು ವಿಜ್ಞಾಪನವನ್ನುಗೈದನು ; ಆ ವಾಕ್ಯವನ್ನು ಕೇಳಿ ಬ್ರಹ್ಮದೇವನು ಮುಗುಳುನಗೆಯಿಂದ 'ಎಲೈ ಕಕುದ್ಮಿರಾಯನೆ, ನೀನು ಭೂಲೋಕದಿಂದ ಇಲ್ಲಿಗೆ ಬರುವಾಗ ಯಾವ ಯಾವ ಅರಸುಗಳನ್ನು ಮನಸ್ಸಿನಲ್ಲಿ ಉದ್ದೇಶವನ್ನು ಮಾಡಿಕೊಂಡು ಬಂದೆಯೋ ಅವರೆಲ್ಲರೂ ಕಾಲಾಧೀನರಾದರು ; ಅವರ ಪುತ್ರಪೌತ್ರರ ವಂಶಗಳು ಕೂಡ ಅತಿಕ್ರಾಂತಗಳಾದವು ; ಈಗ ಇಪ್ಪತ್ತೇಳು ಚತುರ್ಯುಗಗಳು ಅತಿಕ್ರಮಿಸಿವವು ; ಅದುಕಾರಣ ನೀನು ಭೂಲೋಕಕ್ಕೆಹೋಗು ; ಆ ಭೂಲೋಕದಲ್ಲಿ ಭಗವದಂಶಾವತಾರನಾದ ಬಲರಾಮನು ಇದ್ದಾನೆ ; ನಿನ್ನ ಕನ್ಯೆಯನ್ನು ಪುರುಷಶ್ರೇಷ್ಠನಾದ ಆ ಬಲರಾಮನಿಗೆ ಕೊಡು ; ಭೂತಭಾವನನಾದ ಭಗವಂತನು ಭೂಭಾರ ಪರಿಹಾರಾರ್ಥವಾಗಿ ತನ್ನ ಅಂಶದಿಂದ ಅವತರಿಸಿದ್ಧಾನೆ' ಎಂದು ನುಡಿದನು.

"ಈರೀತಿಯಲ್ಲಿ ಬ್ರಹ್ಮದೇವನಿಂದ ಆಜ್ಞಪ್ತನಾದ ಕಕುದ್ಮಿರಾಯನು ಯಕ್ಷಾದಿಗಳ ಉಪದ್ರವದಿಂದ ಭ್ರಾತೃಗಳಿಂದ ಪೂರ್ವದಲ್ಲಿ ಪರಿತ್ಯಕ್ತವಾದ ಆ ಕುಶಸ್ಥಲೀಯೆಂಬ ನಗರವನ್ನು ಕುರಿತು ಬಂದು ಸುಂದರಾಂಗಿಯಾದ ಆ ಕನ್ಯೆಯನ್ನು ಬಲರಾಮನಿಗೆ ಕೊಟ್ಟು ಬದರಿಕಾಶ್ರಮದಲ್ಲಿ ತಪವನ್ನುಗೈಯಲೋಸುಗ ನರನಾರಾಯಣಾಶ್ರಮವನ್ನು ಕುರಿತು ಹೋದನು."

೪ನೇ ಅಧ್ಯಾಯ.

ಅಂಬರೀಷರಾಯನ ಚರಿತ್ರೆ.

"ಎಲೈ ಪರೀಕ್ಷಿದ್ರಾಯನೆ, ನಾಭಾಗರಾಯನ ವಂಶವನ್ನುಕೇಳು : ನಾಭಾಗರಾಯನ ಪುತ್ರನು ನಾಭಾಗನು ; ಆ ನಾಭಾಗರಾಯನಿಗೆ ನಿಷ್ಠನು ; ಈತನು ವಿದ್ಯಾರ್ಥವಾಗಿ ನೈಷ್ಠಿಕಬ್ರಹ್ಮಚಾರಿಯಾಗಿ ಗುರುಕುಲದಲ್ಲೇ ವಾಸವನ್ನು ಮಾಡಿಕೊಂಡಿರುವ ಕಾಲದಲ್ಲಿ ಜ್ಯೇಷ್ಠರಾದ ಭ್ರಾತೃಗಳು ಪಿತೃಧನವನ್ನು ತಾವು ಪರಸ್ಪರವಾಗಿ ಭಾಗವನ್ನು ಮಾಡಿಕೊಳ್ಳುವ ಕಾಲದಲ್ಲಿ ನಿಷ್ಠನಾದ ನಾಭಾಗರಾಯನನ್ನು ಮರತು ತಾವೇ ವಿಭಾಗವನ್ನು ಮಾಡಿಕೊಂಡರು ; ಅನಂತರದಲ್ಲಿ ಗುರುಕುಲದಿಂದ ಬಂದು ನಾಭಾಗರಾಯನು ತನ್ನ ಭಾಗವೆಲ್ಲಿ ಎಂದು ಭ್ರಾತೃಗಳನ್ನು ಕೇಳಲಾಗಿ ಭಾಗಕಾಲದಲ್ಲಿ ನೀನು ಇಲ್ಲದ್ದರಿಂದ ನಿನ್ನನ್ನು ಮರತು ನಾವೇ ವಿಭಾಗವನ್ನು ಮಾಡಿಕೊಂಡೆವು ; ನಮ್ಮ ತಂದೆ

ಬಳಿಕ ನಾಭಾಗರಾಯನೆ ನಿನ್ನ ಭಾಗವೆಂದು ಪೇಳಿದರು ; ಆಗ ನಾಭಾಗನು ಪಿತೃಸಮೀಪಕ್ಕೆ ಪೋಗಿ ನನ್ನ ಜ್ಯೇಷ್ಠಭ್ರಾತೃಗಳು ನನ್ನನ್ನೇ ನನ್ನ ಭಾಗವನ್ನಾಗಿ ಕಲ್ಪಿಸಿದ್ದಾರೆ ; ಇದು ಏನೆಂದು ಕೇಳಲಾಗಿ ಪಿತೃವಾದ ನಾಭಾಗರಾಯನು 'ಎಲೈ ಪುತ್ರನೆ, ಅದು ವಂಚನೆಯೋ ಹೊರತು ಸತ್ಯವಲ್ಲ. ನನ್ನನ್ನು ಭಾಗವನ್ನಾಗಿ ಕಲ್ಪಿಸಿದ್ದರೆ ನನ್ನಿಂದ ನಿನಗೆ ಜೀವನೋಪಾಯವಾದೀತೆ ; ಆದಾಗ್ಯೂ ನಾನೇ ನಿನ್ನ ಭಾಗವಾದಮೇಲೆ ನಿನಗೆ ಜೀವನೋಪಾಯವನ್ನು ನಾನು ಪೇಳುತ್ತೇನೆ ! ಎಲೈ ಪ್ರಾಜ್ಞನಾದ ಪುತ್ರನೆ, ಈ ಅಂಗೀರಸ್ಸುಗಳು ಸತ್ರಯಾಗವನ್ನು ಮಾಡುತ್ತಾರೆ ; ಆ ಯಾಗದಲ್ಲಿ ಆರಾರು ದಿವಸಗಳಿಗೆ ಬಂದೊಂದು ದೀಕ್ಷಾಕ್ರಮದಿಂದ ಸತ್ರಯಾಗವು ನಡೆಯುವ ಕಾಲದಲ್ಲಿ ಆರನೇ ದಿವಸ ಕರ್ಮಾನುಷ್ಠಾನದಲ್ಲಿ ಕೆಲವು ಸೂಕ್ತಮಂತ್ರ ವಿಶೇಷಗಳನ್ನರಿಯದೇ ಅಂಗೀರಸ್ಸುಗಳು ಬುದ್ಧಿಶಾಲಿಗಳಾದಾಗ್ಯೂ ಮೋಹಪಡುತ್ತಾರೆ ; ಆಗ ನೀನು ವಿಶ್ವೇದೇವತಾಕಗಳಾದ ಎರಡು ಸೂಕ್ತಗಳನ್ನು ಅವರಿಗೆ ಪಾಠಮಾಡಿಸು ; ಆಗ ಆ ಅಂಗೀರಸ್ಸುಗಳು ಯಜ್ಞಾವಸಾನದಲ್ಲಿ ಸ್ವರ್ಗಕ್ಕೆ ಹೋಗುವಾಗ ಯಜ್ಞವಾದ ಧನವನ್ನು ನಿನಗೆ ಕೊಟ್ಟು ಹೋಗುತ್ತಾರೆ ; ಆ ಧನವನ್ನು ತೆಗೆದುಕೊಂಡು ನೀನು ಜೀವನವನ್ನು ಮಾಡು' ಎಂಬದಾಗಿ ಪೇಳಲ್ಪಟ್ಟ ಪಿತೃವಾಕ್ಯವನ್ನು ಕೇಳಿ ಹಾಗೆಯೇ ಮಾಡಿದನು ; ಆದೇ ಪ್ರಕಾರಕ್ಕೆ ಅಂಗೀರಸ್ಸುಗಳು ಯಜ್ಞಶೇಷ ಧನವನ್ನು ನಾಭಾಗನಿಗೆ ಕೊಟ್ಟು ತಾವೆಲ್ಲರೂ ಸ್ವರ್ಗವನ್ನು ಕುರಿತು ತೆರಳಿದರು ; ಆ ಧನವನ್ನು ಸ್ವೀಕರಿಸುತಲಿರುವ ನಾಭಾಗರಾಯನ ಸಮೀಪಕ್ಕೆ ಕೃಷ್ಣಶರೀರವುಳ್ಳ ಒಬ್ಬ ಪುರುಷನು ಬಂದನು ; ಆತನೇ ಶ್ರೀರುದ್ರನು ; ಅಲ್ಲಿಗೆ ಬಂದು ಈ ಧನವು ನನ್ನದು ; ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ಎಂದು ನುಡಿದನು ; ಆ ಮಾತನ್ನು ಕೇಳಿ ನಾಭಾಗನು ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ನಾನೇ ತೆಗೆದುಕೊಳ್ಳುತ್ತೇನೆಂದು ನುಡಿದನು ; ಆಗ ಶ್ರೀರುದ್ರನು ಪುನಶ್ಚ 'ಎಲೈ ನಾಭಾಗನೇ, ಯಜ್ಞಶೇಷ ಧನವು ನನ್ನದೋ ನಿನ್ನದೋ ನಿನ್ನ ಮನುವನ್ನೇ ಕೇಳು' ಎಂದು ನುಡಿದನು. ನಾಭಾಗನು ಮನುವನ್ನು ಕೇಳಲಾಗಿ ಆ ಮನುವು ಶ್ರೀ ರುದ್ರನಿಗೆ ಸಲ್ಲತಕ್ಕದ್ದೆಂದು ನುಡಿದು 'ಎಲೈ ನಾಭಾಗನೇ, ಸಮಸ್ತ ಋಷಿಗಳು ಯಜ್ಞಶೇಷವು ಶ್ರೀ ರುದ್ರನದೇ ಸರಿಯೆಂದು ಪೇಳುವರು ; ಈಶ್ವರನಾದ ಶ್ರೀ ರುದ್ರನಿಗೆ ಸರ್ವವೂ ಸಲ್ಲತಕ್ಕದ್ದು ; ಯಜ್ಞಶೇಷವಾದ ಧನವು ಸಲ್ಲತಕ್ಕದ್ದಾದ ವಿಷಯದಲ್ಲಿ ವಿವಾದವೇನು' ಎಂದು ನುಡಿದನು. ಆ ಮಾತನ್ನು ಕೇಳಿ ನಾಭಾಗರಾಯನು ಶ್ರೀ ರುದ್ರಮೂರ್ತಿಗೆ ನಮಸ್ಕರಿಸಿ 'ಎಲೈ ಸ್ವಾಮಿಯೇ, ಈ ಯಜ್ಞಶೇಷ ಧನವು ನಿನ್ನದೇ ಸರಿಯೆಂದು ಮನುವು ಪೇಳಿದನು ; ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ನಿನಗೆ ಶಿರಸಾ ನಮಸ್ಕರಿಸಿ ಪ್ರಾರ್ಥನೆಗೈಯುತ್ತೇನೆ' ಎಂದು ವಿಜ್ಞಾಪನೆಗೈಯುತಲಿರುವ ನಾಭಾಗನನ್ನು ಕುರಿತು ಶ್ರೀ ರುದ್ರಮೂರ್ತಿಯು 'ಎಲೈ ನಾಭಾಗನೇ, ನಿನ್ನ ತಂದೆಯಾದ ಮನುವು ಯಾವ ಧರ್ಮವನ್ನು ಪೇಳಿದನೋ ಆ ಅರ್ಥವನ್ನೇ ನೀನು ಯಥಾರ್ಥವಾಗಿ ಪೇಳುತ್ತೀಯೆ ; ಅದುಕಾರಣ ಮಂತ್ರದ್ರಷ್ಟೃವಾದ ನಿನಗೆ ಪರಬ್ರಹ್ಮವಿಷಯಕವಾದ ತತ್ವಜ್ಞಾನವನ್ನು ಉಪದೇಶಗೈಯುತ್ತೇನೆ ; ಅದುಕಾರಣ ಮಹಾತ್ಮರು ವಿಪತ್ತಿನಲ್ಲಿಯೂ ಕೂಡ ಅಸತ್ಯವನ್ನು ಪೇಳಬಾರದು ; ನಿನ್ನ ಸತ್ಯದಿಂದ ಸಂತುಷ್ಟನಾದ ನಾನು ನಿನ್ನ ಇಷ್ಟಾರ್ಥವನ್ನೆಲ್ಲವನ್ನೂ ಕೊಡುತ್ತೇನೆ ; ಅದರಿಂದ ಈ ಯಜ್ಞಶೇಷ ಧನವನ್ನೆಲ್ಲವನ್ನೂ ನಿನಗೆ ಕೊಡುತ್ತೇನೆಂದು ಸತ್ಯಪ್ರಿಯನಾದ ಶ್ರೀ ರುದ್ರಮೂರ್ತಿಯು ನುಡಿದು ಅಂತರ್ಧಾನವನ್ನೈದಿದನು ! ಎಲೈ ಪರೀಕ್ಷಿದ್ರಾಯನೇ, ಯಾವ ಪುರುಷನು ಭಕ್ತಿಯುಕ್ತನಾಗಿ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಈ ಉಪಾಖ್ಯಾನವನ್ನು ಸ್ಮರಿಸುತ್ತಾನೆಯೋ ಆ ಪುರುಷನು ಪ್ರಾಜ್ಞನಾಗಿ ಮಂತ್ರಜ್ಞನಾಗಿ ಉತ್ತಮಗತಿಯನ್ನೈದುವನು ; ನಾಭಾಗರಾಯನಿಗೆ ಅಂಬರೀಷರಾಯನು ಪುತ್ರನು ; ಮಹಾ ಭಾಗವತೋತ್ತಮನಾದ ಕೃತಕೃತ್ಯನಾದ ಅಂಬರೀಷರಾಯನನ್ನು ಪರಿಹರಿಸಲಶಕ್ಯವಾದ ಬ್ರಾಹ್ಮಣಪ್ರಯುಕ್ತವಾದ ಅಭಿಚಾರ ದೇವತೆಯು ಮುಟ್ಟಲಾರದೇ ಹೋಯಿತು'' ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಪೂಜ್ಯನಾದ ಶುಕಾಚಾರ್ಯನೇ, ಮಹಾತ್ಮನಾದ ಅಂಬರೀಷರಾಯನ ಚರಿತ್ರವನ್ನು ಕೇಳಲಿಚ್ಛೈಸುತ್ತೇನೆ ; ಅಪರಿಹಾರ್ಯವಾದ ಬ್ರಹ್ಮದಂಡವು ಅಂಬರೀಷರಾಯನನ್ನು ಹ್ಯಾಗೆ [illegible]" ಎಂದು ಕೇಳಿದನು.

ಆ ರಾಜವಾಕ್ಯವನ್ನು ಕೇಳಿ ಶುಕಾಚಾರ್ಯನು “ ಎಲೈ ಅರಸೆ, ಮಹಾತ್ಮನಾದ ಅಂಬರೀಷರಾಯನು ಸಪ್ತದ್ವೀ
ಪಗಳುಳ್ಳ ಭೂಮಂಡಲವಂ ಸ್ಥಿರವಾದ ಐಶ್ವರ್ಯಲಕ್ಷ್ಮಿಯುಂ ಸರ್ವೋತ್ತಮವಾದ ವಿಭವವಂ ಸಹ ಅನುಭವಿಸಿ ಅತಿ
ದುರ್ಲಭವಾದ ಉತ್ತಮ ವಸ್ತುಗಳನ್ನೆಲ್ಲವನ್ನು ಸ್ವಪ್ನವಸ್ತುಗಳಂತೆ ಅನಿತ್ಯವನ್ನಾಗಿ ತಿಳಿದು ವಿರಕ್ತನಾದನು ;
ವಿನು ಕಾರಣವೆಂದರೆ ; ಪುರುಷನು ವಿಭವಾದಿಗಳನ್ನು ಅನುಭವಿಸುವ ಕಾಲದಲ್ಲಿಯೂ ಮದಾಂಧನಾಗಿ ಮೋಹದಲ್ಲಿ
ಮುಳುಗುತ್ತಾನೆ ; ಆ ವಿಭವಗಳು ನಷ್ಟಗಳಾದರೂ ವ್ಯಸನದಿಂದ ಮೋಹಗ್ರಸ್ತನಾಗುತ್ತಾನೆ ; ಆದುದರಿಂದ ಭಗ
ವಂತನಾದ ವಾಸುದೇವನಲ್ಲಿಯೂ ಅವನ ಭಕ್ತರಾದ ಸಾಧುಗಳಲ್ಲಿಯೂ ಪರಮಭಕ್ತಿ ಮಾಡುವವನಾಗಿ ಪ್ರಾಜ್ಞನು
ಸರ್ವ ಪ್ರಪಂಚವನ್ನು ಮಣ್ಣು ಹೆಂಟೆಯಂತೆ ತುಚ್ಛವನ್ನಾಗಿ ಭಾವಿಸುವನು ಎಂದು ಶಿಕ್ಷಿಯಿಸಿ ಅಂಬರೀಷರಾಯನ
ಭಗವದ್ಭಕ್ತಿಯುಂ ಮಾಡಿದನು ; ಮನಸ್ಸನ್ನು ಶ್ರೀಕೃಷ್ಣನ ಪದಾಂಬುಜಗಳಲ್ಲಿರಿಸಿದನು ; ವಾಕ್ಕುಗಳನ್ನು ವೈಕುಂ
ಠನ ಗುಣಗಳ ಕೀರ್ತನಗಳಲ್ಲಿಯೇ ವಿನಿಯೋಗಿಸಿದನು ; ಹಸ್ತಗಳನ್ನು ಶ್ರೀಹರಿಯ ಆಯತನಂಗಳ ಸನ್ಮಾರ್ಜ
ನಾದಿಗಳಲ್ಲಿಯೇ ಉಪಯೋಗಿಸಿದನು, ಶ್ರೋತ್ರಗಳಂ ಅಚ್ಯುತನ ಕಥಾಶ್ರವಣದಲ್ಲಿ ನಿಲ್ಲಿಸಿದನು ; ಮುಕುಂದನ
ಮೂರ್ತಿಗಳ ದರ್ಶನದಲ್ಲಿ ನೇತ್ರಗಳನ್ನುಪಯೋಗಿಸಿದನು ; ಪರಮಾತ್ಮನ ಪಾದಕಮಲದ ಗಂಧವನ್ನು ಗ್ರಹಿಸುವು
ದರಲ್ಲಿ ಘ್ರಾಣೇಂದ್ರಿಯವಂ ನಿಲ್ಲಿಸಿದನು ; ಭಗವದ್ಭಕ್ತರ ಶರೀರಸ್ಪರ್ಶದಲ್ಲಿ ತನ್ನ ಶರೀರವನ್ನು ವಿನಿಯೋಗಿಸಿದನು ; ಭಗ
ವದರ್ಪಿತಗಳಾದ ಅನ್ನಾದಿಗಳಲ್ಲಿ ರಸನೇಂದ್ರಿಯವಂ ನಿಲ್ಲಿಸಿದನು ; ಭಗವಂತನ ಕ್ಷೇತ್ರಂಗಳ ಯಾತ್ರಾರ್ಥವಾಗಿ ಪಾ
ದಗಳನ್ನುಪಯೋಗಿಸಿದನು ; ಹೃಷೀಕೇಶನ ಪಾದಕ್ಕೆ ನಮಸ್ಕಾರಾರ್ಥವಾಗಿ ಶಿರಸ್ಸನ್ನು ಮಾಡಿದನು ; ಭಗವಂತನ
ನಿರ್ಮಾಲ್ಯವಾದ ಸ್ರಕ್ಚಂದನಾದಿಗಳಂ ದಾಸಭಾವದಿಂ ಗ್ರಹಿಸಿದನು ; ಕಾಮಭೋಗಾರ್ಥವಾಗಿ ಗ್ರಹಿಸಲಿಲ್ಲ ; ಉತ್ತಮ!
ಶ್ಲೋಕನಾದ ಭಗವಂತನ ಭಕ್ತಜನರಲ್ಲಿ ಅತ್ಯಂತ ಪ್ರೀತಿಯನ್ನು ಮಾಡಿದನು ; ಅಂಬರೀಷರಾಯನು ಈ ರೀತಿಗೆ
ಯಲ್ಲಿ ಸಮಸ್ತ ಕರ್ಮಸಮೂಹವನ್ನು ಯಜ್ಞಪತಿಯಾದ ಭಗವಂತನಾದ ಶ್ರೀಹರಿಯಲ್ಲಿ ಸಮರ್ಪಿಸಿ ಸರ್ವಪ್ರಾಣಿ
ಗಳಲ್ಲಿಯೂ ಪರಮಾತ್ಮಭಾವನೆಯನ್ನು ಮಾಡಿ ಭಗವದ್ಭಕ್ತರಾದ ಬ್ರಾಹ್ಮಣರಿಂದ ಶಿಕ್ಷಿತನಾಗಿ ಭೂಮಿಯನ್ನು
ಪರಿಪಾಲಿಸಿದನು ; ಈ ಅಂಬರೀಷರಾಯನು ಸರಸ್ವತೀ ನದೀಪ್ರಾಂತ್ಯದಲ್ಲಿ ನಿರ್ಜಲಪ್ರದೇಶದಲ್ಲಿ ಮಹಾ ವಿಭವನಾಗಿ
ಅಂಗದ ವೃದ್ಧಿಯನ್ನೈದಿದ ಸಾಂಗೋಪಾಂಗಗಳಾದ ದಕ್ಷಿಣಾಸಮೇತಗಳಾದ ಮತ್ತು ವಶಿಷ್ಠರೂ ಗೌತಮರೂ ಅಸಿ
ತರೂ ಮೊದಲಾದ ಮಹಾ ಋಷಿಗಳಿಂದ ಚೆಳೆಯಿಸಲ್ಪಟ್ಟ ಅಶ್ವಮೇಧ ಕ್ರತುಗಳಿಂದ ಯಜ್ಞಪತಿಯಾದ ಈ ... ಸುವನಾಗಿ
... ಪೂಜಿಸಿದನು. ಈ ಅಂಬರೀಷರಾಯನ ಕ್ರತುಗಳಲ್ಲಿ ಸದಸ್ಯನಲ್ಲಿರುವ ಋತ್ವಿಕ್ಕುಗಳು ಮೊದಲಾದ ... ಊ ಶೀಲದಿಂದ
... ದಿವ್ಯವಸ್ತ್ರಧಾರಿಗಳಾಗಿ ದೇವತೆಗಳಿಗೆ ಸಮಾನರಾಗಿ ನಿಮೇಷರಹಿತರಾಗಿ ಕಾಣಲ್ಪಟ್ಟರು ; ದೇವತೆ...
...ದಿಂದಲೇ ರೆಪ್ಪೆಹುಯ್ಯೋಣವಿಲ್ಲ ; ಈ ಸಭಾಜನರಿಗೆ ಆಶ್ಚರ್ಯಕರವಾದ ಅಂಬರೀಷರಾಯನ ...
...ಪ್ಪೆ ಹುಯ್ಯೋಣವಂ ಮರತಿರುವುದರಿಂದ ದೇವತೆಗಳಿಗೆ ಸಮಾನರಾಗಿದ್ದರು ; ಈ ಅಂಬರೀಷ...
...ನ ಜನರು ಉತ್ತಮಶ್ಲೋಕನಾದ ಭಗವಂತನ ಚರಿತ್ರವನ್ನು ಶ್ರವಣ ಪಠಣಂಗಳಂಗೈಯ...
...ನ್ನು ಕೂಡ ಅಪೇಕ್ಷಿಸಲಿಲ್ಲ ; ಮುಕುಂದನನ್ನೇ ಹೃದಯದಲ್ಲಿ ನೋಡುತಲಿರುವ ಆ ಅಂಬರೀಷ...ದ್ದು.
...ಡ ದುರ್ಲಭಂಗಳಾದಾಗ್ಯೂ ಅಂತಹ ವಿಷಯಂಗಳು ಬ್ರಹ್ಮಾನಂದ ಸೌಖ್ಯಗಳಿಂದ ತಿರಸ... ...ವಾದ ವಿಧಾನಂಗಳಿಂದ
...ತೋಷಕರಗಳಾಗಲಿಲ್ಲ! ಎಲೈ ಅರಸೆ, ಆ ಅಂಬರೀಷರಾಯನು ಈಪ್ರಕಾರವಾದ ಭಕ್ತಿ... ...ಆತ್ಮನನ್ನಾರಾಧಿಸಿದನು ;
...ದಲೂ ಸ್ವಧರ್ಮದಿಂದಲೂ ಶ್ರೀಹರಿಯನ್ನು ಆರಾಧಿಸಿ ಮೆಲ್ಲಮೆಲ್ಲಗೆ ಸರ್ವಕಾಮಗಳ... ...ಮಡಿಕ್ಕನ್ನೂ ಉದ್ಗಾತೃವಿಗೆ
...ಲ್ಲಿಯೂ ಸ್ತ್ರೀರುಗಳಲ್ಲಿಯೂ ಪುತ್ರರಲ್ಲಿಯೂ ಬಂಧುಗಳಲ್ಲಿಯೂ ಗಜ ರಥ ತುರಗ... ...ಮಿಯನ್ನು ಪ್ರತಿಗ್ರಹಿಸುವುದ
...ಗಳಾದ ರತ್ನಗಳು ಭೂಷಣಗಳು ದುಕೂಲಗಳು ಮೊದಲಾದ ಉತ್ತಮವಾದ ವ... ...ಮಿಯನ್ನಾಚಾರ್ಯನಿಗೆ ಕೊ
...ಡಾರಗಳಲ್ಲಿಯೂ ಕೂಡಾ ತುಚ್ಛಗಳೆಂಬ ಬುದ್ಧಿಯನ್ನು ಮಾಡಿದನು ; ಭಗ... ...ನ್ನು ಹೊರ್ತು ಸಮಸ್ತವಾದ ಧನ
...ಕಾಂತ ಭಕ್ತಿಯಿಂದ ಪ್ರೀತನಾಗಿ ಭಯವನ್ನು ಪರಿಹರಿಸುವ ಶತ್ರುನಾಶಕವಾದ ಚಕ... ...ಗಿ ಸಾಮಂಗಳೊಪಯುಕ್ತಗ
...ಟ್ಟನು! ಎಲೈ ಅರಸೆ, ಆ ಅಂಬರೀಷರಾಯನು ಶ್ರೀಹರಿಯನ್ನಾರಾಧಿಸಲಿಚ್ಛೆಯ...

ಬರುವ ನಾಭಾಗರಾಯನೆ ನಿನ್ನ ಭಾಗವೆಂದು ಹೇಳಿದರು ; ಆಗ ನಾಭಾಗನು ಪಿತೃಸಮೀಪಕ್ಕೆ ಹೋಗಿ ನನ್ನ ಜ್ಯೇಷ್ಠಭ್ರಾತೃಗಳು ನಿನ್ನನ್ನೇ ನನ್ನ ಭಾಗವನ್ನಾಗಿ ಕಲ್ಪಿಸಿದ್ದಾರೆ ; ಇದು ಏನೆಂದು ಕೇಳಲಾಗಿ ಪಿತೃವಾದ ನಾಭಾಗರಾಯನು 'ಎಲೈ ಪುತ್ರನೆ, ಅದು ವಂಚನೆಯೇ ಹೊರತು ಸತ್ಯವಲ್ಲ. ನನ್ನನ್ನು ಭಾಗವನ್ನಾಗಿ ಕಲ್ಪಿಸಿದ್ದರೆ ನನ್ನಿಂದ ನಿನಗೆ ಜೀವನೋಪಾಯವಾದೀತೆ ; ಆದಾಗ್ಯೂ ನಾನೇ ನಿನ್ನ ಭಾಗವಾದಮೇಲೆ ನಿನಗೆ ಜೀವನೋಪಾಯವನ್ನು ನಾನು ಹೇಳುತ್ತೇನೆ ! ಎಲೈ ಪ್ರಾಜ್ಞನಾದ ಪುತ್ರನೆ, ಈ ಅಂಗೀರಸ್ಸುಗಳು ಸತ್ರಯಾಗವನ್ನು ಮಾಡುತ್ತಾರೆ ; ಆ ಯಾಗದಲ್ಲಿ ಆರಾರು ದಿವಸಗಳಿಗೆ ಬಂದೊಂದು ದೀಕ್ಷಾಕ್ರಮದಿಂದ ಸತ್ರಯಾಗವು ನಡೆಯುವ ಕಾಲದಲ್ಲಿ ಆರನೇ ದಿವಸ ಕರ್ಮಾನುಷ್ಠಾನದಲ್ಲಿ ಕೆಲವು ಸೂಕ್ತಮಂತ್ರವಿಶೇಷಗಳನ್ನರಿಯದೇ ಅಂಗೀರಸ್ಸುಗಳು ಬುದ್ಧಿಶಾಲಿಗಳಾದಾಗ್ಯೂ ಮೋಹಪಡುತ್ತಾರೆ ; ಆಗ ನೀನು ವಿಶ್ವೇದೇವತಾಕಗಳಾದ ಎರಡು ಸೂಕ್ತಗಳನ್ನು ಅವರಿಗೆ ಪಾಠಮಾಡಿಸು ; ಆಗ ಆ ಅಂಗೀರಸ್ಸುಗಳು ಯಜ್ಞಾವಸಾನದಲ್ಲಿ ಸ್ವರ್ಗಕ್ಕೆ ಹೋಗುವಾಗ ಯಜ್ಞವಾದ ಧನವನ್ನು ನಿನಗೆ ಕೊಟ್ಟು ಹೋಗುತ್ತಾರೆ ; ಆ ಧನವನ್ನು ತೆಗೆದುಕೊಂಡು ನೀನು ಜೀವನವನ್ನು ಮಾಡು' ಎಂಬದಾಗಿ ಹೇಳಲ್ಪಟ್ಟ ಪಿತೃವಾಕ್ಯವನ್ನು ಕೇಳಿ ಹಾಗೆಯೇ ಮಾಡಿದನು ; ಆದೇಪ್ರಕಾರಕ್ಕೆ ಅಂಗೀರಸ್ಸುಗಳು ಯಜ್ಞಶೇಷ ಧನವನ್ನು ನಾಭಾಗನಿಗೆ ಕೊಟ್ಟು ತಾವೆಲ್ಲರೂ ಸ್ವರ್ಗವನ್ನು ಕುರಿತು ತೆರಳಿದರು ; ಆ ಧನವನ್ನು ಸ್ವೀಕರಿಸುತಲಿರುವ ನಾಭಾಗರಾಯನ ಸಮೀಪಕ್ಕೆ ಕೃಷ್ಣಶರೀರವುಳ್ಳ ಒಬ್ಬ ಪುರುಷನು ಬಂದನು ; ಆತನೇ ಶ್ರೀರುದ್ರನು ; ಅಲ್ಲಿಗೆ ಬಂದು ಈ ಧನವು ನನ್ನದು ; ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ಎಂದು ನುಡಿದನು ; ಆ ಮಾತನ್ನು ಕೇಳಿ ನಾಭಾಗನು ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ನಾನೇ ತೆಗದುಕೊಳ್ಳುತ್ತೇನೆಂದು ನುಡಿದನು ; ಆಗ ಶ್ರೀರುದ್ರನು ಪುನಃ 'ಎಲೈ ನಾಭಾಗನೇ, ಯಜ್ಞಶೇಷ ಧನವು ನನ್ನದೋ ನಿನ್ನದೋ ನಿನ್ನ ತಂದೆಯನ್ನೇ ಕೇಳು' ಎಂದು ನುಡಿದನು. ನಾಭಾಗನು ಮನುವನ್ನು ಕೇಳಲಾಗಿ ಆ ಮನುವು ಶ್ರೀರುದ್ರನಿಗೆ ಸಲ್ಲತಕ್ಕದ್ದೆಂದು ನುಡಿದು 'ಎಲೈ ನಾಭಾಗನೇ, ಸಮಸ್ತ ಋಷಿಗಳು ಯಜ್ಞಶೇಷವು ಶ್ರೀರುದ್ರನದೇ ಸರಿಯೆಂದು ಹೇಳುವರು ; ಈಶ್ವರನಾದ ಶ್ರೀರುದ್ರನಿಗೆ ಸರ್ವವೂ ಸಲ್ಲತಕ್ಕದ್ದು ; ಯಜ್ಞಶೇಷವಾದ ಧನವು ಸಲ್ಲತಕ್ಕದ್ದಾದ ವಿಷಯದಲ್ಲಿ ವಿವಾದವೇನು' ಎಂದು ನುಡಿದನು. ಆ ಮಾತನ್ನು ಕೇಳಿ ನಾಭಾಗರಾಯನು ಶ್ರೀರುದ್ರಮೂರ್ತಿಗೆ ನಮಸ್ಕರಿಸಿ 'ಎಲೈ ಸ್ವಾಮಿಯೇ, ಈ ಯಜ್ಞಶೇಷ ಧನವು ನಿನ್ನದೇ ಸರಿಯೆಂದು ಮನುವು ಹೇಳಿದನು ; ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ನಿನಗೆ ಶಿರಸಾ ನಮಸ್ಕರಿಸಿ ಪ್ರಾರ್ಥನೆಯ ಮಾಡುತ್ತೇನೆ' ಎಂದು ವಿಜ್ಞಾಪನೆಯ ಮಾಡುತಲಿರುವ ನಾಭಾಗನನ್ನು ಕುರಿತು ಶ್ರೀರುದ್ರಮೂರ್ತಿಯು 'ಎಲೈ ನಾಭಾಗನೇ, ನಿನ್ನ ತಂದೆಯಾದ ಮನುವು ಯಾವ ಧರ್ಮವನ್ನು ಹೇಳಿದನೋ ಆ ಅರ್ಥವನ್ನೇ ನೀನು ಯಥಾರ್ಥವಾಗಿ ಹೇಳುತ್ತೀಯೆ ; ಅದುಕಾರಣ ಮಂತ್ರದ್ರಷ್ಟೃವಾದ ನಿನಗೆ ಪರಬ್ರಹ್ಮವಿಷಯಕವಾದ ತತ್ವಜ್ಞಾನವನ್ನು ಉಪದೇಶಮಾಡುತ್ತೇನೆ ; ಅದುಕಾರಣ ಮಹಾತ್ಮರ ಸನ್ನಿಧಿಯಲ್ಲಿಯೂ ಕೂಡ ಅಸತ್ಯವನ್ನು ಹೇಳಬಾರದು ; ನಿನ್ನ ಸತ್ಯದಿಂದ ಸಂತುಷ್ಟನಾದ ನಾನು ನಿನ್ನ ಇಷ್ಟಾರ್ಥವನ್ನೆಲ್ಲವನ್ನೂ ಕೊಡುತ್ತೇನೆ ; ಅದರಿಂದ ಈ ಯಜ್ಞಶೇಷ ಧನವನ್ನೆಲ್ಲವನ್ನೂ ನಿನಗೆ ಕೊಡುತ್ತೇನೆಂದು ಸತ್ಯಪ್ರಿಯನಾದ ಶ್ರೀರುದ್ರಮೂರ್ತಿಯು ನುಡಿದು ಅಂತರ್ಧಾನವನ್ನೈದಿದನು ! ಎಲೈ ಪರೀಕ್ಷಿದ್ರಾಯನೇ, ಯಾವ ಪುರುಷನು ಭಕ್ತಿಯುಕ್ತನಾಗಿ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಈ ಉಪಾಖ್ಯಾನವನ್ನು ಸ್ಮರಿಸುತ್ತಾನೆಯೋ ಆ ಪುರುಷನು ಪ್ರಾಜ್ಞನಾಗಿ ಮಂತ್ರಜ್ಞನಾಗಿ ಉತ್ತಮಗತಿಯನ್ನೈದುವನು ; ನಾಭಾಗರಾಯನಿಗೆ ಅಂಬರೀಷರಾಯನು ಪುತ್ರನು ; ಮಹಾ ಭಾಗವತೋತ್ತಮನಾದ ಕೃತಕೃತ್ಯನಾದ ಅಂಬರೀಷರಾಯನನ್ನು ಪರಿಹರಿಸಲಶಕ್ಯವಾದ ಬ್ರಹ್ಮಣಪ್ರಯುಕ್ತವಾದ ಅಭಿಚಾರದೇವತೆಯು ಮುಟ್ಟಲಾರದೇ ಹೋಯಿತು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಪೂಜ್ಯನಾದ ಶುಕಾಚಾರ್ಯನೇ, ಮಹಾತ್ಮನಾದ ಅಂಬರೀಷರಾಯನ ಚರಿತ್ರವನ್ನು ಕೇಳಲಿಚ್ಛೈಸುತ್ತೇನೆ ; ಅಪರಿಹಾರ್ಯವಾದ ಬ್ರಹ್ಮದಂಡವು ಅಂಬರೀಷರಾಯನಲ್ಲಿ ಹ್ಯಾಗೆ ವಿಮುಖವಾಯಿತು" ಎನಲು ಕೇಳಿದನು.

ಆ ರಾಜವಾಕ್ಯವನ್ನು ಕೇಳಿ ಶುಕಾಚಾರ್ಯನು "ಎಲೈ ಅರಸೆ, ಮಹಾತ್ಮನಾದ ಅಂಬರೀಷರಾಯನು ಸಪ್ತದ್ವೀ
ಪಗಳುಳ್ಳ ಭೂಮಂಡಲವಂ ಸ್ಥಿರವಾದ ಐಶ್ವರ್ಯಲಕ್ಷ್ಮಿಯುಂ ಸರ್ವೋತ್ತಮವಾದ ವಿಭವವಂ ಸಹ ಅನುಭವಿಸಿ ಅತಿ
ದುರ್ಲಭವಾದ ಉತ್ತಮ ವಸ್ತುಗಳನ್ನೆಲ್ಲವನ್ನು ಸ್ವಪ್ನವಸ್ತುಗಳಂತೆ ಅನಿತ್ಯವನ್ನಾಗಿ ತಿಳಿದು ವಿರಕ್ತನಾದನು;
ವಿನುಕಾರಣವೆಂದರೆ; ಪುರುಷನು ವಿಭವಾದಿಗಳನ್ನು ಅನುಭವಿಸುವ ಕಾಲದಲ್ಲಿಯೂ ಮದಾಂಧನಾಗಿ ಮೋಹದಲ್ಲಿ
ಮುಳುಗುತ್ತಾನೆ; ಆ ವಿಭವಗಳು ನಷ್ಟಗಳಾದರೂ ವ್ಯಸನದಿಂದ ಮೋಹಗ್ರಸ್ತನಾಗುತ್ತಾನೆ; ಆದುದರಿಂದ ಭಗ
ವಂತನಾದ ವಾಸುದೇವನಲ್ಲಿಯೂ ಅವನ ಭಕ್ತರಾದ ಸಾಧುಗಳಲ್ಲಿಯೂ ಪರಮಭಕ್ತಿ ಮಾಡುವವನಾಗಿ ಪ್ರಾಜ್ಞನ
ಸರ್ವ ಪ್ರಪಂಚವನ್ನು ಮಣ್ಣುಹೆಂಟೆಯಂತೆ ತುಚ್ಛವನ್ನಾಗಿ ಭಾವಿಸುವನು ಎಂದು ನಿಶ್ಚಯಿಸಿ ಅಂಬರೀಷರಾಯನ
ಭಗವದ್ಭಕ್ತಿಯುಂ ಮಾಡಿದನು; ಮನಸ್ಸನ್ನು ಶ್ರೀಕೃಷ್ಣನ ಪದಾಂಬುಜಗಳಲ್ಲಿರಿಸಿದನು; ವಾಕ್ಕುಗಳನ್ನು ವೈಕುಂ
ಠನ ಗುಣಗಳ ಕೀರ್ತನಗಳಲ್ಲಿಯೇ ವಿನಿಯೋಗಿಸಿದನು; ಹಸ್ತಗಳನ್ನು ಶ್ರೀಹರಿಯ ಆಯತನಂಗಳ ಸಮ್ಮಾರ್ಜ
ನಾದಿಗಳಲ್ಲಿಯೇ ಉಪಯೋಗಿಸಿದನು, ಶ್ರೋತ್ರಗಳಂ ಅಚ್ಯುತನ ಕಥಾಶ್ರವಣದಲ್ಲಿ ನಿಲ್ಲಿಸಿದನು; ಮುಕುಂದನ
ಮೂರ್ತಿಗಳ ದರ್ಶನದಲ್ಲಿ ನೇತ್ರಗಳನ್ನು ಪಯೋಗಿಸಿದನು; ಪರಮಾತ್ಮನ ಪಾದಕಮಲದ ಗಂಧವನ್ನು ಗ್ರಹಿಸುವು
ದಲ್ಲಿ ಘ್ರಾಣೇಂದ್ರಿಯವಂ ನಿಲ್ಲಿಸಿದನು; ಭಗವದ್ಭಕ್ತರ ಶರೀರಸ್ಪರ್ಶದಲ್ಲಿ ತನ್ನ ಶರೀರವನ್ನು ವಿನಿಯೋಗಿಸಿದನು; ಭಗ
ವದರ್ಪಿತಗಳಾದ ಅನ್ನಾದಿಗಳಲ್ಲಿ ರಸನೇಂದ್ರಿಯವಂ ನಿಲ್ಲಿಸಿದನು; ಭಗವಂತನ ಕ್ಷೇತ್ರಂಗಳ ಯಾತ್ರಾರ್ಥವಾಗಿ ಪ
ದಗಳನ್ನು ಪಯೋಗಿಸಿದನು; ಹೃಷೀಕೇಶನ ಪಾದಕ್ಕೆ ನಮಸ್ಕಾರಾರ್ಥವಾಗಿ ಶಿರಸ್ಸನ್ನು ಮಾಡಿದನು; ಭಗವಂತ
ನಿರ್ಮಾಲ್ಯವಾದ ಸ್ರಕ್ಚಂದನಾದಿಗಳಂ ದಾಸಭಾವದಿಂ ಗ್ರಹಿಸಿದನು; ಕಾಮಭೋಗಾರ್ಥವಾಗಿ ಗ್ರಹಿಸಲಿಲ್ಲ; ಉ
ಮಶ್ಲೋಕನಾದ ಭಗವಂತನ ಭಕ್ತಜನರಲ್ಲಿ ಅತ್ಯಂತ ಪ್ರೀತಿಯನ್ನು ಮಾಡಿದನು; ಅಂಬರೀಷರಾಯನು ಈ ರೀ
ಯಲ್ಲಿ ಸಮಸ್ತ ಕರ್ಮಸಮೂಹವನ್ನು ಯಜ್ಞಪತಿಯಾದ ಭಗವಂತನಾದ ಶ್ರೀಹರಿಯಲ್ಲಿ ಸಮರ್ಪಿಸಿ ಸರ್ವಪ್ರಾ
ಣಿಗಳಲ್ಲಿಯೂ ಪರಮಾತ್ಮಭಾವನೆಯನ್ನು ಮಾಡಿ ಭಗವದ್ಭಕ್ತರಾದ ಬ್ರಾಹ್ಮಣರಿಂದ ಶಿಕ್ಷಿತನಾಗಿ ಭೂಮಿಯನ್ನು
ಪರಿಪಾಲಿಸಿದನು; ಈ ಅಂಬರೀಷರಾಯನು ಸರಸ್ವತೀ ನದೀಪ್ರಾಂತ್ಯದಲ್ಲಿ ನಿರ್ಜಲಪ್ರದೇಶದಲ್ಲಿ ಮಹಾ ವಿಭವ
ದಿಂದ ವೃದ್ಧಿಯನ್ನೈದಿದ ಸಾಂಗೋಪಾಂಗಗಳಾದ ದಕ್ಷಿಣಾಸಮೇತಗಳಾದ ಮತ್ತು ವಶಿಷ್ಠರೂ ಗೌತಮರೂ
ರೂ ಮೊದಲಾದ ಮಹಾ ಋಷಿಗಳಿಂದ ಬೆಳೆಯಿಸಲ್ಪಟ್ಟ ಅಶ್ವಮೇಧ ಕ್ರತುಗಳಿಂದ ಯಜ್ಞಪತಿಯಾದ ಈ
ನ್ನು ಪೂಜಿಸಿದನು. ಈ ಅಂಬರೀಷರಾಯನ ಕ್ರತುಗಳಲ್ಲಿ ಸದಸ್ಯನಲ್ಲಿರುವ ಋತ್ವಿಕ್ಕುಗಳು ಮೊದಲಾದ
ು ದಿವ್ಯವಸ್ತ್ರಧಾರಿಗಳಾಗಿ ದೇವತೆಗಳಿಗೆ ಸಮಾನರಾಗಿ ನಿಮೇಷರಹಿತರಾಗಿ ಕಾಣಲ್ಪಟ್ಟರು; ದೇವತೆ
ದಿಂದಲೇ ರೆಪ್ಪೆಹುಯ್ಯೋಣವಿಲ್ಲ; ಈ ಸಭಾಜನರಿಗೆ ಆಶ್ಚರ್ಯಕರವಾದ ಅಂಬರೀಷರಾಯನ
ಪ್ಪೆ ಹುಯ್ಯೋಣವಂ ಮರತಿರುವುದರಿಂದ ದೇವತೆಗಳಿಗೆ ಸಮಾನರಾಗಿದ್ದರು; ಈ ಅಂಬರೀಷ
ನ ಜನರು ಉತ್ತಮಶ್ಲೋಕನಾದ ಭಗವಂತನ ಚರಿತ್ರವನ್ನು ಶ್ರವಣ ಪಠಣಂಗಳಂಗೈಯ
ನ್ನು ಕೂಡ ಅಪೇಕ್ಷಿಸಲಿಲ್ಲ; ಮುಕುಂದನನ್ನೇ ಹೃದಯದಲ್ಲಿ ನೋಡುತಲಿರುವ ಆ ಅಂಬರೀಷ
ೂಡ ದುರ್ಲಭಂಗಳಾದಾಗ್ಯೂ ಅಂತಹ ವಿಷಯಂಗಳು ಬ್ರಹ್ಮಾನಂದ ಸೌಖ್ಯಗಳಿಂದ ತಿರಸ
ತೋಷಕರಗಳಾಗಲಿಲ್ಲ! ಎಲೈ ಅರಸೆ, ಆ ಅಂಬರೀಷರಾಯನು ಈಪ್ರಕಾರವಾದ ಭಕ್ತಿ
ದಲೂ ಸ್ವಧರ್ಮದಿಂದಲೂ ಶ್ರೀಹರಿಯನ್ನು ಆರಾಧಿಸಿ ಮೆಲ್ಲಮೆಲ್ಲಗೆ ಸರ್ವಕಾಮಗಳ
ಲ್ಲಿಯೂ ಸ್ತ್ರೀರುಗಳಲ್ಲಿಯೂ ಪುತ್ರರಲ್ಲಿಯೂ ಬಂಧುಗಳಲ್ಲಿಯೂ ಗಜ ರಥ ತುರಗ
ಂಗಳಾದ ರತ್ನಗಳು ಭೂಷಣಗಳು ದುಕೂಲಗಳು ಮೊದಲಾದ ಉತ್ತಮವಾದ ವ
ಡಾರಗಳಲ್ಲಿಯೂ ಕೂಡಾ ತುಚ್ಛಗಳೆಂಬ ಬುದ್ಧಿಯನ್ನು ಮಾಡಿದನು; ಭಗ
ಾಂತ ಭಕ್ತಿಯಿಂದ ಪ್ರೀತನಾಗಿ ಭಯವನ್ನು ಪರಿಹರಿಸುವ ಶತ್ರುನಾಶಕವಾದ ಚಕ್
ಟ್ಟನು! ಎಲೈ ಅರಸೆ, ಆ ಅಂಬರೀಷರಾಯನು ಶ್ರೀಹರಿಯನ್ನಾರಾಧಿಸಲಿಚ್ಛೆ

ಯಾದ ನಾಭಾಗರಾಯನೇ ನಿನ್ನ ಭಾಗವೆಂದು ಹೇಳಿದರು ; ಆಗ ನಾಭಾಗನು ಪಿತೃಸಮೀಪಕ್ಕೆ ಹೋಗಿ ನನ್ನ ಜ್ಯೇಷ್ಠಭ್ರಾತೃಗಳು ನಿನ್ನನ್ನೇ ನನ್ನ ಭಾಗವನ್ನಾಗಿ ಕಲ್ಪಿಸಿಧಾರೆ ; ಇದು ಏನೆಂದು ಕೇಳಲಾಗಿ ಪಿತೃವಾದ ನಾಭಾಗ ರಾಯನು 'ಎಲೈ ಪುತ್ರನೆ, ಅದು ವಂಚನೆಯೋ ಹೊರ್ತು ಸತ್ಯವಲ್ಲ. ನನ್ನನ್ನು ಭಾಗವನ್ನಾಗಿ ಕಲ್ಪಿಸಿದ್ದರೆ ನನ್ನಿಂದ ನಿನಗೆ ಜೀವನೋಪಾಯವಾದೀತೆ ; ಆದಾಗ್ಯೂ ನಾನೇ ನಿನ್ನ ಭಾಗವಾದಮೇಲೆ ನಿನಗೆ ಜೀವನೋಪಾಯವನ್ನು ನಾನು ಹೇಳುತ್ತೇನೆ ! ಎಲೈ ಪ್ರಾಜ್ಞನಾದ ಪುತ್ರನೆ, ಈ ಅಂಗೀರಸ್ಸುಗಳು ಸತ್ರಯಾಗವನ್ನು ಮಾಡುತ್ತಾರೆ ; ಆ ಯಾಗದಲ್ಲಿ ಆರಾರು ದಿವಸಗಳಿಗೆ ಬಂದೊಂದು ದೀಕ್ಷಾಕ್ರಮದಿಂದ ಸತ್ರಯಾಗವು ನಡೆಯುವ ಕಾಲದಲ್ಲಿ ಆರನೇ ದಿವಸ ಕರ್ಮಾನುಷ್ಠಾನದಲ್ಲಿ ಕೆಲವು ಸೂಕ್ತಮಂತ್ರ ವಿಶೇಷಗಳನ್ನರಿಯದೇ ಅಂಗೀರಸ್ಸುಗಳು ಬುದ್ಧಿಶಾಲಿಗಳಾದಾಗ್ಯೂ ಮೋಹಪಡುತ್ತಾರೆ ; ಆಗ ನೀನು ವಿಶ್ವೇದೇವತಾಕಗಳಾದ ಎರಡು ಸೂಕ್ತಗಳನ್ನು ಅವರಿಗೆ ಪಾಠಮಾಡಿಸು ; ಆಗ ಆ ಅಂಗೀರಸ್ಸುಗಳು ಯಜ್ಞಾವಸಾನದಲ್ಲಿ ಸ್ವರ್ಗಕ್ಕೆ ಹೋಗುವಾಗ ಯಜ್ಞವಾದ ಧನವನ್ನು ನಿನಗೆ ಕೊಟ್ಟು ಹೋಗುತ್ತಾರೆ ; ಆ ಧನವನ್ನು ತೆಗೆದುಕೊಂಡು ನೀನು ಜೀವನವನ್ನು ಮಾಡು' ಎಂಬದಾಗಿ ಹೇಳಲ್ಪಟ್ಟ ಪಿತೃವಾಕ್ಯವನ್ನು ಕೇಳಿ ಹಾಗೆಯೇ ಮಾಡಿದನು ; ಆದೇದ್ರಕಾರಕ್ಕೆ ಅಂಗೀರಸ್ಸುಗಳು ಯಜ್ಞಶೇಷ ಧನವನ್ನು ನಾಭಾಗನಿಗೆ ಕೊಟ್ಟು ತಾವೆಲ್ಲರೂ ಸ್ವರ್ಗವನ್ನು ಕುರಿತು ತೆರಳಿದರು ; ಆ ಧನವನ್ನು ಸ್ವೀಕರಿಸುತಲಿರುವ ನಾಭಾಗರಾಯನ ಸಮೀಪಕ್ಕೆ ಕೃಷ್ಣಶರೀರವುಳ್ಳ ಒಬ್ಬ ಪುರುಷನು ಬಂದನು ; ಆತನೇ ಶ್ರೀರುದ್ರನು ; ಅಲ್ಲಿಗೆ ಬಂದ ಈ ಧನವು ನನ್ನದು ; ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ಎಂದು ನುಡಿದನು ; ಆ ಮಾತನ್ನು ಕೇಳಿ ನಾಭಾಗನು ನನಗೆ ಋಷಿಗಳಿಂದ ಕೊಡಲ್ಪಟ್ಟದ್ದು ನಾನೇ ತೆಗದುಕೊಳ್ಳುತ್ತೇನೆಂದು ನುಡಿದನು ; ಆಗ ಶ್ರೀರುದ್ರನು ಪುನಃ 'ಎಲೈ ನಾಭಾಗನೇ, ಯಜ್ಞಶೇಷ ಧನವು ನನ್ನದೋ ನಿನ್ನದೋ ನಿನ್ನ ತಂದೆಯನ್ನೇ ಕೇಳು' ಎಂದು ನುಡಿದನು. ನಾಭಾಗನು ಮನುವನ್ನು ಕೇಳಲಾಗಿ ಆ ಮನುವು ಶ್ರೀರುದ್ರನಿಗೆ ಸಲ್ಲತಕ್ಕದ್ದೆಂದು ನುಡಿದು 'ಎಲೈ ನಾಭಾಗನೇ, ಸಮಸ್ತ ಋಷಿಗಳು ಯಜ್ಞಶೇಷವು ಶ್ರೀರುದ್ರನದೇ ಸರಿಯೆಂದು ಹೇಳುವರು ; ಈಶ್ವರನಾದ ಶ್ರೀರುದ್ರನಿಗೆ ಸರ್ವವೂ ಸಲ್ಲತಕ್ಕದ್ದು ; ಯಜ್ಞಶೇಷವಾದ ಧನವು ಸಲ್ಲತಕ್ಕದ್ದಾದ ವಿಷಯದಲ್ಲಿ ವಿವಾದವೇನು' ಎಂದು ನುಡಿದನು. ಆ ಮಾತನ್ನು ಕೇಳಿ ನಾಭಾಗರಾಯನು ಶ್ರೀರುದ್ರಮೂರ್ತಿಗೆ ನಮಸ್ಕರಿಸಿ 'ಎಲೈ ಸ್ವಾಮಿಯೇ, ಈ ಯಜ್ಞಶೇಷಧನವು ನಿನ್ನದೇ ಸರಿಯೆಂದು ಮನುವು ಹೇಳಿದನು ; ನನ್ನ ಅಪರಾಧವನ್ನು ಕ್ಷಮಿಸಬೇಕೆಂದು ನಿನಗೆ ಶಿರಸಾ ನಮಸ್ಕರಿಸಿ ಪ್ರಾರ್ಥನೆಗೈಯ್ಯುತ್ತೇನೆ' ಎಂದು ವಿಜ್ಞಾಪನೆಗೈಯುತಲಿರುವ ನಾಭಾಗನನ್ನು ಕುರಿತು ಶ್ರೀರುದ್ರಮೂರ್ತಿಯು 'ಎಲೈ ನಾಭಾಗನೇ, ನಿನ್ನ ತಂದೆಯಾದ ಮನುವು ಯಾವ ಧರ್ಮವನ್ನು ಹೇಳಿದನೋ ಆ ಅರ್ಥವನ್ನೇ ನೀನು ಯಥಾರ್ಥವಾಗಿ ಹೇಳುತ್ತೀಯೆ ; ಅದುಕಾರಣ ಮಂತ್ರದ್ರಷ್ಟ್ರುವಾದ ನಿನಗೆ ಪರಬ್ರಹ್ಮವಿಷಯಕವಾದ ತತ್ವಜ್ಞಾನವನ್ನು ಉಪದೇಶಗೈಯ್ಯುತ್ತೇನೆ ; ಅದುಕಾರಣ ಮಹಾತ್ಮರಾದ ನಿನ್ನ ತಂದೆಯೂ ಕೂಡ ಅಸತ್ಯವನ್ನು ಹೇಳಬಾರದು ; ನಿನ್ನ ಸತ್ಯದಿಂದ ಸಂತುಷ್ಟನಾದ ನಾನು ನಿನ್ನ ಇಷ್ಟಾರ್ಥವನ್ನೆಲ್ಲವನ್ನೂ ಕೊಡುತ್ತೇನೆ ; ಆದರಿಂದ ಈ ಯಜ್ಞಶೇಷ ಧನವನ್ನೆಲ್ಲವನ್ನೂ ನಿನಗೆ ಕೊಡುತ್ತೇನೆಂದು ಸತ್ಯಪ್ರಿಯನಾದ ಶ್ರೀರುದ್ರಮೂರ್ತಿಯು ನುಡಿದು ಅಂತರ್ಧಾನವನ್ನೈದಿದನು ! ಎಲೈ ಪರೀಕ್ಷಿದ್ರಾಯನೇ, ಯಾವ ಪುರುಷನು ಭಕ್ತಿಯುಕ್ತನಾಗಿ ಪ್ರಾತಃಕಾಲದಲ್ಲಿಯೂ ಸಾಯಂಕಾಲದಲ್ಲಿಯೂ ಈ ಉಪಾಖ್ಯಾನವನ್ನು ಸ್ಮರಿಸುತ್ತಾನೆಯೋ ಆ ಪುರುಷನು ಪ್ರಾಜ್ಞನಾಗಿ ಮಂತ್ರಜ್ಞನಾಗಿ ಉತ್ತಮಗತಿಯನ್ನೈದುವನು ; ನಾಭಾಗರಾಯನಿಗೆ ಅಂಬರೀಷರಾಯನು ಪುತ್ರನು ; ಮಹಾಭಾಗವತೋತ್ತಮನಾದ ಕೃತಕೃತ್ಯನಾದ ಅಂಬರೀಷರಾಯನನ್ನು ಪರಿಹರಿಸಲಶಕ್ಯವಾದ ಬ್ರಹ್ಮಶಾಪಯುಕ್ತವಾದ ಅಭಿಚಾರಶಕ್ತಿಯು ಮುಟ್ಟಲಾರದೇ ಹೋಯಿತು" ಎಂದು ನುಡಿದನು.

ಆ ವಾಕ್ಯವನ್ನು ಕೇಳಿ ಪರೀಕ್ಷಿದ್ರಾಯನು "ಎಲೈ ಪೂಜ್ಯನಾದ ಶುಕಾಚಾರ್ಯನೇ, ಮಹಾತ್ಮನಾದ ಅಂಬರೀಷರಾಯನ ಚರಿತ್ರವನ್ನು ಕೇಳಲಿಚ್ಛೈಸುತ್ತೇನೆ ; ಅಪರಿಹಾರ್ಯವಾದ ಬ್ರಹ್ಮದಂಡವು ಅಂಬರೀಷರಾಯನಲ್ಲಿ ಹ್ಯಾಗೆ ನಿಷ್ಫಲವಾಯಿತು" ಎಂದು ಕೇಳಿದನು.

ಹನುಮಂತನು ಶ್ವೇತಚ್ಛತ್ರವನ್ನು ಧರಿಸಿದನು ; ಧನುಸ್ಸನ್ನೂ ಬತ್ತಳಿಕೆಗಳನ್ನೂ ಶತ್ರುಘ್ನನು ಧರಿಸಿದನು ; ಸೀತಾದೇವಿಯು ತೀರ್ಥಪಾತ್ರವನ್ನು ಧರಿಸಿದಳು ; ಅಂಗದನು ಖಡ್ಗವನ್ನು ಧರಿಸಿದನು ; ಸುವರ್ಣಮಯವಾದ ಗುರಾಣಿಯನ್ನು ಜಾಂಬವನು ಧರಿಸಿದನು ; ಪುಷ್ಪಕವಿಮಾನದಲ್ಲಿರುವ ಸುಗ್ರೀವಾದಿಗಳಿಂದ ಪರಿವೃತನಾದ ಶ್ರೀರಾಮನು ವಂದಿಗಳಿಂದ ಹೊಗಳಿಸಿಕೊಂಬುವನಾಗಿ ಚಂದ್ರನಂತೆ ಪ್ರಕಾಶಿಸಿದನು ; ಈರೀತಿಯಲ್ಲಿ ಭ್ರಾತೃಗಳಿಂದ ಸಂತೋಷಪಟ್ಟವನಾಗಿ ಉತ್ಸವಯುಕ್ತವಾದ ಅಯೋಧ್ಯಾಪುರವನ್ನು ಪ್ರವೇಶಿಸಿದನು ; ಅನಂತರದಲ್ಲಿ ರಾಜಗೃಹವನ್ನು ಪ್ರವೇಶಿಸಿ ಪಿತೃಪತ್ನೀರಾದ ಕೈಕೇಯಾದಿಗಳನ್ನು ನಮಸ್ಕರಿಸಿ ಸ್ವಮಾತೃವಾದ ಕೌಸಲ್ಯಾದೇವಿಯಂ ನಮಸ್ಕರಿಸಿದನು ; ಗುರುಗಳಿಗೆ ನಮಸ್ಕರಿಸಿ ತನಗಿಂತಲೂ ಕನಿಷ್ಠರಾದವರನ್ನು ಮರ್ಯಾದೆಯನ್ನು ಮಾಡಿದನು ; ಸೀತಾದೇವಿಯು ಲಕ್ಷ್ಮಣನು ಶ್ರೀರಾಮನಿಗೆ ಅನುಸಾರವಾಗಿ ನಡದುಕೊಂಡರು ; ಮಾತೃಗಳಾದ ಕೌಸಲ್ಯಾದಿಗಳು ತಮ್ಮ ಪ್ರಾಣಗಳಂತೆ ಪುತ್ರರನ್ನು ಕಂಡೆದ್ದು ಪುತ್ರರನ್ನು ತೊಡೆಗಳಮೇಲೆ ಕೂರಿಸಿಕೊಂಡು ನೇತ್ರೋದಕಗಳಿಂದ ಅವರನ್ನಭಿಷೇಕವನ್ನು ಮಾಡಿ ಶೋಕವನ್ನು ಬಿಟ್ಟು ಸಂತೋಷಪಟ್ಟರು ; ಕುಲವೃದ್ಧರಾದವರೊಡನೆ ಗುರುವಾದ ವಶಿಷ್ಠಋಷಿಯು ಜಟೆಗಳನ್ನು ಬಿಡಿಸಿದನು ; ವಶಿಷ್ಠಋಷಿಯು ಚತುಸ್ಸಮುದ್ರೋದಕಗಳಂ ತರಿಸಿ ದೇವೇಂದ್ರನಂತೆ ಶ್ರೀರಾಮನನ್ನಭಿಷೇಕವನ್ನು ಮಾಡಿದನು ; ಶ್ರೀರಾಮನು ಶಿರಸ್ನಾನವನ್ನು ಮಾಡಿ ದಿವ್ಯವಸ್ತ್ರಧಾರಿಯಾಗಿ ಭೂಷಣಾದಿಗಳಿಂದ ಅಲಂಕೃತನಾಗಿ ಭೂಷಿತರಾದ ದಿವ್ಯವಸ್ತ್ರಧಾರಿಗಳಾದ ಭ್ರಾತೃಗಳಿಂದಲೂ ಪತ್ನಿಯಾದ ಸೀತೆಯಿಂದಲೂ ಪ್ರಕಾಶಿಸಿದನು ; ಭರತನಿಂದ ನಮಸ್ಕಾರಪೂರ್ವಕವಾಗಿ ಪ್ರಾರ್ಥಿಸಲ್ಪಟ್ಟು ಶ್ರೀರಾಮನು ಸಿಂಹಾಸನವನ್ನು ಗ್ರಹಿಸಿದನು ; ಆಗ ಪ್ರಜೆಗಳು ಸ್ವಧರ್ಮನಿರತರಾಗಿ ಚತುರ್ವರ್ಣದವರು ಗುಣವಂತರಾಗಿ ಸಂತುಷ್ಟರಾದರು ; ಶ್ರೀರಾಮನು ಪ್ರಜೆಗಳನ್ನು ಪಿತೃವಿನಂತೆ ರಕ್ಷಿಸಿದನು ; ಪ್ರಜೆಗಳು ಶ್ರೀರಾಮನನ್ನು ಪಿತೃವನ್ನಾಗಿ ಭಾವಿಸಿದರು ; ಅದು ತ್ರೇತಾಯುಗವಾದಾಗ್ಯೂ ಕೃತಯುಗಕ್ಕೆ ಸಮಾನವಾಗಿತ್ತು ; ಸರ್ವಪ್ರಾಣಿ ಸುಖಕರನಾದ ಧರ್ಮಜ್ಞನಾದ ಶ್ರೀರಾಮನು ರಾಜ್ಯಾಧಿಪತಿಯಾಗುತಿರಲಾಗಿ ವನಗಳು ನದಿಗಳು ಪರ್ವತಗಳು ವರ್ಷಗಳು ದ್ವೀಪಗಳು ಸಮುದ್ರಗಳು ಮುಂತಾದ ಸಮಸ್ತ ವಸ್ತುಗಳೂ ಪ್ರಜೆಗಳಿಗೆ ಇಷ್ಟಾರ್ಥಪ್ರದಂಗಳಾಗಿದ್ದವು ; ಶ್ರೀರಾಮನು ರಾಜ್ಯಪಾಲನಂಗೈಯುತಿರಲಾಗಿ ಮನೋವ್ಯಾಧಿಗಳು ರೋಗಗಳು ಜರೆಯು ಕ್ಷುತ್ತು ತೃಷ್ಣೆಯು ದುಃಖವು ಶೋಕವು ಭಯವು ಬಳಲಿಕೆಯು ಮೃತ್ಯುವು ಪ್ರಜೆಗಳಿಗೆ ಉಪದ್ರವವನ್ನು ಮಾಡಲಿಲ್ಲ ; ಏಕಪತ್ನೀವ್ರತಧರನಾಗಿ ರಾಜಋಷಿಚರ್ಯೆಯುಳ್ಳವನಾಗಿ ಪರಿಶುದ್ಧನಾಗಿ ಸರ್ವರಿಗೂ ಗೃಹಸ್ಥಾಶ್ರಮಧರ್ಮಗಳನ್ನು ಶಿಕ್ಷಿಸುವನಾಗಿ ತಾನೂ ಆಚರಿಸುವನಾಗಿ ರಾಜ್ಯವನ್ನಾಳಿದನು ; ಸೀತಾದೇವಿಯು ವಿನಯದಿಂದ ನಮ್ರಳಾಗಿ ಪ್ರೇಮದಿಂದಲೂ ಅನುಸರಣೆಯಿಂದಲೂ ಶೀಲದಿಂದಲೂ ಭಾವಜ್ಞಳಾಗಿ ಶ್ರೀರಾಮನ ಚಿತ್ತವನ್ನು ಸಂತೋಷಪಡಿಸುತ ಸುಖಪಟ್ಟಳು.

೧೧ನೇ ಅಧ್ಯಾಯ.

ಶ್ರೀರಾಮನು ಅಶ್ವಮೇಧಾದಿ ಕ್ರತುಗಳನ್ನು ಮಾಡಿ ವೈಕುಂಠವನ್ನೈದಿದ್ದು.

ಎಲೈ ಪರೀಕ್ಷಿದ್ರಾಯನೆ, ಅನಂತರದಲ್ಲಿ ಭಗವಂತನಾದ ಶ್ರೀರಾಮನು ಉತ್ಕೃಷ್ಟವಾದ ವಿಧಾನಂಗಳಿಂದ ಪ್ರಶಸ್ತಗಳಾದ ಕ್ರತುಗಳನ್ನು ಮಾಡಿ ಸರ್ವದೇವಾತ್ಮಕನಾದ ದೇವದೇವನಾದ ಪರಮಾತ್ಮನನ್ನಾರಾಧಿಸಿದನು ; ಹೋತೃವಿಗೆ ಪೂರ್ವದಿಕ್ಕನ್ನೂ ಬ್ರಹ್ಮನಿಗೆ ದಕ್ಷಿಣದಿಕ್ಕನ್ನೂ ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನೂ ಉದ್ಗಾತೃವಿಗೆ ಉತ್ತರದಿಕ್ಕನ್ನೂ ಕೊಟ್ಟನು ; ನಿಸ್ಪೃಹನಾದ ಬ್ರಾಹ್ಮಣನು ಸಮಸ್ತವಾದ ಭೂಮಿಯನ್ನು ಪ್ರತಿಗ್ರಹಿಸುವುದಕ್ಕೆ ಯೋಗ್ಯನಾದ ಪಾತ್ರನೆಂದು ತಿಳಿದು ನಾಲ್ಕು ದಿಕ್ಕುಗಳ ಮಧ್ಯದಲ್ಲಿರುವ ಭೂಮಿಯನ್ನಾಚಾರ್ಯನಿಗೆ ಕೊಟ್ಟನು ; ಈರೀತಿಯಲ್ಲಿ ಶ್ರೀರಾಮನು ತನ್ನ ಶರೀರದಮೇಲಿರುವ ವಸ್ತ್ರಾಭರಣಗಳನ್ನು ಹೊರ್ತು ಸಮಸ್ತವಾದ ಧನ ಕನಕಾದಿ ಪದಾರ್ಥವೆಲ್ಲವನ್ನು ದಾನಂಗೈದನು ; ಸೀತಾದೇವಿಯು ಅದೇಪ್ರಕಾರವಾಗಿ ಸೌಮಂಗಲ್ಯೋಪಯುಕ್ತಗ

ಳಾದ ವಸ್ತ್ರಾಭರಣಗಳನ್ನು ಹೊರ್ತು ಸಮಸ್ತವನ್ನು ದಾನಂಗೈದಳು; ಆಗ ಹೋತೃ ಮೊದಲಾದ ಋತ್ವಿಕ್ಕುಗಳು ಬ್ರಾಹ್ಮಣಪ್ರಿಯನಾದ ಶ್ರೀರಾಮನಿಗೆ ಸತ್ಪುರುಷರಲ್ಲಿರುವ ವಾತ್ಸಲ್ಯವಂನೋಡಿ ಆರ್ದ್ರಚಿತ್ತರಾಗಿಸಂತುಷ್ಟರಾಗಿ ಶ್ರೀರಾಮನಿಗೋಸ್ಕರ ಸಮಸ್ತ ಭೂಮಿಯನ್ನು ತಿರುಗಿ ಪ್ರತ್ಯರ್ಪಣಂಗೈದು ಶ್ರೀರಾಮನಂ ಕುರಿತು 'ಎಲೈ ಭುವನೇಶ್ವರನಾದ ಭಗವಂತನೇ, ನಮಗೋಸ್ಕರ ನಿನ್ನಿಂದ ಯಾವದು ಕೊಡಲ್ಪಡಲಿಲ್ಲ; ಸಮಸ್ತವನ್ನು ಕೊಟ್ಟೇ ಇದ್ದೀಯೆ; ನಮ್ಮ ಹೃದಯವನ್ನು ಪ್ರವೇಶಿಸಿ ಪ್ರಕಾಶದಿಂದ ತಮಸ್ಸನ್ನು ಪರಿಹರಿಸುತ್ತೀಯೆ; ಇದಕ್ಕಿಂತಲೂ ಪರಮ ಲಾಭವೇನಿದೆ; ಬ್ರಹ್ಮಣ್ಯದೇವನಾದ ಅಕುಂಠಿತವಾದ ಜ್ಞಾನವುಳ್ಳ ಪುಣ್ಯಶ್ಲೋಕಾಗ್ರಗಣ್ಯನಾದ ಯೋಗಿಗಳ ಹೃದಯಗಳಿಂದ ಧ್ಯಾನಂಗೈಯ್ಯಲು ಯೋಗ್ಯವಾದ ಪಾದಪದ್ಮವುಳ್ಳ ಶ್ರೀರಾಮನೇ, ನಿನಗೋಸ್ಕರ ನಮಸ್ಕಾರವು' ಎಂದು ನುಡಿದರು.

ಎಲೈ ಪರೀಕ್ಷಿದ್ರಾಯನೇ, ಅನಂತರದಲ್ಲಿ ಶ್ರೀರಾಮನು ಲೋಕದ ಸಮಾಚಾರವನ್ನು ತಿಳಿಯಲಿಚ್ಛೈಸಿ ಗೂಢನಾಗಿ ರಾತ್ರಿಯಲ್ಲಿ ಒಬ್ಬರಿಗೂ ತಿಳಿಯದಹಾಗೆ ಸಂಚಾರವನ್ನು ಮಾಡುವನಾಗಿ ತನ್ನ ಪತ್ನಿಯನ್ನು ಶಿಕ್ಷಿಸುತಲಿರುವ ಒಬ್ಬಪುರುಷನ ವಾಕ್ಯವಂ ಕೇಳಿದನು! ಎಲೈ ದುಷ್ಟಚರಿತ್ರೆಯುಳ್ಳವಳೇ, ದುಷ್ಟಳಾದ ವ್ಯಭಿಚಾರಿಣಿಯಾಗಿ ಪರಗೃಹ ಸಂಚಾರವುಳ್ಳ ನಿನ್ನಂ ನಾನು ಮನೆಯಲ್ಲಿರಿಸಿಕೊಂಡು ಪೋಷಿಸುವುದಿಲ್ಲ; ಸ್ತ್ರೀವ್ಯಾಮೋಹಬದ್ಧನಾದ ರಾಮನು ಸೀತೆಯನ್ನು ರಾವಣನ ಗೃಹದಿಂದ ಪುನಃ ಕರದುಕೊಂಡು ಬಂದು ಮನೆಯಲ್ಲಿರಿಸಿಕೊಂಡು ಪೋಷಿಸುವನಾದರೆ ಆಗಿಕ್ಕೊಳ್ಳಲಿ; ನಾನು ನಿನ್ನನ್ನು ಸರ್ವಥಾ ಪೋಷಿಸುವುದಿಲ್ಲ; ಎಂದು ಬಹುಮುಖವಾಗಿ ದುರ್ಭಾಷೆಗಳನ್ನಾಡುತಲಿರುವ ದುರಾರಾಧ್ಯವಾದ ಮೂಢನಾದ ಜನದ ದೆಶೆಯಿಂದ ಲೋಕಾಪವಾದ ಭೀತನಾದ ಶ್ರೀರಾಮನಿಂದ ಪರಿತ್ಯಾಗವನ್ನು ಮಾಡಲ್ಪಟ್ಟ ಸೀತಾದೇವಿಯು ವಾಲ್ಮೀಕಿ ಋಷಿಯ ಆಶ್ರಮವನ್ನು ಪಡೆದಳು; ಪೂರ್ಣಗರ್ಭಿಣಿಯಾದ ಆ ಸೀತಾದೇವಿಯು ಪ್ರಸವಕಾಲ ಬರುತ್ತಿರಲಾಗಿ ಅವಳಿಪುತ್ರರನ್ನು ಪಡೆದಳು; ಕುಶನು ಲವನು ಎಂದು ನಾಮಧೇಯವುಳ್ಳ ಆ ಬಾಲಕರನ್ನು ಪರಿಗ್ರಹಿಸಿ ವಾಲ್ಮೀಕಿಋಷಿಯು ಜಾತಕರ್ಮಾದಿ ಕ್ರಿಯೆಗಳನ್ನು ಮಾಡಿದನು; ಅಂಗದನು ಚಂದ್ರಕೇತುವೆಂದು ಈರ್ವರು ಕುಮಾರರು ಲಕ್ಷ್ಮಣನಿಗೆ ಜನಿಸಿದರು; ತಕ್ಷಕನು ಪುಷ್ಕಲನೆಂದು ಈರ್ವರು ಪುತ್ರರು ಭರತನಿಗೆ ಜನಿಸಿದರು; ಸುಬಾಹು ಶ್ರುತಸೇನನು ಎಂದು ಶತ್ರುಘ್ನ ಪುತ್ರರು; ಭರತನು ದಿಗ್ವಿಜಯಕಾಲದಲ್ಲಿ ಕೋಟಿಸಂಖ್ಯಾಕರಾದ ಗಂಧರ್ವರನ್ನು ಸಂಹರಿಸಿ ಅವರ ಧನವನ್ನೆಲ್ಲವನ್ನು ತೆಗದುಕೊಂಡು ಬಂದು ಶ್ರೀರಾಮನಿಗೆ ಒಪ್ಪಿಸಿದನು; ಶತ್ರುಘ್ನನು ಮಧುವೆಂಬ ರಾಕ್ಷಸನ ಪುತ್ರನಾದ ಲವಣಾಸುರನೆಂಬ ರಾಕ್ಷಸನನ್ನು ಸಂಹರಿಸಿ ಮಧುವನದಲ್ಲಿ ಮಧುರಾನಾಮಕವಾದ ಪುರವನ್ನು ನಿರ್ಮಿಸಿದನು; ಶ್ರೀರಾಮನಿಂದ ತ್ಯಾಗವನ್ನು ಮಾಡಿ ಬಿಡಲ್ಪಟ್ಟ ಸೀತಾದೇವಿಯು ಪುತ್ರರಾದ ಲವಕುಶರಂ ವಾಲ್ಮೀಕಿಋಷಿಗೆ ಒಪ್ಪಿಸಿ ಶ್ರೀರಾಮಪಾದಾಬ್ಜವಂ ಧ್ಯಾನಂಗೈಯುವಳಾಗಿ ಭೂಮಿಯನ್ನು ಪ್ರವೇಶಿಸಿದಳು; ಶ್ರೀರಾಮನು ಸೀತಾವೃತ್ತಾಂತವನ್ನು ಕೇಳಿ ಬುದ್ಧಿಯಿಂದ ಶೋಕವನ್ನು ತಡವನಾದಾಗ್ಯೂ ಆ ಸೀತಾದೇವಿಯ ಆಯಾಯ ಸುಗುಣಗಳನ್ನು ಸ್ಮರಿಸಿಕೊಂಡು ತಾನು ಪರಮೇಶ್ವರನಾದಾಗ್ಯೂ ಶೋಕವನ್ನು ತಡೆಯಲಾರದೆ ದುಃಖಪಟ್ಟನು! ಎಲೈ ಪರೀಕ್ಷಿದ್ರಾಯನೇ, ಸ್ತ್ರೀಪುರುಷರ ಪ್ರಸಂಗವು ಮಹಾತ್ಮರಿಗೂ ಕೂಡ ಭಯವನ್ನುಂಟುಮಾಡುವುದು; ಪಾಮರರಾದ ಗೃಹಾಸಕ್ತರಿಗೆ ಹೇಳತಕ್ಕದ್ದೇನು? ಅನಂತರದಲ್ಲಿ ಪ್ರಭುವಾದ ಶ್ರೀರಾಮನು ಬ್ರಹ್ಮಚರ್ಯವನ್ನು ಧರಿಸಿದವನಾಗಿ ಹನ್ನೊಂದುಸಾವಿರವರ್ಷ ಪರ್ಯಂತವು ಅವಿಚ್ಛಿನ್ನವಾದ ಅಗ್ನಿಹೋತ್ರವನ್ನು ಮಾಡಿಕೊಂಡಿದ್ದನು; ದಂಡಕಾರಣ್ಯದಲ್ಲಿ ಮುಳ್ಳುಗಳಿಂದ ನೋಯುವನ್ನು ಮಾಡಲ್ಪಟ್ಟ ತನ್ನ ಪಾದಕಮಲವನ್ನು ಸ್ಮರಿಸುವ ಯೋಗಿಗಳ ಹೃದಯದಲ್ಲಿರಿಸಿ ಸ್ವಪ್ರಕಾಶನಾದ ಶ್ರೀರಾಮನು ಸ್ವಸ್ಥಾನವಾದ ವೈಕುಂಠಕ್ಕೆ ಹೋದನು! ಎಲೈ ಪರೀಕ್ಷಿದ್ರಾಯನೆ, ದೇವಪ್ರಾರ್ಥನೆಯಿಂದ ಸ್ವೀಕರಿಸಲ್ಪಟ್ಟ ಲೀಲಾಮಾನುಷದೇಹವುಳ್ಳ ಸರ್ವಾಧಿಕ ಪ್ರಭಾವಶಾಲಿಯಾದ ಶ್ರೀರಾಮನಿಗೆ ಸೇತುಬಂಧನವು ಬಾಣಗಳಿಂದ ರಾಕ್ಷಸಸಂಹಾರವು ಮುಂತಾದ ಸಾಹಸ ವ್ಯಾಪಾರಗಳು ಸ್ತುತಿಗಳಾಗಲಾರವು; ಆ ಮಹಾ ಪುರುಷನಿಗೆ ರಾಕ್ಷಸಸಂಹಾರ ವಿಷಯದಲ್ಲಿ ಕಪಿಗಳು ಸಹಾಯರಾಗಬೇಕೆಂಬುದು ವಿಡಂಬನವೇ ಹೊರ್ತು ಬೇರೆ ಇಲ್ಲ; ಯುಧಿಷ್ಠಿರ ಮೊದಲಾದ

ಅರಸುಗಳ ಸಭೆಯಲ್ಲಿ ಮಾರ್ಕಂಡೇಯರು ಮೊದಲಾದ ಋಷಿಗಳು ನಿರ್ಮಲವಾದ ಪಾಪ ಪರಿಹಾರಕವಾದ ದಿಗ್ಗಜಂಗಳಿಗೆ ಶುಭ್ರದುಕೂಲ ರೂಪವಾದ ಯಾವ ಶ್ರೀ ರಘುಪತಿಯ ಯಶಸ್ಸನ್ನೀಗಲೂ ಗಾನಂಗೈಯ್ಯುತ್ತಾರೆಯೋ ದೇವಾಧಿಪತಿಗಳು ನರಾಧಿಪತಿಗಳು ಇವರ ಕಿರೀಟಗಳಿಂದ ಸ್ಪೃಶಿಸಲ್ಪಟ್ಟ ಪಾದಪದ್ಮವುಳ್ಳ ಆ ಶ್ರೀರಾಮನನ್ನು ಶರಣು ಹೊಂದುತ್ತೇನೆ! ಆ ಶ್ರೀರಾಮನನ್ನು ಯಾರು ಸ್ಪರ್ಶವನ್ನು ಮಾಡಿದರೋ: ಯಾರು ನೋಡಿದರೋ ಯಾರು ಪ್ರತ್ಯುತ್ಥಾನವನ್ನು ಮಾಡಿದರೋ ಯಾರು ಸಂಗಡ ನಾಲ್ಕು ಹೆಜ್ಜೆಗಳು ಹೋದರೋ ಕೋಸಲ ದೇಶವಾಸಿಗಳಾದ ಆ ಜನರೆಲ್ಲರೂ ಯೋಗಿಗಳಿಂದ ಪಡೆಯಲು ಯೋಗ್ಯವಾದ ಪರಮಪದವನ್ನೈದಿದರು! ಎಲೈ ಪರೀಕ್ಷಿದ್ರಾಯನೆ, ಉಪಶಾಂತನಾದ ಪುರುಷನು ರಾಮಚರಿತವನ್ನು ಶ್ರೋತ್ರಗಳಿಂದ ಧರಿಸುವನಾಗಿ ಕರ್ಮಬಂಧಗಳಿಂದ ವಿಮುಕ್ತನಾಗಿ ಮೋಕ್ಷವನ್ನೈದುವನು! ಎಂದು ನುಡಿದನು.

ಪರೀಕ್ಷಿದ್ರಾಯನು "ಎಲೈ ಶುಕಮುನಿಯೆ, ಆ ಶ್ರೀರಾಮನು ಸ್ವಾಂಶಭೂತರಾದ ಭ್ರಾತೃಗಳಲ್ಲಿ ಹ್ಯಾಗೆ ನಡೆದುಕೊಂಡನು? ಆ ಭ್ರಾತೃಗಳು ಪುರವಾಸಿಗಳು ದೇಶವಾಸಿಗಳಾದ ಪ್ರಜೆಗಳು ಸಹಾ ಆ ಶ್ರೀರಾಮನಲ್ಲಿ ಹ್ಯಾಗೆ ನಡೆದುಕೊಂಡರು?" ಎಂದು ಪ್ರಶ್ನೆಗೈದನು.

ಶುಕಮುನಿಯು "ಎಲೈ ಅರಸೆ, ತ್ರಿಲೋಕಾಧಿಪತಿಯಾದ ಶ್ರೀರಾಮನು ಪಟ್ಟಾಭಿಷಿಕ್ತನಾಗಿ ಸಿಂಹಾಸನದಲ್ಲಿ ಕುಳಿತು ಭ್ರಾತೃಗಳಿಗೆ ದಿಕ್ಕುಗಳ ಸಂರಕ್ಷಣೆಯಲ್ಲಿ ಆಜ್ಞಾಪಿಸಿದನು; ಸ್ವಜನರಿಗೆ ತನ್ನ ನಿಜತತ್ವವನ್ನು ತೋರ್ಪಿಸಿ ಅಯೋಧ್ಯಾಪುರವನ್ನು ರಕ್ಷಿಸಿಕೊಂಡಿದ್ದನು; ಆ ಅಯೋಧ್ಯಾಪುರವೆಂಥಾದ್ದೆಂದರೆ; ಗಂಧೋದಕಗಳಿಂದಲೂ ಮತ್ತಗಜಂಗಳ ಮದೋದಕಬಿಂದುಗಳಿಂದಲೂ ನೆನೆಯಿಸಲ್ಪಟ್ಟ ಮಾರ್ಗವುಳ್ಳದ್ದಾಗಿ ಮತ್ತವಾದ ಸ್ತ್ರೀಗಜವು ತನಗೆ ಪತಿಯಾದ ಪುರುಷಗಜವಂ ನೋಡಿ ಹರ್ಷಪಡುವಂತೆ ತನಗೆ ನಾಯಕನಾದ ಶ್ರೀರಾಮನನ್ನು ನೋಡಿ ಸಂತೋಷಪಡುತಲಿರುವುದು; ಉಪ್ಪರಿಗೆಗಳಲ್ಲಿ ಗೋಪುರಗಳಲ್ಲಿ ಸಭೆಗಳಲ್ಲಿ ದೇವಾಲಯಂಗಳಲ್ಲಿ ಮಾಳಿಗೆಗಳಲ್ಲಿ ದೇವತಾ ಪ್ರತಿಮೆಗಳಿಂದಲೂ ಧ್ವಜಗಳಿಂದಲೂ ಅಲಂಕೃತವಾಗಿರುವುದು; ಅಡಿಕೇ ತಾರುಗಳಿಂದಲೂ ಬಾಳೇ ಗೊನೆಗಳಿಂದಲೂ ವಸ್ತ್ರಗಳ ಪಟ್ಟೆಗಳಿಂದಲೂ ಕನ್ನಡಿಗಳಿಂದಲೂ ವಸ್ತ್ರಗಳ ಮೇಲುಕಟ್ಟುಗಳಿಂದಲೂ ಪುಷ್ಪಂಗಳ ಮಾಲೆಗಳಿಂದಲೂ ರಚಿತಗಳಾದ ಮಂಗಳಾರ್ಥಗಳಾದ ತೋರಣಗಳುಳ್ಳದ್ದಾಗಿರುವುದು; ಏತಾದೃಶವಾದ ಅಯೋಧ್ಯಾನಗರದಲ್ಲಿ ಶ್ರೀರಾಮನು ರಾಜ್ಯಾಧಿಪತ್ಯವಂಗೈಯುತ್ತಿರಲಾಗಿ ಪುರದೇಶವಾಸಿಗಳಾದ ಪುರುಷರು ಕಾಣಿಕೆಗಳನ್ನು ತೆಗದುಕೊಂಡು ಬಂದು ಶ್ರೀರಾಮನನ್ನು ಕಾಣಿಸಿಕೊಂಡು ಆಶೀರ್ವಾದವಂ ಮಾಡಿ 'ಎಲೈ ಭಗವಂತನೆ, ಪೂರ್ವದಲ್ಲಿ ನಿನ್ನಿಂದ ವರಾಹರೂಪದಿಂದುದ್ಧರಿಸಲ್ಪಟ್ಟ ಈ ಭೂಮಿಯಂ ಸಂರಕ್ಷಿಸು' ಎಂದು ಪ್ರಾರ್ಥಿಸಿದರು. ಅನಂತರದಲ್ಲಿ ಪ್ರಜೆಗಳು ಸ್ತ್ರೀಪುರುಷರು ಮೊದಲಾದ ಸರ್ವರೂ ಬಹುಕಾಲಕ್ಕೆ ಶಲವಾಗಿ ಬಂದ ಪತಿಯಾದ ಶ್ರೀರಾಮನನ್ನು ನೋಡಲಿಚ್ಛೆಯಿಂದ ಮನೆಗಳಂ ಬಿಟ್ಟು ಉಪ್ಪರಿಗೆಗಳನ್ನೇರಿ ಶ್ರೀರಾಮನನ್ನು ನೋಡಿ ತೃಪ್ತಿಪಡೆಯದೆ ಪುಷ್ಪಂಗಳಂ ವರ್ಷಿಸಿದರು; ಅನಂತರದಲ್ಲಿ ಪೂರ್ವಿಕರಾದ ಇಕ್ಷ್ವಾಕು ಮುಂತಾದ ಅರಸುಗಳಿಂದ ಸೇವಿತವಾದ ರಾಜಗೃಹವನ್ನು ಪ್ರವೇಶಿಸಿ ರಮಿಸಿದನು; ರಾಜಗೃಹವೆಂಥಾದ್ದೆಂದರೆ: ಅಪರಿಮಿತಗಳಾದ ಸಮಸ್ತ ವಸ್ತುಗಳ ಬೊಕ್ಕಸಂಗಳಿಂದ ಯುಕ್ತವಾಗಿ ಅಮೂಲ್ಯಂಗಳಾದ ಅಧಿಕಂಗಳಾದ ಪದಾರ್ಥಂಗಳುಳ್ಳದ್ದಾಗಿ ಹವಳಗಳಿಂದ ಮಾಡಲ್ಪಟ್ಟ ಸೋಪಾನಗಳಿಂದಲೂ ಉದುಂಬರವೃಕ್ಷ ರಚಿತಗಳಾದ ಕೆಸರಡಿಗಳಿಂದಲೂ ವೈಡೂರ್ಯಸ್ತಂಭ ಪಜ್ತಿಗಳಿಂದ ಅಲಂಕೃತವಾಗಿರುವುದು; ಮರಕತಮಾಣಿಕ್ಯನಿರ್ಮಿತಂಗಳಾದ ನೆಲಗಳಿಂದಲೂ ದಂತಗಳಿಂದಲೂ ಸ್ಫಟಿಕಂಗಳಿಂದಲೂ ನಿರ್ಮಿತಂಗಳಾದ ಸ್ವಚ್ಛಗಳಾದ ಗೋಡೆಗಳಿಂದಲೂ ವಿಚಿತ್ರಗಳಾದ ಪುಷ್ಪಮಾಲಿಕೆಗಳಿಂದಲೂ ಪತಾಕೆಗಳಿಂದಲೂ ವಸ್ತ್ರಗಳಿಂದಲೂ ರತ್ನಕಾಂತಿಗಳಿಂದಲೂ ಮಣಿಗಳಿಂದಲೂ ಪ್ರಕಾಶಿತವಾಗಿರುವುದು; ಕೆಲವು ಸ್ಥಳಗಳಲ್ಲಿ ಮುತ್ತುಗಳ ಕುಚ್ಚುಗಳಿಂದಲೂ ಮನೋಹರಗಳಾದ ಭೋಗಸಾಧನಗಳಿಂದಲೂ ಪರಿಮಳಯುಕ್ತಗಳಾದ ಧೂಪಗಳಿಂದಲೂ ದೀಪಗಳಿಂದಲೂ ಪುಷ್ಪಮಾಲೆಗಳಿಂದಲೂ ದೇವತಾಸಮಾನರಾದ ಸ್ತ್ರೀಪುರುಷರಿಂದಲೂ ಯುಕ್ತವಾಗಿರುವುದು; ಇಂಥಾ ರಾಜಗೃಹದಲ್ಲಿ ಸ್ನೇಹ

ಯುಕ್ತಳಾದ ಪ್ರೀತಿಪಾತ್ರಳಾದ ಮನಸ್ಸಿಗೆ ಸನ್ಮತಳಾದ ಸೀತಾದೇವಿಯೊಡನೆ ಸಹಿತನಾಗಿ ಆತ್ಮಾರಾಮರೊಳಗೆ ಶ್ರೇಷ್ಠನಾದ ಭಗವಂತನಾದ ಶ್ರೀರಾಮನು ರಮಿಸಿದನು; ಧರ್ಮವಂ ತ್ಯಜಿಸಟೆ ಸ್ವೇಚ್ಛಾನುಸಾರವಾಗಿ ಅನೇಕ ವರ್ಷಸಹಸ್ರಗಳ ಪರ್ಯಂತವು ಸರ್ವಜನರಿಂದಲೂ ಧ್ಯಾನಂಗೈಯಲ್ಪಟ್ಟ ಪಾದಪದ್ಮವುಳ್ಳವನಾಗಿ ಸುಖದಿಂದ ರಾಜ್ಯವನ್ನು ಪಾಲಿಸಿದನು."

೧೨ನೇ ಅಧ್ಯಾಯ.

ಶ್ರೀರಾಮನ ಸಂತತಿಯು.

ಎಲೈ ಪರೀಕ್ಷಿದ್ರಾಯನೆ, ಶ್ರೀರಾಮನ ಪುತ್ರನಾದ ಕುಶನಿಗೆ ಅತಿಥಿಯೆಂಬ ಪುತ್ರನು; ಆತನಿಗೆ ನಿಷಧನು; ಆತನಿಗೆ ನಭನು; ಆತನಿಗೆ ಪುಂಡರೀಕನು; ಅವನಿಗೆ ಕ್ಷೇಮಧನ್ವನು; ಆತನಿಗೆ ದೇವಾನೀಕನು; ಆತನಿಗೆ ಅಹೀನನು; ಆತನಿಗೆ ಪಾರಿಯಾತ್ರನು; ಅವನಿಗೆ ಬಲನು; ಅವನಿಗೆ ಸ್ಥಲನು; ಆತನಿಗೆ ಸೂರ್ಯಾಂಶಭೂತನಾದ ವಜ್ರನಾಭನು; ಅವನಿಗೆ ಖಗಣನು; ಅವನಿಗೆ ವಿಧೃತಿಯು; ಅವನಿಗೆ ಹಿರಣ್ಯನಾಭನು; ಆತನು ಜೈಮಿನಿ ಶಿಷ್ಯನಾಗಿ ಯೋಗಾಚಾರ್ಯನಾದನು; ಯಾಜ್ಞವಲ್ಕ್ಯಋಷಿಯು ಯೋಗಾಚಾರ್ಯನಾದ ಹಿರಣ್ಯನಾಭನಿಂದ ಮಹಾಸಿದ್ಧಿಪ್ರದವಾದ ಹೃದಯಗ್ರಂಥಿಭೇದಕವಾದ ಅಧ್ಯಾತ್ಮಕ ಯೋಗವನ್ನು ಅಧ್ಯಯನಂಗೈದನು; ಹಿರಣ್ಯನಾಭನಿಗೆ ಪುಷ್ಯನು; ಆತನಿಗೆ ಧ್ರುವಸಂಧಿಯು; ಆತನಿಗೆ ಸುದರ್ಶನು; ಅವನಿಗೆ ಅಗ್ನಿವರ್ಣನು; ಅವನಿಗೆ ಶೀಘ್ರನು; ಅವನಿಗೆ ಮರುವು; ಆ ಮರುರಾಯನು ಯೋಗಸಿದ್ಧನಾಗಿ ಕಲಾಪಗ್ರಾಮವನ್ನಾಶ್ರಯಿಸಿ ಅಲ್ಲಿದ್ದುಕೊಂಡು ಕಲಿಯುಗದ ಅಂತ್ಯದಲ್ಲಿ ನಷ್ಟವಾದ ಸೂರ್ಯವಂಶವನ್ನು ಪುನಶ್ಚ ಉಂಟುಮಾಡುತ್ತಾನೆ; ಅವನಿಗೆ ಪ್ರಸುಶ್ರುತನು; ಆತನಿಗೆ ಸಂಧಿಯು; ಆತನಿಗೆ ಅಮರ್ಷಣನು; ಅವನಿಗೆ ಮಹಸ್ವಂತನು; ಅವನಿಗೆ ವಿಶ್ವಸಾಹ್ವನು; ಅವನಿಗೆ ಬೃಹದ್ಬಲನು ಪುತ್ರನು; ಆ ಬೃಹದ್ಬಲನು ಕುರುಪಾಂಡವ ಯುದ್ಧದಲ್ಲಿ ನಿನ್ನ ತಂದೆಯಾದ ಅಭಿಮನ್ಯುವಿನಿಂದ ಹತನಾದನು; ಇವರು ಇಕ್ಷ್ವಾಕುವಂಶದಲ್ಲಿ ಜನಿಸಿದ ಅರಸುಗಳು; ಅತಿಕ್ರಾಂತರಾದ ಉತ್ತರೋತ್ತರ ಹುಟ್ಟುವ ಅರಸುಗಳನ್ನು ಕೇಳು: ಈ ಬೃಹದ್ಬಲನ ಪುತ್ರನು ಬೃಹದ್ರಣನೆಂಬದಾಗಿ ಹುಟ್ಟುತ್ತಾನೆ; ಆತನಿಗೆ ಉರುಕ್ಷತನು; ಅವನಿಗೆ ವತ್ಸಪ್ರೀತನು ಹುಟ್ಟುತ್ತಾನೆ; ಅವನಿಗೆ ಪ್ರತಿವ್ಯೋಮನು; ಅವನಿಗೆ ಭಾನುವು; ಅವನಿಗೆ ದಿವಾಕರನು; ಆತನಿಗೆ ಸಹದೇವನು; ಆತನಿಗೆ ಬೃಹದಶ್ವನು; ಆತನಿಗೆ ಭಾನುಮಂತನು; ಅವನಿಗೆ ಪ್ರತೀಕಾಶ್ವನು; ಅವನಿಗೆ ಸುಪ್ರತೀಕನು; ಅವನಿಗೆ ಮರುದೇವನು; ಆತನಿಗೆ ಸುನಕ್ಷತ್ರನು; ಅವನಿಗೆ ಪುಷ್ಕರನು; ಅವನಿಗೆ ಅಂತರಿಕ್ಷನು; ಅವನಿಗೆ ಸುತಪನು; ಅವನಿಗೆ ಅಮಿತ್ರಜಿತ್ತು; ಆತನಿಗೆ ಬೃಹದ್ರಾಜನು; ಅವನಿಗೆ ಬರ್ಹಿಯು; ಅವನಿಗೆ ಕೃತಂಜಯನು; ಅವನಿಗೆ ರಣಂಜಯನು; ಅವನಿಗೆ ಸೃಂಜಯನು; ಅವನಿಗೆ ಶಾಕ್ಯನು; ಅವನಿಗೆ ಶುದ್ಧೋದಕನು; ಅವನಿಗೆ ಲಾಂಗಲನು; ಅವನಿಗೆ ಪ್ರಸೇನಜಿತ್ತು; ಅವನಿಗೆ ಕ್ಷುದ್ರಕನು; ಅವನಿಗೆ ರಣಕನು; ಅವನಿಗೆ ಸುರಥನು; ಅವನಿಗೆ ಸುಮಿತ್ರನು; ಆ ಸುಮಿತ್ರನೇ ಕಡೇಯವನು; ಇವರು ಬೃಹದ್ಬಲನ ವಂಶದಲ್ಲಿ ಹುಟ್ಟುವ ಅರಸುಗಳು; ಸುಮಿತ್ರನೇ ಕಡೇಯವನಾದುದರಿಂದ ಇಕ್ಷ್ವಾಕು ಮೊದಲುಗೊಂಡು ಸುಮಿತ್ರನೇ ಕಡೆಯಾಗಿ ಸೂರ್ಯವಂಶವಿರುವುದು.

೧೩ನೇ ಅಧ್ಯಾಯ.

ವಿದೇಹರಾಯನ ಸಂತತಿಯು.

ಎಲೈ ಅರಸೆ, ಇಕ್ಷ್ವಾಕುಪುತ್ರನಾದ ನಿಮಿಚಕ್ರವರ್ತಿಯು ಯಜ್ಞವನ್ನಾರಂಭಿಸಿ ವಸಿಷ್ಠಋಷಿಯನ್ನು ಋತ್ವಿಗರ್ಥವಾಗಿ ವರಿಸಿದನು; ಆಗ ವಸಿಷ್ಠಋಷಿಯು ದೇವೇಂದ್ರನಿಂದ ನಾನು ಮೊದಲೇ ವರಿಸಲ್ಪಟ್ಟಿದ್ದೇನೆ;

ಆದುದರಿಂದ ಇಂದ್ರಯಾಗವನ್ನು ಪೂರ್ತಿಮಾಡಿಬಿಟ್ಟು ಬರುತ್ತೇನೆ; ಅಷ್ಟುಪರ್ಯಂತವು ನಿಧಾನಿಸೆಂದು ಹೇಳ
ಲಾಗಿ ಆ ಮಾತನ್ನು ಕೇಳಿ ನಿಮಿಯು ಸುಮ್ಮನಾದನು ; ವಶಿಷ್ಠಋಷಿಯು ಹೋಗಿ ದೇವೇಂದ್ರನ ಯಾಗವನ್ನು
ಮಾಡಿಸಿದನು ; ಅನಂತರದಲ್ಲಿ ನಿಮಿಚಕ್ರವರ್ತಿಯು ದೇಹವನ್ನು ಅನಿತ್ಯವೆಂದು ತಿಳಿದು ಕಡಮೆ ಋತ್ವಿಕ್ಕುಗಳನ್ನಿ
ಟ್ಟುಕೊಂಡು ವಶಿಷ್ಠಋಷಿಯು ಬರುವುದಕ್ಕೆ ಮುಂಚೆಯೇ ಯಾಗವನ್ನು ಉಪಕ್ರಮಿಸಿದನು ; ಇಂದ್ರಯಾಗವ
ನ್ನು ಪೂರ್ತಿಮಾಡಿ ಬಂದು ವಶಿಷ್ಠಋಷಿಯು ಶಿಷ್ಯನಾದ ನಿಮಿಯ ಅಪರಾಧವನ್ನು ನೋಡಿ 'ತಾನೇ ಸರ್ವಜ್ಞನೆಂ
ದು ದುರಹಂಕೃತನಾದ ಈ ನಿಮಿಯ ಶರೀರವು ಬೀಳಲಿ' ಎಂದು ಶಪಿಸಿದನು ; ಅನಂತರದಲ್ಲಿ ನಿಮಿಯು ಸರ್ವಜ್ಞ
ನಾದ ಗುರುವಾದ ವಶಿಷ್ಠಋಷಿಯನ್ನು ಕುರಿತು 'ಎಲೈ ವಶಿಷ್ಠಋಷಿಯೆ, ಅರ್ಥಲೋಭದಿಂದ ನನ್ನಯಾಗವನ್ನು
ಬಿಟ್ಟು ಅನ್ಯತ್ರ ಹೊರಟುಹೋಗಿ ಧರ್ಮವನ್ನು ತಿಳಿಯದ ನಿನಗೂ ದೇಹಬೀಳಲಿ' ಎಂದು ಪ್ರತಿಯಾಗಿ ಶಪಿಸಿ ವೇ
ದಾಂತ ನಿಷ್ಠನಾದ ನಿಮಿಯು ತನ್ನ ದೇಹವನ್ನು ತ್ಯಜಿಸಿದನು ; ವಶಿಷ್ಠಋಷಿಯು ಮಿತ್ರಾವರುಣರ ದೆಸೆಯಿಂದ
ಊರ್ವಶಿಯಲ್ಲಿ ಜನಿಸಿದನದೆಂತೆನೆ : ಊರ್ವಶಿಯನ್ನು ನೋಡಿ ಮಿತ್ರಾವರುಣರಿಗೆ ರೇತಸ್ಸು ಸ್ಖಲಿತವಾಯಿತು ; ಆ
ರೇತಸ್ಸನ್ನು ಕುಂಭದಲ್ಲಿರಿಸಿದರು ; ಆ ಕುಂಭದಲ್ಲಿ ವಶಿಷ್ಠಋಷಿಯು ಜನಿಸಿದನು ; ಆಮೇಲೆ ಮುನಿಶ್ರೇಷ್ಠರು ಆ
ನಿಮಿದೇಹವನ್ನು ಗಂಧ ವಸ್ತುಗಳಲ್ಲಿರಿಸಿಕೊಂಡಿದ್ದು ಆ ಯಾಗ ಪೂರ್ತಿಯಾದಮೇಲೆ ಹವಿರ್ಭಾಗಾರ್ಥವಾಗಿ ಬಂದಿ
ದ್ದ ದೇವತೆಗಳನ್ನು ಕುರಿತು ಈ ನಿಮಿಯ ದೇಹವು ಜೀವಿಸಲೆಂದು ಪ್ರಾರ್ಥಿಸಿದರು ; ಆಗ ದೇವತೆಗಳು ಹಾಗೇ ಆ
ಗಲಿ ಎಂದು ನುಡಿಯುತಿರಲಾಗಿ ನಿಮಿಯು ನನಗೆ ಪುನಃ ದೇಹಬಂಧ ಬೇಡ ; ಮಹಾಯೋಗಿಗಳು ದೇಹವನ್ನಪೇಕ್ಷಿ
ಸುವುದಿಲ್ಲ; ದೇಹವು ಅನಿತ್ಯವಾದ್ದರಿಂದ ದೇಹಕ್ಕೆ ಚ್ಯುತಿತಪ್ಪುವುದಿಲ್ಲ ; ದೇಹಚ್ಯುತಿಯಾದರೆ ಮಹಾವ್ಯಸನವುಂಟಾ
ಗುವುದು ; ಆದಕಾರಣ ಅನಿತ್ಯವಾದ ದೇಹದಲ್ಲಿ ಆಶೆಯನ್ನು ಬಿಟ್ಟು ಭಗವಂತನ ಚರಣಕಮಲವನ್ನು ಭಜಿಸುವರು;
ಅಂದರಿಂದ ಅಂತಹ ಅನಿತ್ಯವಾದ ದೇಹಬಂಧವು ನನಗೆ ಬೇಡ ; ದುಃಖ ಶೋಕ ಭಯಗಳಿಗೆ ಆಲಯವಾದ ಅಂತಹ
ದೇಹವನ್ನು ನಾನು ಧರಿಸಲಾರೆನು ; ಉದಕದಲ್ಲಿ ಮತ್ಸ್ಯಗಳಿಗೆ ಹ್ಯಾಗೆ ನಾನಾಮುಖವಾದ ಮೃತ್ಯುಭಯವುಂಟೋ
ಅದರಹಾಗೆ ಈ ದೇಹಕ್ಕೆ ನಾನಾಮುಖವಾದ ಮೃತ್ಯುಭಯವು ತಪ್ಪುವುದಿಲ್ಲ' ಎಂದು ನುಡಿದನು. ಆ ವಾಕ್ಯವನ್ನು
ಕೇಳಿ ದೇವತೆಗಳು ಈ ನಿಮಿಯು ದೇಹರಹಿತನಾಗಿಯೇ ಪ್ರಾಣಿಗಳ ನೇತ್ರಗಳಲ್ಲಿ ರೆಪ್ಪೆಗಳನ್ನುಜೀವಿಸುವ ಕ್ರಿಯೆ
ಯನ್ನುಂಟುಮಾಡಿಕೊಂಡು ಅಧ್ಯಾತ್ಮನಿಷ್ಠನಾಗಿರಲೆಂದು ನುಡಿದರು. ಅನಂತರದಲ್ಲಿ ಮಹರ್ಷಿಗಳು ರಾಜ್ಯ ಅರಾಜ
ಕವಾದುದರಿಂದ ಪ್ರಜೆಗಳಿಗೆ ಭಯವನ್ನು ತಿಳಿದು ಆ ನಿಮಿಯ ದೇಹವನ್ನು ಮಥಿಸಿದರು ; ಅಲ್ಲಿಂದ ಕುಮಾರನು ಜನಿ
ಸಿದನು ; ಆ ಕುಮಾರನಿಗೆ ಮೂರು ಹೆಸರುಂಟಾಯಿತು ; ಮೃತಶರೀರದಿಂದ ಜನಿಸಿದನಾದಕಾರಣ ಜನಕನು ; ವಿದೇ
ಹೋತ್ಪನ್ನನಾದ ಕಾರಣ ವೈದೇಹಕನು ; ಮಥನದಿಂದ ಹುಟ್ಟಿದಕಾರಣ ಮಿಥಿಲನು ; ಆತನಿಂದ ನಿರ್ಮಿತವಾದ
ಪುರಿಯು ಮಿಥಿಲಾ ಎಂದು ಪ್ರಸಿದ್ಧವಾಯಿತು ; ಆ ಜನಕನಿಗೆ [illegible] ಪುತ್ರನು ; ಅವನಿಗೆ ನಂದಿವರ್ಧ
ನನು ; ಅವನಿಗೆ ಸುಕೇತುವು ; ಆತನಿಗೆ ದೇವರಾತನು ; ಆತನಿಗೆ ಬೃಹದ್ರಥನು ; ಆತನಿಗೆ ಮಹಾವೀರ್ಯನು ;
ಆತನಿಗೆ ಸುಧೃತಿಯು ; ಆತನಿಗೆ ಧೃಷ್ಟಕೇತುವು ; ಅವನಿಗೆ ಹರ್ಯಶ್ವನು ; ಅವನಿಗೆ ಮರುವು ; ಆತನಿಗೆ ಪ್ರತೀಂ
ಧಕನು ; ಆತನಿಗೆ ಕೃತರಥನು; ಅವನಿಗೆ ದೇವಮೀಢನು ; ಅವನಿಗೆ ವಿಧೃತಿಯು ; ಅವನಿಗೆ ಮಹಾಧೃತಿಯು ;
ಆತನಿಗೆ ಕೃತರಾತನು ; ಅವನಿಗೆ ಮಹಾರೋಮನು ; ಅವನಿಗೆ ಸ್ವರ್ಣರೋಮನು ; ಅವನಿಗೆ ಹ್ರಸ್ವರೋಮನು;
ಆತನಿಗೆ ಸೀರಧ್ವಜನು ಹುಟ್ಟಿದನು ; ಆ ಸೀರಧ್ವಜನು ಯಜ್ಞಾರ್ಥವಾಗಿ ಭೂಮಿಯನ್ನು ಉಳಿಸುವಾಗ ಆ ನೇಗಲಿನ
ಅಗ್ರದಲ್ಲಿ ಸೀತಾದೇವಿಯು ಹುಟ್ಟಿದಳು ; ಆದಕಾರಣ ಸೀರಧ್ವಜನೆಂಬ ಹೆಸರು ; ಆತನಿಗೆ ಕುಶಧ್ವಜನು ; ಆ
ತನಿಗೆ ಧರ್ಮಧ್ವಜನು; ಆ ಧರ್ಮಧ್ವಜನಿಗೆ ಈ ಕೃತಧ್ವಜನು ಮಿತಧ್ವಜನು ಎಂಬ ಈರ್ವರೂ ಪುತ್ರರು ; ಕೃತ
ಧ್ವಜನಿಗೆ ಕೇಶಿಧ್ವಜನು ; ಮಿತಧ್ವಜನಿಗೆ ಖಾಂಡಿಕ್ಯನು ; ಕೃತಧ್ವಜನ ಪುತ್ರನಾದ ಕೇಶಿಧ್ವಜನು ಆತ್ಮವಿದ್ಯಾ ವಿ
ಶಾರದನು ; ಖಾಂಡಿಕ್ಯನು ಕರ್ಮತತ್ವಜ್ಞನು ; ಕೇಶಿಧ್ವಜನ ಭಯದಿಂದ ಹೊರಟುಹೋದನು ; ಆ ಕೇಶಿಧ್ವಜನಿಗೆ ಭಾ
ನುಮಂತನು ಅವನಿಗೆ ಶತದ್ಯುಮ್ನನು ; ಅವನಿಗೆ ಶುಚಿಯು ; ಅವನಿಗೆ ಸನದ್ವಾಜನು ; ಅವನಿಗೆ ಊರ್ಧ್ವಕೇತು

ವು ; ಅವನಿಗೆ ಅಜನು ; ಅವನಿಗೆ ಕುರುಜಿತ್ತು ; ಆತನಿಗೆ ಅರಿಷ್ಟನೇಮಿಯು ; ಆತನಿಗೆ ಶ್ರುತಾಯುವು ; ಆತನಿಗೆ ಸುಪಾರ್ಶ್ವಕನು ; ಆತನಿಗೆ ಚಿತ್ರರಥನು ; ಆತನಿಗೆ ದೇವಾಪಿಯು ; ಅವನಿಗೆ ಹೇಮರಥನು ; ಅವನಿಗೆ ಸತ್ಯರಥನು ; ಆತನಿಗೆ ಉಪಗುರುವು ; ಅವನಿಗೆ ಉಪಗುಪ್ತನು ; ಆ ಉಪಗುಪ್ತನು ಅಗ್ನಿಯ ಅಂಶದಿಂದ ಹುಟ್ಟಿದವನು ; ಆತನಿಗೆ ಸಾವನನು ; ಅವನಿಗೆ ಸುವರ್ಚನು ; ಅವನಿಗೆ ಸುಭಾಷಣನು ; ಅವನಿಗೆ ಶ್ರುತನು ; ಆತನಿಗೆ ಜಯನು ; ಅವನಿಗೆ ವಿಜಯನು ; ಅವನಿಗೆ ಋತನು ; ಆತನಿಗೆ ಅನಘನು ; ಆತನಿಗೆ ವೀತಹವ್ಯನು ; ಅವನಿಗೆ ಧೃತಿಯು ; ಅವನಿಗೆ ಬಹುಳಾಶ್ವನು ; ಅವನಿಗೆ ಕೃತಿಯು ; ಆತನಿಗೆ ಮಹಾವಶಿಯು ! ಎಲೈ ಪರೀಕ್ಷಿದ್ರಾಯನೆ, ಈ ಅರಸುಗಳು ಮಿಥಿಲರೂ ಎನಿಸುವರು ; ಈ ಅರಸುಗಳು ಯೋಗಶಾಸ್ತ್ರ ಪಾರಂಗತರಾದ ಯಾಜ್ಞವಲ್ಕ್ಯಾದಿ ಮಹರ್ಷಿಗಳ ಅನುಗ್ರಹದಿಂದ ಗೃಹಸ್ಥಾಶ್ರಮದಲ್ಲಿದ್ದಾಗ್ಯೂ ದ್ವಂದ್ವರಹಿತರಾಗಿ ಜೀವನ್ಮುಕ್ತರಾಗಿ ಬ್ರಹ್ಮಾನಂದವನ್ನನುಭವಿಸುವರಾಗಿದ್ದರು.

---

೧೪ ನೇ ಅಧ್ಯಾಯ.

ಅತ್ರಿಋಷಿ ಪುತ್ರನಾದ ಚಂದ್ರನು ಬೃಹಸ್ಪತಿಯ ಪತ್ನಿಯಾದ ತಾರೆಯಲ್ಲಿ ಬುಧನೆಂಬ ಪುತ್ರನನ್ನು ಪಡೆದದ್ದು.

ಈರೀತಿಯಲ್ಲಿ ಶುಕಾಚಾರ್ಯನು ಪರೀಕ್ಷಿದ್ರಾಯನನ್ನು ಕುರಿತು ಸೂರ್ಯವಂಶ ವಿಸ್ತಾರವನ್ನು ನಿರೂಪಿಸಿ ಚಂದ್ರವಂಶ ವಿಸ್ತಾರವನ್ನು ಚತುರ್ದಶಾಧ್ಯಾಯ ಮೊದಲಾದ ಅಧ್ಯಾಯಗಳಿಂದ ನಿರೂಪಿಸುವನು ! "ಎಲೈ ಪರೀಕ್ಷಿದ್ರಾಯನೇ, ಚಂದ್ರವಂಶವನ್ನು ಹೇಳುತ್ತೇನೆ ; ಸಾವಧಾನನಾಗಿ ಕೇಳು ; ಪರಿಶುದ್ಧವಾದ ಆ ಚಂದ್ರವಂಶದಲ್ಲಿ ಪುಣ್ಯಕೀರ್ತಿಯುಳ್ಳ ಇಳರಾಯ ಮುಂತಾದ ಅರಸುಗಳು ವರ್ಣಿಸಲ್ಪಡುತ್ತಾರೆ ; ಸಹಸ್ರ ಶಿರಸ್ಕನಾದ ಪರಮಾತ್ಮನ ನಾಭಿಹ್ರದದಲ್ಲಿರುವ ಪದ್ಮದಿಂದ ಹುಟ್ಟಿದ ಬ್ರಹ್ಮನ ದೆಸೆಯಿಂದ ಗುಣಗಳಿಂದ ತಂದೆಗೆ ಸಮಾನನಾದ ಅತ್ರಿಋಷಿಯು ಹುಟ್ಟಿದನು ; ಆ ಅತ್ರಿಋಷಿಯ ಆನಂದಬಾಷ್ಪದಿಂದ ಅಮೃತಮಯನಾದ ಚಂದ್ರನು ಜನಿಸಿದನು ; ಬ್ರಹ್ಮದೇವನು ಆ ಚಂದ್ರನಿಗೆ ಬ್ರಾಹ್ಮಣರು ಓಷಧಿಗಳು ನಕ್ಷತ್ರಗಳು ದರ್ಭೆಗಳು ಇವುಗಳಿಗೆಲ್ಲಕ್ಕೂ ಆಧಿಪತ್ಯವನ್ನಿತ್ತನು ; ಆ ಚಂದ್ರನು ಲೋಕತ್ರಯವನ್ನು ಜಯಿಸಿ ರಾಜಸೂಯಯಾಗವನ್ನು ಮಾಡಿ ಐಶ್ವರ್ಯಗರ್ವದಿಂದ ಬೃಹಸ್ಪತಿಯ ಪತ್ನಿಯಾದ ತಾರಾದೇವಿಯನ್ನು ಬಲಾತ್ಕಾರದಿಂದ ಅಪಹರಿಸಿದನು ; ಆಗ ಬೃಹಸ್ಪತಿಯಿಂದ ಬಹುಪ್ರಕಾರವಾಗಿ ಯಾಚಿಸಲ್ಪಟ್ಟಾಗ್ಯೂ ಆ ಚಂದ್ರನು ತಾರಾದೇವಿಯನ್ನು ಬಿಡಲಿಲ್ಲ ; ಆ ನಿಮಿತ್ತವಾಗಿ ದೇವಾಸುರರಿಗೆ ಯುದ್ಧವಾಯಿತು ; ಶುಕ್ರಾಚಾರ್ಯನು ಬೃಹಸ್ಪತಿಯಲ್ಲಿ ದ್ವೇಷದಿಂದ ಶಿಷ್ಯರಾದ ಅಸುರರನ್ನು ಕರಕೊಂಡು ಚಂದ್ರನಿಗೆ ಸಹಾಯಾರ್ಥವಾಗಿ ಬಂದನು ; ರುದ್ರನು ಅಂಗೀರಸಋಷಿಗೆ ಶಿಷ್ಯನಾದಕಾರಣ ಪುತ್ರನಾದ ಬೃಹಸ್ಪತಿಗೆ ಸಹಾಯಾರ್ಥವಾಗಿ ಭೂತಂಗಳನ್ನು ಕರಕೊಂಡು ಬಂದನು ; ದೇವಾಸುರರಿಗೆ ಲೋಕವಿನಾಶಕರವಾದ ಯುದ್ಧವಾಯಿತು ; ಆಮೇಲೆ ಅಂಗೀರಸಋಷಿಯಿಂದ ವಿಜ್ಞಾಪಿತನಾದ ಬ್ರಹ್ಮನು ಚಂದ್ರನನ್ನು ಬೋಧಿಸಲು ಆ ಚಂದ್ರನು ತಾರೆಯನ್ನು ಬೃಹಸ್ಪತಿಗೆ ಕೊಟ್ಟನು ; ಬೃಹಸ್ಪತಿಯು ತಾರೆಯನ್ನು ಗರ್ಭಿಣಿಯೆಂದು ತಿಳಿದು ಆ ತಾರೆಯನ್ನು ಕುರಿತು 'ಎಲೈ ದುಷ್ಟಬುದ್ಧಿಯುಳ್ಳವಳೆ, ನನ್ನ ಕ್ಷೇತ್ರವಾದ ನಿನ್ನಲ್ಲಿ ಪರರಿಂದಿರಿಸಲ್ಪಟ್ಟ ಈ ಗರ್ಭವನ್ನು ತ್ಯಜಿಸು ! ಎಲೈ ದುಷ್ಟೆಯೆ, ಸಂತಾನಾರ್ಥಿಯಾದ ನಾನು ನಿನ್ನನ್ನು ಭಸ್ಮೀಕರಿಸುವುದಿಲ್ಲ ; ನೀನು ಸ್ತ್ರೀಯು ಎಂದು ಹೇಳಲಾಗಿ ಆ ವಾಕ್ಯವನ್ನು ಕೇಳಿ ಲಜ್ಜಿತಳಾದ ತಾರೆಯು ಸುವರ್ಣದಂತೆ ಹೊಳೆಯುತಲಿರುವ ಕುಮಾರನನ್ನು ವಿಸರ್ಜಿಸಿದಳು ; ಆ ಕುಮಾರನಲ್ಲಿ ಬೃಹಸ್ಪತಿಯೂ ಇಚ್ಛೆಯನ್ನು ಮಾಡಿದನು ; ಚಂದ್ರನೂ ಇಚ್ಛೆಯನ್ನು ಮಾಡಿದನು ; ಬೃಹಸ್ಪತಿಯು ಆ ಕುಮಾರನನ್ನು ನೋಡಿ ಈ ಕುಮಾರನು ನನಗೆ ಎಂತಲೂ ಚಂದ್ರನು ನನಗೆ ಎಂತಲೂ ಗುರುಚಂದ್ರರಿಗೆ ಪರಸ್ಪರ ವಿವಾದವಾಗುತಿರಲಾಗಿ ಋಷಿಗಳು ದೇವತೆಗಳು ಸಹ ತಾರೆಯನ್ನು ಕುರಿತು 'ಎಲೈ ತಾರೆಯೆ, ಈ ಶಿಶುವು ಯಾರಿಗೆ

ಜನಿಸಿದ್ದು' ಎಂದು ಕೇಳಿದರು. ಆಗ ತಾರೆಯು ಲಜ್ಜೆಯಿಂದ ಪೇಳದೆ ಇದ್ದುದರಿಂದ ಆ ಕುಮಾರನು ಕುಪಿತನಾಗಿ ಮಾತೃವನ್ನು ಕುರಿತು 'ಎಲೈ ಅಸದ್ವ್ಯಾಪಾರವುಳ್ಳವಳೇ, ಕಪಟಲಜ್ಜೆಯಿಂದ ಯಾಕೆ ನೀನು ಪೇಳುವುದಿಲ್ಲ; ನಿನ್ನ ದೋಷವನ್ನು ನನಗೆ ಹೇಳು' ಎಂದು ಗರ್ಜಿಸಿದನು. ಆಗ ಬ್ರಹ್ಮನು ಆ ತಾರೆಯನ್ನು ರಹಸ್ಯವಾಗಿ ಕರದು ಬ ಳ್ಳಿೀ ಮಾತನಾಡಿ ಕೇಳಿದನು; ತಾರೆಯು ಮೆಲ್ಲನೆ ಚಂದ್ರನಿಗೆ ಎಂದು ಪೇಳಲು ಚಂದ್ರನು ಆ ಕುಮಾರನನ್ನು ತೆಗದು ಕೊಂಡನು; ಬ್ರಹ್ಮನು ಆ ಕುಮಾರನಿಗೆ ಬುಧನೆಂಬ ನಾಮಧೇಯವನ್ನು ಮಾಡಿದನು; ಗಂಭೀರವಾದ ಬುದ್ಧಿಯು ಳ್ಳ ಆ ಪುತ್ರನಿಂದ ಚಂದ್ರನು ಸಂತೋಷವನ್ನೈದಿದನು; ಆ ಬುಧನಿಂದ ಇಳಾಯೆಂಬ ಸ್ತ್ರೀಯಲ್ಲಿ ಪುರೂರವರಾಯ ನು ಹುಟ್ಟಿದನು; ಹೀಗಿರುವಾಗ ಊರ್ವಶಿಯೆಂಬ ದೇವಸ್ತ್ರೀಯು ಇಂದ್ರನ ಗೃಹದಲ್ಲಿ ನಾರದಮುನಿಯಿಂದ ಗಾನಂ ಗೈಯಲ್ಪಡುತಲಿರುವ ಆ ಪುರೂರವರಾಯನ ರೂಪ ಗುಣ ಔದಾರ್ಯ ಚರಿತ್ರ ಧನ ಪರಾಕ್ರಮ ಮುಂತಾದ ಸುಗು ಣಗಳನ್ನು ಕೇಳಿ ಕಾಮಪೀಡಿತಳಾಗಿ ಮಿತ್ರಾವರುಣ ಶಾಪದಿಂದ ಮನುಷ್ಯಲೋಕವನ್ನೈದಿ ಮೂರ್ತಿಮಂತನಾದ ಮನ್ಮಥನಂತಿರುವ ಪುರುಷಶ್ರೇಷ್ಠನಾದ ಆ ಪುರೂರವರಾಯನನ್ನು ನೋಡಿ ಧೈರ್ಯವನ್ನವಲಂಬಿಸಿ ಆತನ ಸಮೀಪ ಕ್ಕೆ ಬಂದಳು; ಆ ಪುರೂರವರಾಯನು ಆ ಊರ್ವಶಿಯನ್ನು ನೋಡಿ ಸಂತೋಷದಿಂದ ವಿಕಸಿತವಾದ ನೇತ್ರವೂ ರೋಮಾಂಚವೂ ಉಳ್ಳವನಾಗಿ ಮಧುರವಾಕ್ಯದಿಂದ ಆಕೆಯಂ ಕುರಿತು 'ಎಲೈ ಉತ್ತಮಸ್ತ್ರೀಯೆ, ಕ್ಷೇಮವಾಗಮನ ವಾಯಿತೆ; ಕುಳಿತುಕೊ; ನಿನಗೆ ಯಾವ ಇಷ್ಟಾರ್ಥವನ್ನು ನಾನು ಮಾಡಲಿ; ನಮಿಗಿಬ್ಬರಿಗೂ ಅನೇಕ ಸಂವತ್ಸ ರಂಗಳು ಅನ್ಯೋನ್ಯ ಪ್ರೀತಿವುಂಟಾಗಲಿ; ನಾವಿಬ್ಬರೂ ರಮಿಸೋಣ' ಅಂದನು. ಆ ರಾಜವಾಕ್ಯವನ್ನು ಕೇಳಿ ಊರ್ವಶಿಯು 'ಎಲೈ ಸುಂದರನಾದ ಅರಸೆ, ಯಾವ ಸ್ತ್ರೀಯ ಮನಸ್ಸೂ ದೃಷ್ಟಿಯೂ ನಿನ್ನಲ್ಲಿ ಆಸಕ್ತವಾಗದು; ನಿನ್ನ ವಕ್ಷಸ್ಥಳವನ್ನು ನೋಡಿದಮೇಲೆ ಕ್ರೀಡಿಸಲಿಚ್ಛೆಯಿಂದ ಯಾವ ಸ್ತ್ರೀಯು ಮೋಹಿಸದೆ ಇದ್ದಾಳು! ಎಲೈ ಕಾಮಸೌಖ್ಯಪ್ರದನಾದ ಅರಸೆ, ಇವೆರಡು ಟಗರು ಮರಿಗಳನ್ನು ನಿನ್ನ ವಶದಲ್ಲಿರಿಸುತ್ತೇನೆ; ಇವನ್ನು ನೀನು ರಕ್ಷಿ ಸು; ನಿನ್ನೊಡನೆ ನಾನು ರಮಿಸುತ್ತೇನೆ; ಸ್ತ್ರೀಯರುಗಳಿಗೆ ಯಾವ ಪುರುಷನು ಶ್ಲಾಘ್ಯನೋ ಅವನೇ ನಾಥನು! ಎಲೈ ವೀರನಾದ ಅರಸೆ, ನನಗೆ ಘೃತವೇ ಆಹಾರವಾಗಬೇಕು; ರತಿಕಾಲವ್ಯತಿರಿಕ್ತವಾದ ಕಾಲದಲ್ಲಿ ವಸ್ತ್ರಹೀನನಾದ ನಿನ್ನ ನ್ನು ನೋಡಕೆಲಸವಿಲ್ಲ; ನನ್ನ ಈ ಮೂರು ವಿಜ್ಞಾಪನೆಗಳನ್ನು ನೀನು ನಡಿಸಿಕೊಟ್ಟರೆ ನಿನ್ನೊಡನೆ ರಮಿಸುತ್ತೇ ನೆ' ಎಂಬ ಊರ್ವಶಿಯ ವಾಕ್ಯವನ್ನು ಕೇಳಿ ಹಾಗೇ ಆಗಲಿ ಎಂದು ಅರಸು ಸಮ್ಮತಿಸಿದನು; ಆ ಪುರೂರವರಾಯನು ಆಶ್ಚರ್ಯಪಟ್ಟು 'ಮನುಷ್ಯಲೋಕವನ್ನು ವ್ಯಾಮೋಹಪಡಿಸುವ ನಿನ್ನ ಸೌಂದರ್ಯವು ಆಶ್ಚರ್ಯಕರವಾದದ್ದು; ನೀನಾಗಿ ಒಪ್ಪಿಬಂದ ನಿನ್ನನ್ನು ಯಾವಪುರುಷನು ಉಲ್ಲಂಘಿಶ್ಯಾನು' ಎಂದು ಈರೀತಿಯಲ್ಲಿ ಪುರುಷಶ್ರೇಷ್ಠನಾದ ಪುರೂರವ ರಾಯನು ನುಡಿದು ರತಿಯಲ್ಲಿ ಸಂತೋಷಪಡಿಸುವ ಆ ದೇವಸ್ತ್ರೀಯೊಡನೆ ಯಥಾಯೋಗ್ಯವಾಗಿ ದೇವತೆಗಳಿಗೆ ವಿಹಾರಸ್ಥಾನಂಗಳಾದ ಕುಬೇರೋದ್ಯಾನವಾದ ಚೈತ್ರರಥ ಮೊದಲಾದ ದಿವ್ಯೋದ್ಯಾನಂಗಳಲ್ಲಿ ರಮಿಸಿದನು; ಪದ್ಮಕೇ ಸರಗಳಿಂ ಪರಿಮಳಿಸುವ ದಿವ್ಯಗಂಧವುಳ್ಳ ಊರ್ವಶಿಯೊಡನೆ ನಿರಂತರದಲ್ಲಿಯೂ ರಮಿಸುವನಾಗಿ ಆ ಊರ್ವಶಿಯ ಮುಖಪರಿಮಳದಿಂದ ಮೋಹಿತನಾಗಿ ಅನೇಕ ಸಂವತ್ಸರಂಗಳು ಸಂತೋಷಪಟ್ಟು ಸುಖಿಸಿದನು; ಹೀಗಿರುತಿರಲಾಗಿ ಇಂದ್ರನು ಊರ್ವಶಿಯಿಂದ ರಹಿತವಾದ ನನ್ನ ಸಭೆಯು ಚನ್ನಾಗಿ ಪ್ರಕಾಶಿಸುವುದಿಲ್ಲವೆಂದು ನೋಡಿ ಊರ್ವಶಿಯು ನ್ನು ಕರತರಲೋಸುಗ ಗಂಧರ್ವರನ್ನು ಕಳುಹಿಸಿದನು; ಆ ಗಂಧರ್ವರು ಮಹಾಂಧಕಾರವ್ಯಾಪ್ತವಾದ ಅರ್ಧರಾ ತ್ರಿಯಲ್ಲಿ ಬಂದು ಮಾಯೆಯಿಂದ ಆ ಅರಸಿನ ಗೃಹದಲ್ಲಿರಿಸಲ್ಪಟ್ಟಿರುವ ಟಗರಿನ ಮರಿಗಳನ್ನಪಹರಿಸಿಕೊಂಡು ಹೋದರು; ಅಪಹರಿಸಲ್ಪಟ್ಟು ಹೋಗುತಲಿರುವ ಆ ಟಗರುಮರಿಗಳ ದೀನಸ್ವರವನ್ನು ಕೇಳಿ ಊರ್ವಶಿಯು ತಾನು ಶೂರನಲ್ಲದಿದ್ದಾಗ್ಯೂ ತನ್ನನ್ನು ಶೂರನೆಂದು ತಿಳಿದಿರುವ ನಪುಂಸಕನಾದ ಈ ಕುತ್ಸಿತಪತಿಯನ್ನು ನಂಬಿ ನಾನು ಮಕ್ಕಳನ್ನು ನೀಗಿಕೊಂಡು ವ್ಯರ್ಥವಾಗಿ ಕೆಟ್ಟುಹೋದೆನು; ಈ ಪುರೂರವರಾಯನು ತಾನು ಪುರುಷನೆನಿಸಿಕೊಂ ಡು ಸ್ತ್ರೀಯಂತೆ ಭಯಪಟ್ಟು ದಿವಾರಾತ್ರಿಗಳಲ್ಲಿಯೂ ಮಲಗಿರುತ್ತಾನೆ; ಈರೀತಿಯಲ್ಲಿ ಊರ್ವಶಿಯ ವಾಗ್ಬಾಣಂ ಗಳಿಂದ ಅಂಕುಶಪ್ರಹಾರಂಗಳಿಂದ ಪೆಟ್ಟುಬಿದ್ದ ಮದಗಜದಂತೆ ಪೆಟ್ಟುಬಿದ್ದವನಾಗಿ ರಾತ್ರಿಯಲ್ಲಿ ಖಡ್ಗವನ್ನು ತೆಗದು

ಕೊಂಡು ವಸ್ತ್ರರಹಿತನಾಗಿ ರೋಷದಿಂದ ಆ ಚೋರರನ್ನಟ್ಟಿಕೊಂಡು ಹೋದನು ; ಗಂಧರ್ವರು ಆ ಟಗರುಮರಿಗಳನ್ನಲ್ಲಿ ಬಿಟ್ಟು ಮಿಂಚುಗಳಾದರು ; ಆ ಮೇಷಗಳನ್ನು ತೆಗದುಕೊಂಡು ಬರುತಲಿರುವ ವಸ್ತ್ರಹೀನನಾದ ಪುರೂರವರಾಯನನ್ನು ಊರ್ವಶಿಯು ನೋಡಿ ಪ್ರತಿಜ್ಞಾಭಂಗವನ್ನು ಊಹಿಸಿ ಸ್ವರ್ಗಕ್ಕೆ ಹೋದಳು ; ಪುರೂರವರಾಯನು ಹಾಸಿಗೆಯಲ್ಲಿ ಪತ್ನಿಯಾದ ಊರ್ವಶಿಯನ್ನು ಕಾಣದೆ ಖಿನ್ನನಾಗಿ ಅವಳಲ್ಲಿಯೇ ಚಿತ್ತವುಳ್ಳವನಾಗಿ ಅತಿ ವ್ಯಸನದಿಂದ ಶೋಕಪಡುತ ಉನ್ಮತ್ತನಂತೆ ಭೂಮಿಯಲ್ಲಿ ಸುತ್ತಿದನು ; ಹೀಗೆ ಸುತ್ತುವಾಗ ಕುರುಕ್ಷೇತ್ರದಲ್ಲಿ ಒಂದು ಸರೋವರದಲ್ಲಿ ಆ ಊರ್ವಶಿಯನ್ನೂ ಅವಳ ಸಖಿಯರಾದ ಐದುಮಂದಿ ಸ್ತ್ರೀಯರುಗಳನ್ನೂ ನೋಡಿ ಸಂತುಷ್ಟಹೃದಯನಾಗಿ ಮೃದುವಾಕ್ಯವನ್ನು ನುಡಿದನು ! 'ಎಲೈ ಪತ್ನಿಯಾದ ಊರ್ವಶಿಯೇ, ನಿಲ್ಲುನಿಲ್ಲು; ನನ್ನನ್ನು ಚನ್ನಾಗಿ ಸುಖಪಡಿಸದೆ ಹೋಗಬೇಡ; ಮಾತನಾಡೋಣ ನಿಂತುಕೊ ; ಉನ್ಮತ್ತವಾದ ಈ ನನ್ನ ದೇಹವು ಇಲ್ಲಿ ಬೀಳುತ್ತೆ ; ನಿನ್ನಿಂದ ನಾನು ಬಹುದೂರದೇಶ ಆಕರ್ಷಿಸಲ್ಪಟ್ಟು ಸುತ್ತಿದೆನು ; ನಿನ್ನ ದಯಕ್ಕೆ ಪಾತ್ರನಾಗದಮೇಲೆ ಈ ದೇಹವನ್ನು ತೋಳಗಳು ಗೃಧ್ರಗಳು ಭಕ್ಷಿಸಿಬಿಡುತಲಿವೆ ' ಎಂಬ ರಾಜವಾಕ್ಯವನ್ನು ಕೇಳಿ ಊರ್ವಶಿಯು 'ಎಲೈ ಅರಸೆ, ನೀನು ಮೃತನಾಗಬೇಡ ; ನೀನು ಪುರುಷನು ; ಧೈರ್ಯವನ್ನವಲಂಬಿಸು ; ವೃಕಾದಿಗಳು ನಿನ್ನ ಶರೀರವನ್ನು ಭಕ್ಷಿಸಬೇಡ ; ತೋಳಂಗಳ ಹೃದಯದಂತೆ ಕಠಿನವಾದ ಚಿತ್ತವುಳ್ಳ ಸ್ತ್ರೀಯರುಗಳ ಸಖ್ಯವು ಯಾರಲ್ಲಿಯೂ ಸ್ಥಿರವಲ್ಲ ; ಸ್ತ್ರೀಯರುಗಳು ನಿರ್ದಯರು ; ಕ್ರೂರರು ; ಬಹುಕ್ರೋಧಿಗಳು ; ತಮ್ಮ ಕೆಲಸ ನಿಮಿತ್ತವಾಗಿ ಮಹಾ ಸಾಹಸವನ್ನು ಮಾಡುವರು ; ಸ್ವಲ್ಪಕೆಲಸ ನಿಮಿತ್ತವಾಗಿ ನಂಬಿರುವ ಪತಿಯನ್ನಾದಾಗ್ಯೂ ಅಣ್ಣತಮ್ಮಂದಿರನ್ನಾದಾಗ್ಯೂ ಸಂಹರಿಸುವರು ; ಚಿತ್ತದಲ್ಲಿ ಪ್ರೇಮವಿಲ್ಲದಿದ್ದಾಗ್ಯೂ ಕೃತ್ರಿಮವಾದ ವಿಶ್ವಾಸವನ್ನು ತೋರಿಸುವರಾಗಿ ಮೂಢರನ್ನು ವಂಚಿಸುವರು ; ನೂತನ ನೂತನ ಪುರುಷರನ್ನು ನೋಡಿ ಸ್ವೇಚ್ಛಾವಿಹಾರಿಣೀಯರಾಗುವರು ! ಎಲೈ ಪತಿಯೆ, ಸಂವತ್ಸರಾಂತದಲ್ಲಿ ನೀನು ನನ್ನೊಡನೆ ಒಂದುರಾತ್ರಿ, ಇರುತ್ತೀಯೆ ; ನಿನಗೆ ಪುತ್ರರು ಆಗುತ್ತಾರೆ ' ಎಂದು ನುಡಿದಳು. ಆ ವಾಕ್ಯವನ್ನು ಕೇಳಿ ಪುರೂರವರಾಯನು ಊರ್ವಶಿಯನ್ನು ಗರ್ಭಿಣಿಯನ್ನಾಗಿ ತಿಳಿದು ತನ್ನ ಪುರಕ್ಕೆ ಹೊರಟುಬಂದನು ; ಪುನಃ ಸಂವತ್ಸರಾಂತದಲ್ಲಿ ಪುರೂರವರಾಯನು ಅದೇ ಸ್ಥಳಕ್ಕೆ ಬಂದು ವೀರಮಾತೃವಾದ ಊರ್ವಶಿಯನ್ನೈದಿ ಸಂತೋಷದಿಂದ ಅವಳೊಡನೆ ಆ ರಾತ್ರಿಯಲ್ಲಿ ಸುಖದಿಂದಿದ್ದನು ; ಅನಂತರದಲ್ಲಿ ಊರ್ವಶಿಯು ವಿರಹಾತುರನಾದ ಪುರೂರವರಾಯನನ್ನು ಕುರಿತು 'ಎಲೈ ಪತಿಯೆ, ಈ ಗಂಧರ್ವರನ್ನು ಉಪಾಸಿಸು ; ನನ್ನನ್ನು ನಿನಗೆ ಕೊಡುತ್ತಾರೆ ' ಎಂದು ನುಡಿದಳು. ಅದೇಪ್ರಕಾರ ಗಂಧರ್ವರನ್ನು ಸ್ತುತಿಗೈಯುತಲಿದ್ದ ಪುರೂರವರಾಯನಿಗೆ ಸಂತುಷ್ಟರಾದ ಗಂಧರ್ವರು ಅಗ್ನಿಸ್ಥಾಲಿಯನ್ನು ಕೊಟ್ಟರು ; ಆ ಅಗ್ನಿಸ್ಥಾಲಿಯನ್ನು ಊರ್ವಶಿಯನ್ನಾಗಿ ತಿಳಿದುಕೊಂಡು ಆ ಸ್ಥಾಲಿಯೊಡನೆ ವನದಲ್ಲಿ ಸಂಚರಿಸುವನಾಗಿ ಆಮೇಲೆ ಊರ್ವಶಿಯಲ್ಲ ಇದು ಅಗ್ನಿಸ್ಥಾಲಿಯೆಂದು ತಿಳಿದು ಆ ಅಗ್ನಿಸ್ಥಾಲಿಯನ್ನು ವನದಲ್ಲಿರಿಸಿ ಬಿಟ್ಟು ಗೃಹವನ್ನೈದಿ ರಾತ್ರಿಯಲ್ಲಿ ಆ ಊರ್ವಶಿಯನ್ನೇ ಮನಸ್ಸಿನಲ್ಲಿ ಧ್ಯಾನಿಸುತ ತ್ರೇತಾಯುಗವು ವರ್ತಮಾನನಾಗುತಿರಲಾಗಿ ಕರ್ಮಪ್ರತಿಪಾದಕವಾದ ವೇದತ್ರಯವು ಪ್ರತ್ಯಕ್ಷವಾಯಿತು ; ಅನಂತರದಲ್ಲಿ ಪುರೂರವರಾಯನು ಅಗ್ನಿಸ್ಥಾಲಿ ಇರುವ ಸ್ಥಾನಕ್ಕೆ ಹೋಗಿ ಅಲ್ಲಿ ಶಮೀಗರ್ಭದಲ್ಲಿ ಹುಟ್ಟಿದ ಅಶ್ವತ್ಥಮರದಿಂದ ಎರಡು ಅರಣಿಗಳನ್ನು ಮಾಡಿ ಊರ್ವಶೀಲೋಕ ಪ್ರಾಪ್ತ್ಯರ್ಥವಾಗಿ ಮಂತ್ರದಿಂದ ಕೆಳಗಿನ ಅರಣಿಯನ್ನು ಊರ್ವಶಿಯನ್ನಾಗಿ ಧ್ಯಾನಂಗೈಯ್ಯುವನಾಗಿ ಊರ್ಧ್ವಾರಣಿಯನ್ನು ತನ್ನನ್ನಾಗಿ ಭಾವಿಸಿ ಉಭಯ ಮಧ್ಯವಾದ ಕಾಷ್ಠವನ್ನು ಪುತ್ರನನ್ನಾಗಿ ಧ್ಯಾನಿಸುತ ಅಗ್ನಿಯನ್ನು ಮಥಿಸಿದನು ; ಆ ಪುರೂರವರಾಯನಿಂದ ಮಾಡಲ್ಪಟ್ಟ ಮಥನದಿಂದ ಯಜ್ಞೇಶ್ವರನು ಭೋಗ್ಯವಸ್ತುಪ್ರದನಾಗಿ ಜನಿಸಿದನು ; ಆ ಯಜ್ಞೇಶ್ವರನು ವೇದೋದಿತವಾದ ಆಧಾನಾದಿಸಂಸ್ಕಾರದಿಂದ ದಕ್ಷಿಣಾಗ್ನಿ ಗಾರ್ಹಪತ್ಯ ಆಹವನೀಯವಾದಿಗಳೆಂಬ ಮೂರುವಿಧಗಳಿಂದ ಈ ಪುರೂರವರಾಯನಿಗೆ ಪುತ್ರಭಾವವನ್ನೈದಿದನು ; ಅನಂತರಲ್ಲಿ ಪುರೂರವರಾಯನು ಊರ್ವಶಿಲೋಕಪ್ರಾಪ್ತಿ ಇಚ್ಛೆಯಿಂದ ಸರ್ವದೇವಮಯನಾದ ಯಜ್ಞೇಶ್ವರನಾದ ಭಗವಂತನಾದ ಅಧೋಕ್ಷಜನಾದ ಶ್ರೀಹರಿಯನ್ನು ಅಗ್ನಿತ್ರಯದಿಂದ ಆರಾಧಿಸಿದನು ; ಪೂರ್ವದಲ್ಲಿ ಕೃತಯುಗದಲ್ಲಿ ಸರ್ವವಾಙ್ಮಯವಾದ ಪ್ರಣವರೂಪವಾದ ದೇಹವು ಒಂದೆ ; ನಾರಾಯಣನು ಒಬ್ಬನೆ ; ದೇವನು ಅಗ್ನಿಯು ಒಂದೆ;

ವರ್ಣವು ಹಂಸನಾಮಕವಾದದ್ದು ಬಂದೇ! ಎಲೈ ಪರೀಕ್ಷಿದ್ರಾಯನೆ, ತ್ರೇತಾಯುಗದಲ್ಲಿ ಪುರೂರವರಾಯನಿಂದಲೇ ವೇದತ್ರಯವುಂಟಾಯಿತು; ಆ ಪುರೂರವರಾಯನು ಪುತ್ರರೂಪನಾದ ಅಗ್ನಿಯಿಂದ ಗಾಂಧರ್ವಲೋಕವನ್ನೈದಿದನು; ಸತ್ವಗುಣಪ್ರಧಾನವಾದ ಕೃತಯುಗದಲ್ಲಿ ಸರ್ವರೂ ಧ್ಯಾನನಿಷ್ಠರಾಗಿ ಗತಿಯನ್ನೈದುವರು; ತ್ರೇತಾಯುಗವು ರಜೋಗುಣಪ್ರಧಾನವಾದುದರಿಂದ ವೇದತ್ರಯ ವಿಭಾಗದಿಂದ ಕರ್ಮಮಾರ್ಗವು ಪ್ರವೃತ್ತವಾಯಿತು."

೧೫ನೇ ಅಧ್ಯಾಯ.

ಶೃತಾಯು ಮೊದಲಾದ ಅರಸುಗಳ ಸಂತತಿಯು—ಪರಶುರಾಮನು ಕಾರ್ತವೀರ್ಯಾರ್ಜುನನನ್ನು ಸಂಹರಿಸಿದ್ದು.

ಎಲೈ ಪರೀಕ್ಷಿದ್ರಾಯನೆ, ಇಳಾ ಪುತ್ರನಾದ ಪುರೂರವರಾಯನಿಗೆ ಊರ್ವಶಿಯ ಗರ್ಭದಲ್ಲಿ ಆರುಮಂದಿ ಪುತ್ರರುಂಟಾದರು; ಆಯು ಶೃತಾಯು ಸತ್ಯಾಯು ರಯನು ವಿಜಯನು ಜಯನು; ಈ ಆರುಮಂದಿಯಲ್ಲಿ ಶೃತಾಯುವಿಗೆ ವಸುಮಂತನೆಂಬ ಪುತ್ರನು; ಸತ್ಯಾಯುವಿಗೆ ಶೃತಂಜಯನು; ರಯನಿಗೆ ಧೃವನು ಏಕನೆಂಬೀರ್ವರು ಪುತ್ರರು; ಜಯನಿಗೆ ಅಮಿತನು; ವಿಜಯನಿಗೆ ಭೀಮನು; ಭೀಮನಿಗೆ ಕಾಂಚನನು; ಆತನಿಗೆ ಹೋತ್ರಕನು ಜಹ್ನುವೆಂಬ ರಾಜರ್ಷಿಯು; ಆ ಜಹ್ನುವು ಗಂಗೆಯನ್ನು ಪಾನಂಗೈದನು; ಆ ಜಹ್ನುವಿಗೆ ಪುರುಹನು; ಆತನಿಗೆ ಬಲಕನು; ಆತನಿಗೆ ಅಜನು; ಆತನಿಗೆ ಕುಶನು; ಅವನಿಗೆ ಕುಶಾಂಬನು; ಕುಶಾಂಬನಿಗೆ ಗಾಧಿಯು; ಆ ಗಾಧಿರಾಯನ ಪುತ್ರಿಯಾದ ಸತ್ಯವತಿಯನ್ನು ಭೃಗುವಂಶೋದ್ಭವನಾದ ಋಚೀಕಋಷಿಯು ಯಾಚಿಸಿದನು; ಗಾಧಿಯು ಈತನು ತನ್ನ ಪುತ್ರಿಗೆ ಅನುರೂಪನಲ್ಲವೆಂದು ತಿಳಿದು ಋಚೀಕಋಷಿಯನ್ನು ಕುರಿತು 'ಎಲೈ ಋಚೀಕನೆ, ಒಂದು ಕಿವಿಯು ಶ್ಯಾಮಲವರ್ಣವುಳ್ಳದ್ದಾಗಿ ಶರೀರವೆಲ್ಲ ಚಂದ್ರನಂತೆ ಶುಭ್ರವರ್ಣವುಳ್ಳದ್ದಾಗಿ ಸಹಸ್ರ ಸಂಖ್ಯಾಕಗಳಾದ ಅಶ್ವಗಳನ್ನು ಕನ್ಯಾಶುಲ್ಕವನ್ನಾಗಿ ಕೊಟ್ಟರೆ ಈ ಕನ್ಯೆಯನ್ನು ನಿನಗೆ ಕೊಡುವೆನು' ಎಂದು ಪೇಳಲಾಗಿ ಆ ಮಾತನ್ನು ಕೇಳಿ ಋಚೀಕನು ವರುಣನ ಸಮೀಪಕ್ಕೆ ಹೋಗಿ ಯಾಚಿಸಿ ತಾದೃಶ ಲಕ್ಷಣವುಳ್ಳ ಸಾವಿರ ಕುದುರೆಗಳನ್ನು ತಂದುಕೊಟ್ಟು ಆ ಸತ್ಯವತಿಯನ್ನು ವಿವಾಹವನ್ನು ಮಾಡಿಕೊಂಡನು; ಅನಂತರದಲ್ಲಿ ಋಚೀಕಪತ್ನಿಯಾದ ಸತ್ಯವತಿಯು ಅವಳ ತಾಯಿಯು ಈರ್ವರೂ ಬಂದು ನಮಗೆ ಪುತ್ರಾರ್ಥವಾಗಿ ಅನುಗ್ರಹವನ್ನು ಮಾಡು ಎಂದು ಪ್ರಾರ್ಥಿಸಲಾಗಿ ಆ ಋಚೀಕಋಷಿಯು ತನ್ನ ಪತ್ನಿಗೂ ತನ್ನ ಪತ್ನಿಮಾತೃವಿಗೂ ಸಹ ಎರಡು ಚರುಗಳನ್ನು ಪಚನವನ್ನು ಮಾಡಿ ಬ್ರಾಹ್ಮಮಂತ್ರಗಳಿಂದ ತನ್ನ ಪತ್ನಿ ಚರುವನ್ನು ಅಭಿಮಂತ್ರಿಸಿ ಕ್ಷಾತ್ರಮಂತ್ರಗಳಿಂದ ಪತ್ನಿ ಮಾತೃವಿನ ಚರುವನ್ನಭಿಮಂತ್ರಿಸಿ ಇರಿಸಿಬಿಟ್ಟು ಸ್ನಾನಾರ್ಥವಾಗಿ ಹೊರಟುಹೋದ ಸಮಯದಲ್ಲಿ ಸತ್ಯವತಿಯು ತಾಯಿಯು ಮಗಳನ್ನು ಕುರಿತು 'ನಿನಗೆ ಅಭಿಮಂತ್ರಿತವಾದ ಚರುವನ್ನು ನನಗೆ ಕೊಡು; ನನಗೆ ಅಭಿಮಂತ್ರಿತವಾದ ಚರುವನ್ನು ನೀನು ತೆಗದುಕೊ' ಎಂದು ಕೇಳಲು ಆಗ ಮಾತೃವಾತ್ಸಲ್ಯದಿಂದ ತನ್ನ ಚರುವನ್ನು ತಾಯಿಗೆ ಕೊಟ್ಟಳು; ಆ ಋಷಿಯು ಸ್ನಾನವನ್ನು ಮಾಡಿಕೊಂಡು ಬರುವುದಕ್ಕೆ ಮೊದಲೆ ಬ್ರಾಹ್ಮ್ಯಮಾತ್ರಗಳಿಂದ ಮಂತ್ರಿತವಾದ ಚರುವನ್ನು ತಾಯಿ ಭಕ್ಷಿಸಿದಳು; ಕ್ಷಾತ್ರಮಂತ್ರಾಭಿ ಮಂತ್ರಿತವಾದ ಚರುವನ್ನು ಸತ್ಯವತಿಯು ಭಕ್ಷಿಸಿದಳು; ಆಮೇಲೆ ಋಚೀಕಋಷಿಯು ಆ ಅರ್ಥವನ್ನು ತಿಳಿದು ಪತ್ನಿಯನ್ನು ಕುರಿತು 'ಎಲೈ ಪತ್ನಿಯೆ, ನೀನು ಕಠಿನವ್ಯಾಪಾರವನ್ನು ಮಾಡಿದವಳಾದೆ; ನಿನಗೆ ಉಗ್ರನಾದ ಆಯುಧಧಾರಿಯಾದ ಕ್ರೂರನಾದ ಪುತ್ರನಾಗುತ್ತಾನೆ; ನಿನ್ನ ತಮ್ಮನು ಬ್ರಹ್ಮಜ್ಞರಲ್ಲಿ ಶ್ರೇಷ್ಠನಾದ ಮಹಾಪುರುಷನಾಗುತ್ತಾನೆ' ಎಂಬ ಪತಿವಾಕ್ಯದಿಂದ ಭಯಪಟ್ಟು ಸತ್ಯವತಿಯು ಹಾಗೆ ಆಗಬೇಡವೆಂದು ಪ್ರಾರ್ಥಿಸಲಾಗಿ ಋಚೀಕ ಋಷಿಯು ಹಾಗಾದರೆ ನಿನ್ನ ಮೊಮ್ಮಗನು ಅಂಥಾವನಾಗಲಿ' ಎಂದು ಪೇಳಿದನು. ಅನಂತರದಲ್ಲಿ ಆ ಸತ್ಯವತಿ ಗರ್ಭದಲ್ಲಿ ಜಮದಗ್ನಿ ಋಷಿಯು ಜನಿಸಿದನು; ಆ ಸತ್ಯವತಿಯು ಕೌಶಿಕಿ ನಾಮಕವಾದ ನದಿಯಾದಳು; ಆ ಜಮದಗ್ನಿಯು ರೇಣುವಿನ ಪುತ್ರಿಯಾದ ರೇಣುಕಾದೇವಿಯನ್ನು ವಿವಾಹವನ್ನು

ಮಾಡಿಕೊಂಡನು ; ಆ ರೇಣುಕಾದೇವಿ ಗರ್ಭದಲ್ಲಿ ವಸುಮಂತನೆ ಮುಂತಾದ ಪುತ್ರರು ಜನಿಸಿದರು ; ಅವರಲ್ಲಿ ಕನಿಷ್ಠನು ಪರಶುರಾಮಸ್ವಾಮಿಯು; ಭಗವಂತನ ಅಂಶಾವತಾರದಿಂದ ಜನಿಸಿ ಹೈಹಯವಂಶೋತ್ಪನ್ನನಾದ ಕಾರ್ತವೀರ್ಯನ ಕುಲವನ್ನು ನಾಶಂಗೈದು ಈ ಭೂಮಿಯಲ್ಲಿ ಇಪ್ಪತ್ತೊಂದಾವರ್ತಿ ಭೂಭಾರರಾದ ಗರ್ವಿತರಾದ ಬ್ರಹ್ಮದ್ರೋಹಿಗಳಾದ ದುಷ್ಟಕ್ಷತ್ರಿಯರನ್ನು ಸಂಹರಿಸಿದನು ; ರಜಸ್ತಮೋ ಗುಣಂಗಳಿಂದ ಮೋಹಿತರಾದ ಕ್ಷತ್ರಿಯರನ್ನು ಸ್ವಲ್ಪಾಪರಾಧವನ್ನು ಕ್ಷಮಿಸದೆ ಸಂಹರಿಸಿಬಿಟ್ಟನು '' ಎಂದು ನುಡಿದನು.

ಪರೀಕ್ಷಿದ್ರಾಯನು "ಎಲೈ ಶುಕಾಚಾರ್ಯನೆ, ಅವಿವೇಕಿಗಳಾದ ಕ್ಷತ್ರಿಯರಿಂದ ಯಾವ ಅಪರಾಧವು ಮಾಡಲ್ಪಟ್ಟಿತು ; ಬಾರಿಬಾರಿಗೂ ಕ್ಷತ್ರಿಯಕುಲವೆಲ್ಲ ನಾಶವನ್ನೈದುವಂಥಾ ಅಪರಾಧವೇನು ? " ಎಂದು ಪ್ರಶ್ನೆಗೈದನು.

ಶುಕಮುನಿಯು "ಎಲೈ ಅರಸೆ, ಹೈಹಯರಾಯರಿಗೆ ಅಧಿಪತಿಯಾದ ಕ್ಷತ್ರಿಯಶ್ರೇಷ್ಠನಾದ ಕಾರ್ತವೀರ್ಯಾರ್ಜುನನು ಭಗವದಂಶಾವತಾರಿಯಾದ ದತ್ತಾತ್ರೇಯ ಋಷಿಯನ್ನು ಪರಿಚರಣಂಗಳಿಂದಾರಾಧಿಸಿ ಸಹಸ್ರಬಾಹುಗಳನ್ನೈದಿ ಶತ್ರುಗಳಿಗೆ ಅಸಾಧ್ಯನಾಗಿ ಅವ್ಯಾಹತವಾದ ಇಂದ್ರಿಯಶಕ್ತಿಯು ಪರಾಕ್ರಮವು ಸಂಪತ್ತು ಕಾಂತಿಯು ಪ್ರತಾಪವು ಯಶಸ್ಸು ಬಲವು ಯೋಗೇಶ್ವರತ್ವವು ಅಣಿಮಾದ್ಯಷ್ಟೈಶ್ವರ್ಯಂಗಳು ಇವನ್ನು ಪಡೆದು ಸರ್ವಲೋಕಂಗಳಲ್ಲಿಯೂ ತಡೆಯಿಲ್ಲದ ಗಮನಪ್ರವೃತ್ತನಾಗಿ ವಾಯುವಿನಂತೆ ಸಂಚರಿಸಿದನು ; ಆ ಕಾರ್ತವೀರ್ಯನು ಒಂದು ಸಮಯದಲ್ಲಿ ಉತ್ತಮಸ್ತ್ರೀಯರೊಡಗೂಡಿ ಮದಿಸಿದವನಾಗಿ ನರ್ಮದಾನದಿಯ ಉದಕದಲ್ಲಿ ವಿಹರಿಸುತ್ತ ವೈಜಯಂತೀನಾಮಕವಾದ ಪುಷ್ಪಮಾಲಿಕೆಯನ್ನು ಧರಿಸಿ ತನ್ನ ಬಾಹುಗಳಿಂದ ನರ್ಮದಾಪ್ರವಾಹವನ್ನಡ್ಡಗಟ್ಟಿದನು ; ಹೀಗಿರುವ ಕಾಲದಲ್ಲಿ ರಾವಣನು ದಿಗ್ವಿಜಯಾರ್ಥವಾಗಿ ನರ್ಮದಾತೀರದ ಮೇಲುಕಡೆಯಲ್ಲಿ ತನ್ನ ದಂಡಿನ ಪಾಳ್ಯವನ್ನಿರಿಸಿ ತಾನು ಸ್ನಾನವನ್ನು ಮಾಡಿ ಶಿವಪೂಜೆಯನ್ನು ಮಾಡುತ ಕುಳಿತಿರಲಾಗಿ ಕೆಳಭಾಗದಲ್ಲಿ ಕಾರ್ತವೀರ್ಯನ ಭುಜಗಳಿಂದ ತಡೆಯಲ್ಪಟ್ಟ ಜಲಪ್ರವಾಹವು ಉಬ್ಬಿ ಮೇಲಕ್ಕೆ ಎದುರಿಸಿ ಬರಲಾಗಿ ಆ ಉದಕದಿಂದ ರಾವಣನ ದಂಡೆಲ್ಲವೂ ಕೊಚ್ಚಿಕೊಂಡು ಹೋಗುವರೀತಿಯಾಗಿದ್ದುದನ್ನು ನೋಡಿ ತನ್ನನ್ನು ಶೂರನನ್ನಾಗಿ ತಿಳಿದುಕೊಂಡಿರುವ ರಾವಣನು ಕಾರ್ತವೀರ್ಯನ ಪ್ರತಾಪವನ್ನು ಸಹಿಸಲಿಲ್ಲ; ಆ ರಾವಣನು ಯುದ್ಧಾರ್ಥವಾಗಿ ಕಾರ್ತವೀರ್ಯನ ಸಮೀಪಕ್ಕೆ ಹೋಗಿ ಯುದ್ಧದಲ್ಲಿ ಪರಾಜಿತನಾಗಿ ಆ ಕಾರ್ತವೀರ್ಯನ ಕೈಸೆರೆಗೆ ಶಿಕ್ಕಿದನು ; ಸ್ತ್ರೀಯರುಗಳಿಗೆ ಎದುರಾಗಿ ವಿಲಾಸದಿಂದಲೇ ಆ ರಾವಣನನ್ನು ಹಿಡಿದು ಮಾಹಿಷ್ಮತೀಪುರದಲ್ಲಿ ಸೆರೆಹಾಕಿದ್ದು ಕಪಿಯನ್ನಾಡಿಸಿದಹಾಗೆ ಅವಮಾನವನ್ನು ಮಾಡಿ ಆಮೇಲೆ ತನಗೆ ದಯಬಂದು ಬಿಟ್ಟನು ! ಎಲೈ ಅರಸೆ, ಆ ಕಾರ್ತವೀರ್ಯನು ಒಂದು ಸಮಯದಲ್ಲಿ ವಿಜನವಾದ ಅರಣ್ಯದಲ್ಲಿ ಬೇಟೆಯಲ್ಲಿ ಸಂಚರಿಸುವವನಾಗಿ ದೈವಗತಿಯಿಂದ ಜಮದಗ್ನಿಋಷಿಯ ಆಶ್ರಮವನ್ನು ಪ್ರವೇಶಿಸಿದನು ; ತಪೋಧನನಾದ ಜಮದಗ್ನಿಋಷಿಯು ಸೇನಾಸಮೇತನಾಗಿ ಮಂತ್ರಿಗಳಿಂದಲೂ ವಾಹನಗಳಿಂದಲೂ ಯುಕ್ತನಾಗಿ ಬಂದಿರುವ ಆ ಕಾರ್ತವೀರ್ಯಾರ್ಜುನನಿಗೋಸ್ಕರ ಕಾಮಧೇನುವಿನಿಂದ ಆತಿಥ್ಯವನ್ನು ಮಾಡಿದನು ; ಆ ಕಾರ್ತವೀರ್ಯನು ಜಮದಗ್ನಿಯಿಂದ ಮಾಡಲ್ಪಟ್ಟ ಸತ್ಕಾರದಿಂದ ಸಂತುಷ್ಟನಾಗದೆ ಆ ಕಾಮಧೇನುವಿನಲ್ಲಿ ಅಪೇಕ್ಷೆಯನ್ನು ಮಾಡಿ ಕೊಬ್ಬಿನಿಂದ ಆ ಕಾಮಧೇನುವನ್ನು ಹಿಡಿತರುವುದಕ್ಕೋಸ್ಕರ ಭಟರನ್ನು ಕಳುಹಿಸಿದನು ; ಆ ಭಟರುಗಳು ಕರುವಿನಿಂದ ಯುಕ್ತವಾಗಿ ರೋದನಂಗೈಯುತಲಿರುವ ಆ ಕಾಮಧೇನುವನ್ನು ಬಲಾತ್ಕಾರದಿಂದ ಸೆಳೆದುಕೊಂಡು ಹೋಗಿ ಮಾಹಿಷ್ಮತೀಪುರವನ್ನೈದಿಸಿದರು ; ಆ ಕಾರ್ತವೀರ್ಯನು ಹೋದಮೇಲೆ ಪರಶುರಾಮನು ಆ ಆಶ್ರಮಕ್ಕೆ ಬಂದು ಆ ಕಾರ್ತವೀರ್ಯನ ದುಷ್ಟವ್ಯಾಪಾರವನ್ನು ಕೇಳಿ ದಂಡಪ್ರಹಾರದಿಂದ ಕುಪಿತವಾದ ಸರ್ಪದಂತೆ ಕೋಪಿಸಿಕೊಂಡು ಆಗಲೇ ಶೀಘ್ರವಾಗಿ ಕುಠಾರವನ್ನು ಧರಿಸಿಕೊಂಡು ಕವಚವನ್ನು ತೊಟ್ಟು ಬತ್ತಳಿಕೆಗಳಿಂದ ಯುಕ್ತನಾಗಿ ಧನುಸ್ಸನ್ನು ತೆಗದುಕೊಂಡು ಮಹಾಸಿಂಹವು ಮದಗಜವನ್ನಟ್ಟಿದಂತೆ ಆ ಕಾರ್ತವೀರ್ಯನನ್ನಟ್ಟಿಹೋದನು ; ಆಗ ತನ್ನ ಪುರವನ್ನು ಕುರಿತು ಹೋಗುತ್ತಲಿರುವ ಕಾರ್ತವೀರ್ಯನು ಧನುರ್ಧಾರಿಯಾಗಿ ಕುಠಾರವನ್ನೂ ಬಾಣಗಳನ್ನೂ ಧನುಸ್ಸನ್ನೂ ಧರಿಸಿ ಕೃಷ್ಣಮೃಗಾಜಿನವನ್ನು ಹೊದ್ದುಕೊಂಡು ಸೂರ್ಯನಂತೆ ಪ್ರಜ್ವಲಿಸುತ ಮಹಾಪ್ರತಾಪದಿಂದ ಹಿಂಬಟ್ಟಿ ಬರುತಲಿರುವ ಆ ಭಾರ್ಗವರಾಮನನ್ನು ಕಂಡು ಅನೇಕಗಳಿಂದಲೂ ಕೂಡ

ರೆಗಳಿಂದಲೂ ರಥಗಳಿಂದಲೂ ಪಾದಚಾರಿಗಳಿಂದಲೂ ಗದೆಗಳಿಂದಲೂ ಖಡ್ಗಗಳಿಂದಲೂ ಬಾಣಗಳಿಂದಲೂ ದೊಣ್ಣೆಗಳಿಂದಲೂ ಶತಘ್ನಿಗಳಿಂದಲೂ ಶಕ್ತಿಗಳಿಂದಲೂ ಅತಿಭಯಂಕರಗಳಾದ ಹದಿನೇಳು ಅಕ್ಷೌಹಿಣೀ ಸಂಖ್ಯೆಯುಳ್ಳ ಸೇನೆಗಳನ್ನು ಕಳುಹಿಸಿದನು ; ಅನೆಗಳನ್ನೆಲ್ಲವನ್ನು ಪರಶುರಾಮನೊಬ್ಬನೇ ಸಂಹರಿಸಿದನು ; ಮನೋವಾಯುವೇಗವುಳ್ಳ ಪರಚಕ್ರಭೇದಕನಾದ ಆ ಕುಠಾರವು ಎಲ್ಲೆಲ್ಲಿ ಪ್ರಹರಿಸಿತೋ ಅಲ್ಲಲ್ಲಿ ಸೇನಾಯೂಥಪತಿಗಳು ಭೇದಿಸಲ್ಪಟ್ಟ ಬಾಹುಗಳು ತೊಡೆಗಳು ಕಂಠಗಳುಳ್ಳವರಾಗಿ ಸಾರಥಿಗಳು ಅಶ್ವಗಳು ಹತವಾದವಾಗಿ ಎಲ್ಲರೂ ಭೂಮಿಯಲ್ಲಿ ಬಿದ್ದರು ; ಅನಂತರದಲ್ಲಿ ಕಾರ್ತವೀರ್ಯನು ರಕ್ತಪ್ರವಾಹದಿಂದ ಕೆಸರಾಗಿರುವ ಯುದ್ಧಭೂಮಿಯಲ್ಲಿ ಪರಶುರಾಮನ ಕುಠಾರಪ್ರಹಾರಂಗಳಿಂದ ಭೇದಿಸಲ್ಪಟ್ಟ ಕವಚಂಗಳು ಧ್ವಜಗಳು ಧನಸ್ಸುಗಳು ಶರೀರಗಳೂ ಉಳ್ಳದ್ದಾಗಿ ಕೆಡಹಲ್ಪಟ್ಟ ಭೂಮಿಯಲ್ಲಿ ಬಿದ್ದಿರುವ ತನ್ನ ಸೇನೆಯನ್ನು ನೋಡಿ ಕೋಪದಿಂದ ಬಂದನು ; ಆ ಕಾರ್ತವೀರ್ಯಾರ್ಜುನನು ತನ್ನ ಐನೂರು ಬಾಹುಗಳಲ್ಲಿ ಧರಿಸಲ್ಪಟ್ಟ ಐನೂರು ಧನುಸ್ಸುಗಳಲ್ಲಿ ಮತ್ತೆ ಐನೂರು ಭುಜಗಳಿಂದ ಬಾಣಗಳನ್ನು ಸಂಧಾನವನ್ನು ಮಾಡಿ ಆಕರ್ಣಾಂತವಾಗಿ ಸೆಳೆದು ಏಕಕಾಲದಲ್ಲಿ ಅನೇಕ ಬಾಣಗಳನ್ನು ಪ್ರಯೋಗಿಸಲಾಗಿ ಶಸ್ತ್ರಧಾರಿಗಳೊಳಗೆ ಅಗ್ರಗಣ್ಯನಾದ ಪರಶುರಾಮನು ಒಂದು ಧನುಸ್ಸಿನಿಂದಲೇ ಏಕಕಾಲದಲ್ಲಿ ಎಲ್ಲವನ್ನೂ ಭೇದಿಸಿ ಐನೂರು ಧನುಸ್ಸುಗಳನ್ನೂ ಭೇದಿಸಿದನು ; ಪುನಹ ತನ್ನ ಸಹಸ್ರಹಸ್ತಗಳಿಂದ ಪರ್ವತಗಳು ವೃಕ್ಷಗಳು ಎತ್ತಿ ಯುದ್ಧದಲ್ಲಿ ಬೀಸಿ ಪ್ರಹರಿಸುತ ವೇಗದಿಂದ ಬರುತಲಿರುವ ಕಾರ್ತವೀರ್ಯನ ಭುಜಗಳನ್ನು ತೀಕ್ಷ್ಣವಾದ ಉಗ್ರವುಳ್ಳ ಕುಠಾರದಿಂದ ಪರಶುರಾಮನು ಮಹಾ ಸರ್ಪದ ಫಣೆಗಳನ್ನಂತೆ ಭೇದಿಸಿದನು ; ಅನಂತರದಲ್ಲಿ ಸಹಸ್ರಬಾಹುಗಳು ಭೇದಿಸಲ್ಪಟ್ಟಮೇಲೆ ಪರ್ವತದ ಶೃಂಗದಂತೆ ಸ್ಥೂಲವಾದ ಆ ಕಾರ್ತವೀರ್ಯನ ಶಿರಸ್ಸನ್ನು ಭೇದಿಸಿದನು ; ಕಾರ್ತವೀರ್ಯನು ಹತನಾದಮೇಲೆ ಅವನ ಹತ್ತುಸಾವಿರ ಪುತ್ರರು ಭಯದಿಂದ ಪಲಾಯನವನ್ನು ಮಾಡಿದರು ; ಶತೃಸಂಹಾರಕನಾದ ಪರಶುರಾಮನು ಕರುವಿನಿಂದ ಸಮೇತವಾದ ಕಾಮಧೇನುವನ್ನು ಕರದುಕೊಂಡು ಬಂದು ಪಿತೃವಾದ ಜಮದಗ್ನಿ ಋಷಿಗೆ ಒಪ್ಪಿಸಿದನು ; ಆಮೇಲೆ ಪರಶುರಾಮನು ತನ್ನಿಂದ ಮಾಡಲ್ಪಟ್ಟ ಪರಾಕ್ರಮವನ್ನು ತಂದೆಗೂ ಅಣ್ಣತಮ್ಮಂದಿರಿಗೂ ಹೇಳಲಾಗಿ ಆ ಮಾತನ್ನು ಕೇಳಿ ಜಮದಗ್ನಿ ಋಷಿಯು ಮಗನನ್ನು ಕುರಿತು 'ಎಲೈ ಮಹಾ ಭುಜಬಲಪರಾಕ್ರಮವುಳ್ಳ ಪರಶುರಾಮನೆ, ನೀನು ಪಾಪವ್ಯಾಪಾರವನ್ನು ಮಾಡಿದೆ ; ಸರ್ವದೇವಮಯನಾದ ಮನುಷ್ಯದೇವನಾದ ಕಾರ್ತವೀರ್ಯನನ್ನು ವ್ಯರ್ಥವಾಗಿ ಯಾಕೆ ಸಂಹರಿಸಿದೆ! ಎಲೈ ಅಪ್ಪ ಪರಶುರಾಮನೆ, ನಾವು ಬ್ರಾಹ್ಮಣರು ; ಕ್ಷಮೆಯಿಂದಲೇ ಪೂಜ್ಯತ್ವವನ್ನೈದಿದವರು ; ಲೋಕಗುರುವಾದ ಬ್ರಹ್ಮನೂ ಕ್ಷಮೆಯಿಂದಲೇ ಸರ್ವೋತ್ತಮಸ್ಥಾನವನ್ನೈದಿದನು ; ಕ್ಷಮೆಯಿಂದಲೇ ಬ್ರಹ್ಮತೇಜಸ್ಸು ಸೂರ್ಯಪ್ರಭೆಯಂತೆ ಪ್ರಕಾಶಿಸುವುದು ; ಭಗವಂತನಾದ ಹರಿಯು ಸಂತುಷ್ಟನಾಗುವನು ; ಮೂರ್ಧಾಭಿಷಿಕ್ತನಾದ ದೊರೆಯ ಸಹ್ಕಾರವು ಬ್ರಾಹ್ಮಣವಧೆಗಿಂತಲೂ ಅಧಿಕವಾದದ್ದು ! ಎಲೈ ಪುತ್ರನೆ, ಭಗವಂತನನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾಯುತ ತೀರ್ಥಯಾತ್ರೆಯನ್ನು ಮಾಡಿ ಪಾಪವನ್ನು ಪರಿಹರಿಸಿಕೊ' ಎಂದು ಪರಶುರಾಮನಸ್ವಾಮಿಯನ್ನು ಕುರಿತು ನುಡಿದನು.''

೧೬ನೇ ಅಧ್ಯಾಯ.

ಪರಶುರಾಮನ ಪ್ರಭಾವವು–ವಿಶ್ವಾಮಿತ್ರನು ಬ್ರಹ್ಮರ್ಷಿಯಾದದ್ದು.

''ಎಲೈ ಅರಸೆ, ಆಗೀಗಯಲ್ಲಿ ಪಿತೃವಾದ ಜಮದಗ್ನಿಯಿಂದ ಬೋಧಿತನಾದ ಪರಶುರಾಮನು ಹಾಗೇ ಆಗಲೀ ಎಂದು ಒಂದು ಸಂವತ್ಸರವು ತೀರ್ಥ ಯಾತ್ರೆಯನ್ನು ಮಾಡಿ ಪುನಹ ಆಶ್ರಮಕ್ಕೆ ಬಂದನು ; ಒಂದು ಸಮಯದಲ್ಲಿ ರೇಣುಕಾದೇವಿಯು ಗಂಗಾನದಿಯನ್ನು ಕುರಿತು ಉದಕಾಹರಣಾರ್ಥವಾಗಿ ಹೋಗಿ ಅಲ್ಲಿ ಪದ್ಮಮಾಲಾಧಾರಿಯಾಗಿ ಅಪ್ಸರ ಸ್ತ್ರೀಯರೊಡನೆ ರಮಿಸುತಲಿರುವ ಗಂಧರ್ವರಾಜನಾದ ಚಿತ್ರರಥನನ್ನು ನೋಡಿ ಅವನಲ್ಲಿ ಸ್ವಲ್ಪ ಚಾಪಲ್ಯ

ಪ್ರಶ್ನವಳಾಗಿ ಹೋಮಕಾಲವನ್ನು ಮರೆತಳು ; ಆಮೇಲೆ ಕಾಲಾತಿಕ್ರಮವನ್ನು ತಿಳಿದು ಪತಿಯು ಶಪಿಸಾನೆಂದು ಭಯಪಟ್ಟು ನದಿಯಿಂದ ಬೇಗಬಂದು ಉದಕಕಲಶವನ್ನು ಪತಿಯ ಮುಂದಿರಿಸಿ ಕೈಮುಗಿದು ನಿಂತಳು ; ಆಗ ಜಮದಗ್ನಿಯು ಪತ್ನಿಯ ಚಿತ್ತಚಾಪಲ್ಯವನ್ನು ತಿಳಿದು ಕೋಪಿಷ್ಠನಾಗಿ ಪಾಪಿಷ್ಠಳಾದ ಇವಳನ್ನು ಸಂಹರಿಸೆಂದು ಪುತ್ರರನ್ನು ಕುರಿತು ಆಜ್ಞಾಪಿಸಲಾಗಿ ಆ ಪುತ್ರರು ಆ ಕೆಲಸವನ್ನು ಮಾಡಲಿಲ್ಲ ; ಆಗ ಜಮದಗ್ನಿಯು ಪರಶುರಾಮನಿಗೆ ಆಜ್ಞಾಪಿಸಿದನು ; ಆ ಪರಶುರಾಮನು ಜಮದಗ್ನಿ ಋಷಿಯ ತಪಃಪ್ರಭಾವವನ್ನೂ ಧ್ಯಾನಪ್ರಭಾವವನ್ನೂ ಸಹ ತಿಳಿದವನಾದಕಾರಣ ಪಿತೃವಾಕ್ಯೋಲ್ಲಂಘನವನ್ನು ಮಾಡಿದ ಭ್ರಾತೃಗಳನ್ನೂ ಮಾತೃವಾದ ರೇಣುಕಾದೇವಿಯನ್ನೂ ಸಂಹರಿಸಿದನು ; ಆಗ ಜಮದಗ್ನಿಯು ಸಂತುಷ್ಟನಾಗಿ 'ಎಲೈ ಪುತ್ರನೆ, ನಿನಗೆ ಯಾವ ವರಬೇಕು ; ಕೊಡುತ್ತೇನೆ ' ಎಂದು ಹೇಳಲಾಗಿ ಪರಶುರಾಮನು 'ಎಲೈ ತಂದೆಯೆ, ನನ್ನಿಂದ ಸಂಹೃತರಾದ ನನ್ನ ಭ್ರಾತೃಗಳು ಮಾತೃವು ಸಹ ಜೀವಿಸಲಿ ಇವರಿಗೆ ತಾವು ಮೃತರಾಗಿದ್ದೇವೆಂಬ ಸ್ಮರಣೆಬೇಡ ; ಈ ವರವನ್ನು ಕೊಡಬೇಕು ' ಎಂದು ಪ್ರಾರ್ಥಿಸಲಾಗಿ ಆಗ ಜಮದಗ್ನಿ ಋಷಿಯು ಪ್ರಭಾವದಿಂದ ಉತ್ತರಕ್ಷಣದಲ್ಲೇ ನಿದ್ರೆಯಿಂದೆಚ್ಚೆತ್ತು ಎದ್ದಂತೆ ಸುಖವಾಗಿದ್ದರು ; ಈರೀತಿಯಲ್ಲಿ ಪಿತೃವಿನ ತಪೋಮಹಿಮೆಯನ್ನು ತಿಳಿದವನಾದುದರಿಂದ ಪರಶುರಾಮನು ಸ್ವಜನ ವಧವನ್ನು ಮಾಡಿದನು ; ಕಾರ್ತವೀರ್ಯನ ಪುತ್ರರಾದ ಹತ್ತುಸಾವಿರಮಂದಿಯು ಸ್ವಪಿತೃವಾದ ಕಾರ್ತವೀರ್ಯನ ಸಂಹಾರವನ್ನು ಸ್ಮರಿಸಿಕೊಂಡು ಪರಶುರಾಮನ ಪರಾಕ್ರಮದಿಂದ ಪರಾಹತರಾಗಿ ಸುಖವನ್ನು ಪಡೆಯಲಿಲ್ಲ ; ಒಂದು ಸಮಯದಲ್ಲಿ ಭ್ರಾತೃಗಳಿಂದಸಮೇತನಾಗಿ ಪರಶುರಾಮನು ಸಂಚಾರಕ್ಕೆ ಹೋಗಿರುವಾಗ ಅರ್ಜುನಪುತ್ರರಾದ ಹತ್ತುಸಾವಿರ ದುಷ್ಟಕ್ಷತ್ರಿಯರು ವೈರವನ್ನೇ ಮನದಲ್ಲಿರಿಸಿಕೊಂಡು ಸಮಯವನ್ನು ನಿರೀಕ್ಷಿಸಿ ಆಶ್ರಮಕ್ಕೆ ಬಂದು ಅಗ್ನಿಹೋತ್ರಶಾಲೆಯಲ್ಲಿ ಭಗವಂತನಾದ ಪರಮಾತ್ಮನಲ್ಲಿ ಚಿತ್ತವನ್ನು ಸ್ಥಿರೀಕರಿಸಿಕೊಂಡು ಧ್ಯಾನಾರೂಢನಾಗಿ ಕುಳಿತಿರುವ ಜಮದಗ್ನಿಯನ್ನು ಸಂಹರಿಸಿದರು ; ದೀನಳಾಗಿ ರೋದನಂಗೈಯುತಲಿರುವ ರೇಣುಕಾದೇವಿಯಿಂದ ಬೇಡವೆಂದು ಯಾಚಿಸಲ್ಪಟ್ಟವರಾದಾಗ್ಯೂ ದಯಾರಹಿತರಾಗಿ ದುಷ್ಟಕ್ಷತ್ರಿಯರು ಜಮದಗ್ನಿಯ ಶಿರಸ್ಸನ್ನು ಛೇದಿಸಿ ಅದನ್ನು ತೆಗೆದುಕೊಂಡು ಹೊರಟುಹೋದರು ; ರೇಣುಕಾದೇವಿಯು ದುಃಖಿತಳಾಗಿ ಪತಿವ್ರತೆಯಾದುದರಿಂದ ಹಸ್ತಗಳಿಂದ ವಕ್ಷಸ್ಥಳಗಳನ್ನು ತಾಡನಂಗೈಯುತ 'ಎಲೈ ಅಪ್ಪನೆ, ಪರಶುರಾಮನೆ, ಎಲ್ಲಿಗೆ ಹೋದೆ' ಎಂದು ಘಟ್ಟಾಗಿ ರೋದನಂಗೈದಳು ; ಆಗ ಪುತ್ರರಾದ ಪರಶುರಾಮಾದಿ ಋಷಿಕುಮಾರರು ದೂರದಲ್ಲೇ ಹಾ ! ಪರಶುರಾಮನೆ ಎಂಬ ಆರ್ತಸ್ವರವನ್ನು ಕೇಳಿ ತ್ವರೆಯಿಂದ ಆಶ್ರಮಕ್ಕೆ ಬಂದು ಮೃತನಾದ ತಂದೆಯನ್ನು ಕಂಡು ಆ ಪುತ್ರರು ದುಃಖದಿಂದಲೂ ಶೋಕದಿಂದಲೂ ರೋಷದಿಂದಲೂ ಭ್ರಾಂತಿಯಿಂದಲೂ ಪರವಶರಾಗಿ ಹಾ ! ಧರ್ಮಿಷ್ಠನಾದ ಸಾಧುವಾದ ತಂದೆಯೆ, ನಮ್ಮನ್ನು ಬಿಟ್ಟು ನೀನು ಸ್ವರ್ಗಕ್ಕೆ ಹೋದೆಯಾ ಎಂದು ವಿಲಾಪಂಗೈದು ರೋದನಂಗೈಯುತ್ತಿರಲಾಗಿ ಪರಶುರಾಮನು ಪಿತೃಶರೀರವನ್ನು ಭ್ರಾತೃಗಳ ವಶದಲ್ಲಿರಿಸಿ ತಾನು ಕುಠಾರವನ್ನು ತೆಗೆದುಕೊಂಡು ಕ್ಷತ್ರಿಯಸಂಹಾರದಲ್ಲಿ ಮನಸ್ಸನ್ನು ಮಾಡಿದನು ; ಪರಶುರಾಮನು ಬ್ರಹ್ಮಘ್ನರಾದ ದುಷ್ಟಕ್ಷತ್ರಿಯರಿಂದ ಹತವಾದ ಪ್ರಭೆಯುಳ್ಳ ಸಂಪತ್ತುಳ್ಳ ಮಾಹಿಷ್ಮತೀ ಪುರವನ್ನೈದಿ ಆ ದುಷ್ಟರ ಶಿರಸ್ಸುಗಳನ್ನು ಕತ್ತರಿಸಿ ಆ ಶಿರಸ್ಸುಗಳನ್ನು ಬಾದೇಕಡೆಯಲ್ಲಿ ಪುರಮಧ್ಯದಲ್ಲಿ ರಾಶಿಯನ್ನು ಹಾಕಿ ಮಹಾ ಪರ್ವತವನ್ನು ಮಾಡಿ ಅವರ ರಕ್ತದಿಂದ ಬ್ರಹ್ಮದ್ವೇಷಿಗಳಿಗೆ ಅಭಯಪ್ರದವಾದ ನದಿಯನ್ನು ಮಾಡಿದನು ; ಅನಂತರದಲ್ಲಿ ಪರಶುರಾಮನು ಪಿತೃವಧವನ್ನೇ ಕಾರಣವನ್ನಾಗಿ ಮಾಡಿಕೊಂಡು ಅನ್ಯಾಯಪ್ರವೃತ್ತರಾದ ದುಷ್ಟಕ್ಷತ್ರಿಯವರ್ಗವನ್ನು ನೋಡಿ ಇಪ್ಪತ್ತೊಂದಾವರ್ತಿ ಭೂಮಿಯಲ್ಲಿ ಕ್ಷತ್ರಿಯರನ್ನು ನಿಶ್ಶೇಷರನ್ನು ಮಾಡಿದನು ; ಇಪ್ಪತ್ತೊಂದಾವರ್ತಿಯೆಂಬುವುದಕ್ಕೆ ನಿಮಿತ್ತವೇನೆಂದರೆ : ಪತಿಸಂಹಾರಕಾಲದಲ್ಲಿ ರೇಣುಕಾದೇವಿಯು ಇಪ್ಪತ್ತೊಂದಾವರ್ತಿ ಉದರತಾಡನವನ್ನು ಮಾಡಿದಳು ; ಅದುಕಾರಣ ಅಷ್ಟಾವರ್ತಿ ದುಷ್ಟಕ್ಷತ್ರಿಯ ಸಂಹಾರವನ್ನು ಮಾಡಿ ಶಮಂತಪಂಚಕದಲ್ಲಿ ಕ್ಷತ್ರಿಯರ ರಕ್ತದಿಂದ ಒಂಭತ್ತು ಮಡುವುಗಳನ್ನು ಮಾಡಿದನು ; ಪಿತೃವಿನ ಶಿರಸ್ಸನ್ನು ತೆಗೆದುಕೊಂಡು ಬಂದು ಪಿತೃದೇಹದಲ್ಲಿ ಸಂಧಾನವನ್ನು ಮಾಡಿ ಪುನಃ ತಂದೆಯನ್ನು ಬದುಕಿಸಿ ಸರ್ವದೇವಮಯನಾದ ಪರಮಾತ್ಮನನ್ನು ಯಾಗಂಗಳಿಂದ ಆರಾಧಿಸಿದನು ; ಅನಂತರದಲ್ಲಿ ಪರಶುರಾಮನು ಪೂರ್ವ

ಕ್ಕನ್ನು ಹೋತೃವಿಗೆ ಕೊಟ್ಟನು ; ಬ್ರಹ್ಮತ್ವವನ್ನು ಮಾಡಿದ ಋಷಿಗಳಿಗೆ ದಕ್ಷಿಣದಿಕ್ಕನ್ನು ಕೊಟ್ಟನು ; ಅಧ್ವರ್ಯುವಿಗೆ ಪಶ್ಚಿಮದಿಕ್ಕನ್ನು ಕೊಟ್ಟನು ; ಉದ್ಗಾತೃವಿಗೆ ಉತ್ತರದಿಕ್ಕನ್ನು ಕೊಟ್ಟನು ; ಮಿಗಿಲಾದ ಋಷಿಗಳಿಗೆ ಆಗ್ನೇಯಾದಿ ಮೂಲೆಗಳನ್ನಿತ್ತನು ; ಕಶ್ಯಪಋಷಿಗೆ ಮಧ್ಯಭೂಮಿಯನ್ನಿತ್ತನು ; ಉಪದ್ರಷ್ಟೃವಿಗೆ ಆರ್ಯಾವರ್ತಭೂಮಿಯನ್ನಿತ್ತನು ; ವಿಂಧ್ಯ ಹಿಮಂತರ ಮಧ್ಯವೇ ಆರ್ಯಾವರ್ತವೆನಿಸುವುದು ; ಅಲ್ಲಿಂದ ಆಚೆಯಲ್ಲಿರುವ ಭೂಮಿಯನ್ನು ಸಭೆಯಲ್ಲಿ ಕೂಡಿದ್ದ ಋಷಿಗಳಿಗೆ ಕೊಟ್ಟನು ; ಅನಂತರದಲ್ಲಿ ಅವಭೃತಸ್ನಾನದಿಂದ ಸಕಲ ಪಾಪಂಗಳನ್ನು ಪರಿಹರಿಸಿಕೊಂಡು ಸರಸ್ವತೀನಾಮಕವಾದ ಬ್ರಹ್ಮನದಿಯಲ್ಲಿ ನಿರ್ಮಲವಾದ ಆಕಾಶದಲ್ಲಿ ಸೂರ್ಯನಂತೆ ಪ್ರಕಾಶಿಸಿದನು ; ಜಮದಗ್ನಿಋಷಿಯು ಪೂರ್ವಸ್ಮೃತಿಯುಳ್ಳ ಸ್ವದೇಹವನ್ನೈದಿ ಸಪ್ತಋಷಿಮಂಡಲದಲ್ಲಿ ಏಳನೇಋಷಿಯಾಗಿ ರಾಜಪೂಜಿತನಾದನು ; ಕಮಲಲೋಚನನಾದ ಜಮದಗ್ನಿಪುತ್ರನಾದ ಭಗವಂತನಾದ ಪರಶುರಾಮನು ಮುಂದೆ ಬರುವ ಅಷ್ಟಮನಾದ ಸಾವರ್ಣಿಮನ್ವಂತರದಲ್ಲಿ ವೇದಪ್ರವರ್ತಕನಾಗಿ ಸಪ್ತಋಷಿಗಳಲ್ಲಿ ಒಬ್ಬನಾಗುತ್ತಾನೆ ; ಆ ಪರಶುರಾಮನು ಸಿದ್ಧ ಗಂಧರ್ವ ಚಾರಣರಿಂದ ಗಾನಂಗೈಯಲ್ಪಟ್ಟ ಚರಿತ್ರೆಯುಳ್ಳವನಾಗಿ ಶಾಂತಚಿತ್ತನಾಗಿ ನಿಗ್ರಹವ್ಯಾಪಾರವನ್ನು ಬಿಟ್ಟು ಮಹೇಂದ್ರಪರ್ವತದಲ್ಲಿ ಈಗಲೂ ಇದ್ದಾನೆ; ವಿಶ್ವಾತ್ಮಕನಾದ ಭಗವಂತನಾದ ಈಶ್ವರನಾದ ಶ್ರೀಹರಿಯು ಭೃಗುವಂಶದಲ್ಲಿ ಅವತರಿಸಿ ಭೂಭಾರರೂಪರಾದ ದುಷ್ಟಕ್ಷತ್ರಿಯರನ್ನು ಬಹುಪ್ರಕಾರವಾಗಿ ಸಂಹರಿಸಿದನು ! ಎಲೈ ಅರಸೆ, ಗಾಧಿರಾಯನಿಗೆ ಮಹಾ ತೇಜಸ್ವಿಯಾದ ವಿಶ್ವಾಮಿತ್ರನು ಜ್ವಲಿಸುವ ಅಗ್ನಿಯಂತೆ ಪ್ರಕಾಶಿಸುತ ಹುಟ್ಟಿದನು ; ಆತನು ತಪಸ್ಸಿನಿಂದ ಕ್ಷತ್ರಿಯತ್ವವನ್ನು ಪರಿಹರಿಸಿಕೊಂಡು ಬ್ರಾಹ್ಮಣತ್ವವನ್ನು ಸಂಪಾದಿಸಿದನು ; ಆ ವಿಶ್ವಾಮಿತ್ರನಿಗೆ ನೂರುಮಂದಿ ಪುತ್ರರಾದರು ; ಅವರಲ್ಲಿ ಮಧ್ಯಮನು ಮಧುಛಂದನಾಮಕನು ; ಆ ನೂರುಜನರು ಮಧುಛಂದರೆನಿಸುವರು ; ಭೃಗುವಂಶೋದ್ಭವನಾದ ಅಜೀಗರ್ತಋಷಿಯ ಪುತ್ರನಾದ ಶುನಶ್ಶೇಫನು ದೇವರಾತರಾಯನೆಂಬ ನಾಮಧೇಯದಿಂದ ವಿಶ್ವಾಮಿತ್ರನ ಪುತ್ರಶತದಲ್ಲಿ ಜ್ಯೇಷ್ಠಪುತ್ರನಾದನು ; ಭೃಗುವಂಶೋದ್ಭವನಾದ ದೇವರಾತನನ್ನು ವಿಶ್ವಾಮಿತ್ರನು ಪುತ್ರನನ್ನು ಮಾಡಿಕೊಂಡು ಆ ಅಜೀಗರ್ತಪುತ್ರನಾದ ದೇವರಾತನನ್ನು ತನ್ನ ಪುತ್ರಶತದಲ್ಲಿ ಜ್ಯೇಷ್ಠಪುತ್ರನನ್ನಾಗಿ ಮಾಡಿದನು ; ಪೂರ್ವದಲ್ಲಿ ಹರಿಶ್ಚಂದ್ರನ ಯಜ್ಞದಲ್ಲಿ ಪಶುವನ್ನು ಮಾಡಲೋಸುಗ ಕ್ರಯದ್ರವ್ಯವನ್ನಿತ್ತು ಕೊಂಡುತರಲ್ಪಟ್ಟ ಅಜೀಗರ್ತ ಮಧ್ಯಮಪುತ್ರನಾದ ಶುನಶ್ಶೇಫನು ಬ್ರಹ್ಮಾದಿ ದೇವತೆಗಳನ್ನು ಸ್ತುತಿಸಿ ಅವರ ಅನುಗ್ರಹದಿಂದ ಪಾಶಬಂಧವಿಮುಕ್ತನಾದನು ; ದೇವತೆಗಳಿಂದ ಗಾಧಿವಂಶಕ್ಕೆ ಕೊಡಲ್ಪಟ್ಟಕಾರಣ ದೇವರಾತನೆಂಬ ನಾಮಧೇಯವನ್ನೈದಿದನು ; ಆತನು ಭೃಗುವಂಶಸ್ಥನು ; ಗಾಧಿವಂಶಕ್ಕೆ ಪುತ್ರನಾದವನು ; ವಿಶ್ವಾಮಿತ್ರನ ಸಾಕ್ಷಾತ್ಪುತ್ರರಾದ ಮಧುಛಂದಾದಿಗಳು ನೂರುಮಂದಿಯಲ್ಲಿ ಜ್ಯೇಷ್ಠರಾದ ಐವತ್ತುಜನವು ಅನ್ಯವಂಶಸ್ಥನಾದ ದೇವರಾತನು ನಮಗೆ ಜ್ಯೇಷ್ಠನಾಗುವುದು ಹ್ಯಾಗೆಂದು ಸಮ್ಮತಿಸಲಿಲ್ಲ ; ಅದನ್ನು ನೋಡಿ ವಿಶ್ವಾಮಿತ್ರನು ಕೋಪದಿಂದ ಅವರಂ ಮ್ಲೇಚ್ಛರಾಗಲಿ ಎಂದು ಶಪಿ[redacted] ಮಧ್ಯಮನಾದ ಮಧುಛಂದನು ಕನಿಷ್ಠರಾದ ಐವತ್ತುಮಂದಿಯೊಡನೆ ಸಹಿತನಾಗಿ ವಿಶ್ವಾಮಿತ್ರನನ್ನು ಕುರಿತು 'ಎಲೈ ತಂದೆಯೆ, ನೀನು ನಮಗೆ ಪಿತೃವು ; ನೀನು ನಮಗೆ ಜ್ಯೇಷ್ಠತ್ವವನ್ನಾದರೂ ಕೊಡು ; ಕನಿಷ್ಠತ್ವವನ್ನಾದರೂ ಕೊಡು ; ಆ ವ್ಯವಸ್ಥೆಯಲ್ಲಿ ನಾವು ಇರುತ್ತೇವೆ'' ಎಂದು ನುಡಿದು ಮಂತ್ರದ್ರಷ್ಟ್ರುವಾದ ಶುನಶ್ಶೇಫನನ್ನು ಜ್ಯೇಷ್ಠನನ್ನಾಗಿ ಮಾಡಿಕೊಂಡು ತಾವೆಲ್ಲರು ಕನಿಷ್ಠರಾದ[redacted] ಆಗ ವಿಶ್ವಾಮಿತ್ರನು ಪುತ್ರರನ್ನು ಕುರಿತು ನೀವೆಲ್ಲರೂ ಪುತ್ರವಂತರಾಗೀ ಎಂದು ನುಡಿದು 'ಎಲೈ ಪುತ್ರರೆ, ನೀವು ಐವತ್ತುಮಂದಿಯು ನನ್ನ ಮಾತನ್ನು ಕೇಳಿ ನನ್ನನ್ನು ಪುತ್ರವಂತನನ್ನಾಗಿ ಮಾಡಿದಿರಿ ; ಅದು ಕಾರಣ ನೀವು ಪುತ್ರವಂತರಾಗಿ ಈ ದೇವರಾತನನ್ನು ಜ್ಯೇಷ್ಠನನ್ನಾಗಿ ಭಾವಿಸಿಕೊಂಡಿರುವರಾಗೀ' ಎಂದು ನುಡಿದನು ! ಎಲೈ ಅರಸೆ, ಅಷ್ಟಕನು ಹಾರೀತನು ಯಜ್ಞನು ಕ್ರತುಮಂತನು ಇವರು ಮುಂತಾದ ಪುತ್ರರು ವಿಶ್ವಾಮಿತ್ರನಿಗೆ ಉಂಟಾದರು ; ಈರೀತಿಯಲ್ಲಿ ಕೌಶಿಕಗೋತ್ರವು ವಿಶ್ವಾಮಿತ್ರನಿಂದ ನಾನಾರೂಪವಾಗಿ ಅನ್ಯಪ್ರವರವನ್ನೈದಿತು.''

೧೭ ನೇ ಅಧ್ಯಾಯ.

ಪೂರುರಾಯನ ಸಂತತಿಯು.

“ಎಲೈ ಪರೀಕ್ಷಿದ್ರಾಯನೆ, ಪುರೂರವರಾಯನ ಜ್ಯೇಷ್ಠಪುತ್ರನಾದ ಆಯುರಾಯನಿಗೆ ನಹುಷನು ಕ್ಷತ್ರವೃದ್ಧನು ರಜಿಯು ರಂಭನು ಅನೇನಸ್ಸು ಎಂಬ ಐದುಮಂದಿ ಪುತ್ರರಾದರು; ಅವರಲ್ಲಿ ಎರಡನೆಯವನಾದ ಕ್ಷತ್ರವೃದ್ಧನ ವಂಶವನ್ನು ಕೇಳು: ಕ್ಷತ್ರವೃದ್ಧನಿಗೆ ಸುಹೋತ್ರನೆಂಬ ಪುತ್ರನು; ಆ ಸುಹೋತ್ರನಿಗೆ ಕಾಶ್ಯನು ಕೃಶನು ಗೃತ್ಸಮದನು ಎಂದು ಮೂರುಮಂದಿ ಪುತ್ರರು; ಗೃತ್ಸಮದನಿಗೆ ಶುನಕನು; ಆ ಶುನಕನಿಗೆ ಋಗ್ವೇದಪ್ರವರ್ತಕನಾದ ಶೌನಕನು ಪ್ರೇಮಪುತ್ರನು; ಕಾಶ್ಯನಿಗೆ ಕಾಶಿಯೆಂಬ ಪುತ್ರನು; ಅವನಿಗೆ ರಾಷ್ಟ್ರನು; ಅವನಿಗೆ ದೀರ್ಘತಮನು; ದೀರ್ಘತಮನಿಗೆ ವೈದ್ಯಶಾಸ್ತ್ರಪ್ರವರ್ತಕನಾದ ಧನ್ವಂತರಿಯು ಪುತ್ರನಾದನು; ಆತನು ಯಜ್ಞಭೋಕ್ತೃವಾಗಿ ವಾಸುದೇವಾಂಶನಾದನು; ಸ್ಮರಣ ಮಾತ್ರದಿಂದಲೇ ರೋಗಪರಿಹಾರಕನು; ಆ ಧನ್ವಂತರಿಯ ಪುತ್ರನು ಕೇತುಮಂತನು; ಆತನಿಗೆ ಭೀಮರಥನು; ಅವನಿಗೆ ದಿವೋದಾಸನು; ಅವನಿಗೆ ದ್ಯುಮಂತನು; ಆ ದ್ಯುಮಂತನಿಗೆ ಪ್ರತರ್ದನನು; ಮತ್ತು ಋತಜಿತ್ತು ದೃತಧ್ವಜ ಕುವಲಯಾಶ್ವನೆಂಬ ಹೆಸರುಗಳುಂಟಾಗಿರುವವು; ಆ ದ್ಯುಮಂತನಿಗೆ ಅಳರ್ಕಾದಿಗಳು ಪುತ್ರರು; ಆ ಅಳರ್ಕರಾಯನು ಅರವತ್ತಾರು ಸಾವಿರ ವರ್ಷ ಪರ್ಯಂತವು ಯೌವನಸ್ಥನಾಗಿ ರಾಜ್ಯಾಧಿಪತ್ಯವನ್ನು ಮಾಡಿದನು; ಆ ಅಳರ್ಕನಿಗೆ ಸನ್ನತಿಯು; ಆತನಿಗೆ ಸುನೀತಿಯು ಅವನಿಗೆ ಸುಕೇತನು; ಅವನಿಗೆ ಧರ್ಮಕೇತುವು; ಅವನಿಗೆ ಸತ್ಯಕೇತುವು: ಅವನಿಗೆ ಧೃಷ್ಟಕೇತುವು; ಅವನಿಗೆ ಸುಕುಮಾರನು; ಆತನಿಗೆ ವೀತಿಹೋತ್ರನು; ಅವನಿಗೆ ಭರ್ಗನು; ಅವನಿಗೆ ಭಾರ್ಗಭೂಮಿಯು; ಇವರುಗಳು ಕ್ಷತ್ರಿಯವಂಶಸ್ಥರಾದವರು; ಕೌಶಿಕಸಂಜ್ಞಕರಾದ ಅರಸುಗಳು; ರಂಭನಿಗೆ ರಭಸನೆಂಬ ಪುತ್ರನು; ಅವನಿಗೆ ಗಂಭೀರನು; ಅವನಿಗೆ ಚತ್ರಕನು; ಆ ಚತ್ರಕನ ಕ್ಷೇತ್ರದಲ್ಲಿ ಬ್ರಹ್ಮಜಾತಿಯು ಹುಟ್ಟಿತು! ಎಲೈ ಅರಸೆ, ಅನೇಹಸ್ಸು ಎಂಬ ರಾಯನ ವಂಶವನ್ನು ಕೇಳು: ಅನೇಹಸ್ಸಿಗೆ ಶುದ್ಧನು; ಅವನಿಗೆ ಶುಚಿಯು; ಅವನಿಗೆ ತ್ರಿಕಕುಭ್ರಾಜನು; ಅವನಿಗೆ ಧರ್ಮಸಾರಥಿಯು; ಅವನಿಗೆ ಶಾಂತರಾಜನು; ಆ ಶಾಂತರಾಜನು ಆತ್ಮಜ್ಞಾನಿಯಾಗಿ ಕೃತಾರ್ಥನಾದನು; ರಜಿರಾಯನಿಗೆ ಐನೂರು ಮಂದಿ ಪರಾಕ್ರಮಿಗಳಾದ ಪುತ್ರರಾದರು; ಆ ರಜಿರಾಯನು ದೇವತೆಗಳಿಂದ ಪ್ರಾರ್ಥಿತನಾಗಿ ದೈತ್ಯರನ್ನು ಸಂಹರಿಸಿ ಸ್ವರ್ಗವನ್ನು ಇಂದ್ರನಿಗೆ ಕೊಟ್ಟನು; ಆ ಇಂದ್ರನು ಪುನಃ ಸ್ವರ್ಗವನ್ನು ರಜಿತರಾಯನಿಗೆ ಕೊಟ್ಟು ಪ್ರಹ್ಲಾದನ ಭಯದಿಂದ ಸುಮ್ಮನಿದ್ದನು; ಆ ರಜಿತರಾಯನು ಕಾಲಾಧೀನವಾದಮೇಲೆ ಅವನ ಪುತ್ರರಾದ ಐನೂರು ಮಂದಿಯನ್ನು ಕುರಿತು ಇಂದ್ರನು ಸ್ವರ್ಗವನ್ನು ಯಾಚಿಸಿದನು; ಅವರು ಸ್ವರ್ಗವನ್ನು ಇಂದ್ರನಿಗೆ ಕೊಡದೆ ಯಜ್ಞಭಾಗಗಳನ್ನು ತಾವೇ ತೆಗದುಕೊಂಡರು; ಅನಂತರದಲ್ಲಿ ಬೃಹಸ್ಪತಿಯಿಂದ ಅಭಿಚಾರಕ್ರತುವನ್ನು ಮಾಡಿಸಿದನು; ಅದರಿಂದ ಅವರಿಗೆ ಬುದ್ಧಿಭ್ರಂಶವುಂಟಾಗಿ ಭ್ರಷ್ಟರಾದುದನ್ನು ನೋಡಿ ದೇವೇಂದ್ರನು ಐನೂರು ಮಂದಿಯನ್ನು ನಿಶ್ಶೇಷರನ್ನಾಗಿ ಸಂಹರಿಸಿದನು! ಎಲೈ ಅರಸೆ, ಕ್ಷತ್ರವೃದ್ಧನ ಪೌತ್ರನಾದ ಕುಶನಿಗೆ ಪ್ರೀತಿಯೆಂಬ ಪುತ್ರನು; ಅವನಿಗೆ ಸಂಜಯನು; ಅವನಿಗೆ ಜಯನು; ಅವನಿಗೆ ಕೃತನು; ಅವನಿಗೆ ಹರ್ಯಧ್ವನನು; ಆತನಿಗೆ ಸಹದೇವನು; ಅವನಿಗೆ ಅಹೀನನು; ಅವನಿಗೆ ಜಯಸೇನನು; ಆತನಿಗೆ ಸಂಕ್ರತಿಯು; ಆತನಿಗೆ ಕ್ಷತ್ರಧರ್ಮನು; ಇವರುಗಳು ಕ್ಷತ್ರವೃದ್ಧನ ವಂಶಸ್ಥರಾದ ಅರಸುಗಳು.”

೧೮ ನೇ ಅಧ್ಯಾಯ.

ಯಯಾತಿರಾಯನು ತನ್ನ ಕನಿಷ್ಠಪುತ್ರನಾದ ಪೂರುವನ್ನು ರಾಜ್ಯದಲ್ಲಿ ಪಟ್ಟಾಭಿಷಿಕ್ತನನ್ನು ಮಾಡಿದ್ದು.

ಎಲೈ ಪರೀಕ್ಷಿದ್ರಾಯನೆ, ಇನ್ನು ನಹುಷರಾಯನ ವಂಶವನ್ನು ಕೇಳು: ಯತಿಯು ಯಯಾತಿಯು ಸಂಭೂತಿಯು ಆಯತಿಯು ವಿಯತಿಯು ಕೃತಿಯು ಎಂದು ಆರುಮಂದಿ ಪುತ್ರರು ನಹುಷನಿಗೆ ಷಡಿಂದ್ರಿಯಗಳಂತೆ ಜನಿಸಿದರು;

ಜ್ಯೇಷ್ಠನಾದ ಯತಿಯು ತಂದೆಯಿಂದ ಕೊಡಲ್ಪಟ್ಟ ರಾಜ್ಯವನ್ನು ರಾಜ್ಯಾಧಿಪತ್ಯಮದದಿಂದ ಮೋಹಿತನಾಗಿ ಪುರುಷನು ಸ್ವಸ್ವರೂಪವನ್ನು ತಿಳಿಯದೇ ಹೋಗುವನೆಂದು ಐಶ್ವರ್ಯದ ಪರ್ಯವಸಾನಗತಿಯನ್ನರಿತು ಇಚ್ಛೈಸಲಿಲ್ಲ; ಆ ನಹುಷರಾಯನು ಇಂದ್ರತ್ವವನ್ನೈದಿ ಸ್ವರ್ಗದಲ್ಲಿ ಶಚೀದೇವಿಯನ್ನು ಬಲಾತ್ಕರಿಸಿ ಭೋಗೇಚ್ಛೆಯನ್ನು ಮಾಡಿ ಅಗಸ್ತ್ಯರು ಮೊದಲಾದ ಋಷಿಗಳಿಂದ ಸ್ವರ್ಗದಿಂದ ಭ್ರಂಶಿತನಾಗಿ ಅಜಗರಭಾವವನ್ನೈದಿದಮೇಲೆ ಯಯಾತಿರಾಯನು ಅರಸಾದನು; ಸಂಯಾತಿಯೂ ಆಯತಿಯೂ ವಿಯತಿಯೂ ಕೃತಿಯೂ ಎಂಬ ನಾಲ್ಕುಮಂದಿ ಭ್ರಾತೃಗಳನ್ನು ನಾಲ್ಕು ದಿಕ್ಕುಗಳಿಗೆ ಅಧಿಪತಿಗಳನ್ನು ಮಾಡಿ ಯಯಾತಿರಾಯನು ಶುಕ್ರಾಚಾರ್ಯನ ಪುತ್ರಿಯಾದ ದೇವಯಾನಿಯನ್ನೂ ವೃಷಪರ್ವನೆಂಬ ಅಸುರನ ಪುತ್ರಿಯಾದ ಶರ್ಮಿಷ್ಠೆಯನ್ನೂ ವಿವಾಹವನ್ನು ಮಾಡಿಕೊಂಡು ರಾಜ್ಯಾಧಿಪತ್ಯವನ್ನು ಮಾಡಿದನು" ಎಂದು ನುಡಿದನು.

ಪರೀಕ್ಷಿದ್ರಾಯನು "ಎಲೈ ಶುಕಾಚಾರ್ಯನೆ, ಭಗವಂತನಾದ ಶುಕ್ರಾಚಾರ್ಯನು ಬ್ರಹ್ಮರ್ಷಿಯು; ನಹುಷಪುತ್ರನಾದ ಯಯಾತಿಯು ಕ್ಷತ್ರಿಯನು; ಬ್ರಾಹ್ಮಣಕನ್ಯೆಗೂ ಕ್ಷತ್ರಿಯ ವರನಿಗೂ ಪ್ರತಿಲೋಮಕ್ರಮದಿಂದ ವಿವಾಹವು ಹ್ಯಾಗೆ ನಡೆಯಿತು?" ಎಂದು ಕೇಳಿದನು.

ಆ ವಾಕ್ಯವನ್ನು ಕೇಳಿ ಶುಕಾಚಾರ್ಯನು "ಎಲೈ ಅರಸೆ, ಒಂದು ಸಮಯದಲ್ಲಿ ದಾನವಪತಿಯಾದ ವೃಷಪರ್ವನ ಪುತ್ರಿಯಾದ ಶರ್ಮಿಷ್ಠೆಯು ಸಾವಿರಮಂದಿ ಸಖಿಯರೊಡಗೂಡಿ ಶುಕ್ರನ ಪುತ್ರಿಯಾದ ದೇವಯಾನಿಯೊಡಗೂಡಿ ಪುಷ್ಪಿಸಿದ ವೃಕ್ಷಗಳಿಂದ ಸಾಂದ್ರವಾಗಿ ಮಧುರವಾದ ಗಾನವುಳ್ಳ ಭ್ರಮರಗಳಿಂದ ಯುಕ್ತವಾದ ಪದ್ಮಗಳುಳ್ಳ ಉದ್ಯಾನವನದಲ್ಲಿ ಸಂಚರಿಸಿದಳು; ಕಮಲಲೋಚನೆಯರಾದ ಆ ಸ್ತ್ರೀಯರುಗಳು ಉಟ್ಟಿದ್ದ ದುಕೂಲಂಗಳನ್ನು ತಡಿಯಲ್ಲಿರಿಸಿ ವಿವಸ್ತ್ರರಾಗಿ ಸರೋವರದಲ್ಲಿ ಜಲಕ್ರೀಡಾರ್ಥವಾಗಿಳಿದು ಒಬ್ಬರಮೇಲೊಬ್ಬರು ನೀರು ಎರಚುತ ವಿಹರಿಸಿದರು; ಆಗ ಪಾರ್ವತೀಸಮೇತನಾಗಿ ವೃಷಭಾರೂಢನಾಗಿ ಬರುತಲಿರುವ ಪರಮೇಶ್ವರನನ್ನು ನೋಡಿ ಲಜ್ಜಿತರಾಗಿ ಶೀಘ್ರದಲ್ಲಿ ಮೇಲಕ್ಕೆ ಹತ್ತಿ ಬಂದು ತ್ವರೆಯಿಂದ ದುಕೂಲಂಗಳನ್ನು ತೆಗದು ಉಟ್ಟುಕೊಂಡರು; ಶರ್ಮಿಷ್ಠೆಯು ಅರಿಯದೆ ಗುರುಪುತ್ರಿಯಾದ ದೇವಯಾನಿಯ ವಸ್ತ್ರವನ್ನುಟ್ಟುಕೊಂಡಳು; ದೇವಯಾನಿಯು ತನ್ನ ಶೀರೆಯನ್ನು ತಿಳಿದು ಕೋಪಿಷ್ಠಳಾಗಿ 'ಎಲೈ ಸ್ತ್ರೀಯರುಗಳಿರಾ, ಗೌಡಿಯಾದ ಈ ಶರ್ಮಿಷ್ಠೆಯಿಂದ ಮಾಡಲ್ಪಟ್ಟ ಅಯುಕ್ತವ್ಯಾಪಾರವನ್ನು ನೀವು ನೋಡಿ; ನನಗೆ ಧಾರಣಯೋಗ್ಯವಾದ ವಸ್ತ್ರವನ್ನು ತಾನು ಉಟ್ಟುಕೊಂಡು ಯಜ್ಞದಲ್ಲಿ ಯೋಗ್ಯವಾದ ಹವಿಸ್ಸನ್ನು ನಾಯಿಮುಟ್ಟಿದಂತೆ ಅಕಾರ್ಯವನ್ನು ಮಾಡಿದಳು; ಯಾವ ಬ್ರಾಹ್ಮಣರ ತಪಃಶಕ್ತಿಯಿಂದ ಈ ಜಗತ್ತು ಸೃಷ್ಟಿಸಲ್ಪಟ್ಟಿತೋ ಯಾವ ಬ್ರಾಹ್ಮಣರು ಪರಮಪುರುಷನ ಮುಖಸ್ಥಾನಾಪನ್ನರೋ ಯಾರಿಂದ ಪರಬ್ರಹ್ಮವು ಧರಿಸಲ್ಪಟ್ಟಿದೆಯೋ ಯಾವ ಬ್ರಾಹ್ಮಣರಿಂದ ಉತ್ತಮಗತಿಪ್ರದವಾದ ವೇದಮಾರ್ಗವು ತೋರಿಸಲ್ಪಟ್ಟಿತೋ ಲೋಕನಾಥರಾದ ಇಂದ್ರಾದಿ ದೇವಶ್ರೇಷ್ಠರು ಯಾವ ಬ್ರಾಹ್ಮಣರಂ ನಮಸ್ಕರಿಸಿ ಉಪಾಸನೆಯನ್ನು ಮಾಡುತ್ತಾರೆಯೋ ಭಗವಂತನಾದ ಪರಮೇಶ್ವರನು ಕೂಡ ಯಾವ ಬ್ರಾಹ್ಮಣರನ್ನು ಉಪಾಸನೆಯುಂಗೈಯುತ್ತಾನೆಯೋ ಅಂಥಾ ಬ್ರಾಹ್ಮಣೋತ್ತಮರು ನಾವು; ತತ್ರಾಪಿ ಭೃಗುವಂಶದಲ್ಲಿ ಜನಿಸಿದವರು; ಇವಳ ತಂದೆಯಾದ ಅಸುರನು ನಮ್ಮ ಶಿಷ್ಯನು; ಆದಪರಿ[illegible] ನಮ್ಮಿಂದ ಧಾರಣೆಗೆ ಯೋಗ್ಯವಾದ ವಸ್ತ್ರವನ್ನು ಧರಿಸುವುದಕ್ಕೆ ನಿಕೃಷ್ಟಳಾದ ಇವಳು ಹ್ಯಾಗೆ ಯೋಗ್ಯಳಾಗುವಳು; ಶೂದ್ರನು ವೇದಕ್ಕೆ ಅಧಿಕಾರಿಯಾದಾನೆ' ಎಂದು ನುಡಿದಳು. ಈರೀತಿಯಲ್ಲಿ ಕ್ರೂರವಾಕ್ಯಗಳನ್ನು ನುಡಿಯುತಲಿರುವ ಗುರುಪುತ್ರಿಯಾದ ದೇವಯಾನಿಯನ್ನು ಕುರಿತು ಸರ್ಪಸ್ತ್ರೀಯಂತೆ ಕೋಪದಿಂದ ಶ್ವಾಸಗಳನ್ನು ಬಿಡುತ ಶರ್ಮಿಷ್ಠೆಯು ಹಲ್ಲುಮುಡಿಯನ್ನು ಕಚ್ಚಿಕೊಂಡು 'ಎಲೈ ಭಿಕ್ಷುಕಿಯಾದ ದೇವಯಾನಿಯೆ, ನಿನ್ನ ಸ್ವರೂಪವನ್ನು ನೀನು ಕಾಣದೆ ಬಹುವಾದ ದುರ್ಭಾಷೆಗಳನ್ನಾಡುತ್ತೀಯೆ; ನಮ್ಮ ಮನೆಯಲ್ಲಿ ವಾಯಸಗಳಂತೆ ನೀವು ಅನ್ನಕ್ಕೂ ಕಾಸಿಗೂ ಬಂದು ಕಾದುಬಿದ್ದಿರುವುದಿಲ್ಲವೆ' ಎಂದು ಕ್ರೂರೋಕ್ತಿಯಿಂದ ಆಚಾರ್ಯಪುತ್ರಿಯನ್ನು ಧಿಕ್ಕರಿಸಿ ಅವಳ ಶೀರೆಯನ್ನು ಕೊಡದೆ ಕೋಪದಲ್ಲಿ ಆ ದೇವಯಾನಿಯನ್ನು ಒಂದು ಹಾಳುಭಾವಿ

ಯಲ್ಲಿ ತಳ್ಳಿ ತಾನು ಮನೆಗೆ ಹೋದಳು ; ಆ ಶರ್ಮಿಷ್ಠೆ ಹೊರಟುಹೋದಮೇಲೆ ಮೃಗಬೇಟೆಗೋಸ್ಕರ ಅರಣ್ಯ ದಲ್ಲಿ ಸಂಚರಿಸುತ ಯಯಾತಿರಾಯನು ದೈವಗತಿಯಿಂದ ಅಲ್ಲಿಗೆ ಬಂದು ಉದಕಾಪೇಕ್ಷೆಯಿಂದ ಆ ಕೂಪದಲ್ಲಿ ದೇವ ಯಾನಿಯನ್ನು ಕಂಡನು ; ಆಗ ದಯಾಶಾಲಿಯಾದ ಆ ಯಯಾತಿರಾಯನು ಆ ದೇವಯಾನಿಯನ್ನು ವಸ್ತ್ರಹೀನಳ ನ್ನಾಗಿ ತಿಳಿದು ತನ್ನ ಬಹಿರ್ವಾಸವನ್ನು ಅವಳಿಗೆ ಕೊಟ್ಟು ಆಕೆಯ ಹಸ್ತವನ್ನು ಹಿಡಿದು ಮೇಲಕ್ಕೆತ್ತಿದನು ; ಅನಂ ತರದಲ್ಲಿ ಶುಕ್ರಾಚಾರ್ಯಪುತ್ರಿಯಾದ ದೇವಯಾನಿಯು ಪ್ರೇಮಪೂರ್ಣವಾದ ವಾಕ್ಯದಿಂದ ವೀರನಾದ ಆ ಯಯಾತಿ ರಾಯನನ್ನು ಕುರಿತು 'ಎಲೈ ಶತ್ರುಸಂಹಾರಕನಾದ ಅರಸೆ, ನನ್ನ ಹಸ್ತವು ನಿನ್ನಿಂದ ಗ್ರಹಿಸಲ್ಪಟ್ಟಿತು ; ನಿನ್ನಿಂದ ಗ್ರಹಿ ಸಲ್ಪಟ್ಟ ಹಸ್ತವು ಮತ್ತೊಬ್ಬರಿಂದ ಗ್ರಹಿಸಲ್ಪಡಬೇಡ ; ನನಗೂ ನಿನಗೂ ಇದೇ ಪಾಣಿಗ್ರಹಣವು ; ಸತ್ಯವು ! ಎಲೈ ವೀರನೆ, ನನಗೂ ನಿನಗೂ ಸಂಬಂಧವು ದೈವಕೃತವಾದದ್ದು ; ಮನುಷ್ಯಕೃತವಲ್ಲ ; ಕೂಪದಲ್ಲಿರುವ ನಾನೆಲ್ಲಿ ? ಸಾರ್ವಭೌಮನಾದ ನೀನೆಲ್ಲಿ ? ಇದು ದೈವಘಟನವೇ ಸರಿ ; ಬೃಹಸ್ಪತಿ ಪುತ್ರನಾದ ಕಚನಿಂದ ನನಗೆ ಶಾಪಬಂದಿದೆ ; ಆ ಶಾಪದಿಂದ ನನಗೆ ಬ್ರಾಹ್ಮಣನು ಪತಿಯಾಗುವುದಿಲ್ಲ ; ಆ ಕಚನಿಗೆ ನಾನು ಮುಂಚೆ ಶಾಪವನ್ನು ಕೊಟ್ಟೆನು ; ಆಮೇಲೆ ನನಗೆ ಅವನು ಶಾಪವನ್ನು ಕೊಟ್ಟನು ; ಅದರ ಕ್ರಮವನ್ನು ಹೇಳುತ್ತೇನೆ ಕೇಳು : ಪೂರ್ವದಲ್ಲಿ ಬೃಹಸ್ಪತಿ ಪುತ್ರನಾದ ಕಚನು ಮೃತಸಂಜೀವಿನೀ ವಿದ್ಯಾಸಂಗ್ರಹಾರ್ಥವಾಗಿ ನಮ್ಮ ತಂದೆಯಾದ ಶುಕ್ರಾಚಾರ್ಯನನ್ನು ಶುಶ್ರೂ ಷಿಸಿ ಆ ವಿದ್ಯೆಯನ್ನು ಸಂಗ್ರಹಿಸಿದನು ; ನಾನು ಆ ಕಚನನ್ನೇ ಪತಿಯನ್ನಾಗಿ ಅಪೇಕ್ಷಿಸಿ ನನ್ನನ್ನು ವಿವಾಹ ಮಾಡಿಕೊ ಎಂದು ಕೇಳಲಾಗಿ ಕಚನು ನೀನು ನನಗೆ ಗುರುಪುತ್ರಿಯು ; ತಂಗಿಯಾಗಬೇಕು ; ಅಶಾಸ್ತ್ರೀಯ ವಾದ ಕಾರ್ಯವನ್ನು ಮಾಡುವುದಿಲ್ಲವೆಂದು ಸಮ್ಮತಿಸದಿರಲಾಗಿ ನಾನು ಕೋಪದಿಂದ ಈ ವಿದ್ಯೆಯು ನಿನಗೆ ಫಲಿ ಸಬೇಡವೆಂದು ಶಾಪವನ್ನು ಕೊಡಲಾಗಿ ಆ ಕಚನು 'ಎಲೈ ದೇವಯಾನಿಯೆ, ನಿನಗೆ ಬ್ರಾಹ್ಮಣನು ಪತಿಯಾಗ ಬೇಡ ; ನಿಕೃಷ್ಟಜಾತಿಯಲ್ಲಿ ವಿವಾಹವನ್ನು ಮಾಡಿಕೊ' ಎಂದು ನನಗೆ ಪ್ರತಿಶಾಪವನ್ನಿತ್ತನು ; ಆದುದರಿಂದ ನೀನೇ ನನಗೆ ಪತಿಯು ಎಂದು ಹೇಳಿದ ದೇವಯಾನಿಯ ವಾಕ್ಯವನ್ನು ಕೇಳಿ ಅಶಾಸ್ತ್ರೀಯವಾದಾಗ್ಯೂ ದೈವ ಕೃತವೆಂದು ತಿಳಿದು ತನ್ನ ಮನಸ್ಸನ್ನು ಆ ದೇವಯಾನಿಯಲ್ಲಿ ಲಗ್ನವಾದ್ದನ್ನು ಭಾವಿಸಿ ನನ್ನ ಚಿತ್ತವು ಅಧರ್ಮ ದಲ್ಲಿ ಪ್ರವರ್ತಿಸುವುದಿಲ್ಲವಾದುದರಿಂದ ಈ ಕೆಲಸವು ಯುಕ್ತವೇ ಸರಿಯೆಂದು ಆಲೋಚಿಸಿ ಯಯಾತಿರಾಯನು ಸಮ್ಮತಿಸಿ ಹೊರಟುಹೋದನು ; ಆಮೇಲೆ ದೇವಯಾನಿಯು ರೋದನಂಗೈಯುತ ತಂದೆಯಾದ ಶುಕ್ರಾಚಾರ್ಯ ನನ್ನು ಕುರಿತು ಈ ವೃತ್ತಾಂತವನ್ನು ಹೇಳಿದಳು ; ಆ ಮಾತನ್ನು ಕೇಳಿ ಶುಕ್ರಾಚಾರ್ಯನು ವ್ಯಸನಪಟ್ಟು ಪೌರೋ ಹಿತ್ಯವನ್ನು ನಿಂದಿಸಿ ಉಂಛವೃತ್ತಿಯೇ ಉತ್ತಮವೇ ಹೊರ್ತು ಅವಮಾನಾಸ್ಪದವಾದ ಈ ಪೌರೋಹಿತ್ಯವು ನಮಗೆ ಬೇಡವೆಂದು ಮಗಳನ್ನು ಕರದುಕೊಂಡು ಪುರದಿಂದ ಹೊರಟು ಬಂದನು ; ಅನಂತರದಲ್ಲಿ ದೈತ್ಯಪತಿಯಾದ ವೃಷ ಪರ್ವನು ಈ ವೃತ್ತಾಂತವನ್ನು ಕೇಳಿ ಗುರುವಾದ ಶುಕ್ರಾಚಾರ್ಯನು ನಮ್ಮಲ್ಲಿ ಕೋಪಿಸಿಕೊಂಡು ಹೋಗಿ ದೇವ ಪಕ್ಷಕ್ಕೆ ಸೇರಿದರೆ ನಮಗೆ ಕ್ಷೇಮವಲ್ಲವೆಂದು ತಿಳಿದು ಹಿಂದೆಯೇಹೋಗಿ ಶುಕ್ರಾಚಾರ್ಯನಿಗೆ ನಮಸ್ಕರಿಸಿ ಕಾಲನ್ನು ಹಿಡಿದುಕೊಂಡು ಅಪರಾಧವನ್ನು ಕ್ಷಮಿಸಿ ಅನುಗ್ರಹವನ್ನು ಮಾಡಬೇಕು ಎಂದು ಪ್ರಾರ್ಥಿಸಿದಮೇಲೆ ಕ್ಷಣಿಕ ಕೋಪವುಳ್ಳ ಭಗವಂತನಾದ ಶುಕ್ರಾಚಾರ್ಯನು ವೃಷಪರ್ವನನ್ನು ಕುರಿತು 'ಎಲೈ ಅರಸೆ, ದೇವಯಾನಿಯ ಮನೋಗತಾರ್ಥವನ್ನು ನೀನು ನಡಿಸಿಕೊಟ್ಟರೆ ನಾನು ಊರಿಗೆ ಬರುತ್ತೇನೆ ; ಇಲ್ಲದಿದ್ದರೆ ಮಗಳನ್ನು ನಾನು ಬಿಟ್ಟು ಬರಲಾರೆನು' ಅಂದನು. ಶುಕ್ರವಾಕ್ಯವನ್ನು ಕೇಳಿ ಹಾಗೇ ಆಗಲಿ ಎಂದು ಅರಸು ಅಂಗೀಕರಿಸಿದಮೇಲೆ ದೇವಯಾನಿಯು ತನ್ನ ಅಭಿಪ್ರಾಯವನ್ನು ಹೇಳಿದಳು ! ಎಲೈ ಅರಸೆ, ನಿನ್ನ ಮಗಳಾದ ಶರ್ಮಿಷ್ಠೆಯನ್ನು ಸಾವಿರ ಮಂದಿ ದಾಸೀರೊಡನೆ ಸಹಿತವಾಗಿ ನನಗೆ ದಾಸಿಯನ್ನಾಗಿ ಕೊಟ್ಟರೆ ನಾನು ಊರಿಗೆ ಬರುತ್ತೇನೆಂದು ಹೇಳಲಾಗಿ ವೃಷಪರ್ವನು ಅದೇರೀತಿಯಲ್ಲಿ ಶರ್ಮಿಷ್ಠೆಯನ್ನು ದೇವಯಾನಿಗೆ ಕೊಟ್ಟನು ; ಶರ್ಮಿಷ್ಠೆಯು ಶುಕ್ರಾಚಾರ್ಯ ನಿಂದ ತನ್ನ ತಂದೆಗೆ ಬಂದ ಸಂಕಟವನ್ನು ನೋಡಿ ಪಿತೃವಾಕ್ಯದಲ್ಲಿ ಗೌರವವನ್ನು ಮಾಡಿ ಅಂಗೀಕರಿಸಿ ಸಾವಿರಮಂದಿ ದಾಸೀರೊಡನೆ ದೇವಯಾನಿಯನ್ನು ಸೇವಿಸಿದಳು ; ಅನಂತರದಲ್ಲಿ ಶುಕ್ರಾಚಾರ್ಯನು ಶರ್ಮಿಷ್ಠೆಸಹಿತಳಾದ ತನ್ನ

ಪುತ್ರಿಯಾದ ದೇವಯಾನಿಯನ್ನು ಯಯಾತಿರಾಯನಿಗೆ ಕೊಟ್ಟು 'ಎಲೈ ಯಯಾತಿರಾಯನೆ, ಈ ಶರ್ಮಿಷ್ಠೆಯನ್ನು ಶಯನಗೃಹವನ್ನು ಕುರಿತು ಕರೆಯಬೇಡವೆಂದು ಆಜ್ಞಾಪಿಸಿದನು. ಹೀಗಿರುವಲ್ಲಿ ಕೆಲವು ಕಾಲವಾದಮೇಲೆ ಶುಕ್ರಪುತ್ರಿಯಾದ ದೇವಯಾನಿಯನ್ನು ಗರ್ಭಿಣಿಯನ್ನಾಗಿ ತಿಳಿದು ಶರ್ಮಿಷ್ಠೆಯು ಒಂದು ಸ್ಥಳದಲ್ಲಿ ರಹಸ್ಯದಲ್ಲಿ ಋತುಸ್ನಾತಳಾಗಿ ಆ ಯಯಾತಿರಾಯನನ್ನೇ ಪತಿಯನ್ನಾಗಿ ಪ್ರಾರ್ಥಿಸಿದಳು ; ಆಗ ಯಯಾತಿರಾಯನು ರಾಜಪುತ್ರಿಯಾದ ಶರ್ಮಿಷ್ಠೆಯಿಂದ ಋತುಕಾಲದಲ್ಲಿ ಪ್ರಾರ್ಥಿತನಾಗಿ ಪುತ್ರಾರ್ಥವಾದ ಪ್ರಾರ್ಥನೆಯನ್ನು ಲ್ಲಂಘಿಸಬಾರದೆಂದು ಧರ್ಮವನ್ನು ನೋಡಿ ಶುಕ್ರಾಚಾರ್ಯನ ವಚನವನ್ನು ಸ್ಮರಿಸಿಕೊಂಡು ಇದು ದೈವಕೃತವೆಂದು ತಿಳಿದು ಅಂಗೀಕರಿಸಿದನು; ಅನಂತರದಲ್ಲಿ ದೇವಯಾನಿಯು ಯದುರಾಯನನ್ನು ತುರ್ವಸುರಾಯನನ್ನು ಪೆತ್ತಳು ; ವೃಷಪರ್ವನ ಪುತ್ರಿಯಾದ ಶರ್ಮಿಷ್ಠೆಯು ದೃಹ್ಯುರಾಯನನ್ನು ಅನುರಾಯನನ್ನು ಪೂರುರಾಯನನ್ನು ಮೂರುಮಂದಿ ಪುತ್ರರನ್ನು ಪೆತ್ತಳು ; ದೇವಯಾನಿಯು ಶರ್ಮಿಷ್ಠೆಗೆ ಗರ್ಭೋತ್ಪತ್ತಿಯು ತನ್ನ ಪತಿಯಾದ ಯಯಾತಿರಾಯನಿಂದಲೇ ಸರಿಯೆಂದು ನಿಶ್ಚಯಿಸಿ ಕೋಪಿಷ್ಠಳಾಗಿ ತಂದೆಯಾದ ಶುಕ್ರಾಚಾರ್ಯನ ಮನೆಗೆ ಹೊರಟುಹೋದಳು ; ಕಾಮಿಯಾದ ಯಯಾತಿಯು ಪ್ರಿಯಳಾದ ದೇವಯಾನಿಯನ್ನು ಕುರಿತು ಹಿಂದೆಯೇ ಹೋಗಿ ಮೃದೂಕ್ತಿಗಳಿಂದಲೂ ಒಡಂಬಡಿಕೆಗಳಿಂದಲೂ ಪಾದಗಳಂ ಒತ್ತಿ ಉಪಚರಿಸೋಣವೇ ಮೊದಲಾದ ನಾನಾವಿಧೋಪಾಯಂಗಳಿಂದಲೂ ಆ ದೇವಯಾನಿಯನ್ನು ಪ್ರಸನ್ನಳನ್ನು ಮಾಡಲಾರದೇ ಹೋದನು ; ಆಗ ದೇವಯಾನಿಯು ಶುಕ್ರನನ್ನು ಕುರಿತು ಈ ವೃತ್ತಾಂತವನ್ನು ಪೇಳಲಾಗಿ ಶುಕ್ರಾಚಾರ್ಯನು ಕೋಪಿಷ್ಠನಾಗಿ ಯಯಾತಿರಾಯನನ್ನು ಕುರಿತು 'ಎಲೈ ಸ್ತ್ರೀಕಾಮುಕನೆ, ಅನೃತವಾದಿಯೆ, ಅಂಗವೈರೂಪ್ಯವನ್ನು ಮಾಡುವ ಜರೆಯು ನಿನಗೆ ಬರಲಿ' ಎಂದು ಶಪಿಸಿದನು. ಆಗ ಯಯಾತಿರಾಯನು ಆಚಾರ್ಯನನ್ನು ಕುರಿತು 'ಎಲೈ ಬ್ರಾಹ್ಮಣೋತ್ತಮನಾದ ಶುಕ್ರಾಚಾರ್ಯನೆ, ನಿನ್ನ ಪುತ್ರಿಯಾದ ದೇವಯಾನಿಯಲ್ಲಿ ಕಾಮಭೋಗಂಗಳಿಂದ ನಾನು ತೃಪ್ತನಾಗಲಿಲ್ಲ' ಎಂದು ನುಡಿದನು. ಆ ವಾಕ್ಯವನ್ನು ಕೇಳಿ ಶುಕ್ರನು 'ಎಲೈ ಅರಸೆ, ಯಾರಾದರೂ ನಿನ್ನ ಜರೆಯನ್ನು ಧರಿಸುವರಿದ್ದರೆ ಅವರಲ್ಲಿ ಯೌವನವನ್ನು ವಿನಿಮಯವನ್ನು ಮಾಡಿಕೊ ; ನಿನ್ನ ಜರೆಯನ್ನವರಿಗೆ ಕೊಟ್ಟು ಅವರ ಯೌವ್ವನವನ್ನು ನೀನು ತೆಗದುಕೊ' ಎಂಬ ವಾಕ್ಯವನ್ನು ಕೇಳಿ ಯಯಾತಿರಾಯನು ಜ್ಯೇಷ್ಠಪುತ್ರನಾದ ಯದುರಾಯನನ್ನು ಕುರಿತು 'ಎಲೈ ಪುತ್ರನಾದ ಯದುರಾಯನೆ, ನಿನ್ನ ಮಾತಾಮಹನಾದ ಶುಕ್ರನಿಂದ ಕಲ್ಪಿಸಲ್ಪಟ್ಟ ಈ ಜರೆಯನ್ನು ನೀನು ತೆಗದುಕೊಂಡು ನಿನ್ನ ಯೌವ್ವನವನ್ನು ನನಗೆ ಈವನಾಗು ; ಆ ಯೌವ್ವನದಿಂದಲೇ ಕೆಲವು ವತ್ಸರಂಗಳು ನಾನು ವಿಷಯಭೋಗಂಗಳನ್ನನುಭವಿಸುವೆನು ; ನಾನು ಭೋಗಂಗಳಲ್ಲಿ ಇನ್ನೂ ತೃಪ್ತನಾಗಲಿಲ್ಲ' ಎಂಬ ಪಿತೃವಾಕ್ಯವನ್ನು ಕೇಳಿ ಯದುರಾಯನು 'ಎಲೈ ತಂದೆಯೆ, ಯೌವ್ವನಸುಖವನ್ನನುಭವಿಸುವ ಕಾಲದಲ್ಲಿ ಮಧ್ಯಪ್ರಾಪ್ತವಾದ ಜರೆಯಿಂದ ನಾನು ಜೀವಿಸಲಾರೆನು ; ಗ್ರಾಮ್ಯಂಗಳಾದ ವಿಷಯ ಭೋಗಂಗಳನ್ನು ಅನುಭವಿಸುವುದಕ್ಕೆ ಮುಂಚೆ ವೈರಾಗ್ಯವನ್ನು ಪುರುಷನು ಪಡೆಯುವದಿಲ್ಲ' ಎಂಬ ಪುತ್ರವಾಕ್ಯವನ್ನು ಕೇಳಿ ತುರ್ವಸುರಾಯನನ್ನು ದೃಹ್ಯುರಾಯನನ್ನು ಅನುರಾಯನನ್ನು ಈ ಮೂರುಮಂದಿ ಪುತ್ರರನ್ನೂ ಇದೇರೀತಿಯಲ್ಲಿ ಯಾಚಿಸಲಾಗಿ ಆ ಮೂರುಮಂದಿಯೂ ಯದುರಾಯ ಹೇಳಿದರೀತಿಯಲ್ಲಿ ಹೇಳಿ ಯೌವನವನ್ನು ಕೊಡದೆ ತಿರಸ್ಕಾರವನ್ನು ಮಾಡಲಾಗಿ ಕನಿಷ್ಠನಾದ ಪೂರುರಾಯನನ್ನು ಕುರಿತು 'ಎಲೈ ಪೂರುರಾಯನೆ, ನಿನ್ನ ಜ್ಯೇಷ್ಠಭ್ರಾತೃಗಳು ನಿರಾಕರಿಸಿದಂತೆ ನೀನೂ ನಿರಾಕರಿಸಬೇಡ ; ನಿನ್ನ ಯೌವನವನ್ನು ನನಗೆ ಕೊಡು' ಎಂದು ಯಾಚಿಸಿದನು. ತಂದೆಯ ವಾಕ್ಯವನ್ನು ಕೇಳಿ ಗುಣಶಾಲಿಯಾದ ಪೂರುರಾಯನು 'ಎಲೈ ಅರಸಾದ ತಂದೆಯೆ, ಲೋಕದಲ್ಲಿ ಬುದ್ಧಿಶಾಲಿಯಾದ ಯಾವ ಪುರುಷನು ತನಗೆ ಶರೀರವನ್ನು ಕೊಟ್ಟು ನಿರ್ಮಾಣವನ್ನು ಮಾಡಿದ ಪಿತೃವಿನ ವಾಕ್ಯಕ್ಕೆ ಪ್ರತಿಕೂಲವಾಗಿ ಆಚರಿಸ್ಯಾನು? ಪಿತೃಪ್ರಸಾದದಿಂದಲೇ ಪರಗತಿಯು ಸಿದ್ಧಿಸುವುದು ; ಲೋಕದಲ್ಲಿ ಪಿತೃವಿನ ಮನೋಗತವನ್ನು ತಿಳಿದು ಆತನು ಹೇಳದೆ ಇದ್ದಾಗ್ಯೂ ಆ ಕೆಲಸವನ್ನು ಮಾಡುವ ಪುತ್ರನು ಉತ್ತಮನು ; ಪಿತೃವಿನಿಂದ ಪೇಳಲ್ಪಟ್ಟ ಕಾರ್ಯವನ್ನು ಭಕ್ತಿಯಿಂದ ಮಾಡುವವನು ಅಧಮನು ; ಪಿತೃವಾಕ್ಯವನ್ನು ಲ್ಲಂಘಿಸಿ ಕೆಲಸವನ್ನು ಮಾಡದಿರುವ ಪುತ್ರನು ಆ ತಂದೆಯ ಪುರೀಷಪ್ರಾಯನು ; ಎಂದು ಪೇಳಿ ಸಂತೋಷಯುಕ್ತನಾಗಿ

ಆ ಜರೆಯನ್ನು ತೆಗೆದುಕೊಂಡು ತನ್ನ ಯೌವನವನ್ನು ಕೊಟ್ಟನು ; ಆ ಯಯಾತಿರಾಯನು ಆ ಯೌವನದಿಂದ ಕಾಮ ಭೋಗಗಳನ್ನನುಭವಿಸಿ ಸಪ್ತದ್ವೀಪಪತಿಯಾಗಿ ತಂದೆಯಾದ ನಹುಷನಂತೆ ಪ್ರಜೆಗಳನ್ನು ಪಿತೃವಿನಂತೆ ಪರಿಪಾಲಿಸಿ ಉತ್ಸಾಹಾನುಸಾರವಾಗಿ ಅವ್ಯಾಹತೇಂದ್ರಿಯ ಶಕ್ತಿಯುಳ್ಳವನಾಗಿ ಭೋಗಗಳನ್ನನುಭವಿಸಿದನು ; ದೇವಯಾನೆಯು ಮನಸ್ಸಿನಿಂದಲೂ ವಾಕ್ಕುಗಳಿಂದಲೂ ಪ್ರಿಯವಸ್ತುಗಳಿಂದಲೂ ಪ್ರಿಯನಾದ ಯಯಾತಿರಾಯನನ್ನು ಸಂತೋಷಪಡಿಸಿದಳು ; ಅನಂತರದಲ್ಲಿ ಯಯಾತಿರಾಯನು ಅಧಿಕದಕ್ಷಿಣೆಯುಳ್ಳ ಕ್ರತುಗಳಿಂದ ಸರ್ವವೇದಮಯನಾದ ಸರ್ವದೇವಾತ್ಮಕನಾದ ಶ್ರೀಹರಿಯನ್ನಾರಾಧಿಸಿದನು ; ಆಕಾಶದಲ್ಲಿ ಮೇಘಪಙ್ಕ್ತಿಯಂತೆ ಯಾವಪರಬ್ರಹ್ಮನಲ್ಲಿ ಈ ಜಗತ್ತು ಕಲ್ಪಿತವಾಗಿ ಸ್ವಪ್ನದಿಂದಲೂ ಮಾಯೆಯಿಂದಲೂ ಕಲ್ಪಿತವಾದ ಮನೋರಥದಂತೆ ತೋರುವುದೋ ಭಾವಿಸಿದರೇ ಇಲ್ಲದಿರುವುದೋ ಅಂತಹ ಪರಮಾತ್ಮನಾದ ಸರ್ವಭೂತ ಹೃದಯವಾಸಿಯಾದ ವಾಸುದೇವನನ್ನು ನಿಸ್ಪೃಹನಾಗಿ ಆರಾಧಿಸಿದನು; ಈರೀತಿಯಲ್ಲಿ ಅನೇಕ ಸಂವತ್ಸರ ಸಹಸ್ರಗಳು ಇಂದ್ರಿಯಗಳಿಂದ ವಿಷಯಭೋಗಗಳನ್ನನುಭವಿಸಿದಾಗ್ಯೂ ಕುತ್ಸಿತವಾದ ಇಂದ್ರಿಯಂಗಳಿಂದ ವಿಷಯಭೋಗಂಗಳಲ್ಲಿ ತೃಪ್ತಿಯನ್ನು ಪಡೆಯಲಿಲ್ಲ.''

೧೯ನೇ ಅಧ್ಯಾಯ.

ಯಯಾತಿರಾಯನು ವಿರಕ್ತನಾಗಿ ಮುಕ್ತಿಯನ್ನೈದಿದ್ದು.

ಎಲೈ ಪರೀಕ್ಷಿದ್ರಾಯನೆ, ಆ ಯಯಾತಿರಾಯನು ಈಪ್ರಕಾರವಾಗಿ ಸ್ತ್ರೀಲೋಲನಾಗಿ ಕಾಮಭೋಗಾಸಕ್ತನಾಗಿ ತನ್ನ ಸ್ವರೂಪವನ್ನು ಮರೆತು ಅನಂತರದಲ್ಲಿ ಪಶ್ಚಾತ್ತಪ್ತನಾಗಿ ದೇವಯಾನೆಯನ್ನು ಕುರಿತು ಈ ಕಥೆಯನ್ನು ಹೇಳುವನದೆಂತೆನೆ; 'ಎಲೈ ದೇವಯಾನೆಯೆ, ನಮ್ಮಂಥಾ ಅಜ್ಞಾನಿಗಳ ವ್ಯಾಪಾರವನ್ನು ನೋಡಿ ವನವಾಸಿಗಳಾದ ಯೋಗಿಗಳು ವ್ಯಸನಪಡುವರು ; ಪೂರ್ವದಲ್ಲಿ ಒಂದು ತಗರು ವನದಲ್ಲಿ ಸಂಚರಿಸುತ ಬೇಕಾದ ವಸ್ತುವನ್ನು ಹುಡುಕಿಕೊಂಡು ಬರುವಾಗ ಹಳ್ಳದಲ್ಲಿ ಕರ್ಮವಶದಿಂದ ಬಿದ್ದು ಮೇಲಕ್ಕೆ ಬರಲಾರದಿರುವ ಒಂದು ಹೆಣ್ಣು ಕುರಿಯನ್ನು ಕಂಡು ಕಾಮುಕವಾದ ಆ ತಗರು ಹೆಣ್ಣುಕುರಿಯನ್ನು ಮೇಲಕ್ಕೆತ್ತುವ ಉಪಾಯವನ್ನು ಚಿಂತಿಸುತ ತನ್ನ ಕೊಂಬುಗಳಿಂದ ಕೂಪದ ತಡಿಯಲ್ಲಿ ಅಗೆದು ಮಾರ್ಗವನ್ನು ಮಾಡಲಾಗಿ ಆ ಹೆಣ್ಣುಕುರಿಯು ಆ ಮಾರ್ಗದಿಂದ ಹತ್ತಿಬಂದು ಆ ತಗರನ್ನೇ ಕಾಮಿಸಿತು; ಅದನ್ನು ನೋಡಿ ಕೆಲವು ಹೆಣ್ಣುಕುರಿಗಳು ತಾವೂ ಕೂಡ ಆ ತಗರನ್ನೇ ಕಾಮಿಸಿದವು ; ಆ ತಗರು ಸ್ಥೂಲವಾಗಿ ಮೀಸೆಯುಳ್ಳದ್ದಾಗಿ ರೇತಸ್ಸೇಚನದಲ್ಲಿ ಸಮರ್ಥವಾಗಿ ರತಿವ್ಯಾಪಾರದಲ್ಲಿ ಪ್ರೌಢವಾಗಿರುವುದು; ಅಂತಹ ತಗರು ತಾನು ಒಂದೇ ಹೆಣ್ಣುಕುರಿಗಳಿಗೆಲ್ಲಕ್ಕೂ ಪತಿಯಾಗಿ ಮಡಿಸಿ ತನ್ನನ್ನು ತಾನೇ ಅರಿಯದೆ ಹೋಯಿತು ; ಅನಂತರದಲ್ಲಿ ರೂಪಸಂಪನ್ನೆಯಾದ ಮತ್ತೊಂದು ಹೆಣ್ಣುಕುರಿಯೊಡನೆ ರಮಿಸುತಲಿರುವ ಆ ತಗರನ್ನು ನೋಡಿ ಹಳ್ಳದಲ್ಲಿದ್ದು ಬಂದ ಹೆಣ್ಣುಕುರಿಯು ಆ ತಗರಿನ ವ್ಯಾಪಾರವನ್ನು ಸಹಿಸದೆ ದುಷ್ಟವಾದ ಹೃದಯವುಳ್ಳದ್ದಾಗಿ ಮಿತ್ರಭಾವವನ್ನು ನಟಿಸುತಲಿರುವ ಅತ್ಯಂತ ಕಾಮುಕವಾದ ಅಸ್ಥಿರವಾದ ಪ್ರೇಮವುಳ್ಳ ಈ ತಗರನ್ನು ನಂಬದೆ ದುಃಖದಿಂದ ತನ್ನನ್ನು ಸಾಕುವ ಪುರುಷನ ಹತ್ತರಕ್ಕೆ ಹೋಯಿತು ; ಆಗ ಈ ತಗರು ದಿಗಿಲುಪಟ್ಟು ಆ ಹೆಣ್ಣುಕುರಿಯನ್ನು ಸಮಾಧಾನವನ್ನು ಮಾಡಲೋಸುಗ ಸಂಗಡಲೇ ಬಿಡ ಬಿಡ [illegible]ವನ್ನು ಮಾಡಿಕೊಂಡು ಹೋಗಿ ಒಡಂಬಡಿಸಲಾರದೆ ವ್ಯಸನಪಟ್ಟಿತು ; ಆಗ ಹೆಣ್ಣುಕುರಿಗೆ ಗೊತ್ತುಗಾರನಾದ ಒಬ್ಬ ಬ್ರಾಹ್ಮಣನು ಕೋಪದಿಂದ ಆ ತಗರಿನ ಜೋಲುತಲಿರುವ ವೃಷಣವನ್ನು ಛೇದಿಸಿ ಅನಂತರದಲ್ಲಿ ಆ ಹೆಣ್ಣುಕುರಿಯ ಮೇಲಣ ವ್ಯಾಮೋಹದಿಂದ ಆ ವೃಷಣವನ್ನು ಯಥಾಪ್ರಕಾರವಾಗಿ ಮಾಡಿದನು ; ಆಮೇಲೆ ತಗರು ತನ್ನ ವೃಷಣ ಘಟ್ಯಾದಮೇಲೆ ಕೂಪದಲ್ಲಿ ಸಿಕ್ಕಿದ ಹೆಣ್ಣುಕುರಿಯೊಡನೆ ಬಹುಕಾಲ ಪರ್ಯಂತವು ರಮಿಸಿ ಈಗಲೂ ತೃಪ್ತಿಯನ್ನೈದಲಿಲ್ಲ! ಎಲೈ ದೇವಯಾನೆಯೆ, ಅದೇರೀತಿಯಲ್ಲಿ ಕೃಪಣನಾಗಿ ಕೂಪದಲ್ಲಿ ಸಿಕ್ಕಿದ ನಿನ್ನಲ್ಲಿ ಪ್ರೇಮದಿಂದ ಕಟ್ಟಲ್ಪಟ್ಟು ನಿನ್ನ ಮಾಯೆಯಿಂದ ಮೋಹಿತನಾಗಿ ನನ್ನ ಸ್ವರೂಪವನ್ನರಿಯದೇ ಇದ್ದೇನೆ! ಎಲೈ ಪತ್ನಿಯೆ, ಭೂಮಿಯಲ್ಲಿ ಭತ್ತ

ಮುಂತಾದ ಧಾನ್ಯಗಳು ಸುವರ್ಣಾದಿಗಳು ಪಶ್ವಾದಿಗಳು ಸ್ತ್ರೀಯರುಗಳು ಎಷ್ಟುಂಟೋ ಅವೆಲ್ಲವೂ ಲಭಿಸಿದಾಗ್ಯೂ ಕಾಮಹತನಾದ ಒಬ್ಬ ಪುರುಷನ ಮನಸ್ಸಿಗೆ ತೃಪ್ತಿಯನ್ನು ಕೊಡಲಾರವು; ಕಾಮಭ್ರಾಂತಿಯು ವಿಷಯಭೋಗಂಗಳಿಂದ ಒಂದು ಕಾಲದಲ್ಲಿಯೂ ಶಾಂತಿಯನ್ನೈದುವುದಿಲ್ಲ; ಯಜ್ಞೇಶ್ವರನಿಗೆ ಆಜ್ಯಬಿಂದುಗಳಿಂದ ಹ್ಯಾಗೆ ತೃಪ್ತಿಯಾಗುವುದಿಲ್ಲವೋ ಹಾಗೆ ಮತ್ತೂ ಮತ್ತೂ ವೃದ್ಧಿಯನ್ನೈದುವುದು; ಪುರುಷನು ಯಾವಾಗ ಸರ್ವಭೂತಗಳಲ್ಲಿಯೂ ರಾಗದ್ವೇಷಾದಿ ವೈಷಮ್ಯವನ್ನು ಮಾಡದೆ ಸಮದೃಷ್ಟಿಯುಳ್ಳವನಾಗುತ್ತಾನೆಯೋ ಆಗ ಪುರುಷನಿಗೆ ಸರ್ವತ, ಸುಖವುಂಟು; ದುರ್ಬುದ್ಧಿಯುಳ್ಳ ಪುರುಷರು ಯಾವ ಆಶೆಯನ್ನು ಬಿಡಲಾರರೋ ದೇಹಜೀರ್ಣವಾದಾಗ್ಯೂ ಯಾವ ಆಶೆಯು ಜೀರ್ಣವಾಗುವುದಿಲ್ಲವೋ ಅಂಥಾ ದುಃಖಕರವಾದ ಆ ಆಶೆಯನ್ನು ಸುಖವನ್ನಪೇಕ್ಷಿಸುವ ಪುರುಷನು ಬೇಗ ಬಿಡಬೇಕು; ವಿವೇಕಿಯಾದ ಪುರುಷನು ತಾಯಿಯೊಡನೆಯಾಗಲಿ ತಂಗಿಯೊಡನೆಯಾಗಲಿ ಮಗಳೊಡನೆಯಾಗಲಿ ಏಕಾಂತದಲ್ಲಿ ವಾಸವನ್ನು ಮಾಡಬಾರದು; ಬಲಿಷ್ಠವಾದ ಇಂದ್ರಿಯಸಮೂಹವು ಪ್ರಾಜ್ಞನಾದ ಪುರುಷನನ್ನು ಕೂಡ ಆಕರ್ಷಣವನ್ನು ಮಾಡುವುದು; ವಿಷಯಭೋಗಂಗಳನ್ನು ಸೇವಿಸಿಕೊಂಡಿರುವ ನನಗೆ ವರ್ಷಸಹಸ್ರವು ಪೂರ್ಣವಾಯಿತು; ಆದಾಗ್ಯೂ ಪ್ರತಿದಿವಸಗಳಲ್ಲಿಯೂ ತತ್ತತ್ಕಾಲಂಗಳಲ್ಲಿಯೂ ಆಯಾಯ ವಿಷಯಂಗಳಲ್ಲಿ ಆಶೆ ಹುಟ್ಟುತಲಿದೆಯೇ ಹೊರ್ತು ಶಾಂತವಾಗುವುದಿಲ್ಲ; ಅದುಕಾರಣ ಈ ದುರಾಶೆಯನ್ನು ಬಿಟ್ಟು ನಾನು ಬ್ರಹ್ಮನಲ್ಲಿ ಚಿತ್ತವನ್ನು ನಿಲ್ಲಿಸಿ ಅಹಂಕಾರವನ್ನು ಬಿಟ್ಟು ಸುಖದುಃಖಗಳನ್ನು ಸಮವಾಗಿ ಭಾವಿಸಿ ವನದಲ್ಲಿ ಮೃಗಗಳಂತೆ ಸಂಚರಿಸುತ್ತೇನೆ; ಕಾಣಲ್ಪಟ್ಟ ಕೇಳಲ್ಪಟ್ಟ ವಸ್ತುಗಳನ್ನೆಲ್ಲವಂ ಅಸಾರಗಳನ್ನಾಗಿ ತಿಳಿದು ಅದನ್ನು ಧ್ಯಾನಿಸಬಾರದು; ಅದರಲ್ಲಿ ಅಭಿನಿವೇಶವನ್ನೂ ಮಾಡಬಾರದು; ಆತ್ಮನಲ್ಲಿ ಜ್ಞಾನವುಳ್ಳವನಾಗಿ ನಿಜಸ್ಮೃತಿಯನ್ನೈದಿ ಶರೀರನಾಶವನ್ನು ಭಾವಿಸಬೇಕು' ಎಂದು ನುಡಿದು ಯಯಾತಿರಾಯನು ಪೂರುರಾಯನ ಯೌವನವನ್ನು ಅವನಿಗೆ ಕೊಟ್ಟು ತನ್ನ ಜರೆಯನ್ನು ತೆಗೆದುಕೊಂಡು ನಿಸ್ಪೃಹನಾಗಿ ಆಗ್ನೇಯ ದಿಕ್ಕಿನಲ್ಲಿ ದೃಹ್ಯರಾಯನನ್ನಿರಿಸಿ ಯದುರಾಯನನ್ನು ದಕ್ಷಿಣದಿಕ್ಕಿನಲ್ಲಿರಿಸಿ ಪಶ್ಚಿಮ ದಿಕ್ಕಿನಲ್ಲಿ ತುರ್ವಸುರಾಯನನ್ನಿರಿಸಿ ಉತ್ತರದಿಕ್ಕಿನಲ್ಲಿ ಅನುರಾಯನನ್ನಿರಿಸಿ ಮಧ್ಯಮದಲ್ಲಿರುವ ಸಮಸ್ತ ಭೂಮಂಡಲಕ್ಕೂ ಪೂರುರಾಯನಂ ದೊರೆಯನ್ನಾಗಿ ಪಟ್ಟಾಭಿಷಿಕ್ತನಂ ಮಾಡಿ ಜ್ಯೇಷ್ಠರಾದ ನಾಲ್ಕುಮಂದಿಯನ್ನೂ ಪೂರುರಾಯನ ವಶವಂ ಮಾಡಿ ವನವನ್ನು ಕುರಿತು ತೆರಳಿದನು; ಆ ಯಯಾತಿರಾಯನು ಅನೇಕವರ್ಷ ಸಹಸ್ರಂಗಳಲ್ಲಿ ಅಭ್ಯಸ್ತವಾದ ಕಾಮಭೋಗಯುಕ್ತವಾದ ಅರಿಷಡ್ವರ್ಗವನ್ನು ರೆಕ್ಕೆಗಳು ಬಲಿತ ಮೇಲೆ ಪಕ್ಷಿಯು ಗೂಡನ್ನು ಬಿಡುವಂತೆ ಬಿಟ್ಟನು; ಆ ಯಯಾತಿರಾಯನು ಆ ವನದಲ್ಲಿ ಸರ್ವಸಂಗವನ್ನು ಪರಿತ್ಯಜಿಸಿ ಆತ್ಮಾನುಭವದಿಂದ ಪರಿಹರಿಸಲ್ಪಟ್ಟ ಗುಣತ್ರಯಮಯವಾದ ಅಜ್ಞಾನಗ್ರಂಥಿಯುಳ್ಳವನಾಗಿ ನಿರ್ಮಲನಾದ ಉತ್ಕೃಷ್ಟನಾದ ವಾಸುದೇವಾತ್ಮಕನಾದ ಪರಬ್ರಹ್ಮನಲ್ಲಿ ಐಕ್ಯವನ್ನೈದಿ ಪರಮಭಾಗವತರಿಗುಂಟಾಗುವ ಪರಮಗತಿಯನ್ನೈದಿದನು; ದೇವಯಾನೆಯು ಪತಿಯಿಂದ ಪೇಳಲ್ಪಟ್ಟ ಗಾಧೆಯನ್ನು ಕೇಳಿ ಸ್ತ್ರೀ ಪುರುಷರ ಸ್ನೇಹರೂಪವಾದ ತನ್ನ ವ್ಯಾಪಾರವನ್ನು ಸ್ಮರಿಸಿಕೊಂಡು ತನ್ನನ್ನು ಹೇಳನವನ್ನಾಗಿ ತಿಳಿದು ಆಮೇಲೆ ಬಂದು ಅರವಟ್ಟಿಗೆಯಲ್ಲಿ ಮಾರ್ಗವಶದಿಂದ ಬಂದು ಸೇರಿದ ಜನರನ್ನೂ ಪತಿಪುತ್ರಾದಿಗಳ ಸಂಗವನ್ನೂ ಸಮವಾಗಿ ತಿಳಿದು ಈಶ್ವರಾಧೀನರಾದ ಪ್ರಾಣಿಗಳಿಗೆ ಸ್ವಾತಂತ್ರ್ಯವಿಲ್ಲವೆಂದು ತಿಳಿದು ಸರ್ವ ವಿಷಯಗಳಲ್ಲಿಯೂ ಸ್ವಪ್ನಸಾಮ್ಯದಿಂದ ಅನಿತ್ಯಭಾವನೆಯನ್ನು ಮಾಡಿ ಆ ವಿಷಯಂಗಳನ್ನು ಬಿಟ್ಟು ಶ್ರೀಕೃಷ್ಣನಲ್ಲಿ ಮನಸ್ಸನ್ನು ನಿಲ್ಲಿಸಿ ಅಜ್ಞಾನವನ್ನು ಪರಿಹರಿಸಿಕೊಂಡಳು; ಅದು ಹ್ಯಾಗೆಂದರೆ; ಜಗತ್ಸೃಷ್ಟಿಕರ್ತೃವಾದ ಸರ್ವಭೂತ ಹೃದಯವಾಸಿಯಾದ ಶಾಂತನಾದ ಭಗವಂತನಾದ ಶ್ರೀ ವಾಸುದೇವನಾದ ಪರಬ್ರಹ್ಮನಾದ ನಿನಗೋಸ್ಕರ ನಮಸ್ಕಾರವು! ಎಂದು ಪರಮಾತ್ಮನನ್ನು ಭಜಿಸಿದಳು.''

೨೦ನೇ ಅಧ್ಯಾಯ.

ದುಷ್ಯಂತ ಪುತ್ರನಾದ ಭರತರಾಯನ ಚರಿತ್ರೆ.

“ಎಲೈ ಅರಸೆ, ಪೂರುರಾಯನ ವಂಶವನ್ನು ಹೇಳುತ್ತೇನೆ ಕೇಳು; ಆ ಪೂರುವಂಶದಲ್ಲೇ ನೀನು ಹುಟ್ಟಿದವನು; ಆ ಪೂರುವಂಶದಲ್ಲಿ ಹುಟ್ಟಿದ ರಾಯರು ಬ್ರಹ್ಮರ್ಷಿಗಳಾದರು; ಪೂರುರಾಯನ ಪುತ್ರನು ಜನಮೇಜಯನು; ಆತನಿಗೆ ಪ್ರಚಿನ್ವನು; ಆತನಿಗೆ ಪ್ರವಿರೋಧನು; ಅವನಿಗೆ ಚಾರುವು; ಅವನಿಗೆ ಸುದ್ಯುವೆಂಬ ಪುತ್ರನು; ಆತನಿಗೆ ಬಹುಗತನು; ಅವನಿಗೆ ಶರ್ಯಾತಿಯು; ಅವನಿಗೆ ಸಂಯಾತಿಯು; ಅವನಿಗೆ ರೌದ್ರಾಶ್ವನು; ಆತನಿಗೆ ಘೃತಾಚಿಯಲ್ಲಿ ಋತೇಪು ಕಕ್ಷೇಪು ಸ್ಥಲೇಪು ಕೃತೇಪು ಜಲೇಪು ಸಂನತೇಪು ಧರ್ಮೇಪು ಸತ್ಯೇಪು ವ್ರತೇಪು ವನೇಪು ಎಂಬ ಹತ್ತುಮಂದಿ ಪುತ್ರರು; ಘೃತಾಚೀನಾಮಕಳಾದ ಅಪ್ಸರಸ್ತ್ರೀಯಲ್ಲಿ ಜನಿಸಿದರು; ಪ್ರಾಣಕ್ಕೆ ದಶೇಂದ್ರಿಯಗಳಂತೆ ಪಿತೃವಶವರ್ತಿಗಳಾಗಿರುವರು; ಋತೇಪುವಿಗೆ ರಂತಿಸಾರನು ಪುತ್ರನು; ಅವನಿಗೆ ಸುಮತಿಯು ಧ್ರುವನು ಅಪ್ರತಿರಥನು ಎಂದು ಮೂರುಮಂದಿ ಪುತ್ರರು; ಅಪ್ರತಿರಥನಿಗೆ ಕಣ್ವನೆಂಬ ಪುತ್ರನು; ಆತನಿಗೆ ಮೇಧಾತಿಥಿಯು; ಆತನಿಗೆ ಪ್ರಸ್ಕಂದನೇ ಮೊದಲಾದ ಬ್ರಾಹ್ಮಣರು ಪುತ್ರರು; ಸುಮತಿಗೆ ರೈಭ್ಯನು ಪುತ್ರನು; ಆತನಿಗೆ ದುಷ್ಯಂತನು; ಆ ದುಷ್ಯಂತರಾಯನು ಬೇಟೆಗೆ ಹೋಗಿ ಕಣ್ವನ ಆಶ್ರಮಕ್ಕೆ ಹೋದನು; ಆ ಆಶ್ರಮದಲ್ಲಿ ಸಾಕ್ಷಾತ್ ಲಕ್ಷ್ಮಿಯಂತೆ ತನ್ನ ಕಾಂತಿಯಿಂದ ಆಶ್ರಮವನ್ನೆಲ್ಲಾ ಬೆಳಗುತ್ತಲಿರುವ ದೇವಮಾಯೆಯಂತೆ ಜಗನ್ಮೋಹನ ಸೌಂದರ್ಯವುಳ್ಳ ಆ ಸ್ತ್ರೀಯನ್ನು ನೋಡಿ ಮೋಹಿತನಾದನು; ಮಿತಜನಯುಕ್ತನಾದ ಆ ದುಷ್ಯಂತರಾಯನು ಆ ಸ್ತ್ರೀಯನ್ನು ಕಾಮಿಸಿ ಆಕೆಯನ್ನು ಕುರಿತು ‘ಎಲೈ ಕಮಲದಳದಂತೆ ನೇತ್ರವುಳ್ಳ ದಿವ್ಯವಾದ ಮಧ್ಯಭಾಗವುಳ್ಳ ಸ್ತ್ರೀಯೆ, ನೀನು ಯಾರು? ಯಾರ ಮಗಳು? ವಿಜನವಾದ ವನದಲ್ಲಿ ಏನುನಿಮಿತ್ತವಾಗಿದ್ದೀಯೆ? ವ್ಯಕ್ತವಾಗಿ ನಾನು ನಿನ್ನನ್ನು ರಾಜಪುತ್ರಿಯನ್ನಾಗಿ ತಿಳಿಯುತ್ತೇನೆ; ಪೂರುವಂಶೋದ್ಭವರಾದವರ ಚಿತ್ತವು ಅಧರ್ಮದಲ್ಲಿ ಪ್ರವರ್ತಿಸುವುದಿಲ್ಲವಾದುದರಿಂದ ನನ್ನ ಮನಸ್ಸು ನಿನ್ನಲ್ಲಿ ಲಗ್ನವಾದಕಾರಣ ನೀನು ರಾಜಕನ್ಯೆಯೇ ಸರಿಯೆಂದು ನುಡಿದನು. ಆ ಮಾತಂ ಕೇಳಿ ಶಕುಂತಳೆಯು ‘ಎಲೈ ಅರಸೆ, ನಾನು ವಿಶ್ವಾಮಿತ್ರಪುತ್ರಿಯು; ಮೇನಕಾ ಎಂಬ ಅಪ್ಸರಸ್ತ್ರೀಯು ನನ್ನಂ ಹೆತ್ತು ಇಲ್ಲೇ ಬಿಟ್ಟು ಸ್ವರ್ಗಕ್ಕೆ ಹೋದಳು; ಈ ಅರ್ಥವನ್ನು ಭಗವಂತನಾದ ಕಣ್ವಋಷಿಯು ಬಲ್ಲನು! ಎಲೈ ವೀರನಾದ ಅರಸೆ, ನಾನು ನಿನಗೆ ಯಾವ ಉಪಚಾರವನ್ನು ಮಾಡಲಿ! ಎಲೈ ಕಮಲಾಕ್ಷನಾದ ಪುರುಷನೆ, ಕುಳಿತುಕೊಳ್ಳಬಹುದು; ನಮ್ಮ ಆತಿಥ್ಯವನ್ನು ಗ್ರಹಿಸಬಹುದು; ನೀವಾರ ಧಾನ್ಯಗಳು ಇವೆ; ಭೋಜನವನ್ನು ಮಾಡಬಹುದು; ಚಿತ್ತದಲ್ಲಿ ಸಮ್ಮತವಿದ್ದರೆ ಇಲ್ಲಿ ವಾಸವನ್ನು ಮಾಡಬಹುದು’ ಎಂದು ನುಡಿದಳು. ಆ ವಾಕ್ಯವನ್ನು ಕೇಳಿ ಅರಸು ‘ಎಲೈ ಸುಂದರಗಳಾದ ಹುಬ್ಬುಗಳುಳ್ಳ ಸ್ತ್ರೀಯೆ, ಕುಶಿಕವಂಶದಲ್ಲಿ ಹುಟ್ಟಿದ ನಿನಗೆ ಈರೀತಿಯಲ್ಲಿ ಅತಿಥಿಗಳನ್ನು ಸತ್ಕರಿಸುವುದು ಯೋಗ್ಯವೇ ಸರಿ; ರಾಜಪುತ್ರಿಯರಾದವರು ತಮಗೆ ಅನುರೂಪನಾದ ವರನನ್ನು ವರಿಸೋಣವು ಯುಕ್ತವೇ ಸರಿ’ ಎಂದು ನುಡಿದನು. ಶಕುಂತಳೆಯು [illegible] ಆಗಲಿ ಎಂದು ಅಂಗೀಕರಿಸಿದಮೇಲೆ ಆ ಶಕುಂತಳೆಯನ್ನು ದುಷ್ಯಂತರಾಯನು ದೇಶಕಾಲ ವಿಧಾನವನ್ನು ತಿಳಿದಿರುವನಾದಕಾರಣ ಗಾಂಧರ್ವವಿಧಾನದಿಂದ ವಿವಾಹವನ್ನು ಮಾಡಿಕೊಂಡನು; ಅಮೋಘವೀರ್ಯನಾದ ಆ ರಾಜರ್ಷಿಯು ಆ ಶಕುಂತಳೆಯಲ್ಲಿ ವೀರ್ಯವನ್ನಿರಿಸಿ [illegible] ತನ್ನ ಊರಿಗೆ ಹೊರಟುಹೋದನು; ನವಮಾಸಾನಂತರದಲ್ಲಿ ಶಕುಂತಳೆಯು ಪುತ್ರನನ್ನು ಹೆತ್ತಳು: ಕಣ್ವಋಷಿಯು ಆ ಕುಮಾರನಿಗೆ ಜಾತಕರ್ಮಾದಿ ಕ್ರಿಯೆಗಳನ್ನು ಮಾಡಿದನು; ಆ ಬಾಲಕನು ಬಾಲ್ಯದಲ್ಲೇ ಸಿಂಹಗಳನ್ನು ಹಿಡಿದುಕೊಂಡುಬಂದು ಅವುಗಳನ್ನಾಡಿಸಿಕೊಂಡಿರುವನು; ಶಕುಂತಳೆಯು ಭಗವಂತನ ಅಂಶಾವತಾರನಾದ ಮಹಾಪರಾಕ್ರಮಿಯಹಾನ ಆ ಮಗನನ್ನು ಕರದುಕೊಂಡು ದುಷ್ಯಂತರಾಯನ ಸಮೀಪಕ್ಕೆ ಹೋದಳು; ಆಗ ದುಷ್ಯಂತರಾಯನು ನಿರ್ದೋಷಿಗಳಾದ ಪತ್ನೀಪುತ್ರರನ್ನು ನಾನರಿಯೆನೆಂದು ಪರಿಗ್ರಹಿಸದೇ ಹೋದನು; ಆಗ ಸರ್ವಭೂತಗಳರಿವಂತಾಗಿ ‘ಎಲೈ ಅರಸೆ, ಮಾತೃವು ಚರ್ಮದ ಚೀಲದಂತೆ ಆಧಾರಮಾತ್ರವು ಪಿತೃವಿಗೆ ಪುತ್ರನು; ಪಿತೃವಾದವನು

ತಾನೇ ಅಲ್ಲಿ ಜನಿಸುವನು ; ಅದುಕಾರಣ ನಿನ್ನ ಪುತ್ರನಾದ ಈ ಬಾಲಕನನ್ನು ಪೋಷಿಸು ; ಶಕುಂತಳೆಯನ್ನು ಅವಮಾನವನ್ನು ಮಾಡಬೇಡ ; ರೇತಸ್ಸೇಚನವನ್ನು ಮಾಡಿದವನೇ ಪಿತೃವು ; ಆದರಿಂದ ಪುಟ್ಟಿದ ಪುತ್ರನು ಪಿತೃವನ್ನು ಯಮಲೋಕದಿಂದ ಉತ್ತಾರಣವನ್ನು ಮಾಡಿಸುವನು ; ಈ ಶಕುಂತಳೆಯಲ್ಲಿ ಗರ್ಭಾದಾನವನ್ನು ಮಾಡಿದವನು ನೀನು ; ಶಕುಂತಳೆಯು ಸತ್ಯವನ್ನೇ ಹೇಳುತ್ತಾಳೆ ’ ಎಂದು ಅಶರೀರವಾಣಿಯಾಯಿತು. ಆ ವಾಕ್ಯವಂ ಕೇಳಿ ದುಷ್ಯಂತನು ಪತ್ನೀಪುತ್ರರನ್ನು ಪರಿಗ್ರಹಿಸಿ ಬಹುಕಾಲ ರಾಜ್ಯಾಧಿಪತ್ಯವನ್ನು ಮಾಡಿ ಕಾಲಾಧೀನವಾದಮೇಲೆ ಶಕುಂತಳಾ ಪುತ್ರನಾದ ಭರತರಾಯನು ಚಕ್ರವರ್ತಿಯಾಗಿ ಮಹಾಕೀರ್ತಿಯನ್ನೈದಿದ ಭಗವದಂಶಾವತಾರನಾದ ಆ ಭರತರಾಯನ ಮಹಿಮೆಯು ಗಾನಂಗೈಯಲ್ಪಡುತ್ತದೆ ; ಆ ಭರತರಾಯನ ದಕ್ಷಿಣಹಸ್ತದಲ್ಲಿ ಚಕ್ರರೇಖೆ ಇರುವುದು ; ಪಾದಗಳಲ್ಲಿ ಪದ್ಮರೇಖೆ ಇರುವುದು ; ಆ ಭರತರಾಯನು ಮಹಾಭಿಷೇಕದಿಂದ ಅಭಿಷಿಕ್ತನಾಗಿ ಯಾಗಗಳನ್ನು ಮಾಡಿದನು ; ದೀರ್ಘತಮ ಋಷಿಯನ್ನು ಪುರೋಹಿತನಂ ಮಾಡಿಕೊಂಡು ಗಂಗಾತೀರದಲ್ಲಿ ಐವತ್ತೈದು ಪವಿತ್ರಗಳಾದ ಅಶ್ವಂಗಳಿಂದ ಅಶ್ವಮೇಧಗಳನ್ನು ಮಾಡಿದನು ; ಯಮುನಾತೀರದಲ್ಲಿ ಇಪ್ಪತ್ತೆಂಟು ಅಶ್ವಮೇಧಂಗಳನ್ನು ಬಹುದ್ರವ್ಯವನ್ನು ಬ್ರಾಹ್ಮಣರಿಗೆ ಕೊಟ್ಟು ಉತ್ತಮವಾದ ಪರಿಶುದ್ಧಸ್ಥಾನದಲ್ಲಿ ಅಗ್ನಿಚಯನವನ್ನು ಮಾಡಿದನು ; ಆ ಭರತನ ಯಜ್ಞಂಗಳಲ್ಲಿ ಬ್ರಾಹ್ಮಣರು ಸಹಸ್ರಸಂಖ್ಯಾತಗಳಾದ ಬದ್ಧಂಗಳಿಂದ ಗೋವುಗಳನ್ನು ಹಂಚಿಕೊಂಡರು ; ಹದಿಮೂರು ಸಾವಿರದ ಎಂಭತ್ತುನಾಲ್ಕು ಗೋವುಗಳಿಗೆ ಒಂದು ಬದ್ಧವೆನಿಸುವುದು ; ಅಶ್ವಗಳನ್ನು ಇದೇಪ್ರಕಾರಕ್ಕೆ ಕೊಟ್ಟು ಕ್ಷತ್ರಿಯರನ್ನು ಆಶ್ಚರ್ಯಪಡಿಸಿ ದೇವತೆಗಳ ವಿಭವವನ್ನು ಅತಿಕ್ರಮಿಸಿ ಭಗವಂತನಾದ ಶ್ರೀಹರಿಯನ್ನು ಭಜಿಸಿದನು ; ಕೃಷ್ಣವರ್ಣಗಳಾದ ಶುಕ್ಲದಂತಗಳುಳ್ಳ ಹಿರಣ್ಯದಿಂದ ಅಲಂಕೃತಗಳಾದ ಗಜಗಳನ್ನು ನೂರುಏಳು ಬಂಧಂಗಳನ್ನು ಕ್ರತುವಿನಲ್ಲಿ ಕೊಟ್ಟನು ; ನೂರು ಏಳು ಬಂಧಂಗಳಿಂದ ಹದಿನಾಲ್ಕು ಲಕ್ಷಗಳಾಗುವವು ; ಬದ್ಧಸಂಖ್ಯೆಯು ಮೊದಲೇ ಹೇಳಲ್ಪಟ್ಟದೆ ; ಭರತರಾಯನ ಚರಿತ್ರವು ಪೂರ್ವದ ಅರಸುಗಳಿಂದಲೂ ಮಾಡಲ್ಪಡಲಿಲ್ಲ ; ಆಮೇಲೆ ಹುಟ್ಟಿದವರುಗಳಿಂದಲೂ ಮಾಡಲ್ಪಡಲಿಲ್ಲ ; ಈ ಭರತರಾಯನ ಪ್ರಭಾವವನ್ನು ಬಾಹುಬಲದಿಂದ ಸ್ವರ್ಗವನ್ನು ಹ್ಯಾಗೆ ಪಡೆಯಲಾರರೋ ಹಾಗೆ ಯಾರೂ ಪಡೆಯಲಾರರು ; ಈ ಭರತರಾಯನು ದಿಗ್ವಿಜಯಕಾಲದಲ್ಲಿ ಕಿರಾತರನ್ನು ಹೂಣರನ್ನು ಯವನರನ್ನು ಆಂಧ್ರರನ್ನು ಕಙ್ಕರನ್ನು ಖಷರನ್ನು ಶಕರನ್ನು ಬ್ರಹ್ಮದ್ರೋಹಿಗಳಾದ ಕ್ಷತ್ರಿಯರನ್ನು ಮ್ಲೇಚ್ಛರನ್ನು ಸಹಾ ಸಂಹರಿಸಿದನು ; ಪೂರ್ವದಲ್ಲಿ ಅಸುರರು ದೇವತೆಗಳನ್ನು ಜಯಿಸಿ ದೇವಸ್ತ್ರೀಯರುಗಳನ್ನು ಯಾರು ಪಾತಾಳಕ್ಕೆ ಅಪಹರಿಸಿಕೊಂಡು ಹೋಗಿದ್ದರೋ ಆ ಅಸುರರನ್ನು ಸಂಹರಿಸಿ ಆ ದೇವಸ್ತ್ರೀಯರುಗಳನ್ನು ಪುನಶ್ಚ ಕರದುಕೊಂಡುಬಂದನು ; ಆ ಭರತರಾಜ್ಯದಲ್ಲಿ ಭೂವ್ಯೋಮಾಂತರಿಕ್ಷಗಳು ಪ್ರಜೆಗಳಿಗೆ ಸರ್ವಾರ್ಥಗಳನ್ನಿತ್ತವು ; ಈ ರೀತಿಯಲ್ಲಿ ಇಪ್ಪತ್ತೇಳುಸಾವಿರ ವರ್ಷಗಳು ರಾಜ್ಯಾಧಿಪತ್ಯವನ್ನು ಮಾಡಿ ಚಕ್ರವರ್ತಿಯಾದ ಆ ಭರತರಾಯನು ಲೋಕಪಾಲಕರ ಐಶ್ವರ್ಯವನ್ನೂ ಸಾರ್ವಭೌಮ ಸಂಪತ್ತನ್ನೂ ರಾಜ್ಯವನ್ನೂ ಪತ್ನೀಯರನ್ನೂ ಪುತ್ರರನ್ನೂ ಪ್ರಾಣಗಳನ್ನೂ ಮಿಥ್ಯಾಭೂತಗಳೆಂದು ತಿಳಿದು ಉಪಶಾಂತ[illegible] ; ವಿದರ್ಭರಾಜನ ಪುತ್ರೀಯರಾದ ಮೂರುಮಂದಿಯು ಭರತರಾಯನ ಪತ್ನೀಯರು ; [illegible]ರಾಯನು ಆ ಪತ್ನೀಯರನ್ನು ಕುರಿತು ನಿಮ್ಮಲ್ಲಿ ಹುಟ್ಟಿದ ಪುತ್ರರು ನನಗೆ ಅನುರೂಪರಾಗುವುದಿಲ್ಲವೆಂದು ಪೇಳಲಾಗಿ ಆ ಪತ್ನೀಯರು ತಮ್ಮಲ್ಲಿ ವ್ಯಭಿಚಾರಶಂಕೆಯಿಂದ ಪತಿಯು ಪೇಳುತ್ತಾನೆಂದು ಶಂಕಿಸಿಕೊಂಡು ಆ ಪುತ್ರರನ್ನು ಸಂಹರಿಸಿಬಿಟ್ಟರು ; ಈರೀತಿ ವಂಶವು ವ್ಯರ್ಥವಾಗಲಾಗಿ ಆ ಭರತನು ಪುತ್ರಾರ್ಥವಾಗಿ ಸ್ತೋಮಯಾಗವನ್ನು ಮಾಡಲು ಆಗ ಪರಿತುಷ್ಟರಾದ ಮರುತ್ತುಗಳು ಭರದ್ವಾಜನನ್ನು ಭರತನಿಗೆ ಪುತ್ರನನ್ನಾಗಿ ಕೊಟ್ಟರು ; ಮರುತ್ತುಗಳಿಗೆ ಭರದ್ವಾಜಲಾಭವು ಹ್ಯಾಗೆ ಆಯಿತೆಂದರೆ : ‘ ಕೇಳೈ ಅರಸೆ, ಬೃಹಸ್ಪತಿಯು ಭ್ರಾತೃವಾದ ಉಚಥ್ಯಋಷಿಯ ಪತ್ನಿಯು ಗರ್ಭಿಣಿಯಾಗಿದ್ದ ಕಾಲದಲ್ಲಿ ಮೈಥುನಾರ್ಥವಾಗಿ ಆ ಭ್ರಾತೃಪತ್ನಿಯಲ್ಲಿ ಪ್ರವರ್ತಿಸಲಾಗಿ ಗರ್ಭದಲ್ಲಿದ್ದ ಶಿಶುವು ನಾನು ಇಲ್ಲಿರುವಾಗ ನೀನು ರೇತಸ್ಸೇಚನವನ್ನು ಹ್ಯಾಗೆ ಮಾಡುತ್ತೀಯೆ ಎಂದು ಕೂಗುತಿರಲಾಗಿ ಆ ಗರ್ಭಸ್ಥಶಿಶುವನ್ನು ಅಂಧನಾಗೆಂದು ಶಪಿಸಿ ಬಲಾತ್ಕಾರದಿಂದ ವೀರ್ಯವನ್ನು ಸೇಚಿಸಿದನು ; ಆ ಗರ್ಭಸ್ಥ ಶಿಶುವು ದೀರ್ಘತಮನೆಂಬ ನಾಮಧೇಯವುಳ್ಳ

ದ್ದಾಗಿ ಬೃಹಸ್ಪತಿಯು ವೀರ್ಯವನ್ನು ಕಾಲಿನಿಂದ ಒದ್ದು ಬಿಡಲಾಗಿ ಆ ವೀರ್ಯವು ಭೂಮಿಯಲ್ಲಿ ಬಿದ್ದು ಶಿಶುವಾ ಯಿತು; ಆಗ ಉಚಥ್ಯಪತ್ನಿಯಾದ ಆ ಮಮತಾದೇವಿಯು ತನ್ನ ಪತಿಯು ತನ್ನನ್ನು ತ್ಯಾಗವನ್ನು ಮಾಡ್ಯಾ ನೆಂಬ ಶಂಕೆಯಿಂದ ಆ ಶಿಶುವನ್ನು ತ್ಯಜಿಸಲಿಚ್ಛೈಸಲು ಬೃಹಸ್ಪತಿಯು 'ಎಲೈ ಮೂಢಳಾದ ಮಮತೆಯೆ, ನಮ್ಮಿ ಬ್ಬರಿಂದ ಪುಟ್ಟಿದ ಈ ಶಿಶುವನ್ನು ಪೋಷಿಸು' ಎಂದು ನುಡಿದನು. ಆ ವಾಕ್ಯವನ್ನು ಕೇಳಿ ಮಮತಾದೇವಿಯು ಬೃಹಸ್ಪತಿಗೆ ನಮ್ಮಿಬ್ಬರಿಂದ ಹುಟ್ಟಿದ ಈ ಕುಮಾರನನ್ನು ನೀನೇ ಪೋಷಿಸು' ಎಂದು ಹೇಳಿದಳು. ಈರೀತಿಯಲ್ಲಿ ಪರಸ್ಪರವಾಗಿ ವಿವಾದವನ್ನು ಮಾಡಿ ಈರ್ವರು ಶಿಶುವನ್ನು ಬಿಟ್ಟು ಹೋದರು; ಆದಕಾರಣ ಭರದ್ವಾಜನೆಂಬ ನಾಮ ಧೇಯ ಬಂತು; ದ್ವಿಜ ಅಂದರೆ ಇಬ್ಬರಿಂದ ಹುಟ್ಟಿದವನು; ಭರ ಅಂದರೆ ಪೋಷಿಸುವ ಅರ್ಥವು; ಆಗ ಶಬ್ದಗಳೆರ ಡು ಕೂಡಿದ ಕಾರಣ ಭರದ್ವಾಜನೆಂಬ ಹೆಸರು ಬಂತು; ಆಗ ಮರುತ್ತುಗಳು ಈ ಶಿಶುವನ್ನು ಪೋಷಿಸಿದರು; ಆ ಕುಮಾರನನ್ನು ಭರತರಾಯನ ವಂಶವು ವ್ಯರ್ಥವಾದ ಕಾಲದಲ್ಲಿ ಭರತನ ವಂಶಕ್ಕೆ ದತ್ತನನ್ನಾಗಿ ಕೊಟ್ಟರು."

೨೧ ನೇ ಅಧ್ಯಾಯ.

ರಂತಿದೇವನ ಚರಿತ್ರೆಯು.

"ಎಲೈ ಅರಸೆ, ಭರದ್ವಾಜನು ವಿತಥನೆಂಬ ಸಂಜ್ಞೆಯುಳ್ಳವನಾಗಿ ಭರತರಾಯನಿಗೆ ದತ್ತಪುತ್ರನೂ ಆದನು; ಆತನು ಬ್ರಾಹ್ಮಣನಾದಾಗ್ಯೂ ಕ್ಷತ್ರಿಯವಂಶ ಪ್ರವರ್ತಕನಾದನು; ವಿತಥನಾಮಕನಾದ ಭರದ್ವಾಜನಿಗೆ ಮನ್ಯುವೆಂ ಬ ಪುತ್ರನು; ಮನ್ಯುವಿಗೆ ಬೃಹತ್ಕ್ಷತ್ರನು ಜಯನು ಮಹಾವೀರ್ಯನು ನರನು ಗರ್ಗನು ಎಂದು ಐದುಮಂದಿ ಪು ತ್ರರು; ನರರಾಯನಿಗೆ ಸಂಕೃತಿಯೆಂಬ ಪುತ್ರನು; ಅವನಿಗೆ ಗುರುವು ರಂತಿದೇವನು ಎಂದು ಈರ್ವರು ಪುತ್ರರು! ಎಲೈ ಅರಸೆ, ರಂತಿದೇವನ ಯಶಸ್ಸು ಇಹಪರಲೋಕದಲ್ಲಿ ಗಾನಮಾಡಲ್ಪಡುತ್ತದೆ; ರಂತಿದೇವನು ತಾನು ಕ್ಷುತ್ತಿ ನಿಂದಲೂ ತೃಷ್ಣೆಯಿಂದಲೂ ಪೀಡಿತನಾದಾಗ್ಯೂ ದೈವವಶದಿಂದ ಬಂದ ಅನ್ನಾದಿಗಳನ್ನು ಅತಿಥಿಗಳಿಗೆ ಕೊಟ್ಟು ತಾ ನು ಸುಮ್ಮನೇ ಇರುವನು; ಅತಿ ದರಿದ್ರನಾಗಿ ಧೈರ್ಯಶಾಲಿಯಾಗಿ ಕುಟುಂಬ ಸಮೇತನಾಗಿರುವ ರಂತಿದೇವನಿಗೆ ನಲ್ವ ತ್ತೆಂಟು ದಿವಸಗಳು ಕಳೆದವು; ಆದಾಗ್ಯೂ ಜಲಪಾನವನ್ನೂ ಮಾಡದೆ ಇದ್ದನು; ನಲ್ವತ್ತೊಂಭತ್ತನೇ ದಿವಸದಲ್ಲಿ ಘೃತ ವು ಪಾಯಸವು ಯವಾನ್ನವು ಉದಕವು ನಾಲ್ಕು ಪದಾರ್ಥಗಳು ದೈವಪ್ರೇರಿತವಾಗಿ ಬಂದವು; ಕ್ಷುತ್ತೃಷ್ಣೆಗಳಿಂದ ಮಹಾ ಕಷ್ಟವನ್ನೈದಿರುವ ಸಕುಟುಂಬನಾದ ರಂತಿದೇವನು ಆ ಪದಾರ್ಥಗಳನ್ನು ಪತ್ನೀ ಪುತ್ರರಿಗೂ ವಿಭಾಗವ ನ್ನು ಮಾಡಿ ಭೋಜನವನ್ನು ಮಾಡುವುದಕ್ಕೆ ಯತ್ನವನ್ನು ಮಾಡುವ ಕಾಲದಲ್ಲಿ ಒಬ್ಬ ಬ್ರಾಹ್ಮಣನು ಅತಿಥಿಯಾಗಿ ಬಂದು ಅನ್ನವನ್ನು ಯಾಚಿಸಲಾಗಿ ಆ ಬ್ರಾಹ್ಮಣನಿಗೆ ಭಕ್ತಿಪೂರ್ವಕವಾಗಿ ಆದರದಿಂದ ಅನ್ನವನ್ನು ಕೊಟ್ಟನು; ಆ ಬ್ರಾಹ್ಮಣನು ಭೋಜನವನ್ನು ಮಾಡಿ ಹೊರಟುಹೋದಮೇಲೆ ಆ ಶೇಷವನ್ನು ಪುನಹ ವಿಭಾಗಿಸಿಕೊಂಡು ಭೋ ಜನವನ್ನು ಮಾಡಬೇಕೆಂದಿರುವ ಸಮಯದಲ್ಲಿ ಮತ್ತೊಬ್ಬ ಶೂದ್ರನು ಅತಿಥಿಯಾಗಿ ಅನ್ನವನ್ನು ಯಾಚಿಸಲಾಗಿ ರಂತಿದೇವನು ಹರಿಯನ್ನು ಸ್ಮರಿಸಿಕೊಂಡು ಅವನಿಗೆ ಅನ್ನವನ್ನು ಕೊಡಲಾಗಿ ಆ ಅನ್ನವನ್ನು ಭೋಜನ ಮಾಡಿ ಕೊಂಡು ಆ ಶೂದ್ರನು ಹೊರಟುಹೋದನು; ಒಬ್ಬ ಕಿರಾತನು ನಾಯಿಗಳನ್ನು [illegible] 'ಎಲೈ ಅರ ಸೆ, ನಾನು ನನ್ನ ನಾಯಿಗಳೂ ಸಹ ಕ್ಷುತ್ತಿನಿಂದ ಪೀಡಿತರಾಗಿದ್ದೇವೆ; ನಮಗೆ ಅನ್ನವನ್ನು ಕೊಡು' ಎಂದು ಯಾಚಿ ಸಲಾಗಿ ಶೇಷವಾದ ಅನ್ನವನ್ನು ಕಿರಾತನಿಗೂ ನಾಯಿಗಳಿಗೂ ಕೊಟ್ಟು ಭಗವಂತನ ಧ್ಯಾನವನ್ನು ಮಾಡಿಕೊಂಡು ಆ ನಾಯಿಗಳಿಗೂ ಆ ಕಿರಾತನಿಗೂ ಸಹ ನಮಸ್ಕರಿಸಿದನು; ಆ ಒಬ್ಬನಿಗೆ ತೃಪ್ತಿಕರವಾದ ಉದಕಮಾತ್ರವೇ ಉಳಿ ದಿತ್ತು; ಆ ಉದಕವನ್ನು ಹಂಚಿಕೊಂಡು ಪಾನಂಗೈಯಲೋಸುಗ ಯತ್ನವನ್ನು ಮಾಡಲಾಗಿ ಒಬ್ಬ ಪುಲ್ಕಸನು ಬಂದು ಅರಸೇ ನನಗೆ ಉದಕವನ್ನು ಕೊಡು; ನನಗೆ ಬಹುಶ್ರಮವಾಗಿದೆಯೆಂದು ಯಾಚಿಸಿದನು; ಆ ಮಾತನ್ನು ಕೇಳಿ ರಂತಿದೇವರಾಯನು ದಯದಿಂದ ಪೀಡಿತನಾಗಿ ಈ ಮಾತನ್ನು ಹೇಳಿದನು; ನಾನು ಈಶ್ವರನನ್ನೇ ಗತಿಯನ್ನಾಗಿ

ಅಪೇಕ್ಷಿಸುತ್ತೇನೆ; ಅನ್ಯವಾದ ಅಣಿಮಾದ್ಯಷ್ಟೈಶ್ವರ್ಯಯುಕ್ತವಾದ ಸಂಪತ್ತನ್ನೂ ನಾನು ಅಪೇಕ್ಷಿಸುವುದಿಲ್ಲ; ಮೋಕ್ಷವನ್ನೂ ಅಪೇಕ್ಷಿಸುವುದಿಲ್ಲ; ಸಕಲ ಪ್ರಾಣಿಗಳಲ್ಲಿರುವ ಕಷ್ಟವನ್ನು ನಾನು ಅಪೇಕ್ಷಿಸುತ್ತೇನೆ; ಸರ್ವ ಪ್ರಾಣಿಗಳೂ ಸುಖದಿಂದಿರಲಿ; ಅವರ ಕಷ್ಟಗಳು ನನಿಗೆ ಬರಲಿ; ಸರ್ವಪ್ರಾಣಿಗಳಲ್ಲಿಯೂ ಶ್ರೀಹರಿಯೇ ಇಧಾನೆಯಾದುದರಿಂದ ಅವರೆಲ್ಲರೂ ಸುಖವಾಗಿರಲೆಂದು ಅಪೇಕ್ಷಿಸುತ್ತೇನೆ; ದೀನನಾಗಿ ಜೀವಿಸಲಿಚ್ಛಿಯುಳ್ಳ ಈ ಅತಿಥಿಗೆ ಜೀವನಪ್ರದವಾದ ಉದಕವನ್ನು ಕೊಡುವುದರಿಂದ ನನ್ನ ಕ್ಷುತ್ತೃಷ್ಣೆಯು ಶ್ರಾಂತಿಯು ಶರೀರದ ಬಳಲಿಕೆ ದೈನ್ಯವೂ ಸಂಕಟವೂ ಶೋಕವೂ ವಿಷಾದವೂ ಮೋಹವೂ ಇವೆಲ್ಲವೂ ಹೋದವೆಂದು ನುಡಿದನು; ರಂತಿದೇವರಾಯನು ತಾನು ಬಾಯಾರಿಕೆಯಿಂದ ಮರಣಾವಸ್ಥೆಯನ್ನು ಪಡೆದಿದ್ದಾಗ್ಯೂ ಸ್ವಭಾವದಿಂದಲೇ ದಯಾಶಾಲಿಯಾದಕಾರಣ ಪುಲ್ಕಸನಿಗೆ ಉದಕವನ್ನೆಲ್ಲವನ್ನೂ ಕೊಟ್ಟನು; ಆ ಬ್ರಹ್ಮಾದಿ ಲೋಕಾಧಿಪತಿಗಳು ಭಗವದ್ಮಾಯಾದಕಾರಣ ಸರ್ವರೂ ಆ ರಂತಿದೇವನಿಗೆ ಫಲಪ್ರದರಾಗಿ ಪ್ರತ್ಯಕ್ಷರಾದರು; ನಿಸ್ಸಂಗನಾದ ನಿಸ್ಪೃಹನಾದ ಆ ರಂತಿದೇವರಾಯನು ಆ ದೇವತೆಗಳಿಗೆ ನಮಸ್ಕರಿಸಿ ಭಗವಂತನಾದ ವಾಸುದೇವನಲ್ಲಿ ಮನಸ್ಸನ್ನು ಮಾಡಿದನು; ಅವರನ್ನು ಕುರಿತು ವರವನ್ನು ಯಾಚಿಸಲಿಲ್ಲ; ಈಶ್ವರವ್ಯತಿರಿಕ್ತವಾದ ಫಲವನ್ನಪೇಕ್ಷಿಸದಿರುವ ಭಗವಂತನಲ್ಲೇ ಅರ್ಪಿಸಲ್ಪಟ್ಟ ಚಿತ್ತವುಳ್ಳ ಆ ರಂತಿದೇವನಿಗೆ ಮಾಯಾಜನ್ಯವಾದ ಅಜ್ಞಾನಮೋಹವು ಸ್ವಪ್ನದಂತೆ ವಿಲಯವನ್ನೈದಿತು; ಆ ರಂತಿದೇವನನ್ನನುಸರಿಸಿಕೊಂಡಿದ್ದವರೆಲ್ಲರೂ ಆ ಮಹಾಪುರುಷನ ಸಹವಾಸದಿಂದ ನಾರಾಯಣ ಪರಾಯಣರಾಗಿ ಯೋಗಿಗಳಾದರು! ಎಲೈ ಅರಸೆ, ಮನ್ಯುಪುತ್ರನಾದ ಗರ್ಗನ ವಂಶವನ್ನು ಹೇಳುತ್ತೇನೆ; ಗರ್ಗನಿಗೆ ಶಿನಿಯೇ ಪುತ್ರನು; ಅವನಿಗೆ ಗಾರ್ಗ್ಯನು; ಕ್ಷತ್ರವೇ ಬ್ರಹ್ಮರೂಪವಾಯಿತು; ಮನ್ಯು ಪುತ್ರನಾದ ಮಹಾವೀರ್ಯನಿಗೆ ಉರುಕ್ಷಯನೆಂಬ ಪುತ್ರನು; ಅವನಿಗೆ ತ್ರಯ್ಯಾರುಣಿಯು ಕವಿಯು ಪುಷ್ಕರಾರುಣಿಯೆಂಬ ಮೂರುಮಂದಿ ಪುತ್ರರು; ಮನ್ಯುಪುತ್ರರಾದ ಐದುಮಂದಿಯಲ್ಲಿ ಜ್ಯೇಷ್ಠಪುತ್ರನ ವಂಶವನ್ನು ಹೇಳುತ್ತೇನೆ; ಮನ್ಯುವಿನ ಜ್ಯೇಷ್ಠಪುತ್ರನಾದ ಬೃಹತ್ಕ್ಷತ್ರನಿಗೆ ಸುಹೋತ್ರನು; ಆತನಿಗೆ ಹಸ್ತಿಯು; ಆ ಹಸ್ತಿಯಿಂದ ನಿರ್ಮಿತವಾದದ್ದು ಹಸ್ತಿನಾಪುರವು; ಅಜಮೀಢನು ದ್ವಿಮೀಢನು ಪುರುಮೀಢನು ಎಂದು ಮೂವರು ಹಸ್ತಿಪುತ್ರರು; ಅಜಮೀಢನ ವಂಶದಲ್ಲಿ ಹುಟ್ಟಿದ ಪ್ರಿಯಮೇಧಸ್ಸು ಮೊದಲಾದವರು ಬ್ರಾಹ್ಮಣರು; ಅಜಮೀಢನಿಗೆ ಬೃಹದಿಷುಯೆಂಬ ಪುತ್ರನು; ಅವನಿಗೆ ಬೃಹದ್ರಥನು; ಅವನಿಗೆ ಬೃಹತ್ಕಾಯನು; ಅವನಿಗೆ ಜಯದ್ರಥನು; ಅವನಿಗೆ ವಿಶ್ವಜಿತ್ತು; ಅವನಿಗೆ ಸೇನಜಿತ್ತು; ಆ ಸೇನಜಿತ್ತುವಿಗೆ ರುಚಿರಾಶ್ವನು ದೃಢಹನು ಕಾಶ್ಯನು ವತ್ಸನು ಎಂದು ನಾಲ್ವರು ಪುತ್ರರು; ರುಚಿರಾಶ್ವನಿಗೆ ಪೃಥುಸೇನನು; ಅವನಿಗೆ ಪಾರನು; ಪಾರನಿಗೆ ನೀಪನು; ನೀಪನಿಗೆ ನೂರುಮಂದಿ ಪುತ್ರರು; ಆ ನೀಪನು ಶುಕಪುತ್ರಿಯಾದ ಸತ್ಕೃತೀದೇವಿಯಲ್ಲಿ ಬ್ರಹ್ಮದತ್ತನನ್ನು ಪುಟ್ಟಿಸಿದನು; ಯೋಗಿಯಾದ ಬ್ರಹ್ಮದತ್ತನು ಪತ್ನಿಯಾದ ಸರಸ್ವತಿಯಲ್ಲಿ ವಿಷ್ವಕ್ಸೇನನನ್ನು ಪುಟ್ಟಿಸಿದನು; ಆ ವಿಷ್ವಕ್ಸೇನನು ಜೈಗೀಷವ್ಯನ ಉಪದೇಶದಿಂದ ಯೋಗಶಾಸ್ತ್ರವನ್ನು ಮಾಡಿದನು; ಅವನಿಗೆ ಉದಕ್ಸೇನನು; ಅವನಿಗೆ ಭಲ್ಲಾಟನು; ಈ ಅರಸುಗಳು ಬೃಹದಿಷುವಿನ ವಂಶಸ್ಥರು; ಹಸ್ತಿಪುತ್ರನಾದ ದ್ವಿಮೀಢನಿಗೆ ಯನೀನರನು; ಅವನಿಗೆ ಕೃತಿಮಂತನು; ಅವನಿಗೆ ಸತ್ಯಧೃತಿಯು; ಅವನಿಗೆ ದೃಢನೇಮಿಯು; ಅವನಿಗೆ ಸುಪಾರ್ಶ್ವನು; ಅವನಿಗೆ ಸುಮತಿಯು; ಅವನಿಗೆ ಸನ್ನತಿಮಂತನು; ಅವನಿಗೆ ಕೃತಿಯು; ಕೃತಿರಾಯನು ಹಿರಣ್ಯನಾಭನಿಂದ ಯೋಗಶಾಸ್ತ್ರವನ್ನೈದಿ ಸಾಮ [illegible] ಸಂಹಿತೆಗಳನ್ನು ಅಧ್ಯಾಪನವನ್ನು ಮಾಡಿದನು; ಕೃತಿರಾಯನಿಗೆ ಉಗ್ರಾಯುಧನು; ಅವನಿಗೆ ಕ್ಷೇಮ್ಯನು; ಅವನಿಗೆ ಸುವೀರನು; ಅವನಿಗೆ ಪುರಂಜಯನು; ಅವನಿಗೆ ಬಹುರಥನು; ಪುರುಮೀಢನು ಅಪುತ್ರನು; ಅಜಮೀಢನಿಗೆ ನಳಿನೀದೇವಿಯಲ್ಲಿ ನೀಲನು; ಅವನಿಗೆ ಶಾಂತಿಯು; ಅವನಿಗೆ ಸುಶಾಂತಿಯು; ಅವನಿಗೆ ಪುರುಜನು; ಅವನಿಗೆ ಅರ್ಕನು; ಅವನಿಗೆ ಭರ್ಮ್ಯಾಶ್ವನು; ಅವನಿಗೆ ಮುದ್ಗಲ ಮುಂತಾದ ಐದುಮಂದಿ ಪುತ್ರರು; ಮುದ್ಗಲನು ಯವೀನರನು ಬೃಹದಿಷುವು ಕಾಂಪಿಲ್ಯನು ಸೃಂಜಯನು ಎಂದು ಐದುಜನರು; ಹರ್ಯಶ್ವನು ತನ್ನ ಪುತ್ರರಾದ ಐದುಮಂದಿಯು ಐದು ದೇಶಗಳಿಗೆ ಸಮರ್ಥರೆಂದು ಹೇಳಲಾಗಿ ಅವರು ಪಾಂಚಾಲರು ಎಂಬದಾಗಿ ಹೆಸರುಳ್ಳವರಾದರು; ಮುದ್ಗಲನ ದೆಸೆಯಿಂದ ಬ್ರಾಹ್ಮಣವಂಶವುಂಟಾಯಿತು; ಅದೇ ಮೌದ್ಗಲ್ಯಗೋತ್ರ,

ವೆಂದು ಪ್ರಸಿದ್ಧವಾಯಿತು; ಆ ಮುದ್ಗಲನಿಗೆ ಅವಳಿಮಕ್ಕಳುಂಟಾದವರು; ಅವರಲ್ಲಿ ದಿವೋದಾಸನು ಪುರುಷನು; ಅಹಲ್ಯೆಯು ಕನ್ಯೆಯು; ಆ ಅಹಲ್ಯೆಯು ಗೌತಮಪತ್ನಿಯಾಗಿ ಶತಾನಂದ ಋಷಿಯನ್ನು ಪೆತ್ತಳು; ದಿವೋದಾಸನಿಗೆ ಧನುರ್ವೇದಪಾರಗನಾದ ಸತ್ಯಧೃತಿಯೆಂಬ ಪುತ್ರನು; ಆತನಿಗೆ ಶರದ್ವಂತನೆಂಬ ಪುತ್ರನು; ಆ ಶರದ್ವಂತನು ಊರ್ವಶಿಯನ್ನು ನೋಡಿ ಭ್ರಾಂತಿಪಟ್ಟನು; ಆಗ ಆತನ ರೇತಸ್ಸು ದರ್ಭೆಗಳ ವನದಲ್ಲಿ ಬಿತ್ತು; ಅದರಲ್ಲಿ ಒಬ್ಬ ಸ್ತ್ರೀಯೂ ಒಬ್ಬ ಪುರುಷನೂ ಹುಟ್ಟಿದರು; ಬೇಟೆಗೆ ಹೋಗಿದ್ದ ಶಂತನುರಾಯನು ಆ ಬಾಲಕದ್ವಯವನ್ನು ನೋಡಿ ಕೃಪೆಯಿಂದ ಕೊಂಡುಕೊಂಡು ಬಂದು ಪೋಷಿಸಿದನು; ಆ ಪುರುಷನೇ ಕೃಪಾಚಾರ್ಯನು; ಸ್ತ್ರೀಯೇ ಕೃಪೆಯು ಎಂಬ ಹೆಸರುಳ್ಳವಳು; ದ್ರೋಣಾಚಾರ್ಯನಿಗೆ ಪತ್ನಿಯಾದಳು."

೨೨ನೇ ಅಧ್ಯಾಯ.

ದಿವೋದಾಸನ ಚರಿತ್ರೆ.

ಎಲೈ ಅರಸೆ, ದಿವೋದಾಸನಿಗೆ ಮಿತ್ರಾಯುವು ಎಂಬ ಪುತ್ರನು; ಅವನಿಗೆ ಚ್ಯವನನು; ಅವನಿಗೆ ಸುದಾಸನು; ಅವನಿಗೆ ಸಹದೇವನು; ಆತನಿಗೆ ಸೋಮಕನು; ಸೋಮಕನಿಗೆ ಪುತ್ರಶತವುಂಟಾಯಿತು; ಅವರಲ್ಲಿ ಜ್ಯೇಷ್ಠನೇ ಜಂತುವು; ಕನಿಷ್ಠನೇ ಪೃಷತನು; ಅವನಿಗೆ ದ್ರುಪದನು; ಆತನಿಗೆ ದ್ರೌಪದಿಯೆಂಬ ಪುತ್ರಿಯು; ಧೃಷ್ಟದ್ಯುಮ್ನನು ಮೊದಲಾದವರು ಪುತ್ರರು; ಧೃಷ್ಟದ್ಯುಮ್ನನಿಗೆ ಧೃಷ್ಟಕೇತುವು; ಇವರು ಪಾಂಚಾಲರೆನಿಸುವರು; ಅಜಮೀಢನಿಗೆ ಋಕ್ಷನೆಂಬುವನು ಪುತ್ರನು; ಆ ಋಕ್ಷನಿಗೆ ಸಂವರಣನು; ಸಂವರಣನಿಗೆ ಸೂರ್ಯಪುತ್ರಿಯಾದ ತಪತೀದೇವಿಯಲ್ಲಿ ಕುರುಕ್ಷೇತ್ರಪತಿಯಾದ ಕುರುರಾಯನು ಜನಿಸಿದನು; ಆ ಕುರುರಾಯನಿಗೆ ಪರೀಕ್ಷಿತ್ತು ಸುಧನು ಜಹ್ನುವು ನಿಷಧನೆಂಬ ನಾಲ್ವರು ಪುತ್ರರು; ಸುಧನುವಿಗೆ ಸುಹೋತ್ರನು; ಅವನಿಗೆ ಚ್ಯವನನು; ಅವನಿಗೆ ಕೃತಿಯು; ಕೃತಿರಾಯನಿಗೆ ಉಪರಿಚರವಸುವು; ಆ ವಸುವಿಗೆ ಬೃಹದ್ರಥ ಮೊದಲಾದ ಪುತ್ರರು; ಕುಸುಂಭನು ಮತ್ಸ್ಯನು ಪ್ರತ್ಯಗ್ರನು ಇವರೇ ಮುಂತಾದವರು ಚೇದಿದೇಶಪತಿಗಳು; ಬೃಹದ್ರಥನಿಗೆ ಕುಶಾಗ್ರನು; ಅವನಿಗೆ ವೃಷಭನು; ಅವನಿಗೆ ಸತ್ಯಹಿತನು; ಅವನಿಗೆ ಪುಷ್ಪವಂತನು; ಬೃಹದ್ರಥನಿಗೆ ಮತ್ತೊಬ್ಬ ಪತ್ನಿಯಲ್ಲಿ ಎರಡು ಭಾಗಗಳು ಹುಟ್ಟಿದವು; ಮಾತೃವಾದ ಅವಳು ಆ ಭಾಗಗಳನ್ನು ಆಚೆಗೆ ಪರಿಹರಿಸಿದಳು; ಜರಾಯೆಂಬ ರಾಕ್ಷಸಿಯು ಆ ಎರಡುಭಾಗಗಳನ್ನು ಕೂಡಿಸಿ 'ಎಲೈ ಶಿಶುವೇ, ಜೀವಿಸು! ಜೀವಿಸು!' ಎಂದು ಆ ರಾಕ್ಷಸಿ ಆಟವಾಡಿದಳು; ಅವನೇ ಜರಾಸಂಧನು; ಆ ಜರಾಸಂಧನಿಗೆ ಸಹದೇವನು; ಅವನಿಗೆ ಸೋಮಾಪಿಯು; ಅವನಿಗೆ ಶ್ರುತಶ್ರವಸ್ಸು; ಪರೀಕ್ಷಿತ್ತು ಅಪುತ್ರನಾದನು; ಜಹ್ನುಪುತ್ರನು ಸುರಥನು; ಅವನಿಗೆ ವಿಡೂರಥನು; ಅವನಿಗೆ ಸಾರ್ವಭೌಮನು; ಅವನಿಗೆ ಜ[illegible] ಅವನಿಗೆ ರಥಿಕನು; ಅವನಿಗೆ ಅಯುತಾಯುವು; ಅವನಿಗೆ ಅಕ್ರೋಧನನು; ಅವನಿಗೆ ದೇವಾತಿಥಿಯು; ಅ[illegible]ಕ್ಷನು; ಅವನಿಗೆ ಭೀಮಸೇನನು; ಅವನಿಗೆ ಪ್ರತೀಪನು; ಪ್ರತೀಪನಿಗೆ ದೇವಾಪಿಯು ಶಂತನುವು ಬಾಹ್ಲೀಕನು ಎಂಬದಾಗಿ ಮೂವರು ಪುತ್ರರು; ದೇ[illegible]ಪಿಯೆಂಬುವನು ಪಿತ್ರರಾಜ್ಯವನ್ನು ತ್ಯಜಿಸಿ ವನಕ್ಕೆ ಹೋದನು; ಶಂತನುರಾಯನು ರಾಜ್ಯಾಧಿಪತಿಯಾದನು; ಆ ಶಂತನುವು ಪ್ರಾ[illegible] ಜನ್ಮದಲ್ಲಿ ಮಹಾಭಿಷಗ್ರಾಜನೆಂದು ಪ್ರಸಿದ್ಧನು; ಆ ಶಂತನುವು ವೃದ್ಧನನ್ನು ಹಸ್ತದಿಂದ ಸ್ಪರ್ಶವನ್ನು ಮಾಡಿದರೆ ಅವನು ಯೌವನವಂತನಾಗುವನು; ಆ ಪುರುಷನು ಉಪಶಾಂತನಾಗುವನು; ಅದರಿಂದ ಶಂತನುವೆಂದು ಹೇಳಲ್ಪಟ್ಟನು; ಆ ಶಂತನುವಿನ ರಾಜ್ಯದಲ್ಲಿ ಹನ್ನೆರಡುವರ್ಷ ಅನಾವೃಷ್ಟಿಯುಂಟಾಯಿತು; ಆಗ ಬ್ರಾಹ್ಮಣರನ್ನು ಕೇಳಲಾಗಿ ಅವರು 'ಎಲೈ ಶಂತನುರಾಯನೆ, ನೀನು ಜ್ಯೇಷ್ಠನನ್ನು ಬಿಟ್ಟು ರಾಜ್ಯವನ್ನಾಳುತ್ತೀಯೆ; ಅದುಕಾರಣ ನೀನು ಪರಿವೇತ್ತನು; ನಿನಗೆ ಪರಿವೇತ್ತ ದೋಷ ಬಂದಿದೆ; ರಾಜ್ಯವನ್ನು ಜ್ಯೇಷ್ಠನಿಗೆ ಕೊಟ್ಟರೆ ವೃಷ್ಟಿಯಾಗುತ್ತೆ;' ಎಂಬ ಬ್ರಾಹ್ಮಣರ ವಚನವನ್ನು ಕೇಳಿ ಶಂತನುರಾಯನು ವನಕ್ಕೆ ಹೋಗಿ ಅಣ್ಣನನ್ನು ರಾಜ್ಯಪಾಲನಾರ್ಥವಾಗಿ ಒಡಂಬಡಿಸಿದನು; ಅದಕ್ಕೆ

ತಲೂ ಮೊದಲೇ ಶಂತನುರಾಯನ ಮಂತ್ರಿಯಾದ ಅಶ್ಮರಾತನು ಕಳುಹಿಸಲ್ಪಟ್ಟ ಬ್ರಾಹ್ಮಣರು ದೇವಾಪಿಗೆ ವೇದವಿರುದ್ಧವಾದ ಪಾಷಂಡಮತ ಪ್ರವೇಶವನ್ನು ಮಾಡಿಸಿ ಅವನನ್ನು ಪತಿತನನ್ನು ಮಾಡಿದರು ; ಆದಕಾರಣ ದೇವಾಪಿಯು ರಾಜ್ಯಕ್ಕೆ ಯೋಗ್ಯನಲ್ಲದೇ ಹೋದನು ; ಆಮೇಲೆ ಶಂತನುವಿಗೆ ಪರಿವೇತ್ತೃದೋಷ ಹೋಯಿತು ; ರಾಜ್ಯದಲ್ಲಿ ವೃಷ್ಟಿಯೂ ಆಯಿತು ; ಆ ದೇವಾಪಿಯು ಯೋಗಾರೂಢನಾಗಿ ಕಲಾಪಗ್ರಾಮದಲ್ಲಿದ್ದುಕೊಂಡು ಕಲಿಯುಗಾವಸಾನದಲ್ಲಿ ಕೃತಯುಗವು ಬರುವಾಗ ಚಂದ್ರವಂಶಪ್ರವರ್ತಕನಾಗುತ್ತಾನೆ ; ಬಾಹ್ಲೀಕನಿಗೆ ಸೋಮದತ್ತನು ; ಸೋಮದತ್ತನಿಗೆ ಭೂರಿಯು ಭೂರಿಶ್ರವಸ್ಸು ಶಲನು ಎಂದು ಮೂವರು ಪುತ್ರರು ; ಶಂತನುರಾಯನಿಗೆ ಗಂಗಾದೇವಿಯಲ್ಲಿ ಮಹಾಪುರುಷನಾದ ಭೀಷ್ಮನು ಜನಿಸಿದನು ; ಆ ಭೀಷ್ಮನು ಸರ್ವಧರ್ಮಜ್ಞರೊಳಗೆ ಶ್ರೇಷ್ಠನು ; ಪರಮಭಾಗವತನು ; ಮಹಾ ಪ್ರಾಜ್ಞನು ; ಮಹಾ ಪರಾಕ್ರಮಿಗಳಲ್ಲಿ ಅಗ್ರಗಣ್ಯನು ; ಪರಶುರಾಮನನ್ನು ಸಹಾ ಜಯಿಸಿದವನು ; ಶಂತನುರಾಯನಿಗೆ ದಾಶಪುತ್ರಿಯಾದ ಸತ್ಯವತಿಯಲ್ಲಿ ಚಿತ್ರಾಂಗದನು ವಿಚಿತ್ರವೀರ್ಯನು ಎಂಬ ಈರ್ವರು ಪುತ್ರರು ; ಚಿತ್ರಾಂಗದನೆಂಬ ಗಂಧರ್ವನು ಜ್ಯೇಷ್ಠನಾದ ಚಿತ್ರಾಂಗದನನ್ನು ಸಂಹರಿಸಿದನು ; ಆ ಸತ್ಯವತಿಯಲ್ಲಿ ಪರಾಶರಮುನಿಯಿಂದ ಭಗವದಂಶಾವತಾರನಾದ ವೇದವ್ಯಾಸಮುನಿಯು ಜನಿಸಿದನು ; ಆ ವೇದವ್ಯಾಸಮುನಿಯ ಸಮೀಪದಲ್ಲೇ ಈ ಭಾಗವತವನ್ನು ನಾನು ಅಧ್ಯಯನಂಗೈದೆನು ; ವೇದವ್ಯಾಸಮುನಿಯು ಪೈಲಋಷಿ ಮೊದಲಾದ ಅನೇಕ ಶಿಷ್ಯರನ್ನು ಬಿಟ್ಟು ಪುತ್ರನಾದ ಶಾಂತನಾದ ನನಿಗೋಸ್ಕರ ರಹಸ್ಯವಾದ ಈ ಭಾಗವತ ಶಾಸ್ತ್ರವನ್ನು ಉಪದೇಶಮಾಡಿದನು ; ಭೀಷ್ಮನು ಕಾಶೀರಾಯನ ಪುತ್ರಿಯರಾದ ಅಂಬಿಕಾ ಅಂಬಾಲಿಕಾ ಎಂಬ ಈರ್ವರು ಕನ್ಯೆಯರನ್ನು ಸ್ವಯಂವರದಲ್ಲಿ ಬಲಾತ್ಕಾರದಿಂದ ಅಪಹರಿಸಿಕೊಂಡು ಬಂದು ವಿಚಿತ್ರವೀರ್ಯನಿಗೆ ವಿವಾಹವನ್ನು ಮಾಡಿದನು; ಆ ವಿಚಿತ್ರವೀರ್ಯನು ಈರ್ವರು ಪತ್ನಿಯರಲ್ಲಿಯೂ ಅತ್ಯಾಸಕ್ತನಾಗಿ ಕ್ಷಯರೋಗದಿಂದ ಮೃತನಾದನು ; ವ್ಯಾಸಮುನಿಯು ಮಾತೃವಿನಿಂದ ಆಜ್ಞಪ್ತನಾಗಿ ವಿಚಿತ್ರವೀರ್ಯನ ಪತ್ನಿಯಾದ ಅಂಬಿಕಾ ಎಂಬ ಸ್ತ್ರೀಯಲ್ಲಿ ಧೃತರಾಷ್ಟ್ರನನ್ನು ಹುಟ್ಟಿಸಿದನು; ಅಂಬಾಲಿಕಾ ಗರ್ಭದಲ್ಲಿ ಪಾಂಡುರಾಯನನ್ನು ಹುಟ್ಟಿಸಿದನು ; ದಾಸೀ ಗರ್ಭದಲ್ಲಿ ವಿದುರನನ್ನು ಹುಟ್ಟಿಸಿದನು ; ಧೃತರಾಷ್ಟ್ರನಿಗೆ ಗಾಂಧಾರಿಯಲ್ಲಿ ಪುತ್ರಶತವುಂಟಾಯಿತು ; ದುರ್ಯೋಧನನೇ ಜ್ಯೇಷ್ಠನು ; ದುಶ್ಶಳಾ ಎಂಬ ಕನ್ಯೆಯೇ ಕನಿಷ್ಠಳು ; ಅರಣ್ಯದಲ್ಲಿ ರತಿಸೌಖ್ಯವನ್ನನುಭವಿಸುತಲಿರುವ ಮೃಗರೂಪಧಾರಿಯಾದ ಬ್ರಾಹ್ಮಣನನ್ನು ಸಂಹರಿಸಿದಕಾರಣ ಆ ಬ್ರಾಹ್ಮಣ ಶಾಪದಿಂದ ಸ್ತ್ರೀಭೋಗರಹಿತನಾದ ಪಾಂಡುರಾಯನ ಪತ್ನಿಯಾದ ಕುಂತೀದೇವಿಯಲ್ಲಿ ಧರ್ಮಪುರುಷನ ದೆಶೆಯಿಂದ ಯುಧಿಷ್ಠಿರನು ; ವಾಯುವಿನದೆಶೆಯಿಂದ ಭೀಮಸೇನನು; ದೇವೇಂದ್ರನ ದೆಶೆಯಿಂದ ಅರ್ಜುನನು ಹುಟ್ಟಿದರು ; ಅಶ್ವಿನೀ ದೇವತೆಗಳಿಂದ ಮಾದ್ರೀದೇವಿಯಲ್ಲಿ ನಕುಲಸಹದೇವರು ಅವಳ ಕುಮಾರರಾಗಿ ಜನಿಸಿದರು ; ದ್ರೌಪದಿಯಲ್ಲಿ ಪಂಚಪಾಂಡವರಿಂದ ಐದುಮಂದಿ ನಿನ್ನ ಪಿತೃಗಳು ಹುಟ್ಟಿದರು ; ಧರ್ಮರಾಯನಿಂದ ಪ್ರತಿವಿಂಧ್ಯನು ; ಭೀಮಸೇನನಿಂದ ಶ್ರುತಸೇನನು ; ಅರ್ಜುನನಿಂದ ಶ್ರುತಕೀರ್ತಿ[illegible] ನಕುಲನಿಂದ ಶತಾನೀಕನು ; ಸಹದೇವನಿಂದ ಶ್ರುತಕರ್ಮನು ಎಂದು ಈ[illegible] ರಾಯನಿಗೆ ಪೌರವೀಯೆಂಬ ಪತ್ನಿಯಲ್ಲಿ ದೇವಕನು ; ಭೀ[illegible] [illegible]ಯಲ್ಲಿ ಸರ್ವಗತನೆಂಬ ಪುತ್ರನು; ಸ[illegible]

ತನಾದ ನಿನ್ನನ್ನು ತಿಳಿದು ಕೋಪದಿಂದ ಸರ್ಪಯಾಗವನ್ನು ಮಾಡಿ ಅಗ್ನಿಯಲ್ಲಿ ಸರ್ಪಗಳನ್ನು ಹೋಮಂಗೈಯುತ್ತಾನೆ; ಕಾವಷೇಯಪುತ್ರನಾದ ತುರನೆಂಬ ಋಷಿಯನ್ನು ಪುರೋಹಿತನನ್ನು ಮಾಡಿಕೊಂಡು ಅಶ್ವಮೇಧಕ್ರತುವನ್ನು ಮಾಡಿ ಸಮಸ್ತ ಭೂಮಂಡಲವನ್ನು ಜೈಸಿ ಕ್ರತುಗಳನ್ನು ಮಾಡುತ್ತಾನೆ; ಆ ಜನಮೇಜಯನಿಗೆ ಶತಾನೀಕನೆಂಬ ಪುತ್ರನು ಹುಟ್ಟಿ ಯಾಜ್ಞವಲ್ಕ್ಯರಲ್ಲಿ ವೇದಾಧ್ಯಯನವನ್ನು ಮಾಡಿ ಅಸ್ತ್ರವಿದ್ಯೆಯನ್ನೂ ಕ್ರಿಯಾಜ್ಞಾನವನ್ನೂ ಶೌನಕಋಷಿಯಿಂದ ಐದುತ್ತಾನೆ; ಅವನಿಗೆ ಸಹಸ್ರಾನೀಕನು; ಅವನಿಗೆ ಅಶ್ವಮೇಧಜನು; ಅವನಿಗೆ ಅಸೀಮಕೃಷ್ಣನು; ಅವನಿಗೆ ನೇಚಕ್ರತ್ತು; ಹಸ್ತಿನಾಪುರವು ನದಿಯಲ್ಲಿ ಕೊಚ್ಚಿ ಹೋಗಲಾಗಿ ಕೌಶಾಂಬೀಪುರಿಯಲ್ಲಿ ವಾಸವನ್ನು ಮಾಡುತ್ತಾನೆ; ಆ ನೇಚಕ್ರದ್ರಾಜನಿಗೆ ಉಷ್ಣನು; ಅವನಿಗೆ ಚಿತ್ರರಥನು; ಅವನಿಗೆ ಶುಚಿರಥನು; ಅವನಿಗೆ ವೃಷ್ಟಿಮಂತನು; ಅವನಿಗೆ ಸುಷೇಣನು; ಅವನಿಗೆ ಸುನಿಥನು; ಅವನಿಗೆ ನೃಚಕ್ಷು; ಅವನಿಗೆ ನಳನು; ಅವನಿಗೆ ಪಾರಿಪ್ಲವನು; ಅವನಿಗೆ ಸುನಯನು; ಅವನಿಗೆ ಮೇಧಾವಿಯು ಹುಟ್ಟುತ್ತಾನೆ; ಆತನಿಗೆ ನೃಪಂಜಯನು; ಆತನಿಗೆ ದೂರ್ವನು: ಅವನಿಗೆ ನಿಮಿಯು ಹುಟ್ಟುತ್ತಾನೆ; ನಿಮಿಗೆ ಬೃಹದ್ರಥನು; ಅವನಿಗೆ ಸುದಾಂಶುವು; ಅವನಿಗೆ ಶತಾನೀಕನು; ಅವನಿಗೆ ದುರ್ದಮನು; ಅವನಿಗೆ ಮಹೀನರನು; ಮಹೀನರನಿಗೆ ದಂಡಪಾಣಿಯು; ಅವನಿಗೆ ಮಿತನು; ಅವನಿಗೆ ಕ್ಷೇಮಕನು ಹುಟ್ಟುತ್ತಾನೆ; ಬ್ರಹ್ಮಕ್ಷತ್ರಕ್ಕೆ ಕಾರಣವಾದ ದೇವರ್ಷಿಸಂಮತವಾದ ಈ ವಂಶವು ಕ್ಷೇಮಕನೆಂಬ ಅರಸಿನ ಪರ್ಯಂತವಾಗಿ ಕಲಿಯುಗದಲ್ಲಿ ನಡಿಯುತ್ತೆ! ಎಲೈ ಅರಸೆ, ಮಾಗಧರಾದ ಅರಸುಗಳ ವಂಶವನ್ನು ಕೇಳು; ಜರಾಸಂಧ ಪುತ್ರನಾದ ಸಹದೇವನಿಗೆ ಮಾರ್ಜಾಲಿಯು; ಅವನಿಗೆ ಶ್ರುತಶ್ರವನು; ಅವನಿಗೆ ಅಯುತಾಯು; ಅವನಿಗೆ ನಿರಮಿತ್ರನು; ಅವನಿಗೆ ಸುನಕ್ಷತ್ರನು; ಅವನಿಗೆ ಬೃಹತ್ಸೇನನು; ಅವನಿಗೆ ಕರ್ಮಜಿತ್ತು; ಅವನಿಗೆ ಶ್ರುತಂಜಯನು; ಅವನಿಗೆ ವಿಪ್ರನು; ಅವನಿಗೆ ಶುಚಿಯು; ಅವನಿಗೆ ಕ್ಷೇಮನು ಹುಟ್ಟುತ್ತಾನೆ; ಅವನಿಗೆ ಸುವ್ರತನು; ಅವನಿಗೆ ಧರ್ಮನೇತ್ರನು; ಅವನಿಗೆ ಶ್ರುತನು; ಅವನಿಗೆ ದೃಢಸೇನನು; ಅವನಿಗೆ ಸುಮತಿಯು; ಅವನಿಗೆ ಸುಬಲನು; ಅವನಿಗೆ ಸುನೀತನು; ಅವನಿಗೆ ಸತ್ಯಜಿತ್ತು; ಅವನಿಗೆ ವಿಶ್ವಜಿತ್ತು; ಅವನಿಗೆ ಪುರಂಜಯನು; ಇವರು ಜರಾಸಂಧನ ವಂಶಸ್ಥರು; ಕಲಿಯುಗದಲ್ಲಿ ಸಾವಿರವರ್ಷ ಪರ್ಯಂತವು ಇರುತ್ತಾರೆ.

೨೩ ನೇ ಅಧ್ಯಾಯ.

ಯದುರಾಯನ ವಂಶವು.

ಎಲೈ ಅರಸೇ, ಕೇಳು; ಯಯಾತಿರಾಯನ ಪುತ್ರರಲ್ಲಿ ಐದನೇಯವನಾದ ಪೂರುರಾಯನ ವಂಶವು ಹೇಳಲ್ಪಟ್ಟಿ [illegible] ಯವನಾದ ಅನುರಾಯನ ವಂಶವನ್ನು ಹೇಳುತ್ತೇನೆ; ಅನುರಾಯನಿಗೆ ಸಭಾರನು ಚಕ್ಷು ಪ [illegible] ಯನಿಗೆ ಕಾಲನಾಥನು; ಅವನಿಗೆ ಶ್ರುತಂಜಯನು; ಆತನಿಗೆ ಪುರಂಜ [illegible] ಆತನಿಗೆ ಮಹಾಮಾನಸನು; ಆತನಿಗೆ [illegible]

ಯಾದ ಶಾಂತೆಯನ್ನು ಅಪುತ್ರನಾದ ರೋಮಪಾದನಿಗೆ ಪುತ್ರಿಯನ್ನಾಗಿ ಕೊಟ್ಟನು ; ಋಶ್ಯಶೃಂಗಋಷಿಯು ಆ ಶಾಂತೆಯನ್ನು ವಿವಾಹವನ್ನು ಮಾಡಿಕೊಂಡನು ; ರೋಮಪಾದರಾಯನ ರಾಷ್ಟ್ರದಲ್ಲಿ ಅನಾವೃಷ್ಟಿ ಬರಲಾಗಿ ಅರಣ್ಯದಲ್ಲಿ ಆಶ್ರಮದಲ್ಲಿರುವ ಋಶ್ಯಶೃಂಗನನ್ನು ಹುಡಿಕಿಕೊಂಡು ವೇಶ್ಯಾಸ್ತ್ರೀರುಗಳು ಹೋಗಿ ನಾಟ್ಯಂಗಳಿಂದಲೂ ಸಂಗೀತ ವಾದ್ಯಂಗಳಿಂದಲೂ ಆಲಿಂಗನ ಚುಂಬನಾದಿ ಶೃಂಗಾರವಿಲಾಸಗಳಿಂದಲೂ ಬೆರಗುಮಾಡಿ ಕರತಂದರು ; ಆವೇಳೆ ವೃಷ್ಟಿಯುಂಟಾಯಿತು ; ಆ ಋಶ್ಯಶೃಂಗನು ದಶರಥರಾಯನಿಗೆ ಪುತ್ರರಿಲ್ಲದ ಕಾಲದಲ್ಲಿ ಇಂದ್ರದೇವತಾಕವಾದ ಇಷ್ಟಿಯನ್ನು ಮಾಡಿಸಿ ಪುತ್ರಸಂತಾನವನ್ನು ಕೊಟ್ಟನು ; ರೋಮಪಾದನಿಗೆ ಚತುರಂಗನು ; ಅವನಿಗೆ ಪೃಥುಲಾಕ್ಷನು ; ಅವನಿಗೆ ಬೃಹದ್ರಥನು ಬೃಹತ್ಕರ್ಮನು ಬೃಹದ್ಭಾನುವೆಂಬ ಮೂರುಮಂದಿ ಪುತ್ರರು ; ಬೃಹದ್ರಥನಿಗೆ ಬೃಹನ್ಮನಸನು ; ಅವನಿಗೆ ಜಯದ್ರಥನು ; ಅವನಿಗೆ ವಿಜಯನು ; ಅವನಿಗೆ ಸಂಭೂತಿಯಲ್ಲಿ ಧೃತಿಯೆಂಬ ಪುತ್ರನು ; ಅವನಿಗೆ ಧೃತವ್ರತನು ; ಅವನಿಗೆ ಸತ್ಯಕರ್ಮನು ; ಅವನಿಗೆ ಅತಿರಥನು ; ಆ ಅತಿರಥನು ಗಂಗಾತೀರದಲ್ಲಿ ವಿಹರಿಸುತ ಕುಂತೀದೇವಿಯು ಗರ್ಭದಲ್ಲಿ ಕನ್ಯಾದೆಶೆಯಲ್ಲಿ ಸೂರ್ಯಾನುಗ್ರಹದಿಂದ ಜನಿಸಿದ ಕುಮಾರಕನಾದ ಕರ್ಣನನ್ನು ಪೆಟ್ಟಿಗೆಯಲ್ಲಿ ಮಲಗಿಸಿ ಕುಂತಿಯಿಂದ ಗಂಗೆಯಲ್ಲಿ ಬಿಡಲ್ಪಟ್ಟು ತೇಲಿಕೊಂಡು ಹೋಗುತಿರುವ ಸಮಯದಲ್ಲಿ ಅಪುತ್ರನಾದ ಅತಿರಥನು ಆ ಪೆಟ್ಟಿಗೆಯಲ್ಲಿ ದಿವ್ಯಕುಮಾರನನ್ನು ನೋಡಿ ತಾನೇ ಪೋಷಿಸಿದನು ; ಆತನೇ ಕರ್ಣನು ; ಭೂಪತಿಯಾದ ಕರ್ಣನಿಗೆ ವೃಷಸೇನನು ಪುತ್ರನು ; ದೃಹ್ಯರಾಯನಿಗೆ ಬಭ್ರುಸೇತುವೆಂಬ ಪುತ್ರನು ; ಅವನಿಗೆ ಆರಬ್ಧನು ; ಅವನಿಗೆ ಗಾಂಧಾರನು ; ಅವನಿಗೆ ಧರ್ಮನು ; ಅವನಿಗೆ ಧೃತನು ; ಅವನಿಗೆ ದುರ್ಮದನು ; ಅವನಿಗೆ ಪ್ರಚೇತಸನು ; ಅವನಿಗೆ ಪ್ರಾಚೇತಸರು ನೂರುಮಂದಿ ಪುತ್ರರು ಉತ್ತರದಿಕ್ಕಿನಲ್ಲಿ ಮ್ಲೇಚ್ಛದೇಶ ಪತಿಗಳಾದರು ; ತುರ್ವಸುರಾಯನಿಗೆ ವಹ್ನಿಎಂಬ ಪುತ್ರನು ; ಅವನಿಗೆ ಭರ್ಗನು ; ಅವನಿಗೆ ಭಾನುಮಂತನು ; ಅವನಿಗೆ ತ್ರಿಸಾನು ; ಅವನಿಗೆ ಕರಂಧಮನು ; ಅವನಿಗೆ ಮರುತ್ತನು ; ಆ ಮರುತ್ತನು ಅಪುತ್ರನಾಗಿ ಪೂರುವಂಶಕ್ಕೆ ಸೇರಿ ರಾಜ್ಯಾಪೇಕ್ಷೆಯಿಂದ ದುಷ್ಯಂತನನ್ನೈದಿದನು ! ಎಲೈ ಅರಸೆ, ಯಯಾತಿರಾಯನ ಜ್ಯೇಷ್ಠಪುತ್ರನಾದ ಯದುರಾಯನ ವಂಶವನ್ನು ಪೇಳುತ್ತೇನೆ ; ಆ ಯದುರಾಯನ ವಂಶದಲ್ಲಿ ಭಗವಂತನಾದ ನಾರಾಯಣನು ಮಾನುಷಾವತಾರದಿಂದ ಜನಿಸಿದಕಾರಣ ಆ ಯದುರಾಯನ ವಂಶವನ್ನು ಕೇಳಿದ ಪುರುಷನಿಗೆ ಸರ್ವಪಾಪಂಗಳು ಪೋಗುವವು ; ಯದುರಾಯನಿಗೆ ಸಹಸ್ರಜಿತ್ತು ಕ್ರೋಷ್ಟ ನಲನು ರಿಪು ಎಂದು ನಾಲ್ವರು ಪುತ್ರರು ; ಸಹಸ್ರಜಿತ್ತುವಿಗೆ ಶತಜಿತ್ತುವು ; ಅವನಿಗೆ ಮಹಾಹಯನು ವೇಣುಹಯನು ಹೇಹಯನು ಎಂದು ಮೂರುಮಂದಿಯು ; ಹೇಹಯನಿಗೆ ಧರ್ಮನೆಂಬ ಪುತ್ರನು ; ಅವನಿಗೆ ನೇತ್ರನು ; ಅವನಿಗೆ ಕುಂತೀರಾಜನು ; ಕುಂತೀರಾಯನಿಗೆ ಮಹಿಷ್ಮಂತನು ; ಅವನಿಗೆ ಭದ್ರಸೇನಕನು ; ಅವನಿಗೆ ದುರ್ಮದನು ; ಅವನಿಗೆ ಧನಿಕನು ; ಅವನಿಗೆ ಕೃತವೀರ್ಯನು ಕೃತಾಗ್ನಿಯು ಕೃತಕರ್ಮನು ಕೃತೌಜಸ್ಸು ಈ ನಾಲ್ವರು ಪುತ್ರರು ; ಕೃತವೀರ್ಯನಿಗೆ ಸಪ್ತದ್ವೀಪಪತಿಯಾದ ಕಾರ್ತವೀರ್ಯನು ಪುತ್ರ[illegible] ಆ ಕಾರ್ತವೀರ್ಯಾರ್ಜುನನು ದತ್ತಾತ್ರೇಯ ರೂಪನಾದ ಹರಿಯ ಅನುಗ್ರಹದಿಂದ [illegible]ರು ; ಧನುರ್ಗದನು ; ಮಿಗಿಲಾದ ಅರಸುಗಳು ಯಜ್ಞಗಳು ದಾನಗಳು [illegible]ನಗೆ ಹಿಡಿಂಬ[illegible] ಗಡ[illegible]ತ್ಕಚನು ; ಕಾಳಿಯೆಂಬ ಪತ್ನಿ[illegible]ದ ಕಾರ್ತವೀರ್ಯಾರ್ಜುನನ[illegible]ನಿಗೆ ಜಯಾ ಎಂಬ ಪತ್ನಿಯಲ್ಲಿ ಸ[illegible]ತ್ರನು ; ನಕುಲನಿಗೆ ಕರೇಣುಮತಿಯಲ್ಲಿ ನಿರಮಿತ್ರನು [illegible]ಅರ್ಜುನನಿಗೆ ನಾಗಕನ್ಯೆಯಾದ ಉಲೂಪಿಯಲ್ಲಿ ಐರಾವಂತನು ; ಮಣಲೂರು ಪತಿಯಾದ ಪಾಂಡ್ಯರಾಯನ ಪುತ್ರಿಯಾದ ಚಿತ್ರಾಂಗದೆಯಲ್ಲಿ ಬಭ್ರುವಾಹನನು ಮಾತಾಮಹನಾದ ಪಾಂಡ್ಯರಾಯನಿಗೆ ಪುತ್ರಿಕಾಪುತ್ರ ಧರ್ಮದಿಂದ ಪುತ್ರನಾದನು ; ಸುಭದ್ರೆಯಲ್ಲಿ ನಿನ್ನ ತಂದೆಯಾದ ಅಭಿಮನ್ಯುವು ಹುಟ್ಟಿದನು ; ಅಭಿಮನ್ಯುವು ಮಹಾ ರಥಿಕರಾದ ಅನೇಕ ವೀರರನ್ನು ಜಯಿಸಿದನು ; ಅಶ್ವತ್ಥಾಮನ ಬ್ರಹ್ಮಾಸ್ತ್ರ ತೇಜಸ್ಸಿನಿಂದ ಸಮಸ್ತರಾದ ಕೌರವರು ಕ್ಷಯವನ್ನೈದುತಿರಲಾಗಿ ಆ ಅಭಿಮನ್ಯು ಪತ್ನಿಯಾದ ಉತ್ತರಾಗರ್ಭದಲ್ಲಿ ಶ್ರೀಕೃಷ್ಣನ ಪ್ರಭಾವದಿಂದ ಮೃತ್ಯುವನ್ನು ತಪ್ಪಿಸಿಕೊಂಡು ನೀನು ಜನಿಸಿದೆ ! ಎಲೈ ಪರೀಕ್ಷಿದ್ರಾಯನೆ, ನಿನ್ನ ಪುತ್ರರಾದವರು ಜನಮೇಜಯನು ಶ್ರುತಸೇನನು ಭೀಮಸೇನನು ಉಗ್ರಶೇನನೆಂಬ ಈ ನಾಲ್ಕುಮಂದಿಯು ; ಜನಮೇಜಯನು ತಕ್ಷಕನಿಂದ ಮೃ

ದೇವಿಯು ದೂರ್ವಾಸಋಷಿಯನ್ನು ಶುಶ್ರೂಷೆಮಾಡಿ ಆತನ ಅನುಗ್ರಹದಿಂದ ದೇವತಾಹ್ವಾನವನ್ನು ಮಾಡುವ ವಿದ್ಯೆಯನ್ನು ಪಡೆದಳು; ಅನಂತರದಲ್ಲಿ ಆ ವಿದ್ಯಾಪರೀಕ್ಷಾರ್ಥವಾಗಿ ಆ ಮಂತ್ರದಿಂದ ಸೂರ್ಯನನ್ನು ಕರೆದಳು; ತದುತ್ತರಕ್ಷಣದಲ್ಲಿ ಪ್ರತ್ಯಕ್ಷನಾಗಿ ಬಂದ ಸೂರ್ಯನನ್ನು ನೋಡಿ ಪೃಥೆಯು 'ಎಲೈ ಭಗವಂತನಾದ ಸೂರ್ಯನೆ, ನಾನು ಮಂತ್ರಶಕ್ತಿಯನ್ನು ನೋಡಲೋಸುಗ ಆಹ್ವಾನವನ್ನು ಮಾಡಿದೆನು; ಈ ಅಪರಾಧವನ್ನು ಕ್ಷಮಿಸಿ ಯಥಾಸ್ಥಾನಕ್ಕೆ ಚಿತ್ತೈಸು' ಎಂದು ಪ್ರಾರ್ಥಿಸಿದಳು. ಸೂರ್ಯನು 'ಎಲೈ ಕುಂತಿಯೆ, ದೇವದರ್ಶನವು ವ್ಯರ್ಥವಾಗುವದಿಲ್ಲ; ನಿನ್ನಲ್ಲಿ ಪುತ್ರನನ್ನು ಕೊಡುತ್ತೇನೆ' ಎಂದು ಹೇಳಿ ಆ ಕುಂತಿಯಲ್ಲಿ ಗರ್ಭಾದಾನವನ್ನು ಮಾಡಿ ಸೂರ್ಯನು ಸ್ವರ್ಗಕ್ಕೆಹೋದನು; ಆ ದಿವಸದಲ್ಲೇ ಎರಡನೆಯ ಸೂರ್ಯನಂತೆ ಪ್ರಕಾಶಮಾನನಾಗಿ ಕುಮಾರನು ಜನಿಸಿದನು; ಆಗ ಕುಂತಿಯು ಲೋಕಾಪವಾದ ಭಯದಿಂದ ಆ ಶಿಶುವನ್ನು ಪೆಟ್ಟಿಗೆಯಲ್ಲಿರಿಸಿ ಗಂಗೆಯಲ್ಲಿ ತೇಲಬಿಟ್ಟಳು; ನಿನ್ನ ಪ್ರಪಿತಾಮಹನಾದ ಪಾಂಡುರಾಯನು ಆ ಕುಂತೀದೇವಿಯನ್ನು ವಿವಾಹವನ್ನು ಮಾಡಿಕೊಂಡನು; ಕುಂತೀದೇವಿಯ ತಂಗಿಯಾದ ಶ್ರುತದೇವಾಯೆಂಬವಳನ್ನು ಕರೂಷದೇಶಾಧಿಪತಿಯಾದ ವೃದ್ಧಶರ್ಮನು ವಿವಾಹವನ್ನು ಮಾಡಿಕೊಂಡನು; ಅವಳ ಗರ್ಭದಲ್ಲಿ ದಂತವಕ್ತ್ರನೆಂಬ ದೈತ್ಯನು ಪುಟ್ಟಿದನು; ಕೇಕಯದೇಶಾಧಿಪತಿಯಾದ ಧೃಷ್ಟಕೇತುವು ಶ್ರುತಕೀರ್ತಿಯೆನ್ನು ವಿವಾಹವನ್ನು ಮಾಡಿಕೊಂಡನು; ಸಂಕ್ರಂದನೆ ಮೊದಲಾದ ಐದುಮಂದಿ ಕೇಕಯರು ಅವಳಲ್ಲಿ ಜನಿಸಿದರು; ರಾಜಾಧಿದೇವಿಯಲ್ಲಿ ಜಯತ್ಸೇನನು ಅವಂತಿದೇಶಪತಿಗಳಾದ ವಿಂದಾನುವಿಂದರನ್ನು ಪಡೆದಳು; ಚೇದಿಪತಿಯಾದ ದಮಘೋಷನು ಶ್ರುತಶ್ರವಳನ್ನು ಗ್ರಹಿಸಿದನು; ಅವಳಲ್ಲಿ ಶಿಶುಪಾಲನು ಜನಿಸಿದನು! ಎಲೈ ಅರಸೆ, ವಸುದೇವನ ಅನುಜರ ಪತ್ನೀಪುತ್ರರನ್ನು ಪೇಳುತ್ತೇನೆ; ವಸುದೇವನ ತಮ್ಮನಾದ ದೇವಭಾಗನಿಗೆ ಕಂಸಾದೇವಿಯಲ್ಲಿ ಚಿತ್ರಕೇತು ಬೃಹದ್ರಥನು ಎಂಬ ಈರ್ವರು ಪುತ್ರರು; ದೇವಶ್ರವನೆಂಬ ತಮ್ಮನಿಗೆ ಕಂಸಾವತಿಯಲ್ಲಿ ಸುದೀರನು ಇಷ್ಟುಮಂತನೆಂಬ ಈರ್ವರು ಪುತ್ರರು; ಆನಕನೆಂಬ ತಮ್ಮನಿಗೆ ಕಂಕಾದೇವಿಯಲ್ಲಿ ಸತ್ಯಜಿತ್ತು ಪುರಜಿತ್ತು ಎಂಬ ಈರ್ವರು ಪುತ್ರರು; ಸೃಂಜಯನಿಗೆ ರಾಷ್ಟ್ರಪಾಲಿಯಲ್ಲಿ ವೃಷ್ಟಿ ದುರ್ಮರ್ಷಣ ಮೊದಲಾದವರು ಪುಟ್ಟಿದರು; ಶಾಮೀಕನಿಗೆ ಶೂರಭೂ ಎಂಬ ಪತ್ನಿಯಲ್ಲಿ ಹರಿಕೇಶ ಹಿರಣ್ಯಾಕ್ಷರೆಂಬ ಈರ್ವರು ಪುತ್ರರು; ಕಂಕನಿಗೆ ಮಿಶ್ರಕೇಶಿಯೆಂಬ ಅಪ್ಸರಸ್ತ್ರೀಯಲ್ಲಿ ವೃಕಾದಿಗಳುಂಟಾದರು; ವೃಕನಿಗೆ ದುರ್ವಾಕ್ಷಿಯೆಂಬ ಪತ್ನಿಯಲ್ಲಿ ತಕ್ಷಪುಷ್ಕರ ಸಾಲ್ವಮೊದಲಾದವರು ಜನಿಸಿದರು; ಶಮೀಕನಿಗೆ ಸುದಾಮಾಎಂಬ ಪತ್ನಿಯಲ್ಲಿ ಸುಮಿತ್ರ ಅರ್ಜುನ ಬಾಣ ಮೊದಲಾದ ಪುತ್ರರು ಜನಿಸಿದರು; ವತ್ಸಕನಿಗೆ ಕಣಿಕಾದೇವಿಯಲ್ಲಿ ಋತಧಾಮನು ಜಯನು ಎಂದು ಈರ್ವರು ಪುತ್ರರು; ವಸುದೇವನ ಪತ್ನೀಪುತ್ರರನ್ನು ಪೇಳುತ್ತೇನೆ ಕೇಳು; ಪೌರವಿ ರೋಹಿಣಿ ಭದ್ರೆ ಮದಿರೆ ರೋಚನೆ ಇಳೆ ದೇವಕಿ ಇವರೇ ಮೊದಲಾದವರು ವಸುದೇವನಪತ್ನಿಯರು; ವಸುದೇವನಿಗೆ ರೋಹಿಣಿಯಲ್ಲಿ ಬಲನು ಗದನು ದುರ್ಮದನು ಬಲನು ಧ್ರುವನು ಇನ್ನು ಕೃತನೇ ಮೊದಲಾದವರು; ಪೌರವಿಯಲ್ಲಿ ಸುಭದ್ರನು ಭದ್ರಬಾಹು ದುರ್ಮದ [illegible]ತು; [illegible] ಮೊದಲಾದ [illegible] ರಹುಮಂದಿ ಪುತ್ರರು ಜನಿಸಿದರು; ಮದಿರಾದೇವಿಯಲ್ಲಿ ನಂದನು ಉಪರೋಕ್ಷರೆಂ[illegible] [illegible]ವನಿಗೆ [illegible] [illegible]ದರು; ಕೌಸಲ್ಯಾದೇವಿಯಲ್ಲಿ ಕೇಶಿಯೆಂಬ ಪುತ್ರನಾದಯನು; ಆತನಿ[illegible] ; ಆತನಿಗೆ ಮಹಾಶಾಲನು; [illegible] ಇಳೆಯಲ್ಲಿ ಪುರುವಲ್ಕಮೊದಲಾದವರುನು ತಿತೀಕ್ಷೆಯೆಂದು [illegible] [illegible]ರು; ಶಿಬಿಯು ವನನ ಕ್ರಿಮಿಯು ದರ್ಶ[illegible] [illegible]ರು ಉಶೀನರನ ಪುತ್ರರು; ವೃಷಪರ್ವನು ಸುವೀ[illegible] ಮದ್ರನು ಕೇಕಯನು ಎಂದು ನಾಲ್ವರು ಶಿಬಿರಾಯನಿಗೆ ಪುತ್ರರು; ತಿತಿಕ್ಷುರಾಯನಿಗೆ ರುಶದ್ರಥನು; ಅವನಿಗೆ [illegible]ಮನು; ಅವನಿಗೆ ಸುತಪನು; ಅವನಿಗೆ ಬಲಿಯು; ಆ ಬಲಿಯ ಪತ್ನಿಯಲ್ಲಿ ಅಂಗನು ವಂಗನು ಸಿಹ್ಮನು ಪುಂಡ್ರನು ಆಂಧ್ರನು ಎಂದು ಆರುಮಂದಿ ಪುತ್ರರು ದೀರ್ಘತಮಋಷಿಯಿಂದ ಪುಟ್ಟಿದರು; ಈ ಆರುಮಂದಿಯೂ ಪೂರ್ವದೇಶಗಳಿಗೆ ತಮ್ಮತಮ್ಮ ನಾಮಧೇಯಂಗಳನ್ನು ದೇಶಗಳಿಗೆ ಇಟ್ಟರು; ಅಂಗನಿಗೆ ಖನಪಾನನು; ಅವನಿಗೆ ದಿವೀರಥನು; ಅವನಿಗೆ ಧರ್ಮರಥನು; ಅವನಿಗೆ ಚಿತ್ರರಥನು; ಅವನು ರೋಮಪಾದನೆಂಬ ನಾಮವುಳ್ಳವನು; ಅವನು ಅಪುತ್ರನು; ಆತನಿಗೆ ದಶರಥರಾಯನು ಪುತ್ರನು; ಆ ದಶರಥರಾಯನು ತನ್ನ ಪುತ್ರಿ